ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ವೀಣಾ ಬನ್ನಂಜೆ

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩ ೨೭೬

೨೦೧೨

468

ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ವೀಣಾ ಬನ್ನಂಜೆ

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩ ೨೭೬
೨೦೧೨

ಸಂಶೋಧಕರ ಘೋಷಣಾ ಪತ್ರ

'ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ' ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ, ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಮೇ ೧೧ ೨೦೧೨

ವಿದ್ಯಾರಣ್ಯ

ಶ್ರೀಮತಿ ವೀಣಾ ಬನ್ನಂಜೆ
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

'ಆಚಾರ್ಯ ರಜನೀಶ ಮತ್ತು [illegible] ಸಾಹಿತ್ಯದಲ್ಲಿ ತಂತ್ರಮಾರ್ಗ' ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ, ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಮೇ·11·2012·
ವಿದ್ಯಾರಣ್ಯ

ಶ್ರೀಮತಿ ವೀಣಾ ಬನ್ನಂಜೆ
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

'ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ' ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ, ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಮೇ. 11. 2012.
ವಿದ್ಯಾರಣ್ಯ

ಶ್ರೀಮತಿ ವೀಣಾ ಬನ್ನಂಜೆ
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ವೀಣಾ ಬನ್ನಂಜೆ ಅವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ 'ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ' ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: [illegible]
ಬೆಂಗಳೂರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಉಪಕುಲಪತಿಗಳು
ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ವೀಣಾ ಬನ್ನಂಜೆ ಅವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ 'ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ' ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: ಮೇ ೧೦, ೨೦೧೭
ಬೆಂಗಳೂರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಉಪಕುಲಪತಿಗಳು
ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ

ಪರಿವಿಡಿ

ಪೂರ್ವಾರ್ಧ : ಆಗಮ

ಅಧ್ಯಾಯಗಳು :

ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ

ಪರಿವಿಡಿ

ಪೂರ್ವಾರ್ಧ : ಆಗಮ

ಅಧ್ಯಾಯಗಳು :

ಉತ್ತರಾರ್ಧ : ಸಮಾಗಮ

ಪೂರ್ವಾರ್ಧ : ಆಗಮ

ಅಧ್ಯಾಯಗಳು :

ಪ್ರಸ್ತಾವನೆ

1) ತಂತ್ರ ಮಾರ್ಗ ಮತ್ತು ಅದರ ನಡೆ

2) ತಂತ್ರದಲ್ಲಿ ಶಕ್ತಿ ಮತ್ತು ಸಿದ್ಧಿಗಳ ಪಾತ್ರ

3) ತಂತ್ರಪಥ, ರಜನೀಶ ಮತ್ತು ಸತ್ಯಕಾಮ : ಈ ಮೂರು ಸಂಗತಿಗಳ ಸ್ಥೂಲ ಪರಿಚಯ.

4) ಕುಂಡಲಿನಿ ಮತ್ತು ಶಕ್ತಿಪಾತ

5) ಸಾಧನಾ ಪಥದಲ್ಲಿ ಗುರು ಮತ್ತು ಶಿಷ್ಯರ ಮಾರ್ಗ ಸಾಧ್ಯತೆ ಮತ್ತು ಪರಸ್ಪರ ಅರ್ಹತೆಗಳು

6) ತಂತ್ರಮಾರ್ಗ ಮತ್ತು ಸ್ತ್ರೀ

7) ಕನ್ನಡ ಸಾಹಿತ್ಯ ಮತ್ತು ತಂತ್ರ

ಪ್ರಸ್ತಾವನೆ

'ಜ್ಞಾನ ಒಂದು ಆಧ್ಯಾತ್ಮಿಕ ಶಿಸ್ತು. ಪ್ರೇಮ ಅದರ ಪರಿಪೂರ್ಣತೆ. ಜ್ಞಾನ ಮುಖೇನ ನೀವು ದೇವರೆಡೆಗೆ ಹೋಗಬಹುದು. ಪ್ರೇಮದಿಂದ ನೀವು ದೇವರೇ ಆಗುತ್ತೀರಿ'– ರಜನೀಶ್

ಮನುಷ್ಯನ ಆತ್ಮಶೋಧನೆಯ ಪ್ರಶ್ನೆ ಇಂದು ನಿನ್ನಿನದಲ್ಲ. ಅನೇಕ ವರುಷಗಳಿಂದ 'ತಾನು' ಏನು ಮತ್ತು ಯಾರು? ಎಂಬ ಜಿಜ್ಞಾಸೆ ನಡೆದಿದೆ. ಅಂದಿನಿಂದ ಇಂದಿನವರೆಗೂ ಉತ್ತರ ವ್ಯಕ್ತಿಗತವಾಗಿಯೇ ಉಳಿದಿದೆ. ಅಂತೆಯೇ ಶೋಧ ನಿರಂತವಾಗಿ ಬೆಳೆದಿದೆ.

ಉಪನಿಷತ್ಕಾಲದಿಂದಲೂ ಈ ಪ್ರಶ್ನೆ ಇದೆ. ನಮ್ಮ ಪ್ರಾಚೀನ (ಆಧ್ಯಾತ್ಮಿಕ) ಸಾಹಿತ್ಯದ ಮೂಲ ಪ್ರಶ್ನೆಯೇ ಇದು. ಇಲ್ಲಿ ಏನಿದೆ, ಯಾಕೆ ಇದೆ, ನಾನು ಯಾರು, ಈ ನಾನು ಮುಂದೆ ಇದೆಯೇ? ಈ ಮುಂತಾದ ಜನ್ಮ-ಪುನರ್ಜನ್ಮ, ಅರಿವಿನ ಪ್ರಶ್ನೆಗಳು ನಡೆದಿವೆ. ಒಬ್ಬೊಬ್ಬ ಯೋಗಿಗೆ ತಪದ ಮೂಲಕ ಒಂದೊಂದು ಉತ್ತರ. ಉತ್ತರ ಸಿಕ್ಕವರು ಯಾರೂ ಅದನ್ನು ಹೇಳಲಿಲ್ಲ. ಸತ್ಯ ಚಿನ್ನದ ಪಾತ್ರೆಯಲ್ಲಿ ಮುಚ್ಚಿಟ್ಟಿದೆ ತೆರೆಯಿರಿ. ಸತ್ಯ ತಿಳಿದರೂ ಅದನ್ನು 'ಹೇಳಬಾರದಯ್ಯ' 'ತಿಳಿದಿದೆ ಅನ್ನುವವನಿಗೆ ತಿಳಿದಿಲ್ಲ, ತಿಳಿದಿಲ್ಲ ಅನ್ನುವವನಿಗೆ ತಿಳಿದಿದೆ' ಮುಂತಾದ ನಿಗೂಢ ಉತ್ತರಗಳಿಂದಾಗಿ ಪ್ರತೀ ವ್ಯಕ್ತಿಯೂ ಹೊಸದಾಗಿಯೇ ಹುಡುಕಬೇಕಾದ ಸವಾಲಾಗಿ ಅದು ನಮ್ಮೊಂದಿಗಿದೆ.

ಉಪನಿಷತ್ಕಾರರಲ್ಲಿ ಪ್ರಶ್ನೋಪನಿಷತ್ತು, ಕೇನೋಪನಿಷತ್ತು, ತೈತ್ತಿರೀಯಗಳೆಲ್ಲ ಇಂಥ ಪ್ರಶ್ನೆಗಳ ಹಿಂದೆಯೇ ಸಾಗಿವೆ. ಕಠೋಪನಿಷತ್ತು ಪೂರ್ತಿಯಾಗಿ ವ್ಯಕ್ತಿಯ ಸಾವಿನ ಬೆನ್ನು ಹತ್ತಿದೆ. ಈ ಹಿನ್ನೆಲೆಯಲ್ಲಿಯೇ ಶಿಷ್ಯ ಗುರುವಿಗೆ ಪ್ರಶ್ನೆಯನ್ನು ಕೇಳಿದ್ದ. 'ಯಾವುದನ್ನು ತಿಳಿದರೆ ನಾನು ಎಲ್ಲವನ್ನು ತಿಳಿಯಬಹುದು?' ಎಂಬ ಪ್ರಶ್ನೆ ಅದು.

ಒಂದು ದೃಷ್ಟಿಯಿಂದ ಒಂದು ಶಿಸ್ತಿನ ಅಧ್ಯಯನ ಅಪೂರ್ಣವೇ. ಅಶಿಸ್ತು ಒಂದರಲ್ಲಿ ಮಾತ್ರ ನಾವು ಜ್ಞಾನಿಗಳು. ಉಳಿದದ್ದರ ಪಾಲಿಗೆ ಅಜ್ಞಾನವೇ. ಅಂದರೆ ತಿಳುವಳಿಕೆಗೆ ಒಂದು ಪರಿಪೂರ್ಣತೆಯ ಮುಕ್ತಾಯವಿಲ್ಲ. ಒಂದರ ಜ್ಞಾನ ಇನ್ನೊಂದಕ್ಕೆ ಅಜ್ಞಾನ. ಆದರೆ ಇದಲ್ಲದ ಇನ್ನೊಂದು ಗತಿ ಇತ್ತೆಂದೇ ಉಪನಿಷತ್ಕಾರರು, 'ಪೂರ್ಣಮದಃ ಪೂರ್ಣಮಿದಂ' ಎಂದರು. ಅಂದರೆ 'ಅದು'ಪೂರ್ಣವಾದರೆ 'ಇದು' ಪೂರ್ಣ ಎಂಬ ಸ್ಪಷ್ಟ ತಿಳಿವು. ಅದರ ಇನ್ನೊಂದು

ಮುಖದಲ್ಲೇ ಆ ಅದನ್ನು ನಾವು ಅಪೂರ್ಣವಾಗಿ ತಿಳಿದರೆ ಅದು ಅಪೂರ್ಣವಾಗಿಯೇ ಉಳಿಯುತ್ತದೆ ಎಂಬ ಸೂಚನೆಯೂ ಇದೆ.

ಈ ಪೂರ್ಣತೆಯನ್ನು ತಿಳಿಯುವ ಬಗೆ ಹೇಗೆ? ಋಷಿಯ ಈ ಪ್ರಶ್ನೆಗೆ ಉತ್ತರ ಹೀಗಿತ್ತು. 'ದ್ವೇ ವಿದ್ಯೇ ವೇದಿತವ್ಯೇ ಪರಾಚೈವಾಽಪರಾಽಚ' ಎರಡು ವಿದ್ಯೆಗಳಿವೆ ಅರಿವಿಗೆ ದಾರಿಯಾಗಿ. ಅದನ್ನು ಪರಾ ಮತ್ತು ಅಪರಾ ಎಂದು ಕರೆಯಲಾಗಿದೆ. ಪರಾವಿದ್ಯೆಯು ಒಂದನ್ನು ತಿಳಿದರೆ ಎಲ್ಲವನ್ನು ತಾನಾಗಿ ತಿಳಿಯುವ ಮಾರ್ಗ. ಅಪರಾ ವಿದ್ಯೆಯು ಹಲವನ್ನು ಒಂದೊಂದಾಗಿ ತಿಳಿಯುತ್ತಾ ಒಂದರೆಡೆಗೆ ಸಾಗುವ ಮಾರ್ಗ.

ಪರಾವಿದ್ಯೆ ಇಲ್ಲಿರುವ ಸಕಲಕ್ಕೂ ಕಾರಣವಾದ ಕೇಂದ್ರ ಶಕ್ತಿಯನ್ನು ತಿಳಿಯುವುದು. ಸಕಲ ಶಾಖೆಗಳ ಮುಖಾಂತರ ಮೂಲದೆಡೆಗೆ ಸಾಗುವುದು ಅಪರಾವಿದ್ಯೆ. ಇಲ್ಲಿನ ಅರಿವಿನಲ್ಲಿ ಒಂದು ಸಂಗತಿ ಸ್ಪಷ್ಟವಿದೆ. ಈ ಸಕಲ ಚೈತನ್ಯಕ್ಕೊಂದು ಕೇಂದ್ರ ಶಕ್ತಿಯಿದೆ (central energy) ಈ ಕೇಂದ್ರ ಶಕ್ತಿಯ ಕಡೆಗೆ ಮನುಷ್ಯ ಚೈತನ್ಯದ ಹುಡುಕಾಟವಿದೆ. ಕೇಂದ್ರಶಕ್ತಿಯನ್ನು ತಿಳಿಯುವುದಕ್ಕೆ ತಪೋಮಾರ್ಗ ಬೇಕು. ಈ ತಪಸ್ಸನ್ನೇ ಸಾಧನೆಯಾಗಿ ಕಾಣುವುದು.

ತಪದಿಂದ ತಪಸ್ಸು, ತಪ is to heat ತಪ ಎಂದರೆ ಕಾಯುವುದು. ಕಾಯುವುದು ಎಂದರೆ ಕಾಯುವಿಕೆಯೂ ಹೌದು, ಬಿಸಿಯಾಗುವುದು ಎಂಬ ಅರ್ಥವೂ ಸರಿಯೇ. ಒಂದನ್ನು ತಿಳಿಯಲು ಮಾಗಬೇಕು, ಪಾಕವಾಗಬೇಕು ಮತ್ತು ಅದಕ್ಕಾಗಿ ಕಾಯಬೇಕು. ಒಂದು ದೃಷ್ಟಿಯಿಂದ ಮಗು ಹಸಿಯದೆ ಹಾಲೂಡದ ತಾಯಿಯ ಸಂಬಂಧ ಇದು. ಪರಸ್ಪರ ಭಾವ. ಬೇಕು. ಚೈತನ್ಯದ ಅಣುರೂಪಕ್ಕೆ ಪರಮಾಣುವಿನ ಜೊತೆಗೆ ನಡೆವ ಸಂವಾದ. ಪರಸ್ಪರ ಸಂಪರ್ಕ ಸಾಧ್ಯವಾದರೆ ಮಾತ್ರ ಮಿಲನ. ಅದನ್ನೇ ಉಪನಿಷತ್ತು 'ಮಾಽಹಂ ಬ್ರಹ್ಮ ನಿರಾಕುರ್ಯಾಂ ಮಾಮಾ ಬ್ರಹ್ಮ ನಿರಾಕರೋತ್' ಎಂದು ಪ್ರಾರ್ಥಿಸಿತು.

ಎಂದರೆ ನನಗೆ 'ಅದು ಬೇಕಾಗಲಿ, ಅದೂ ನನ್ನನ್ನು ನಿರಾಕರಿಸದಿರಲಿ' ಪರಸ್ಪರ ಪ್ರೇಮಭಾವವಿಲ್ಲದ ಪ್ರೇಮಿಗಳ ನಡುವಿನ ಪ್ರೇಮ ವ್ಯರ್ಥವಾದ ಹಾಗೆ. ಇಲ್ಲಿ ಬೇಕೆಂಬ ಹಸಿವಿದ್ದೂ ಅಲ್ಲಿ ಆ ಭಾವವಿಲ್ಲದಿದ್ದರೆ ನಿರರ್ಥಕ. ಅಲ್ಲಿ ಬೇಕೆಂಬ ತುಡಿತಕ್ಕೆ ಇಲ್ಲಿಯದ್ದು ಸ್ಪಂದಿಸದಿದ್ದರೂ ವ್ಯರ್ಥ. ಎರಡೂ ಕೂಡುವುದು ತುಂಬ ಅಪರೂಪ. ಅದನ್ನು ಯೋಗಿಗಳು 'ದೇವಸಮಯ' ಎಂದರು.

ಕೃಷ್ಣನದೇ ಪರಿಭಾಷೆಯಲ್ಲಿ 'ಅದು ಕೋಟಿಗೊಬ್ಬರ ಭಾಗ್ಯ' ಹಾಗೆಲ್ಲ ಸಂಭವಿಸಿಯೂ ಕಾಣಲಾಗದೆ ಹೋಗಬಹುದು. ದಿವ್ಯಚಕ್ಷು ಪಡೆದು ಕಂಡರೂ ಬೇಡವೆಂದು ಮರಳಿಸಿದ

ಅರ್ಜುನನ ಹಾಗೆ. ಹೀಗೆ ಪರಾಮಾರ್ಗಕ್ಕೆ ಒಂದು ದೊಡ್ಡ ತಯಾರಿ ಇದೆ. ಇದು ಶತಮಾನಗಳಲ್ಲಿ ಒಬ್ಬಿಬ್ಬರಿಗೆ ಸಂಭವಿಸಿದ ಮಾರ್ಗ.

ಅಪರಾಮಾರ್ಗ ಇನ್ನೊಂದು ರೀತಿಯದು. ತಪಸ್ಸನ್ನು ಸಾಧನೆಯೆಂದು ಭಾವಿಸಿ ನಡೆವವನ ಮಾರ್ಗ. ಮನೆಯ ಹಲವು ವಿದ್ಯುತ್ ಪಾಯಿಂಟ್‌ಗಳನ್ನು ಪರಿಶೀಲಿಸುತ್ತಾ ಮುಖ್ಯ ಸ್ವಿಚ್ ಕಡೆಗೆ ಮುಖ ಮಾಡುವ ಮಾರ್ಗ.

ಇಲ್ಲಿ ಕಾರಣ ಎರಡು. ಮುಖ್ಯ ಕೇಂದ್ರದ ಅರಿವಿಲ್ಲದೆ ಎಲ್ಲ ಕಾಣುವ ವಯರ್‌ಗಳ ಮೂಲಕ ಹುಡುಕುವುದು. ಅಥವಾ ಮುಖ್ಯದ ಅರಿವಿದ್ದೂ ಉಳಿದದ್ದು ಸರಿಯಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವ ಭಾವ. ಒಂದು ದೃಷ್ಟಿಯಿಂದ ಈ ಮಾರ್ಗವನ್ನು ದ್ರಾವಿಡ ಪ್ರಾಣಾಯಾಮ ಎನ್ನುವವರಿದ್ದಾರೆ. ಇದನ್ನು ವಾಮ ಮಾರ್ಗ ಎಂದೂ ಕರೆಯಲಾಗಿದೆ. ಇಲ್ಲಿ ಶಕ್ತಿಯ ಕೇಂದ್ರಕ್ಕೆ ಹೋಗುವ ದಾರಿಯಲ್ಲಿ ಎಲ್ಲ ವಿದ್ಯೆಗಳನ್ನು ಕಲಿತು ನಡೆವ ಒಂದು ಶಾಸ್ತ್ರೋಕ್ತ ನಡೆ ಇದೆ.

ಆದ್ದರಿಂದ ಇದಕ್ಕೆ ಬಲಾ-ಬಲ, ಶುಭ-ಅಶುಭ, ಮಡಿ-ಮೈಲಿಗೆ, ಮೇಲು-ಕೆಳಗೆ ಹೀಗೆ ಯಾವ ಭೇದವಿಲ್ಲದ ಕಲಿಕೆಯಿದೆ. ಈ ರೀತಿಯ ನಡೆಯಲ್ಲಿ ಸಾಧಕ ಬದುಕಿನ ಸರ್ವಸ್ವವನ್ನು ಆ ಚೈತನ್ಯಕ್ಕಾಗಿ ಮುಡಿಪಿಡುತ್ತಾನೆ. ಸಾವು ಕೂಡ ಅವನ ಸಂಗಾತಿ. ಅಲ್ಲಿ ಸಾಧಕ ಎಲ್ಲಕ್ಕೂ ಸಿದ್ಧ. ತಂತ್ರಮಾರ್ಗ ಇಂಥ ಅಪರಾಮಾರ್ಗದ ಒಂದು ಪದ್ಧತಿ. ಇಲ್ಲಿ ಎಲ್ಲ ರೀತಿಯ ವಿದ್ಯೆಗಳಿಗೂ ಸಾಧಕ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆ. ಒಂದು ವಶವಾಗಬೇಕಾದರೆ ಮೊದಲು ನಾವು ಅದಕ್ಕೆ ನಮ್ಮನ್ನು ಒಪ್ಪಿಸಬೇಕು. ಇಂಥ ಒಂದು ಪರಸ್ಪರ ಭಾವದಲ್ಲಿ ಶಕ್ತಿ, ಸಿದ್ಧಿಗಳು ಇಲ್ಲಿ ಸಾಧಕನ ಕೈವಶವಾಗುತ್ತವೆ.

ಎಲ್ಲ ಶಕ್ತಿಗಳನ್ನು ವಶಪಡಿಸಿದರೂ ಉಳಿಯುವ ಆ ದೊಡ್ಡ ಶಕ್ತಿಗಾಗಿ ಇಲ್ಲಿ ತಪಸ್ಸಿದೆ. ಕಾಲಕ್ರಮೇಣ ಸಾಧಕ ಆ ದೊಡ್ಡ ಶಕ್ತಿಯ ಮುಂದೆ ಎಲ್ಲವನ್ನು ಸಮರ್ಪಿಸುತ್ತಾನೆ. ಸಣ್ಣವುಗಳನ್ನು ಗೆದ್ದು ದೊಡ್ಡದಕ್ಕೆ ಒಪ್ಪಿಸುವ ಒಂದು ಯೋಧನ ಲಕ್ಷಣ. ಎಲ್ಲರನ್ನು ಗೆದ್ದರೂ ಬಾಹುಬಲಿಯನ್ನು ಗೆಲ್ಲಲಿಲ್ಲ ಎಂಬ ಭಾವವುಳಿದ ಭರತನಂತೆ. ಆದ್ದರಿಂದ ತಂತ್ರ ಧೀರರ ದಾರಿ. ಅಲ್ಲಿ ತುಂಬ ಹೋರಾಟವೂ ಇದೆ. ಹಲವು ಹೋರಾಟದ ಗೆಲುವಿನಲ್ಲಿ ತಾನಾಗಿ ಬೆಳೆಯಲಿರುವ ವಿನಯವಿದೆ. ಎಲ್ಲ ಹೋರಾಟವೂ ಒಳಗಿರುವ 'ಅಹಂ' ಅನ್ನು ತಿದ್ದಿ ತೀಡಿ ನಯಗೊಳಿಸುವುದಕ್ಕೆ. ಹೋರಾಟ ಮುಗಿದ ಹೊತ್ತಿಗೆ ಸುಂದರ ಮೂರ್ತಿಯ ನಿರ್ಮಾಣವಾಗಿರಬೇಕು.

ಇದಕ್ಕೆ ಅಭಿನವಗುಪ್ತ ತುಂಬ ಸೊಗಸಾದ ರೀತಿಯಲ್ಲಿ ವಿವರಣೆ ನೀಡಿದ್ದಾನೆ. ಈ ದೇವಮಾರ್ಗದ ನಡೆ ಸಾಧ್ಯವಾಗುವುದು ಶಕ್ತಿಪಾತದ ಮುಖಾಂತರ. ಈ ಶಕ್ತಿಪಾತ ಎರಡು ರೀತಿಯಲ್ಲಿ ನಡೆದೀತು. ಗುರುಕಾರುಣ್ಯದಿಂದ ಗುರುವೊದಗಿ ಅವನಿಂದ ಶಕ್ತಿಪಾತ. ಗುರುವಿಲ್ಲದೆ ನೇರವಾಗಿ ಅನುಗ್ರಹವಾಗುವ ಶಕ್ತಿಪಾತ. ಒಂದು ಅಪೇಕ್ಷ ಶಕ್ತಿಪಾತ, ಇನ್ನೊಂದು ನಿರಪೇಕ್ಷ ಶಕ್ತಿಪಾತ. ಎಲ್ಲಕ್ಕೂ ಒಂದು 'ಅನುಗ್ರಹ' ಅವಿಭಾಜ್ಯ ಅಂಗವಿದೆ. ಅದು ಸಂಭವಿಸದೆ ಇದು ಅಲುಗಾಡದು.

ಮನುಷ್ಯನಿಗೆ ಅನಿಸುವುದು ಮತ್ತು ಮಾಡುವುದು ಎರಡು ಬೇರೆ ಬೇರೆ. ಇತರೆ ಪ್ರಾಣಿ ಪಕ್ಷಿಗಳು ಗಿಡ-ಮರ ಎಲ್ಲ ಸಂಗತಿಗಳನ್ನು ನಾವು ಗಮನಿಸುವಾಗ ಈ ಎರಡರ ಭೇದ ಅಲ್ಲಿ ಕಾಣಿಸುವುದಿಲ್ಲ. ಒಂದು ನಿರ್ದಿಷ್ಟ ವ್ಯವಸ್ಥೆಯ ಒಳಗೆ ಬದುಕುವ ಮನುಷ್ಯ ಬಹಳ ಕಾಲದಿಂದ ಇಂಥದೊಂದು ವಿಭಾಗೀಕರಣ ಮಾಡಿಕೊಂಡೇ ಜೀವನ ನಡೆಸಿದ್ದಾನೆ. ಅವನು ಒಳಗೆ ಇರುವುದೇ ಬೇರೆ ಮತ್ತು ಅವನು ತೋರುವುದೇ ಬೇರೆ.

ಪಶು ತನಗೆ ಅನಿಸುವುದನ್ನು ಆ ಕ್ಷಣಕ್ಕೆ ತಾನು ಮಾಡುತ್ತದೆ. ಅದಕ್ಕೆ ಹಸಿದಾಗ ಊಟ ಬೇಕೆಂಬ ಅಪೇಕ್ಷೆಯಿಂದ ತೊಡಗಿ ಕಾಮಾಕಾಂಕ್ಷೆಯವರೆಗೆ ಎಲ್ಲಾ ಪಶು-ಪಕ್ಷಿಗಳು ಒಂದಿಷ್ಟು ಇನ್ನೊಬ್ಬರು ನೋಡುವ ಮತ್ತು ಏನಂದಾರು ಎಂಬ ಭಯದ ಯೋಚನೆ ಇಲ್ಲದೆ ತಮಗನಿಸಿದ್ದನ್ನು ಆ ಕ್ಷಣಕ್ಕೆ ಅಭಿವ್ಯಕ್ತಿಸುತ್ತವೆ. ಇಲ್ಲಿ ದುರ್ಬಲವಿದ್ದದ್ದು ಬಲಿಷ್ಠದ ಮುಂದೆ ಸೋಲಬಹುದೇ ಹೊರತು ಮನುಷ್ಯ ಯೋಚಿಸುವ ಅವಮಾನ, ನಾಚಿಕೆ, ಸಂಕೋಚ ಮುಂತಾದ ಭಯಕ್ಕೆ ಕ್ರಿಯೆಯಿಂದಲೇ ಹಿಂದೆ ಸರಿದು ಹಸಿವೆಯೇ ಆಗದಂತೆ, ಕಾಮಾಕಾಂಕ್ಷೆಯೇ ಇಲ್ಲದಂತೆ ನಟಿಸುವುದಿಲ್ಲ. ಅದು ಮನುಷ್ಯನಿಗೆ ಮಾತ್ರವೇ ವಿಶೇಷವಾದದ್ದು.

ಪ್ರತಿಯೊಂದು ಜೀವವೂ ಒಂದು ಬೀಜರೂಪ, ಅದು ಒಂದು ಪರಿಪೂರ್ಣ ಗಿಡವಾಗಿ ತನ್ನ ಹೂವನ್ನು ಕಾಣುವ ತಹತಹದಲ್ಲಿದೆ. ಈ ಬೀಜ ತನ್ನಷ್ಟಕ್ಕೆ ಈಗ ಸುಪ್ತವಾಗಿ ಚಿಪ್ಪಿನ ಒಳಗೆ ಇದೆ. ಈ ಚಿಪ್ಪು ಒಡೆದು ಹೊರಗೆ ಬಂದರೆ ಅದು ತನ್ನ ಒಳಗಿನ ಬೆಳೆಯನ್ನು ವಿಸ್ತರಿಸುತ್ತದೆ. ಗಿಡವಾಗಿ, ಮರವಾಗಿ ಕಡೆಗೆ ತಾನೇ ಹೂವಾಗಿ ತನ್ನನ್ನು ನೋಡುತ್ತದೆ ಎಂಬವರೆಗೆ ವ್ಯಕ್ತಿಯ ಬೆಳವಣಿಗೆಯನ್ನು ವಿವರಿಸಲಾಗಿದೆ. ಇದು ನಿಜವಾದರೆ ಹೊಟ್ಟೆ ತುಂಬಿರುವ ಮತ್ತು ತುಂಬದೇ ಇರುವ ಪ್ರಶ್ನೆ ಬರಲು ಸಾಧ್ಯವಿಲ್ಲ.

ಆದರೆ ಎಲ್ಲರಿಗೂ ಈ ಹಸಿವಿಲ್ಲ, ಅವರವರ ಭಾವಕ್ಕೆ ಅವರವರ ನಡೆ. ಒಬ್ಬೊಬ್ಬರು ನಡೆಯುವ ನಡೆ ಮೇಲೆ ಅವರವರ ಬೆಳೆಯ ನಿರ್ಣಯ ಎಂದು ಸಮಾಧಾನಿಸಲೂ ಬಹುದು.

ಆದರೆ ಜೀವ ಬೆಳವಣಿಗೆಯ ಮೂಲಶೋಧನೆ ಹಿಡಿದು ನಡೆದವರು ಈ ಭೇದವನ್ನು ಒಪ್ಪುವುದಿಲ್ಲ. ಪ್ರತೀ ಜೀವಕ್ಕೂ ಚಿಪ್ಪಿನಿಂದ ಹೊರಗೆ ಬರುವ, ಒಂದು ವೃಕ್ಷವಾಗಿ ಬೆಳೆವ, ಹೂವು ಅರಳಿಸುವ ಅಪೇಕ್ಷೆ ಸುಪ್ತವಾಗಿ ಇದ್ದೇ ಇರುತ್ತದೆ. ಅದು ಕಾಲಾಂತರದಲ್ಲಿ ಒಬ್ಬರಿಂದ ಒಬ್ಬರಿಗೆ ಭಿನ್ನವಾಗುತ್ತಾ ಹೋದರೂ ಪ್ರತೀ ಬೀಜವು ನಿರಂತರ ಆ ಕ್ರಿಯೆ ಕಡೆಗೆ ನಡೆದೇ ನಡೆಯುತ್ತದೆ. ಮತ್ತು ಆ ದಿನವೇ ಪರಿಪೂರ್ಣತೆಯನ್ನು ಅನುಭವಿಸುತ್ತದೆ ಎಂಬುದು ಜೀವವಿಜ್ಞಾನದ ತಿಳುವಳಿಕೆ.

ಹಸಿದವನಿರಲಿ ಹೊಟ್ಟೆ ತುಂಬಿದವನಿರಲಿ ಒಂದಂತೂ ಸತ್ಯ. ಪ್ರತೀ ವ್ಯಕ್ತಿಯ ಜೀವನದಲ್ಲಿ ಒಳಹೊರಗು, ಅಂತರಂಗ ಬಹಿರಂಗ, ತೋರುವ ಮತ್ತು ಇರುವ ವ್ಯತ್ಯಾಸ ಇದ್ದೇ ಇದೆ. ಮನುಷ್ಯ ಇಂಥದೊಂದು ಭೇದದಲ್ಲಿಯೇ ನಿರಂತರ ಬದುಕಿದ್ದಾನೆ. ಎಂದೇ ಆದರೂ ಮನುಷ್ಯನಿಗೆ ಇದರಿಂದ ಮುಕ್ತನಾಗುವುದು ಸಾಧ್ಯವಾಗಲೇ ಇಲ್ಲ.

ಸುಖ–ದುಃಖ, ತೋರುವ–ಇರುವ, ಅಂತರಂಗ–ಬಹಿರಂಗ ಇವೆಲ್ಲ ಭೇದಗಳನ್ನು ಮನುಷ್ಯ ಒಳಗೊಳಗೆ ಪ್ರಶ್ನಿಸುತ್ತಾನೆ ಕೂಡ. ಇರುವುದನ್ನೇ ತೋರುವ ಅನಿಸಿದ್ದನ್ನೇ ಮಾಡುವ ಭೇದವಿಲ್ಲದ ಒಂದು ಸಹಜ ಭಾವ ತನಗೆ ಸಾಧ್ಯವಿಲ್ಲವಾ ಎಂಬ ಪ್ರಶ್ನೆ ಒಂದಲ್ಲ ಒಂದು ಕ್ಷಣ ಪ್ರತಿಯೊಬ್ಬನಿಗೂ ಅನಿಸಿಯೇ ಇದೆ. ಇದೆಲ್ಲಕ್ಕೂ ಕಾರಣವೇನು? ತಾನು ಕಟ್ಟಿಕೊಂಡ ವ್ಯವಸ್ಥೆಯೇ? ಹಾಗಾದರೆ ಈ ಸಮಾಜವೇ ತನಗೆ ಅಡ್ಡಿಯೇ? ಅದನ್ನು ಬಿಟ್ಟು ತಾನು ಹೊರಗೆ ಬಂದರೆ ಈ ಭೇದ ಅಳಿಯಬಹುದೇ? ಹಾಗಾದರೆ ಇದನ್ನು ಬಿಟ್ಟು ಹೋಗುವುದೆಲ್ಲಿಗೆ? ಬಹುಶಃ ಈ ಸಮಾಜ ಬಿಟ್ಟರೆ ಕಾಡಿಗೆ ಹೋಗಬೇಕು, ಕಾಡೆಂದರೆ ಏಕಾಂತ, ಇದೆಲ್ಲವನ್ನು ಬಿಟ್ಟ ಆಧ್ಯಾತ್ಮ ತನಗೆ ಪರಿಹಾರವೇ? ಆಧ್ಯಾತ್ಮ ಪರಿಹಾರ ಎಂದಾದರೆ ಅದರ ದಾರಿಗಳೇನು? ನಮ್ಮಷ್ಟಕ್ಕೆ ನಾವು ನಡೆಯುವುದಾ? ಅಥವಾ ಗುರು ಬಂದು ಕರೆದೊಯ್ಯುತ್ತಾನಾ? ಹಾಗೊಂದು ವೇಳೆ ನಡೆದು ಬಿಟ್ಟರೆ ನಮ್ಮ ಸುಖ–ದುಃಖ ಭೇದ ಹೊರಟು ಹೋಗಿ ನಾವು ಸಂಪೂರ್ಣ ಆನಂದ ಮಾತ್ರ ಸ್ಥಿತಿ ತಲುಪುತ್ತೇವಾ? ಆಧ್ಯಾತ್ಮದ ಆನಂದ ಒಂದು ದಿನ ಒಂದು ಕ್ಷಣದಲ್ಲಿ ಛಕ್ ಅಂತ ದೊರೆವ ಸತ್ಯವಾ? ಅಥವಾ ಅದು ಒಂದು ನಿರಂತರ ಶೋಧವಾ? ಮನುಷ್ಯ ಪ್ರಾಣಿಗಿಂತ ಬೇರೆಯಾಗುವುದಕ್ಕೆ ಇದೊಂದು ಪರಿಹಾರವಾ? ಇರುವುದನ್ನೆಲ್ಲಾ ಬಿಡುವುದೇ ಈ ಎಲ್ಲ ಭೇದಗಳನ್ನು ಅಳಿದು 'ಸಹಜ' ಆಗುವುದಕ್ಕೆ ಇರುವ ಮಾರ್ಗವಾ? ಈ ಪ್ರಶ್ನೆಗಳು ಪ್ರತೀ ಜೀವದ ಒಳಗೂ ಕಟ್ಟೇಕಾಂತದಲ್ಲಿ ಕಾಡಿಯೇ ಕಾಡುತ್ತದೆ ಎಂಬ ಸಂಗತಿಯನ್ನು ಇಲ್ಲಿಯವರೆಗೆ ಆಧ್ಯಾತ್ಮ ಪಥ ನಡೆದ ಪ್ರತಿಯೊಬ್ಬರೂ ಹೇಳುತ್ತಲೇ ಬಂದಿದ್ದಾರೆ. ಅದು ಜೀವದಿಂದ ಜೀವಕ್ಕೆ ಕಾಲಾನುಕ್ರಮಣಿಕೆಯಲ್ಲಿ ಹೆಚ್ಚು ಕಡಿಮೆ ಆಗಬಹುದೇ ಹೊರತು ಪ್ರತೀ ಜೀವದ ಅಂತಿಮ

ಶೋಧ ಅದೇ ಎಂಬ ನಿಲುವು ಎಲ್ಲರಲ್ಲೂ ಇದೆ. ಅವರ ಪ್ರಕಾರ ಪ್ರತೀ ಜೀವವೂ ತನ್ನ ರೂಪ (form-ಆಕಾರ) ವನ್ನು ಬದಲಾಯಿಸುತ್ತದೆಯೇ ಹೊರತು ಜೀವಕ್ಕೆ ಒಂದು ಅಣುವಿನ ಅವಸ್ಥೆ ಅದರ ಆರಂಭ, ಪರಮಾಣುತ್ವ ಅದರ ಮುಕ್ತಾಯ.

ಇಂಥದೊಂದು ಮೂಲಭೂತ ಹಸಿವನ್ನು ಒಪ್ಪಿಕೊಂಡು ನಡೆವಾಗ ಮಾತ್ರ ಆಧ್ಯಾತ್ಮ ಪ್ರಸ್ತುತ. ಇಲ್ಲದೇ ಇದ್ದರೆ ಅದು ಪಾಮರರಿಗೆ ಬೇಡ ಕೇವಲ ಪಂಡಿತರ ತಲೆನೋವು ಎಂದು ತಲೆಕೊಡವಿ ಬಿಡಬಹುದಾದ ಸಂಗತಿ. ಆದರೆ ಮನುಷ್ಯ ನಡೆಯುವ ಜೀವ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿ ಅಂಥದೇ ನಡೆಯನ್ನು ನಡೆದ ಮತ್ತು ಆ ದಿಶೆಯಲ್ಲಿ ಕೆಲವು ಜೀವಗಳನ್ನು ನಡೆಸಲು ಪ್ರಯತ್ನಿಸಿದ ರಜನೀಶ್ ಮತ್ತು ಸತ್ಯಕಾಮರ ವಿಚಾರಧಾರೆಗಳು, ಬದುಕಿನ ಅನುಭವಗಳಿಗೆ ಇಂಥದೊಂದು ತಾತ್ವಿಕ ಹಸಿವೆ ಇದ್ದೇ ಇರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ.

ಆ ದಿಶೆಯಲ್ಲಿ ಅವರ ಓದು, ಅವರ ಜೊತೆಗಿನ ನಡೆಯ ಅನುಭವದಿಂದ ಈ ಜೀವಕ್ಕೆ ಹೀಗೊಂದು ವಿಶೇಷವಾದ ನಡೆ ಸಾಧ್ಯ ಮತ್ತು ಅದು ಪ್ರತೀ ಜೀವಕ್ಕೂ ಅನಿವಾರ್ಯ ಎಂಬ ತಿಳುವಳಿಕೆಯಿಂದಲೇ ಈ ಸಂಶೋಧನೆಯ ಬರೆಹವಿದೆ. ಇದು ಬೇಕಾಗಿಲ್ಲ, ಈಗ ಈ ದೇಹ ಇರುತ್ತದೆ, ನಾಳೆ ಎಲ್ಲಿದ್ದೇವೆ ಎಂದು ಯಾರಿಗೆ ಗೊತ್ತು ಎಂಬ ಅಪ್ರಸ್ತುತ, ಅಥವಾ ಅಸಾಂಗತ್ಯದ ಮೇಲೆ ಈ ಬರವಣಿಗೆ ಇಲ್ಲ. ಈ ಜೀವ ಹಿಂದೆಯೂ ಒಂದು ದೇಹದಲ್ಲಿ ಇತ್ತು ಮತ್ತು ಮುಂದೆಯೂ ಇರುತ್ತದೆ, ಇದಕ್ಕೆ ಒಂದು ವಿಶೇಷವಾದ ಅನುಭವ ವಾಸನೆ ಇದೆ, ಅದು ಪ್ರತೀ ದೇಹದಿಂದ ದೇಹಕ್ಕೆ ಬದಲಾದಾಗಲೂ ಜೀವದಲ್ಲಿ ಮುಂದುವರಿಯುತ್ತದೆ, ಜೀವ ಅಂಥ ಎಲ್ಲ ವಾಸನೆಗಳ ನೆನಪನ್ನು ಹೊತ್ತುಕೊಂಡೇ ಬೆಳೆಯುತ್ತಿರುತ್ತದೆ. ಅದರ ಬೆಳವಣಿಗೆ ಅಥವಾ ವಿಸ್ತಾರವೇ ಪ್ರತೀ ದೇಹ ಮುಖಾಂತರ ನಡೆಯುವ ಒಂದು ನಿರಂತರ ಪ್ರಕ್ರಿಯೆ ಎಂಬ ಮೂಲಭೂತ ತಿಳುವಳಿಕೆ ಈ ಬರೆಹದಲ್ಲಿದೆ.

ಮನುಷ್ಯನ ದಿನನಿತ್ಯದ ವಿಸರ್ಜನೆಯ ನಡೆಗೆ ವಿರುದ್ಧವಾದ ಊರ್ಧ್ವಮುಖಿ ನಡೆಯ ಶೋಧನೆಯೇ ಆಧ್ಯಾತ್ಮ. ಅಂಥದೊಂದು ನಡೆ ಹೇಗೆ ಸಾಧ್ಯ? ಮನುಷ್ಯನನ್ನು ಇತರ ಪ್ರಾಣಿಗಳಿಂದ ಭಿನ್ನವಾಗಿ ರೂಪಿಸಿದ ಮನಸ್ಸು, ಬುದ್ಧಿಗಳೇ ಇದಕ್ಕೆ ಸಹಕಾರಿ ಆಗಬಲ್ಲವೆ? ಎಂಬ ಪ್ರಶ್ನೆಯನ್ನೂ ಈ ಪಥ ನಡೆದ ಎಲ್ಲರೂ ಕೇಳಿಕೊಂಡಿದ್ದಾರೆ. ಆದರೆ ಪ್ರತಿಯೊಬ್ಬರೂ ಇವೆರಡನ್ನೂ ಸಾರಾಸಗಟಾಗಿ ತಿರಸ್ಕರಿಸಿ, ಇವೆರಡೇ ಆಧ್ಯಾತ್ಮ ಪಥಕ್ಕೆ ಅಡ್ಡಿ ಎಂಬ ತೀರ್ಮಾನಕ್ಕೂ ಬಂದಿದ್ದಾರೆ. ನಮ್ಮ ಕಾಲಾಮಾನದ ಯು.ಜಿ. ಕೃಷ್ಣಮೂರ್ತಿ (ಈಗ್ಗೆ ೨೦೦೭ರಲ್ಲಿ

ಆಗಿಹೋದವರು) ಅಂತೂ 'mind is a myth, thought is your enemy' ಎಂಬ ಬೀಜ ವಾಕ್ಯವನ್ನೇ ಹೇಳಿ ಹೋದವರು. ರಜನೀಶ್ ಕೂಡ ತನ್ನ ಎಲ್ಲಾ ಬರಹಗಳಲ್ಲೂ ಬುದ್ಧಿಮನಸ್ಸುಗಳೇ ನಮ್ಮ ನಡೆಯನ್ನು ಅಡ್ಡಿ ಮಾಡುವ ಸಂಗತಿಗಳು. ಯಾಕೆಂದರೆ ಮನುಷ್ಯ ಎಲ್ಲವನ್ನು ಬೌದ್ಧಿಕತೆಯಿಂದ ನಿರೂಪಿಸುತ್ತಾ ಬಂದಿದ್ದಾನೆ. ಅದೊಂದು ರೀತಿಯಲ್ಲಿ ಅವನು ಎಲ್ಲವನ್ನೂ ಮುಚ್ಚಿ ಹೇಳಬಲ್ಲ ಗುಣವನ್ನು ಬೆಳೆಸಿತು. ಮತ್ತು ಹಾಗೆ ಮಾಡುತ್ತಲೇ ಬಂದದ್ದರಿಂದ ಮನುಷ್ಯ ತೀರ ಅಸಹಜನೇ ಆದ, ಅಸತ್ಯವನ್ನೇ ಸತ್ಯ ಎಂಬಂತೆ ಹೇಳುತ್ತಾ ಬಂದ ಎನ್ನುತ್ತಾನೆ.

ಹಾಗಾದರೆ ಸಹಜನಾಗುವುದು ಮತ್ತು ಸತ್ಯಕ್ಕೆ ತೆರೆದು ಕೊಳ್ಳುವುದು ಹೇಗೆ ಎಂಬ ಪ್ರಶ್ನೆಗೆ ರಜನೀಶ್‌ನ ಪ್ರಕಾರ ಈ ಸಮಾಜದಿಂದ ಹೊರಗೆ ಬರುವುದು ಮತ್ತು ಹೃದಯದ ಮಾತನ್ನು ಕೇಳುವುದು ಎಂಬ ಉತ್ತರವಿದೆ. ಅವನ ಪ್ರಕಾರ ಬುದ್ಧಿಯ ಮಾತನ್ನು ಕೇಳಿ ಕೇಳಿ ಸಂಶಯಾತ್ಮರಾಗಿದ್ದೇವೆ. ಪ್ರತೀ ಸಂಶಯವೂ ನಮ್ಮನ್ನು ಬೆಳೆಯಿಸದೇ ತಡೆಯುತ್ತದೆ. ನಾವು ಮುಂದೆ ಹೋಗದಂತೆ ನಿಲ್ಲಿಸುತ್ತದೆ. ಆದರೆ ನಂಬಿಕೆ ಹಾಗಲ್ಲ ಅದು ಒಂದು ವಿಚಿತ್ರ ಶಕ್ತಿಯನ್ನು ಕೊಟ್ಟು ನಡೆಸಬಲ್ಲ ಅಂತರಂಗದ ಅಥವಾ ಹೃದಯದ ಭಾವನೆ. ಹೀಗೆ ಹೇಳಿದಾಕ್ಷಣ ಹಾಗಾದರೆ ಮೂಢವಾಗಿ ಎಲ್ಲವನ್ನೂ ನಂಬುತ್ತಾ ಹೋಗಬೇಕು ಎನ್ನುವ ಅರ್ಥವಲ್ಲ. ರಜನೀಶ ಖಂಡಿತಕ್ಕೂ ಸಂಶಯಗಳಿರಲಿ ಆದರೆ ಅದು ನಿರಂತರ ಶೋಧದಿಂದ ಒಂದು ನಂಬಿಕೆಗೆ ಪರಿವರ್ತನೆಯಾಗಲಿ ಎಂಬ ಸಂಗತಿಯನ್ನು ಹೇಳುತ್ತಾನೆ. ಇದೇ ಮಾತನ್ನು ಸತ್ಯಕಾಮರೂ ಹೇಳುತ್ತಾರೆ.

ಹೀಗೆ ನಂಬಿಕೆ ಕಡೆಗೆ ಗಟ್ಟಿಯಾಗುವುದಕ್ಕೆ ನಮಗೆ ಬೇಕಾಗುವ ಮೂಲಭೂತ ಅವಶ್ಯಕತೆ ಸಮರ್ಪಣೆ. (surrender) ಸಮರ್ಪಣೆ ಎಂದರೆ ಮನಸ್ವೀ ಒಪ್ಪಿಕೊಂಡು ಅದಿಲ್ಲದೆ ಬದುಕಲಾಗುವುದಿಲ್ಲ ಎಂಬ ತೀವ್ರ ಆಂತರಂಗಿಕ ಹಂಬಲದಿಂದ ಒಂದಕ್ಕೆ ಒಪ್ಪಿಸಿ ಕೊಳ್ಳುವುದೇ ಹೊರತು, ಯಾವುದೋ ಒತ್ತಾಯಕ್ಕೆ ಭಯಪಟ್ಟು, ದುರ್ಬಲನಾಗಿ ಬಲಿಬೀಳುವ ಶರಣಾಗತಿಯಲ್ಲ. ಇಂಥ ಸಮರ್ಪಣೆ ಸಾಧ್ಯವಾದವನ ಬದುಕಿನ ಸಂಶಯಗಳು ನಿವಾರಣೆಯಾಗಿ, ಹೃದಯದ ಭಾಷೆಗೆ ಒಲಿಯುವ ಆ ಮೂಲಕ ತಾನು ಇರುವ ಮತ್ತು ತೋರುವ ಭೇದವಳಿದ ಒಂದು ಸಹಜ ಸ್ಥಿತಿ ಸಾಧ್ಯವಾಗುತ್ತದೆ. ಆ ಮೂಲಕ ಅವನ ಜೀವ ಇತರರ ಒತ್ತಾಯವಿಲ್ಲದೆ ತನ್ನ ಬೆಳವಣಿಗೆಯನ್ನು ತಾನೇ ಕಾಣುತ್ತದೆ ಎಂಬುದು ಇಲ್ಲಿರುವ ಆಧ್ಯಾತ್ಮದ ಮೂಲ ತಿಳುವಳಿಕೆ.

ಅಧ್ಯಯನದ ವಿಷಯ ಆಯ್ಕೆ ಮತ್ತು ಉದ್ದೇಶ :

ಬದುಕಿನ ಶೋಧವೇ ಸಂಶೋಧನೆಯಾಗಬೇಕು. ಒಂದು ದೃಷ್ಟಿಯಿಂದ ಸಂಶೋಧನೆಗೂ ಬದುಕಿಗೂ ಅಜಗಜಾಂತರ. ಸಂಶೋಧನೆ ಒಂದು ಶೈಕ್ಷಣಿಕ ಅಗತ್ಯವಾಗಿಯೋ, ಸಾಮಾಜಿಕ ಕಾರಣಕ್ಕೋ ಇದೆ. ಅದು ಶೋಧನೆಯೇ ಆಗಿ ಬೆಳೆದಿಲ್ಲ. ಈ ದಿಶೆಯಿಂದ ಬದುಕಿನ ಶೋಧನೆಯೇ ಸಂಶೋಧನೆಯಾಗುವ ಸಾಧ್ಯತೆಯ ಕಡೆಗೆ ಈ ಅಧ್ಯಯನವಿದೆ.

ಇಂಥ ತಂತ್ರಪಥದಲ್ಲಿ ನಮ್ಮ ಕಾಲದಲ್ಲಿ ನಡೆದ ಇಬ್ಬರು ಮಹನೀಯರಿದ್ದಾರೆ. ರಜನೀಶ್ ಮತ್ತು ಸತ್ಯಕಾಮ. ಒಬ್ಬ ಮಧ್ಯಪ್ರದೇಶದ ಭೋಪಾಲಿನವ. ಮತ್ತೊಬ್ಬರು ಉತ್ತರ ಕರ್ನಾಟಕದ ಗಲಗಲಿಯವರು. ಇಬ್ಬರೂ ಈ ಪಥವನ್ನು ನಡೆದವರು. ಇಬ್ಬರೂ ನಡೆದದ್ದನ್ನು ಬದುಕಿದ್ದಾರೆ.

ಒಂದು ದೃಷ್ಟಿಯಿಂದ ಆಧ್ಯಾತ್ಮ ಎಂದಾಗ ಅದರ ಉದ್ದೇಶ ಏನು ಎಂಬುದನ್ನು ಹಿಂದೆ ವಿವರಿಸಿದ್ದಾಯಿತು. ವಾಸ್ತವಿಕ ಜೀವ ಒಂದಿದೆ ಅದು ಬೆಳೆಯುತ್ತದೆ ಎಂಬಲ್ಲೂ ಯಾವ ಕಡೆಗೆ ಎಂಬುದನ್ನು ಗಮನಿಸಿದ್ದೇವೆ. ಆದರೆ ಇದನ್ನು ದೇವರು ಅಥವಾ ಯಾವುದೋ ಒಂದು ನಮಗಿಂತ ದೊಡ್ಡದಾದ ಮೂರ್ತಸ್ವರೂಪ, ಸ್ವರ್ಗ ಎನ್ನುವ ಅಮೂರ್ತ ಕಲ್ಪನೆಯನ್ನು ಸೇರುವ ಉದ್ದೇಶ ಎಂದು ಖಂಡಿತಕ್ಕೂ ಭಾವಿಸಬೇಕಾಗಿಲ್ಲ.

ಇದರ ಹಿಂದೆ ಇರುವ ಮೂಲಭೂತ ಕಲ್ಪನೆ ಕೇವಲ energy (ಶಕ್ತಿ). ಪ್ರತೀ ಜೀವಿಯೂ ಒಂದು ಅಣುರೂಪದ ಶಕ್ತಿ. ಈ ಶಕ್ತಿಗೆ ತನ್ನನ್ನು ಅಸಾಧ್ಯ ಪರಿಮಿತಿಗೆ ವಿಸ್ತರಿಸಿಕೊಳ್ಳಲು ಬಂದರೆ ತಾನಾಗಿ ಪರಮಾಣುತ್ವವೂ ಒದಗಿಬರುತ್ತದೆ ಎಂಬುದು ಇದರ ಹಿಂದಿರುವ ಮೂಲಭೂತ ಪರಿಕಲ್ಪನೆ. ಇಲ್ಲಿ ಯಾವುದೋ ಹೊರಗೊಬ್ಬ ದೇವರು, ಅವನನ್ನು ಸೇರುವುದು ಮುಂತಾದ ಕಲ್ಪನೆಗಳಿಲ್ಲ. ನಮ್ಮ ಒಳಗಿರುವ ಅಪರಿಮಿತ ಸಾಧ್ಯತೆಯನ್ನು ನಾವೇ ಹಿಗ್ಗಿಸುತ್ತಾ ಚಿಕ್ಕವರಿದ್ದವರು ನಾವೇ ದೊಡ್ಡವರಾಗುವ ಒಂದು ಅನುಭವ ಇದು. ಇಲ್ಲಿ ಒಳಗಣ ವಿಸ್ತಾರವನ್ನು ಹೊರಗಣ ವಿಸ್ತಾರಕ್ಕೂ ಮೀರಿಸಿ ಬೆಳೆಯುವ ಕ್ರಿಯೆ ಇದೆಯೇ ಹೊರತು ಹೊರಗಿನ ಒಂದು ಯಾವುದನ್ನೋ ದೊಡ್ಡದೆಂದು ಪರಿಭಾವಿಸಿ ಅದರ ಕಡೆಗೆ ನಡೆಯುವ ಅಪೇಕ್ಷೆ ಇಲ್ಲ. ಹೊರಗಣ ಹುಡುಕಾಟವೇ ಇಲ್ಲ ಏನಿದ್ದರೂ ಅಂತರಂಗದ ಒಳಗೆ.

ಒಂದು ಕಾಲಕ್ಕೆ ನೀಷೆ 'God does not exist only matter exists' ಎಂದ ನೂರು ವರ್ಷಗಳಲ್ಲೇ ಭೌತವಿಜ್ಞಾನ 'whether god exist or not but matter does not exist it is only crisscross energy which creates an illusion of matter' ಎಂದಿತು. ಅದನ್ನೇ ಶಂಕರಾಚಾರ್ಯರು ಇಲ್ಲಿ ಕೇವಲ ಒಂದು ಇರುವಂತೆ ತೋರುವ ಮಾಯೆಯಿದೆ, ಆದರೆ ಆ

ಇರುವಿಕೆಗೆ ಕಾರಣವಾದದ್ದು ಮರೆಯಲ್ಲಿದೆ. ಈ ಮಾಯೆಗಳನ್ನು ತೆರೆದು ಬಿಟ್ಟರೆ ಮರೆಯಲ್ಲಿರುವುದು ಅರಿವಾಗುತ್ತದೆ ಎಂದರು.

ಈ ಅಧ್ಯಯನದಲ್ಲಿ ಆಧ್ಯಾತ್ಮ ಕುರಿತ ಇಂಥದೊಂದು ಶೋಧದ ಜಿಜ್ಞಾಸೆ ಇದೆ. ಇದು ಖಂಡಿತಕ್ಕೂ ಇಲ್ಲಿರುವುದು ಮಾಯೆ ಎಂದು ಬಿಟ್ಟೋಡುವ ಅಥವಾ 'ಇದರ' ವಿರುದ್ಧ ಓಡಿ ಹೋಗಿ 'ಅದನ್ನು' ಶೋಧಿಸುವ ಪ್ರಯತ್ನವಲ್ಲ. ಆದ್ದರಿಂದ ಇಲ್ಲಿ ತಂತ್ರಮಾರ್ಗದ ಆಯ್ಕೆ ಇದೆ. ಇಂಥ ಬಹಳ ಮೂಲಭೂತವಾದ ವ್ಯತ್ಯಾಸವೇ ತಂತ್ರಮಾರ್ಗವನ್ನು ಪ್ರತ್ಯೇಕವಾಗಿಸಿದೆ. ಸಮಾಜದಲ್ಲೇ ಇರುವ ಯಾವ ಒಳಿತು-ಕೆಡುಕು, ಸುಖ-ದುಃಖ, ಮೇಲು-ಕೆಳಗೆ, ಬಡವ-ಶ್ರೀಮಂತ, ಹೆಣ್ಣು-ಗಂಡು ಇಂಥ ಯಾವ ಭೇದವನ್ನು ಹೇಳದೆ, ಇರುವುದನ್ನು ಇರುವ ಹಾಗೆಯೇ ಒಪ್ಪಿ, ಇದರೊಳಗೆ ಒಂದು ನಿರಂತರವಾದ ಸಾಕ್ಷೀಪ್ರಜ್ಞೆಯನ್ನು ಕಾಯ್ದುಕೊಂಡು, ಈ ಜೀವ ವಿಸ್ತಾರ ಸಾಧ್ಯವಿದೆ ಎಂಬುದನ್ನು ಹೇಳುವ ಪಥ ಇದು.

ತನ್-ವಿಸ್ತಾರ ತ್ರ-ಪ್ರಜ್ಞೆ ಎಂಬ ಶಬ್ದದ ವ್ಯುತ್ಪತ್ತಿಯನ್ನು ಹೊಂದಿದ ತಂತ್ರ ಪಥ ಮೂಲಭೂತವಾಗಿ ಮನುಷ್ಯ ಪ್ರಜ್ಞೆಯ ವಿಸ್ತಾರವನ್ನೇ ಉದ್ದೇಶವಾಗಿ ಉಳ್ಳದ್ದು. ಯಾವುದೇ ಕಾರಣಕ್ಕೂ ಮನುಷ್ಯ ವಿಸ್ತಾರವನ್ನು ಕಡೆಗಣಿಸದೆ, ಎಲ್ಲಾ ವಿಧಿನಿಷೇಧಗಳನ್ನು ಪ್ರಶ್ನಿಸಿ ಪ್ರತಿಯೊಂದನ್ನೂ ಯಾವ ಮೈಲಿಗೆ ಇಲ್ಲದೇ ಸ್ವೀಕರಿಸಿದ ಪಥ. ಝೆನ್ ಮತ್ತು ತಂತ್ರ ಎರಡೂ ಪಥಗಳು ಬುದ್ಧಧರ್ಮದ ಮೂಲದಿಂದಲೇ ಹುಟ್ಟಿಕೊಂಡ ಹೊಸಶಾಖೆಗಳು. ಬುದ್ಧನ ನಂತರ ಹೀನಯಾನ ಮತ್ತು ವಜ್ರಯಾನ ಎಂಬ ಪ್ರಭೇದ ಬೆಳೆದು ವಿಸ್ತರಿಸಿದ ಹಾಗೆ ಆ ಎರಡರಿಂದಲೇ ಮತ್ತೆ ಝೆನ್ ಮತ್ತು ತಂತ್ರಗಳು ಬೆಳೆದವು ಎಂಬ ತಿಳುವಳಿಕೆ ಇದೆ.

೧೦ನೇ ಶತಮಾನದ ಆರಂಭ ಭಾಗದಲ್ಲಿ ಅದು ಅಭಿನವನಿಂದ ಹೆಚ್ಚು ಪ್ರಚಾರಕ್ಕೆ ಬಂದಿರಬೇಕು. ತಂತ್ರ ಪಥದ ಇಂಥ ಚಾರಿತ್ರಿಕ ಅಧ್ಯಯನ ಅಥವಾ ಅದರ ಒಳಪಂಗಡ, ಭೇದ ಇತ್ಯಾದಿಗಳನ್ನು ಇಲ್ಲಿ ವಿಶೇಷವಾಗಿ ಅಧ್ಯಯನಕ್ಕೆ ಪರಿಗಣಿಸಿಲ್ಲ. ಮೂಲಭೂತವಾಗಿ ಮನುಷ್ಯನ ಬೆಳವಣಿಗೆಗೆ ಇದು ಎಷ್ಟೊಂದು ಸಹಕಾರಿ ಎಂಬುದನ್ನಷ್ಟೇ ಪರಿಗಣಿಸಲಾಗಿದೆ.

ವಾಸ್ತವಿಕ ಆಧ್ಯಾತ್ಮಕ್ಕೂ ಅಕಾಡೆಮಿಕ್‌ಗೂ ಸಂಬಂಧವಿಲ್ಲ. ಅಕಾಡೆಮಿಕ್ ಸಂಗತಿಗಳನ್ನು ಬಲ್ಲವರು ಆಧ್ಯಾತ್ಮದ ಕುರಿತು ಮಾತನಾಡುವುದು ತುಂಬ Traditional, ಅವರಿಗೂ ಅದಕ್ಕು ಸಂಬಂಧಪಿರಬಾರದು ಎಂಬ ಕಾಲಮಾನದವರು ನಾವು. ಆ ದೃಷ್ಟಿಯಿಂದ ಆಧ್ಯಾತ್ಮವನ್ನೇ ಅಕಾಡೆಮಿಕ್ ಸಂಗತಿ ಜೊತೆಗೆ, ಅಕಾಡೆಮಿಕ್ ವ್ಯಕ್ತಿಗಳಿಗೆ ಮುಖಾಮುಖಿ ಮಾಡುವ ಉದ್ದೇಶವೂ ಇಲ್ಲಿದೆ.

ಹಾಗೆಯೇ ಆಧ್ಯಾತ್ಮವನ್ನು ಅರ್ಥಮಾಡಿಕೊಳ್ಳುವ ಭಾಷೆಯೇ ಬೇರೆ ಅದು ಈ ನಮ್ಮ ಅಕಾಡೆಮಿಕ್ ತಿಳುವಳಿಕೆಗೆ ಮತ್ತು ಅದರ ಭಾಷೆಯ ಪರಿಮಿತಿಯ ಆಚೆಗೆ ಮಾತ್ರ ಅರ್ಥವಾಗುತ್ತದೆ ಎಂಬ ಪರಿಕಲ್ಪನೆಯನ್ನೂ ಪ್ರಶ್ನಿಸುವ ಪ್ರಯತ್ನ ಕೂಡ ಈ ಸಂಶೋಧನೆಯ ಇನ್ನೊಂದು ಉದ್ದೇಶ.

ಎಲ್ಲಕ್ಕೂ ಮಿಗಿಲಾಗಿ ಆಧ್ಯಾತ್ಮದಲ್ಲಿರುವ ವ್ಯಕ್ತಿ ಈ ಜಗತ್ತಿನ ಸಂಗತಿಗಳಲ್ಲಿ ಇರಬಾರದು ಮತ್ತು ಅವರಿಗೆ ಒಂದು ಪ್ರತ್ಯೇಕವಾದ ನಡೆ-ನುಡಿ, ಆಚರಣೆ, ಬದುಕುವ ಕ್ರಮ ಇರುತ್ತದೆ ಎಂಬ ಪೂರ್ವಗ್ರಹವನ್ನೇ ಪ್ರಶ್ನಿಸಿ ಈ ಬದುಕಿಗೆ ಮುಖಾಮುಖಿ ಆಗಿಸಿಕೊಂಡೇ ಇಂಥದೊಂದು ನಡೆಯೂ ಸಾಧ್ಯವಿದೆ ಎಂಬುದನ್ನು ವೈಯಕ್ತಿಕವಾಗಿ ಸಾಧಿಸುವ ಉದ್ದೇಶವೂ ಇದೆ.

ಹಾಗೆಯೇ ಎಷ್ಟೋ ಬಾರಿ ಸಂಶೋಧನೆ ಎನ್ನುವುದು

ಒಂದು ಅಕಾಡೆಮಿಕ್ ಅಗತ್ಯವಾಗಿ ಉಳಿದುಕೊಂಡಿದೆ. ಅದಕ್ಕೆ ಬದಲಾಗಿ ನಮ್ಮ ಬದುಕಿನ ಶೋಧನೆಯೇ ಸಂಶೋಧನೆಯಾಗುವ ಕಡೆಗೆ ನಾವು ನಡೆದಿಲ್ಲ. ಮಾಡುವ ಸಂಶೋಧನೆ ಬೇರೆ ಬದುಕುವುದೇ ಬೇರೆ ಆಗಿ ಉಳಿದಿದೆ. ಇಲ್ಲಿ ಸಂಶೋಧನೆ ಮತ್ತು ಆತ್ಮಶೋಧನೆ ಎರಡನ್ನೂ ಒಂದುಗೂಡಿಸುವ ಪ್ರಯತ್ನವಿದೆ.

ಆಧ್ಯಾತ್ಮಕ್ಕಿರುವ ಹೆಣ್ಣು ಮತ್ತು ಗಂಡಿನ ಭೇದ ಹಲವು ವರ್ಷಗಳಿಂದ ಎಲ್ಲ ಪಂಡಿತರ ಚಿಂತನಾ ಕ್ರಮದಲ್ಲೂ ಇದ್ದು, ಇಂದಿಗೂ ಒಳಗೊಳಗೆ ಅದನ್ನು ಪಾಲಿಸಿದವರೇ ಹೆಚ್ಚು. ಶಂಕರ, ಬುದ್ಧ, ಮಹಾವೀರ ಮುಂತಾದ ಯೋಗಿಗಳಿಗೂ ಕೂಡ ಹೆಣ್ಣು ಮತ್ತು ಆಧ್ಯಾತ್ಮವನ್ನು ಜೊತೆಗೆ ಪರಿಗಣಿಸಲಾಗಲೇ ಇಲ್ಲ. ಶಂಕರಾಚಾರ್ಯರು ಪಾರ್ವತಿಯನ್ನು ಪರಮಶಕ್ತಿ ಎಂದು ಒಪ್ಪಿಕೊಂಡರೂ ಅದರಾಚೆಗೆ ಇಂದು ನಡೆದಾಡುವ ಹೆಣ್ಣನ್ನು ಆ ದಿಶೆಯಲ್ಲಿ ಒಪ್ಪಿ ಆಧ್ಯಾತ್ಮ ನಡೆಸುವ ಧೈರ್ಯ ಮಾಡಲೇ ಇಲ್ಲ.

ಇಂಥ ಎಲ್ಲ ಮಡಿವಂತಿಕೆ ಕಾಲಘಟ್ಟದಲ್ಲಿ ಶಕ್ತಿಯ (energy) ಶೋಧನೆ ಈ ಪಥದ ಉದ್ದೇಶ. ಗಂಡಿಲ್ಲದ ಹೆಣ್ಣು, ಹೆಣ್ಣಿಲ್ಲದ ಗಂಡು, ಪರಸ್ಪರ ಅಪೂರ್ಣ ಶಕ್ತಿ (half energy) ಇವರಿಬ್ಬರೂ ಕೂಡಿ ನಡೆದರೆ ಮಾತ್ರ ಪರಿಪೂರ್ಣ ಶಕ್ತಿಯ ಸಾಧ್ಯತೆ (complete energy) ಎಂಬುದನ್ನು ಮೊತ್ತಮೊದಲ ಬಾರಿಗೆ ಹೇಳಿದ ತಂತ್ರ ಪಥ ಇಂದಿನ ಭೇದವಳಿಯುತ್ತಿರುವ ಸಮಾಜಕ್ಕೆ ತುಂಬ ಅಗತ್ಯ. ಅದರ ಪರಿಚಯ ಬಹಳಷ್ಟು ಸ್ತ್ರೀನಡೆಗೆ ಒಂದು ಬಲ ಎಂಬ ಕಾರಣಕ್ಕೂ ಈ ಪಥದ ಅಧ್ಯಯನ ಮತ್ತು ಅನುಸಂಧಾನ ಎರಡನ್ನೂ ಇಲ್ಲಿ ಮಾಡಲಾಗಿದೆ.

ಎಲ್ಲಕ್ಕೂ ಮಿಗಿಲಾಗಿ ಮನುಷ್ಯ ಜೀವನದ ಅತ್ಯಂತ ಅಗತ್ಯ ಸಂಗತಿಯಾದ ಕಾಮವನ್ನೇ ಇಲ್ಲಿ ಮೂಲತಳಹದಿಯ ಪರಿವರ್ತನೆಗೆ ಬಳಸಿರುವುದು. ಬದುಕಿಗೆ ವಿಮುಖವಾಗದೆ ಕಾಮವನ್ನು ಆಧ್ಯಾತ್ಮದ ಒಂದು ವಿಶಿಷ್ಟ ಪ್ರಯೋಗ ಎಂದು ಸ್ವೀಕರಿಸಿದ ತಂತ್ರಮಾರ್ಗವನ್ನೇ ಈ ಇಬ್ಬರೂ ಸಾಹಿತಿಗಳ ಅಧ್ಯಯನದ ಪ್ರಮುಖ ವಿಷಯವನ್ನಾಗಿ ಸ್ವೀಕರಿಸಲಾಗಿದೆ.

ಅಧ್ಯಯನ ವಿಧಾನ ಮತ್ತು ವ್ಯಾಪ್ತಿ :

ಕೃತಿ ಮತ್ತು ಕೃತಿಕಾರರ ನಡುವೆ ಒಬ್ಬ ವ್ಯಕ್ತಿ ಇದ್ದಾನೆ. ಅವನು ಬದುಕಿದ ಅನುಭವಗಳಿವೆ. ಅವನು ತನ್ನನ್ನು ಹಲವು ಕ್ರಿಯೆಗಳಲ್ಲಿ ತೋರುತ್ತಾನೆ. ಅವನನ್ನು ನೋಡುವ ಪ್ರಯತ್ನ ಇಲ್ಲಿಯದು. ಈ ದಿಶೆಯಲ್ಲಿ ಸತ್ಯಕಾಮರ ಜೊತೆಗೆ ಬದುಕಿದ ನಾಲ್ಕು ವರುಷಗಳ ಅನುಭವವನ್ನು ಬಳಸಿಕೊಳ್ಳಲಾಗುವುದು.

ಸತ್ಯಕಾಮರನ್ನು ರಜನೀಶರನ್ನು ಹೋಲಿಸುವುದು ಇಲ್ಲಿಯ ಉದ್ದೇಶವಲ್ಲ. ಅಂತಃಶೋಧದಲ್ಲಿ ತುಲನೆಗೆ ನಗಣ್ಯ ಸ್ಥಾನ. ಒಂದು ದೃಷ್ಟಿಯಿಂದ ತುಲನೆ ಮಹಾಪರಾಧ. ಕಾರಣ ತುಲನೆಯಿಂದಲೇ ದುಃಖ, ಸ್ಪರ್ಧೆ, ಹಿಂಸೆ ಆರಂಭ. ಇವೆರಡೂ ಅಂತಃಶೋಧದ ದಾರಿಯಲ್ಲಿ ಅನವಶ್ಯಕ ಮುಳ್ಳುಗಳು.

ಈ ಕಾರಣವಷ್ಟೇ ಅಲ್ಲ ಶ್ರೇಷ್ಠಾಶ್ರೇಷ್ಠ ಕಲ್ಪನೆಯೇ ತಂತ್ರಕ್ಕಿಲ್ಲ. ಆದ್ದರಿಂದ ಇಬ್ಬರ ನಡುವಿನ ಹೆಚ್ಚುಗಾರಿಕೆ ಇಲ್ಲಿಯ ಹುಡುಕಾಟವಲ್ಲ. ಒಂದು ತಂತ್ರಮಾರ್ಗ ನಡೆದಾಗ ಅವರಿಬ್ಬರೂ ಬೆಳೆದ ರೀತಿ. ಬೇರೆಯವರನ್ನು ಬೆಳೆಸಿದ ಬಗೆ, ಮುಂದೆ ಯಾರಾದರೂ ಬೆಳೆವ ಸಾಧ್ಯತೆ ಮಾತ್ರ ಇಲ್ಲಿನ ಚರ್ಚೆ. ಇಲ್ಲಿ ವಸ್ತುನಿಷ್ಠ ವಿಶ್ಲೇಷಣೆಯನ್ನೇ ಅನುಭವ ಪ್ರಮಾಣದ ಆಧಾರದಲ್ಲಿ ಅಂತರಶಿಸ್ತೀಯ ಅಧ್ಯಯನ ರೀತಿಯಲ್ಲಿ ನಡೆಸಲಾಗುವುದು. ಹಾಗಾಗಿ ಈ ಅಧ್ಯಯನ ಅನುಭವ ಪ್ರಮಾಣಾಧಾರಿತ ಅಧ್ಯಯನ ಎಂದೂ ಭಾವಿಸಬಹುದು. ಒಂದು ವ್ಯಕ್ತಿ ಇನ್ನೊಂದನ್ನು ನಡೆಸಿದ ಅನುಭವವೇ ಇಲ್ಲಿ ಆಧಾರ. ಅಲ್ಲಲ್ಲಿ ವ್ಯಕ್ತಿಗಳು ಕೃತಿಯಲ್ಲಿ ಬಿಟ್ಟಿರುವ ವಸ್ತುನಿಷ್ಠತೆಯೂ ಇದೆ. ಬರೆಹ ಎಷ್ಟಂದರೂ ಅಹಂಕಾರದ ಶಿಶು.

ಇನ್ನೊಂದು ವ್ಯಕ್ತಿಯನ್ನು ಹುಟ್ಟಿಸುವಲ್ಲಿ ಈ ಅಹಂಕಾರ ಸತ್ತಿರುತ್ತದೆ. ಈ ದೃಷ್ಟಿಯಿಂದ ಎರಡನ್ನು ಪೂರಕವಾಗಿ ಬಳಸಲಾಗುವುದು.

ತಂತ್ರ ಮತ್ತು ತಂತ್ರ ಸಂಬಂಧಿ ಸತ್ಯಕಾಮ, ರಜನೀಶರ ಸಾಹಿತ್ಯ, ಅನುಭವಗಳನ್ನು ಅವರ ವಸ್ತು ವಿಶ್ಲೇಷಣಾತ್ಮಕ ಅಧ್ಯಯನದ ಮೂಲಕ ಇಲ್ಲಿ ಅಭ್ಯಸಿಸಲಾಗಿದೆ. ತಂತ್ರವನ್ನು ಅದರ

ಚರಿತ್ರಾತ್ಮಕ ಹಿನ್ನೆಲೆಯಲ್ಲಾಗಲಿ ವಸುಗುಪ್ತ, ನಾಗಾರ್ಜುನ, ಅಭಿನವ ಅಥವಾ ಪಾಶ್ಚಾತ್ಯ ಜಾನ್ ವುಡ್ರೋಫ್ ಮುಂತಾದವರ ತಾತ್ವಿಕ ಚರ್ಚೆಯ ಹಿನ್ನೆಲೆಯಲ್ಲಿ ನೋಡದೇ ಈಗ್ಗೆ ನಮ್ಮ ಕಾಲದಲ್ಲಿ ನಡೆದ ಇಬ್ಬರು ಮಹನೀಯರ ಅನುಭವ ಮತ್ತು ಸಾಹಿತ್ಯದ ಆಧಾರದ ಮೇಲೆ ಗಮನವಿರಿಸಲಾಗಿದೆ.

ತಂತ್ರದ ಕುರಿತ ಚಾರಿತ್ರಿಕ ಅಥವಾ ಪಥ ವಿಶ್ಲೇಷಣೆಗಳನ್ನು ಕೇವಲ ಕೆಲವು ಸ್ಥೂಲ ಪರಿಚಯದ ರೂಪದಲ್ಲಿ ಮಾಡಲಾಗಿದ್ದು ಅದರ ಸೂಕ್ಷ್ಮ ಹಿನ್ನೆಲೆ, ಬೆಳವಣಿಗೆ, ಅಧಃಪತನ, ಇತ್ಯಾದಿ ಚರ್ಚೆಗಳನ್ನು ಮಾಡಿಲ್ಲ. ಆ ಕುರಿತು ನಮಗೆ ಸಾಕಷ್ಟು ಕೃತಿಗಳು ಲಭ್ಯವಿರುವುದು ಒಂದು ಕಾರಣವಾದರೆ ಅಧ್ಯಯನದ ಉದ್ದೇಶ ರಜನೀಶ್ ಮತ್ತು ಸತ್ಯಕಾಮರ ತಂತ್ರನಡೆಯ ಕಡೆಗೆ ಹೆಚ್ಚು ಕೇಂದ್ರೀಕೃತವಾಗಬೇಕು ಎನ್ನುವುದು ಎರಡನೆಯ ಕಾರಣ.

ಇದಲ್ಲದೆ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲೂ ತಂತ್ರದ ಕುರಿತಾದ ಸಾಹಿತ್ಯವನ್ನೇ ಅಧ್ಯಯನದ ಪ್ರಮುಖ ಅಂಗವಾಗಿ ಪರಿಗಣಿಸಲಾಗಿದೆ. ಸತ್ಯಕಾಮರ ಸಮಗ್ರ ಸಾಹಿತ್ಯವನ್ನಾಗಲಿ, ರಜನೀಶರ ಅಷ್ಟೂ ಕೃತಿಗಳನ್ನಾಗಲಿ, ಅಧ್ಯಯನಕ್ಕೆ ಪರಿಗಣಿಸಲಿಲ್ಲ. ರಜನೀಶರ ೬೦೦ ಕೃತಿಗಳು ಲಭ್ಯವಿದ್ದು ಅವುಗಳಲ್ಲಿ ತಂತ್ರಕ್ಕೆ ಸಂಬಂಧಪಟ್ಟ ವಿಜ್ಞಾನ ಭೈರವ ತಂತ್ರ (ಸಂಪುಟ ೧ & ೨), ತಂತ್ರ ವಿಷನ್ (ಸಂಪುಟ ೧ & ೨), ಕುಂಡಲಿನೀ ಯೋಗ (ಸಂಪುಟ ೧ & ೨), ತಂತ್ರ ದಿ ಸುಪ್ರೀಂ ಅಂಡರ್‌ಸ್ಟಾಂಡಿಗ್ ಇವೇ ೭ ಕೃತಿಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ. ಇದಕ್ಕೆ ಪೂರಕವಾಗಿ ಅವನ ಬರಹಗಳಲ್ಲಿರುವ ಯೋಗ ದಿ ಆಲ್ಫಾ ಅಂಡ್ ಒಮೇಗ (೧೦ ಸಂಪುಟಗಳು–ಪತಂಜಲಿಗೆ ವ್ಯಾಖ್ಯಾನ), ದಿ ಹಾರ್ಟ್ ಸೂತ್ರ (ಬುದ್ಧಿಸಂ), ದಿ ಪರ್ಫೆಕ್ಟ್ ಮಾಸ್ಟರ್ (ಸೂಫಿಸಮ್, ಸಂಪುಟ ೧ & ೨), ಝೆನ್ ದಿ ಪಾತ್ ಆಫ್ ಪ್ಯಾರಡಕ್ಸ್ (ಸಂಪುಟ ೧ & ೨), ಲಿವಿಂಗ್ ತಾವೋ (ತಾವೋಯಿಸಂ) ಇವಲ್ಲದೆ ಕೆಲವು ಝೆನ್ ಕೃತಿಗಳು, ಉಪನಿಷತ್ತಿನ ಕುರಿತು ಅವನ ವ್ಯಾಖ್ಯಾನದ ಕೆಲವು ಕೃತಿಗಳನ್ನು (ಪ್ರಬಂಧದ ಪರಾಮರ್ಶನದಲ್ಲಿ ವಿವರಿಸಲಾಗಿದೆ) ಆನುಶಂಗಿಕವಾಗಿ ಅಧ್ಯಯನದ ತೀರ್ಮಾನಕ್ಕೆ ಓದಿಕೊಳ್ಳಲಾಗಿದೆ.

ಒಂದು ದೃಷ್ಟಿಯಿಂದ ರಜನೀಶನ ಕುರಿತ ಗೂಗಲ್ ಸರ್ಚಿನಲ್ಲಿ ದೊರೆಯುವ ಪರಿಚಯವನ್ನೇ ವ್ಯಕ್ತಿ ವಿವರಗಳಿಗೆ ಬಳಸಲಾಗಿದೆ ಹೊರತು ಯಾವುದೇ ಅಭಿಮಾನ ದುರಾಭಿಮಾನದ ಬರೆಹಗಳನ್ನು ಅಷ್ಟಾಗಿ ಅವಲಂಬಿಸಿಲ್ಲ. ಉತ್ತರ ಭಾರತ ಅಥವಾ ಮುಂಬೈಯ ಆಚೆಯ ಪ್ರದೇಶಗಳಲ್ಲಿ ಅವನು ಪ್ರಚಲಿತನಿದ್ದು, ದಕ್ಷಿಣದ ಭಾಗಕ್ಕೆ ಹೆಚ್ಚು ಅಪರಿಚಿತನಾಗಿಯೇ ಇದ್ದ. ವೈಯಕ್ತಿಕ ಸಂಪರ್ಕ ಅಥವಾ ಭೇಟಿಗಳು ಇಲ್ಲವಾದ್ದರಿಂದ ಒಬ್ಬ ದೂರದ ವ್ಯಕ್ತಿಯ ಪರಿಚಯದಂತೆ ಅವನ ವಿವರಗಳಿದ್ದರೆ ಅದು ನನ್ನ ವೈಯಕ್ತಿಕ ಮಿತಿ. ಆದರೆ ಆದಷ್ಟು ಇತರ

ಅಭಿಪ್ರಾಯಗಳ, ಪೂರ್ವಗ್ರಹಗಳ ಒತ್ತಡವಿಲ್ಲದೆ, ಬರೆಹ ಮುಖೇನ ಮತ್ತು ಶಿಷ್ಯರ ಪ್ರಶ್ನೋತ್ತರಗಳನ್ನು ಉತ್ತರಿಸುವಾಗ ಕಾಣಿಸುವ ರಜನೀಶನನ್ನೇ ವಸ್ತುನಿಷ್ಠವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನಮಾಡಲಾಗಿದೆ. ಅವನ ವ್ಯಕ್ತಿತ್ವ ನನ್ನ ಅಧ್ಯಯನದಿಂದ ಪರಿಪೂರ್ಣವಾಗಿ ಪರಿಚಯವಾಗುತ್ತದೆ ಎಂಬ ಭ್ರಮೆ ಈ ಅಧ್ಯಯನದಲ್ಲಿ ಇಲ್ಲ.

ರಜನೀಶನ ಅಭಿಮಾನವಾಗಲಿ, ತಂತ್ರಪಥದ ಸಂಪೂರ್ಣ ಸೆಳೆತಗಳಾಗಲಿ ಈ ಅಧ್ಯಯನದಲ್ಲಿ ಸಂಶೋಧಕಿಯಾಗಿ ನನಗೆ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಕೇವಲ ಸತ್ಯಕಾಮರ ಜೊತೆ ನಡೆದ ನಾಲ್ಕು ವರ್ಷಗಳ ನಡೆ ಮತ್ತು ಸತ್ಯಕಾಮರು ನಡೆದ ತಂತ್ರಪಥ, ಆ ಬಳಿಕ ಅವರ ಮರಣಾನಂತರ ತೆರೆದುಕೊಂಡ ತಂತ್ರಶಾಸ್ತ್ರಗಳ ಪರಿಚಯದ ಜೊತೆಗೆ ಒಂದು ಮುಖಾಮುಖಿ ಮಾತ್ರವೇ ಈ ಅಧ್ಯಯನದ ಉದ್ದೇಶ. ಇಲ್ಲಿ ತಂತ್ರಶಾಸ್ತ್ರವನ್ನು ಆಧ್ಯಾತ್ಮ ಪಥದ ಅಂತಿಮ ಸಾಧ್ಯತೆ ಎಂದಾಗಲಿ, ರಜನೀಶ್ ಸತ್ಯಕಾಮರ ಕುರಿತ ಅಂಧಾಭಿಮಾನಗಳು ಇರದಂತೆ ಪೂರ್ಣ ಎಚ್ಚರವಹಿಸಲಾಗಿದೆ. ಯಾವುದೇ ಒಂದು ಸಾಹಸಮಯವಾದ ದಾರಿಯನ್ನು ವಿಷದವಾಗಿ ನೋಡುವ ಸವಾಲಿನ ಮನೋಭಾವವೇ ಈ ದಿಶೆಯ ಚರ್ಚೆಗೆ ಪ್ರೇರಣೆ ಹೊರತು ತಂತ್ರವನ್ನು, ರಜನೀಶನನ್ನು, ಸತ್ಯಕಾಮರನ್ನು ಮಾದರಿ ಮಾಡುವ ಯಾವ ಉದ್ದೇಶವು ಈ ಅಧ್ಯಯನಕ್ಕೆ ಇಲ್ಲ.

ಹಾಗೆಯೇ ಸತ್ಯಕಾಮರ ಅನುಭವ ಕಥನಗಳಾದ ತಂತ್ರಯೋನಿ, ಪಂಚ'ಮ'ಗಳ ನಡುವೆ, ಅರ್ಧದಾರಿ, ದೇವನ ಇನ್ನೊಂದು ಬಾಗಿಲು, ಅನಂತ ಜೀವನ, ಕಪಿಲವಸ್ತು, ಸ್ವತಂತ್ರ, ಅನಂತ ಜೀವನ, ಋಷಿಪಂಚಮಿ ಇವುಗಳ ಜೊತೆಗೆ ವಿಜ್ಞಾನ ಭೈರವ, ಅಭಿನವ, ಅಶ್ವಘೋಷ, ಮಾತೃಲಹರಿ, ಮುಂತಾದ ತಂತ್ರ ಮಾರ್ಗಗಳ ಕಾದಂಬರಿ, ಕವಿತೆಗಳನ್ನು ಮಾತ್ರ ಪ್ರಮುಖ ಅಧ್ಯಯನ ಆಕರಗಳೆಂದು ಪರಿಗಣಿಸಲಾಗಿದೆ. ಅವರ ಪುರಾಣ ಆಧಾರಿತ ಕಾದಂಬರಿಗಳನ್ನು ಸಾಮಾಜಿಕ ಕಾದಂಬರಿ ಮತ್ತು ಕಥೆಗಳನ್ನು ಕೇವಲ ಆನುಶಂಗಿಕವಾಗಿ ಮಾತ್ರ ಗಮನಿಸಲಾಗಿದೆ.

ಇವೆಲ್ಲದರ ಜೊತೆಗೆ ರಜನೀಶನ ಕುರಿತು ಇತರರು ಬರೆದಿರುವ ವ್ಯಕ್ತಿಚಿತ್ರಣ ಮತ್ತು ಸಾಧನೆಯ ವಿಮರ್ಶೆಯನ್ನು ಪರಿಗಣಿಸಿಲ್ಲ. ಹಾಗೆಯೇ ಸತ್ಯಕಾಮರ ಕುರಿತು ಹೆಚ್.ಜಿ. ಜೋಶಿಯವರು ಬರೆದ 'ಸತ್ಯಕಾಮ ಮತ್ತು ಶಾಂತಾಮಠಪತಿಯವರ ಕೃತಿಯಲ್ಲಿ ದೊರೆಯುವ ಸತ್ಯಕಾಮರ ಜೀವನ ವಿವರಗಳ ಜೊತೆಗೆ ಸತ್ಯಕಾಮರೇ ಸಂದರ್ಶನದಲ್ಲಿ ಹೇಳಿಕೊಂಡ ಅವರ ವೈಯಕ್ತಿಕ ವಿವರ, ಅವರ ವೈಯಕ್ತಿಕ ಸಂಪರ್ಕದಲ್ಲಿ ಕಳೆದ ಅನುಭವದಿಂದ ದೊರೆತ ಮಾಹಿತಿ ಇವುಗಳನ್ನು ಗಮನಿಸಿಕೊಂಡು ಅವರ ವ್ಯಕ್ತಿತ್ವವನ್ನು ಪರಿಚಯಿಸಲಾಗಿದೆ. ಪೂರ್ವಗ್ರಹ, ವೈಯಕ್ತಿಕ ಪಾಲ್ಗೊಳ್ಳುವಿಕೆಯಿಂದಾಗಿ ಸತ್ಯಕಾಮರ ಕುರಿತು ಅನಗತ್ಯ ವಿಜೃಂಭಣೆ ವೈಭವಗಳು ಇಲ್ಲದಂತೆ

ತುಂಬ ಎಚ್ಚರ ಕಾಯ್ದುಕೊಳ್ಳಲಾಗಿದೆ. ಇಷ್ಟಾಗಿಯೂ ತ್ರಯಸ್ಥ ಭಾವ ಕಾಣದೆ ವೈಯಕ್ತಿಕವಾದ ಆಡಂಬರ ಮತ್ತು ಸುಳ್ಳುಗಳು ಗೋಚರಿಸಿದರೆ ಸಂಶೋಧಕಿ ವಿಮರ್ಶೆಗೆ ಸದಾ ಸಿದ್ಧಳೆಂದು ಸ್ಪಷ್ಟಪಡಿಸುತ್ತೇನೆ. ಗುರು ಹೆಗಲ ಮೇಲೆ ಹೊರುವ ಹೆಣವಲ್ಲ ಎಂಬುದನ್ನು ಸ್ವತಃ ಘೋಷಿಸಿರುವ ಸತ್ಯಕಾಮರ ಕುರಿತು ಅಂತಹದೇ ಎಚ್ಚರವನ್ನು ಇಟ್ಟುಕೊಂಡು ಬರೆಯುವ ಪ್ರಯತ್ನ ಮಾಡಲಾಗಿದೆ. ಇಷ್ಟೆಲ್ಲವನ್ನೂ ಮೀರಿ ಅರ್ಥೈಸಿಕೊಳ್ಳುವಲ್ಲಿ ದೋಷವಿದ್ದರೆ, ಇರುವ ವ್ಯಕ್ತಿತ್ವ ಸಂಕುಚಿತವಾದರೆ ಅದನ್ನು ವೈಯಕ್ತಿಕ ಮಿತಿಯೆಂದೇ ಪರಿಭಾವಿಸಬೇಕು. ವ್ಯಕ್ತಿಯನ್ನು ಪರಿಚಯಿಸುವುದು, ಅರ್ಥಮಾಡಿಕೊಳ್ಳುವುದು, ತುಂಬ ಕಷ್ಟದ ಕೆಲಸ ಎಂಬ ಅರಿವು ಈ ಬರೆಹಕ್ಕೆ ಇದೆ. ಆದರೂ ಶಿಷ್ಯಭಾವದ ಭಯ, ಸಂಕೋಚಗಳನ್ನು ಸಂಪೂರ್ಣ ಬದಿಗಿಟ್ಟು ಮೂರನೆಯ ಕಣ್ಣಿನಿಂದ (Third person's eye) ನೋಡುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗಿದೆ. ಅದು ಶಿವನ ಮೂರನೇ ಕಣ್ಣಿನ ದರ್ಶನವಲ್ಲ ಎಂಬ ಅರಿವು ಇದೆ.

ಅಧ್ಯಯನವನ್ನು ಪೂರ್ವಾರ್ಧ ಉತ್ತರಾರ್ಧ ಎಂದು ಎರಡು ವಿಭಾಗಗಳಾಗಿ ಪರಿಗಣಿಸಲಾಗಿದೆ. ಮೊದಲನೆಯ ವಿಭಾಗವನ್ನು ಆಗಮ ಎಂದು ಎರಡನೆಯ ವಿಭಾಗಕ್ಕೆ ಸಮಾಗಮ ಎಂದು ಹೆಸರಿಡಲಾಗಿದೆ.

ತತ್ವಶಾಸ್ತ್ರದ ಆರಂಭದಲ್ಲಿ ಎಲ್ಲ ವಿಭಾಗದ ಪಂಥದ ತತ್ವಶಾಸ್ತ್ರಕ್ಕೂ ವೇದಪುರಾಣಾದಿಗಳಾದಿ ಆಗಮ ಎಂದು ಹೆಸರಿತ್ತು. ಆದರೆ ಕಾಲಾಂತರದಲ್ಲಿ ಶೈವಪಂಥದ ಬೆಳವಣಿಗೆಯಾಗಿ ತಂತ್ರ ಎಂಬ ಶಾಸ್ತ್ರ ಪ್ರಚಲಿತವಾಗುತ್ತಾ ಬಂತು. ಆಗ ಕೇವಲ ತಂತ್ರಶಾಸ್ತ್ರ ಅಥವಾ ಶೈವಶಾಸ್ತ್ರಕ್ಕೆ ಆಗಮಶಾಸ್ತ್ರ ಎಂಬ ಹೆಸರು ಬಳಕೆಗೆ ಬಂತು. ಶಬ್ದದ ನಿಷ್ಪತ್ತಿ 'ಆ' ಎಂದರೆ ಶಿವ 'ಗಮ' ಎಂದರೆ ಶಕ್ತಿ. ತಂತ್ರವು ಶಿವ ಮತ್ತು ಶಕ್ತಿಯರಿಗೆ ಸಂಬಂಧಪಟ್ಟ ಶಾಸ್ತ್ರ ಎಂಬ ಕಾರಣದಿಂದ ಅದನ್ನು ಆಗಮ ಎಂದು ಕರೆಯಲಾಯಿತು.

ಈ ಅಧ್ಯಯನವು ಆರಂಭದ ಎಂಟು ಅಧ್ಯಾಯಗಳಲ್ಲಿ ಸಂಪೂರ್ಣವಾಗಿ ತಂತ್ರಶಾಸ್ತ್ರದ ಓಸ್ನೆಲೆಯಲ್ಲಿಯೇ ಚರ್ಚೆ ನಡೆಸುವುದರಿಂದ ಪೂರ್ವಾರ್ಧಕ್ಕೆ ಆಗಮ ಎಂಬ ಹೆಸರನ್ನು ನೀಡಲಾಗಿದೆ.

ಆಶ್ಚರ್ಯವೆಂದರೆ ತಂತ್ರಪರಿಚಯ ಎಂದಾಕ್ಷಣ ಅದರ ಶಾಸ್ತ್ರೋಕ್ತ ಪರಿಚಯ, ಪಂಚ'ಮ'ಕಾರಗಳ ವಿವರಣೆ, ಗುರು-ಶಿಷ್ಯ ಸಂಬಂಧ, ಕುಂಡಲಿನೀ ಇವುಗಳನ್ನೇ ವಿವರಿಸುವ ಪರಿಪಾಠವಿದೆ. ಅಂತಹ ಒಂದು ಪುನರಾವರ್ತನೆಯ ಹಾಗೆ ಆರಂಭದ ಭಾಗ ಆಗಮವು ಕಾಣಿಸಿದರೆ ಅದು ಕೇವಲ ಆಕಸ್ಮಿಕ ಅಥವಾ ಅನೈಚ್ಛಿಕ ಅನುದ್ದೇಶವಾಗಿ ರಚಿಸಿಯೂ

ಶಾಸ್ತ್ರವಿದಿತವಾಗಿ ಬರೆಹ ಮೂಡಿರುವ ಒಂದು ಸಹಜ ಪ್ರಕ್ರಿಯೆ ಎಂದಷ್ಟೇ ಹೇಳಲು ಇಷ್ಟಪಡುತ್ತೇನೆ. ಈ ಹಿನ್ನೆಲೆಯಲ್ಲಿ ಆರಂಭದ ಬರೆಹಗಳಾದ ಎಂಟು ಅಧ್ಯಾಯಗಳು ಪೂರ್ತಿಯಾಗಿ ತಂತ್ರಶಾಸ್ತ್ರದ ಪಾರಿಭಾಷಿಕ ಸಂಗತಿಗಳ ಅನುಭವಿ ನೆಲೆಯನ್ನು ಪರಿಚಯಿಸುತ್ತವೆ. ಆದ್ದರಿಂದ ಇದಕ್ಕೆ ಆಗಮ ಎಂದು ಹೆಸರಿಸಲಾಗಿದೆ.

ಉತ್ತರಾರ್ಧದಲ್ಲಿ ಇಬ್ಬರು ಸಮಕಾಲೀನ ಮಹನೀಯರ ಓದಿನ ಹಿನ್ನೆಲೆಯಲ್ಲಿ ತಂತ್ರಶಾಸ್ತ್ರವನ್ನು ಅಭ್ಯಸಿಸಲಾಗಿದೆ. ರಜನೀಶ್ ಮತ್ತು ಸತ್ಯಕಾಮರು ಇಬ್ಬರೂ ಆಚಾರ್ಯರು. ಆಚಾರ್ಯ ಎನ್ನುವುದು ಜಾತಿ ಸೂಚಕವಲ್ಲ. ಅದು ಅವರ ಗರಿಮೆಗೆ ಕೊಡುವ ಗೌರವ ಹಾಗಾಗಿ ಅದು ಆಚಾರ್ಯತ್ವ ಇಬ್ಬರೂ ಸರಿಯಾಗಿ ಒಂದೇ ಕಾಲಘಟ್ಟದಲ್ಲಿ ಬದುಕಿದವರು. ಸತ್ಯಕಾಮರಿಗಿಂತ ರಜನೀಶ್ ಇಪ್ಪತ್ತು ವರ್ಷಗಳ ಮೊದಲೇ ಇಲ್ಲವಾದರೆ ಸತ್ಯಕಾಮರು ಮತ್ತೂ ಕೆಲಕಾಲ ಅದನ್ನು ನಡೆದವರು. ಇಬ್ಬರಲ್ಲು ನುಡಿದ ಮತ್ತು ನಡೆಸಿದ ಅನುಭವಗಳಿವೆ. ಅವುಗಳನ್ನು ಪರಾಮರಿಸಿ ಪರಿಚಯಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಈ ಇಬ್ಬರನ್ನು ಕೂಡಿ ನೋಡುವ ಹಿನ್ನೆಲೆಯಲ್ಲಿ ಈ ಅಧ್ಯಾಯಗಳಿಗೆ ಸಮಾಗಮ ಎಂದು ಹೆಸರಿಡಲಾಗಿದೆ. ಆಗಮಶಾಸ್ತ್ರದಲ್ಲಿ ಇಬ್ಬರು ಒಬ್ಬರಿಗೊಬ್ಬರು ಸರಿಸಮ ಎಂಬ ಅರ್ಥದಲ್ಲೂ ಸಮಾಗಮ (ಆಗಮಕ್ಕೆ ಸಮ) ಎಂಬ ಹೆಸರನ್ನು ಉದ್ದೇಶಪೂರ್ವಕವಾಗಿಯೂ ಬಳಸಲಾಗಿದೆ.

ಈ ದೃಷ್ಟಿಯಲ್ಲಿ ಅಧ್ಯಯನವನ್ನು ಹದಿಮೂರು ಮುಖ್ಯ ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಪೂರ್ವಾರ್ಧ : ಆಗಮ

1. ತಂತ್ರಮಾರ್ಗದ ನಡೆ ಮತ್ತು ಬೆಳವಣಿಗೆ.
2. ತಂತ್ರದಲ್ಲಿ ಶಕ್ತಿ ಮತ್ತು ಸಿದ್ಧಿಗಳ ಪಾತ್ರ.
3. ತಂತ್ರಪಥ, ರಜನೀಶ ಮತ್ತು ಸತ್ಯಕಾಮ : ಈ ಮೂರು ಸಂಗತಿಗಳ ಸ್ಥೂಲ ಪರಿಚಯ.
4. ಕುಂಡಲಿನಿ ಮತ್ತು ಶಕ್ತಿಪಾತ.
5. ಸಾಧನಾ ಮಾರ್ಗದಲ್ಲಿ ಗುರು–ಶಿಷ್ಯರ ಪರಸ್ಪರ ಅರ್ಹತೆ.
6. ತಂತ್ರಮಾರ್ಗ ಮತ್ತು ಸ್ತ್ರೀ.
7. ಕನ್ನಡ ಸಾಹಿತ್ಯ ಮತ್ತು ತಂತ್ರ.

ಉತ್ತರಾರ್ಧ : ಸಮಾಗಮ

1. ಇಬ್ಬರು ಆಚಾರ್ಯರ ದೃಷ್ಟಿಯಲ್ಲಿ ತಂತ್ರಮಾರ್ಗ
2. ಕುಂಡಲಿನೀ ಮತ್ತು ಶಕ್ತಿಪಾತದ ಕುರಿತು ರಜನೀಶ್ ಮತ್ತು ಸತ್ಯಕಾಮ
3. ರಜನೀಶ್ ಸತ್ಯಕಾಮರು ಕಂಡ ಗುರು–ಶಿಷ್ಯರು
4. ಆಚಾರ್ಯದ್ವಯರ ಕಣ್ಣಿನಲ್ಲಿ ಕಾಮ, ಪ್ರೇಮ ಮತ್ತು ಸ್ತ್ರೀ
5. ಸ್ವಪ್ನಮಂಜರಿ ಮತ್ತು ಸ್ವಪ್ನಶಾಸ್ತ್ರದ ಕುರಿತು ಹೊಳಹುಗಳು ಮತ್ತು ರಜನೀಶ್ ಬಳಸುವ ವಿನೋದ (ಜೋಕ್ಸ್) ಹಾಗೂ ಕಥೆಗಳು
6. ಉಪಸಂಹಾರ

ಈ ಹಿನ್ನೆಲೆಯಲ್ಲಿ ತಂತ್ರಮಾರ್ಗವನ್ನು ಪುನರವಲೋಕಿಸುವ ಉದ್ದೇಶವಿದೆ. ಬಹಳ ಪೂರ್ವದಿಂದಲೂ ಸಾಹಿತ್ಯ ಮತ್ತು ಆಧ್ಯಾತ್ಮಿಕಕ್ಕೆ ಒಂದು ವಿಭಾಗವಿದೆ. ಸಾಹಿತ್ಯ ಲೋಕವು ಆಧ್ಯಾತ್ಮವನ್ನು ಅಲೌಕಿಕವೆಂದು ದೂರ ಉಳಿಸಿದೆ. ಹಾಗೆಯೇ ಆಧ್ಯಾತ್ಮಿಕ ಲೋಕ ಸಾಹಿತ್ಯವನ್ನು ಬೇರೆ ಎಂದು ಬಗೆದಿದೆ. ಪರಸ್ಪರ ಮುಖಾಮುಖಿಯಾಗುವ ಒಂದು ಸಂಭಾಷಣೆ ನಡೆದಿಲ್ಲ. ಈ ಅಧ್ಯಯನ ಆರೀತಿಯ ಒಂದು ಪ್ರಯತ್ನ. ತಂತ್ರ ಮಾರ್ಗವೆಂಬ ಆಧ್ಯಾತ್ಮ ಲೋಕವನ್ನು ಸಾಹಿತ್ಯ ಲೋಕದ ವಿಮರ್ಶೆಯೊಳಗೆ ನಿಕಷಕ್ಕೆ ಒಡ್ಡುವುದು.

ಆ ಮೂಲಕ ಈ ಭೇದವನ್ನು ಅಳಿಸುವುದು. ಹಾಗೆ ಮಾಡುವುದರಿಂದ ನಡೆ–ನುಡಿಯನ್ನು ಹೊಂದಾಣಿಸುವುದು. ಹಲವನ್ನು ಗೆದ್ದವರಿಗೂ ಇನ್ನೂ ಏನೋ ದೊರೆಯದ ಹಸಿವು. ಆ ಹಸಿವು ಏನೆಂದು ಇನ್ನು ತಿಳಿದಿಲ್ಲ. ಆದರೂ ಎಲ್ಲೋ ಗುರುತಿಸಲಾಗದ ಮುಸುಕಿನೊಳಗೆ ಕಾಲ ಕಳೆದಿದೆ. ಈ ಮುಸುಕು ಹರಿದು ಪರಸ್ಪರ ಮುಖ ನೋಡಿಕೊಳ್ಳುವ ಕೆಲಸ ಇದು. ಕಾರಣವಿಷ್ಟೆ ಪ್ರತಿಯೊಂದು ಜೀವಿಯ ಕೊನೆಯ ಗಂತವ್ಯ ಅದೇ. ಅದನ್ನು ಸೇರುವುದು.

ಆ ಅದು–ದೇವರಲ್ಲ. ಅದಕ್ಕೆ ಇಲ್ಲಿರುವ "ಕೇಂದ್ರ ಶಕ್ತಿ" ಎಂದೇ ಹೆಸರು. ಅದನ್ನು ಸೇರಿದವನಿಗೆ ಮತ್ತೆ ಅಲ್ಪತೆಯ ಅರಿವಿಲ್ಲ. ಸತ್ಯಕಾಮರ ಒಂದು ಮಾತಿದೆ. "ಜಗತ್ತು ನನ್ನನ್ನು ತಿಳಿದು ಏನಾಗಬೇಕು. ಜಗತ್ತು ನನಗೆ ತಿಳಿಯುವುದು ಎಷ್ಟು ದೊಡ್ಡ ಸುಖ ಗೊತ್ತಾ? ಆ ಬಳಿಕ 'ನಾನು' ಇರುವುದಿಲ್ಲ". ಆಧುನಿಕ ಯುಗದ 'ನಾನು' ಇನ್ನು ಮುಕ್ತನಾಗಬೇಕಾಗಿದೆ. ಆದರೆ ಹೇಗೆ ಗೊತ್ತಾಗದ ಗೊಂದಲಪಿದೆ. ಇಲ್ಲಿ ಅಂಥದೊಂದು ಅರ್ಥಪೂರ್ಣ ಚರ್ಚೆಯಾಗಲಿಕ್ಕಿದೆ. ಯಾಕೆಂದರೆ 'ನಾನು ನಾಸ್ತಿಕನೆ ಆಗಿರಲಿಲ್ಲ. ಆಸ್ತಿಕನೆ? ಅಷ್ಟು ದುರ್ಬಲತೆಯ ಕೆಸರೂ ನನಗೆ

ಅಂಟಿರಲಿಲ್ಲ' (ಪು. 3 ಪಂಚ'ಮ'ಗಳ ನಡುವೆ 2010) ಎಂಬ ಮಾತು ಹೊರಡಬೇಕಾದರೆ ನಾನು ಮತ್ತು ಅವನ ನಡುವಿನ ಭೇದವಳಿದ ದೃಢತೆಯ ಅರಿವು ಬೇಕು. ಅದು ಎಲ್ಲರಿಗೂ ಸಂಭವಿಸಬಹುದಾದ ಒಂದು ಸಾಧ್ಯತೆ. ಆ ದಿಶೆಯಲ್ಲಿ ತೆರೆದುಕೊಳ್ಳುವುದಕ್ಕೆ ಇದೊಂದು ವೇದಿಕೆ ಮಾತ್ರ.

ಅಧ್ಯಯನದ ಭಾಷೆ :

ಮನುಷ್ಯನಿಗೆ ಒಂದು ತಿಳುವಳಿಕೆಯಿದೆ. ಅದನ್ನು ತಿಳಿಸಲು ಒಂದು ಭಾಷಾ ಮಾಧ್ಯಮವಿದೆ. ಇದು ಮನುಷ್ಯನನ್ನು ಉಳಿದ ಚರಾಚರಗಳಿಂದ ಭಿನ್ನವಾಗಿಸಿದೆ. ಇದು ಮನುಷ್ಯನ ಶಕ್ತಿ, ಬೆಳವಣಿಗೆ ಎಂಬ ನಂಬಿಕೆ ಇದೆ. ಆದರೆ ವಾಸ್ತವದಲ್ಲಿ ಅದು ಹಾಗಿಲ್ಲ. ಮನುಷ್ಯನ ಭಾಷೆಯೇ ಅವನ ಮಿತಿ. ಆದ್ದರಿಂದಲೇ ಅವನು ಬೇರೆ ಭಾಷೆಯ ಇನ್ನೊಬ್ಬ ಮನುಷ್ಯನೊಂದಿಗೇ ಸಂವಹನಿಸಲಾರ. ಅಂತೆಯೇ ಖಗಮೃಗಗಳ ಭಾಷೆಯಂತೂ ಅವನ ಅಳವಲ್ಲ. ಈ ದೃಷ್ಟಿಯಿಂದ ಮನುಷ್ಯನಿಗೆ ಭಾಷೆಯೇ ಒಂದು ಮಿತಿ, ವಿಸ್ತಾರವಲ್ಲ. ಪ್ರಾಣಿ ಪಕ್ಷಿಗಳಿಗೆ ಈ ತೊಂದರೆಯಿಲ್ಲ. ಅವು ಪ್ರಕೃತಿಯ ಸಕಲ ಸಂಗತಿಗಳೊಂದಿಗೆ ಸ್ಪಂದಿಸಬಲ್ಲವು. ಇಲ್ಲಿಯ ನೈಸರ್ಗಿಕ ಸಹಜ ಸಂಗತಿಗಳಿಂದ ಹಿಡಿದು ಅಪಾಯವನ್ನು ಸೂಚಿಸುವ ಭೂಕಂಪ, ಪ್ರವಾಹದವರೆಗೆ ಎಲ್ಲವನ್ನೂ ತಿಳಿಯಬಲ್ಲವು. ಆದರೆ ಪ್ರಕೃತಿಯಿಂದ ಮನುಷ್ಯಮಾತ್ರ ತುಂಬ ದೂರ.

ಈ ದಿಶೆಯಲ್ಲಿ ಇಂಥ ಇನ್ನೊಂದು ಸಾಧ್ಯತೆ ಯೋಗಿ. ಅವನಿಗೆ ಭಾಷಾ ಬಂಧನವಿಲ್ಲ. ಎಲ್ಲ ಸಹಜ ಸಂಗತಿಗಳೂ ಅವನ ಅಳವು. ಅವನಿಗೆ ಪ್ರಕೃತಿ ತನ್ನ ನಾಳೆಗಳನ್ನು ತಿಳಿಸಬಲ್ಲದು. ಅಂದರೆ ಮನುಷ್ಯನ ಮುಂದೆ ಇರುವ ದೊಡ್ಡ ಸವಾಲು ಅವನು 'ಸಹಜ'ವಾಗುವುದು. ಇದು ಮತ್ತೆ ಮಗುವಾಗುವ ಯೋಗಿಯ ಸ್ಥಿತಿ.

ಈ ಯೋಗಿಯ ಸ್ಥಿತಿಗೆ ನಡೆವ ನಡೆಯಲ್ಲಿ ಅವನು ದೊಡ್ಡ ಸವಾಲು ದಾಟಬೇಕು. ಅದು ಅಪ್ರಾಕೃತಿಕದಿಂದ ಪ್ರಾಕೃತಿಕದೆಡೆಗಿನ ನಡೆ. ಆದ್ದರಿಂದಲೇ ಅವನು ಅಸಹಜದಿಂದ ಸಹಜವಾಗುವುದು. ಇಲ್ಲಿ ಎಲ್ಲರೊಂದಿಗೂ ಮಾತಾಡಬಲ್ಲ ಒಂದು ಸಂವೇದನಾ ಶಕ್ತಿ ಸಾಧ್ಯ.

ಭಾಷೆ ಆದ್ದರಿಂದ ನಮ್ಮ ಮಿತಿ. ಅದನ್ನು ಅರಿತುಕೊಳ್ಳಲು ಆಯಾ wavelength ಬೇಕು. ಉದಾಹರಣೆಗೆ ಧಾರವಾಡ ಸ್ಟೇಶನ್ ಟ್ಯೂನ್ ಮಾಡಿ ಮಂಗಳೂರು ಸ್ಟೇಶನ್ ಪಡೆಯಲಾಗುವುದಿಲ್ಲ. ಅಂತೆಯೇ ಒಂದನ್ನು ತಿಳಿದ ವೇವ್‌ಲೆಂತ್‌ನೊಂದಿಗೆ ಮಾತ್ರ ಅದರ

ಸಂವಹನ. ಒಂದು ತಿಳಿಯಲಿಲ್ಲ ಎಂದರೆ ತಿಳಿದುಕೊಳ್ಳುವ ನಮ್ಮ ಸಾಮರ್ಥ್ಯವೂ ಪರೀಕ್ಷಾರ್ಹ ತಿಳಿಯಲಾರದ್ದನ್ನು ಆರೋಪಿಸಿ ಕುಳಿತು ಬಿಟ್ಟರೆ ಅದು ಅಪೂರ್ಣ.

ಈ ದೃಷ್ಟಿಯಲ್ಲಿ ಈ ಪ್ರಬಂಧದ ಭಾಷೆ ನೇರ ಮತ್ತು ಸ್ಪಷ್ಟ. ಆಧ್ಯಾತ್ಮದ ಪರಿಭಾಷೆಗೆ ಒಂದು ಪ್ರವೇಶಿಕೆಯಿದ್ದರೆ ಎಲ್ಲವೂ ಸರಳ. ಮಾಧ್ಯಮವನ್ನು ಪರೀಕ್ಷಿಸಿಕೊಂಡರೆ ಪ್ರವೇಶಿಕೆ ಸುಲಭ. "ಹೇಳಬಾರದಯ್ಯ" ಎಂಬ ವಚನಕಾರರ ಮಾತು, 'ಕೈತೊಳೆವ ಮೊದಲು ಎಂಜಲು ಹೋಯಿತ್ತು' ಎಂಬ ಅಲ್ಲಮನ ನುಡಿ, ಎಲ್ಲವೂ ಭಾಷಾ ಪರಿಮಿತಿಯೇ. ಅದನ್ನು ಅರಿತು ನಡೆಯಬೇಕು. ಇದು ಅಧ್ಯಯನದ ಗುಣವೂ ಹೌದು. ಮಿತಿಯೂ ಹೌದು. ಆದ್ದರಿಂದ ಆಧ್ಯಾತ್ಮದ ಪರಿಭಾಷೆಯಲ್ಲಿ ಅರ್ಥೈಸಿಕೊಳ್ಳಬೇಕಾದ ಹಲವು ಸಂಗತಿಗಳನ್ನು ನಮ್ಮ ಸಾಮಾನ್ಯ ಜೀವನದ ಪರಿಭಾಷೆಯಲ್ಲಿ ಅರ್ಥೈಸಿಕೊಳ್ಳಲಾಗದ ಒಂದು ಒತ್ತಾಯವೂ ಇಲ್ಲಿ ಕಾಣಿಸಬಹುದು. ಅದು ಈ ರೀತಿಯ ಅಧ್ಯಯನದಲ್ಲಿ ಅನಿವಾರ್ಯ – ಎಂದೇ ಭಾವಿಸಲಾಗಿದೆ.

ಅಧ್ಯಯನದ ಕೊರತೆಗಳು ಮತ್ತು ಹೊಸ ಸಾಧ್ಯತೆಗಳು :

1) ತಂತ್ರವನ್ನು ಅದರ ಪರಿಪೂರ್ಣ ವಿಸ್ತಾರದಲ್ಲಿ ಅಧ್ಯಯನ ಮಾಡದೇ ಕೇವಲ ರಜನೀಶ್ ಮತ್ತು ಸತ್ಯಕಾಮರು ಹೇಳುವ ತಂತ್ರಮಾರ್ಗ ಮತ್ತು ವೈಯಕ್ತಿಕವಾಗಿ ಸತ್ಯಕಾಮರ ಜೊತೆಗೆ ನಾನು ನಡೆದ ತಂತ್ರಮಾರ್ಗದ ಅನುಭವಗಳನ್ನು ಮಾತ್ರ ಪರಿಗಣಿಸಿರುವುದು ಈ ಅಧ್ಯಯನದ ಒಂದು ಮಿತಿ.

2) ರಜನೀಶ್‌ನನ್ನು ಅವನ ಪರಿಪೂರ್ಣ ಸಾಹಿತ್ಯದ ಜೊತೆಗೆ ಅಭ್ಯಾಸ ಮಾಡದೇ ಕೇವಲ ಅವನ ತಂತ್ರದ ಕುರಿತ ಕೃತಿಗಳ ಹಿನ್ನೆಲೆಯಲ್ಲಿ ಅಭ್ಯಸಿಸಿರುವುದು ಇನ್ನೊಂದು ಕೊರತೆ. ಬಹುಶಃ ಆ ತಂತ್ರದ ಜೊತೆಗೆ ಝೆನ್, ಯೋಗ, ಉಪನಿಷತ್ತು ಹೀಗೆ ಅವನು ಮಾಡಿರುವ ಎಲ್ಲ ಕೃತಿಗಳ ಅಧ್ಯಯನಗಳಿಂದ ನಮಗೆ ಒಬ್ಬ ಹೊಸದಾದ ಮತ್ತು ಹೆಚ್ಚು ಅರ್ಥ ಆಗಬಲ್ಲ ರಜನೀಶನ ಪರಿಚಯವಾಗುವ ಸಾಧ್ಯತೆ ಇದೆ.

3) ರಜನೀಶನ ಕುರಿತು ಇತರರು ಬರೆದಿರುವ ಜೀವನ ಚರಿತ್ರೆ, ಟೀಕೆ, ಟಿಪ್ಪಣಿ ಈ ಮುಂತಾದ ವಿವರಗಳನ್ನು ಗಮನಿಸದೇ ಇರುವುದು. ಈ ಎಲ್ಲ ವಿವರಗಳನ್ನು ಅಭ್ಯಸಿಸುವುದರ ಮೂಲಕ ರಜನೀಶ್ ತಾನು ಉಪದೇಶಿಸಿದ ಪಥದಲ್ಲಿ ಶಿಷ್ಯರನ್ನು ಅಥವಾ ಹಿಂಬಾಲಕರನ್ನು ಹೇಗೆ ನಡೆಸಿದ, ಎಷ್ಟು ನಡೆಸಿದ, ಅವನ ಸಫಲತೆಗಳು, ವಿಫಲತೆಗಳು ಏನು ಎಂಬ ಕುರಿತು ಬೆಳಕು ಬೀರುವ ಸಾಧ್ಯತೆಗಳಿವೆ.

4) ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ಅಭಿನವನ ಮಂತ್ರ ವಿವರಣೆ, ಅವನು ಹೇಳುವ ಸ್ವಪ್ನ ಮಂಜರಿಯ ಸಂಗತಿ ಹಾಗೂ ಈಗಿನ ಸ್ವಪ್ನ ಶಾಸ್ತ್ರದ ಕುರಿತು ಕೇವಲ ಕೆಲವು ಹೊಳಹುಗಳನ್ನು ನೀಡಲಾಗಿದೆಯೇ ಹೊರತು ಅದರ ವಿವರಣಾತ್ಮಕ ಅಧ್ಯಯನ ಸಾಧ್ಯವಾಗಿಲ್ಲ. ಅಂಥದೊಂದು ಪ್ರಯತ್ನಕ್ಕೆ ಈ ಹೊಳಹು ಕಾರಣವಾಗಬಹುದು ಎಂಬ ದಿಕ್ಸೂಚಿ ಮಾತ್ರ ಇಲ್ಲಿ ಇದೆ. ಈ ಕುರಿತಾಗಿಯೇ ಹೊಸ ಸಂಶೋಧನೆ ರಚಿಸಲು ಅನುಕೂಲಗಳಿವೆ.

5) ರಜನೀಶ್ ಮತ್ತು ಸತ್ಯಕಾಮರನ್ನು ಆದಷ್ಟು ಅವರ ಬರಹಗಳಲ್ಲಿಯೇ ಗಮನಿಸಿದರೂ ಎಷ್ಟೋ ಬಾರಿ ಸತ್ಯಕಾಮರ ಬರಹ ಗಮನಿಸುವಾಗ ಅವರ ಜೊತೆಗಿನ ಅನುಭವಗಳು ಪ್ರವೇಶಿಸಿರಬಹುದು. ಸತ್ಯಕಾಮರನ್ನು ಓದುವ ಮತ್ತು ಬರೆಯುವ ಹೊತ್ತಿಗೆ ಆದಷ್ಟು ತ್ರಯಸ್ಥ ಭಾವ ಕಾಪಾಡಿಕೊಂಡಿದ್ದರೂ ಅಪರೂಪಕ್ಕೆ ಅವರ ಸಾನ್ನಿಧ್ಯದ ನೆನಪುಗಳು ಬಾಧಿಸಿರಲುಬಹುದು. ಆದರೆ ಅದು ಗುರುಶಾಪ, ಗುರುನಿಂದನೆ ಮುಂತಾದ ಭಯಕ್ಕೆ ಹುಟ್ಟಿಕೊಂಡ ಸಂಗತಿಗಳಲ್ಲ ಕೇವಲ ಮನುಷ್ಯ ನೆನಪಿನ ದುರ್ಬಲ ವ್ಯಾಮೋಹ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ನಾನು ಆದಷ್ಟು ಪ್ರಾಮಾಣಿಕ ಎಚ್ಚರದಿಂದ ಅವರ ಬರೆಹಗಳನ್ನು, ವ್ಯಕ್ತಿತ್ವವನ್ನು ಗಮನಿಸಿದ್ದರೂ, ಒಬ್ಬ ದೂರದ ಸಂಶೋಧಕ ಸತ್ಯಕಾಮರ ಆಧ್ಯಾತ್ಮ ಪಥದ ಕುರಿತು ಬರೆದರೆ ಹೊಸ ಸಾಧ್ಯತೆಗಳು ಕಾಣಿಸಬಹುದು ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

6) ಆಧ್ಯಾತ್ಮ ಪಥದಲ್ಲಿ ನಡೆವ ಹೆಣ್ಣಾಗಿ ಅದರ ಸಾಧ್ಯತೆಗಳನ್ನು ಹೆಚ್ಚು ಅರ್ಥವಿಸಲು ಪ್ರಯತ್ನಿಸಿ ಆ ದಿಶೆಯಲ್ಲೇ ನನ್ನ ದೃಷ್ಟಿ ಮುಳುಗಿರುವ ಸಾಧ್ಯತೆ ಇದೆ. ಗಂಡು ಆಧ್ಯಾತ್ಮದಲ್ಲಿ ನಡೆವ ಸಂಗತಿಗಳನ್ನು ನೋಡುವ ದೃಷ್ಟಿಕೋಣ ಭಿನ್ನವಿದ್ದೀತು. ಆದರೂ ತಂತ್ರಪಥ ತಲುಪುವ ಸಾಧಕರ ನಡೆ ಸಂಪೂರ್ಣವಾದಾಗ ಪುರುಷನು ಸ್ತ್ರೀಯಾಗಿಯೂ, ಸ್ತ್ರೀಯು ಪುರುಷನಾಗಿಯೂ ಮಾರ್ಪಾಟಾಗುತ್ತಾರೆ ಎಂಬುದರ ಕುರಿತು ಹೆಚ್ಚು ಅಧ್ಯಯನ ನಡೆಸಬಹುದು.

7) ಕೊನೆಯದಾಗಿ ಜೀವಬೆಳವಣಿಗೆಯ ಕುರಿತು ಈ ಸಾಧಕರು ಹೇಳುವ ನಿರಂತರ ಹಸಿವಿನ ಬಗ್ಗೆ ವಿಜ್ಞಾನವು ಕೆಲವು ಸಂಶೋಧನೆಗಳನ್ನು ನಡೆಸಿ ಅಂಥದೊಂದು ಹಸಿವಿರುವುದು ನಿಜವೇ ಎಂಬುದನ್ನು ವೈಜ್ಞಾನಿಕವಾಗಿಯೂ ಶೋಧಿಸಬಹುದಾಗಿದೆ.

ತಂತ್ರ ಒಂದು ಮಾರ್ಗವಾಗಿ ನಡೆವ ಸಾಧ್ಯತೆ. ತಂತ್ರದ ಎಲ್ಲ ಪೂರ್ವಗ್ರಹಗಳ ವಿಮರ್ಶೆ. ಜೊತೆಗೆ ಇಂದಿನ ಧ್ಯಾನ ಯೋಗದ ಹುಟ್ಟಿನ ಹಿಂದಿರುವ ಹಸಿವು. ಹಿಂದಿಗಿಂತಲೂ ಇದು ಇಂದು ಗಾಢವಾಗಿ ಬೆಳೆಯುತ್ತಿರುವ ಪ್ರಬಲ ಕಾರಣ ಅಂತೆಯೇ ಮನುಷ್ಯನ ಬೆಳವಣಿಗೆಯ ಕೊನೆ. ಈ ಎಲ್ಲ ವಿಷಯಗಳಿಗೂ ಒಂದು ಉತ್ತರ ಹುಡುಕುವ ಪ್ರಯತ್ನ ಈ ಅಧ್ಯಯನ. ದೇಹ ಕಳಚಿ ಜೀವವಿದೆ ಎಂಬ ಭಾವಕ್ಕೆ ಇಲ್ಲಿ ಆಹಾರವಿದೆ.

ಕಾಲ ಕಾಲಕ್ಕೆ ಬದಲಾಗದ ಧರ್ಮ ಮತ್ತು ಬದುಕುಗಳು ಒಂದು ಅವಶೇಷದ ಹಾಗೆ. ಅಂತಹ ಅವಶೇಷಗಳನ್ನು ನಾವು 'ಮಮ್ಮಿ'ಯ ಹಾಗೆ ಕಾಯ್ದಿಡುವುದರಿಂದ ಬದುಕಿಗೆ ಯಾವ ಪ್ರಯೋಜನವೂ ಇಲ್ಲ. ಅದಕ್ಕಿಂತ ಹಳೆಯದನ್ನು ಮಾರ್ಪಡಿಸಿ ಹೊಸದಾಗಿ ಬೆಳೆಯಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂಬ ನಂಬಿಕೆಯೇ ಮುಖ್ಯ. ಈ ದಿಶೆಯಲ್ಲಿ ಇಂತಹ ಮಾರ್ಪಾಟು, ಪ್ರಶ್ನೆ, ಪರಿಶೀಲನೆಗಳು ಆಧ್ಯಾತ್ಮ ಪಥದಲ್ಲಿ ನಡೆಯಬೇಕು. ಸಕಲ ಜೀವಿಗಳಲ್ಲಿ ತನಗಿಂತ ಬಲಿಷ್ಠವಾದುದಕ್ಕೆ ಮಾತ್ರ ಹೆದರುವ ದುರ್ಬಲತೆ ಇದೆ. ಆದರೆ ಮನುಷ್ಯನಿಗೆ ಮಾತ್ರ ತನಗಿಂತಲೂ ದುರ್ಬಲವಾದ ಇಲಿ, ಹಲ್ಲಿ, ಜಿರಳೆ, ಚೇಳಿಗೂ ಹೆದರುವ ಭಯ. ಇಂತಹ ಭಯದ ಮೂಲ ಮತ್ತು ತಾನು ಬೆಳೆಯಬಹುದಾದ ವಿಸ್ತಾರದ ಚಿಂತನೆ ವ್ಯಕ್ತಿಯಲ್ಲಿ ಹುಟ್ಟಲೇ ಬೇಕು ಮತ್ತು ಅದು ಪ್ರತೀ ಜೀವಿಯ ಜೀವ ವಿಕಾಸದ ಅನಿವಾರ್ಯ ಅಗತ್ಯ.

1. ತಂತ್ರ ಮಾರ್ಗ ಮತ್ತು ಅದರ ನಡೆ

ಆಧ್ಯಾತ್ಮದ ಒಂದು ನಡೆಯಲ್ಲಿ ನಿರಂತರ ಚಲನಶೀಲತೆಯೂ ಇದೆ. ಮನುಷ್ಯಸಹಜ ಬೆಳವಣಿಗೆ ಅದು. ಕಾಲ ಕಾಲಕ್ಕೆ ವಿಜ್ಞಾನ, ಇತರ ಸಂಗತಿಗಳು ಬದಲಾದ ಹಾಗೆ ಒಂದು ದೃಷ್ಟಿಯಿಂದ ಎಲ್ಲವೂ ನಿರಂತರ ಶೋಧಫಲ. ಆಧ್ಯಾತ್ಮವೂ ಒಂದು ಶೋಧನೆ. ಅನೇಕ ಭೌತಿಕ ವಸ್ತುಗಳ ಶೋಧನೆಯ ಹಾಗೆ ಐನ್‌ಸ್ಟೈನ್ ಜೀವಿತಾವಧಿಗೆ ಪರಮಾಣು ಕಂಡು ಹಿಡಿದ. ಈಗಿನ ಸ್ಟೀಫನ್ ಹಾಕಿನ್ಸ್ 'ಕಾಲ'ದ ಲೆಕ್ಕದಲ್ಲಿದ್ದಾನೆ. ಹಾಗೆ ಜಗತ್ತು ನಿತ್ಯ ಶೋಧ ಮತ್ತು ಪರಿವರ್ತನೆಯಲ್ಲಿದೆ. ಭೌತಿಕ ವಸ್ತುಗಳ ಶೋಧನೆಗಳೆಲ್ಲವೂ ನಮ್ಮ ಅರಿವಿಗೆ ಬರುವ ಸತ್ಯಗಳು. ಅವುಗಳಿಗೆ ಒಂದು ಪ್ರಯೋಗ ಪರಿಣಾಮ ಮಾತ್ರವೇ ಇಲ್ಲ. ಮತ್ತೆ ಅವುಗಳನ್ನು ಪ್ರಯೋಗಿಸಿ ತೋರಿಸಬಹುದಾದ ಸೌಕರ್ಯವಿದೆ. ಅಂದರೆ ಇಲ್ಲಿಯ ಪ್ರಯೋಗಕ್ಕೆ ಪ್ರಾತ್ಯಕ್ಷಿಕೆ ಇದೆ. ಈ ಪ್ರಾತ್ಯಕ್ಷಿಕೆಯೇ ಅವುಗಳನ್ನು ಒಪ್ಪಿಕೊಳ್ಳಲಿಕ್ಕೆ ಇರುವ ಆಕರ.

ಆಧ್ಯಾತ್ಮ ಒಂದು ದೃಷ್ಟಿಯಿಂದ ಆತ್ಮಶೋಧನೆ. ಎಲ್ಲ ಸಂಶೋಧನೆಗಳು ಈ ಆತ್ಮದ ಸುತ್ತ ಬಹುಶಃ ಕಾಣದ ವಸ್ತುವನ್ನು ಶೋಧಿಸುವ ಸಾಹಸ. ಆದ್ದರಿಂದಲೇ ಅದರ ನಡೆ ತುಂಬ ನಿಗೂಢ, ಮತ್ತು ಸಂಶಯಾಸ್ಪದ ಅದಕ್ಕೊಂದು ಪ್ರಾತ್ಯಕ್ಷಿಕೆಯ ಅನುಭವವಿಲ್ಲ. ಏನಿದ್ದರೂ ಅದು ಸಂಶೋಧಕನ ವೈಯಕ್ತಿಕ ಅರಿವಿಗೆ ಮಾತ್ರ ಸೀಮಿತ. ಆದ್ದರಿಂದ ಅದು ಹೆಚ್ಚು ವಿವಾದಾಸ್ಪದ ಅಷ್ಟೇ ಗೊಂದಲದ ಗೂಡು. ಆದರೆ ಜಗತ್ತಿನಲ್ಲಿ ಈ ಎರಡೂ ಶೋಧನೆ ನಿರಂತರ ನಡೆದಿದೆ. ಅದರ ಜೊತೆಜೊತೆಗೇ ಪರ್ಯಾಯವಾಗಿ ಆಧ್ಯಾತ್ಮ ಶೋಧನೆಯ ಅಂತರಂಗ ಜಗತ್ತು. ಇಲ್ಲೆಲ್ಲ ಎರಡಕ್ಕೂ ಪರಸ್ಪರ ತುಂಬ ಮಡಿವಂತಿಕೆ. ವಿಜ್ಞಾನವಿಲ್ಲದ ಆಧ್ಯಾತ್ಮ, ಆಧ್ಯಾತ್ಮವಿಲ್ಲದ ವಿಜ್ಞಾನ ಎರಡೂ ವ್ಯರ್ಥ ಎಂದಿದ್ದ ಐನ್‌ಸ್ಟೈನ್ ನಮ್ಮಲ್ಲಿ ಆಧ್ಯಾತ್ಮವನ್ನು ವೈಜ್ಞಾನಿಕವಾಗಿ ಪ್ರತಿಪಾದಿಸಿದ ತಕ್ಷಣ ಸಮಾಧಾನ ಪಟ್ಟವರೂ ಉಂಟು.

ಹೊರಗಣ ಸಂಗತಿಯ ಬಗ್ಗೆ ಖಚಿತ ವಾಕ್ ಇದೆ. ಒಳಗಣ ಸಂಗತಿಗೆ ವಿವರಣೆ ಇಲ್ಲದ ಒದ್ದಾಟವೂ ಇದೆ. ಒಂದು ದೃಷ್ಟಿಯಿಂದ ದೊಡ್ಡ ಸಂಶೋಧಕನ ದುರಂತ ಮರಣವೂ ಇದನ್ನೇ ಹೇಳುತ್ತದೆ. ಈ ದಿಶೆಯಲ್ಲಿ ವಿಜ್ಞಾನದ, ಸಾಮಾಜಿಕ ಸಂಗತಿಗಳ ಸಂಶೋಧನೆಯನ್ನು ಗಮನಿಸಿದರೆ ಅವು ನಿರಂತರ ಬದಲಾದದ್ದು ನಮಗೆ ಗೊತ್ತು. ಆದ್ದರಿಂದ ಭೌತಿಕ ಪ್ರಪಂಚದಲ್ಲಿ ನಿನ್ನಿನ ಸಂಶೋಧನೆ ಸುಳ್ಳಾಗಿದೆ. ನಾಳಿನ ಸಂಶೋಧನೆ ಹೊಸ ಅನುಮಾನ ಹುಟ್ಟಿಸಿದೆ. ಇದು ನಿರಂತರ ಬೆಳವಣಿಗೆಯಾಗಿ ನಡೆಸಿದೆ.

ಇಂಥದೇ ಒಂದು ಬೆಳವಣಿಗೆ ಆಧ್ಯಾತ್ಮದಲ್ಲೂ ಉಂಟು. ಹಾಗಾಗಿಯೇ ಆಧ್ಯಾತ್ಮಿಕ ಪರಂಪರೆಯಲ್ಲೂ ಹಲವು ಮಾರ್ಗಗಳು ಹುಟ್ಟಿದವು. ಎಲ್ಲವೂ ಹೇಳುವ ಕ್ರಮ ಮತ್ತು ಅನುಭವದ ದಾರಿಗೆ ಸಂಬಂಧಪಟ್ಟವು. ಬಹಳ ಪೂರ್ವದಲ್ಲಿ ವೈದಿಕ ಧರ್ಮದ ಉತ್ತುಂಗ ಕಾಲವಿತ್ತು. ಉಪನಿಷತ್ತು ವೇದಗಳ ಆಧಾರದಲ್ಲಿ ಅದು ನಡೆಯುತ್ತಿತ್ತು. ಆಧ್ಯಾತ್ಮಕ್ಕೆ, ಧರ್ಮಕ್ಕೆ ಅವೇ ಸಂಶೋಧನಾ ಆಕರಗಳಾಗಿ ಸಹಕರಿಸಿದವು. ಕಾಲ ಮತ್ತು ಬದುಕು ಅದನ್ನು ಅನುಸರಿಸುತ್ತಿತ್ತು.

ಪ್ರತಿಯೊಂದಕ್ಕೂ ಒಂದು ನಿಂತಭಾವ ಬಂದಾಗ ಚಲನಶೀಲತೆ ಕಾಡುತ್ತದೆ. ಅದರ ಪರಿಣಾಮವಾಗಿಯೇ ವೈದಿಕ ಧರ್ಮದಲ್ಲಿ ಒಂದು ವಾಸನೆ ಕಾಣಿಸಿತು. ಆಗ ಶೋಧನೆ ಮತ್ತೆ ಹೊಸದರ ಕಡೆಗೆ ಮುಖ ಮಾಡಿತು. ಅಂಥ ಕಾಲಘಟ್ಟದಲ್ಲಿ ಬುದ್ಧನ ಹೊಸಗಾಳಿ ಬೀಸಿತು. ಅವನ ನಡೆ, ಅವನ ಶೋಧನೆ ಆಪ್ಯಾಯಮಾನವೆನಿಸಿತು. ವೈದಿಕಧರ್ಮದ ಅನೇಕ 'ದೋಷ'ಗಳನ್ನು ಬೌದ್ಧಧರ್ಮ ಬದಲಿಸಿತು. ಅದರ ಕಾರಣಕ್ಕೆ ಬೌದ್ಧಧರ್ಮ ತಾನು ಬೇರೂರಿ ಬೆಳೆಯಿತು. ಆಧ್ಯಾತ್ಮ ಶೋಧನೆಯ ಪಥದಲ್ಲಿ ಅಲ್ಲಿಯವರೆಗೂ ಇಲ್ಲದ ಶಾಂತಿ, ಅಹಿಂಸೆ ಹೊಸಮಾರ್ಗವಾಯಿತು. ತತ್ಪರಿಣಾಮ ಮಾಂಸಾಹಾರದ ಕುರಿತು ಹೊಸಮುಖ ಕಾಣಿಸಿತು.

ಇದರ ಜೊತೆ ಜೊತೆಗೇ ಬೌದ್ಧಧರ್ಮ ಆಚರಣೆಯಲ್ಲಿಯೂ ಹಲವು ಮಾರ್ಪಾಡು ತೋರಿಸಿತು. ಯಜ್ಞಯಾಗಾದಿಗಳ ವೈದಿಕ ರೀತಿಯೂ ಇಲ್ಲಿ ಪರಿವರ್ತನೆ ಕಂಡಿತು. ಒಂದು ಅನುಯಾಯಿ ಗುಂಪು ಬೆಳೆಯಿತು. ಹೀಗೆ ಧರ್ಮ ಮತ್ತು ಆಧ್ಯಾತ್ಮದಲ್ಲೂ ಒಂದು ಸಾಮೂಹಿಕ ಎಚ್ಚರ ಕಾಣಿಸಿಕೊಂಡಿತು.

ಹೀಗೆ ಬೌದ್ಧ, ಜೈನ ಮುಂತಾದ ಹಲವು ಧರ್ಮಗಳು ಇಂಥದೇ ಫಲ. ಎಲ್ಲ ಧರ್ಮಗಳೂ ಹುಡುಕುತ್ತಿದ್ದುದು ಆತ್ಮವಿಸ್ತಾರವನ್ನು ಹಲವು ಮಾರ್ಗಗಳ ಮೂಲ ಬಿಂದು ಒಂದೇ ಅದಕ್ಕೆ ಉಪಯೋಗಿಸಿದ ದಾರಿ ಬೇರೆ ಬೇರೆಯೇ. ಒಂದು ದೃಷ್ಟಿಯಿಂದ ಸೇರಿದ ಗಂತವ್ಯ ಒಂದೇ ಬಳಸಿದ ಮಾರ್ಗಗಳು ಬೇರೆ, ಬೇರೆ. ಹಲವು ಮಂದಿ ವೈದಿಕಕ್ಕೆ ಜೋತು ಬಿದ್ದರೆ, ಇನ್ನೂ ಹಲವು ಬೌದ್ಧಕ್ಕೆ; ಇದು ತಮ್ಮ ತಮ್ಮ ಅಭಿರುಚಿಯ ನಡೆಯಾಗಿತ್ತು. ಹೋಗುವವನ ಅನುಕೂಲಕ್ಕೆ ತಕ್ಕಂತೆ ಅವನ ಪ್ರಯಾಣದ ನಿರ್ಣಯ. ಹೀಗೆ ವೈದಿಕ ಮತ್ತು ಬೌದ್ಧ ಧರ್ಮದ ಉಚ್ಛ್ರಾಯ ಸ್ಥಿತಿ. ಒಂದು ಶ್ರೇಣೀಕೃತ ವ್ಯವಸ್ಥೆಯ ಒಳಗಿನ ಕಾಲಘಟ್ಟ, ಹಲವರಿಗೆ ಹಲವು ಸಂಗತಿಗಳು ಪ್ರಿಯವಾದ ಹಾಗೆ ಎಲ್ಲರಿಗೂ ಎಲ್ಲವೂ ಅಲ್ಲ. ಕೆಲವರಿಗೆ ತುಂಬ ಉಸಿರುಗಟ್ಟಿದ

ವಾತಾವರಣ. ಇನ್ನು ಕೆಲವರಿಗೆ ಹಲವು ಭೇದದ ಭಾವ. ಒಂದು ವಾತಾವರಣದಲ್ಲಿ ಸಣ್ಣ ಮಾರ್ಪಾಡಿನ ಹಸಿವು. ಇದು ಪ್ರತೀ ಹೊಸದನ್ನು ಹುಡುಕುವ ಚೈತನ್ಯದ ಲಕ್ಷಣ.

ಇಂಥ ಕಾಲಘಟ್ಟದಲ್ಲಿ ಆಧ್ಯಾತ್ಮಕ್ಕೆ 'ಅಭಿನವ' ಪ್ರವೇಶವಾಯಿತು. ಮಾರ್ಗವೂ ಅಭಿನವವೇ. 'ಪ್ರಜ್ಞಾ ನವನವೋನ್ಮೇಷ ಶಾಲಿನೀ' ಇರಬೇಕು ಎಂದವ ಸಹಜವಾಗಿಯೇ ಅವನ ನಡೆಯೂ ಅಂಥದೇ ಒಂದು ಹೊಸರೀತಿ. ಒಂದು ದೃಷ್ಟಿಯಿಂದ ಸಾಹಿತ್ಯಕ್ಕೂ, ಆಧ್ಯಾತ್ಮಕ್ಕೂ ಅದ್ಭುತವಾದ ಸೇತುವೆ. ಅಭಿನವ ಋಷಿಯೂ ಹೌದು ರಸಋಷಿಯೂ ಹೌದು. ಹುಟ್ಟಿನಿಂದ ವೈದಿಕ ಮನೆತನದ ಹಿನ್ನೆಲೆ. ಪೂಜೆ ಯಜ್ಞ ಯಾಗಾದಿಗಳುಳ್ಳ ಋಷಿ ಪರಂಪರೆಯ ಮನೆತನ. ಅಂಥಲ್ಲಿಯೇ ಹುಟ್ಟಿದ ಅಭಿನವನಿಗೆ ತುಂಬ ದೀರ್ಘವಾದ ಓದು ಮತ್ತು ಸಾಧನೆಯಿತ್ತು. ನಿರಂತರ ಯೋಗ ಸಾಧನೆ ಮತ್ತು ಅಧ್ಯಯನಗಳ ಫಲವಾಗಿ ಅವನು ಹೊಸದಾದ. ಕಾಶ್ಮೀರದ ಕಣಿವೆಯ ಈ ಪ್ರತಿಭೆ ಏರಿದ್ದು ಹಿಮಾಲಯದ ಎತ್ತರಕ್ಕೆ. ಆಧ್ಯಾತ್ಮದಲ್ಲಿ ಹೇಗೆ ಇವನು ಹೊಸದರ ಪ್ರವರ್ತಕನೋ ಹಾಗೆಯೇ ಸಾಹಿತ್ಯದಲ್ಲೂ ಇವನ ರಸ ಸಿದ್ಧಾಂತ, ಧ್ವನಿ ಸಿದ್ಧಾಂತ ಮತ್ತು ಪ್ರತಿಭೆಯ ವ್ಯಾಖ್ಯಾನ ಆ ಕಾಲಕ್ಕೆ ತುಂಬ ಹೊಸದು. ಇಂದಿಗೂ ಸಾಹಿತ್ಯದ ವಿದ್ಯಾರ್ಥಿಗಳಿಗೆ ಅವನ ಜೊತೆಗೇ ನಡೆ. ಒಂದು ದೃಷ್ಟಿಯಿಂದ ಅಭಿನವ ಮನಸ್ಸಿನ ಮೇಲೆ ಕೆಲಸ ಮಾಡಿದವ. ಆದ್ದರಿಂದಲೇ ಅವನು ಮನಸ್ಸಿಗೆ ಸಂಬಂಧಿಸಿದ ರಸ, ಧ್ವನಿ, ಪ್ರತಿಭೆಯ ಕುರಿತೇ ಬರೆದ. ಅವನ ಈ ಸಾಹಿತ್ಯಕ ಸಂಶೋಧನೆಗೆ ಅಂತಃಶೋಧನೆಯ ಬಲವಿತ್ತು. ಒಂದು ಗಾಢ ಅಂತರಂಗ ಶೋಧನೆಯ ಅವನ ಆಧ್ಯಾತ್ಮದ ಶೋಧನೆ ಅರಿತವನಿಗೆ ಅವನ ರಸ, ಧ್ವನಿ, ಪ್ರತಿಭೆ ಸಿದ್ಧಾಂತದ ಹೊಳಹು ಅರ್ಥವಾದೀತು.

ವಾಸ್ತವಿಕ ಕನ್ನಡಿ ಅಂತರಂಗ ಶೋಧನೆ. ಪ್ರತಿಬಿಂಬ ಈ ಸಾಹಿತ್ಯಕ ಸಂಶೋಧನೆ. ವೈದಿಕ ಬೌದ್ಧ ಧರ್ಮಗಳ ಊನ ಅಭಿನವನಿಗೆ ಅನುಭವಿಸಿ ಗೊತ್ತಿತ್ತು. ಅವನು ಅದೇ ಪರಂಪರೆಯ ಕೂಸು. ಆದ್ದರಿಂದಲೇ ಅವನು ಹುಳುಕುಗಳನ್ನು ತೆಗೆವ ಕೆಲಸ ಮಾಡಿದ. ತತ್ಪರಿಣಾಮವಾಗಿಯೇ 9ನೆಯ ಶತಮಾನದಲ್ಲಿ ಅವನಿಗೆ ಹೊಸ ಮಾರ್ಗ ಕಾಣಿಸಿತು. ಅದು ವೈದಿಕ ಮತ್ತು ಬೌದ್ಧ ಧರ್ಮಕ್ಕೆ ಪೂರ್ಣ ವ್ಯತಿರಿಕ್ತವಾದ ತಂತ್ರಮಾರ್ಗ. ಆಧ್ಯಾತ್ಮಕ್ಕೆ ತುಂಬ ವೈಜ್ಞಾನಿಕ ಸ್ಪರ್ಶ ಕೊಟ್ಟ ಮೊದಲ ಪ್ರಯೋಗ. ಅವನಿಗೆ ಪ್ರತೀ ಅಂತರಂಗ ಶೋಧನೆಯ ಕಾರ್ಯ ಕಾರಣ ಹೇಳಬೇಕಿತ್ತು.

ಜೊತೆಜೊತೆಗೆ ಪ್ರಾತ್ಯಕ್ಷಿಕೆಯಿಲ್ಲದ ಆಧ್ಯಾತ್ಮ ಬೇಡವಾಗಿತ್ತು. ಉಪದೇಶವಿಲ್ಲದ [ಬುದ್ಧನಿಗೆ ಭಿನ್ನವಾದ] ಪ್ರಾಯೋಗಿಕ ಪ್ರಯತ್ನ ಸಾಬೀತು ಪಡಿಸಬೇಕು. ಹಾಗಾಗಿ ನಾನು ನಡೆದದ್ದು ಇನ್ನೊಬ್ಬನಿಗೆ ನಡೆಯಬಹುದಾದ ಸಾಧ್ಯತೆ ತೋರಿಸಿದ. ಅದಕ್ಕೆ ಅನೇಕ ತಂತ್ರ [technique]

ಗಳನ್ನು ಹೇಳಿದ. ಅದನ್ನು ಪ್ರಾಯೋಗಿಕವಾಗಿ ಆ ಕಾಲಕ್ಕೆ ಮಾಡಿಯೂ ತೋರಿದ. ಮಾತ್ರವಲ್ಲ, ತಂತ್ರಾಲೋಕ ಮತ್ತು ತಂತ್ರಸಾರ ಎಂಬ ಸುದೀರ್ಘ ಗ್ರಂಥಗಳಲ್ಲಿ ಆ ಮಾರ್ಗವನ್ನು ವಿಶದವಾಗಿ ವಿವರಿಸಿದ.

ಒಂದು ದೃಷ್ಟಿಯಿಂದ ಅವನಿಗೆ ಅಧ್ಯಾತ್ಮದಲ್ಲಿದ್ದ ವರ್ಣಾಶ್ರಮ ವಿರೋಧವೂ ಇತ್ತು. ಹಾಗೆಯೇ ಇಡೀ ಆಧ್ಯಾತ್ಮದಲ್ಲಿ ಮನೋಭೇದದ ನಿವಾರಣೆಯು ಅಗತ್ಯವಾಗಿತ್ತು. ಆದ್ದರಿಂದ ಅವನ ತಂತ್ರಮಾರ್ಗ ಮೇಲು–ಕೀಳು, ಸತ್ಯ–ಅಸತ್ಯ, ಶುದ್ಧ–ಅಶುದ್ಧ ಈ ಎಲ್ಲ ಭೇದದಾಚೆಗೆ ನಡೆವ ಹೊಸಕ್ರಮವಾಗಿ ಹುಟ್ಟಿತು. ತಂತ್ರಮಾರ್ಗದ ಒಟ್ಟು ಪಂಚಾಂಗಕ್ಕೆ ಸ್ವೀಕರಣೆ [acceptance] ಯ ಅಡಿಪಾಯ ಕೊಟ್ಟು ನಿರಾಕರಣೆಯ ಭಾವವನ್ನು ಸಂಪೂರ್ಣ ತೆಗೆದು ನಡೆವ ಹೊಸ ಶಾಸ್ತ್ರವಾಗಿ ತಂತ್ರವನ್ನು ಹೇಳಿದ.

ಸ್ವೀಕರಣೆ ಮತ್ತು ಸಮರ್ಪಣೆ ತಂತ್ರದ ಮೂಲಮಂತ್ರ. ಅಭಿನವಗುಪ್ತ ಇದರ ಹರಿಕಾರನಾಗಿ ಸೂತ್ರ ಹೇಳಿದ. ವಾಸ್ತವಿಕ ಮನುಷ್ಯನ ಆತ್ಮ ಶೋಧನೆಗೆ ಮೂಲ ಅದರ ಶಕ್ತಿಯ ಶೋಧನೆ. ಮನುಷ್ಯನ ಮನಸ್ಸು, ಇಂದ್ರಿಯ, ದೇಹ, ಆತ್ಮ ಹೀಗೆ ಒಳಗೊಂದು ಹಲವು ಸಾಧನಗಳು. ಈ ಎಲ್ಲ ಸಾಧನಗಳ ನಿಯಂತ್ರಣ ಆಧ್ಯಾತ್ಮವಾಗಿತ್ತು. ವೈದಿಕ ಧರ್ಮ ಬೌದ್ಧಧರ್ಮ ಎಲ್ಲದರಲ್ಲೂ ಇದರ ನಿಯಂತ್ರಣದ ಸೂಚನೆಯಿತ್ತು. ಅದರ ಅನುಸರಣೆಗೆ ಬೇಕಾದ ಹಲವು ಯೋಗ ಮಾರ್ಗಗಳಿದ್ದುವು. ಪ್ರಾಣಾಯಾಮ, ಆಸನ, ಮುಂತಾದ ಹಲವು ಪರಿಕರಗಳು ಆಗ ಬಳಕೆಯಲ್ಲಿದ್ದವು. ಈ ಕಾರಣದಿಂದಲೇ ಹುಟ್ಟಿದ್ದು ಬ್ರಹ್ಮಚರ್ಯದ ಪರಿಕಲ್ಪನೆ. ಒಂದನ್ನು ಶೋಧಿಸುವುದಕ್ಕೆ ಹಲವನ್ನು ನಿಗ್ರಹಿಸಿ ನಡೆವನಡೆ. ಕುದುರೆ ಕರೆದಂತೆ ಹೋಗುವ ಬದಲು ಕಡಿವಾಣಕ್ಕೆ ಬೇಕಿದ್ದಲ್ಲಿಗೆ ಎಳೆವ ನಡೆ. ಈ ನಿಗ್ರಹದ ಹಿಂದೆ ಒಂದನ್ನು ಸೇರುವ ಉದ್ದೇಶವಿತ್ತು. ಅದು ಆತ್ಮವಿಸ್ತಾರ ಅಥವಾ ಆತ್ಮಶೋಧನೆ. ಆದ್ದರಿಂದ ಮನುಷ್ಯ ಉಳಿದವುಗಳಿಗೆ ತುಂಬ ಕುರುಡನಾಗಿದ್ದ. ಆ ಕಡೆಗೆ ಮಾತ್ರ ಕಣ್ಣು ತೆರೆದಿದ್ದ. ಈ ಕಾರಣದಿಂದಲೇ ಗಂಡು–ಹೆಣ್ಣು, ಮೇಲು–ಕೀಳು, ಶುದ್ಧ–ಅಶುದ್ಧ ಭಾವ ಬೆಳೆದಿತ್ತು.

ಅಭಿನವಗುಪ್ತನಿಗೆ ಎರಡೂ ಕಡೆಗೆ ಕಣ್ಣಿತ್ತು. ಒಂದು ಮನುಷ್ಯನ ಈ ಬಾಹ್ಯ ಸಾಧನೆಗಳ ಬೆಳವಣಿಗೆ. ಎರಡನೆಯದು ಅಂತರಂಗ ಶೋಧನೆಯ ನಡೆ. ಆದ್ದರಿಂದಲೇ ಅವನಿಗೆ ಮನುಷ್ಯನ ಎಲ್ಲಾ ಶಕ್ತಿಗಳಲ್ಲೂ ವಿಶೇಷ ಆಸಕ್ತಿ. ಈ ದಿಶೆಯಲ್ಲಿಯೇ ಅವನು ಮೊದಲು ದೇಹ ವಿಸ್ತಾರವನ್ನು ನೋಡಿದ. ಈ ಭೌತಿಕ ವಿಸ್ತಾರದ ಮೂಲಕ ಆಧ್ಯಾತ್ಮಿಕ ವಿಸ್ತಾರದ ಕಡೆಗೆ ನಡೆವ ನಡೆ. ಮೊತ್ತ ಮೊದಲ ಬಾರಿಗೆ ಅಭಿನವನಿಗೆ ದೇಹದ ಎಲ್ಲ ಸಲಕರಣೆಯ ವಿಸ್ತಾರ ಕಾಣಿಸತೊಡಗಿತು. ದೇಹ,

ಮನಸ್ಸು, ಇಂದ್ರಿಯ, ಆತ್ಮ ಇವುಗಳನ್ನೇ ಬೆಳವಣಿಗೆಗೆ ಬಳಸಿದ. ಪರಿಣಾಮವಾಗಿ ಇಲ್ಲಿಂದಲೇ ಅವನ ಪ್ರಯೋಗವೂ ಆರಂಭವಾಯಿತು. ಆದ್ದರಿಂದ ತಂತ್ರ ಈ ನೆಲದಿಂದ ಆರಂಭವಾಗಿ ಆ ಆಕಾಶದ ಕಡೆಗೆ ನಡೆಯುತ್ತದೆ. ಅಣುವಿಗೆ ಅಣುವಿನಿಂದ ತೊಡಗಿ ಪರಮಾಣುವಿನ ಕಡೆಗೆ.

ದೇಹದ ಎಲ್ಲ ಸಂಗತಿಗಳು ಆ ಕಾರಣದಿಂದ ವಿಶೇಷ ಪ್ರಯೋಗಕ್ಕೆ ಒಳಗಾದವು. ಕಾಮ ದೇಹದ ಒಂದು ಶಕ್ತಿ. ಅದು ಒಂದು ದೌರ್ಬಲ್ಯವೆಂಬ ಪೂರ್ವ ತಿಳುವಳಿಕೆಯಿತ್ತು. ಅದರ ಪರಿಣಾಮವಾಗಿ ಬ್ರಹ್ಮಚರ್ಯ ವ್ರತ ಕಟ್ಟುನಿಟ್ಟಿನ ಅನಿವಾರ್ಯತೆಯಾಯಿತು. ಅಭಿನವ ಮೊದಲ ಬಾರಿಗೆ ಕಾಮದ ಶಕ್ತಿ ಸಾಧ್ಯತೆಯ ಪ್ರಯೋಗ ಮಾಡಿದ. ಇಂದ್ರಿಯ ನಿಗ್ರಹದ ಬ್ರಹ್ಮಚರ್ಯ ಬೆಳವಣಿಗೆ ತಾರದು ಅನಿಸಿತು ಅವನಿಗೆ ಇಲ್ಲಿರುವ ಮನುಷ್ಯ ಸಹಜ ಶಕ್ತಿ ಬೆಳವಣಿಗೆಗಾಗಿ ಇದೆ. ಅದು ನಿಗ್ರಹದಿಂದ ವ್ಯರ್ಥವಾಗುತ್ತದೆ. ಹಾಗೆಯೇ ಅದರಲ್ಲೇ ತಲ್ಲೀನವಾಗುವುದರಿಂದ ಪೋಲಾಗಿ ಹೋಗುತ್ತದೆ. ಇವೆರಡರ ನಡುವೆ ಒಂದು ಹೊಸಮಾರ್ಗವಿದೆ ಎಂಬುದನ್ನು ಅಭಿನವ ಶೋಧಿಸಿದ. ಅದರ ಪರಿಣಾಮವಾಗಿಯೇ ಶಕ್ತಿಗಳ 'ಪರಿವರ್ತನಾ' ಮಾರ್ಗವನ್ನು ಕಂಡು ಹುಡುಕಿದ. ಈ ದಿಶೆಯಲ್ಲಿ ಅವನು ಪ್ರತಿಯೊಂದು ಶಕ್ತಿಯನ್ನು 'ಪರಿವರ್ತಿ'ಸುವ ಸಾಧ್ಯತೆಯನ್ನು ಹೇಳಿದ. ಇದು ಒಂದು ದೃಷ್ಟಿಯಿಂದ ಅವನ ದೇಹದ ಮೇಲಿನ ವೈಜ್ಞಾನಿಕ ಪ್ರಯೋಗ ಕೂಡ ಹೌದು. ಅವನ ಎಲ್ಲ ಪ್ರಯೋಗಗಳ ಫಲವಾಗಿಯೇ ಈ ಅಪರಾಮಾರ್ಗ ಹುಟ್ಟಿಕೊಂಡಿತು.

ಶಕ್ತಿಮಾರ್ಗ: ಮನುಷ್ಯನಿಗೆ ಮನಸ್ಸು ಒಂದು ಶಕ್ತಿ. ಅದನ್ನು ಹಿಡಿತದಲ್ಲಿಟ್ಟುಕೊಂಡರೆ ಅದು ಒಂದು ರೀತಿಯ ದಿಗ್ಬಂಧನ. ಮನಸ್ಸಿಗೆ ಇರುವ ಎಲ್ಲ ಭಾವನೆಗಳೂ ಆಗ ಒಂದು ಅತಿರೇಕವಾಗಿ ನಮ್ಮೊಂದಿಗೆ ಇರುತ್ತದೆ. ಸುಖ, ದುಃಖ, ಇಷ್ಟ, ಅನಿಷ್ಟ, ಮತ್ತು ಅದರ ಅನೇಕ ಅನಿಯಂತ್ರಿತ ಚೇಷ್ಟೆ ಎಲ್ಲವೂ ಅಂದರೆ ಮನಸ್ಸು ತುಂಬ ವ್ಯಾಪಕ ಸಾಧ್ಯತೆಯುಳ್ಳ ಒಂದು ಸಾಧನ. ಆದರೆ ನಮಗೆ ಅದು ನಮ್ಮ ಸಾಧನವಾಗಿ ಗೊತ್ತಿಲ್ಲ. ವಾಸ್ತವಿಕ ಇಂಥದೊಂದು ಸಾಧ್ಯವಾಗಬೇಕು. ಆಗ ಮನಸ್ಸಿಗೆ ಅತ್ಯಂತ ವಿಶಾಲ ಸಾಧ್ಯತೆಯ ಉಪಯೋಗ ಪಡೆಯಬಹುದು ಎಂಬ ತಿಳುವಳಿಕೆ ಅಭಿನವನಿಗೆ ಇತ್ತು.

ಕಾಮ : ದೇಹ ಅಂದ ತಕ್ಷಣವೇ ನೆನಪಾಗುವ ಶಕ್ತಿ ಕಾಮ. ಕಾಮ ಒಂದು ಶಕ್ತಿಯೇ ಎಂದು ಹಲವರು ಮೂಗು ಮುರಿಯಲಿಕ್ಕೂ ಸಾಕು. ಬಹಳ ಜನರಿಗೆ ಕಾಮ ಒಂದು ಬಯಕೆ ಎಂಬ ಅರ್ಥದಲ್ಲೇ ಪರಿಚಿತ. ಇತಿಮಿತಿಯಿಲ್ಲದ ಬಯಕೆ ಎಂಬ ರೀತಿಯಲ್ಲಿಯೇ ಅದನ್ನು ಗ್ರಹಿಸುವುದು ಹೆಚ್ಚು. ಅಭಿನವ ತನ್ನ 29ನೆಯ ಅಧ್ಯಾಯ ತಂತ್ರಾಲೋಕದಲ್ಲಿ ತುಂಬ ದೀರ್ಘವಾಗಿ ಕಾಮ ಎಂಬ ಶಕ್ತಿಯ ವಿಸ್ತಾರದ ಕುರಿತು ವಿವರಿಸಿದ್ದಾನೆ.

ಕಾಮವನ್ನು ದೇಹಶಕ್ತಿಯಾಗಿ ಕಾಣುವ ಮೊದಲು ಅನೇಕ ದೈಹಿಕ ಸಾಧನೆಗಳನ್ನು ಅದರ ಪೂರ್ವ ಸೋಪಾನವಾಗಿ ಅವನು ವಿವರಿಸಿದ್ದಾನೆ. ವ್ಯಕ್ತಿಯೊಬ್ಬ/ಳು ನಿರಂತರವಾಗಿ ಆಸನಶುದ್ಧಿ, ದೇಹಶುದ್ಧಿ, ಶ್ರವಣಶುದ್ಧಿ, ವಾಕ್‌ಶುದ್ಧಿಗಳನ್ನು ಹೇಗೆ ಮಾಡಬಹುದು ಎಂಬುದಕ್ಕೆ ಇರುವ ಎಲ್ಲ ವಿವರಗಳನ್ನು ನೀಡಿದ್ದಾನೆ. ಇವೆಲ್ಲದರ ಸಂಪೂರ್ಣ ಸಿದ್ಧತೆ ಮುಗಿದ ಬಳಿಕವೇ ಅವನು ಒಂದು ದೀರ್ಘ ವಿವರಣೆಯಲ್ಲಿ 'ಲೈಂಗಿಕ ಸಂಗಾತಿ'ಯೊಂದಿಗಿನ ಆಚರಣೆ ಎಂಬ ವಿವರಣೆಯನ್ನು ಹೇಳುತ್ತಾನೆ. ಆ ಲೈಂಗಿಕ ಸಂಗಾತಿ ಖಂಡಿತಕ್ಕೂ ಮದುವೆಯಾದ ಹೆಂಡತಿಯಲ್ಲ ಅಥವಾ ಕನಿಷ್ಠ ಅಂಥ ಕಮಿಟ್‌ಮೆಂಟ್ ಇರುವ ಹೆಣ್ಣಲ್ಲ ಎಂಬ ವಿವರದೊಂದಿಗೆ ಬಹಳ ವಿಶೇಷವಾದ ಆಚರಣೆಗಳನ್ನು ವಿವರಿಸುತ್ತಾನೆ. ಅವಳ ಜೊತೆಗೆ ಹೇಗೆ ಇರಬೇಕು. ಹೇಗೆ ವರ್ತಿಸಿದರೆ ಏನು ಪರಿಣಾಮ. ಯಾವ ಹೊತ್ತಿಗೆ ಯಾವ ನಡೆ ಎಂಬ ಸೋಪಾನ ಬದ್ಧವಾದ ವಿವರಣೆಯೊಂದಿಗೆ ಲೈಂಗಿಕ ಸಂಗಾತಿಯೊಂದಿಗೆ 'ಸಂಭೋಗ ಸೂಚನೆಯನ್ನು ನೀಡಿ, ಅಲ್ಲಿಯವರೆಗಿನ ಎಲ್ಲ ಸಂಗತಿಗಳನ್ನು ಮನವರಿಕೆಯಾಗುವಂತೆ ಹೇಳಿದ ಅಭಿನವ ಮುಂದೆ 'ಸಂಭೋಗ'ದ ವಿವರಕ್ಕೆ 'ಅದನ್ನು ವಿವರಿಸಲಾಗದು' ಎಂಬಲ್ಲಿಗೆ ಮುಗಿಸುತ್ತಾನೆ.

ಅವನ ಟೀಕಾಕಾರರು ಕೂಡ ಆ ನೆಲೆಯಲ್ಲಿಯೇ ಅದನ್ನು ನಿಲ್ಲಿಸುತ್ತಾರೆ. ತುಂಬ ಸ್ಪಷ್ಟವಾಗಿ ಅಭಿನವ ಹೇಳುವ ಸಂಗತಿ ಇಷ್ಟು. ಆ ಹೆಣ್ಣಿಗೆ ಸಾಂಸಾರಿಕ ಬಂಧನ ಇರಬಾರದು. ಈ ಮಿಲನಕ್ಕೆ ದೈಹಿಕ ಸುಖದ ಲೇಪವಿರಬಾರದು. ಅದು ಮಕ್ಕಳನ್ನು ಮಾಡುವ ಉದ್ದೇಶ ಇಲ್ಲದ್ದು. ಒಂದೊಮ್ಮೆ ಈ ಮೂರು ಭಾವವುಳ್ಳ ಮಿಲನವಾದರೆ ಅದು ದೈಹಿಕ ಮಿಲನ. ಈ ಮಿಲನದಲ್ಲಿ ದೇಹದಾಚೆಗೆ ಹೋಗುವ ಮುಖ್ಯ ಉದ್ದೇಶವೇ ಸಫಲವಾಗಬೇಕು. ಹಾಗೆಯೇ ಇನ್ನೊಂದು ವಿಶೇಷ ವಿವರಣೆಯಲ್ಲಿ ಅಭಿನವ ಇಂಥ ಸಂಗಾತಿಯ ಆಯ್ಕೆಯನ್ನು ಕೆಳವರ್ಗದ ಸ್ತ್ರೀಯರ ಜೊತೆಗೇ ನಡೆಸಬೇಕು ಎಂಬ ನಿರ್ಬಂಧ ಬಳಸುತ್ತಾನೆ.

ಅದರ ಹಿಂದಿರುವ ಅವನ ಕಾರಣಗಳು ವಿವರಣೆಯಲ್ಲಿಲ್ಲವಾದರೂ ನಾವು ಅದು ಆಕಾಲದ ವೈದಿಕ ಬೌದ್ಧಧರ್ಮದ ಮಡಿವಂತಿಕೆಗೆ ವಿರೋಧವಾಗಿ ಆಧ್ಯಾತ್ಮದಲ್ಲಿ ಅಭಿನವ ಹುಟ್ಟಿಸಿದ ಹೊಸದೊಂದು ಪ್ರವೇಶಿಕೆ ಎಂದು ಭಾವಿಸಬಹುದು. ಆದರೆ ಅದರ ಕಾರಣ ಕೇವಲ ಇಂಥ ಒಂದು ಸಾಮಾಜಿಕ ಹಿನ್ನೆಲೆ ಮಾತ್ರವಲ್ಲ. ಅದು ಒಂದು ದೃಷ್ಟಿಯಿಂದ ಕಾಮ ಎಂಬ ಶಕ್ತಿಗೆ ಸಂಬಂಧಪಟ್ಟದ್ದು. ವಾಸ್ತವಿಕ ಮಡಿವಂತ ಮನೆಯ exposure ಇಲ್ಲದ ಹೆಂಗಸರಿಗಿಂತಲೂ ಇತರ ಜಾತಿಯ exposure ಇರುವ (ಕಾಡುಮೇಡು ಅಲೆವ ಆ ಕಾಲದ ಹೆಂಗಸರ ದೃಷ್ಟಿಯಿಂದ) ತುಂಬ ಶಕ್ತಿವಂತ ಹೆಂಗಸರ ಆಯ್ಕೆ ಇದ್ದಂತೆ ತೋರುತ್ತದೆ.

ವಾಸ್ತವಿಕ ತಂತ್ರ ತುಂಬ ಧೀರರ ದಾರಿ ಆದ್ದರಿಂದ ದೈಹಿಕ ಸಾಮರ್ಥ್ಯ ಮಾನಸಿಕ ಸಾಮರ್ಥ್ಯದಷ್ಟೇ ಪ್ರಮುಖವಾದ ಅಂಶ. ಇಂಥ ಸ್ತ್ರೀಯೊಂದಿಗಿನ ಅನೇಕ ಶಕ್ತಿ ಸಂಚಲನದಲ್ಲಿ ಒಂದು ಪರಿವರ್ತನೆಯನ್ನು ಅಭಿನವ ಹೇಳುತ್ತಾನೆ. ಅವನ ಪ್ರಕಾರ ಪ್ರಕೃತಿಯ ಪರಿಪೂರ್ಣ ಶಕ್ತಿ ಸ್ತ್ರೀರೂಪದಲ್ಲಿದೆ. ಅವಳ ಮುಖಾಂತರ ಪುರುಷ ಆ ಶಕ್ತಿಯನ್ನು ಪಡೆದು ಬೆಳೆವವನು. ಅಂದರೆ ಇಲ್ಲಿರುವ ದುರ್ಬಲನನ್ನು ಸ್ತ್ರೀ ಮಾರ್ಪಾಟು ಮಾಡಿ ಆ ಕಡೆಗೆ ದಾಟಿಸುತ್ತಾಳೆ. ಅವಳಿಗೆ ಆಗಬೇಕಾದದ್ದೇನೂ ಇಲ್ಲ. ಅವಳು ತನ್ನಷ್ಟಕ್ಕೇ ಪರಿಪೂರ್ಣ. ಪರಿಪೂರ್ಣತೆಯ ಕಡೆಗೆ ನಡೆವವನಿಗೆ ಒಂದು ಮಾಧ್ಯಮ ಮಾತ್ರ ಸ್ತ್ರೀ. ಹಾಗಾಗಿಯೇ ಇಂಥ ಒಂದು ಆರಂಭಿಕ ದೈಹಿಕ ದೋಷದಂಥ ಕಾಮ ಪರಿವರ್ತನೆ ಆದರೆ ಮುಂದೆ ಪುರುಷನಿಗೆ ದೇಹದ ಅನೇಕ ಸಾಧ್ಯತೆಗಳ ಕಡೆ ನಡೆಯಲು ಅನುಕೂಲವಾಗುತ್ತದೆ.

ಶಕ್ತಿ ಸಾಧನೆ, ಸಿದ್ಧಿ : ಹೀಗೆ ಪುರುಷ ಮೊದಲು ಈ ಬ್ರಹ್ಮಚರ್ಯ ಪರಿವರ್ತನೆಯನ್ನು ಸಾಧ್ಯವಾಗಿಸಿಕೊಳ್ಳುತ್ತಾನೆ. ಆ ಪರಿವರ್ತನೆಯಲ್ಲಿ ಅವನಿಗೆ ಮುಂದೆ ದೇಹ ಶುದ್ಧಿಯ ಒಂದಂಶ ಕೈವಶವಾದ ಹಾಗೆ. ಇದಾದ ಬಳಿಕ ಅವನು ಮಂತ್ರ ಮುಖೇನ ನಾದಶುದ್ಧಿ ಅಥವಾ ವಾಕ್‌ಶುದ್ಧಿಯ ಕಡೆಗೆ ನಡೆಯುತ್ತಾನೆ. ಇಲ್ಲಿಯೂ ಅದೇ ರೀತಿಯ ಮಂತ್ರ ಪಠಣಕ್ಕೆ ಅನೇಕ ವಿಧಿ ವಿಧಾನಗಳಿವೆ. ಅದನ್ನು ಹೇಳಬೇಕಾದ ಸಮಯ, ಸ್ಥಳ ಮತ್ತು ಉಚ್ಚಾರ ನಿರ್ಣಯಗಳಿವೆ. ಸ್ನಾನದ ಆದ್ಯತೆ, ಆ ಬಳಿಕ ಕುಳಿತುಕೊಳ್ಳುವ ಸ್ಥಳದ ಶೌಚ್ಯ ಇವೆಲ್ಲ ಆಗ ಅಗತ್ಯ ಪರಿಕರಗಳು.

ಇಂಥ ಪರಿಕರದಲ್ಲಿ ಮಂತ್ರ ನಿಧಾನಕ್ಕೆ ಪಠಣವಾಗಿ ಆರಂಭವಾದದ್ದು ಮುಂದೆ ಸಿದ್ಧಿಯಾಗಿ ಪರಿವರ್ತನೆಯಾಗುವವರೆಗೆ ಅದರ ಸಾಧ್ಯತೆ. ಮೊದಮೊದಲಿಗೆ ಅದು ಕೇವಲ ನುಡಿಯ ಅನುಕರಣ. ಬಳಿಕ ಅದು ನುಡಿದದ್ದು ಕಾಣುವ ದರ್ಶನ. ಮೊದಲು ಮಂತ್ರ ಒಂದು ಪ್ರಾರ್ಥನೆ. ಆ ಬಳಿಕ ಮಂತ್ರವೇ ಆದೇಶ. ಇದಕ್ಕೆ ತುಂಬ ಸೂಕ್ತವಾದ ಧ್ವನಿ, ಅದರ ಹುಟ್ಟು ಮತ್ತು ವಿವರಣೆಯನ್ನು ಅಭಿನವ ನೀಡಿದ್ದಾನೆ. ಭರ್ತೃಹರಿಯ ವಾಕ್ಯಪದೀಯದಂತೆ ಅಭಿನವನು ನುಡಿಯ ಸೃಷ್ಟಿ ಮತ್ತು ಅದರ ಪೂರ್ವ ರೂಪಗಳನ್ನು ವಿವರಿಸಿದ್ದಾನೆ. ಅದೇ ಸಂದರ್ಭದಲ್ಲಿ ಅವನ ವಿವರಣೆ ಪರಾ, ಪಶ್ಯಂತಿ, ಮಧ್ಯಮಾ, ವಾಕ್ ಎಂಬ ಧ್ವನಿಯ ನಾಲ್ಕು ರೂಪವನ್ನು ವಿಮರ್ಶಿಸುತ್ತದೆ. ಇದನ್ನೇ ಅವನು ಮುಂದೆ ಧ್ವನಿ ಸಿದ್ಧಾಂತದಲ್ಲೂ ತುಂಬ ಸುಂದರವಾಗಿ ವಿವರಿಸಿದ.

ವಾಸ್ತವಿಕ ಮೊದ ಮೊದಲು ನಟ ರಾಮನ ಮಾತನ್ನು ಉರು ಹೊಡೆಯುತ್ತಾನೆ. ನಿಧಾನಕ್ಕೆ ಪುಸ್ತಕ ಆಚೆಗಿಟ್ಟು ಆ ಮಾತನ್ನು ನೆನಪಿನ ಸಹಾಯದಿಂದ ಪುನರುಚ್ಚರಿಸುತ್ತಾನೆ.

ಕಾಲಕ್ರಮೇಣ ಅದಕ್ಕೆ ಇದು ರಾಮನ ಮಾತು ಎಂಬ ಸ್ಪರ್ಶ ಕೊಡುತ್ತಾನೆ. ನಾಟಕದ ಅಭ್ಯಾಸದ ದಿನಗಳ ಈ ಪ್ರಸಂಗ ಒಂದು ದಿನ ಅಭಿನಯವಾದಾಗ ಅವನು ರಾಮನೇ ಆಗಿ ಮಾತಾಡುತ್ತಾನೆ. ಆಗ ಅದು ರಾಮನ ಪರಿಸರ, ಮುಂತಾದ ಪರಿಕರಗಳಿಂದ ವೇದಿಕೆಯ ಆವರಣದಲ್ಲಿ ಅವರ ವೈಯಕ್ತಿಕ ಧ್ವನಿಯನ್ನು ಮೀರಿ ರಾಮನದೇ ಧ್ವನಿಯಾಗುತ್ತದೆ. ಹೀಗೆ ತುಂಬ ಸುಂದರವಾದ ವಿವರಣೆಯನ್ನು ನೀಡುತ್ತಾನೆ. ವಾಸ್ತವಿಕ ಮಂತ್ರದ ಆರಂಭ, ಬೆಳವಣಿಗೆ ಮತ್ತು ಪರಿಣಾಮಕ್ಕೂ ಹೀಗೆ ನಾದ ಮತ್ತು ಭಾವದ ಬೆಸುಗೆಯನ್ನು ಹೇಳುತ್ತಾನೆ. ಈ ದಿಶೆಯಲ್ಲಿ ಮಂತ್ರ ಸಿದ್ಧಿಯಾದವನ ಮಾತಿಗೆ ಶಾಪ ಮತ್ತು ವರದ ಬಲ ಬರುತ್ತದೆ. ಕಾರಣ ಅದು ಅವನ ಶಕ್ತಿಯಾಗಿ ಪರಿವರ್ತಿತವಾಗುತ್ತದೆ.

ಮದ್ಯ ಮತ್ತು ಮಾಂಸ : ತನ್ನ ಎಲ್ಲ ಆಚರಣೆಗಳಲ್ಲೂ ನಿರಂತರವಾಗಿ ಅಭಿನವ ಮದ್ಯ ಮತ್ತು ಮಾಂಸವಿಲ್ಲದೆ ಯಾವ ಯಜ್ಞವೂ ಪೂರ್ಣವಾಗದ ಒಂದು ನಿಯಮವನ್ನು ನಿರ್ಬಂಧಿಸುತ್ತಾನೆ. ಮದ್ಯ ಬಿಡಲೇ ಬಾರದ ಅನಿವಾರ್ಯ ಅಂಗ. ಅದರ ಜೊತೆಗೆ Nector drink 'ಅಮೃತಪೇಯ' ಎಂಬ ಒಂದು ಉಲ್ಲೇಖ. ಈ ಪೇಯದಲ್ಲಿ ಪುರುಷ ವೀರ್ಯ, ಸ್ತ್ರೀಯ ಯೋನಿದ್ರವವನ್ನು ಸೇರಿಸಿ ಶಿಷ್ಯನಿಗೆ ಆಚರಣೆ ಮುಗಿದ ಬಳಿಕ ಕುಡಿಯ ಹೇಳುವ ಕ್ರಮದ ಉಲ್ಲೇಖವಿದೆ. ಇಲ್ಲಿ ಒಂದು ಕ್ಷಣಮಾತ್ರಕ್ಕೂ ಅಸಹ್ಯ ಭಾವನೆ ಬಂದರೆ ಶಿಷ್ಯನ ಇಷ್ಟು ದಿನದ ಬೆಳವಣಿಗೆ ಮುಗಿಯಿತೆಂಬ ಎಚ್ಚರಿಕೆಯನ್ನು ನೀಡುತ್ತಾನೆ. ಇದರ ಜೊತೆಗೆ ಕೆಲವು ಧಾನ್ಯ, ಮತ್ತು ಹಳಸಿದ ಹಣ್ಣಿನ ಪೇಯವೆಂಬ ಮದ್ಯ ಮುಂತಾದ ಪೇಯದ ವಿವರಣೆಯೂ ಇದೆ. ಇಲ್ಲಿ ಕೆಲವು ಮಾಂಸಾಹಾರದ ಉಲ್ಲೇಖವೂ ಇದೆ. ಮೀನು ಮುಂತಾದ ಮಾಂಸ ವಿವರಣೆಯನ್ನು ಅಭಿನವ ನೀಡುತ್ತಾನೆ. ಈ ಎಲ್ಲವನ್ನೂ ಯಾವ ಮಲಿನ ಭಾವವಿಲ್ಲದೆ ಸೇವಿಸಬೇಕೆಂಬ ಕಡ್ಡಾಯವಿದೆ. ಇದರಿಂದ ಅವನ ಮಾನಸಿಕ ಭೇದಾಭೇದಗಳನ್ನು ಅಳಿಸಿ ಅವನ ಮನಸ್ಥಿತಿಯಲ್ಲಿ ಒಂದು ಪರಿಶುದ್ಧ ಮಾರ್ಪಾಟನ್ನು ತರುವ ಉದ್ದೇಶ ಕಾಣಿಸುತ್ತದೆ. ಹಾಗೆಯೇ ಯಾವ ಆಹಾರವೂ ಅತಿಯಾಗದೆ, ಹಿತವಾಗಿ ಔಷಧೀಯವಾಗಿ ಬಳಸುವ ಸೂಚನೆ ಇದೆ. ಕಾಮ ಹೇಗೆ ಒಂದು ಮೋಹ ಆಗಬಾರದೋ ಹಾಗೆ ಇಲ್ಲಿ ಆಹಾರವೂ ಕೂಡ. ಒಂದು ದೃಷ್ಟಿಯಿಂದ 'ಉಂಡುಪವಾಸಿ, ಬಳಸಿ ಬ್ರಹ್ಮಚಾರಿ'ಯ ನಡೆ. ಮುಟ್ಟದೆ ಶುದ್ಧ ಇರುವುದು ದೊಡ್ಡಿತೆಯಲ್ಲ. ಮುಟ್ಟಿಯೂ ಮಲಿನವಾಗದ ನೈರ್ಮಲ್ಯ.

ಮುದ್ರೆ : ವಾಸ್ತವಿಕ ಈ ಆಹಾರ ಮತ್ತು ಕಾಮಕ್ಕೆ ಅನುಗುಣವಾದ ಮುದ್ರೆಯ ವಿವರವಿದೆ. ಈ ಆಸನದಲ್ಲಿ ಕೂಡಬೇಕು, ಹೀಗೆ ಏಳಬೇಕು, ಹೀಗೆ ನಮಿಸಬೇಕು. ಜೊತೆ ಜೊತೆಗೆ ದೇಹದ ಒಂದೊಂದು ಅವಯವವನ್ನು ಬಳಸುವ ರೀತಿ ಎಲ್ಲದರ ವಿವರಣೆಯೂ ಇದೆ.

ಇದು ಒಂದು ದೃಷ್ಟಿಯಿಂದ ಆಸನ ಸಿದ್ಧಿಯ ವಿವರಣೆ. ಅಂದರೆ ತನ್ನನ್ನು ತಾನು ದೈಹಿಕವಾಗಿ ನಿಯಮಿಸಿಕೊಳ್ಳುವ ಕ್ರಮ. ಇಲ್ಲಿ ಎಲ್ಲವೂ ಒಂದು ಮಂಡಲ, ಗುರು ಮುಂತಾದವರಿಂದ ಶಾಸ್ತ್ರೋಕ್ತ ನಡೆವ ವಿವರಣೆಯಿದೆ.

ಮಂಡಲಕ್ಕೆ ಯಾರು ಪ್ರವೇಶಾರ್ಹರು, ಯಾರು ಅಲ್ಲ ಈ ಸೂಚನೆಗಳೂ ಇವೆ. ಹೀಗೆ ತಂತ್ರವು ಈ ಐದು 'ಮ' (ಪಂಚ'ಮ'ಗಳಲ್ಲಿ) ಗಳ ವಿವರಣೆಯಲ್ಲಿ ಎಲ್ಲವನ್ನೂ ಅಭ್ಯಾಸರೀತಿಗನುಗುಣವಾಗಿ ತಿಳಿಸಲಾಗಿದೆ.

ಅಭಿನವ ಇವುಗಳನ್ನು ಮಾಡುವುದರಿಂದ ಮನುಷ್ಯ ಪಡೆಯುವ ಬೆಳವಣಿಗೆ ಮತ್ತು ಶಕ್ತಿ ಸಾಧ್ಯತೆಯನ್ನು ಜೊತೆ ಜೊತೆಗೇ ವಿವರಿಸಿದ್ದಾನೆ. ವಾಕ್‌ಸಿದ್ಧಿಯ ಮಂತ್ರ ಪರಿಣಾಮದಂತೆ, ಇಲ್ಲಿ ನಡೆಯುವ ಅನೇಕ ಪ್ರಯೋಗಗಳಿಂದ ಮನೋಸಿದ್ಧಿ, ದೇಹಸಿದ್ಧಿ, ಶಕ್ತಿಸಿದ್ಧಿಗಳ ವಿವರವನ್ನು ನೀಡುತ್ತಾನೆ. ವಾಸ್ತವಿಕ ಮನೋಸಿದ್ಧಿಗೆ ಬಹಳ ಆಂತಿಕಪರಿಣಾಮ ಮನೋವೇಗ. ಬೆಳಕಿಗಿಂತಲೂ ಮನೋವೇಗ ಹೆಚ್ಚೆಂಬುದು ಗೊತ್ತಿದೆ. ಇಲ್ಲಿ ನಾವು ಕುಳಿತಲ್ಲೇ ನಮಗೆ ಬೇಕಾದವರನ್ನು ಅದು ನೆನೆದು ಬರುತ್ತದೆ. ಆದರೆ ಅದನ್ನು ಅನುಭವವಾಗಿ ನಮಗೆ ಅನುಭವಿಸಲು ತಿಳಿದಿಲ್ಲ. ತಂತ್ರಮಾರ್ಗದ ಮನೋಸಿದ್ದಿಗೆ ಆ ಒಂದು ಶಕ್ತಿಯೂ ಸಾಧ್ಯವಾಗುತ್ತದೆ. ನಾನು ಬೇಕಾದಲ್ಲಿ ಮನಸ್ಸನ್ನು ಕಳುಹಿಸಿ ಅದನ್ನು ಅನುಭವಿಸಿ, ಮುಟ್ಟಿ ಬರುವ ಪರಿಣಾಮ. ಇಂಥ ಮನೋವೇಗದ ಸಿದ್ಧಿಯು ಒಂದು ಪರಿಣಾಮ. ಇದಕ್ಕೆ ಪೂರಕವಾಗಿ ದೇಹಸಿದ್ಧಿಯು ಮಾಡಿಕೊಳ್ಳುವ ಸಾಧ್ಯತೆಯಿದೆ. ವ್ಯಕ್ತಿ ಮನೋಭಿಲಾಷೆಯ ಪ್ರಕಾರ ತಾನು ಹೋಗಬೇಕೆನ್ನುವಲ್ಲಿ ಆಕಾಶಗಾಮಿಯಾಗಿ ವಿಹರಿಸಿಯೂ ಬರಬಲ್ಲ. ಅಂದರೆ ವೈಯಕ್ತಿಕವಾಗಿ ದೈಹಿಕವಾಗಿ (ಸೂಕ್ಷ್ಮಶರೀರ) ಪಯಣ ಇದರ ಫಲ. ಆಗ ಮನುಷ್ಯನಿಗೆ ಆಕಾಶಗಾಮಿ ನಡೆ ಇರುತ್ತದೆ. ಇದೆರಡೂ ಸಾಧ್ಯವಾದವನಿಗೆ ಅನೇಕ ಶಕ್ತಿಗಳು ಕೈವಶವಾಗುತ್ತವೆ. ಅಭಿನವನ ಪ್ರಕಾರ ಒಂದೊಂದು ಶಕ್ತಿಯನ್ನು ಮೊದಲು ನೆನೆಯಬೇಕು. ಒಂದೊಂದು ಶಕ್ತಿಗೆ ನಮ್ಮ ದೇಹದಲ್ಲಿ ಒಂದೊಂದು ಸ್ಥಾನ ನೀಡಬೇಕು. ಅದರ ಪೂರ್ವದಲ್ಲಿ ಈ ದೇಹ ನಾನಲ್ಲ ಎಂಬ ಪೂರ್ಣ ಎಚ್ಚರದ ಸ್ಥಿತಿ ತಲುಪಬೇಕು. ಆ ಬಳಿಕ ಆ ಎಲ್ಲ ಶಕ್ತಿಗಳನ್ನು ನಿರಂತರ ಮಂತ್ರಮುಖೇನ ಕರೆಯುವುದು. ಕರೆದ ಶಕ್ತಿಗಳನ್ನು ಕಣ್ಣಮುಂದೆ ನಿರಂತರ ಧ್ಯಾನಿಸುವುದು. ಕಾಲಾನುಕ್ರಮದಲ್ಲಿ

ಆಶಕ್ತಿಗಳು ಜೀವಂತ ಅಭಿವ್ಯಕ್ತಿಯಾಗಿ ದೇಹದಲ್ಲಿ ಅನುಭವಕ್ಕೆ ಬರುವುದನ್ನು ತುಂಬ ವೈಜ್ಞಾನಿಕವಾಗಿ ಅಭಿನವ ವಿವರಿಸುತ್ತಾನೆ. ಹಾಗೆ ನಡೆದಂತೆ ಮುಂದೆ ತಾನು ಮತ್ತು ಶಕ್ತಿ ಅವಿನಾಭಾವ ತಾಳುವುದನ್ನು ಹೇಳುತ್ತಾನೆ. ನಟನೆಯ ರಸಸಿದ್ದಾಂತಕ್ಕೆ ಅಭಿನವ ಇದನ್ನೇ ರೂಪಕವಾಗಿ ವಿವರಿಸುತ್ತಾನೆ. ವ್ಯಕ್ತಿಯೇ ನಿಧಾನ ಪಾತ್ರವಾಗಿ ಬಿಡುವ ಕ್ರಮ ಅದು. ಅದಕ್ಕೆ ರಸದ ಜೊತೆಗಿನ ತಾದಾತ್ಮ್ಯ. ಹೀಗೆ ರಸ ಮತ್ತು ಅಭಿನಯಗಳಿಂದ ತಾನೇ ರಾಮನಾಗುವ ವಿವರಣೆ. ಬಹಳ ವ್ಯಾಕರಣ ರೂಪಾತ್ಮಕ ವಿವರಣೆ ಅಭಿನವನದು.

ಇಂಥ ಎಲ್ಲ ಶಕ್ತಿಗಳೂ ಕೈವಶವಾದಾಗ ಮನುಷ್ಯ ವ್ಯಕ್ತಿತ್ವ ಮಾರ್ಪಾಟಾಗುತ್ತದೆ. ಇದು ವ್ಯಕ್ತಿಯ ವ್ಯಕ್ತಿತ್ವ ವಿಕಸನ. ಅವನು ತನ್ನ ಅಣುತ್ವವನ್ನು ಪರಮಾಣುತ್ವದ ಕಡೆಗೆ ವಿಸ್ತರಿಸಿಕೊಳ್ಳುವ ನಡೆ. ಈ ನಡೆಯಲ್ಲಿ ಅವನ ಒಳಗೊಂದು ಪರಿಪೂರ್ಣ ಜಾಗೃತಾವಸ್ಥೆ ಸಾಧ್ಯವಾಗುತ್ತದೆ. ಆ ಜಾಗೃತಿ ಇಷ್ಟೂ ಶಕ್ತಿಗಳ ಒಟ್ಟು ಅನಾವರಣ. ಅದನ್ನೇ ಅವನು ಕುಂಡಲಿನೀ ಶಕ್ತಿ ಎಂದು ಕರೆದ. ಆ ಕುಂಡಲಿನೀ ಅನಾವರಣಗೊಂಡಾಕ್ಷಣ ಇದುವರೆಗೆ ಶಕ್ತಿಯನ್ನು ಕೈವಶಪಡಿಸಿಕೊಂಡ ವ್ಯಕ್ತಿಯೇ ಬೇರೆ, ಅದರ ಪರಿವರ್ತನಾ ರೂಪವೇ ಬೇರೆಯಾಗಿ ಪ್ರಕಟಗೊಳ್ಳುತ್ತಾನೆ. ಇದನ್ನು ಒಂದು Sudden awareness ದೃಷ್ಟಿಯಿಂದ ಪರಿಗಣಿಸಲಾಗುತ್ತದೆ. ಅಭಿನಯದ ಅಭ್ಯಾಸದಲ್ಲಿ ವ್ಯಕ್ತಿ ತೋರುವ ಅಭಿನಯ ದಿನದಿಂದ ದಿನಕ್ಕೆ ಸುಧಾರಿಸುತ್ತಾ, ಬೆಳೆಯುತ್ತಾ ಹೆಚ್ಚು ಹೆಚ್ಚು ರಾಮನಾಗುವ ಕಡೆಗೆ ನಡೆಯುತ್ತದೆ. ಅಭಿನಯದ ಪ್ರದರ್ಶನದ ಕೊನೆಯ ದಿನ ಅದು ಅಷ್ಟು ದಿನದ ಅಭಿನಯವನ್ನು, ರಾಮನನ್ನು ಮರೆಮಾಚುವಷ್ಟು ಬೆಳೆದು, ಅಪರೂಪಕ್ಕೆ ಇದುವರೆಗೆ ಕಾಣದ ಒಂದು ಹೊಸ ಅಭಿನಯದ ಮೂಲಕ ಅಷ್ಟು ದಿನದ ರಾಮನ ಚಿತ್ರಣವನ್ನೇ ಬದಲಿಸಿಬಿಡಬಹುದು. ಇದನ್ನು ಅಭಿನವ 'ಪ್ರತಿಭೆ' ಎಂದ. ಈ ಪ್ರತಿಭೆ ಆಕ್ಷಣ ಒಂದು Spontaneous reaction ಅದಕ್ಕೂ ಪೂರ್ವತಯಾರಿಗೂ ಏನೂ ಸಂಬಂಧವಿಲ್ಲ. ಅದು ಆಕ್ಷಣದ ಒಂದು Flash.

ಇಲ್ಲಿ ಒಂದು ಸೋಜಿಗದ ಅಥವಾ ಕುತೂಹಲದ ಸಂಗತಿ. ಪ್ರಾಜ್ಞರು ಈ ರೀತಿಯ ನನ್ನ ಓದನ್ನು ಮನ್ನಿಸಬೇಕು. ಇಂತಹ ಓದಿಗೆ ಮುಖ್ಯವಾದ ಎರಡು ಆಧಾರಗಳಿಗೆ–ಅವೆಂದರೆ ಭರತನನಾಟ್ಯ ಶಾಸ್ತ್ರ, ಅಭಿನವನ ಧ್ವನಿ ಮತ್ತು ರಸ ಸಿದ್ಧಾಂತ.

ಒಟ್ಟು ಆಧ್ಯಾತ್ಮದ ಸಾಧನಾ ಪಥಕ್ಕೂ ಅಭಿನಯದ ತಯಾರಿಗೂ ಬಹಳ ಸಾಮ್ಯವಿದೆ. ವಾಸ್ತವಿಕ ವ್ಯಕ್ತಿಯೊಬ್ಬ unknown ಕಡೆಗೆ ನಡೆಯುವುದು ಆಧ್ಯಾತ್ಮದ ಆರಂಭ. ಅವನು ಯಾರು ಎಂಬುದರ ಹುಡುಕಾಟದ ಜೊತೆಗೆ ಯಾವುದನ್ನೋ ಸೇರುವ ಹಸಿವಿರುತ್ತದೆ. ಒಂದು

ದೃಷ್ಟಿಯಿಂದ ವ್ಯಕ್ತಿ ಇಂತಹದೊಂದು ಗೊತ್ತಿಲ್ಲದನ್ನು ಹುಡುಕಲು ಮೊದಲು ತನಗೆ ಗೊತ್ತಿರುವ ಎಲ್ಲವನ್ನೂ ತೊರೆಯುತ್ತಾನೆ. ಹಾಗೆ ನೋಡಿದರೆ ಗೊತ್ತಿರುವ ಭೌತಿಕ ಸಂಗತಿಗಳನ್ನೂ ಮರೆಯುತ್ತಾನೆ. ತಾನು ಏನಾಗಿದ್ದನೋ ಅದು ಅಲ್ಲವಾಗುವುದು ಅವನ ಪಥದ ಆರಂಭ.

ನಟನೆಯೂ ಹಾಗೆಯೇ ವ್ಯಕ್ತಿ ಬಹಳ ದೊಡ್ಡ ಹುದ್ದೆಯಲ್ಲಿ ಇರಬಹುದು, ಅಥವಾ ಸೇವಕ ಕೈಂಕರ್ಯದಲ್ಲಿರಬಹುದು. ಅವನು ಮೊದಲು ಅಭಿನಯ ತರಬೇತಿಗೆ ಬಂದಾಗ ತಾನು ಏನು ಇದ್ದೇನೋ ಅದನ್ನು ಮರೆಯಬೇಕು. ಪೂರ್ತಿಯಾಗಿ ತಾನು ಆಗಲಿರುವ ಪಾತ್ರವೇ ಆಗುವುದರ ಕಡೆಗೆ ನಡೆಯಬೇಕು. ಮೊದ ಮೊದಲಿಗೆ ಅವನು ಇರುವ ಮತ್ತು ಪಾತ್ರವಾಗುವ ಕ್ರಿಯೆಯ ಗೊಂದಲ ಸಂದಿಗ್ಧ ಇವುಗಳನ್ನೆಲ್ಲಾ ನಿರಂತರ ಎದುರಿಸುತ್ತಾನೆ. ಅದಕ್ಕಾಗಿಯೇ ಅವನಿಗೆ ಅಭ್ಯಾಸ, ತಾಲೀಮು ನಿರಂತರ ಅಗತ್ಯವಾಗುತ್ತದೆ. ಸಾಧನಾ ಪಥದಲ್ಲಿ ನಿರಂತರ ಸಾಧನೆ ತಪಸ್ಸು ಇರುವ ಹಾಗೆ ಈ ನಟನೂ ನಿರಂತರ ಅಭ್ಯಾಸದಿಂದ ನಿಧಾನವಾಗಿ ಆ ಪಾತ್ರ ಪ್ರವೇಶಿಕೆ ಪಡೆಯುತ್ತಾನೆ.

ಆನಂತರದ ಭಾಗ ಅವನು ಮಾತು ಬದಲಾಗಬೇಕು. ಸಾಧಕನ ಬದುಕು ಮೊದಲು ಆಡಿದ ಮಾತು, ಮಾಡುವ ಯೋಚನೆಗಳನ್ನು ನಿಧಾನ ಬದಲಾಯಿಸಲು ಆರಂಭವಾಗುತ್ತದೆ. ಅವನು ಸಾಧಕನಾದ ಕಾಲಾಂತರದಲ್ಲಿ ತಾನಾಗಿಯೇ ಅವನಲ್ಲಿ ಒಂದು ಮನಃಪರಿವರ್ತನೆ ಅದಕ್ಕನುಗುಣವಾದ ಮಾತು, ಅದಕ್ಕೊಂದು ಮಾಧುರ್ಯ ಹೀಗೆ ಬದಲಾವಣೆಗಳು ಸಂಭವಿಸುತ್ತದೆ. ಆದ್ದರಿಂದಲೇ ಅವನು ಮಾತನ್ನು ಮಂತ್ರವಾಗಿಸುತ್ತಾನೆ. ಅಥವಾ ಮಂತ್ರದ ನಿರಂತರ ಪಠಣ, ಅದರ ಅಭ್ಯಾಸವೇ ಅವನ ಮಾತಾಗತೊಡಗುತ್ತದೆ. ಅದೇ ಅವನ ಶಕ್ತಿಯ ವಾಕ್ ಆಗಿ ಪರಿವರ್ತಿತವಾಗುತ್ತದೆ.

ನಟ ಕೂಡ ಹಾಗೆಯೇ ಅವನ ದಿನನಿತ್ಯದ ಮಾತುಗಳು ಬದಲಾಗಿ ಅವನು ಮಾಡುವ ಪಾತ್ರದ–ಉದಾಹರಣೆಗೆ ರಾಮನಾದರೆ ರಾಮನ–ಮಾತುಗಳನ್ನೇ ಆಡತೊಡಗುತ್ತಾನೆ. ಆ ಮಾತಿಗೆ ರಾಮನ ಶಕ್ತಿಯನ್ನು ಚೋದಿಸುತ್ತಾನೆ. ಮತ್ತು ಮಾತಲೆಲ್ಲಾ ರಾಮನ ವ್ಯಕ್ತಿತ್ವವನ್ನು, ಘನತೆಯನ್ನು ತುಂಬಿ ತನ್ನ ಮಾತಿಗೆ ಒಂದು ಹೊಸ ಬಲಬರುವಂತೆ ಅಭ್ಯಾಸ ನಡೆಸುತ್ತಾನೆ. ಮಾತು ಅದರಷ್ಟಕ್ಕೇ ನಿರ್ಜೀವವಿದ್ದರೂ ಅದಕ್ಕೆ ರಾಮನ ಪ್ರಾಣ ಪ್ರತಿಷ್ಠಾಪಿಸಿ ಆ ಮಾತನ್ನು ರಾಮನ ಮಾತಾಗಿಸುತ್ತಾನೆ. ಅದು ರಾಮನನ್ನು ಕೇಳಿಸುವ ಶಕ್ತಿ ಪಡೆದು ಹೊಸ ಧ್ವನಿಯಾಗುತ್ತದೆ. ಹೀಗೆ ನಿರ್ಜೀವ ಪದ ಗುಚ್ಛಗಳಿಗೆ ಧ್ವನಿಯ ಶಕ್ತಿ ತುಂಬುವ ವ್ಯಕ್ತಿಯ ಬಲದಿಂದ ಅದು ರಾಮನ ಮಾತಾಗುತ್ತದೆ.

ಹೀಗೆ ಒಬ್ಬ ಸಾಧಕ ತನ್ನ ನಿರಂತರ ಅಭ್ಯಾಸಗಳಾದ ಧ್ಯಾನ, ಮಂತ್ರ, ಆಸನ, ಮುಂತಾದವುಗಳಿಂದ ದಿನದಿಂದ ದಿನಕ್ಕೆ ತಾನು ಅವನಾಗುವ ಕಡೆಗೆ ನಡೆಯುವ ಪ್ರಯತ್ನದಂತೆ ಸಾಮಾನ್ಯನಂತೆ ಇರುವ ನಟ ಮಾತು, ನಡೆ, ನುಡಿಗಳೆಲ್ಲಾ ರಾಮನೇ ಆಗುವ ಪ್ರಯತ್ನವನ್ನು ತನ್ನ ಅಭ್ಯಾಸಗಳಲ್ಲಿ ನಡೆಸಿ ರಾಮನಾಗುವ ಕಡೆಗೆ ತುಡಿಯುತ್ತಿರುತ್ತಾನೆ. ಅದಕ್ಕೆ ಪ್ರೇರಕವಾಗಿ ಸಾಧಕನಿಗೆ ಮಂತ್ರದ ಬಲವಿದ್ದರೆ ನಟನಿಗೆ ನಾಟಕದ ಸಂಭಾಷಣೆಯೇ ಬಲ. ಮನುಷ್ಯ ತನ್ನನ್ನು ತೋರುವುದು ವಾಕ್‌ನಿಂದ. ಇದರ ಬಲದಿಂದಲೇ ಇಬ್ಬರೂ ಬೆಳೆಯುತ್ತಿರುತ್ತಾರೆ. ಇಬ್ಬರಿಗೂ ಧ್ವನಿ ಒಂದು ಮೂಲ ಸಾಮಗ್ರಿ. ಅದರ ಉಚ್ಚಾರ ಒತ್ತು ಇವುಗಳಿಗೆ ಸಾಧಕ ಹಾಕುವ ಧ್ವನಿ ಸಾಮರ್ಥ್ಯದಿಂದ ಆ ಮಂತ್ರದ ಬಲ ನಿರ್ಣಯ ಆದ ಹಾಗೆ ರಾಮನ ವ್ಯಕ್ತಿತ್ವದ ಘನತೆಗೆ ಅನುಗುಣವಾಗಿ ನಟ ಹಾಕುವ ಸಂಭಾಷಣೆಯ ಮೇಲಿನ ಬಲ, ಒತ್ತು, ಉಚ್ಚಾರ ಇವುಗಳಿಂದ ಅವನಲ್ಲಿ ರಾಮನ ಮಾತು ಒಲಿಯ ತೊಡಗುತ್ತದೆ.

ಇಬ್ಬರೂ ಈಗ ಕಾಯುವುದು ಒಂದನ್ನೇ. ಸಾಧಕನಿಗೆ ದರ್ಶನದ ಕಾಯುವಿಕೆ, ನಟನಿಗೆ ಪ್ರದರ್ಶನದ ಕಾಯುವಿಕೆ. ಒಬ್ಬನು ನೋಡುವುದಕ್ಕೆ ಹಂಬಲಿಸಿದರೆ ಇನ್ನೊಬ್ಬನು ತೋರುವುದಕ್ಕೆ ಹಂಬಲಿಸುತ್ತಾನೆ. ಸಾಧಕನಿಗೆ ದರ್ಶನ ಸಂಭವಿಸಲಿಕ್ಕಿದೆ ಎಂಬ ಅಂತಃಸ್ಫುರಣದ ಅನುಭವವಿದೆ. ನಟನಿಗೆ ಪ್ರದರ್ಶನೇ ಅಂತಿಮ ಗುರಿ ಎಂಬ ಸಾಮಾನ್ಯ ತಿಳುವಳಿಕೆ ಇದೆ. ಸಾಧಕ ಸಾಕ್ಷಾತ್ಕಾರ ಎಂಬ ದರ್ಶನವನ್ನು ಕಲ್ಪಿಸಬಲ್ಲ ನಟನೂ ಅಷ್ಟೆ ಪ್ರದರ್ಶನವನ್ನು ಕಲ್ಪಿಸಿಕೊಳ್ಳುತ್ತಾನೆ. ಇಬ್ಬರಿಗೂ ಆ ಅದು ಸಂಭವಿಸಿದ ದಿನವೇ ಪರಿಣಾಮದ ಅರಿವು.

ಸಾಧಕನ ದರ್ಶನಕ್ಕೂ ಕುಂಡಲಿನಿಗೂ ನೇರ ಸಂಬಂಧ. ಆ ಅದು ಒಂದು ಅಚಾನಕ್ ಗಳಿಗೆಯಲ್ಲಿ ಘಟಿಸಿ ಬಿಡುವ ಸ್ಫೋಟ. ಅದರ ಮೂಲಕ ಅವನ ದರ್ಶನ ಸಾಧ್ಯತೆ. ನಟನಿಗೂ ಹಾಗೆ ಪ್ರದರ್ಶನದ ದಿನ ಅವನ ನಿಜವಾದ ಶಕ್ತಿಯ ಪ್ರಕಟಣೆ. ಅದಕ್ಕೆ ಪ್ರತಿಭೆ ಎಂದು ಹೆಸರು. ಆ ಪ್ರತಿಭೆಗೆ ಇದುವರೆಗಿನ ಅಭ್ಯಾಸ, ತಾಲೀಮು ಮತ್ತೊಂದು ಮಗದೊಂದು ಯಾವುದೂ ಸಹಕರಿಸಲಿಕ್ಕಿಲ್ಲ. ಅದು ಆ ದಿನ ಆ ಕ್ಷಣ ಪ್ರದರ್ಶನ ಹೊತ್ತಿಗೆ ಸಂಭವಿಸುವ ಸಾಕ್ಷಾತ್ಕಾರ. ಸಾಧಕನಿಗೆ ಕುಂಡಲಿನಿಯ ಹಾಗೆ ನಟನಿಗೆ ಪ್ರತಿಭೆ.

ಇದುವರೆಗಿನ ಸಾಧನಾ ಪಥದ ಎಲ್ಲ ಸಾಧನೆಗಳನ್ನು ಮಣ್ಣುಪಾಲು ಮಾಡಿ ದರ್ಶನದ ದಿನ ಸಾಧಕ ಯೋಗಭ್ರಷ್ಟನಾಗಿ ಬಿಡಬಹುದು. ಅಥವಾ ಇದುವರೆಗಿನ ಸಾಧನೆಯ ಯಾವ ಮೂಲಸಾಮಗ್ರಿಗಳ ಸಹಕಾರವೂ ಇಲ್ಲದೆ ಆ ದಿನ ಥಟ್ಟಂತ ಆ 'ಅದನ್ನು' ಅನುಭವಿಸಬಹುದು. ಎರಡೂ ಆ ಕ್ಷಣದ ಸಂಭವ. ಏನು, ಯಾಕೆ ವಿವರಗಳಿಲ್ಲ.

ನಟ ಕೂಡ ಹಾಗೆ. ಇದುವರೆಗೆ ನಡೆಸಿದ ತಾಲೀಮು, ಅಭ್ಯಾಸ, ಎಲ್ಲಕ್ಕೂ ಹೊಡೆತ ಬೀಳುವ ಹಾಗೆ ಕೆಟ್ಟ ರಾಮನಾಗಿ ಪ್ರದರ್ಶಿಸಿ ಆ ದಿನ ಸೋತುಬಿಡಬಹುದು. ನಿತ್ಯದ ಅಭ್ಯಾಸದಲ್ಲಿ ಇದಕ್ಕಿಂತಲೂ ಅದ್ಭುತ ರಾಮನನ್ನು ಅಭಿನಯಿಸಿದ್ದೆ ಅಂತ ಪರಿತಪಿಸಬಹುದು. ಅದೇ ಕೆಲವೊಮ್ಮೆ ಇಲ್ಲಿಯವರೆಗಿನ ಅಭ್ಯಾಸವನ್ನೆಲ್ಲಾ ಮರೆಯಿಸಿ ಹೊಚ್ಚ ಹೊಸ ಅದ್ಭುತ ರಾಮನನ್ನು ಪ್ರದರ್ಶಿಸಿ ಗೆಲ್ಲಬಹುದು. ಕಾರಣ ಗೊತ್ತಿಲ್ಲದೆ ಕೇವಲ ಪ್ರತಿಭೆಗೆ ಶರಣಾಗಿ ಬಿಡಬಹುದು.

ಹೀಗೆ ದರ್ಶನಕ್ಕೂ ಪ್ರದರ್ಶನಕ್ಕೂ ಅದ್ಭುತ ಸಾಮ್ಯವಿದೆ. ಭರತ ಮತ್ತು ಅಭಿನವ ಇಬ್ಬರೂ ದಾರ್ಶನಿಕರು. ಇಬ್ಬರೂ ಪ್ರದರ್ಶನ ಕಲೆ ಕುರಿತು ಬರೆದರು. ಒಂದು ಅಂತರಂಗ ದರ್ಶನ, ಇನ್ನೊಂದು ಬಹಿರಂಗ ಪ್ರದರ್ಶನ. ಒಂದು ತನ್ನನ್ನು ನೋಡುವುದು, ಇನ್ನೊಂದು ತನ್ನನ್ನು ತೋರುವುದು. ತನ್ನನ್ನು ತೋರಲು ಬಂದವನು ತನ್ನನ್ನು ಚೆನ್ನಾಗಿ ನೋಡಲು ಕಲಿತಾನು ಎಂಬ ಸೂಚನೆಯೇ?

ಅಭಿನಯ – ಅಭ್ಯಾಸ

ಮಾತು – ಮಂತ್ರ

ಪ್ರತಿಭೆ – ಕುಂಡಲಿನೀ

ಪ್ರದರ್ಶನ – ದರ್ಶನ

ಇವು ಒಂದಕ್ಕೊಂದು ಸಮಾನಾಂತರ ಎನಿಸುವುದು ಈ ದಿಶೆಯಲ್ಲೇ. ಇಬ್ಬರು ಋಷಿಗಳು ಹಾಗಲ್ಲದೆ ಇದ್ದರೆ ಹೀಗೆ ರಸ ಮತ್ತು ಧ್ವನಿ ಶಾಸ್ತ್ರದ ಕುರಿತು ಮಾತಾಡುತ್ತಿರಲಿಲ್ಲವೇನೋ. ಅವು ಬೇರೆ ಬೇರೆ ಅಲ್ಲ ಒಂದೇ ಎನಿಸುವಷ್ಟು ಸಾಮ್ಯವಿದೆ. ಈ ದಿಶೆಯಲ್ಲಿ ರಸಸಿದ್ಧಾಂತ ಮತ್ತು ಧ್ವನಿಸಿದ್ಧಾಂತ ಕುರಿತು ಹೊಸದೊಂದು ಸಂಶೋಧನೆ ಚರ್ಚೆ ನಡೆಸಬಹುದು. ಅದು ಒಂದು ಬಹಿರಂಗ ಮತ್ತು ಅಂತರಂಗ ಸಾಧನೆಯ ಕುರಿತ ವಿಶೇಷ ಹೊಳಹನ್ನು ನೀಡಬಹುದು. ಬಹುಶಃ ಕಲಾವಿದರನ್ನು ಶಪಿತ ಗಂಧರ್ವರು ಎಂದದ್ದು ಇದೇ ಅರ್ಥದಲ್ಲಿರಬೇಕು. ಆ ತಪಸ್ಸನ್ನು ಯಾವುದೋ ಭಂಗ ಮಾಡಿದ್ದರ ಫಲವಾಗಿ ಈ ತಪಸ್ಸಿಗೆ ತೊಡಗಿದರೆಂದೇ ಭಾವಿಸಲಾಗಿದೆ. ಈ ದಿಶೆಯಲ್ಲಿ ಹೊಸ ಅಧ್ಯಯನ ಸಾಧ್ಯವಾಗಲಿ.

ಈ ರೀತಿಯಲ್ಲಿಯೇ ಶಕ್ತಿಗಾಗಿ ಮಂತ್ರ, ಶಕ್ತಿಗಳ ಆವಾಹನೆ, ಶಕ್ತಿಗಳ ವಶೀಕರಣ, ತಾನೇ ಶಕ್ತಿಯಾಗಿ ಮಾರ್ಪಟ್ಟ ವ್ಯಕ್ತಿ ಪೂರ್ಣ ಒಂದು ಪರಿವರ್ತನಾ ಸಾಧ್ಯತೆಯನ್ನು ಪಡೆಯುವ ಕುಂಡಲಿನೀ ಜಾಗೃತಿಯನ್ನು ವಿವರಿಸುತ್ತಾನೆ. ಒಂದು ದೃಷ್ಟಿಯಿಂದ ಮೂಲಾಧಾರ

ಕುಂಡಲಿನೀಯ ಮೂಲಸ್ಥಾನ. ಅಲ್ಲಿಂದ ನಿದಾನಕ್ಕೆ ಅದರ ಊರ್ಧ್ವಗಮನ. ಅದು ಶಕ್ತಿಯ ಊರ್ಧ್ವಮುಖೀ ನಡೆ. ಹೀಗೆ ಅಭಿನವ ಮನುಷ್ಯನ ಬೆಳವಣಿಗೆಯನ್ನು ಒಂದು ವಿಶೇಷ ಸಾಧ್ಯತೆಯಲ್ಲಿ ಅದ್ಭುತವಾಗಿ ವಿವರಿಸಿದ ಮೊದಲಿಗ.

ಆದರೆ ತಂತ್ರಮಾರ್ಗ ಬಹಳ ಬೇಗ ಮರೆಯಾಗಿ ಬಿಟ್ಟಿತು.

ಅದಕ್ಕೆ ಕಾರಣ ಎರಡು : ಒಂದು ಆ ಕ್ರಮದೊಳಗೆ ಇದ್ದ ಭಯಾನಕ ಪ್ರಯೋಗಗಳ ಪೂರ್ವಗ್ರಹ. ಎರಡು ಮುಸ್ಲಿಂ ಆಳ್ವಿಕೆಯ ಆರ್ಭಟದದಲ್ಲಿ ಅದರ ನಿರ್ನಾಮ. ತುಂಬ ಅಂದರೆ ಒಂದು ಒಂದೂವರೆ ಶತಮಾನ ತಂತ್ರದ ದಾರಿ ಬೆಳೆದದ್ದು ಕಾಣಿಸಿತು.

ಆ ಬಳಿಕ ಅದರ ನವರೂಪ ಗೋಚರಿಸಿದ್ದು ಇಪ್ಪತ್ತನೆಯ ಶತಮಾನದಲ್ಲೆ ಅನೇಕ ಶೈವಸಿದ್ದಾಂತಿಗಳು ಮತ್ತೆ ಉತ್ತರ ಭಾರತದಲ್ಲಿ ಅದನ್ನು ನವೀಕರಿಸಿದ್ದು ಕಾಣಿಸುತ್ತದೆ. ಇದರ ಪ್ರಬಲ ಆಕರ್ಷಣೆಗೆ ಒಳಗಾದವರೆಲ್ಲ ಬಹಳ ಮಂದಿ ಪಾಶ್ಚಾತ್ಯರು. ನಮ್ಮಲ್ಲಿ ಸಿಗುವ ಅನೇಕ ಅನುಭವ ಕಥನಗಳು. ಪಾಶ್ಚಾತ್ಯರಿಂದಲೇ ರಚಿತವಾಗಿವೆ. ಒಂದು ದೃಷ್ಟಿಯಿಂದ ಅದು ಇಪ್ಪತ್ತನೆಯ ಶತಮಾನದ ಕೊನೆಯವರೆಗೂ ಗುಪ್ತಗಾಮಿನಿಯಂತೆ ಹರಿದದ್ದು ಗಮನಕ್ಕೆ ಬರುತ್ತದೆ.

ಮತ್ತೆ ತಂತ್ರವನ್ನು ಒಂದು ಮಾರ್ಗವಾಗಿ ಪ್ರಪಂಚವ್ಯಾಪಿ ಹೇಳಹೊರಟಿದ್ದು ರಜನೀಶನೇ. ಅವನು ಅನೇಕ ಅಭಿನವನ ಸಿದ್ಧಾಂತಗಳನ್ನೇ ತನ್ನ ವಿಧಾನದಲ್ಲಿ ಬಳಸಿದ್ದಾನೆ. ಒಂದು ಸಮೂಹವನ್ನು ತನ್ನ ಮುಂದೆ ಕುಳ್ಳಿರಿಸಿ ಕೊಳ್ಳುವುದು. ಅವರೆಲ್ಲರಿಗೂ ಒಂದು ನಿರಂತರ ಭಜನೆಯ ಅಥವಾ ರಾಗ ಪಠಣ ಹೇಳುವುದು. ಆ ನಿರಂತರ ಪುನರಾವರ್ತನೆ ಹುಟ್ಟಿಸುವ ನಾದದಲ್ಲಿ ತನ್ಮಯರಾಗುವುದು. ಅದಾದ ಬಳಿಕ ತನ್ನ ಕಣ್ಣಲ್ಲಿ ಕಣ್ಣಿಟ್ಟು ಹೆಬ್ಬೆಟ್ಟು ಒತ್ತುವುದು. ಒಬ್ಬೊಬ್ಬರು ಮೂರ್ಛಾ ಸ್ಥಿತಿಯಲ್ಲಿ ಅಲ್ಲಿಯೇ ಮಲಗುವುದು[1]. ಇವೆಲ್ಲವೂ ಅಭಿನವ ಹೇಳುವ ಮಂಡಲ ಪದ್ಧತಿಯಿಂದಲೇ ಆಯ್ದವು. ಆದರೆ ರಜನೀಶ ಅದಕ್ಕೆ ಇನ್ನಷ್ಟು ತನ್ನ ಸ್ವಂತಿಕೆ ಸೇರಿಸಿದ್ದಾನೆ. ಅವನು ಮಂತ್ರ ಮತ್ತು ವಿಧಿ ಆಚರಣೆಗಳನ್ನು ತುಂಬ ಲಿಬರಲ್ ಆಗಿ ಪರಿವರ್ತಿಸಿಕೊಂಡಿದ್ದಾನೆ.

ಪ್ರೇರಣೆ ಅವನದೇ ಆದರೂ ಸ್ವಂತಿಕೆ ಇವನದು. ಅವನ ಪ್ರಯೋಗಗಳಿಗೆ ಇದ್ದ ಆರೋಪವೇ ಮುಕ್ತಕಾಮ. ಅದರ ಪೂರ್ಣ ಮೂಲ ಸೆಲೆ ಇದ್ದದ್ದು ಅಭಿನವನಲ್ಲಿ. ವಾಸ್ತವಿಕ ಒಂದು ಕಾಲಕ್ಕೆ ತುಂಬ ವಿವಾದಾಸ್ಪದವಾದ ಕೃತಿ from sex to super consciousness, ತಂತ್ರಾಲೋಕದ 29ನೇ ಅಧ್ಯಾಯಕ್ಕಿಂತ ಏನೂ ಹೊಸದಿಲ್ಲ. ಒಂದು mass level ನಲ್ಲಿ ಇದನ್ನು ಸಾಧಿಸಹೊರಟಿದ್ದು ರಜನೀಶನ ಸಾಧನೆ. ಆದರೆ ಅದೇ ಅವನ ಸೋಲು ಕೂಡ. ಯಾವುದನ್ನು

1. ಇಂತಹ ಅನೇಕ ಚಿತ್ರಗಳನ್ನು ಪ್ರಬಂಧದ ಕೊನೆಯ ಭಾಗದಲ್ಲಿ ಆಯ್ದು ಕೊಡಲಾಗಿದೆ

ಕೆಲವು ವಿಧಿ, ನಿಯಮ ಎಂದು ಅಭಿನವ ಕಡ್ಡಾಯವಾಗಿ ಕಾಮದ ಕುರಿತು ಹೇಳಿದ್ದನೋ ಅದನ್ನು ರಜನೀಶ ಸ್ವತಂತ್ರವಾಗಿ ಮಾರ್ಪಾಟು ಮಾಡಿದ. ಆದ್ದರಿಂದಲೇ ಅವನು ಆ ಮಾರ್ಗದಲ್ಲಿ ಗೆಲ್ಲಲಿಲ್ಲ. ಮಾತ್ರವಲ್ಲ ಅದು ಹಲವು ಅಪಾಯಗಳಿಗೂ ಕಾರಣವಾಯಿತು. ಅದು ರಜನೀಶ ತನ್ನ ಒಳಗೆ ತಾನೇ ಮಾಡಿಕೊಂಡ experiment. ವಾಸ್ತವಿಕ ಈ ನಿಯಮಗಳನ್ನು ಉಲ್ಲೇಖಿಸಿದರೆ ಆಗುವ ದುಷ್ಪರಿಣಾಮಗಳನ್ನು 9ನೆಯ ಶತಮಾನದಲ್ಲೇ ಅಭಿನವ ಎಚ್ಚರಿಸಿದ್ದ. ರಜನೀಶ ಹೇಳಿಕೇಳಿ ದುಸ್ಸಾಹಸಿ. ಅದರ ಪರಿಣಾಮವಾಗಿ ತಾನೂ ಅನುಭವಿಸಿದ ಹಲವರು ನೊಂದು ನೆನೆದರು.

ರಜನೀಶ ಮದ್ಯ ಮಾದಕತೆಯ ಬಗ್ಗೆಯೂ ಅನೇಕ ಪ್ರಯೋಗ ಮಾಡಿದ್ದಾನೆ. ಅವನ ಕಾಲದಲ್ಲಿ ಅದು ಗಾಂಜಾಕ್ಕೆ ತಲುಪಿತ್ತು. ಅದರ ಪರಿಣಾಮವೂ ಒಂದು ದೃಷ್ಟಿಯಿಂದ 2+2=4 ಎಂದು ಅಭಿನವ ಸ್ಪಷ್ಟ ಫಲ ಹೇಳುವ ನಿರ್ಣಯ ರೂಪದಲ್ಲಿಲ್ಲ. ಕೇವಲ ಪ್ರಾಯೋಗಿಕ ನೆಲೆಯಾಗಿ ರಜನೀಶ ಆಗಿ ಕಾಣಿಸುತ್ತಾನೆಯೇ ಹೊರತು ಪ್ರಾತ್ಯಕ್ಷಿಕವಾಗಿ ಅಲ್ಲ. ಹೇಗೆ ಹೆಣ್ಣು, ಮದ್ಯ ಮುಂತಾದ ಮೈಲಿಗೆ ಆಧ್ಯಾತ್ಮಕಕ್ಕೆ ಇದೆಯೇ ಹಾಗೆಯೇ ಹಣ ಕೂಡ ಒಂದು ಮೈಲಿಗೆಯ ವಸ್ತುವೇ. ಸಂಪತ್ತನ್ನು ತ್ಯಜಿಸುವ ವೈರಾಗ್ಯದ ಕಡೆಗೆ ಪೂರ್ವ ಆಧ್ಯಾತ್ಮದಲ್ಲಿ ಒಲವು ಹೆಚ್ಚು. ಆ ವಿಷಯವಾಗಿ ಅಭಿನವ ಏನನ್ನು ಪ್ರಸ್ತಾಪ ಮಾಡಿಲ್ಲ. ಆದರೆ 20ನೆಯ ಶತಮಾನದ ಕೊನೆಯ ಘಟ್ಟದಲ್ಲಿ ರಜನೀಶ ಸಂಪತ್ತಿಗೆ ಒಂದು ಹೊಸ ಮುಖ ಕೊಟ್ಟ. ಮದ್ಯ, ಮಾನಿನಿಯ ಹಾಗೆ ಅದೂ ಮೈಲಿಗೆಯಲ್ಲ. ಎಲ್ಲ ವಿಷಯಗಳಲ್ಲೂ ಲೋಲುಪತೆ ದೋಷವೇ ಹೊರತು ವಿಷಯ ದೋಷವಲ್ಲ ಎಂದ. ಹಾಗಾಗಿ ಹಣವನ್ನು ದೂರವಿಡದ, ಅದನ್ನು ಒಂದು ಬೆಳವಣಿಗೆಯ ಪರಿಕರವಾಗಿ ಬಳಸುವ ಕುರಿತು ಹೇಳಿದ. ಈ ಹಿನ್ನೆಲೆಯಲ್ಲಿ ತನ್ನ ಐಷಾರಾಮಿ ಬದುಕನ್ನು ಸಮರ್ಥಿಸಿದ. ಜೊತೆಜೊತೆಗೆ ಎಲ್ಲ ಸಂಪತ್ತು ಉಳ್ಳವರೂ ಅದು ಇರುವಂತೆ ಆಧ್ಯಾತ್ಮದಲ್ಲಿ ನಡೆವುದನ್ನು ಹೇಳಿದ. ಎಲ್ಲ ಬಿಟ್ಟ ಭೈರಾಗಿಗೆ ಮಾತ್ರ ಆಧ್ಯಾತ್ಮ ಎಂಬ ಅದುವರೆಗಿನ ನಂಬಿಕೆಯನ್ನು ಹುಸಿ ಮಾಡಿದ. ಇದರ ಉತ್ತರರೂಪವಾಗಿ ಹಣ ಮಾಡುವುದೇ ಆಧ್ಯಾತ್ಮ ಎಂಬ ಪದ್ಧತಿ ಬೆಳೆದದ್ದು ಇಂದಿನ ದುರಂತ. ಈಗಿನ ಎಲ್ಲಗುರುಗಳ ಐಷಾರಾಮಿತ್ವ ರಜನೀಶನನ್ನು ಮೀರಿಸುವಂಥದು. ಅದು ರಜನೀಶನ ಉದ್ದೇಶವಾಗಿರದಿದ್ದರೂ ಹಾಗೊಂದು ಪರಿಣಾಮವಾದದ್ದು ಸುಳ್ಳಲ್ಲ.

ಸತ್ಯಕಾಮರು ಇದುವರೆಗೆ ಅಭಿನವ ಹೇಳಿದ ಎಲ್ಲ ವಿಧಿವಿಧಾನಗಳನ್ನು ತಂತ್ರಶಾಲೆಯಲ್ಲಿ ನಡೆದವರು. ಅದರ ವಾಕ್ಯ ವಿವರಣೆ ಎಲ್ಲವನ್ನು ಅವರು ಅನುಭವ ಕಥನಗಳಲ್ಲಿ ಹೇಳಿದ್ದಾರೆ.

ಆದರೆ ಅವರು ಶಕ್ತಿಯ ಮಟ್ಟಿಗೆ ಎಲ್ಲವನ್ನು ಕೈವಶ ಮಾಡಿ ವೈರಾಗ್ಯ ತಳೆದವರು ಹಾಗೆಯೇ ಕುಂಡಲಿನೀ ಜಾಗೃತಿಯ ನಂತರ ವ್ಯಕ್ತಿ ಪರಿವರ್ತಿತನಾಗುತ್ತಾನೆ ಎಂಬ ವಿವರಕ್ಕೆ ಮಾದರಿಯಾಗಿ ಸಿಗುವವರು. ಎಲ್ಲಿಯೂ ಅದರ ಪ್ರಯೋಗಕ್ಕೆ ಹೋದವರಲ್ಲ. ಗುರು-ಶಿಷ್ಯ ಪರಂಪರೆಯಲ್ಲಿ ಅಂಥದೊಂದು ಸಾಧನಾ ಪಥವನ್ನು ಮುಂದುವರೆಸುವ ಪ್ರಯತ್ನ ಮಾಡಿದವರು. ಹೊರಗೆ ಕಾಣಿಸುವಾಗ ಇವರು ಯಾವಾಗಲೂ ಸಾಮಾನ್ಯ ಮನುಷ್ಯ. ಸಾರ್ವಜನಿಕವಾದ ಯಾವ ಪ್ರಸಂಗದಲ್ಲೂ ಈ ಕುರಿತು ಅವರು ಮಾತಾಡಿದವರಲ್ಲ. ಅವರಿಗೆ ತಂತ್ರ ಒಂದು ವೈಯಕ್ತಿಕ ಸಂಪತ್ತು ಅಥವಾ ಆಸ್ತಿ. ಅದನ್ನು ಮಗಳಿಗೋ ಮಗನಿಗೋ ಮಾತ್ರ ಬರೆದು ಹೋಗುವ ಹಂಬಲ. ಅಂಥ ಒಂದು ಹುಡುಕಾಟ ಅವರ ಜೀವಿತದ ಕೊನೆಯವರೆಗೂ ಇತ್ತು. ಅಷ್ಟು ಮಾತ್ರವೇ ಅಲ್ಲ ಅಭಿನವ ಹೇಳುವ ಅಪೇಕ್ಷ ಶಕ್ತಿಪಾತದ ಮಾದರಿ ಅವರು. ಅವರಿಗೆ ಶಕ್ತಿ ಮತ್ತು ಈ ಆಧ್ಯಾತ್ಮ ಪಥ ಒಂದು ವೈಜ್ಞಾನಿಕ ಶೋಧನೆಯಷ್ಟೇ ನಿಖರವಿತ್ತು. 'ಇಷ್ಟು ದೀರ್ಘಾವಧಿಯ ನಿಮ್ಮ ಶಕ್ತಿಯನ್ನು ನಾಲ್ಕು ವರ್ಷದಲ್ಲಿ ಪಡೆಯಲು ನನಗಾವ ಅರ್ಹತೆ ಅಪ್ಪಾ' ಅಂದಾಗ ಅವರು ಕೊಟ್ಟ ಉತ್ತರ. 'ಪರಮಾಣು ಸಂಶೋಧನೆ ಐನ್‌ಸ್ಟೀನ್‌ಗೆ ಜೀವಿತದ ಸಂಶೋಧನೆ. ನಾಳೆ ಪಾಠ ಮಾಡುವ ಶಿಕ್ಷಕ ಅದನ್ನು ಐದು ನಿಮಿಷದಲ್ಲಿ ವಿದ್ಯಾರ್ಥಿಗೆ ವಿವರಿಸಬಲ್ಲ. ಹೀಗೆ ಜ್ಞಾನ ಕಾಲದಿಂದ ಕಾಲಕ್ಕೆ ಸರಳವಾಗದಿದ್ದರೆ ಅದು ಜ್ಞಾನವೇ ಅಲ್ಲ' ಎನ್ನುವ ಸಮರ್ಥನೀಯ ಉತ್ತರ ಕೊಟ್ಟಿದ್ದರು. ತಂತ್ರಮಾರ್ಗದಲ್ಲಿ ಕನ್ನಡದ ಅಭಿನವ ರೂಪದಲ್ಲೇ ಸತ್ಯಕಾಮರಿದ್ದರು. ಅವರ ಅನೇಕ ನಡೆ, ನುಡಿ, ಬರೆಹ ಅದನ್ನು ಸಮರ್ಥಿಸುತ್ತದೆ. ಆದರೆ ಅವನಷ್ಟೇ ಕಠೋರವೂ, ಗುಪ್ತವೂ, ನಿಗೂಢವೂ ಇದ್ದರು. ಆಕಾರಣಕ್ಕಾಗಿಯೇ ರಜನೀಶ ಮುಕ್ತವಾಗಿ ಅಪಾರ್ಥವಾದಂತೆ, ಸತ್ಯಕಾಮರು ಗುಪ್ತವಾಗಿ ಅಪಾರ್ಥಕ್ಕೆ ಒಳಗಾದರು.

2. ತಂತ್ರಮಾರ್ಗದಲ್ಲಿ ಶಕ್ತಿ ಮತ್ತು ಸಿದ್ಧಿಗಳ ಪಾತ್ರ

ಸಾಧನಾ ಪಥ ಒಂದು ನಿರಂತರ ನಡೆ. ಇದರ ಆರಂಭ ಹೇಳುವುದು ಎಷ್ಟು ಕಷ್ಟವೋ ಹಾಗೆಯೇ ಮುಕ್ತಾಯ ಕೂಡ. ಒಂದು ದೃಷ್ಟಿಯಿಂದ ಇದು ನಿಚ್ಚಂ ಪೊಸತು. ಸಾಧಕನೊಬ್ಬ ನಿನ್ನೆಗಿಂತ ಇಂದು, ಇಂದಿಗಿಂತ ನಾಳೆ ತನ್ನನ್ನು ತೂಗಿ ನೋಡುತ್ತಾನೆ. ಅದರಲ್ಲಿ ಅವನಿಗೊಂದು ಬೆಳವಣಿಗೆಯ ಕುರಿತ ಸ್ಪಷ್ಟ ತಿಳುವಳಿಕೆ ಇರುತ್ತದೆ, ಇರಲೇ ಬೇಕು. ಇದು ನಡೆಯುತ್ತಿದೆ ಎನ್ನಿಸದೆ ಗತಿಯಿಲ್ಲ. ಇದು ನಿಂತಿದೆ ಎಂಬ ಭಾವ ಬಂದ ಸಾಧಕ ಹೆಚ್ಚು ಹೊತ್ತು ಬದಕಲಾರ. ಅಂಥ ಮರಣ ಭಾವಕ್ಕೆ ತಳ್ಳುವಷ್ಟು ಕ್ರೂರವಿರುತ್ತದೆ ಇಲ್ಲಿಯ ಬೆಳವಣಿಗೆ. ಕುಸಿದಿದ್ದೇನೆ ಎಂದು ತಿಳಿದರೂ ಅಡ್ಡಿಯಿಲ್ಲ. ಆದರೆ ಒಂದು ಗಮನವಿಲ್ಲದ ನಿಂತ ನಿಲುವು ಇಲ್ಲಿ ಸಲ್ಲದು. ಆದ್ದರಿಂದಲೇ ಈ ದಾರಿಯಲ್ಲಿ ಕುತೂಹಲ ಮತ್ತು ನಿರೀಕ್ಷಣೆ ನಿರಂತರವಿರುತ್ತದೆ. ಇಲ್ಲಿ ಅದ್ಭುತಗಳನ್ನು ಕಾಣಲಿಕ್ಕಿದೆ ನಿಜ. ಇಂಥ ಅದ್ಭುತಗಳನ್ನು ಕಾಣಬೇಕೆಂದು ಹೊರಡುವ ಮಂದಿಯೇ ಬಹಳ. ಆದರೆ ಒಂದನ್ನು ಹುಡುಕುವ ಹಸಿವಿನಿಂದ ಹೊರಟವರು ತುಂಬ ವಿರಳ. ಈ ದಿಶೆಯಲ್ಲಿ ಇಬ್ಬರಿಗೂ ಎರಡು ದಾರಿಗಳಿವೆ. ಒಬ್ಬ ಶಕ್ತಿ ಸಂಪಾದನೆಯನ್ನೇ ಇದರ ಗುರಿಯಾಗಿಸಿಕೊಳ್ಳುವುದು. ಇನ್ನೊಬ್ಬ ಪರಮೋನ್ನತವಾದದ್ದು ನನಗೆ ಬೇಕು ಎಂಬ ಹಸಿವಿನಿಂದ ನಡೆಯುವುದು. ಅದಕ್ಕೆ ಇದನ್ನು going to the unknown ಎಂದೇ ಗುರುತಿಸಲಾಗಿದೆ. ಇದು ಗೊತ್ತಿಲ್ಲದ್ದರ ಕಡೆಗಿನ ನಡೆಯೇ.

ಅರ್ಹತೆ : ನನಗೆ ಅದು ಬೇಕು ಎಂಬ ಹಸಿವು ಇಲ್ಲಿನ ಮೊದಲ ಅರ್ಹತೆ. ಈ ಹಸಿವು ಎಲ್ಲರಲ್ಲಿಯೂ ಇರಬಹುದು. ಆದರೆ ಆ ಅದು ಬೇಕು ಎನ್ನುವ ಹಸಿವಿನ ತೀವ್ರತೆಗೂ ಅಳತೆಯಿದೆ. ಅದು ಸಿಕ್ಕರೆ ಸಿಗಲಿ ನೋಡೋಣ ಎಂಬುದು ಕುತೂಹಲ. ಎಲ್ಲರಿಗೂ ಸಿಕ್ಕಂತೆ ನನಗೂ ಸಿಗಲಿ ಎಂಬುದು ಛಲ. ಅದು ಸಿಗದೇ ಇದ್ದರೆ ಈ ಬದುಕೇ ಬೇಡ ಎಂಬುದು ಸಮರ್ಪಣೆ.

ಈ ಮೂರನ್ನೂ ಒಳಗೊಂಡವನ ಹಸಿವು ನಿಜವಾದ ಸಮರ್ಪಣೆ. ಅಲ್ಲಿ ಪಡೆಯಬೇಕು ಎಂಬ ಕುತೂಹಲವಿದೆ. ಪಡೆದೇ ತೀರುತ್ತೇನೆ ಎಂಬ ಛಲವೂ ಇದೆ, ಪಡೆಯದೆ ಮರಳುವುದಿಲ್ಲ ಎಂಬ ಪ್ರಾಣಾರ್ಪಣೆಯೂ ಇದೆ. ಇಂಥ ಪ್ರಮುಖ ಸಂಗತಿಗಳು ವ್ಯಕ್ತಿಯನ್ನು ಆ ದಾರಿಗೆ ಅರ್ಹನೆನಿಸುತ್ತವೆ.

ಸಿದ್ಧತೆಗಳು : ಇಷ್ಟು ಅರ್ಹತೆಗಳಿದ್ದ ಮಾತ್ರಕ್ಕೆ ವ್ಯಕ್ತಿ ಕೈಕಟ್ಟಿ ಕುಳಿತುಕೊಂಡರಾಗದು. ಅದಕ್ಕೆ ಬೇಕಾದ ತನ್ನ ದೈಹಿಕ ಮತ್ತು ಮಾನಸಿಕ ತಯಾರಿಯನ್ನು ಮಾಡಿಕೊಳ್ಳಬೇಕು. ಅವನು ದೈಹಿಕವಾಗಿ ಮತ್ತು ಮಾನಸಿಕವಾಗಿ ಶುದ್ಧನಾಗಬೇಕು. ಈ ಶುದ್ಧತೆ ಎಂಬುದು ತುಂಬ ಸಾಪೇಕ್ಷ ಶಬ್ದ. ವ್ಯಕ್ತಿಯ ಸ್ವಭಾವಕ್ಕೆ ಅನುಗುಣವಾಗಿ ಶುದ್ಧತೆಯ ವ್ಯಾಖ್ಯಾನ ಬದಲಾಗುತ್ತದೆ. ಇಲ್ಲಿ ಜಾತಿಧರ್ಮಗಳು ಮುಖ್ಯವಾಗದೆ ಇದ್ದರೂ, ಪ್ರತೀವ್ಯಕ್ತಿಗೆ ತಾನು ಶುಚಿಯಾಗುವ ಕಡೆಗೆ ಅವಶ್ಯಕ ಭೇದಗಳಿವೆ.

ಹೀಗೆ ದೈಹಿಕ ಶುದ್ಧಿಯೆಂಬ ನೆಲೆಯಲ್ಲಿ ಸ್ನಾನ, ಆಸನ, ಆಹಾರ, ವಿಹಾರ ಮತ್ತು ಪಾಲ್ಗೊಳ್ಳಬೇಕಾದ ಕೆಲವು ವಿಧಿವಿಧಾನಗಳನ್ನು ಪತಂಜಲಿಯ ಯೋಗಕಾಲದಿಂದ ನಿರ್ದಿಷ್ಟ ಕ್ರಮದಲ್ಲಿ ಹೇಳಿಕೊಂಡು ಬರಲಾಗಿದೆ.

ಪ್ರತೀ ವ್ಯಕ್ತಿಯ ನಿದ್ರೆ, ಊಟ ಮತ್ತು ನಡೆ-ನುಡಿಗಳ ಜೊತೆಗೆ ದೈಹಿಕ ಪರಿಶುದ್ಧತೆಗೆ ಸಂಬಂಧಿಸಿದ ಸ್ನಾನ, ಉಡುಗೆ ಮುಂತಾದ ಪ್ರಾಥಮಿಕ ತಯಾರಿಗಳು ಇವೆ. ಇದಕ್ಕೊಂದು ಕಟ್ಟುನಿಟ್ಟಿನ ಶಿಸ್ತುಗಳನ್ನು ಅನಿವಾರ್ಯವಾಗಿ ವ್ಯಕ್ತಿ ಪಾಲಿಸಬೇಕು. ಈ ಶಿಸ್ತೇ ಅವನ ಒಳಗಿನ ಮಾನಸಿಕ ಸಿದ್ಧತೆಗೆ ಒಂದು ಅನಿವಾರ್ಯವಾದ ಆಯಾಮವನ್ನು ಒದಗಿಸುತ್ತದೆ. ಈ ರೀತಿಯಲ್ಲಿ ದೈಹಿಕವಾಗಿ ಸಿದ್ಧನಾದ ವ್ಯಕ್ತಿಗೆ ಕೆಲವು ಮಾನಸಿಕ ತಯಾರಿಗಳೂ ಕೂಡ ಮುಂದೆ ತನ್ನ ಸಾಧನಾ ಪಥದಲ್ಲಿ ಅನಿವಾರ್ಯವಾಗಿ ಮೈಗೂಡುತ್ತವೆ. ಸತ್ಯಕಾಮರೂ ಇದನ್ನು ತಂತ್ರಯೋನಿಯಲ್ಲಿ ವಿವರವಾಗಿ ಬರೆಯುತ್ತಾರೆ. [ಪು. ಸಂ. ೧೨೦-೧೨೧ ತಂತ್ರಯೋನಿ, ೨೦೦೮]

ಒಂದು ನಿರ್ದಿಷ್ಟ ಸಮಯಕ್ಕೇ ನಿದ್ರಿಸುವುದು, ಪಾಲಿತ ಸಮಯಕ್ಕೇ ಏಳುವುದು, ಸ್ನಾನವನ್ನು ಸಮಯಕ್ಕನುಗುಣವಾಗಿಯೇ ನಡೆಸುವುದು, ಆಹಾರವನ್ನು ನಿಯಮಕ್ಕೆ ಒಳಪಡಿಸಿಯೇ ಸ್ವೀಕರಿಸುವುದು. ದೈಹಿಕವಾದ ಎಲ್ಲ pleasure ಗಳಿಂದ ತನ್ನನ್ನು ದೂರವಿಡುವುದು ಈ ಮುಂತಾದ ದೈಹಿಕ ರೂಢಿ ಕಾಲಕ್ರಮೇಣ ವ್ಯಕ್ತಿಯ ದೇಹದಲ್ಲಿ ಒಂದು ಎಚ್ಚರವನ್ನು ಮೂಡಿಸಬಲ್ಲದಾಗಿದೆ. ಮನಸ್ಸು ವಾಸ್ತವಿಕ ತುಂಬ ಮನರಂಜನಾಕಾಂಕ್ಷಿ. ಅದು ಬಣ್ಣಬಣ್ಣದ ಬದುಕಿನಲ್ಲಿ ರಮಿಸುತ್ತಿದ್ದಾಗ ಒಳಮುಖ ನಡೆಯದೆ ಹೊರಗೆ ವಿಹರಿಸುತ್ತಿರುತ್ತದೆ. ಒಂದು ನಿರ್ದಿಷ್ಟ ಶಿಸ್ತಿನ ಏಕತನಾತೆ ಎನಿಸುವ ಕ್ರಿಯೆಯಿಂದ ಮನಸ್ಸು ತುಂಬ ಬೇಸರ [Boredom]ಗೆ ಒಳಗಾಗುತ್ತದೆ. ಅಂಥ ಔದಾಸೀನ್ಯದಿಂದ ತನ್ನನ್ನು ಕಳಚಿಕೊಳ್ಳಲು ಮನಸ್ಸು ಬೇರೆ ಬೇರೆ ಉಪಾಯ ಹುಡುಕುತ್ತದೆ. ಹಾಗೆ ಉಪಾಯ ಹುಡುಕುವ ಸನ್ನಿವೇಶದಲ್ಲಿ ಅದಕ್ಕೆ ಹೊರಗೂ

ಇಂದ್ರಿಯದ ಎಲ್ಲ ವೈವಿಧ್ಯಗಳೂ ಇಲ್ಲವಾಗಿ ತನ್ನೊಳಗಿನ ಸರಕನ್ನು ಹೊರಗೆ ತೆಗೆಯುವುದು ಅನಿವಾರ್ಯ ಆಗುತ್ತದೆ. ಆಗ ಮನಸ್ಸು ನಿಧಾನಕ್ಕೆ ತನ್ನ ಕೆಲಸವನ್ನು ಪ್ರಾರಂಭಿಸುತ್ತದೆ.

ಮಾನಸಿಕ ತಯಾರಿ : ಈ ಸ್ಥಿತಿಯಲ್ಲಿ ದೈಹಿಕವಾದ ದಿನಚರಿ [routine]ಗಳಂತೆಯೇ ಕೆಲವು ಮಾನಸಿಕ routineಗಳನ್ನು ವ್ಯಕ್ತಿ ಪಾಲಿಸುತ್ತಾನೆ. ಆಗ ಧ್ಯಾನ, ಪ್ರಾಣಾಯಾಮ, ಪೂಜೆ ಮುಂತಾದವುಗಳಲ್ಲಿ ಕೂಡ ವ್ಯಕ್ತಿ ತಾನೇ ತಾನಾಗಿ ತೊಡಗಿಕೊಳ್ಳುತ್ತಾನೆ.

ಅದಕ್ಕೂ ಕೂಡ ಒಂದು ಖಚಿತ ಸಮಯಪಾಲನೆ ಅವಶ್ಯ. ಹೀಗೆ ಧ್ಯಾನಕ್ಕೆ ಕುಳಿತಾಗ, ಪ್ರಾಣಾಯಾಮ ನಡೆಸುವಾಗ ಮನಸ್ಸು ತನ್ನ ಒಳಗಿರುವ ಸಂಗ್ರಹಗಳನ್ನು ಹೊರಗೆ ಚೆಲ್ಲಿ ವ್ಯಕ್ತಿಯನ್ನು ಬೇರೆ ದಿಕ್ಕಿಗೆ ಸೆಳೆಯಲು ಪ್ರಯತ್ನಿಸುತ್ತದೆ. ಅವನ ಭೂತಕಾಲದ ನೆನಪುಗಳ ಸಂಗ್ರಹವನ್ನು ಮೊದಲು ಪ್ರದರ್ಶಿಸುತ್ತದೆ. ಕ್ರಾಲಕ್ರಮೇಣ ಆ stock ಮುಗಿದ ಬಳಿಕ ನಿಧಾನಕ್ಕೆ ಕನಸು ಮತ್ತು ಕಲ್ಪನೆಗಳ ಲಾಕರನ್ನು ತೆರೆಯುತ್ತದೆ.

ಅದಕ್ಕೂ ಧ್ಯಾನಸ್ಥನಾದವನು ಚಂಚಲನಾಗದೆ ಇದ್ದಾಗ ಅದು ಒಂದು ಮೌನ ಅಂಧಕಾರವನ್ನು ಪ್ರವೇಶಿಸುತ್ತದೆ. ಈ ಗಾಢಕತ್ತಲನ್ನು ವ್ಯಕ್ತಿ ತದೇಕನಾಗಿ ನೋಡುತ್ತಲೇ ಇದ್ದರೆ ಅದು ಮತ್ತೂ ಮುಂದಕ್ಕೆ ಆ ಕತ್ತಲೊಳಗಿನ ಒಂದು ಚುಕ್ಕಿಯಂಥ ಬೆಳಕು. ಅದನ್ನು ಮೀರಿದ ಮಿಂಚಿನಂಥ ಬೆಳಕು. ಇನ್ನೂ ಕಾಲಾಂತರದಲ್ಲಿ ಕಣ್ಣಿಗೆ ಹೊಡೆಯುವ ಪ್ರಖರ ಬೆಳಕನ್ನು ತೋರುತ್ತದೆ.

ಹೀಗೆ ನಡೆಯುವುದು ಕೇವಲ ಒಂದು ದಿನದ ಘಟನೆಯಲ್ಲ. ಇದು ಸಾಧಕನ ಅರ್ಹತೆಯ ಮೇಲೆ ತಿಂಗಳು, ವರ್ಷಕಾಲಗಳ ಒಂದು ಸುದೀರ್ಘ ಪಯಣ. ಮನಸ್ಸಿನ ಎಲ್ಲ ವೈವಿಧ್ಯವನ್ನು ನೋಡದೆ ಅದರ ಜೊತೆಗೆ ಪಾಲ್ಗೊಳ್ಳುವಿಕೆ ಇರುವವರೆಗೆ ಮನಸ್ಸು ಅದನ್ನು ವಿಸ್ತರಿಸುತ್ತಾ ಹೋಗುತ್ತದೆ. ಅದನ್ನು ಕಾರ್ಯಕಾರಣ, ತರ್ಕ, ಜಿಜ್ಞಾಸೆಗಳು ಮುಗಿದು ಕೇವಲ ಸಾಕ್ಷೀಭಾವದಿಂದ ನೋಡುವ ಅರಿವು ಬರುವವರೆಗೂ ಇದೊಂದು ತಯಾರಿಮಾತ್ರ. ಸಾಕ್ಷೀಭಾವದಿಂದ ನೋಡುವ ಪೂರ್ಣಪ್ರಮಾಣದ ಸ್ಥಿತಿಗೆ 'ಎಚ್ಚರ' ಅಥವಾ 'ಅರಿವು' ಎಂದು ಹೆಸರು.

ಇದು ಸಾಧಕನ ಮನೋದಾರ್ಢ್ಯ ಮತ್ತು ದೈಹಿಕ ಬಲಕ್ಕೆ ಸಂಬಂಧಿಸಿದ್ದು. ಕುಳಿತುಕೊಂಡಲ್ಲಿ ಕುಳಿತುಕೊಳ್ಳಲಾಗದೆ, ನಿತ್ಯವೂ ಮಾಡುವ ಕೆಲಸವನ್ನು ಮಾಡುತ್ತಾ ಆ ಏಕತಾನತೆಯ ಬೇಸರಕ್ಕೆ ಬೆನ್ನು ಹಾಕಿ ಹೋಗುವ ಮಂದಿ ಸಹಸ್ರ. ಅದಕ್ಕೆ ಉಪನಿಷತ್ತು ಇದನ್ನು 'ನಾಯಮಾತ್ಮಾ ಬಲಹೀನೇನ ಲಭ್ಯೋ' ಎಂದು ಸಾರಿದೆ. ಸಾಧನಾ ಪಥದ ಸರ್ವರಿಗೂ ಈ

ಅರ್ಹತೆ ಅನಿವಾರ್ಯ. ಅದಕ್ಕೆ ತಂತ್ರಕೂಡ ಇದು ಧೀರರ ದಾರಿ ಎಂಬುದನ್ನೇ ಹೇಳಿತು. ಮನಸ್ಸು ಪ್ರದರ್ಶಿಸುವ ಭೂತಕ್ಕೆ ಅಂಜಿದರೆ, ಭವಿಷ್ಯದ ಕನಸುಗಳಿಗೆ ಆಶೆಪಟ್ಟು ಜೋತುಬಿದ್ದರೆ ಇಲ್ಲಿ ಸಲ್ಲದು. ಈ ರೀತಿಯ ದೈಹಿಕ ಮತ್ತು ಮಾನಸಿಕ ಸಿದ್ಧನಾದವನು ನಿರಂತರವಾಗಿ 'ಅದು' [that] ಒಂದನ್ನೇ ಧ್ಯಾನಿಸುತ್ತಿರುತ್ತಾನೆ.

ಅದರ ಹೊರತು ಅವನ ಯಾವ ಕ್ರಿಯೆಗಳಲ್ಲೂ ಇನ್ನೊಂದು ಸುಳಿಯದ ಸ್ಥಿತಿ. ಈ ಸ್ಥಿತಿಗೆ 'ಅರಿವು' ಎಂದು ಹೆಸರು. ಬೇರೆಯದು ಸುಳಿಯಲು ಇಲ್ಲಿ ಸೂಜಿಮೊನೆಯ ಜಾಗವಿರದು. ಅದು ಒತ್ತಾಯದಿಂದ ಬರುವಂಥದ್ದಲ್ಲ. ಊಟ, ನಿದ್ರೆಯಷ್ಟೇ ಸಹಜವಾದ ಪ್ರಬಲ ಆಕಾಂಕ್ಷೆ. ಅದನ್ನು ಪಡೆದೇ ತೀರುವನೆಂಬ ನರನರಗಳಲ್ಲಿ ಹರಿಯುವ ಹಸಿವು. ಆ ಅರಿವು ಬಂದವನಿಗೆ ಮುಂದೆ ನಾನಾ ರೀತಿಯ ಪರೀಕ್ಷೆಗಳು ಎದುರಾಗುತ್ತವೆ. ಅದರಲ್ಲಿ ಪ್ರಮುಖವಾಗಿ ಕೆಲಸಮಾಡುವ ವಸ್ತುವೇ ಶಕ್ತಿ.

ಶಕ್ತಿ : ನಾವು ಯಾವುದನ್ನು ಪರಮ ಶಕ್ತಿ [supreme energy] ಎಂದು ತಿಳಿಯುತ್ತೇವೆಯೋ ಅದರ subdivision ಅಥವಾ ಶಾಖೆಗಳೇ ಈ ಶಕ್ತಿಗಳು. ಇದು ಸಾಧಕನ ಸಾಧನಾ ಪಥದಲ್ಲಿ ಒಲಿದು ಬರುವ ಆಮಿಷವೂ ಹೌದು, ಬಲಪರೀಕ್ಷೆಯೂ ಹೌದು. ಶಕ್ತಿಗಳನ್ನು ನೇತ್ಯಾತ್ಮಕ [negative] ಮತ್ತು ಇತ್ಯಾತ್ಮಕ [positive] ಎಂಬ ಹೆಸರಿನಿಂದ ಕರೆವವರುಂಟು. ಶಕ್ತಿ ಅದರಷ್ಟಕ್ಕೆ ಏನೂ ಅಲ್ಲ. ಅದರ ಬಳಕೆಯ ಮೇಲೆ ಶಕ್ತಿಯ ನಿರ್ಣಯ.

ಇಂಥ ಶಕ್ತಿ ಮನುಷ್ಯನ ಒಳಗಣ ಶಕ್ತಿಯ ವಿಸ್ತಾರ [expansion]. Supreme energy ಯನ್ನು ಸೇರುವ ಹಂತದ ಮಧ್ಯಮಾವಸ್ಥೆ. ಆಗ ಸಾಧಕ ಕೇವಲ ಸಾಮಾನ್ಯ ಮನುಷ್ಯನಲ್ಲ, ಆದರೆ ಆ supreme energy ಯ ಹಂತವನ್ನು ತಲುಪಿದವನೂ ಅಲ್ಲ. ಈ ಸ್ಥಿತಿ ಸಾಧ್ಯವಾಗುವುದಕ್ಕೆ ಕೂಡ ಒಂದು ಪ್ರಯೋಗಾವಸ್ಥೆಯನ್ನು ಸಾಧಕ ದಾಟಬೇಕು.

ಶಕ್ತಿಯ ವ್ಯಾಖ್ಯಾನ : ಏನು ಶಕ್ತಿ ಎಂದರೆ? ನಮ್ಮ ಕಣ್ಣಿಗೆ ಕಾಣಿಸುವ ಒಂದು ವಸ್ತುವನ್ನು ಹೀಗೆ ಎಂದು ಹೆಸರಿಸಬಹುದು. ಕಣ್ಣಿಗೆ ಕಾಣಿಸದೆ ಇಲ್ಲಿ ಅಸ್ತಿತ್ವದಲ್ಲಿ ಇರುವುದನ್ನು ಗುರುತಿಸುವುದು ಹೇಗೆ? ಹೆಸರಿಸುವುದು ಹೇಗೆ ? ಹಾಗಂದ ಮಾತ್ರಕ್ಕೆ ಅದನ್ನು ಇಲ್ಲ ಎಂದು ನಿರಾಕರಿಸಿ ಬಿಡಬಹುದೇ?

ಉದಾಹರಣೆಗೆ ಒಂದು ಸ್ವಿಚ್ ಇದೆ. ಅದರಿಂದ ಒಂದು ವಯರ್ ಸಾಗಿ ಮುಂದೆ ಒಂದು ಹೋಲ್ಡರ್‌ಗೆ ಸಂಪರ್ಕ ಆಗಿದೆ. ಹೋಲ್ಡರ್‌ನಲ್ಲಿ ಬಲ್ಬ್ ಇಲ್ಲ. ಈಗ ಸ್ವಿಚ್ 'ಆನ್'ಆದಾಗ

ಮತ್ತು ಆರಿಸಿದಾಗ ವ್ಯತ್ಯಾಸ ಕಾಣಿಸುವುದಿಲ್ಲ. ಯಾಕೆಂದರೆ ಶಕ್ತಿಯನ್ನು ಪ್ರಕಟಿಸುವ ಬಲ್ಬ್ ಎಂಬ ಮಾಧ್ಯಮ ಅಲ್ಲಿ ಇಲ್ಲ. ಆದರೆ ಇದನ್ನು ವಿದ್ಯುತ್ ಇಲ್ಲ ಎಂದು ತೀರ್ಮಾನಿಸಲಾಗದು. ತೀರ್ಮಾನಿಸಿ ಕೈ ತಗುಲಿಸಿದವನಿಗೆ ಏನು ಗತಿ ನಮಗೆ ತಿಳಿದಿದೆ. ಹಾಗೆಯೇ ಶಕ್ತಿ ಕೂಡ, ಸ್ವಿಚ್ ಇದೆ. ವಯರ್ ಕನೆಕ್ಷನ್ ಇದೆ ವಿದ್ಯುತ್ ಪ್ರವಹಿಸುವ ಸಾಧ್ಯತೆಯೂ ಇದೆ. ಆದರೆ ಅದನ್ನು ಪ್ರಕಟಿಸುವ ಮಾಧ್ಯಮ ಇಲ್ಲ.

ಈ ವಿಶ್ವ [cosmic]ದಲ್ಲಿ ಹೀಗೆ ಮಾಧ್ಯಮ ಮುಖೇನ ಪ್ರಕಟವಾಗಬಲ್ಲ ಒಂದು ಶಕ್ತಿಸಂಚಯವಿದೆ. ಮಾಧ್ಯಮ ಸಿದ್ಧವಾದಾಗ ಅಲ್ಲಿ ನೆಲೆನಿಂತು [establish] ತಮ್ಮ ಅಸ್ತಿತ್ವವನ್ನು ಅವು ಪ್ರಕಟಪಡಿಸುತ್ತವೆ. ಆದರೆ ಸಿದ್ಧತೆಯಿಲ್ಲದ ಸಾಧಕನಲ್ಲಿ ಶಕ್ತಿ ಪ್ರವೇಶವಾದರೆ ಅದು ಅವನ ಪ್ರಾಣಕ್ಕೆ ಹಾನಿ. ಅಪೂರ್ಣವಾದ ಬಲ್ಬ್ ಕೆಲವೊಮ್ಮೆ ಹೋಲ್ಡರ್‌ಗೆ ಹಾಕಿ ಸ್ವಿಚ್ ಆನ್ ಮಾಡಿದಾಕ್ಷಣ ಬರ್ಸ್ಟ್ ಆಗುವ ಹಾಗೆ. ಶಕ್ತಿಗಳನ್ನು ತನ್ನೊಳಗೆ ಆವಾಹಿಸಿಕೊಳ್ಳಲು ಸಾಧಕನಲ್ಲೂ ಒಂದು ಪರಿಪೂರ್ಣ ಸಿದ್ಧತೆ ಬೇಕು. ಹಾಗಿಲ್ಲದೆ ಇದ್ದಾಗ ಅನೇಕ ಸಾಧಕರು ಶಕ್ತಿಯ ಪರೀಕ್ಷೆಯಲ್ಲೇ ಸೋತು ಮರಣವನ್ನಪ್ಪಿದ್ದಾರೆ. ಕೆಲವರು ಅದರ ಕೈವಶರಾಗಿದ್ದಾರೆ. ಕೆಲವೇ ಕೆಲವರು ಅದನ್ನು ಕೈವಶಮಾಡಿಕೊಂಡು ಮುಂದಿನ ದಾರಿ ನಡೆದಿದ್ದಾರೆ.

ಆದ್ದರಿಂದ –

1. ಶಕ್ತಿ ಪ್ರವೇಶದಿಂದ ದುರ್ಬಲ ಸಾಧಕ ಮರಣವನ್ನಪ್ಪಬಹುದು.
2. ಶಕ್ತಿ ಪ್ರವೇಶವನ್ನು ಎಚ್ಚರಿಲ್ಲದೆ ಸ್ವೀಕರಿಸಿದ ಸಾಧಕ ಕೇವಲ ಪವಾಡ ಪುರುಷನಾಗಿ ಕಳೆಯಬಹುದು.
3. ಶಕ್ತಿ ಆವಾಹಿಸಿದ ಬಲಿಷ್ಠ ಸಾಧಕ ಅದನ್ನೂ ಮೀರಿ ಮುನ್ನಡೆಯುತ್ತಾನೆ.

ಹೀಗೆ ಮೂರು ಸಾಧ್ಯತೆಗಳು.

ಶಕ್ತಿಗಾಗಿ ಸಿದ್ಧತೆಗಳು : ಈಗಾಗಲೇ ನಾವು ವಿವರಿಸಿದಂತೆ ತಂತ್ರಮಾರ್ಗ ಹಂತ ಹಂತವಾಗಿ ಆ ದೊಡ್ಡದರ ಕಡೆಗೆ ನಡೆಯುವಂಥದು. ಆದ್ದರಿಂದಲೇ ಸಾಧಕನಿಗೆ ಅದು ತರಬೇತಿಯ ರೂಪದಲ್ಲಿ ಪ್ರತಿಯೊಂದನ್ನು ವಿವರಿಸುತ್ತದೆ. ಅಭಿನವಗುಪ್ತ ತನ್ನ ತಂತ್ರಾಲೋಕದಲ್ಲಿ ಇದನ್ನು ತುಂಬ ಸಾಂಗೋಪಸಾಂಗವಾಗಿ ವಿವರಿಸಿದ್ದಾನೆ.

ಹೇಗೆ ದೈಹಿಕ ಸಿದ್ಧತೆ, ಮಾನಸಿಕ ಸಿದ್ಧತೆಗಳ ವಿವರಣೆಯನ್ನು ಈಗಾಗಲೇ ಹೇಳಿದೆಯೋ ಅದೇ ರೀತಿ ಶಕ್ತಿಸಂಪಾದನೆಯ ಉಪಕ್ರಮಗಳನ್ನು ಕೂಡ ಅಭಿನವ ತುಂಬ ಸ್ಪಷ್ಟವಾಗಿ

ವಿವರಿಸುತ್ತಾನೆ. ಅವನು ತಿಳಿಸುವ ಅರ್ಹತೆಯಲ್ಲಿ ಒಂದು ನಿರ್ದಿಷ್ಟ ಸ್ಥಳದ ಆಯ್ಕೆಯೂ ಪ್ರಮುಖವಾದುದು. ಪದೇ ಪದೇ ಸ್ಥಳ ಬದಲಾವಣೆಯೂ ಒಂದು ಮನರಂಜನೆ. ಮನರಂಜನೆಯಿದ್ದಲ್ಲಿ ಮನಸ್ಸು ರಮಿಸಿ ವರ್ಣಮಯವಾಗುತ್ತದೆ. ಆದ್ದರಿಂದ ಒಂದು ನಿಯಮಿತ ಸ್ಥಳ ಅದರ ಅನಿವಾರ್ಯ ಅಂಗ.

ನಾವು ಕುಳಿತುಕೊಳ್ಳಲು ಆಯ್ಕೆ ಮಾಡಿದ ಸ್ಥಳ ಹೆಚ್ಚು ಶಾಂತವಾಗಿರಬೇಕು, ಶುಚಿಯಾಗಿರಬೇಕು. ಅಲ್ಲಿ ನಾವು ಸಾಧನಾ ಸಂಬಂಧಿ ಕೆಲಸಗಳಲ್ಲದ ಊಟ, ನಿದ್ರೆ ಮುಂತಾದ ಕೆಲಸಗಳನ್ನು ಮಾಡಲಾಗದು. ಆ ಸ್ಥಳಕ್ಕೆ ಪಾವಿತ್ರ್ಯ ಒದಗಿಸಲು ಇದು ಅನಿವಾರ್ಯ. [ವಿವರಗಳಿಗೆ ಗಮನಿಸಿ ಪುಟ ೧೮೦-೨೦೦ರವರೆಗೆ ಜಾನ್ ಆರ್. ಡುಪುಚೆ, ೨೦೦೩]. ಇಂಥ ಸ್ಥಳಗಳಲ್ಲಿ ಸಾಧಕ ಮಾಡುವ ಹಂತಹಂತದ ವಿಧಿಗಳಲ್ಲಿ ಮಂಡಲ ಪೂಜೆಯೂ ಒಂದು. ಅದರ ವಿಧಾನಗಳನ್ನು ಅಭಿನವ ಸೋದಾಹರಣವಾಗಿ ವಿವರಿಸುತ್ತಾನೆ. ಶಕ್ತಿಗೆ ಸಂಬಂಧಿಸಿದಂತೆ ಅವನ ಸೂಚನೆಗಳು ಹೀಗಿವೆ. ಮೊದಲಿಗೆ ಸಾಧಕ "ತಾನು ಈ ದೇಹವಲ್ಲ" ಎಂಬುದನ್ನು ನಿರಂತರ ಹೇಳುವುದು. ಮೊದಲಿಗೆ ಅದು ಮಂತ್ರ, ಆ ಬಳಿಕ ಅದು ಮನನ, ಕೊನೆಯಲ್ಲಿ ಅದು ಅನುಭವ. [ಇದು ದಿನ, ಎರಡರ ಕೆಲಸವಲ್ಲ ಎಂಬುದನ್ನು ಸ್ಪಷ್ಟವಾಗಿ ಗಮನಿಸಬೇಕು] ಅಭಿನವನೇ ಹೇಳುವಂತೆ 'ನಾನೇ ಅದು ಎನ್ನುವುದು ಮೊದಲಿಗೆ ಅಡ್ಡಿ, ಆ ಬಳಿಕ ಅನುಭವ' ಇಂತಹ ಸ್ಥಿತಿಯಲ್ಲಿ ನಾನು ಈ ದೇಹವಲ್ಲ ಎಂಬ ನಿರಂತರ ಧ್ಯಾನ ಒಂದು ಖಾಲಿ ಅವಕಾಶವನ್ನು ನಿರ್ಮಾಣ ಮಾಡುತ್ತದೆ. ಆ ಖಾಲಿ ಅವಕಾಶದ ಪರಿಪೂರ್ಣ ಅನುಭವ ಪಡೆದ ವ್ಯಕ್ತಿ ನಿಧಾನಕ್ಕೆ ಕೈಯಲ್ಲಿ, ತೋಳಲ್ಲಿ, ತೊಡೆಯಲ್ಲಿ, ನಾಭಿಯಲ್ಲಿ, ಪಾದದಲ್ಲಿ ಹೀಗೆ ಒಂದೊಂದು ನಿರ್ದಿಷ್ಟ ಅಂಗಾಂಗಕ್ಕೆ ಒಂದೊಂದು ಶಕ್ತಿಯನ್ನು ಕೂಗಿ ಕರೆದುಕೊಳ್ಳಬೇಕು. ಅದು ಕಾಲಕ್ರಮೇಣ ಅಲ್ಲಿ ಬಂದು ಪ್ರತಿಷ್ಠಿತವಾಗುವುದನ್ನು ಸಾಧಕ ಅನುಭವಿಸುತ್ತಾನೆ. ಕೆಲವೊಮ್ಮೆ ಆಯಾಶಕ್ತಿಗೆ ನಿರ್ದಿಷ್ಟ ಶಕ್ತಿಪೀಠಗಳನ್ನು ಸೂಚಿಸಿ ಅಲ್ಲಿಯೇ ಹೋಗಿ ಪ್ರಾರ್ಥಿಸಿ ಆವಾಹಿಸಿದರೆ ಇನ್ನೂ ಹೆಚ್ಚು ಬಲ ಎಂಬ ಸೂಚನೆಯನ್ನು ನೀಡುತ್ತಾನೆ. ಹೀಗೆ ವ್ಯಕ್ತಿ ಕಾಲಕ್ರಮೇಣ ತಾನು ಅಲ್ಲಿ ಇಲ್ಲದೆ ಇನ್ನಾವುದೋ ಇರುವುದನ್ನು ಮತ್ತು ಅದನ್ನು ತಾನು ಅನುಭವಿಸಬಲ್ಲ ಸಾಮರ್ಥ್ಯ ಪಡೆದುದನ್ನು ಗಮನಿಸುತ್ತಾನೆ. ಈ ರೀತಿ ಶಕ್ತಿಗಳನ್ನು ತಮ್ಮೊಳಗೆ ಪ್ರತಿಷ್ಠಾಪಿಸಿಕೊಂಡ ಸಾಧಕ ಸಿದ್ಧಪುರುಷನಾಗುತ್ತಾನೆ. ಪುರುಷ ಸಿದ್ಧ [Ready] ನಾದುದರ ಸೂಚನೆ ಮಾತ್ರ ಇದು ಯಾವುದಕ್ಕೆ ಸಿದ್ಧ ಎಂಬುದು ಪ್ರಶ್ನೆ. ಇವನೇ ಸಿದ್ಧಪುರುಷ ಎಂದು ನಿಲ್ಲುವುದು ಒಂದು ಬಗೆ. ಯಾವುದಕ್ಕೆ ಸಿದ್ಧ ಎಂಬ ಅರಿವಿನಿಂದ ನಡೆಯುವುದು ಇನ್ನೊಂದು ಬಗೆ.

ಶಕ್ತಿಯ ಸಾಧ್ಯತೆಗಳು :

ಶಕ್ತಿಯನ್ನು ಆವಾಹಿಸಿಕೊಂಡ ವ್ಯಕ್ತಿಯ ಪರಿಣಾಮಗಳು ಮೂರು.

1. ಶಕ್ತಿಯನ್ನು ಆವಾಹಿಸಿಕೊಳ್ಳಲು ದೈಹಿಕವಾಗಿ ಸಿದ್ಧನಾದ ವ್ಯಕ್ತಿಗೆ ಮಾನಸಿಕವಾದ ಯಾವುದೇ ದೌರ್ಬಲ್ಯ, ಅನುಮಾನ ಸಂಭವಿಸಿದ ಪಕ್ಷದಲ್ಲಿ ಅವನು ಧೂಳೀಪಟನಾಗಬಹುದು. ಆಗ ಅವನಿಗೆ ಶಕ್ತಿಯನ್ನು ಆವಾಹಿಸಿಕೊಳ್ಳುವ ಕುತೂಹಲ, ಛಲ ಇದ್ದರೂ ಶಕ್ತಿ ಒಳಗೆ ಕುಳಿತು ಪ್ರಕಟಿಸುವ ವೇಳೆಗೆ ಅದರ ಬಲ ತಾಳಲಾಗದ ಭಯ ಹುಟ್ಟಿದರೆ, ಅದರ ಸಾಮರ್ಥ್ಯದ ಕುರಿತ ಅನುಮಾನವಾದರೆ ವ್ಯಕ್ತಿ ಒಂದೋ ಹುಚ್ಚನಾಗಲಿಕ್ಕೆ ಸಾಕು. ಅಥವಾ ಅವನು ಆತ್ಮಹತ್ಯೆ ಮಾಡಿಕೊಳ್ಳಬಹುದು. ಇವೆರಡೂ ಅಲ್ಲದೆ ಅವನು ಆಕಸ್ಮಿಕ ಮರಣಕ್ಕೂ ಒಳಗಾಗಬಹುದು. ಅದಕ್ಕೆ ಸಾಮಾನ್ಯವಾಗಿ ಶಕ್ತಿ ಸಂಚಯಗಳನ್ನು ಗುರುವಿನ ಉಪಸ್ಥಿತಿಯಲ್ಲಿ, ಗುರುಮುಖೇನ ಪಡೆಯಬೇಕು ಎಂಬ ಎಚ್ಚರಿಕೆಯೂ ಇದೆ.

2. ಶಕ್ತಿಯನ್ನು ತನ್ನ ಸಾಧನೆಗಳಿಂದ ಸಾಧಕ ಪಡೆದ ಬಳಿಕ ಅವನು ಮೈಮರೆಯಬಹುದು. ತಾನು ಇಷ್ಟು ದಿನ ಮಾಡಿದ ತಪಸ್ಸಿಗೆ ಫಲ ದೊರಕಿತು ಎಂದು ಬೀಗಬಹುದು. ಇದರಿಂದ ತಾನು ದೈವತ್ವವನ್ನೇ ಪಡೆದೆನೆಂಬ ಭಾವ ತಲುಪಲಿಕ್ಕೆ ಸಾಕು. ಏಕೆಂದರೆ ಯಾವುದು ಮನುಷ್ಯ ಮಾತ್ರನಿಗೆ ಅಸಾಧ್ಯವೋ ಅವೆಲ್ಲವೂ ಈಗ ಇವನಿಂದ ಸಾಧ್ಯವಾಗಿರುತ್ತದೆ. ಆ ಕಾರಣಕ್ಕಾಗಿ ಸಾಧಕ ಆ ಕ್ಷಣದಲ್ಲಿ ಅದನ್ನು ತನಗೆ ಇದು ದೈವ ಸಾಕ್ಷಾತ್ಕಾರವೇ ಎಂದು ತಿಳಿಯುವ ಎಲ್ಲ ಸಾಧ್ಯತೆಯೂ ಇದೆ. ಹಾಗೆ ತಿಳಿದು ಆ ಶಕ್ತಿಗೆ ಒಲಿದವನನ್ನು ಶಕ್ತಿ ತನ್ನ ಕೈವಶ ಮಾಡಿಕೊಳ್ಳುತ್ತದೆ. ಅಂಥ ಸಾಧಕ ನಿರಂತರವಾಗಿ ಪವಾಡಮುಖೇನ ಆ ಶಕ್ತಿಗಳನ್ನು ತಾನು ಪ್ರಕಟಿಸುವ ಮಾಧ್ಯಮವಾಗಿ ಬಿಡುತ್ತಾನೆ. ಹೀಗೆ ಮಾಧ್ಯಮನಾದ ಸಾಧಕನಿಗೆ ತಾನು ಶಕ್ತಿಯ ಕೈವಶನಾದದ್ದರ ಅರಿವು ಬರುವ ವೇಳೆಗೆ ಅದು ಅವನನ್ನು ಮೀರಿ ಬೆಳೆದಿರುತ್ತದೆ. ಅಂತಹ ಸಂದರ್ಭಗಳಲ್ಲಿ ಮೊದ ಮೊದಲು ಪವಾಡಗಳನ್ನು ದೇವಶಕ್ತಿ ಎಂದು ನಂಬಿ ಮೆರೆದ ಸಾಧಕ ಕಾಲಕ್ರಮೇಣ ದುರ್ಬಲನಾಗುತ್ತಾ ಹೋಗುತ್ತಾನೆ. ಶಕ್ತಿ ತಾನು ಪ್ರಕಟವಾಗಲು ಇವನನ್ನು ಬಳಸುವುದರಿಂದ ಇವನ ಶಕ್ತಿ ಹ್ರಾಸವಾಗುತ್ತದೆ. ಮುಂದೆ ಅವನೂ ಕೂಡ ಒಬ್ಬ ಸಾಮಾನ್ಯನಂತೆ ರೋಗದಿಂದ ಅಥವಾ ದೈಹಿಕ ದೌರ್ಬಲ್ಯಗಳಿಂದಲೇ ಬದುಕು ಮುಕ್ತಾಯಗೊಳಿಸುವ ಸಾಧ್ಯತೆ ಹೆಚ್ಚು.

ಒಂದು ಹೋಲ್ಡರ್‌ನಲ್ಲಿರುವ ಟ್ಯೂಬ್ ನಿರಂತರ ಉರಿಯುವುದರಿಂದ ಕಾಲಕ್ರಮೇಣ ಟ್ಯೂಬ್ ಕಪ್ಪಿಡುವ ಹಾಗೆ ಈ ಕ್ರಮ. ಮುಂದೆ ಟ್ಯೂಬ್ ರಿಪ್ಲೇಸ್ ಮಾಡಬೇಕು. ಹಾಗೆಯೇ ಇಲ್ಲಿ

ಕೂಡ. ಯಾವಾಗ ವ್ಯಕ್ತಿ ದುರ್ಬಲನಾಗುತ್ತಾ ಹೊರಡುತ್ತಾನೆ ಆಗ ಶಕ್ತಿಗಳೂ ಕೂಡ ನಿಧಾನಕ್ಕೆ ಅಲ್ಲಿಂದ ಕಾಲ್ತೆಗೆಯುತ್ತವೆ. ಪ್ರಕಟಣೆಗೆ ಮಾಧ್ಯಮ ಅನಿವಾರ್ಯವಾಗಿ ಬೇಕು. ಆ ಮಾಧ್ಯಮವೇ ದುರ್ಬಲವಾದಾಗ ಹೊಸ ಮಾಧ್ಯಮದ ಹುಡುಕಾಟಕ್ಕೆ ತೊಡಗುತ್ತದೆ. ಇದರ ಮತ್ತೊಂದು ಸಾಧ್ಯತೆ ಬಲಿಷ್ಠ ಸಾಧಕನದು. ತಾನು ಶಕ್ತಿಗಳಿಗೆ ಮಾಧ್ಯಮವಾದಾಗ ಆ ಎಚ್ಚರ ಈ ಸಾಧಕನಿಗೆ ಇದೆ. ಆದರೆ ಅವನು ಇದು ನನ್ನ ಕೈವಶ ಇರಬೇಕೇ ಹೊರತು ನಾನು ಇದರ ಕೈವಶ ಆಗಬಾರದು. ತನಗೆ ಇದು ಅಂತಿಮ ಅಲ್ಲ. ಇನ್ನು ಮುಂದೆ ನಡೆಯಲಿಕ್ಕೆ ಇದೆ ಎಂಬ ಕಾರಣಕ್ಕೆ ಅದರ ಕುರಿತು ನಿರಾಕರಣೆಯೂ ಇಲ್ಲದೆ, ದೇವಶಕ್ತಿ ಎಂಬ ಪೂಜ್ಯಭಾವವೂ ಇಲ್ಲದೆ ತಾನು ಸೇರಬೇಕಾದ ಗಂತವ್ಯದ ಕಡೆಗೆ ನಡೆಯುತ್ತಾನೆ. ಹೀಗೆ ನಡೆಯುವವನು ದಾರಿಯಲ್ಲಿ ಎಂದೂ ಅದನ್ನು ಬಳಸುವುದಿಲ್ಲ. ತನ್ನ ಹಿರಿಮೆಯನ್ನು ತೋರಿಸಲು ಪವಾಡ ರೂಪವಾಗಿ ಪ್ರದರ್ಶಿಸುವುದೂ ಇಲ್ಲ. ಆ ಸಾಧಕ ಶಕ್ತಿಯ ಕೈವಶವಾಗುವ ಬದಲು ಶಕ್ತಿಯನ್ನು ತನ್ನ ಕೈವಶಮಾಡಿಕೊಳ್ಳುತ್ತಾನೆ.

ಶಕ್ತಿ ಸಂಪಾದನೆಯ ಸಾಧ್ಯತೆಗಳು :

1. ದೇವಮಾರ್ಗಕ್ಕೆ ಆಕಸ್ಮಿಕ ಪ್ರವೇಶ ಪಡೆದ ಸಾಧಕನಿಗೆ ಅದರ ಪರಿಣಾಮ ಬೇರೆ. ಒಂದು ಮೂರ್ಛೆಯಿಂದ ದೇವದಾರಿಗೆ ಬಂದ ಕನಕದಾಸ. ಸಾವಿನ ಭಯಕ್ಕೆ ತನ್ನನ್ನು ಮುಡಿಪಿಟ್ಟು ಅದನ್ನೇ ಧ್ಯಾನಿಸಿದ ರಮಣ ಮಹರ್ಷಿ ಇವರಲ್ಲಿ ಈ ಶಕ್ತಿ ಇದೆ. ಅವರು ಅದಕ್ಕಾಗಿ ಪ್ರಾರ್ಥಿಸಿದವರಲ್ಲ. ದೊಡ್ಡದು ಬಂದು ನೆಲೆಯೂರುವಾಗ ಸಣ್ಣವು ತಾವೇ ಬಂದು ಕೈಂಕರ್ಯ ಮಾಡುವ ಹಾಗೆ ಇದು ಒಂದು ರೀತಿ.

2. ದೊಡ್ಡದನ್ನು ಹುಡುಕಿ ಹೊರಡುವುದೇ ಸಾಧನೆ ಎಂಬ ದಾರಿಯಲ್ಲಿ ಇದು ಒಂದು ಆಮಿಷ ಅಥವಾ ವಶೀಲಿ. ಉದಾಹರಣೆಗೆ ಬ್ಯಾಂಕ್ ಒಂದು ವ್ಯವಸ್ಥೆ. ಅಲ್ಲಿ ಒಬ್ಬ ಚೇರ್‌ಮನ್ ಅನ್ನುವುದು ಅಂತಿಮ ಹುದ್ದೆ [supreme post]. ಕ್ಲರ್ಕ್ ಆಗಿ ಸೇರಿಕೊಂಡವನಿಗೆ ಚೇರ್‌ಮನ್ ಆಗಲು ಎರಡು ಮಾರ್ಗ. ಪ್ರಾಮಾಣಿಕ ದುಡಿಮೆ, Perfection, ಪರಿಣತಿ, ಅನೇಕ ಪರೀಕ್ಷೆಗಳ ತೇರ್ಗಡೆ, ಈ ಮುಖೇನ ಹಂತ ಹಂತವಾಗಿ ಪ್ರಮೋಶನ್ ಪಡೆಯುತ್ತಾ ಕಾಲಾಂತರದಲ್ಲಿ ಒಂದು ದಿನ ಚೇರ್‌ಮನ್ ಆಗುವುದು.

ಇನ್ನೊಂದು ಸರಳದಾರಿ. ಚೇರ್‌ಮನ್ ಆಗುವ ಎಲ್ಲ ವಶೀಲಿ, ಧನಪ್ರಯೋಗ ಮುಂತಾದುವುಗಳ ಮುಖಾಂತರ ಒಂದು ಬೆಳಗಾಗುವುದರ ಒಳಗೆ ಆ ಸೀಟಿನಲ್ಲಿರುವುದು. ಎರಡರಲ್ಲಿಯೂ ಚೇರ್‌ಮನ್ ಆಗಬೇಕು ಎನ್ನುವುದು ಪ್ರಾಥಮಿಕ ಅರ್ಹತೆ.

ಇಲ್ಲಿಯೂ ಹಾಗೆ ದೇವನ ಪರಮಶಕ್ತಿ [supreme energy] ಕಡೆಗೆ ಸೇರುವ ಹಸಿವು ತುಂಬ ತೀವ್ರವಾಗಿದೆ. ಅಂಥ ಸಂದರ್ಭದಲ್ಲಿ ಇವನ ಎಲ್ಲ ಪ್ರಾಥಮಿಕ ಅರ್ಹತೆಗಳೂ ಚೆನ್ನಾಗಿವೆ. ಶಕ್ತಿಗಳ ಜೊತೆಗೆ ಹೇಗೆ ವರ್ತಿಸುತ್ತಾನೆ ಎಂಬುದರ ಪರೀಕ್ಷೆಗೆ ಇಂಥ ಒಂದು ಆಮಿಷ ರೂಪದಲ್ಲಿ ಇವು ಪ್ರವೇಶಿಸುತ್ತವೆ. ಮುಗ್ಧನಾಗಿ ಅಜ್ಞಾನದಿಂದ ಇದೇ ದೇವನೆಂದು ನಂಬಿನಡೆದ ಸಾಧಕನು ನಿಲ್ಲುತ್ತಾನೆ.

ಇದೇ ದೇವನಿರಲಿಕ್ಕಿಲ್ಲ ಇದರಾಚೆಗೂ ಇದ್ದೀತೆಂದೂ ಅನುಮಾನಿಸಿ ಅವುಗಳ ಪ್ರಯೋಗಕ್ಕೆ ಹೋಗದೆ ನಡೆಯುವವನು ಮುಂದುವರಿಯುತ್ತಾನೆ. ಅದಕ್ಕೆ ಆಧ್ಯಾತ್ಮದಲ್ಲಿ ನಂಬಿಕೆಯಷ್ಟೆ ಸಂಶಯಕ್ಕೂ ಮುಖ್ಯಸ್ಥಾನ.

ರಜನೀಶ್ ಬಾರಿ ಬಾರಿಗೆ doubt every thing then proceed ಅಂತ ಸಾಧಕನನ್ನು ಎಚ್ಚರಿಸುತ್ತಾನೆ. ಹಾಗೆಯೇ ಸತ್ಯಕಾಮರು ಕೂಡ ಪ್ರತೀ ಸಂಶಯವೂ ನಂಬಿಕೆಯಲ್ಲಿ ಮುಕ್ತಾಯವಾಗಬೇಕು, ಪ್ರತೀ ನಂಬಿಕೆಯು ಸಂಶಯದಿಂದ ಆರಂಭವಾಗುತ್ತದೆ ಎಂಬ ಮಾತನ್ನು ಹೇಳುತ್ತಾರೆ. "ಮೊದಲು ನಂಬಿರಿ, ಮತ್ತೆ ಶಂಕಿಸಿರಿ. ಶಂಕೆ ನಂಬಿಕೆಯನ್ನು ದೃಢೀಕರಿಸದಿದ್ದರೆ ಆ ಶಂಕೆ ಹಾನಿಕಾರಕ". [ತಂತ್ರಯೋನಿ, ೨೦೦೮, ಪು. ಸಂ. ೨೦೨].

ಶಕ್ತಿಯ ಜೊತೆಗೆ ರಜನೀಶ್ ಮತ್ತು ಸತ್ಯಕಾಮರು : ರಜನೀಶ ತನ್ನ ಅನುಭವಗಳನ್ನು ಎಲ್ಲಿಯೂ ತಾನಾಗಿ ಕೃತಿಯಲ್ಲಿ ವಿವರಿಸಿಲ್ಲ. ಹಾಗೆಯೇ ತನ್ನ ಯಾವುದೇ ಪ್ರವಚನಗಳಲ್ಲೂ ಅವನು ತನ್ನ ಅನುಭವ ವಿವರಿಸಿಲ್ಲ. ಅಲ್ಲಿ ಇಲ್ಲಿ ತನ್ನ ಶಾಲಾ ಜೀವನ, ಕಾಲೇಜು ಜೀವನದ ಕೆಲಘಟನೆಗಳನ್ನು ವಿವರಿಸಿರಬಹುದೇ ಹೊರತು ಅವನ ಸಾಧನಾಪಥದ ವಿವರ ತಾನಾಗಿ ತಿಳಿಸಿಲ್ಲ.

ಆದ್ದರಿಂದಲೇ ಅವನ ಕುರಿತ ಅನೇಕ ಕಟ್ಟುಕತೆಗಳು, ಊಹಾಪೋಹಗಳು, ಮತ್ತು ಕೆಲವು ಶಿಷ್ಯರ ವಿವರಣೆಗಳು ನಮಗೆ ದೊರೆಯುತ್ತವೆ. ಉದಾಹರಣೆಗೆ ಮಧ್ಯಪ್ರದೇಶದ ಭೋಪಾಲಿನ ಒಬ್ಬ ತಾಯಿ ನನ್ನ ಬಳಿ ತಾನು ರಜನೀಶ ಚಿಕ್ಕವನಾಗಿದ್ದಾಗಿಂದ ನೋಡಿದ್ದಾಗಿಯೂ, ಅವನು ದಾರಿಯಲ್ಲಿ ರಿವರ್ಸ್ ನಡೆಯಲ್ಲಿ ತುಂಬ ನಿಪುಣನೆಂದೂ, ಎಂದೂ ಹಿಂತಿರುಗಿ ನೋಡದೆ ಮುಂದೆ ನಡೆವಷ್ಟೇ ವೇಗವಾಗಿ ನಡೆಯುತ್ತಿದ್ದನೆಂದೂ ವಿವರಿಸಿದ್ದಾರೆ. [ಇದನ್ನು ನನಗೆ ತಿಳಿಸಿದವರು ಪ್ರಸ್ತುತ ಮಣಿಪಾಲದಲ್ಲಿರುವ ತನ್ಮಯಗೋಸ್ವಾಮಿ ಎಂಬ ವೈದ್ಯ. ಅವರ ತಾಯಿ ಈ ವಿವರ ನೀಡಿದ್ದರಂತೆ] ಹಾಗೆಯೇ ಅವನು ಗಣಿತದ ತರಗತಿಯಲ್ಲಿ ಪೂರ್ತಿ ನಿದ್ರಿಸುತ್ತಿದ್ದನೆಂದೂ. ಒಮ್ಮೆ ಶಿಕ್ಷಕರು ಎಬ್ಬಿಸಿ 'ನಿದ್ರಿಸಿಯೂ 100ಕ್ಕೆ 99 ಅಂಕ ಹೇಗೆ ತೆಗೆದುಕೊಳ್ಳುತ್ತಿ ?' ಎಂದು

ಗದರಿಸಿದಾಗ 'ನೀವು ಎಚ್ಚರಿಸಿದಿರಿ, ಇಲ್ಲದೆ ಇದ್ದರೆ 100ಕ್ಕೆ 100 ತೆಗೆದುಕೊಳ್ಳುತ್ತಿದ್ದೆ' ಎಂದು ತಾನು ಉತ್ತರಿಸಿದೆ ಎಂಬಂತೆ ಜೋಕ್ ರೂಪದಲ್ಲಿ ಭಾಷಣದಲ್ಲಿ ಹೇಳಿಕೊಂಡಿದ್ದಾನೆ.

ಇದಲ್ಲದೆ ಅವನ ಅನೇಕ ನಿಕಟವರ್ತಿಗಳು ಅವನಿಗೆ ತುಂಬ ಶಕ್ತಿಗಳಿದ್ದವು. ಸಮ್ಮೋಹಿನಿ, ವಶೀಕರಣ ಅಂತಹ ಶಕ್ತಿಗಳಲ್ಲಿ ಕೆಲವು. ಆದ್ದರಿಂದಲೇ ಅವನು ತನಗೆ ಬೇಕಾದ ಹೆಣ್ಣು ತನ್ನ ಬಳಿ ಬರುವಂತೆ ಮಾಡುತ್ತಿದ್ದ. ಮತ್ತೆ ಯಾರಾದರೂ ತನ್ನನ್ನು ಪ್ರತಿಭಟಿಸಿ ಹೋಗಬಹುದಾದವರನ್ನು ವಶೀಕರಣ ಮೂಲಕ ಹೋಗದಂತೆ ತಡೆಯುತ್ತಿದ್ದ ಎಂಬಂಥ ಮಾತುಗಳು ಪ್ರಚಲಿತ ಇವೆ. ಸಮರ್ಥನೆಗೆ ಆಧಾರಗಳಿಲ್ಲ. ಅವನ ಕೆಲವು ವಿಡಿಯೊ ಚಿತ್ರೀಕರಣಗಳು ಅವನು ಕಣ್ಣರೆಪ್ಪೆಗಳನ್ನು ಮುಚ್ಚದೆಯೇ ಇರುವ ಒಂದು ಅನಿಮಿಷತ್ವವನ್ನು ನಮಗೆ ತೋರಿಸುವ ಸಾಕ್ಷಿಗಳಾಗಿ ಉಳಿದಿವೆ. ಅನಿಮಿಷರು ಎಂದು ದೇವತೆಗಳಿಗೆ ಇರುವ ಹೆಸರು. ಕಣ್ಣು ಮಿಟುಕಿಸದ ಕಾರಣ ಆ ಹೆಸರು ಅವರಿಗೆ ಬಂತು. ರಜನೀಶ ದೇವತೆ ಆಗಲು ಹಾಗೆ ರೂಢಿಸಿಕೊಂಡನೋ, ಅವನಿಗೆ ಆ ಶಕ್ತಿಗಳೆಲ್ಲ ಕೈವಶವಾದ ಪರಿಣಾಮ ಅನಿಮಿಷನಾದನೋ ಸಾಧಾರಗಳಿಲ್ಲ.

ಆದರೆ ವ್ಯಕ್ತಿಯೊಬ್ಬ ಒಂದು ಬೆಳವಣಿಗೆಯ ಹಂತವನ್ನು ತಲುಪಿದಂತೆ ಆಕರ್ಷಕನೂ ತೇಜಸ್ವಿಯೂ ಆಗಿ ತನ್ನೆಡೆಗೆ ಸೆಳೆಯುತ್ತಾನೆ ಎಂಬ ಮಾತಿಗೆ ಅನ್ವರ್ಥದಂತೆ ಅವನ ವ್ಯಕ್ತಿತ್ವ ಇದ್ದ ವೈಯಕ್ತಿಕ ಅನುಭವಗಳು ಸಾಕಷ್ಟು ಇವೆ. ವೈಯಕ್ತಿಕವಾಗಿ ಭೇಟಿಯಾಗಿ ಬಂದಿದ್ದ ಡಾ. ನಿ. ಮುರಾರಿ ಬಲ್ಲಾಳ್ ಎಂಬ ಸ್ನೇಹಿತರೂ ನನಗೆ ಅಂಥದೇ ಅನುಭವವನ್ನು ಹೇಳಿದ್ದರು. [ಈಗ ದಿವಂಗತರಾಗಿರುವ ಉಡುಪಿಯ ಡಾ. ವಿ. ಮುರಾರಿ ಬಲ್ಲಾಳ್ ರಜನೀಶರನ್ನು ವೈಯಕ್ತಿಕ ಭೇಟಿಯಾದಾಗ ಈ ಮಾತು ಹೇಳಿದ್ದರು] ಆದರೆ ಇವು ಯಾವುದೂ ಅವನಿಗೆ ಶಕ್ತಿ ಕೈವಶ ಆಗಿತ್ತೇ ಅಥವಾ ಅವನು ಶಕ್ತಿಯ ಕೈವಶ ಆಗಿದ್ದನೇ ಎಂಬುದನ್ನು ಸಾಕ್ಷೀಕರಿಸಲು ದಾಖಲೆಗಳಲ್ಲ. ಉಳಿದಂತೆ ಅವನ ಅನೇಕ ವೈಯಕ್ತಿಕ ಪ್ರಯೋಗ, ಅಭ್ಯಾಸಗಳಲ್ಲಿ ಭ್ರೂಮಧ್ಯೆ ಬೆರಳಚ್ಚು ಒತ್ತುವುದು, ನಾಭಿಯಿಂದ ಶಕ್ತಿಯನ್ನು ಊರ್ಧ್ವಮುಖ ಪ್ರಚೋದಿಸಲು ಹೆಬ್ಬೆಟ್ಟಿನಿಂದ ಒತ್ತುವುದು, ಇಂಥ ಪ್ರಯೋಗ ಚಿತ್ರಗಳು ಅವನ ಪುಸ್ತಕಗಳ ಫೋಟೋ ಸಂಗ್ರಹಗಳಲ್ಲಿ ಲಭ್ಯ. ಹಾಗೆಯೇ ಒಂದು ನಿರ್ದಿಷ್ಟ ಹಾಡು ಅಥವಾ ನಿರ್ದಿಷ್ಟ ಮಂತ್ರವನ್ನು ನಿರಂತರ ಪಠಿಸಿ, ಆ ಮೂಲಕ ಮೈ ಮರೆಯುವಂತೆ ಕುಣಿಯಲು ಹೇಳಿ, ಮೂರ್ಛೆ ತಪ್ಪುವವರೆಗೆ ಕುಣಿದು ದಣಿದು ಬೀಳುವ ಪ್ರಯೋಗಗಳನ್ನು ಅವನು ನಡೆಸುತ್ತಿದ್ದ ಉದಾಹರಣೆಗಳಿವೆ. ಇವೆಲ್ಲವೂ ಮಂಡಲಪೂಜೆ, ಅದರ ತಯಾರಿ ಮುಂತಾದ ಅಭಿನವನ ವಿವರಗಳನ್ನೇ ಮಾರ್ಪಾಡು ಮಾಡಿದ advanced ರೀತಿಯ ಹಾಗೆ ಕಾಣಿಸುತ್ತವೆ. [ರಜನೀಶನ ಇಂತಹ ಪ್ರಯೋಗಗಳಿಗೆ ದಾಖಲೆಯ ರೂಪದಲ್ಲಿ ಕೆಲವು

ಛಾಯಾ ಚಿತ್ರಗಳು ಅವನ ಕೃತಿಗಳಲ್ಲಿ ಲಭ್ಯವಿವೆ. ಅಂಥ ಒಂದು ಉದಾಹರಣೆ ಗಮನಿಸಿ 'ದಿ ಪರಫೆಕ್ಟ್ ಮಾಸ್ಟರ್ ಸಂ. ೧;೧೯೭೬-ಈ ಕೃತಿಯ ಕೆಲವು ಚಿತ್ರಗಳನ್ನು ಆಯ್ದು ಕೃತಿಯ ಕೊನೆಯಲ್ಲಿ ಪ್ರಕಟಿಸಲಾಗಿದೆ.]

ಆದ್ದರಿಂದ ಶಕ್ತಿ ಮತ್ತು ಸಿದ್ಧಿಯ ಯಾವ ಪ್ರಯೋಗ ಮತ್ತು ಪ್ರಕಟಣೆಗಳು ರಜನೀಶನಲ್ಲಿ ಕಂಡ ದಾಖಲೆಗಳಿಲ್ಲ. ಆದರೆ ವ್ಯಕ್ತಿಯ ವ್ಯಕ್ತಿತ್ವ ಪ್ರಕಟಿಸುವ ತೇಜಸ್ಸು ಮತ್ತು ಒಂದು ಪ್ರಭಾವಳಿಯ ದೃಷ್ಟಿಯಿಂದ ಅವನು ದುರ್ಬಲನಿಲ್ಲ ಎಂಬುದನ್ನು ಖಚಿತವಾಗಿ ಹೇಳಬಹುದು. ಮತ್ತು ಅಂಥ ಎಲ್ಲ ಬಾಲಿಷ್ಯವೂ ಅವನ ಮಾತೆಂಬ ಕೃತಿಗಳಲ್ಲಿ ಸ್ಪಷ್ಟವಾಗಿದೆ.

ಸತ್ಯಕಾಮರಂತೂ ತನಗೆ ಏನು ಬೇಕು ಎಂಬುದು ಗೊತ್ತಿಲ್ಲದೆ ಮನೆ ಬಿಟ್ಟವರು. ಅವರಿಗೆ ತಿಳಿದಿದ್ದ ಸಂಗತಿ ಮನೆ ಸಣ್ಣದು. ಅದಕ್ಕಿಂತ ದೊಡ್ಡದು ಇಲ್ಲಿರಬೇಕು, ಎಂಬ ಹಸಿವು. ಈ ಹಸಿವು ಸೆಳೆದಲ್ಲಿ ಅವರು ನಡೆಸಿದ್ದಾರೆ. [ವಿವರಗಳಿಗೆ ಪಂಚ'ಮ'ಗಳ ನಡುವೆ, ಕಪಿಲವಸ್ತು ಗಮನಿಸಿರಿ]

ಹಾಗೆ ನಡೆದಾಗ ದಾರಿಯಲ್ಲಿ ಕಂಡ ಎಲ್ಲವನ್ನು ಅವರು ಸ್ವೀಕರಿಸಿದ್ದಾರೆ. ಈ ಸ್ವೀಕರಣಾ ಮನೋಭಾವವೇ ತಂತ್ರದ ಮೊದಲ ಅರ್ಹತೆ. ಆದ್ದರಿಂದಲೇ ಅವರು ಹಂತಹಂತವಾಗಿ ಮಾಟ, ಭೂತ ಬಿಡಿಸುವುದು, ಸ್ತಂಭನ ವಿದ್ಯೆ, ಸಮ್ಮೋಹಿನೀ, ವಶೀಕರಣ ಹೀಗೆ ಎಲ್ಲ ವಿದ್ಯೆಗಳನ್ನು ಕಲಿಯುತ್ತಾ ಒಂದು ದಿನ ತಂತ್ರಶಾಲೆಯನ್ನು ಪ್ರವೇಶಿಸುವ ಸಂದರ್ಭವನ್ನು ಪಡೆಯುತ್ತಾರೆ. ಆದ್ದರಿಂದ ಸತ್ಯಕಾಮರು ಅಭಿನವ ಹೇಳುವ ಎಲ್ಲ ಸಾಧನಾಕ್ರಮಗಳನ್ನು ಸಾಂಗೋಪಸಾಂಗವಾಗಿ ನಡೆದ ವಿವರಗಳು ಅವರ ಕೃತಿಯಲ್ಲಿವೆ.

ತಾನು ಎಲ್ಲ ಶಕ್ತಿಗಳನ್ನು ಪಡೆದ ವಿವರವನ್ನು ಅವರು ಪಂಚ'ಮ'ಗಳ ನಡುವೆ ಸ್ವತಂತ್ರ, ಅರ್ಧದಾರಿ, ಕಪಿಲವಸ್ತು, ತಂತ್ರಯೋನಿ ಕೃತಿಗಳಲ್ಲಿ ಬಿಡಿಬಿಡಿಯಾಗಿ ವಿವರಿಸಿದ್ದರೆ, 'ದೇವನ ಇನ್ನೊಂದು ಬಾಗಿಲು' ಎಂಬ ಅವರ ಕೃತಿ ಸಂಪೂರ್ಣವಾಗಿ ಅವರು ಪಡೆದ ಪ್ರತಿಯೊಂದು ಶಕ್ತಿಗಳ ವಿವರಣೆಯೇ ಆಗಿದೆ. ಅದು ದೇವನ ಇನ್ನೊಂದು ಬಾಗಿಲು – ಅಪರಾಮಾರ್ಗ – ಎಂಬ ಅರಿವು ಅವರಿಗಿತ್ತು.

ಶಕ್ತಿಯನ್ನು ಕೈವಶ ಮಾಡಿಕೊಂಡ ಸತ್ಯಕಾಮರು ಅದನ್ನು ಬಳಸಿದ ರೀತಿ ತುಂಬ ಅಪೂರ್ವವಾದುದು. ಅವರು ಶಕ್ತಿಗೆ ತಾನು ಮಾಧ್ಯಮವಾಗಿದ್ದೇನೆ. ಎಂಬ ಪೂರ್ಣ ಎಚ್ಚರವನ್ನು ಇಟ್ಟುಕೊಂಡು ನಿರ್ಭಾವುಕರಾಗಿ ಅದನ್ನು ಸ್ವೀಕರಿಸಿದವರು.. ಆದರೆ ಯಾವ ಸಂದರ್ಭದಲ್ಲೂ ಅದನ್ನು ಅವರು ವೈಯಕ್ತಿಕ ಅಥವಾ ಸಾರ್ವಜನಿಕ ಉಪಯೋಗಕ್ಕೆ ಬಳಸಿದವರಲ್ಲ. ಕಷ್ಟಪಟ್ಟು ತಾನೇ ಸಂಪಾದಿಸಿದ ಶ್ರೀಮಂತಿಕೆಯ ಬಗ್ಗೆ ತಾನಾಗಿ ಬಂದ ವೈರಾಗ್ಯದ ಹಾಗೆ.

'ಅರ್ಧದಾರಿ' ಕೃತಿಯಲ್ಲಿ ಒಂದು ಪ್ರಸಂಗವಿದೆ. ಅವರು ತಂತ್ರಶಾಲೆಯ ಸಹಪಾಠಿ ವೈಶಾಲಿಯ ಜತೆಗೆ ಒಮ್ಮೆ ಪಾಂಡಿಚೇರಿಗೆ ಬರುತ್ತಾರೆ. ವೈಶಾಲಿಗೆ ಅರವಿಂದರನ್ನು ನೋಡುವ ಆಶೆ. ಆಗ ಅರವಿಂದರು ತನ್ನ ಮನೆಯನ್ನೇ ಗುಹೆ ಮಾಡಿಕೊಂಡಿದ್ದ ಕಾಲ. ವರುಷದ ತನ್ನ ಹುಟ್ಟುಹಬ್ಬ ಆಗಸ್ಟ್ 15ಕ್ಕೆ ಮಾತ್ರ ಹೊರಬಂದು ಟೆರೇಸಿನ ಮೇಲಿಂದ ಜನರಿಗೆ ಕೈಬೀಸುತ್ತಿದ್ದ ಕಾಲ. ಉಳಿದಂತೆ ಮದರ್ ಮಾತ್ರ ಅವರನ್ನು ನೋಡಿಕೊಳ್ಳುತ್ತಿದ್ದ ದಿನ. ಅಂಥ ದಿನಗಳಲ್ಲಿ ವೈಶಾಲಿಗೆ ಅವರನ್ನು ಕಾಣಲೇಬೇಕೆಂಬ ಹಠ. ಆಗ ಅಲ್ಲಿದ್ದ ಸಂದರ್ಶಕರು ಕರ್ನಾಟಕದವರು. ಅವರನ್ನು ಕೇಳೆಂದು ಸತ್ಯಕಾಮರನ್ನು ವೈಶಾಲಿ ಒತ್ತಾಯಿಸಲು, ಅವರು ಕನ್ನಡದ ಪರಿಚಯದಿಂದ ವಿನಂತಿಸುತ್ತಾರೆ. ಸಂದರ್ಶಕರು ಅದು ಅಸಾಧ್ಯ ಎಂಬುದನ್ನು ಪ್ರಾಮಾಣಿಕವಾಗಿ ಸೂಚಿಸುತ್ತಾರೆ. ಆದರೆ ವೈಶಾಲಿಯ ಕನಸು ಮುಗಿಯುವುದಿಲ್ಲ. ಅವಳು ರಾತ್ರಿ ಸಮುದ್ರ ದಡದಲ್ಲಿ ನಿದ್ರೆಗೆ ಹೋಗುವ ಮುನ್ನ ಸತ್ಯಕಾಮರಿಗೆ ಸೂಕ್ಷ್ಮ ಶರೀರದಿಂದ ಹೋಗಿ ನೋಡಿ ಬರೋಣ ಎಂದು ಕರೆಯುತ್ತಾಳೆ. ಹಾಗೆಲ್ಲ ಶಕ್ತಿಯನ್ನೇ ಉಪಯೋಗಿಸಲಾಗದು ಎಂದು ಅವರು ಮನವರಿಕೆ ಮಾಡಿದಾಗ 'ನೀನು ಒಬ್ಬ ಜಿಪುಣ' [ಶಕ್ತಿಯನ್ನು ಬಳಸಲಿಲ್ಲ ಎಂಬ ಕಾರಣಕ್ಕೆ] ಎಂದು ಜರೆದು 'ನೋಡುತ್ತಿರು' ಎಂದು ಹೇಳಿ ಮಲಗುತ್ತಾಳೆ. ಬೆಳಗಿನ ಸೂರ್ಯೋದಯದಲ್ಲಿ ಎಬ್ಬಿಸಿ ತಾನು ಅರವಿಂದರನ್ನು ನೋಡಿದ್ದಾಗಿಯೂ ಅದಕ್ಕೆ ಈ ಡೈರಿಯ ಬರೆಹ ಸಾಕ್ಷಿಯೆಂದು ಅರವಿಂದರು ಮುನ್ನಾದಿನದ ರಾತ್ರಿ ೧೨ಕ್ಕೆ ಬರೆದ ಡೈರಿಯ ಪುಟ ಹರಿದು ತಂದದ್ದನ್ನು ತೋರಿಸುತ್ತಾಳೆ. ಸತ್ಯಕಾಮರು ಅನುಮಾನಿಸಿದಾಗ ಸಂದರ್ಶಕರಿಗೆ ತೋರಿಸಿ ದೃಢಪಡಿಸಿಕೊಳ್ಳಲು ಕೇಳಿಕೊಳ್ಳುತ್ತಾಳೆ. ಸಂದರ್ಶಕ ಮದರ್ ಮುಖಾಂತರ ದೃಢಪಡಿಸುತ್ತಾನೆ ಕೂಡಃ ಇದು ಸೂಕ್ಷ್ಮ ಶರೀರ ಗಮನ. ಈ ಸಾಧ್ಯತೆಯ ಪಾಠವನ್ನು ಸತ್ಯಕಾಮರು ವೈಶಾಲಿಯ ಜೊತೆಗೆ ಕಲಿತವರು. ಆದರೆ ಅವರು ಇದನ್ನು ಬಳಸಲಿಲ್ಲ. [ಈ ವಿವರವನ್ನು ೧೯೯೫ರಲ್ಲಿ ನನ್ನನ್ನು ಪಾಂಡಿಚೇರಿಗೆ ಕರೆದುಕೊಂಡು ಹೋದಾಗ ಸತ್ಯಕಾಮರು ವಿವರಿಸಿದ್ದರು. ಅರ್ಧದಾರಿ ಕೃತಿಯಲ್ಲಿ ಸತ್ಯಕಾಮರ ಕುರಿತ ವಿವರಣೆ ಇಲ್ಲ ಕೇವಲ ವೈಶಾಲಿ ವಿವರಣೆ ಇದೆ].

ಇದೊಂದು ಮಾತ್ರವಲ್ಲ ತಾನು ಸಂಪಾದಿಸಿದ ಯಾವ ಶಕ್ತಿಯನ್ನು ಬಳಸದ ಒಂದು ಹಠ ಅವರಲ್ಲಿತ್ತು. ಅವರೇ ತನ್ನ ಅನೇಕ ಬದುಕಿನ ಘಟನೆಗಳಲ್ಲಿ ಮತ್ತು ಬರೆಹಗಳಲ್ಲಿ ಅದನ್ನು ವಿವರಿಸಿದ್ದಾರೆ. ಯಾವುದಾದರೂ ವ್ಯಕ್ತಿ ತನ್ನ ಜೊತೆಗೆ ನಡೆದ ಸತ್ಯಕಾಮರ ಒಂದು ಪ್ರಭಾವವನ್ನು ಪವಾಡ ಸದೃಶವಾಗಿ ವಿವರಿಸಿದಾಕ್ಷಣ ಅವರು ಅದನ್ನು ಸಹಜವಾಗಿ ನಡೆದ ಘಟನೆ ಅನಗತ್ಯವಾಗಿ ವೈಭವೀಕರಿಸುತ್ತಿದ್ದಾರೆ ಎಂಬರ್ಥದಲ್ಲಿ ವಿವರಿಸುತ್ತಿದ್ದರು. ಸತ್ಯಕಾಮರ ಮನೆಯಲ್ಲೊಂದು ನೀರಿನ ತೊಟ್ಟಿಯಿತ್ತು. ನೆಲದಿಂದ ಕೇವಲ ಒಂದೂವರೆ ಅಡಿ ಅದರ ಎತ್ತರ.

ಒಮ್ಮೆ ಊರಿಗೆ ಹೊರಡುವ ವೇಳೆ 'ತೊಟ್ಟಿ ಏರಿಸುತ್ತೀರಾ, ಯಾರಾದರೂ ಬಿದ್ದು ಸಾಯಬೇಕಾ' ಕೇಳಿ ಹೋದರು. ಅವರು ಹೋದ ಎರಡನೆಯ ದಿನಕ್ಕೆ ಅವರ ತಮ್ಮನ ಮಗು ತೊಟ್ಟಿಗೆ ಬಿದ್ದು ಪ್ರಾಣ ಕಳೆದುಕೊಂಡಿತ್ತು. ಇದನ್ನು ನನಗೆ ವಿವರಿಸುವಾಗ ಅವರ ತಮ್ಮನ ಹೆಂಡತಿಯ ಕಣ್ಣಲ್ಲಿ ಸತ್ಯಕಾಮರಿಗೆ ಮುಂದಾಗುವುದು ಕಾಣುತ್ತದೆ. ನಮಗೆ ತಿಳಿಯಲಿಲ್ಲ ಎಂಬ ಭಾವವಿತ್ತು. ನಾನವರನ್ನು ಆ ಕುರಿತು ಪ್ರಶ್ನಿಸಿದಾಗ 'ಅದು ಸಾಮಾನ್ಯಜ್ಞಾನ' [commensence] ಮಗಳೆ, ಅದಕ್ಕೇನು ದಿವ್ಯದೃಷ್ಟಿ ಬೇಡ ಎಂಬ ವಿವರ ನೀಡಿ ತುಂಬ ವಾಸ್ತವಿಕತೆಗೆ [practical sense] ಎಳೆದು ತರುತ್ತಿದ್ದರು. [ಸತ್ಯಕಾಮರ ತಮ್ಮ ವಸಂತ ಕೃಷ್ಣಾಚಾರ್ಯರ ಪತ್ನಿ ವಿವರಿಸಿದ್ದು]

ಇನ್ನೊಮ್ಮೆ ವೀಳ್ಯ ತಿಂದು ಉಸಿರು ನಿಂತು ನಾಲಿಗೆ ಜೋತು ಬಿದ್ದ ತಾಯಿ ಮನೆಯಲ್ಲಿದ್ದರು. ಸತ್ಯಕಾಮರನ್ನು ಕೂಗಿ ಕರೆಯಲಾಯಿತು. ಸತ್ಯಕಾಮರು ಅವರನ್ನು ತಾಯಿ ಎಂದೇ ನಂಬಿ ಬದುಕಿದ್ದರು. ಕೂಡಲೇ ಬಂದ ಸತ್ಯಕಾಮರು ಮಗ್ಗಲು ಬಿದ್ದ ನಾಲಿಗೆಯನ್ನು ನೆಕ್ಕುತ್ತಾ ನೆಕ್ಕುತ್ತಾ ತಾಯಿಗೆ ಹೋದ ಪ್ರಜ್ಞೆ, ಉಸಿರು ನಿಧಾನಕ್ಕೆ ಮರಳಿ ಬಂದಿತು. ಇದು ಆ ತಾಯಿಯ ಕೈ ಹಿಡಿದ ಪತಿ ನನಗೆ ನೀಡಿದ ವಿವರಣೆ. ಸತ್ಯಕಾಮರು ನಾನು ಕೇಳಿದಾಗ, 'ಮಗಳೇ, ಆ ನಾಲಿಗೆಗೆ ವೀಳ್ಯದೆಲೆಯ ಯಾವುದೋ ವಿಷವಿತ್ತು. ಅದನ್ನು ನನ್ನ ನಾಲಿಗೆಯಿಂದ ಶುಚಿಗೊಳಿಸಿದೆ. ಅದನ್ನು ಯಾರೂ ಮಾಡಬಹುದು. ಅದರಲ್ಲೇನಿದೆ? ಎಂದು ಬಿಡಿಸಿಕೊಂಡಿದ್ದರು. [ಗುರುರಾಜ ಹಬ್ಬು ಮತ್ತು ಅವರ ಪತ್ನಿ 40 ವರ್ಷಕ್ಕೂ ಮಿಕ್ಕು ಸತ್ಯಕಾಮರ ಜತೆಗಿದ್ದವರು. ಗುರುರಾಜ ಹಬ್ಬು ಅವರ ಪತ್ನಿಯ ಬದುಕಿನ ಈ ಘಟನೆಯನ್ನು ಗುರುರಾಜ ಹಬ್ಬು ಅವರು ನನಗೆ ವಿವರಿಸಿದ್ದರು. ಹಬ್ಬು ಅವರು ಈಗಲೂ ಸತ್ಯಕಾಮರು ಇದ್ದ ಮನೆಯಲ್ಲೇ ವಾಸವಿದ್ದಾರೆ].

ಇಂಥ ಸಣ್ಣಪುಟ್ಟ ಘಟನೆಗಳಲ್ಲದೆ ಇವರ ಕುರಿತು .ಇನ್ನು ಅನೇಕ ಊಹಾಪೋಹಗಳಿವೆ. ದೇವೇಗೌಡರು ಪ್ರಧಾನಿಯಾಗಲು ಇವರು ಮಾಡಿದ ತಂತ್ರ ಪ್ರಯೋಗವೇ ಕಾರಣ. ನಾನು ವೃತ್ತಿ, ಮನೆ, ಮಠ ಬಿಟ್ಟು ಬರಲು ಇವರ ವಶೀಕರಣ ವಿದ್ಯೆಯೇ ಕಾರಣ. ಸತ್ಯಕಾಮರು ಆಗೆಲ್ಲ ಗಂಭೀರವಾಗಿ ನಗುತ್ತಿದ್ದರು.

ಆದರೆ ಹೀಗೆ ಹೇಳುವವವರು ಅವರ ಕೃತಿಗಳನ್ನು ಓದಿದರೆ ಒಂದು ಅದ್ಭುತ ವಿಷಯ ಬೆಳಕಿಗೆ ಬರುತ್ತದೆ. ಶಕ್ತಿಯನ್ನು ಸಂಪಾದಿಸಿದ ಕತೆ ಎಲ್ಲ ಸಾಧಕನ ಬದುಕಿನಲ್ಲಿದೆ. ಅದನ್ನು ಬಳಸಿದವನಿಗೇ ಅದು ಕೊನೆಯಕಾಲಕ್ಕೆ ತಿರುಗಿ ಬಿದ್ದು ತುಂಬ ದಿನಗಳ ಕಾಲ ಹಾಸಿಗೆ ಹಿಡಿದು ಸತ್ತ ಸಾಧಕರ ಕುರಿತ ಕತೆಗಳಿವೆ. ಸ್ವತಃ ಮೇಲೆ ವಿವರಿಸಿದ ವೈಶಾಲಿಯೇ ಕೊನೆಯ ದಿನಗಳಲ್ಲಿ

ಹುಚ್ಚಿಯಂತಾಗಿ, ಕಲ್ಲು ಎಸೆಯುವುದು ಮುಂತಾದ ವಿಕ್ಷಿಪ್ತ ರೀತಿಯಲ್ಲಿ ಬದುಕುತ್ತಿದ್ದಾಳೆ ಎಂಬ ಸಂಗತಿಯನ್ನು ತಂತ್ರಶಾಲೆಯ ಸತ್ಯಕಾಮರ ಸಹಪಾಠಿಗಳಲ್ಲಿ ಒಬ್ಬನಾದ ಅನುಮೋದ ಸಂನ್ಯಾಲ ಸುಮಾರು ೧೯೯೪ರ ಹೊತ್ತಿಗೆ ಸತ್ಯಕಾಮರಿಗೆ ತಿಳಿಸಿದ್ದ. 'ನನ್ನ ಧೀರ ವೈಶಾಲಿ ಹೀಗೆ ಹೇಗಾದಳು' ಎಂದು ಸತ್ಯಕಾಮರು ನನ್ನನ್ನು ಕೂಡಿಕೊಂಡು ಅವಳಿಗಾಗಿ ಹುಡುಕಾಡಿದ್ದರು ಕೂಡ.

ಸತ್ಯಕಾಮರದು ಒಂದು ವಿಶೇಷ ಪ್ರಯೋಗ, ತಾನು ಸಂಪಾದಿಸಿದ ಶಕ್ತಿಗಳನ್ನು ಬಳಸಲಿಲ್ಲ ಮಾತ್ರವಲ್ಲ, ತಾನು ಇವುಗಳಿಗೆ ಮಾಧ್ಯಮನಾಗಿಯೂ ಇರಬಾರದು ಎಂಬ ನಿರ್ಣಯದಿಂದ ಶಕ್ತಿಗಳನ್ನು ತ್ಯಜಿಸುವ ಉದ್ದೇಶಕ್ಕಾಗಿ ೪೦ ದಿನಗಳ ಒಂದು ಕಠಿಣ ತಪಸ್ಸು ಮಾಡಿದ ವಿವರ ಅದರ ಅನುಭವಕೃತಿ 'ಕಪಿಲ ವಸ್ತು'ವಿನಲ್ಲಿದೆ. [ಗಮನಿಸಿ ಕಪಿಲವಸ್ತು]

ಆ ಪ್ರಕಾರ ಅವರು ಗದಗದ ಕಪ್ಪತ ಗುಡ್ಡದಲ್ಲಿ ಏರುದಿಕ್ಕಿಗೆ ಕಾಲನ್ನು, ಇಳುಕಲಿಗೆ ತಲೆಯನ್ನು ಇರಿಸಿ ಶವಾಸನ ಅವಸ್ಥೆಯಲ್ಲಿ ಶಕ್ತಿಗಳು ತನ್ನಿಂದ ಹೊರಟ ಹೋಗಲು ತಪಸ್ಸು ಮಾಡಿದ್ದರು. ಹಾಗೆ ಮಾಡುವಾಗ ನೀರಿಲ್ಲದ, ಜನವಸತಿಯಿಲ್ಲದ, ಜಾಗ ಅವರ ಆಯ್ಕೆಯಾಗಿತ್ತು. ಆದರೆ ಅವರೇ .ವಿವರಿಸುವಂತೆ ಒಮ್ಮೆ ಮಾಧ್ಯಮದಲ್ಲಿ ತಮ್ಮನ್ನು ಪ್ರಕಟಿಸಲು ಸೇರಿಕೊಂಡ ಶಕ್ತಿಗಳು ಮಾಧ್ಯಮವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಆ ಕಾರಣದಿಂದ ಸತ್ಯಕಾಮರಿಗೆ ಆಗ ನಿಜವಾದ ಶಕ್ತಿಪರೀಕ್ಷೆ. ಮೊದ ಮೊದಲು ಸತ್ಯಕಾಮರನ್ನು ಅವು ಪರಿಪರಿಯಿಂದ ಒಲಿಸುತ್ತವೆ. ಹಸಿದು ಸಾಯುವ ಸ್ಥಿತಿಯಲ್ಲಿದ್ದಾಗ ಬಿಸಿಬಿಸಿ ಊಟದ ಎಲೆ ಕೈಯ ಪಕ್ಕದಲ್ಲಿ, ಬಾಯಾರಿ ಮೂರ್ಛಾವಸ್ಥೆಗೆ ಬಂದರೆ ಝುಳುಝುಳು ಹರಿವ ನೀರು ಬಾಯಿಗೆಟುಕುವಂತೆ ಮಾಡುವ ಅವುಗಳ ಆಟ, ಸತ್ಯಕಾಮರ ನಿರಂತರ ಎಚ್ಚರದಿಂದ ನಿರಾಕರಣೆಗೆ ಒಳಗಾಗುತ್ತವೆ. ಇವನು ಪ್ರಾಣಬಿಟ್ಟಾನು ನಮಗಾಗಿ ಏನೂ ಮಾಡಲಾರ ಎಂಬುದು ನಿಶ್ಚಯವಾದ ಮೇಲೆ ಆ ಶಕ್ತಿ ನಿಧಾನಕ್ಕೆ ಅವರನ್ನು ಬಿಟ್ಟು ಹೋದದ್ದಾಗಿಯೂ ಹಾಗೆ ಹೋಗುವಾಗ ಅವುಗಳ ಕೋಪಕ್ಕೆ ಪ್ರಕಟವಾದ ಕೋಪಾಗ್ನಿಯಿಂದ ಕಪ್ಪತಗುಡ್ಡ 40% ಸುಟ್ಟು ಹೋದದ್ದಾಗಿಯೂ ಅವರು ವಿವರಿಸುತ್ತಾರೆ. ಇಲ್ಲಿಂದ ಅವರು ಶಕ್ತಿಗಳಿಂದ ತಾನು ನಿವೃತ್ತನಾದ ವಿವರ ತಿಳಿಯುತ್ತದೆ.

ಇದಕ್ಕೆ ಇನ್ನೊಂದು ಆಧಾರದಂತೆ ಸತ್ಯಕಾಮರಿಗೆ ೪೦ರ ವಯೋಮಾನದಿಂದ ಬಾಯಿಯಲ್ಲಿ ಹಲ್ಲುಗಳಿಲ್ಲ. ತಾನು ಅದನ್ನು ತೆಗೆಸಿದೆನೆಂದೂ, ತನಗೆ ಪಯೋರಿಯಾ ರೋಗವಿದ್ದದ್ದು, ವೈದ್ಯರು ಅಜ್ಞಾನದಿಂದ ಗನೋರಿಯಾ ರೋಗ ಎಂದದ್ದನ್ನೂ, ತಾನು

ಬ್ರಹ್ಮಚಾರಿಯಾಗಿ ಈ ರೋಗ ಹೇಗೆ ಬಂತೆಂದು ನೊಂದದ್ದಾಗಿಯೂ, ಮುಂದೆ ಹಲ್ಲು ತೆಗೆಯುವುದೇ ಪರಿಹಾರ ಎಂಬ ವೈದ್ಯರ ಸೂಚನೆಯಂತೆ ಹಲ್ಲು ತೆಗೆಸಿದ್ದಾಗಿ ಕತೆ ಹೇಳುತ್ತಿದ್ದರು.

ಒಬ್ಬ ದಂತವೈದ್ಯ ಒಂದೇ ದಿನ ಎಲ್ಲ ಹಲ್ಲುಗಳನ್ನು ತೆಗೆಯುವುದಿಲ್ಲ. ಮತ್ತು ಸತ್ಯಕಾಮರ ಈ ಮಾತು ಕಟ್ಟುಕತೆಯಂತಿದೆ ಎಂಬ ಅನುಮಾನದ ಮೂಲ ಹಿಡಿದು ಹೊರಟಾಗ ತಿಳಿದದ್ದು ಇಷ್ಟು. ತಂತ್ರಮಾರ್ಗದಲ್ಲಿ ಮಂತ್ರಕ್ಕೆ ಪ್ರಮುಖ ಸ್ಥಾನ ಮಂತ್ರಕ್ಕೆ ನಾಲಿಗೆ ಮತ್ತು ಹಲ್ಲು ಅನಿವಾರ್ಯ ಅಂಗ. ಒಂದರಲ್ಲಿ ಊನವಿದ್ದರೂ ಉಚ್ಚಾರ ಅಸ್ಪಷ್ಟ. ಅಸ್ಪಷ್ಟ ಉಚ್ಚಾರಕ್ಕೆ ಮಂತ್ರಫಲವಿಲ್ಲ. ಮಂತ್ರ ಫಲವಿಲ್ಲದೆ ತಂತ್ರದ ಯಾವ ನಡೆಯೂ ಸಾಧ್ಯವಿಲ್ಲ.

ಆದ್ದರಿಂದಲೇ ದೊಡ್ಡ ಮಾಂತ್ರಿಕ ತನ್ನ ಪ್ರತಿಸ್ಪರ್ಧಿ ಮಾಂತ್ರಿಕನನ್ನು ಸೋಲಿಸಲು ಅವನ ಹಲ್ಲುದುರಿ ಹೋಗುವಂತೆ ಪ್ರಯೋಗಿಸುತ್ತಿದ್ದ. ಅಂತೆಯೇ ರಾಜರು ತಮ್ಮ ವಿರುದ್ಧ 'ಪ್ರಯೋಗ' ಮಾಡುವ ಮಾಂತ್ರಿಕನಿಗೆ ಇನ್ನೊಬ್ಬ ಮಾಂತ್ರಿಕನ ಮುಖಾಂತರ ಅವನ ಹಲ್ಲು ತೆಗೆಯುವಂತೆ ಆದೇಶಿಸುತ್ತಿದ್ದರು. ಈಗಲೂ 'ಹಲ್ಲುದುರಿಸುತ್ತೇನೆ' ಎಂಬ ಪ್ರಯೋಗದಲ್ಲಿ ಶಕ್ತಿ ಕಸಿಯುವ ಉದ್ದೇಶವೇ ಇದೆ.

ಈ ಹಿನ್ನೆಲೆಯಲ್ಲಿ ಸತ್ಯಕಾಮರ ಶಕ್ತಿವಿಸರ್ಜನೆಯ ಕಪ್ಪತಗುಡ್ಡದ ತಪಸ್ಸಿಗೂ, ಹಲ್ಲು ಕಳೆದುಕೊಂಡದ್ದಕ್ಕೂ ಸಂಬಂಧವಿದೆಯಾ ಎಂಬುದನ್ನು ಗಮನಿಸಿದರೆ ಅವರ ಜೊತೆಗೆ ಆ ಕಾಲಕ್ಕೆ ಬದುಕಿದ್ದ ಗುರುರಾಜ ಹಬ್ಬು ದಂಪತಿಗಳನ್ನು ಕೇಳಲಾಗಿ ಅವರು ಕಪ್ಪತಗುಡ್ಡದಿಂದ ಮರಳುವ ವೇಳೆಗೆ ಹಲ್ಲು ಕಳೆದದ್ದಾಗಿಯೂ, ಮತ್ತು ಧಾರಾಕಾರ ರಕ್ತ ಹರಿದು ಮನೆಗೆ ಬಂದು ಸ್ವಲ್ಪ ಕಾಲ ಮೂರ್ಛೆ ಬಿದ್ದುದರ ವಿವರಣೆ ಸಿಕ್ಕಿತು.

ಇದರಿಂದ ಶಕ್ತಿ ತಾವು ಹೊರಟು ಹೋಗುವ ವೇಳೆಗೆ ಇವರ ಹಲ್ಲುದುರುವಂತೆ ಮಾಡಿಬಹುದು ಎಂಬುದು ಒಂದು ಊಹೆ. ರೋಗದಿಂದ ಹಲ್ಲು ತೆಗೆದವರು ಹಲ್ಲು ಕಟ್ಟಿಸಬೇಕು. ಇವರು ಹಲ್ಲು ಕಟ್ಟಿಸಿಕೊಳ್ಳಲಿಲ್ಲ ಮಾತ್ರವಲ್ಲ ಹಲ್ಲು ಇಲ್ಲದಂಥ ಯಾವ ಸೂಚನೆಯೂ ಇರದಂತೆ ಆ gum ಗಳನ್ನೇ ತಯಾರಿಗೊಳಿಸಿದ್ದರು. ಗಟ್ಟಿ ಆಹಾರವೂ [ಶೇಂಗಾ ಬೀಜ ಕೂಡ, ಚಕ್ಕುಲಿ] ಕೂಡ ಇವರ ಆ ಬಾಯಿಯಲ್ಲೇ ಅರೆಯುತ್ತಿತ್ತು. ಮತ್ತು ಎಲ್ಲ ಮಂತ್ರ ಮಾತಿಗೆ ತೊದಲಿಕೆಯಿಲ್ಲದ ಸ್ಪಷ್ಟತೆಯಿತ್ತು. ಇದು ಅವರ ಹಠಶಕ್ತಿಗೆ ಒಂದು ಮಾದರಿ. ಆದರೆ ಸತ್ಯಕಾಮರು ವೈಯಕ್ತಿಕ ವಿವರಗಳಲ್ಲಿ ತುಂಬ ನಿಗೂಢವಿದ್ದುದರಿಂದ ಮತ್ತು ಅವರ ಮರಣಾನಂತರ ಈ ಅನುಮಾನ ಹುಟ್ಟಿದ್ದರಿಂದ ಅವರಿಂದಲೇ ಇದನ್ನು ದೃಢೀಕರಿಸಿಕೊಳ್ಳಲು ಆಗಲಿಲ್ಲ.

ಹೀಗೆ ತಂತ್ರಮಂತ್ರಗಳಿಂದ ನಿವೃತ್ತರಾದ ಸತ್ಯಕಾಮರ ಕೊನೆಯ ಹಸಿವು ಬೇರೆ ಇತ್ತು. ತಾನು ಎಲ್ಲಿಗೆ ನಿಲ್ಲುತ್ತೇನೋ ಅದರ ಮುಂದುವರಿಕೆ ತನ್ನ ಅಂತೇವಾಸಿ ಎಂಬುದು ಪ್ರತೀ ಗುರುವಿಗೂ ಇರುವ ಅರಿವು. ಆ ಕಾರಣದಿಂದಲೇ ಸತ್ಯಕಾಮರು ನನಗೆ ಎಂದಿಗೂ ತಂತ್ರಮಾರ್ಗದ ಸಿದ್ಧಿ ಶಕ್ತಿಗಳನ್ನು ಉಲ್ಲೇಖಿಸಲಿಲ್ಲ. ಪರಿಚಯಿಸುವುದು ಒತ್ತಟ್ಟಿಗಿರಲಿ, ಒಂದು ದಿನವೂ ನನ್ನಲ್ಲಿ ಅದೇನು ಎಂಬ ಪ್ರಶ್ನೆ ಹುಟ್ಟಿಸಲಿಲ್ಲ. ತಿಳಿಯುವ ಹಸಿವು ಲವಮಾತ್ರವಿರಲಿಲ್ಲ. ಇರಲಿಲ್ಲ ಎಂದರೆ ನಾನು ಕಾರಣ ಎಂದಂತೆ ಇರಬಾರದು ಎನ್ನುವುದು ಆಯ್ಕೆ ಮಾಡಿದ ಗುರುವಿನ ಉದ್ದೇಶ. ತಾನು ನಡೆದ ದಾರಿಯಲ್ಲಿ ಪುನಃ ಶಿಷ್ಯನನ್ನು ನಡೆಸುವುದು ಸಾಧನೆಯ ಕ್ರಮವಲ್ಲ. 'ಆಚಾರ್ಯಃ ಪೂರ್ವರೂಪಂ, ಅಂತೇವಾಸಿ ಉತ್ತರ ರೂಪಂ' ಎಂಬುದು ಉಪನಿಷತ್ತಿನ ಸ್ಪಷ್ಟ ಸೂಚನೆ. ತಾನು ನಡೆದ ಉತ್ತರೋತ್ತರದ ನಡೆ ಶಿಷ್ಯ ನಡೆಯಬೇಕು.

ಶಿಷ್ಯ ಹೃದಯ ಗರ್ಭದಿಂದಲೇ ಹುಟ್ಟಿದವ. ಗುರುವಿನ ಸಕಲವೂ ಅಲ್ಲಿ implant ಆಗಿಯೂ ಆಗಬೇಕು. ಇಲ್ಲದೆ ಇದ್ದರೆ ಎರಡರೊಳಗೆ ಒಂದರ ದೋಷ ಅಥವಾ ಎರಡರ ದೋಷ ಕಾರಣ. ಸತ್ಯ ಪ್ರಕಟವಾದಂತೆ ದೋಷವೂ ಪ್ರಕಟವಾಗಲೇ ಬೇಕು.

ಆ ರೀತಿ ಶಕ್ತಿಯನ್ನು ತಾನಾಗಿ ತ್ಯಜಿಸಿದ ಬಳಿಕ ಮತ್ತೆ ಹೊಸದಾಗಿ ನಡೆದವರು ಬಹುಶಃ ಸತ್ಯಕಾಮರು ಮಾತ್ರ. ಅವರ ಆ ರೀತಿಯ ಬೆಳವಣಿಗೆಯನ್ನು ಕಂಡು ನಾನು ಒಮ್ಮೆ ಅವರನ್ನು ಪ್ರಶ್ನಿಸಿದ್ದೆ.

ನಾನು : ನೀವು ಶಕ್ತಿಗಳನ್ನು ಯಾಕೆ ಬಿಟ್ಟಿರಿ?

ಹಾಗಾದರೆ ನಿಮಗೆ ಈಗ ಅದು ಸಾಧ್ಯವಿಲ್ಲವೇ?

ಸತ್ಯಕಾಮ : 'ವಿಮಾನದಲ್ಲಿ ಪಯಣಿಸಲು ಬಂದ ಬಳಿಕ ಸೈಕಲ್ಲಿನ ಅವಶ್ಯಕತೆ ಇರುವುದಿಲ್ಲ. ಹಾಗೆಂದ ಮಾತ್ರಕ್ಕೆ ಸೈಕಲ್ಲು ಕೊಟ್ಟರೆ ಈಗ ಅದನ್ನು ಚಲಾಯಿಸಲು ಬರುವುದಿಲ್ಲ ಎಂದಲ್ಲ. ಸೈಕಲ್ಲೇರುವುದಿಲ್ಲವಾದ್ದರಿಂದ ನಮ್ಮ ಶೆಡ್ಡಿನಲ್ಲಿ ಸೈಕಲ್ಲೇ ಇಡಬೇಡಿ ಎಂಬಷ್ಟು ದರಿದ್ರನೂ ನಾನಲ್ಲ'.

ತನ್ನೊಳಗೆ ಶಕ್ತಿಗಳನ್ನು ಧರಿಸಿಯೂ ಅವುಗಳನ್ನು ಸ್ವಂತಕ್ಕೆ ಉಪಯೋಗಿಸದ ತ್ರಯಸ್ಥ ಭಾವ. ಜೇಬಿನೊಳಗೆ ಲಕ್ಷಗಟ್ಟಳೆ ಹಣವಿಟ್ಟುಕೊಂಡು ಸ್ವಂತಕ್ಕೆ ಬಳಸದ ಆಗರ್ಭ ಶ್ರೀಮಂತಿಕೆ ಅದು ಅದರ ಗತ್ತು ಅವರಿಗೇ ಗೊತ್ತು. ಹಣದ ವಿಷಯದಲ್ಲೂ ಅವರದು ಇನ್ನೊಬ್ಬರಿಗೆ ಖರ್ಚು ಮಾಡುವ ಆನಂದವೇ ಇತ್ತು.

3. ತಂತ್ರಪಥ, ರಜನೀಶ್ ಮತ್ತು ಸತ್ಯಕಾಮ : ಈ ಮೂರು ಸಂಗತಿಗಳ ಸ್ಥೂಲ ಪರಿಚಯ

ಆಧ್ಯಾತ್ಮ ಎಂದರೆ ಅನೇಕರಿಗೆ ಕುತೂಹಲ. ಅದು ಯಾವುದೋ ನಮಗೆ ಗೊತ್ತಿರದ ಜಗತ್ತು ಎಂದು ಕಲ್ಪನೆ. ಅಲ್ಲಿ ನಡೆವವರ ಬಗ್ಗೆ ನಮಗೆ ಒಂದು ವಿಶೇಷ ಆಸಕ್ತಿ. ತುಂಬ ಜನರು ಅಂಥವರನ್ನು ಹುಡುಕಿ ಹೋಗುವುದೇ ಒಂದು ಹವ್ಯಾಸವಾಗಿ ಮಾಡಿಕೊಂಡಿದ್ದಾರೆ. ಬಹಳ ಜನರಿಗೆ ಅದರಲ್ಲಿ ಕಾಮವಿಲ್ಲ, ಅದು ತುಂಬ ಸಂಯಮದ ದಾರಿ. ಹೀಗೆ ನಾವು ಬದುಕಲಾಗದ ಬದುಕಿನ ಕಲ್ಪನೆ.

ಇಂಥ ಆಧ್ಯಾತ್ಮದಲ್ಲಂತೂ ಭಕ್ತಿಮಾರ್ಗ, ಜ್ಞಾನಮಾರ್ಗ, ಕರ್ಮಮಾರ್ಗ ಮುಂತಾದ ಭೇದ ಮಾಡಿಕೊಂಡು ಮತ್ತೆ ಅವುಗಳಲ್ಲಿ ಒಳಿತು, ಕೆಡುಕು, ತುಲನೆ ಇತ್ಯಾದಿ ನಡೆದೇ ನಡೆದಿದೆ. ಒಂದು ಸರಿ ಎಂದವರು ಇನ್ನೊಂದನ್ನು ತಪ್ಪು ಎಂದಿದ್ದಾರೆ. ಬಹಳ ಬಾರಿ ಕೆಲವರು ತಾವು ಒಪ್ಪಿಕೊಂಡ ಪಥವೇ ಆಧ್ಯಾತ್ಮದ ಸರಿಯಾದ ಪಥ ಉಳಿದದ್ದಲ್ಲ ಎಂಬ ತೀರ್ಮಾನ ಹೆಚ್ಚು. ಯಾವುದಕ್ಕೂ ನಿರ್ಣಯ ಹೇಳುವವರು ಯಾರು? ನಿರ್ಣಯ ತೆಗೆದುಕೊಂಡು ಆಗಬೇಕಾದದ್ದಾದರೂ ಏನು? ಅವರವರ ದಿಕ್ಕಿನಲ್ಲಿ ಅವರವರ ನಡೆ.

ಮೊದಲೇ ಆಧ್ಯಾತ್ಮ ಸಂಶಯಗಳ ಸರಮಾಲೆ. ಅದರಲ್ಲೂ ತಂತ್ರಪಥ ಅಂತೂ ಅತಿ ಹೆಚ್ಚಿಗೆ ಬೆರಗು ಹುಟ್ಟಿಸಿದ ಪಥ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ತಂತ್ರ ಜಗತ್ತು ಅರ್ಥವಾದದ್ದೇನೂ ಸುಳ್ಳಲ್ಲ. ಅನೇಕರು ತಂತ್ರವನ್ನು ವ್ಯಾಖ್ಯಾನಿಸಿ ಕೂಡ ಸೋತವರೇ, ಕೆಲವರಿಗೆ ತಂತ್ರ ಎಂದರೆ ಏನು ಟೆಕ್ನಿಕ್ಕಾ, ಅಥವಾ ಮಾಟ ಮಂತ್ರವೇ ತಂತ್ರವಾ, ಎಂಬ ಪ್ರಶ್ನೆ. ತಂತ್ರಕ್ಕೆ ಇರುವ ಮೂರನೆಯ ಆಯಾಮ ಅಷ್ಟಾಗಿ ಚರ್ಚಿತ ಆಗಿಲ್ಲ.

ಒಂದನ್ನು ತಿಳಿದರೆ ಎಲ್ಲವನ್ನು ತಿಳಿಯುತ್ತದೆ ಎಂಬುದು ಪರಾಮಾರ್ಗ. ಒಂದೊಂದನ್ನು ಪಾಂಕ್ತವಾಗಿ ತಿಳಿಯುತ್ತಾ ಅದರ ಕೊನೆಯನ್ನು ತಿಳಿಯುವುದು ಅಪರಾಮಾರ್ಗ. ಇದು ಒಂದು ದೃಷ್ಟಿಯಿಂದ ಶಾಸ್ತ್ರೋಕ್ತ ಅಧ್ಯಯನ ಕ್ರಮ. ಆದ್ದರಿಂದಲೇ ತಂತ್ರಕ್ಕೆ ಅಪರಾಮಾರ್ಗ ಎಂದೂ, ಸುತ್ತು ಬಳಸಿ ಹೋಗುವ ಕಾರಣಕ್ಕೆ ವಾಮಮಾರ್ಗ ಎಂದೂ ಅಡ್ಡ ಹೆಸರುಗಳಿವೆ. ಈ ತಂತ್ರ ಪಥಕ್ಕೆ ಬೌದ್ಧಧರ್ಮದ ವಜ್ರಯಾನ ಪ್ರಭಾವವಿದೆ, ಹೀನಯಾನ ವಜ್ರಯಾನಗಳ ಮೂಲದಿಂದ ಇದರ ಬೆಳವಣಿಗೆ ಎಂಬ ಒಂದು ವಾದವಿದೆ. ಇದಲ್ಲದೆ ಒಂದು ಶಾಸ್ತ್ರೀಯ ಪಥವಾಗಿ ಇದನ್ನು

ಬೆಳೆಸಿದ ಕೀರ್ತಿ 9ನೆಯ ಶತಮಾನದ ಕೊನೆಯ ಹತ್ತನೆಯ ಶತಮಾನದ ಆರಂಭ ಕಾಲದ ಅಭಿನವಗುಪ್ತನಿಗೆ ಸಲ್ಲುತ್ತದೆ. ಅಭಿನವಗುಪ್ತ, ನರಸಿಂಹಗುಪ್ತ ಮತ್ತು ವಿಮಲಕಲಾ ದಂಪತಿಗಳ ಕಾಶ್ಮೀರಿ ಪುತ್ರ. ಅವನು ಬಾಲ್ಯದಿಂದಲೇ ಶಾಸ್ತ್ರೋಕ್ತ ಅಧ್ಯಯನದ ಹಿನ್ನೆಲೆಯನ್ನು ತಂದೆಯಿಂದ ರೂಢಿಸಿಕೊಂಡು, ಬೆಳವಣಿಗೆಗೆ ಮನೆ ಕಿರಿದು ಎಂದು ಕಾಡು–ಮೇಡು ಅಲೆದು ಅನುಭವಗಳಿಂದ ಬೆಳೆದವ. ಅವನ ತಂತ್ರಾಲೋಕ ಈ ತಂತ್ರ ಪಥಕ್ಕೆ ಒಂದು ಹೊಸ ಮುನ್ನುಡಿ. ಇಡಿಯ ತಂತ್ರಮಾರ್ಗವನ್ನು ಶಾಸ್ತ್ರೋಕ್ತವಾಗಿ ಒಂದು ಶಾಲಾಪಂಥದ ವೈಧಾನಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವವರಿಗೆ ಇದು ಒಂದು ದೊಡ್ಡ ಮಾರ್ಗದರ್ಶನ ಗ್ರಂಥ. ಮೂಲ ಸಂಸ್ಕೃತದಲ್ಲಿರುವ ಆ ಗ್ರಂಥ ಹಿಂದಿ ಮತ್ತು ಇಂಗ್ಲಿಷ್ ಭಾಷಾಂತರಗಳಲ್ಲಿ ಲಭ್ಯವಿದೆ.

ತಂತ್ರಕ್ಕೆ ಇರುವ ವಿಧಾನಗಳಲ್ಲಿ ಪಂಚ'ಮ'ಕಾರಗಳು. (ಮದ್ಯ, ಮಾಂಸ, ಮಾನಿನಿ, ಮಂತ್ರ, ಮುದ್ರೆ) ಇವುಗಳ ವಿವರ, ಹಾಗೂ ಮಂಡಲ ಪೂಜೆ, ಯೋನಿಪೂಜೆ, ಕುಲ ಸಂಪ್ರದಾಯ ಹೀಗೆ ಎಲ್ಲ ವಿವರಗಳನ್ನು ಸಾದ್ಯಂತವಾಗಿ ವಿವರಿಸುವ ಈ ಗ್ರಂಥ ತಂತ್ರಶಾಲೆಯ ವಿದ್ಯಾರ್ಥಿಗೆ ಶಾಸ್ತ್ರೋಕ್ತ ನಡೆಯ ಹಿನ್ನೆಲೆಯನ್ನು ಸೂಚಿಸುತ್ತದೆ. ತಂತ್ರ ಎಂಬುದು ಹೀಗೆ ಕಾಶ್ಮೀರದ ಕೆಲವು ಭಾಗಗಳಲ್ಲಿ ಈಗಲೂ ಈ ರೀತಿಯ ಒಂದು ಶಾಲಾವಿಧಾನವಾಗಿ ಕಲಿಕೆಯಲ್ಲಿದೆ (ಸತ್ಯಕಾಮರು ಇಂತಹ ಶಾಲೆ ಶ್ರೀನಗರದಲ್ಲಿ ಇರುವುದನ್ನು ನನಗೆ 1994–98ರ ದಿನಗಳಲ್ಲಿ ಹೇಳಿದ್ದರು. ಆಗಲೇ ಅವರು ಅದು ಹಿಂದಿನಷ್ಟು ಶುಚಿಯಾಗಿ ಉಳಿದಿಲ್ಲ ಅಂದಿದ್ದರು. ಈಗ ಹೇಗಿದೆಯೋ ಗೊತ್ತಿಲ್ಲ).

ತಂತ್ರ ಎಂಬ ಈ ಶಾಲೆಯೇ ತಂತ್ರ ಎಂಬ ಆಧ್ಯಾತ್ಮಪಥವಾ ಎಂಬುದು ಪ್ರಶ್ನೆ. ವಾಸ್ತವಿಕ ಶಾಲೆಗಳು ಪ್ರಾಥಮಿಕ ತಯಾರಿಯ ಒಂದು ಶಾಸ್ತ್ರೋಕ್ತ ವಿಧಾನಗಳೇ ಹೊರತು ನಮ್ಮನ್ನು ಗುರಿ ಮುಟ್ಟಿಸುವ ಕೇಂದ್ರಗಳಲ್ಲ. ನಮ್ಮ ಗುರಿಯ ಕಡೆಗೆ ನಡೆಯಲು ಬೇಕಾಗುವ ಪೂರಕ ಆಕರಗಳನ್ನು ಒದಗಿಸಬಲ್ಲ ಒಂದು ನೆರವು ಮಾತ್ರ ಈ ತಂತ್ರಶಾಲೆಗಳು. ಆ ಗುರಿಯ ಕಡೆಗೆ ನಮ್ಮನ್ನು ಸಿದ್ಧಗೊಳಿಸಿ ನಮ್ಮ ಅರ್ಹತೆಗಳನ್ನು ಇನ್ನಷ್ಟು ಬಲಗೊಳಿಸುವ ಕೆಲಸವನ್ನು ಮಾತ್ರ ಇವು ಮಾಡಬಲ್ಲವು. ಈ ಹಿನ್ನೆಲೆಯಲ್ಲಿ ಪಂಚ'ಮ'ಕಾರಗಳ ಜೊತೆ ನಡೆಸುವ ಅನುಸಂಧಾನ, ಮಂಡಲ ಪೂಜೆ, ಯೋನಿಪೂಜೆ, ಕುಲ ಸಂಪ್ರದಾಯಗಳ ಸಾಧನಾ ಸಂಗತಿಗಳಿಂದ ವ್ಯಕ್ತಿ ತಂತ್ರ ಪಥ ನಡೆದಂತಲ್ಲ ಅವನು ಅದಕ್ಕೆ ಬೇಕಾದ ಕೆಲವು ತಾಂತ್ರಿಕ (ಟೆಕ್ನಿಕಲ್) ಪರಿಣತಿಗಳನ್ನು ಪಡೆದಿದ್ದಾನೆ ಎಂದಷ್ಟೇ ಇದರ ಅರ್ಥ. ತಂತ್ರ ಕೇವಲ ಆ ಪರಿಣತಿಯನ್ನೇ ಅದರ ಗುರಿಯನ್ನಾಗಿ ಇಟ್ಟುಕೊಂಡಿಲ್ಲ. ಆದ್ದರಿಂದಲೇ ಇದರ ಆಚೆಗೆ ವ್ಯಕ್ತಿಯನ್ನು ಅವನ ಚೈತನ್ಯದ ಜೊತೆ

ಮುಖಾಮುಖಿಯಾಗಿಸಿ ಒಂದು ವಿಸ್ತಾರಕ್ಕೆ ಒಯ್ಯುವವರೆಗೆ ವ್ಯಾಪಿಸಿದೆ. ಆ ಹಿನ್ನೆಲೆಯಲ್ಲಿ ತಂತ್ರವನ್ನು ಪರಿಚಯಿಸಿ ಕೊಳ್ಳುವ ಒಂದು ಪ್ರಯತ್ನ ಇಲ್ಲಿ ಮಾಡಲಾಗಿದೆ. ಬಹುಶಃ ತಂತ್ರದ ಇಲ್ಲಿಯವರೆಗೆ ಹೇಳಿದ ವೈಧಾನಿಕ ಅಥವಾ ಶಾಸ್ತ್ರೀಯ ಪರಿಚಯಗಳಿಗೆ ಸಾಕಷ್ಟು ಪುಸ್ತಕ ಮಾಹಿತಿಗಳದ್ದು, ಆ ಕುರಿತು ಇಲ್ಲಿ ಹೆಚ್ಚು ವಿಶದವಾಗಿ ವಿವರಿಸುವುದಿಲ್ಲ.

ತಂತ್ರವನ್ನು ಸಾಮಾನ್ಯವಾಗಿ ಬಳಸುವ ಮೂರು ಅರ್ಥಗಳು ಹೀಗಿವೆ.

1. ಟೆಕ್ನಿಕ್ (ತಂತ್ರಗಾರಿಕೆ)

2. ಮಾಟ ಮಂತ್ರ ಮುಂತಾದ ಮಾನವೀ ಶಕ್ತಿ ಸಾಧ್ಯತೆ.

3. ತಂತ್ರ ಎಂಬ ಆಧ್ಯಾತ್ಮ ಪಥ.

1. ಟೆಕ್ನಿಕ್ (ತಂತ್ರಗಾರಿಕೆ) : ತಂತ್ರ ಎಂದರೆ ಟೆಕ್ನಿಕ್ ಇದು ಒಂದು ಅರ್ಥದ ಬಳಕೆ. ಒಂದು ನಿರ್ಜೀವ ವಸ್ತುವಿಗೆ ಸುಸೂತ್ರ ಜೋಡಣೆಯ ಮೂಲಕ ಶಕ್ತಿ ಪ್ರವಹಿಸಿ ಚಾಲನಾಶಕ್ತಿ ಕೊಡುವುದು. ಇದನ್ನು ತಂತ್ರದ ಅರ್ಥದಲ್ಲೇ ಗ್ರಹಿಸಬೇಕು. ಇಲ್ಲಿ ವಿಶೇಷ ರೀತಿಯ ಚಾಣಾಕ್ಷತನದಿಂದ, ದೊರೆತಿರುವ ಬಿಡಿಭಾಗಗಳನ್ನೂ ತಾರ್ಕಿಕವಾಗಿ ಮತ್ತು ಸುಸಂಬದ್ಧ ರೀತಿಯಲ್ಲಿ ಜೋಡಿಸಿ, ಅದನ್ನು ಒಂದು ಚಾಲನಶಕ್ತಿಗೆ ಸಂಪರ್ಕಿಸಿ ಅದಕ್ಕೊಂದು ಚೈತನ್ಯ ಕೊಡುವ ಕುಸುರಿ ಕೆಲಸವಿದೆ. ಇದು ಒಂದು ಅದ್ಭುತ ತಂತ್ರಗಾರಿಕೆ. ಹಲವು ವರುಷಗಳಿಂದ ನಮ್ಮ ವೈಜ್ಞಾನಿಕ ಸಾಧನೆಯ ಹಿಂದೆ ಇಂಥದೊಂದು ತಂತ್ರಗಾರಿಕೆಯ ಮನಃಸ್ಥಿತಿ ಇದೆ. ಇದು ನಿರ್ಜೀವದ ಜೊತೆಗೆ ಜೀವಂತ ವ್ಯಕ್ತಿ ಹೊಂದಾಣಿಕೆಯ ಮೂಲಕ ಶಕ್ತಿ ಸಂಚಲನ ಕೊಟ್ಟು ನಡೆಸುವ ಪ್ರಕ್ರಿಯೆ. ಎಲ್ಲ ಬಿಡಿಭಾಗಗಳನ್ನು ಸುಸೂತ್ರ ಜೋಡಿಸಿದರೆ ಸಾಲದು ಅದಕ್ಕೊಂದು ಶಕ್ತಿಯ ಸಂಪರ್ಕವೂ ಸಾಧ್ಯವಾಗಬೇಕು. ಆಗ ಮಾತ್ರ ಅದು ಹೊಸತೊಂದು ರೂಪ ಪರಿವರ್ತನೆಯನ್ನು ಪಡೆಯುತ್ತದೆ. ಇದೂ ಒಂದು ತಂತ್ರದ ಆಯಾಮವೇ. ತಂತ್ರದ ನಿಜಾರ್ಥದ ವಿಸ್ತಾರಕ್ಕೆ ಇದು ಕೇವಲ ಒಂದು ಮೂಲಸೂತ್ರ ಎನ್ನಬಹುದು. ಆದರೆ ಇದೇ ತಂತ್ರವಲ್ಲ. ಈ ವೈಜ್ಞಾನಿಕ ಸೂತ್ರವೇ ತಂತ್ರದ ಒಂದು ಆಯಾಮ ಎನ್ನಬಹುದು.

ಆದರೆ ತಂತ್ರ ಇಷ್ಟೇ ಅಲ್ಲ ಎಂದು ಎಲ್ಲರಿಗೂ ಗೊತ್ತು. ಯಾಕೆಂದರೆ ಇವರು 'ತಂತ್ರ'ದವರು ಎಂದ ತಕ್ಷಣ ನಮಗೆ ನೆನಪಾಗುವ ಇನ್ನೊಂದು ಆಯಾಮ. ಅದು ಪೂರ್ತಿಯಾಗಿ ಬಹಳ ಪ್ರಚಲಿತವಿರುವ ತಂತ್ರ, ಮಂತ್ರ, ವಿದ್ಯೆಗಳನ್ನು ನೆನಪಿಸುವುದು ಹೆಚ್ಚು. ತಂತ್ರವಿದ್ಯೆ ಎಂದರೇ 'ಅದು' ಎಂದು ಅನೇಕರು ಭಾವಿಸಿಯೂ ಇದ್ದೇವೆ.

ವಾಸ್ತವಿಕವಾಗಿ ಅದನ್ನು ಅಲ್ಲಗಳೆಯುವ ಹಾಗೂ ಇಲ್ಲ. ಯಾಕೆಂದರೆ ದೇವರ ದಾರಿಗೆ ಇರುವ ಸರಳ ಭಕ್ತಿಯ ಮಾರ್ಗವನ್ನು ಬಿಟ್ಟು ಹಠದಿಂದ ನಡೆವ ಕರ್ಮ ಮಾರ್ಗ ಇದೆಂದೇ ತಂತ್ರಕ್ಕೆ ವಾಮಮಾರ್ಗ ಎಂಬ ಹೆಸರು. 'ದೇವರು' ಎಂದರೆ ಏನು ಎಂಬುದು ಬಹುಮುಖ್ಯ ಚರ್ಚೆ. ಹೊರಗೆ ಒಂದು ವಸ್ತುವಿದೆ ಅದನ್ನು ನಾವು ಕಂಡಿಲ್ಲ. ಅದನ್ನೇ 'ದೇವರು' ಎಂಬುದು ಒಂದು ಕ್ರಮ. ನಮ್ಮ ಒಳಗೇ ಒಂದು ಅದ್ಭುತ ಶಕ್ತಿ ಸಾಧ್ಯತೆ ಇದೆ. ಅದು ಅಣರೂಪದಲ್ಲಿ ಇದೆ. ಅದರ ಪೂರ್ಣ ವಿಸ್ತಾರವಾದ ಅನುಭವವನ್ನು ತಲುಪುವುದು ದೇವರು, ಬ್ರಹ್ಮ ಮುಂತಾದ ಹೆಸರು ಎನ್ನುವುದು ಇನ್ನೊಂದು ಕ್ರಮ. ಇಲ್ಲಿ ತಂತ್ರಮಾರ್ಗ ಎರಡನೆಯ ರೀತಿಯಾದ ತನ್ನ ಪರಿಪೂರ್ಣ ವಿಸ್ತಾರವೇ ಆ 'ಅದು'. ಇದನ್ನು ದೇವರು ಎಂಬ ಹೆಸರಿಗಿಂತ ಆ 'ಅದು' 'That' ಎಂದೇ ಅನೇಕರು ಕರೆದಿದ್ದಾರೆ. ಉಪನಿಷತ್ಕಾರರಂತೂ ಆ 'ಅದು' ಇತ್ತು ಎನ್ನುವುದೇ ಹೆಚ್ಚು. ಅದನ್ನೇ 'ಬ್ರಹ್ಮ' ಎಂದು ಸಂಬೋಧಿಸಿದ್ದಾರೆ. ಆ 'ಅದು' 'ದೊಡ್ಡದು' 'ಬ್ರಹ್ಮ' ಹೊರಗಿಲ್ಲ ಒಳಗಿದೆ. ಈ ಹೊರಗಿನ ಎಲ್ಲ ಎಲ್ಲದರ ಜೊತೆಗೆ ಈ ಒಳಗಿನದು ಮುಖಾಮುಖಿಯಾಗುತ್ತಾ ಹೋಗಿ ಕಡೆಗೆ ಒಳಹೊರಗಿನ ಭೇದವಳಿದು ಆ ಅದೇ ಈ ಇಲ್ಲಿಯ ಇದು ಎಂಬ ಸರ್ವಂ ಖಲ್ವಿದಂ ಬ್ರಹ್ಮ ಎಂಬ ಅರಿವಿಗೆ ತಲುಪುವಂತಹ ನಿರಂತರ ನಡೆಯನ್ನು ತಂತ್ರಮಾರ್ಗವು ಸೂಚಿಸಿದೆ. ಅಭಿನವ ಕೂಡ 'ಮೊದಮೊದಲಿಗೆ ನಾನು 'ಅದು' ಎನ್ನುವುದು ಅಡ್ಡಿ ಆ ಬಳಿಕ ಅದು ಅನುಭವ ಎಂಬ ತೀರ್ಮಾನವನ್ನು ಕೊಡುತ್ತಾನೆ.

ಬುದ್ಧ ಕೂಡ ಇದು ಅದನ್ನು ಸೇರುವ ಆರಂಭವಾಗಿಯೇ ಪಥ ಚಲಿಸಿದವ. ನಿರಂತರವಾಗಿ ಇಲ್ಲಿಯ ಪ್ರತಿಯೊಂದನ್ನು ಸಂದೇಹಿಸುತ್ತಾ, ಇದು ಅಲ್ಲ ಅದು ಅಲ್ಲ ಎಂಬ ನೇತಿಭಾವವೇ ಕೊನೆಯವರೆಗೂ ಹುಟ್ಟಿ, ಕಡೆಗೆ ಓಹ್ ಸಂಶಯಿಸುವವನು ಇದ್ದಾನೆ ಅವನ ಬಗ್ಗೆ ಸಂದೇಹವಿಲ್ಲ ಎಂಬ ಭಾವದಲ್ಲೇ ಮುಂದೆ ಆ ಅದು ಇದೇ ಎಂಬ ನಿರ್ಣಾಯಕ ಹಂತ ತಲುಪಿದವ.

2. ಮಾಟಮಂತ್ರ : ಈ ದಿಶೆಯಲ್ಲಿ ಇಲ್ಲಿರುವ ಪ್ರತಿಯೊಂದು ಹೊರಗಣ ಸಂಗತಿಗೂ ಮುಖಾಮುಖಿಯಾಗುವ ಒಂದು ನಿರಂತರ ಸಾಧನೆ ತಂತ್ರದ ಪಥದಲ್ಲಿದೆ. ಹೀಗಾಗಿ ದೇವರ ದಾರಿಗೆ ಇರುವ ಭಕ್ತಿಯ ಮಾರ್ಗವನ್ನು ಬಿಟ್ಟು ಹಠದಿಂದ ನಡೆವ ಕರ್ಮಮಾರ್ಗ ಇದೆಂದೇ ತಂತ್ರಕ್ಕೆ ವಾಮಮಾರ್ಗ ಎಂಬ ಹೆಸರು. ಪ್ರತಿಯೊಂದನ್ನು ಪ್ರಶ್ನಿಸುತ್ತಾ, ವಿಶ್ಲೇಷಿಸುತ್ತಾ, ಪರೀಕ್ಷಿಸುತ್ತಾ ಅದನ್ನು ಅರಿಯುತ್ತಾ ಅರಿಯುತ್ತಾ ಸೋಪಾನ ರೂಪದಲ್ಲಿ ನಡೆವ ಕ್ರಮ ಇದು.

ಈ ದೃಷ್ಟಿಯಿಂದ ತಂತ್ರಕ್ಕೆ ಇರುವ ಮೂಲಸೂತ್ರಗಳು ಎರಡು 1. ಸಮರ್ಪಣೆ, 2. ಸ್ವೀಕರಣೆ. ಬದುಕಿನ ಅತ್ಯಂತ ಕಷ್ಟದ ಎರಡು ಸಂಗತಿಗಳು ಇವು. ನಮ್ಮಲ್ಲಿರುವ ಇಲ್ಲದಿರುವ, ಬೇಕಿರುವ ಬೇಡವಾದ ಎಲ್ಲವನ್ನೂ ನಂಬಿದ ಆ ಒಂದಕ್ಕೆ ಸಮರ್ಪಿಸುವುದು. 2. ಇನ್ನೊಂದು ಅಷ್ಟೇ ಕಷ್ಟದ ಸಂಗತಿ ಸುಖವಿರಲಿ, ದುಃಖವಿರಲಿ, ಇಷ್ಟವಿರಲಿ ಇಲ್ಲದಿರಲಿ ಎಲ್ಲವನ್ನೂ ಸ್ವೀಕರಿಸುವುದು. ಈ ಎರಡು ಮೂಲಭೂತ ಸೂತ್ರಗಳಲ್ಲಿ ನಡೆವ ತಂತ್ರಪಥ ಆ ಕಾರಣಕ್ಕಾಗಿಯೇ ಎಲ್ಲಕ್ಕೂ ತನ್ನನ್ನು ಅರ್ಪಿಸಿಕೊಳ್ಳುತ್ತದೆ ಮತ್ತು ಹಾಗೆ ನಡೆವ ದಾರಿಯಲ್ಲಿ ಬಂದುದೆಲ್ಲವನ್ನು ಸ್ವೀಕರಿಸುತ್ತದೆ.

ಆದ್ದರಿಂದಲೇ ಹೇಗೆ ಜಡವಸ್ತುಗಳಿಗೆ ಚಾಲನಾಶಕ್ತಿ ಕೊಡುವ ಜೀವಂತ ವ್ಯಕ್ತಿಯ ತಂತ್ರಗಾರಿಕೆ ಒಂದು ಬಗೆಯೋ ಹಾಗೆಯೇ ಜೀವಂತ ವ್ಯಕ್ತಿಯ ಒಳಗೆ ಇರುವ ಕೆಲವು ಅಪರಿಚಿತ ಸಲಕರಣೆಗಳನ್ನು ತಿಳಿಯುವ ತಂತ್ರಕ್ರಮವೂ ಬೆಳೆದಿದೆ. ಇಲ್ಲಿ ಜೀವಂತ ವ್ಯಕ್ತಿ ಬಳಸುವ ಸಲಕರಣೆಗಳು ಮನಸ್ಸು, ಬುದ್ಧಿ, ಚಿತ್ತ. ಇವುಗಳ ಸಾಧ್ಯತೆಯ ಒಳಗನ್ನು ಪರಿಚಯಿಸಿಕೊಳ್ಳುತ್ತಾನೆ. ಮನುಷ್ಯನಿಗೆ ಆರಂಭದಲ್ಲಿ ತನ್ನ ಒಳಗೆಯೇ ಇರುವ ಸಾಧನಗಳ ಪರಿಚಯ ಇರುವುದಿಲ್ಲ. ಆ ಸ್ಥಿತಿಯಲ್ಲಿ ಸಾಧಕ ಅವುಗಳನ್ನು ಮೊದಲು ತಾನು ಪರಿಚಯಿಸಿಕೊಳ್ಳಲು ಹಲವು ರೀತಿಯ ಸಾಧನಾಕ್ರಮಗಳನ್ನು ರೂಢಿಸಿಕೊಳ್ಳುತ್ತಾನೆ. ಯಾವುದೇ ಒಂದು ದಿನಕ್ಕೆ ಹೇಗೆ ಕೈಯಲ್ಲಿರುವ ಬಿಡಿಭಾಗವನ್ನು ಜೋಡಿಸಿ ಒಂದು ಯಂತ್ರವನ್ನು ತಯಾರಿಸಲು ಸಾಧ್ಯವಿಲ್ಲವೋ ಹಾಗೆಯೇ ತನ್ನ ಒಳಗಿರುವ ಎಲ್ಲ ಸಲಕರಣೆಗಳನ್ನು ಸಾಧಕ ಆರಂಭದಲ್ಲಿ ಅರಿಯಲು ಸಾಧ್ಯವೇ ಇಲ್ಲ. ಕೇವಲ ಅವುಗಳನ್ನು ತಾನು ನಿರಂತರವಾಗಿ ನೋಡುವ, ಮತ್ತು ಸತತ ಅಭ್ಯಾಸದ ಜೊತೆ ಜೊತೆಗೆ ನಿತ್ಯ ಒಂದು ನಿರ್ದಿಷ್ಟ ಹೊತ್ತಿಗೆ ಏಳುವ, ಮಲಗುವ ಹಾಗೆಯೇ ಒಂದು ಶಾಸ್ತ್ರೋಕ್ತ ರೀತಿಯ ನಿಯಮಿತ ಆಹಾರ ಪದ್ಧತಿ ಮುಂತಾದ ಶಿಸ್ತುಗಳನ್ನು ಅಳವಡಿಸಿಕೊಳ್ಳುತ್ತಾ, ತನ್ನೊಳಗಿನ ಸಲಕರಣೆಗಳನ್ನು ಪರಿಚಯಿಸಿಕೊಳ್ಳುತ್ತಾನೆ. ತಂತ್ರ ಜಗತ್ತೇ ಒಂದು ಶಕ್ತಿ ಪ್ರವಾಹದಲ್ಲಿ ನಿರಂತರ ನಂಬಿಕೆ ಇಟ್ಟಿರುವ ಪಥವಾದ್ದರಿಂದ ತನ್ನಲ್ಲಿರುವ ಈ ಮನಸ್ಸು, ಬುದ್ಧಿ, ಚಿತ್ತ ಮುಂತಾದ ಪರಿಕರಗಳನ್ನು ಪರಿಚಯಿಸಿದ ಬಳಿಕ ಅವುಗಳಿಗೆ ಇರುವ ಶಕ್ತಿಸಾಧ್ಯತೆಯನ್ನು ಮುಂದಿನ ಹಂತದಲ್ಲಿ ಪ್ರಯೋಗ ಮೂಲಕ ತಿಳಿಯುವ ಕಡೆಗೆ ನಡೆಯುತ್ತಾನೆ.

ಅಂಥ ನಿರಂತರ ಪ್ರಯತ್ನದಿಂದಲೇ ಮನಸ್ಸು ಮತ್ತು ಇತರ ತನ್ನ ಒಳಗಿನ ಸಾಧನಾ ಸಲಕರಣೆಗಳು, ಒಂದೊಂದೇ ತಮ್ಮ ಶಕ್ತಿ ಸಾಮರ್ಥ್ಯವನ್ನು ವಿಸ್ತರಿಸುತ್ತಾ ಹೋಗುತ್ತದೆ. ಕುಡಿಯುವ ನೀರಿನ ಕಡೆಗೆ ತಾನು ಹೋಗುವ ಬದಲು ಕುಡಿಯುವ ನೀರೇ ತನ್ನ ಕೈಗೆ ಯಾಕೆ

ಬರಬಾರದು ಎಂಬ ಪ್ರಾಥಮಿಕ ಹಠ ಪ್ರಯೋಗಗಳೇ ಮುಂದೆ ಕಾಲಾಂತರದಲ್ಲಿ ಮಾಟ ಮಂತ್ರ ಮತ್ತು ಶಕ್ತಿವಿದ್ಯೆಗಳ ಸಾಧನೆಯ ಕಡೆಗೆ ನಡೆಯುತ್ತವೆ. ಇಲ್ಲಿ ಸಾಧಕ ತುಂಬ ದಿನಗಳ ಪರಿಶ್ರಮದಿಂದ ಮನಸ್ಸನ್ನು ತನಗೆ ಬೇಕಾದಲ್ಲಿ ಕಳುಹಿಸುವ ಹಾಗೆಯೇ ತನಗೆ ಬೇಕಾದ್ದನ್ನು ಪಡೆಯುವ ಕೆಲಸಕ್ಕೂ ಬಳಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಯಂತ್ರ ಬಿಡಿಭಾಗ ಸೂತ್ರಬದ್ಧವಾಗಿ ಜೋಡಿಸಿ ಅದಕ್ಕೊಂದು ಶಕ್ತಿಯ ಸಂಪರ್ಕ ಕೊಟ್ಟಾಗ ಅದು ಶಕ್ತಿಪ್ರವಾಹದ ಮಾಧ್ಯಮವಾಗಬಲ್ಲುದು ಎಂಬ ತಂತ್ರಗಾರಿಕೆಯ ವಿಜ್ಞಾನವೇ ಇದರ ಹಿಂದಿರುವ ವಿಜ್ಞಾನ ಕೂಡ.

ಅಂದರೆ ದೇಹಯಂತ್ರದಲ್ಲಿರುವ ಈ ಬಿಡಿಭಾಗಗಳ ಶಕ್ತಿ ತುಣುಕುಗಳನ್ನು ನಿರ್ದಿಷ್ಟ ಸೂತ್ರದಲ್ಲಿ ಪೋಣಿಸಿ, ಅವುಗಳಿಗೆ ಮೂಲಶಕ್ತಿಯ ಆದೇಶದ ಮೂಲಕ ಪ್ರವಹಿಸುವ ಸೂಚನೆ ನೀಡಿದಾಗ, ಸಾಧನಾ ಕ್ರಮದ ಮುಖಾಂತರ ದೇಹ ಒಂದು ಯಂತ್ರಸ್ಥಾನವಾಗಿ ಬಿಡಬಲ್ಲುದು. ಇದನ್ನು ತುಂಬ ಕಠೋರ ರೀತಿಯ ನಿಯಮ ಶಿಸ್ತುಗಳಿಂದ ಸಾಧಕ ಸಾಧಿಸುತ್ತಾನೆ. ಇದೊಂದು ತಂತ್ರಕ್ರಮವಾಗಿ ಕಡೆಗೆ ವ್ಯಕ್ತಿಗೆ ಅನೇಕಾನೇಕ ವಿದ್ಯೆಯ ಸಾಧನೆಗಳು ಸಾಧಿತವಾಗುತ್ತವೆ. ವ್ಯಕ್ತಿಗೆ ಈ ಮುಖೇನ ಖೇಚರವಿದ್ಯೆ, ವಶೀಕರಣ, ಜಲಸ್ತಂಭನ, ಸಮ್ಮೋಹಿನೀ ಮುಂತಾದ ಅನೇಕ ಸಿದ್ಧಿಗಳು ಕೈವಶ ಆಗಬಲ್ಲುವು. ಇದು ವ್ಯಕ್ತಿಯ ಸಾಧನಾ ಪಥದ ತಂತ್ರ. ಇಲ್ಲಿಯೂ ಜೀವ ಮತ್ತು ನಿರ್ಜೀವಗಳ ಮುಖಾಮುಖಿಯೇ ಇದೆ.

ತಂತ್ರಮಾರ್ಗದಲ್ಲಿ ಸಾಮಾನ್ಯವಾಗಿ ಇದೇ ತುಂಬ ಹೆಸರುವಾಸಿ ಮತ್ತು ಕೇವಲ ಇಂತಹ ಶಕ್ತಿಗಳಿಗಾಗಿಯೇ ಬಹಳ ಜನಪ್ರಿಯವಾದ ಪಥ ಇದು. ಅಷ್ಟೇ ಅಪವಾದಕ್ಕೂ ಒಳಗಾಗಿದೆ. ತಂತ್ರಪಥವನ್ನು ಹೀಗೆ ಶಕ್ತಿಯ ಕೈವಶಕ್ಕೆ ಸೀಮಿತ ಮಾಡಿದವರು ಬಹಳ. ಆದರೆ ತಂತ್ರ ಪಥದ ಅನೇಕ ಉದಾಹರಣೆಗಳು ತಂತ್ರಕ್ಕೆ ಇವೆರಡೇ ಆಯಾಮಗಳಲ್ಲ, ಮೂರನೆಯ ಆಯಾಮವೂ ಇದೆ ಎಂಬುದನ್ನು ಸಾಬೀತು ಪಡಿಸುತ್ತವೆ. ವಾಸ್ತವಿಕ ತಂತ್ರವು ಒಂದು ನಿಗೂಢ ಪಥ ಎಂಬ ಹೆಸರು ಪಡೆದಿರುವುದು ಅದಕ್ಕಿರುವ ಮೂರನೆಯ ಆಯಾಮದಿಂದ. ತಂತ್ರದ ಈ ಮೂರನೆ ಆಯಾಮ ಮೊದಲೆರಡು ರೀತಿಯ ಮೂಲ ತತ್ತ್ವವನ್ನೇ ಉಳ್ಳದ್ದೇ ಆದರೂ ಅದು ತುಂಬ ವಿಶಾಲವಾದದ್ದು ಮತ್ತು ಮೊದಲೆರಡಕ್ಕಿಂತಲೂ ಬಹಳ ಬಹಳ ಭಿನ್ನವಾದದ್ದು.

3. ತಂತ್ರ ಎಂಬ ಆಧ್ಯಾತ್ಮ ಪಥ : ಮೊದಲಿನ ಎರಡು ರೀತಿಗಳಲ್ಲಿ ಒಂದು ಸಾಧನಾ ಕ್ರಮವಾದ ಜಡಕ್ಕೆ ಜೀವ ಕೊಡುವ, ಅಥವಾ ಚೈತನ್ಯದ ಒಳಗಿರುವ ಸಾಧನಗಳನ್ನು ಗುರುತಿಸಿ ಚೈತನ್ಯವನ್ನು ಇನ್ನಷ್ಟು ವಿಸ್ತರಿಸುವ ರೀತಿಯದ್ದಾದರೆ, ಮೂರನೆಯದು ಸಂಪೂರ್ಣವಾಗಿ ಒಂದನ್ನು ಕಿತ್ತು ಇನ್ನೊಂದರ ಒಳಗಿಟ್ಟು ಬೆಸೆಯುವ ರೀತಿಯದ್ದು. ಶಕ್ತಿ ಸಾಧನಗಳ ಒಳಗೂ

ಸಾಧ್ಯತೆಯನ್ನು ಗುರುತಿಸಿ, ಅದರ ವಿಸ್ತಾರವನ್ನು ಹೆಚ್ಚಿಸಿ, ಯಂತ್ರವನ್ನು ಇನ್ನಷ್ಟು ಬಲಿಷ್ಠಗೊಳಿಸುವ ಕೆಲಸ ಮೊದಲ ಎರಡು ಕ್ರಮದಲ್ಲಿ ನಡೆದರೆ ಮೂರನೆಯದು ಇನ್ನೊಂದು ಚೇತನವನ್ನು ತನ್ನ ಚೇತನದ ವಿಸ್ತಾರಕ್ಕೆ ಹಿಗ್ಗಿಸಲು ಸಿದ್ಧಗೊಂಡಿರುವ ಯಂತ್ರವನ್ನು ಉಪಸಂಹಾರಗೊಳಿಸುವ ಕ್ರಮದ್ದು. ಇನ್ನೂ ಸರಳವಾಗಿ ಹೇಳುವುದಾದರೆ ಒಂದೇ ಎಂಜಿನ್ನನ್ನು ಇನ್ನೊಂದರ ಒಳಗಿಟ್ಟು ಬೆಳೆಯುವುದು ಅಥವಾ ನಡೆಯಿಸುವುದು.

ಇಲ್ಲಿ ಬುದ್ಧಿ ಚಿತ್ತ ಮನಸ್ಸು ಈ ಸಾಧನಗಳ ಮೂಲಕ ವ್ಯಕ್ತಿ ಅರಿವಿನ ವಿಸ್ತಾರವನ್ನು ಹಿಗ್ಗಿಸಿರುತ್ತಾನೆ. ಈ ಸಾಧನಗಳನ್ನು ಅದರ ಸಂಪೂರ್ಣ ವಿಸ್ತಾರದಲ್ಲಿ ಅನುಭವಿಸಿದ ವ್ಯಕ್ತಿ ಅವೆಲ್ಲ ಕೇವಲ ಒಂದು ಶಕ್ತಿಯ ಸಾಧ್ಯತೆ ಮಾತ್ರ ಎಂಬ ತೀರ್ಮಾನಕ್ಕೆ ತಲುಪಿ, ಮಾಟ ಮಂತ್ರ ಮುಂತಾದ ಯಾವುದೇ ತಂತ್ರ ವಿದ್ಯೆಗಳಿಗೆ ಮಾರು ಹೋಗದೆ, ಈ ಚೈತನ್ಯಕ್ಕೆ ಇರುವ ಇನ್ನೂ ಬೆಳವಣಿಗೆಯ ಸಾಧ್ಯತೆಯನ್ನೇ ಶೋಧಿಸುತ್ತಾನೆ. ಅಂತಿಮವಾಗಿ ಅರಿವಿನ ತುತ್ತ ತುದಿಯಲ್ಲಿ ಸಾಕ್ಷಾತ್ಕಾರ ಎಂಬ ತಿಳುವಳಿಕೆಯ ಸಾಧ್ಯತೆ ಇದೆ. ಈಗಾಗಲೇ ವಿವರಿಸಿರುವಂತೆ ಆರಂಭದಲ್ಲಿ ಆ 'ಅದು' ಯಾವುದು ಎಂಬ ಶೋಧನೆಯಲ್ಲಿ, ಹೊರಗಿನ ಅನೇಕ ಶಕ್ತಿ ಸಾಧ್ಯತೆ ಒಂದು ರೀತಿಯ ಅರಿವಾದರೆ ಆ ಅದು' ಹೊರಗಿಲ್ಲ ಒಳಗೇ ಇದೆ ಎಂಬ ಅರಿವೇ ಇಲ್ಲಿ 'ಸಾಕ್ಷಾತ್ಕಾರ' ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಇದು, ಅದೇ ಆಗಿ ಬಿಡುವ ಒಂದು ಪರಮ ಮಿಲನ ಸ್ಥಿತಿ.

ಆ ಸ್ಥಿತಿಯಲ್ಲಿ ಎರಡು ಸಾಧ್ಯತೆಗಳಿವೆ. ಒಂದು ಯಂತ್ರಕ್ಕೆ ಒದಗಿಸುವ ಇಂಧನ, ಗಾಳಿ ಮತ್ತು ಅದಕ್ಕೆ ಪೂರಕವಾದ ವಿದ್ಯುತ್‌ಶಕ್ತಿ ಇವುಗಳಿಂದಾಗಿ ಯಂತ್ರ ನೆಲದ ಮೇಲೆ ತನ್ನ ಅತಿಯಾದ [Maximum speed] ವೇಗವನ್ನು ತಲುಪಿತೆಂದರೆ ಎರಡು ಸಾಧ್ಯತೆ. ಒಂದೋ ಅದು ಪೂರಕವಾದ ಗರಿಯಿದ್ದರೆ ವಿಮಾನದಂತೆ ನೆಲಬಿಡಬೇಕು. ಗಗನದೆತ್ತರ ಹಾರಬೇಕು ಇಲ್ಲವೇ ಅದರ ಸಂಯಮ ತಪ್ಪಿ, ಅಪಘಾತಕ್ಕೆ ಒಳಗಾಗಿ ಛಿದ್ರಛಿದ್ರವಾಗಬೇಕು. ಈ ಎರಡೂ ಸಾಧ್ಯತೆಯನ್ನು ಅರಿವಿನ ಹಂತದಲ್ಲಿ ಸಾಧಕ ಅನುಭವಿಸುತ್ತಾನೆ.

ಈ ಎರಡರಲ್ಲಿ ಯಾವುದನ್ನು ಆಯ್ದುಕೊಳ್ಳುತ್ತಾನೆ ಎನ್ನುವುದು ಸಾಧಕನ ಸಾಮರ್ಥ್ಯಕ್ಕೆ ಸಂಬಂಧಪಟ್ಟದ್ದು. ಎರಡನ್ನೂ ಅರಿತ ಸಾಧಕ ಒಂದು ನಿರ್ಮಮಕಾರ ಸ್ಥಿತಿಯಲ್ಲಿ ಸುಮ್ಮನಾಗುವ ಸಾಧ್ಯತೆ ಒಂದಾದರೆ ಈ ಎರಡನ್ನು ಮತ್ತೊಂದು ಜೀವವಿಸ್ತಾರಕ್ಕೆ ಬಳಸುವ ಹಸಿವು ಇನ್ನು ಕೆಲವರದು. ಅದನ್ನೇ ತಂತ್ರಮಾರ್ಗದ ಮೂರನೆಯ ಆಯಾಮ ಎಂದದ್ದು.

ಇಲ್ಲಿ ಸಂಪೂರ್ಣವಾಗಿ ತನ್ನಲ್ಲಿರುವ ಶಕ್ತಿಯನ್ನು ವಿಸ್ತರಿಸಿದ ಸಾಧಕ ಅದೇ ಪ್ರಯತ್ನವನ್ನು ಇನ್ನೊಂದರ ಒಳಗೂ ಮಾಡುವ ಹೊಸ ಸೃಷ್ಟಿಯ ಕಡೆ ಮುಖ ಮಾಡುತ್ತಾನೆ. ಆರಂಭದ ಎರಡು ಆಯಾಮಗಳಿಗಿಂತಲೂ ಈ ಮೂರನೆಯದು ತುಂಬ ಕಷ್ಟಕರವಾದದ್ದು.

ಪೂರ್ತಿ ಅರಿವಿನ ತುತ್ತತುದಿ ತಲುಪಿದ ಸಾಧಕನಿಗೆ ಹೀಗೊಂದು ಹಸಿವು ಹುಟ್ಟಿಕೊಳ್ಳುತ್ತದೆ. ತಾನು ತನ್ನಂಥದೇ ಇನ್ನೊಂದನ್ನು ಇಲ್ಲಿ ಬೆಳೆಸಬೇಕು. ಇದು ಅರಿವಿನ ತುದಿ ಮುಟ್ಟಿದ ಎಲ್ಲರ ಹಸಿವೇನಲ್ಲ. ಕೆಲವರು ತಮ್ಮ ಅರಿವಿಗೆ ಅದನ್ನು ಮುಗಿಸಿ ನಿರ್ಗಮಿಸಬಹುದು. ಆದರೆ ಕೆಲವರು ಮಾತ್ರ ತಾವು ಬೆಳೆದಂತೆ ತಮ್ಮ ಮೂಲಕ ಇನ್ನೊಂದನ್ನು ಬೆಳೆಯಿಸುವ ಸಾಧ್ಯತೆಯನ್ನು ಹುಡುಕುತ್ತಾರೆ. ಅದು ಒಂದು ಅರ್ಥದಲ್ಲಿ ತಮ್ಮಲ್ಲಿರುವ ಚೈತನ್ಯವನ್ನು ಇನ್ನೊಂದರ ಒಳಗೆ 'ಇಟ್ಟುಹೋಗುವ ಹುಡುಕಾಟವೇ', ಇನ್ನೊಂದು ಚೈತನ್ಯವೇ ಆದರೂ ಅದಿನ್ನೂ ವಿಸ್ತಾರಗೊಳ್ಳದ ಶೈಶವಾವಸ್ಥೆಯಲ್ಲಿರುತ್ತದೆ. ಇದನ್ನೇ 'ಅಂತೇವಾಸಿ' ಎನ್ನಲಾಯಿತು.

ಇಲ್ಲಿಯೂ ಮೊದಲಿಗೆ ಆಯ್ಕೆ. ಆ ಅಂತೇವಾಸಿಯನ್ನು ಹುಡುಕುವ ಕೆಲಸವೇ ತುಂಬ ಸುದೀರ್ಘವಾದ ಒಂದು ಪ್ರಕ್ರಿಯೆ. ಗುರುವಿಗೆ ಅದು ಇಂಥದು ಇದೆ ಎಂದು ತಿಳಿದಿದ್ದರೂ, ಕೆಲವೊಮ್ಮೆ ಆ ಅಂತೇವಾಸಿಯ ಸಿದ್ಧತೆಗೂ ಕಾಲ ಮುಂತಾದ ಅರ್ಹತೆಯ ಅವಧಿಯೇ ಸುದೀರ್ಘವಿರುವುದರಿಂದ ಸಾಮಾನ್ಯವಾಗಿ ಅದು ಗುರು ದೇಹತ್ಯಾಗ ಮಾಡುವ ಸಮಯಕ್ಕೆ ತುಂಬ ಸಮೀಪ ಅಂತರದಲ್ಲಿ ನಡೆಯುತ್ತದೆ.

ಮೊದಲು ಅಂತೇವಾಸಿಯನ್ನು ಗುರುತಿಸುವುದು, ಆ ಮೂಲಕ ತನ್ನನ್ನು ಆ ಶಿಷ್ಯನೂ ಸ್ವೀಕರಿಸುವಂತೆ ದೂರದಿಂದಲೇ ಪೂರಕ ಸಿದ್ಧತೆ ಏರ್ಪಡಿಸುವುದು. ಆ ಬಳಿಕ ಮುಖಾಮುಖಿ, ಅನುಮಾನ, ಸಂದೇಹಗಳ ಕಾಲಾಂತರದಲ್ಲಿ ನಿಧಾನಕ್ಕೆ ಸಮರ್ಪಣೆ. ಆ ಬಳಿಕ ಗುರುವಿದ್ದಲ್ಲಿಗೆ ಖಾಯಂ ಆಗಿ ಬಂದು ಬಿಡುವ ಸ್ಥಿತಿ–ಇದು ಆರಂಭ. ಆದರೆ ಆನಂತರದ ಗುರು–ಶಿಷ್ಯರ ಪರಸ್ಪರ ತಯಾರಿ ಮತ್ತೆ ಕೆಲವರುಷಗಳದ್ದು.

ದೂರದಲ್ಲಿದ್ದ ಶಿಷ್ಯನನ್ನು ಗುರು 'ಗುರಿ'ಮಾಡಿ ಒಂದು ನಿರ್ದಿಷ್ಟ ಅಂತರದಲ್ಲಿಯೇ ಅವನ ಪ್ರಜ್ಞಾವಲಯದ ಮೇಲೆ ಹಲವು ಪರಿಣಾಮಗಳನ್ನು ಮಾಡುತ್ತಿರುತ್ತಾನೆ. ಕೆಲವು ಬಾರಿ ಅದು ಒಂದೆರಡು ವರುಷದ ತಯಾರಿ ಇರಬಹುದು. ಮತ್ತೆ ಕೆಲವೊಮ್ಮೆ ಹತ್ತು ಹದಿನೈದು ವರ್ಷಗಳವರೆಗೂ ವಿಸ್ತರಿಸಬಹುದು. ಹೀಗೊಂದು ತಯಾರಿ ಆದ ಬಳಿಕದ ಹಂತದಲ್ಲೇ ಗುರುವು ಗೊತ್ತಿದ್ದೂ ಗೊತ್ತಿಲ್ಲದಂಥ ಅಪರಿಚಿತ ಅವಸ್ಥೆಯಲ್ಲಿ ಶಿಷ್ಯನಿಗೆ ಮುಖಾಮುಖಿಯಾಗುತ್ತಾನೆ. ಭೇಟಿ. ಆ ಬಳಿಕ ಶಿಷ್ಯನಿಗೆ ನಿಧಾನ ಕುತೂಹಲ, ವಿಸ್ಮಯ, ಜೊತೆಜೊತೆಗೆ ಅನುಮಾನ ಈ ಮುಂತಾದ

ಹಲವು ಮಜಲುಗಳಲ್ಲಿ ಶಿಷ್ಯ ಕ್ರಮೇಣ ಗುರುವಿನ ವಲಯದ ಕಡೆಗೆ ಹೆಜ್ಜೆ ಇಡುತ್ತಾನೆ. ಹಾಗೆ ಪ್ರವೇಶವಾದ ಶಿಷ್ಯನನ್ನು ಗುರುವು ಹಲವು ಕ್ರಮ, ಉಪಕ್ರಮ, ಶಿಸ್ತು, ಮುಂತಾದವುಗಳಿಂದ ತಿದ್ದುವ, ಕೆತ್ತುವ ಆಕಾರ ಕೊಡುವ ಕೆಲಸವನ್ನು ಆರಂಭಿಸುತ್ತಾನೆ. ಮೊದಮೊದಲಿಗೆ ಶಿಷ್ಯನ ಬಾಹ್ಯವಲಯದ ಎಲ್ಲ ಸಂಗತಿಗಳಲ್ಲಿ ಗುರುವಿನ ಪ್ರವೇಶವಾಗುತ್ತದೆ. ಶಿಷ್ಯನ ಯಾವುದೇ ಅಪೇಕ್ಷೆ, ಆಸಕ್ತಿ, ಮುಂತಾದ ಎಲ್ಲ ಸಂಗತಿಗಳಲ್ಲಿಯೂ ಒಂದು ಹೊಸ ಸ್ಪರ್ಶ ಮತ್ತು ರೂಪುಕೊಡುವ ಕೆಲಸ ನಡೆಯುವುದರಿಂದ ಕಾಲಕ್ರಮೇಣದಲ್ಲಿ ಶಿಷ್ಯನ ಅನೇಕ ಬಾಹ್ಯ ಕ್ರಿಯೆ ಪ್ರತಿಕ್ರಿಯೆಗಳಲ್ಲಿ ಪರಿವರ್ತನೆಗಳು ಆರಂಭ ಆಗುತ್ತವೆ. ಇಂಥ ಪರಿವರ್ತನೆಗಳ ಜೊತೆಜೊತೆಗೆ ಶಿಷ್ಯನಲ್ಲಿ ಅನ್ಯವಿಷಯ ನಿರಾಸಕ್ತಿ ಪೂರ್ತಿಯಾಗಿ ಗುರುವಿಷಯದ ಅನುರಕ್ತಿ ಆರಂಭವಾಗಿ, ಶಿಷ್ಯ ಹಂತಹಂತವಾಗಿ ತನ್ನ ಎಲ್ಲ ಇದುವರೆಗಿನ ಆಸಕ್ತಿ, ಸಂಬಂಧ, ಕ್ಷೇತ್ರ, ಚಟುವಟಿಕೆಗಳಲ್ಲಿ ವಿಮುಕ್ತನಾಗಲು ತೊಡಗುತ್ತಾನೆ. ಅನ್ಯವಿಷಯ ನಿರಾಸಕ್ತಿ ಗುರು ಸಂಬಂಧಿ ವಿಷಯಗಳ ಅನುರಕ್ತಿಯನ್ನೇ 'ವೈರಾಗ್ಯ' ಎನ್ನುವುದು. ಇಂಥದ್ದೊಂದು ಗುರುವಲ್ಲದ ಎಲ್ಲ ವಿಷಯಗಳಲ್ಲಿ ಸಂಪೂರ್ಣ ವಿರಕ್ತಿ ಭಾವದ ತತ್ಪರಿಣಾಮವೇ ಶಿಷ್ಯನಲ್ಲಿ ಉಂಟಾಗುವ ಪರಿಪೂರ್ಣ ಭಾವ. ಯಾವುದೂ ಬೇಡವಾಗಿ ಒಂದಕ್ಕೆ ಅರ್ಪಿಸಿಕೊಳ್ಳುವುದು. ಹೀಗೆ ಎಲ್ಲದರಿಂದ ತ್ಯಕ್ತಭಾವ ಬೆಳೆಯಿಸಿಕೊಂಡ ಶಿಷ್ಯ ಸಂಪೂರ್ಣ ಪರಿತ್ಯಕ್ತನಾಗಿ ಗುರುವಲ್ಲದ ಇನ್ನೊಂದನ್ನು ನೋಡದ, ಕೇಳದ ಸರ್ವಾಂಗ ಸಮರ್ಪಣೆಯ ಹಂತ ತಲುಪುತ್ತಾನೆ. ಈ ಸಮರ್ಪಣೆಗೆ ಯಾವುದೇ ನಿಯಮಗಳಿಲ್ಲದ ಸ್ಥಿತಿಯಲ್ಲಿಯೇ ಗುರುವಿನ ಸರ್ವಸ್ವ ಸಂಗತಿಗಳ ಸ್ವೀಕರಣಾ ಭಾವವನ್ನು ಬೆಳೆಸುತ್ತದೆ. ಇದು ಒಬ್ಬ ಶಿಷ್ಯ ಪರಿಪೂರ್ಣ ಪಾತ್ರತೆಯನ್ನು ಪಡೆದ ಸೂಚನೆ.

ಅಷ್ಟು ಸಿದ್ಧತೆ ಪಡೆದ ಬಳಿಕ ಶಿಷ್ಯ ಬಹಳ ಕಾಲ ತನ್ನ ಪೂರ್ವ ಆಸರೆ ಮತ್ತು ಬಂಧನಗಳಲ್ಲಿ ಇರುವುದಿಲ್ಲ. ಅದರಿಂದ ತನ್ನನ್ನು ತೀವ್ರ ಕಳಚಿಕೊಳ್ಳುವ ಅವಸರವನ್ನು ಹಲವು ಸಂದರ್ಭಗಳಲ್ಲಿ ವ್ಯಕ್ತಪಡಿಸಿದರೂ, ಗುರು ಅದಕ್ಕೆ ಸಮ್ಮತಿ ಕೊಡದೆ ಸತಾಯಿಸಿದಂತೆ ಇರುತ್ತಾನೆ. ಅದು ಒಂದು ದೃಷ್ಟಿಯಿಂದ ಹಣ್ಣು ಪಕ್ವವಾಗಿಯೇ ಗಿಡದಿಂದ ಉದುರಬೇಕೆನ್ನುವ ಆತ್ಮೀಯ ತಡೆಯೇ ಹೊರತು ಪಾಡುಗಾಯಿಯಲ್ಲದ ಕಿರುಗಾಯಿಯನ್ನು ಕಿತ್ತು, ಸೆಳೆದು ಅಪಕ್ವವಾದದ್ದನ್ನು ಕರೆಯಿಸಿಕೊಳ್ಳದ ಎಚ್ಚರ.

ಹೀಗೆ ತಾನಾಗಿ ಪರಿಪಕ್ವ ಅವಸ್ಥೆಯಲ್ಲಿ ಎಲ್ಲವನ್ನು ಕಳಚಿಕೊಂಡು ಬಂದ ಬಳಿಕದ ಸ್ಥಿತಿಯಲ್ಲಿ ಗುರು ಶಿಷ್ಯನ ನಿಜವಲಯ ಪ್ರವೇಶಿಸುತ್ತಾನೆ. ಹೀಗೆ ಬಂದ ಶಿಷ್ಯನ ಬಗ್ಗೆ ಅತಿಯಾದ ಮಮಕಾರ, ತನ್ನನ್ನು ನಂಬಿ ಬಂದ ಈ ಜೀವದ ಕುರಿತು ವಿಶೇಷ ದಯೆ, ಕಾರುಣ್ಯ ಜೊತೆ

ಜೊತೆಗೆ ಅದು ತನ್ನನ್ನು ಮುಂದುವರಿಸುವ ತನ್ನ ಅಂತರಂಗದ ಕೂಸು ಎಂಬ ಕಾರಣಕ್ಕೆ ಇನ್ನಿಲ್ಲದ ನಿರೀಕ್ಷೆ, ಭರವಸೆ, ಆ ಕಾರಣಕ್ಕಾಗಿ ಸಣ್ಣಪುಟ್ಟ ತಪ್ಪುಗಳಿಗೂ ನಿರ್ದಾಕ್ಷಿಣ್ಯ ದಂಡನೆ, ಶಿಕ್ಷೆ ಮುಂತಾದ ಸರ್ವರೀತಿಯ ಪ್ರೇಮಧಾರೆಯನ್ನು ಎರೆದು ಶಿಷ್ಯನನ್ನು ಅಂತೇವಾಸಿಯಾಗಿಸುತ್ತಾನೆ. ಇಂತಹ ಸ್ಥಿತಿಯಲ್ಲಿ ಶಿಷ್ಯನನ್ನು ಕಣ್ಣರೆಪ್ಪೆ ಕಣ್ಣನ್ನು ಕಾಯುವಂತೆ, ಒಂದರೆಕ್ಷಣವೂ ಬಿಡದೆ, ಎದೆಯಿಂದ ಇಳಿಸದೆ ಕಾಯುತ್ತಾನೆ. ಆ ಮೂಲಕ ಜಗತ್ತಿನಲ್ಲಿ ಇರುವ ನಿರ್ವ್ಯಾಜ ಪ್ರೇಮದ, ಯಾವುದೇ ಮೋಹದ ಲೇಪವಿಲ್ಲದೆ ಇದುವರೆಗೂ ಕಂಡು ಕೇಳರಿಯದ ಒಂದು ಅದ್ಭುತ ಪ್ರೇಮಪ್ರಪಂಚಕ್ಕೆ ಕರೆದೊಯ್ಯುತ್ತ ಇಲ್ಲಿ ಪ್ರೇಮವು ಉಸಿರು ಉಸಿರನ್ನು ಬೆರೆತು ಒಂದಾಗುವ ತಾದಾತ್ಮ್ಯ ಅವಸ್ಥೆಯಲ್ಲಿ ಇರುವುದರಿಂದ ಶಿಷ್ಯನಿಗೆ ಜಗದ ಇದುವರೆಗಿನ ಸರ್ವಸ್ವವೂ ಮರೆತು, ಕಳೆದುಹೋಗಿ, ತಾನು ಮತ್ತು ಗುರು ಮಾತ್ರವೇ ಪ್ರಪಂಚವೆಂಬ ಸ್ಥಿತಿಯಲ್ಲಿ, ಇಬ್ಬರೆಂಬ ಭೇದವೂ ಅಳಿದು ಅಭಿನ್ನಭಾವ ಮಾತ್ರ ಉಳಿದ ಮನೋಭೂಮಿಕೆ ನಿರ್ಮಾಣ ಆಗುತ್ತದೆ.

ಹೀಗೆ ಎರಡಿಲ್ಲದ ಒಂದೇ ಎಂಬ ಭಾವದಲ್ಲಿಯೇ ಗುರುವು ನಿಧಾನ ಶಿಷ್ಯನ ಅಂತರಂಗದ ವಲಯವನ್ನು ಪ್ರವೇಶಿಸುವ ಕ್ರಿಯೆಗೆ ತೊಡಗುತ್ತಾನೆ. ನಮಗೆ ತಿಳಿದಿರುವ ದೇಹ ದೇಹ ಮಿಲನಕ್ಕೆ ಇರುವ ಲಿಂಗ ರಂಧ್ರವಲ್ಲದ ಬೇರೆ ರಂಧ್ರಗಳ ಪ್ರವೇಶದ ಅನುಕ್ರಮಣಿಕೆಯೂ ಇಲ್ಲಿದೆ. ಇಲ್ಲಿ ಗುರುವು ಶಿಷ್ಯನ ಕಣ್ಣಿನ ಗೋಲಿಯೊಳಗೆ ತನ್ನ ಗೋಲಿಯನ್ನು ಒತ್ತಿ ಕಣ್ಣನ್ನು ಪ್ರವೇಶಿಸುತ್ತಾನೆ. ಇವೆಲ್ಲವು ನಿರ್ದಿಷ್ಟ ಏಕಾಂತ, ಶಿಸ್ತು ಮತ್ತು ಸಂಯಮಗಳನ್ನುಳ್ಳ ಕೆಲವು ಸಂದರ್ಭಗಳಲ್ಲಿ ನಡೆಯುತ್ತದೆ. ಮತ್ತು ಅದು ಇಂಥ ಹಲವು ಪ್ರಯೋಗ ಮತ್ತು ಪರಿಶ್ರಮಗಳ ಮೂಲಕ ಕೊನೆಗೊಮ್ಮೆ ಸಾಧ್ಯವಾಗುತ್ತದೆ. ಅದು ಚಕ್ಷುರಿನ್ಮೀಲಿತಗೊಳಿಸುವ ಗುರುಕಾರ್ಯದ ಹಾಗೆ ನಡೆದು ನಿಧಾನಕ್ಕೆ ಶಿಷ್ಯನ ಅರಿವಿಗೆ ಲಭ್ಯವಾಗುತ್ತದೆ.

ಹೀಗೆ ಕಣ್ಣನ್ನು ಒಂದು ಪರಿವರ್ತನೆಗೆ ಒಳಗು ಮಾಡುವ ಈ ಅಭ್ಯಾಸ ಕ್ರಮವನ್ನು ಉಳಿದ ರಂಧ್ರಗಳಿಗೂ ವಿಸ್ತರಿಸುತ್ತಾ ನಡೆಸುತ್ತಾನೆ. ಕಿವಿಯ ರಂಧ್ರಕ್ಕೆ ತನ್ನ ಕಿವಿಯ ರಂಧ್ರವನ್ನು ಒತ್ತಿ ಹಿಡಿದು ಎಷ್ಟೋ ಕಾಲದವರೆಗೆ ಒಂದು ಮೌನ ಕೇಳ್ಕೆಯ ರೀತಿಯಲ್ಲಿ ಕಿವಿ, ಮೈಯ ಸ್ವೇದ ರಂಧ್ರಗಳಿಗೆ ತನ್ನ ಸ್ವೇದ ರಂಧ್ರವನ್ನು ತಿಕ್ಕಿ ತೀಡಿ ಸ್ಪರ್ಶ ಎಂಬ ಚರ್ಮಭಾಗದ ಹಳೆಯ ಸ್ಪಂದನಗಳನ್ನು ಹರಿಯುವ ಮೂಲಕ ಹೊಸದೊಂದು ಸೂಕ್ಷ್ಮಜ್ಞತೆಯನ್ನು ಪಡೆಯುವ ಚರ್ಮ. ಇವು ಆರಂಭದ ಹಂತಗಳು. ಹಾಗೆಯೇ ಬಾಯಿಗೆ ಬಾಯಿಯಿಟ್ಟು, ನಾಲಿಗೆಗೆ ನಾಲಿಗೆ ಹಚ್ಚಿ ಅದು ಗಂಟಲು ಪ್ರವೇಶ ಮಾಡುವ ಹೊಸಕ್ರಿಯೆ. ಇಲ್ಲಿ ಬಾಯಿಗೊಂದು ವಿಶೇಷ ಪರಿಶುದ್ಧತೆಯ ಅನುಭವವೂ ಕಾಲಾಂತರದಲ್ಲಿ ಸಂಭವಿಸುತ್ತದೆ. ಇವೆಲ್ಲಕ್ಕೂ ಕೊನೆಯ ಶಿಖರಪ್ರಾಯದಂತೆ

ಮೂಗಿನ ಹೊಳ್ಳೆಗೆ ಹೊಳ್ಳೆ ಸೇರಿಸಿ ಶಿಷ್ಯ ಬಿಟ್ಟ ಉಸಿರನ್ನು ಗುರು, ಗುರು ಬಿಟ್ಟ ಉಸಿರನ್ನು ಶಿಷ್ಯ ಪರಸ್ಪರ ಸ್ವೀಕರಿಸಿ, ಸಮರ್ಪಿಸಿ ಒಂದು ಹೊಸ ಪ್ರಾಣವಾಯುವಿನ ಚಕ್ರ ನಿರ್ಮಾಣ ಆಗುತ್ತದೆ. ಇಲ್ಲಿಂದ ಅಂತೇವಾಸಿಯು ದೇಹದ ಆಂತರಂಗಿಕ ವಲಯದಲ್ಲಿ ಎಲ್ಲ ಸೀಮಾರೇಖೆಗಳಿಲ್ಲದ ನಿಸ್ಸೀಮ ಸ್ಥಿತಿಯ ಒಂದು ಮಿಲನಾವಸ್ಥೆಯನ್ನು ಅನುಭವಿಸುತ್ತಾನೆ. ಅದು ಸಂಪೂರ್ಣವಾಗಿ ಇಂದ್ರಿಯ ಮತ್ತು ಇಂದ್ರಿಯೇತರ ಅನುಭವದವರೆಗಿನ ಪರಿವರ್ತನೆ. ಹೃದಯ, ಶ್ವಾಸಕೋಶ ಮುಂತಾದ ಆಂತರಂಗಿಕ ಕೋಶಗಳನ್ನು ಪ್ರವೇಶಿಸಿದ ಗುರುವು ಅಂತೇವಾಸಿಯನ್ನು ಹೀಗೆ ಬಾಹ್ಯ ಮತ್ತು ಆಂತರಂಗಿಕವಾಗಿ ಸನ್ನದ್ಧನಾಗಿ ಮಾಡುತ್ತಾನೆ.

ಒಂದು ವಿಶೇಷ ಮನಸ್ಥಿತಿ, ದೇಹಸ್ಥಿತಿ ಮತ್ತು ಎಲ್ಲ ಅರ್ಥಗಳಿಂದಲೂ ಸಾಮಾನ್ಯ ಸ್ಪಂದನಗಳ ಆಚೆಗಿನ ಸೂಕ್ಷ್ಮ ಸಿದ್ಧತೆಯವರೆಗೆ ಹೀಗೆ ಅಂತೇವಾಸಿಯನ್ನು ನೇರ್ಪುಗೊಳಿಸುವ ಗುರುವು ಇದರ ಜೊತೆ ಜೊತೆಗೆ ತಾನು ತನ್ನನ್ನು withdraw [ಕಳಚಿಕೊಳ್ಳುವ] ಮಾಡಿಕೊಳ್ಳುವ ಒಂದು ಆಂತರಂಗಿಕ ಸಿದ್ಧತೆಯನ್ನು ಮಾಡುತ್ತಿರುತ್ತಾನೆ. ಇಲ್ಲಿ ಶಿಷ್ಯನಿಗೆ ಇದರ ಯಾವುದೇ ಕುರುಹು, ಅರಿವುಗಳು ಗಮನಕ್ಕೆ ಬಾರದಂತೆಯೇ ಇದ್ದರೂ ಆಗಾಗ ಮುನ್ಸೂಚನೆಯಂತೆ, ಕೆಲವೊಮ್ಮೆ ಎಚ್ಚರಿಕೆಯಂತೆ ಗುರುವು ತನ್ನ ನಿರ್ಗಮನದ ಸಂದೇಶಗಳನ್ನು ನೀಡುತ್ತಿರುತ್ತಾನೆ. ಅವೆಲ್ಲವೂ ಅಂತೇವಾಸಿಯ ಅರಿವಿಗೆ ಬಾರದಂತೆ ಮತ್ತು ಅವು ಒಂದು ಎಚ್ಚರದ ವಲಯದಲ್ಲಿ ದಾಖಲಾಗುವಂತೆ ಈ ಪ್ರಕ್ರಿಯೆ ನಡೆಯುತ್ತಿರುತ್ತದೆ. ಗುರುವು ಅಂತೇವಾಸಿಯನ್ನು ಜಗದಲ್ಲಿ ಇನ್ನಿಲ್ಲದ ನಿರ್ವ್ಯಾಜ ಮತ್ತು ನಿಷ್ಕಲ್ಮಶ ಪ್ರೇಮದಲ್ಲಿ ತೋಯಿಸಿ, ಹೊರಗಿನ ಎಲ್ಲ ಎಲ್ಲ ಸಂಗತಿಗಳಿಂದಲೂ ಸಹಸ್ರ ಸಹಸ್ರ ಮೈಲು ದೂರ ನಡೆಸಿಕೊಂಡು ಬಂದಿರುತ್ತಾನೆ. ಅದು ಇಬ್ಬರೂ ಒಬ್ಬರಾಗಿ ಇನ್ನೊಂದರ ಅರಿವೇ ಇಲ್ಲದೆ ಇರುವ ಪರಮ ಏಕಾಂತದ ಸನ್ನಿವೇಶ.

ಅಲ್ಲಿ ಗುರು ತಾನು ಹಠಾತ್ತಾಗಿ ದೇಹದಿಂದ ಕಳಚಿಕೊಂಡು ಇದುವರೆಗೆ ಇದ್ದ ಇಡೀ ಪರಿಸ್ಥಿತಿಯನ್ನು ಅಂತೇವಾಸಿ ಥಟ್ಟಂತ ಬೆದರಿ ನೋಡುವ ಒಂದು ಅನುಭವಕ್ಕೆ ತಳ್ಳುತ್ತಾನೆ. ಎಲ್ಲ ಎಲ್ಲವನ್ನು ಕಳಚಿಕೊಂಡು ಬಂದ ಮತ್ತು ಎಲ್ಲರಿಂದಲೂ ಹೊರಗಾಗಿ ಗುರುವಿನ ಒಳಗಷ್ಟೇ ತುಂಬ ಸುಭದ್ರ ಮತ್ತು ಹಿತಾವಸ್ಥೆಯಲ್ಲಿದ್ದ ಅಂತೇವಾಸಿ, ಒಂದರೆಕ್ಷಣದೊಳಗೆ ಸುಖವಾಗಿ ನೀರಿನಲ್ಲಿ ಈಸಿಕೊಂಡಿದ್ದ ಮೀನು, ನೀರಿನಿಂದಲೇ ತಾನು ಬದುಕಿದ್ದೇನೆ ಎಂಬ ಅರಿವೇ ಇಲ್ಲದೆ ಅಭಿನ್ನವಾದ ಕ್ಷಣದಲ್ಲಿ ಇದ್ದಾಗ, ಥಟ್ಟಂತ ನೀರಿನಿಂದ ಹೊರಗೆ ಬಿದ್ದಂತೆ ಚಡಪಡಿಸುತ್ತಾನೆ. ದೈಹಿಕ, ಮಾನಸಿಕ ಎಲ್ಲ ವಲಯಗಳಲ್ಲೂ ಅದೊಂದು ಸಾವು ಬದುಕಿನಂಥ ಪ್ರಳಯಾಂತಕ ಸ್ಥಿತಿ.

ಇಲ್ಲಿ ಕೆಲವರು ಮಾತ್ರ ದಾಟಿದ್ದಾರೆ. ಹಲವರು ಹುಚ್ಚಾಗಿದ್ದಾರೆ, ಇನ್ನು ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಗ ಜಾಗೃತವಾಗುವ ಒಳಗಿನ ಶಕ್ತಿಗೆ ಕುಂಡಲಿನಿ ಎಂಬ ಹೆಸರು.

ಹೀಗೊಂದು ನಿಧಾನ ಹೊರವಲಯಗಳನ್ನು ಪ್ರವೇಶಿಸಿದ ಗುರುವಿಗೆ ಅಂಥ ಒಂದು ಹುನ್ನಾರದ ಕಾರಣ ಏನು ಎಂಬಂತೆ ಈ ಪ್ರಸಂಗ ನಡೆಯುತ್ತದೆ. ಆದರೆ ಗುರು ಜೊತೆಗಿದ್ದಾಗ ನಡೆಸಿದ್ದು ಕೇವಲ ಭೂಮಿಕೆಯ ಸಿದ್ಧತೆ ಮಾತ್ರ. ಅಥವಾ ಅದು ಪಾತ್ರೆಯನ್ನು ಶುದ್ಧೀಕರಿಸುವ ಕೆಲಸ ಮಾತ್ರ. ಆ ಪಾತ್ರೆಯನ್ನು ತುಂಬುವ ಕೆಲಸವನ್ನು ಗುರುವು ಇಷ್ಟರವರೆಗೂ ಮಾಡಿರುವುದಿಲ್ಲ. ಸಿದ್ಧವಾಗಿ ಪಾತ್ರೆಯು ತುಂಬಿಕೊಳ್ಳುವ ಸಾಧ್ಯತೆಗೆ ನೆರವು ಮಾತ್ರ ಈ ಮೊದಲಿನ ತಯಾರಿ. ಅಂಥ ತಯಾರಿಯನ್ನು ಅಂತೇವಾಸಿ ಮುಂದಿನ ಪ್ರಳಯಾಂತಕ ಸಂದರ್ಭದಲ್ಲಿ ಹೇಗೆ ಬಳಸಿಕೊಳ್ಳುತ್ತಾನೆ ಎಂಬುದು ಸಿದ್ಧಗೊಳಿಸಿದ ಗುರುವಿನ ಮತ್ತು ಸಿದ್ಧವಾದ ಶಿಷ್ಯರಿಬ್ಬರ ಅರ್ಹತೆಗೆ ಸಂಬಂಧಿಸಿದ್ದು. ಅದರಲ್ಲಿ ಸ್ವಲ್ಪ ಎಡವಿದ್ದರೂ ಹುಚ್ಚು ಅಥವಾ ಆತ್ಮಹತ್ಯೆಯ ಅವಸ್ಥೆ. ಎಡವದಂತೆ ನಡೆಯುವುದು ದಾಟುವ, ಅವನು ಇವನಾಗುವ ಬೆಳವಣಿಗೆಯ ಕ್ರಮ.

ಇಲ್ಲಿ ತುಂಬ ಮುಖ್ಯವಾದ ಸಂಗತಿ ನಂಬಿಕೆ. ಆದರೆ ಇದು ಆರಂಭ ಆಗುವುದೇ ಅತೀ ದೊಡ್ಡ ಸಂಶಯದಲ್ಲಿ. ಇದ್ದಕ್ಕಿದ್ದಂತೆ ಕೈಬಿಟ್ಟು ಹೋದ ಅನುಭವಕೊಟ್ಟ ಗುರುವಿನ ಕುರಿತು ಅದುವರೆಗೆ ಜತೆಗಿದ್ದ ಎಲ್ಲ ಎಲ್ಲ ದಿನಗಳ ಕ್ರಿಯೆ, ಭಾವಗಳೆಲ್ಲ ಒಮ್ಮಿಂದೊಮ್ಮೆಲೆ ನೇತ್ಯಾತ್ಮಕ ರೀತಿಯಲ್ಲಿ ಅರ್ಥವಾಗತೊಡಗಿ, ಇದುವರೆಗಿನ ಗುರುವೊಬ್ಬ ದೊಡ್ಡ ಕೊಲೆಗಡುಕನಂತೆ, ಬೇಡವೆಂದರೂ ಬೆನ್ನಟ್ಟುವ ಭೂತದಂತೆ ಆವಿರ್ಭವಿಸುತ್ತಾನೆ. ಅಲ್ಲಿಂದ ಆರಂಭ ಆಗುವುದೇ ಪರಸ್ಪರ ಸಂಘರ್ಷ, ದೋಷಾರೋಪಣೆ, ತಡೆದುಕೊಳ್ಳಲಾಗದ ಅವಮಾನ. ಸಂದೇಹ ಹೀಗೆ ಹೆಚ್ಚುತ್ತಾ ಇದುವರೆಗೆ ಬದುಕಿನ ನಾಯಕ, ಪ್ರೇಮದೇವತೆಯಾಗಿದ್ದ ಗುರುವು ಖಳನಾಯಕನಾಗಿ ನಯವಂಚಕನಾಗಿ ಇನ್ನಿಲ್ಲದ ಬದುಕಿನ ಪ್ರತಿಸ್ಪರ್ಧಿಯಾಗಿ ಕಾಣಿಸತೊಡಗುತ್ತಾನೆ. ಆಗ ಅಂತೇವಾಸಿಗೆ ಬದುಕಿಗೆ ಬೆನ್ನು ಹಾಕಿ ಬಿಡುವ, ಸಾಯುವ ಅಥವಾ ಎದುರಿಸಲಾಗದ ಅಧೀರತೆ. ಭಯ ಆರಂಭ ಆಗಿ ಬಿಡುತ್ತದೆ. ಅದು ಆಕ್ಷಣಕ್ಕೆ ಬದುಕಿನ ಇದುವರೆಗೆ ಅಂತೇವಾಸಿಯ ಅರಿವಿಗೇ ಬರದ ಎಲ್ಲ ಎಲ್ಲ ದೌರ್ಬಲ್ಯಗಳನ್ನು ಆಗ ಬಡಿದೆಬ್ಬಿಸುತ್ತದೆ. ಆ ದೌರ್ಬಲ್ಯಗಳ ಹೊಡೆತಕ್ಕೆ ಸಿಕ್ಕಲ್ಲಿ ಗಾಳಿಪಟದಂತೆ ಅಂತೇವಾಸಿ, ಛಿದ್ರ ಛಿದ್ರವಾಗುವ ಸನ್ನಿವೇಶದಲ್ಲೇ ಗುರುವು ಇದುವರೆಗೆ ಮಾಡಿದ ಸಿದ್ಧತೆಯ ಪರಿಣಾಮವಾಗಿ ಬಲಿಷ್ಠವಾಗಿ ಬೆಳೆದು ನಿಂತಿರುವ ಇನ್ನಿತರ ಶಕ್ತಿಗಳು ಮುಖಾಮುಖಿಯಾಗುತ್ತವೆ. ಇವೆರಡರ ನಡುವೆ ಆಗ ಒಂದು ದೊಡ್ಡ ಸಂಗ್ರಾಮವೇ

ನಡೆಯುತ್ತದೆ. ಒಂದು ದೃಷ್ಟಿಯಿಂದ ಆ ದೌರ್ಬಲ್ಯವೆಲ್ಲವೂ ಅಂತೇವಾಸಿಯ Self property ಗಳಾದರೆ ಆ ಬಲಿಷ್ಠ ಸಂಗತಿಗಳೆಲ್ಲ ಗುರುವಿನ Self property ಗಳು ಅವನ ಆಕಾರ ತೊಟ್ಟು ಯುದ್ಧಕ್ಕೆ ನಿಲ್ಲುತ್ತವೆ. ಆಗ ಆರಂಭ ಆಗಿ ಬಿಡುತ್ತದೆ ಗುರು ಶಿಷ್ಯರ ನಡುವೆ ಇನ್ನಿಲ್ಲದ ಕದನ. ನಿಜಾರ್ಥದಲ್ಲಿ ಅದು ನಮ್ಮ ಒಳಗೇ ಇರುವ ಇದು ಮತ್ತು ಅದರ ಮುಖಾಮುಖಿ. ಇದು ಅದನ್ನು ಸೇರುವ ಪೂರ್ವದಲ್ಲಿ ಹುಟ್ಟುವ ಸಂಶಯ ಅನುಮಾನ ಎಲ್ಲದರ ಮುಖಾಮುಖಿ. ನಮ್ಮ ಒಳಗೆ ಆರಂಭದಲ್ಲಿ ಎರಡು, ಆನಂತರ ಒಂದು ಎಂಬ ರೀತಿಯ ಯೋಗ.

ಅದು ಗುರುವಿನ ನೆಪದಲ್ಲಿ ಗುರುವೇ ಎಚ್ಚರಿಸುವ ನಮ್ಮ ಒಳಗಿನ ಬಲ-ಅಬಲ, ಸಣ್ಣ-ದೊಡ್ಡ, ಒಟ್ಟಿನಲ್ಲಿ ನಮ್ಮೊಳಗಿನ ಎರಡು ಧ್ರುವಗಳನ್ನು ಮುಖಾಮುಖಿಯಾಗಿಸುವ ಕ್ರಮ. ಅದು ಆಗದೆ ಈ ಇದು ತನ್ನ ವಿಸ್ತಾರವನ್ನು ಕಂಡುಕೊಳ್ಳುವುದು ಸಾಧ್ಯವೇ ಇಲ್ಲ. ಆದ್ದರಿಂದಲೇ ಗುರುವೇ ಅಂತಿಮವಲ್ಲ ಅವನು ಕೇವಲ ಕಿಡಿ ಹೊತ್ತಿಸಿ ಹೋಗುವ ನೆಪ, ಉರಿಯನ್ನು ಅನುಭವಿಸುವವನು ಇವನೇ. ಇದು ವಿಸ್ತಾರವನ್ನು ಅನುಭವಿಸಬೇಕೆನ್ನುವ ಪ್ರತೀ ಜೀವಕ್ಕೂ ಅನಿವಾರ್ಯ.

ಈ ಕದನವು ಅಂತಿಮವಾಗಿ ದುರ್ಬಲನನ್ನು ಬಲಿಷ್ಠನ ಕಡೆಗೆ ಒಲಿವಂತೆ ಮಾಡುವ, ಬಲಿಷ್ಠಕ್ಕೆ ಒಪ್ಪಿಸಿ ತಾನು ಅದರಲ್ಲಿ ಬೆಳೆಯುವ ಸಮಯದ ಹಾಗೆ ಇರುತ್ತದೆ. ಆದರೆ ಅದು ದುರ್ಬಲವೆಂದು ತಿಳಿದಿದ್ದರೂ ಅದಕ್ಕೆ ಜೋತು ಬೀಳುವ ಒಂದು ಮೋಹ ನಿರಂತರವಾಗಿ ಕಾಡುತ್ತದೆ. ಆದರೆ ಗುರುವಿಗೆ ಆ ದುರ್ಬಲ ಕೋಶವನ್ನು ಹರಿದು ಒಳಗಿರುವ ಬಲಿಷ್ಠ ವಜ್ರದ ಕೂಸನ್ನು ಹೊರಗೆ ತೆಗೆಯುವ ಹಂಬಲವಿರುತ್ತದೆ. ಆ ಕೆಲಸವನ್ನು ತಾನು ಸಾಯುವ ಮುನ್ನ ಮಾಡಿರುವುದರಿಂದ ಒಳಗಣ ಬಲವೂ ಈಗ ಹೆಡೆಯೆತ್ತಿ ನಿಂತಿರುತ್ತದೆ. ಪರಸ್ಪರ ತಾದಾತ್ಮ್ಯ, ಒಲವು, ಅಂಗೀಕಾರ ಭಾವ ಏರ್ಪಟ್ಟು ಶಿಷ್ಯ ಆ ಬಲವನ್ನು ಒಪ್ಪಿಕೊಳ್ಳುವುದು ತುಂಬ ತುಂಬ ಕಡಿಮೆ.

ಅನೇಕ ದಿನಗಳ ಇಂಥ ಒಳಹೊರಗಣ ಸಂಘರ್ಷಗಳ ಪರಮ ಹಂತದಲ್ಲಿ ಆ ದುರ್ಬಲ ಸಂಗತಿಯು ಓಹ್ ಇದೂ ನಾನೇ, ಅದು ನಾನೇ ಎಂಬ ಅರಿವನ್ನು ತಲುಪಿ, ಅದನ್ನು ಒಪ್ಪಿಕೊಂಡು ಸಮರ್ಪಿಸಿ, ಸ್ವೀಕರಿಸುವ ಸ್ಥಿತಿಯನ್ನು ತಲುಪಿದರೆ ಅದು ಕೊನೆಯ ಹಂತವಾದ ಜೀವ ಪರಿವರ್ತನೆ. ಇದುವರೆಗಿನ ದೌರ್ಬಲ್ಯಗಳೆಲ್ಲ ಇಂದ್ರಿಯ, ಮನಸ್ಸು, ಬುದ್ಧಿ, ಚಿತ್ತ ಸಂಬಂಧಿ ದೌರ್ಬಲ್ಯಗಳ ಪರಿವರ್ತನೆಯ ರೂಪದಲ್ಲಿ ಗುರುವು ಜೀವಂತವಿದ್ದಾಗ ನಡೆದಿದ್ದರೆ, ಈಗ ಪ್ರಕಟವಾಗುವ ದೌರ್ಬಲ್ಯಗಳು ಸಂಪೂರ್ಣವಾಗಿ ಜೀವ ದೌರ್ಬಲ್ಯಗಳಿಗೆ ಸಂಬಂಧಿಸಿದ್ದು. ಅದು

ಆ ಜೀವದ ಬೆಳವಣಿಗೆಯನ್ನು ಕಣ್ಣಿಟ್ಟು ಆರಿಸಿ, ಅದರ ಮೇಲೆ ಪ್ರಯೋಗ ಮಾಡಿ, ಆ ಜೀವವನ್ನೇ ಬೆಳೆಸುವ ಉದ್ದೇಶವಿಟ್ಟ ಗುರುವಿನ ಕಾರಣದಿಂದಲೇ ಗುರುವಿನ ಮರಣಾನಂತರ ಎಚ್ಚರಾಗುತ್ತದೆ, ಮತ್ತು ಪ್ರಕಟವಾಗುತ್ತದೆ. ಹೀಗೆ ಜೀವಕೋಶವನ್ನು ಹರಿದು ಅಲ್ಲಿರುವ ಸಕಲ ಅನಗತ್ಯ ಪರಿಕರಗಳನ್ನು ಹೊರಗೆಳೆದು ಶುಚಿಮಾಡಿ ಬೆಳವಣಿಗೆ, ಬಲದಿಂದ ಬಲಿಷ್ಠವಾಗಿರುವ ತನ್ನನ್ನು ಅಲ್ಲಿ ಪ್ರತಿಷ್ಠಾಪಿಸಿ, ತಾನು ಬೆಳೆದು ಇದುವರೆಗಿನ ನಡೆಯ ಮುಂದಿನ ದಾರಿಗೆ ಶಿಷ್ಯನನ್ನು ಸಿದ್ಧಗೊಳಿಸುವ ಈ ಕ್ರಿಯೆಯೇ ತಂತ್ರದ ಮೂರನೆಯ ಆಯಾಮ.

ಈ ಆಯಾಮವು ತಂತ್ರಮಾರ್ಗದ ಪರಿಪೂರ್ಣತೆಯ ಕೊನೆಯ ಹಂತ. ಇಲ್ಲಿ ಅಣುವನ್ನು ಪರಮಾಣುತ್ವದ ಕಡೆಗೆ ವಿಸ್ತರಿಸುವ ಒಂದು ಜೀವತಂತ್ರವಿದೆ. ಇದು ನಿರ್ಜೀವ ಯಂತ್ರಗಳನ್ನು ನೇರ್ಪಡಿಸುವ ಮೆಕ್ಯಾನಿಕ್. ಜೀವಂತ ವ್ಯಕ್ತಿಯನ್ನು ಮತ್ತಿನ ಔಷಧಿಯಿಂದ ನಿದ್ರೆ ಬರಿಸಿ ಕೆಲಸ ಮಾಡುವ ವೈದ್ಯ ಇಬ್ಬರನ್ನು ಮೀರಿಸಿದ, ಜೀವಂತ ವ್ಯಕ್ತಿಯ ಜೀವಾಂಶಗಳ ಜೊತೆಗೆ ಜೀವಂತವಾಗಿ ನಡೆವ ಅತಿದೊಡ್ಡ ಕಸರತ್ತು. ಇಲ್ಲಿ ತನ್ನಲ್ಲಿರುವ ಸರ್ವಸ್ವವನ್ನು ಇನ್ನೊಂದರೊಳಗಿಟ್ಟು ಹೊಸದನ್ನು ಹುಟ್ಟಿಸುವ, ಬೆಳೆಯಿಸುವ ಒಂದು ಅಪೂರ್ವ ಸೃಷ್ಟಿಕ್ರಮವಿದೆ. ಈ ವಿದ್ಯೆಯನ್ನೇ ಶಕ್ತಿಪಾತ ಎಂಬ ಹೆಸರಿನಿಂದ ಕರೆಯಲಾಗಿದೆ.

ಹೀಗೆ ತಂತ್ರವು ಬಹಳ ವಿಶಾಲ ಅರ್ಥವ್ಯಾಪ್ತಿಗಳನ್ನು ಹೊಂದಿ ಪ್ರತಿಯೊಂದು ಸ್ತರದಲ್ಲೂ ಒಂದೊಂದು ವಿಭಿನ್ನ ಅರ್ಥಸಾಧ್ಯತೆಗಳನ್ನುಳ್ಳ ಒಂದು ಪಥ. ಅದನ್ನು ನಿರ್ದಿಷ್ಟವಾದ ಒಂದು ಕ್ರಮಕ್ಕೆ ಕಟ್ಟಿಹಾಕುವುದು ನಮ್ಮ ಅಜ್ಞಾನ. ತಂತ್ರ ಬಹುತರವಾಗಿ ಒಂದು ವಿಸ್ತೃತ ಬೆಳವಣಿಗೆಯ ಸಾಧ್ಯತೆಯನ್ನು ಮೂಲ ಉದ್ದೇಶವಾಗಿಟ್ಟುಕೊಂಡಿದೆ ಎನ್ನುವುದು ಎಲ್ಲಕ್ಕೂ ಮೂಲಭೂತವಾದ ಸೂತ್ರ. ಇಲ್ಲಿ ಬೆಳವಣಿಗೆ ಅದರ ಪರಮಗುರಿ. ಬೆಳವಣಿಗೆಗಾಗಿ ಇನ್ನೊಂದು ಜೀವದ ಅಸ್ತಿತ್ವಕ್ಕೆ ಕೈಯಿಟ್ಟು ಅದನ್ನು ವಿಸ್ತರಿಸುವವರೆಗೆ ಇದರ ವ್ಯಾಪ್ತಿ. ಅದು ಒಂದು ದಿನ ಇನ್ನೊಂದು ಜೀವವನ್ನು ವಿಸ್ತರಿಸುವ ಹಸಿವಿಲ್ಲದೆ ತಾನು ಬೆಳೆದ ಪರಿಪೂರ್ಣ ಅವಸ್ಥೆಯ ಆನಂದದಲ್ಲೂ ಮುಗಿಯುವ ಸಾಧ್ಯತೆಯು ಇದೆ. ಅಪ್ಪರಮಟ್ಟಿಗೆ ಸ್ವತಂತ್ರವಾಗುವ ಒಂದು ಕೊನೆಯ ಹಂತದವರೆಗೂ ಇದರ ನಡೆ ಇದೆ. ಎಷ್ಟೆಷ್ಟು ನಡೆ ಎಂಬುದರ ಮೇಲೆ ತಂತ್ರಪಥದ ಅರ್ಥ, ವ್ಯಾಖ್ಯಾನ, ವಿಸ್ತಾರ. ಅದು ನಿಂತಿಲ್ಲ; ನಿಂತವನು ತಂತ್ರಮಾರ್ಗದವನಲ್ಲ.

ಯಾಕೆಂದರೆ ಈ ಮೂರನೆಯ ಹಂತದಲ್ಲಿ ಒಂದು ಮರಣಾನುಭವ ಇದೆ. ಇದನ್ನು ಹಲವರು ಪ್ರಳಯ ಎಂದಿದ್ದಾರೆ. [ಉದಾ: ಯು.ಜಿ. ಕೃಷ್ಣಮೂರ್ತಿ Calamity] ಹಾಗೆಯೇ ಇದು ಇಡಿಯ ಜೀವಕೋಶದ ಅಣುಅಣುಗಳಲ್ಲಿ ಆಗುವ ಪರಿವರ್ತನೆ ಆದ್ದರಿಂದ ಇದಕ್ಕೆ ತುಂಬ

ವೈಜ್ಞಾನಿಕವಾದ ಶಬ್ದದಲ್ಲಿ Mutation ಎಂದು ಜೆ.ಕೆ. [ಜಿಡ್ಡು ಕೃಷ್ಣಮೂರ್ತಿ] ಕರೆದ. ಹೌದು ಇದು ಒಂದು ದೃಷ್ಟಿಯಿಂದ ಪೂರ್ತಿಯಾಗಿ ಹಳೆಯ ಅಣುಅಣುವನ್ನು ಕೋಶ ಹರಿದು ಹೊಸದಾಗಿ ಮಾರ್ಪಡಿಸುವ ಸಮಯ. ಆದ್ದರಿಂದಲೇ ಇದು ಪರಿವರ್ತನೆ ಅಥವಾ Transformation ಕೂಡ. ಗುರುವಿನ ಉದ್ದೇಶವೇ ಈ ಪರಿವರ್ತನೆ.

ಹೀಗೆ ತಂತ್ರವು ತಂತ್ರಗಾರಿಕೆಯೂ ಹೌದು, ಮಾಟ ಮಂತ್ರವೂ ಹೌದು ಜೀವ ಪರಿವರ್ತನೆಯವರೆಗೆ ಅಣುವನ್ನು ವಿಸ್ತರಿಸಿ ಪರಮಾಣುತ್ವವನ್ನು ಪಡೆವ ವಿಸ್ತಾರವೂ ಹೌದು.

ಅನೇಕರು· ತಂತ್ರವನ್ನು ವೈಧಾನಿಕ ಮತ್ತು ಶಾಸ್ತ್ರೀಯ ಅಧ್ಯಯನದ ಮೂಲಕವೇ ತಿಳಿಯುತ್ತಾರೆ ಎಂದು ಭಾವಿಸಿದ್ದಾರೆ. ಒಂದು ದೃಷ್ಟಿಯಿಂದ ಯಾವುದೇ ಸಾಧನಾ ಪಥದ ಪ್ರವೇಶ ಇಲ್ಲದವರು ಖಂಡಿತವಾಗಿಯೂ ಈ ಶಾಸ್ತ್ರೋಕ್ತ ವೈಧಾನಿಕ ಶಾಲಾ ಪದ್ಧತಿಯ ಮೂಲಕ ಕಲಿಯಬೇಕು. ಆದರೆ ಅನುಗ್ರಹದಲ್ಲಿ ಪ್ರತ್ಯಕ್ಷ ಅನುಗ್ರಹ ಮತ್ತು ಪರೋಕ್ಷ ಅನುಗ್ರಹ ಎಂಬ ಎರಡು ರೀತಿಯಿದೆ. ಸಾಧಕನಿಗೆ ಗುರುಮುಖೇನ ಅನುಗ್ರಹವಾದರೆ ಅದು ಪ್ರತ್ಯಕ್ಷ ಅನುಗ್ರಹ. ಮತ್ತು ಅದು ತನ್ನಿಂದ ತಾನೆ ಒಂದು ಘಟನೆಯ ಮೂಲಕ ಪ್ರಚೋದವಾದರೆ ಅದು ಪರೋಕ್ಷ ಅನುಗ್ರಹ. ಇವೆರಡೂ ಇಲ್ಲದೆ ಕೆಲವೊಮ್ಮೆ ತಾನು ಏನನ್ನೋ ಪಡೆಯಬೇಕು. ಇಲ್ಲಿರುವುದು ಸಾಲದು ಎಂಬ ನಿರಂತರ ಅತೃಪ್ತಿಯೊಂದು ವ್ಯಕ್ತಿಯನ್ನು ಒಂದು ಕಲಿಕೆಯ ಕಡೆಗೆ ಪ್ರೇರೇಪಿಸುತ್ತದೆ. ಆಗ ವೈಧಾನಿಕ ಅಥವಾ ಶಾಸ್ತ್ರೀಯ ಅಧ್ಯಯನ ಕ್ರಮ ಬೇಕು.

ಗುರುಮುಖೇನ ಅನುಗ್ರಹ ಆದರೆ ಆಗ ಶಿಷ್ಯನ ಅರ್ಹತೆಯ ಮೇಲೆ ಅವನ ಅಭ್ಯಾಸಕ್ರಮದ ನಿರ್ಣಯ. ತಾನು ಕಲಿತು ದಾಟಿದ ಪ್ರತಿಯೊಂದು ಶಾಸ್ತ್ರೋಕ್ತ ಕ್ರಮವನ್ನು ಶಿಷ್ಯನಿಗೆ ಗುರುವು ಪಾಂಕ್ತವಾಗಿ ತಿಳಿಸುತ್ತಾ ಕಾಲಹರಣ ಮಾಡಬೇಕಿಲ್ಲ ಶಿಷ್ಯ ಅರ್ಹನಿದ್ದರೆ ಗುರುವು ಅವನನ್ನು ನೇರ ಕೊನೆಯ ಸೋಪಾನಕ್ಕೆ ಕರೆದೊಯ್ಯಬಲ್ಲ. 'ಜ್ಞಾನ ಕಾಲದಿಂದ ಕಾಲಕ್ಕೆ ಸರಳವಾಗಬೇಕು. ನಾನು ನಲವತ್ತು ವರುಷದಿಂದ ಸಾಧಿಸಿದ ಸಂಪತ್ತು ನಿನಗೆ ನಾಲ್ಕು ವರುಷದಲ್ಲಿ, ನಿನ್ನಿಂದ ನಲವತ್ತು ತಿಂಗಳಲ್ಲಿ ಇನ್ನು ಮುಂದೆ ನಾಲ್ಕು ದಿವಸಗಳಲ್ಲಿ ಹಸ್ತಾಂತರಿಸಲು ಬರಬೇಕು. ಇಲ್ಲದೆ ಇದ್ದರೆ ಅದು ಜ್ಞಾನವೇ ಅಲ್ಲ'[1] ಎಂಬ ಸತ್ಯಕಾಮರ ಮಾತು ಆ ದೃಷ್ಟಿಯಲ್ಲಿ ತುಂಬ ವೈಜ್ಞಾನಿಕವಾದುದು.

ರಜನೀಶರ ಪರಿಚಯ[2] : ಮಧ್ಯಪ್ರದೇಶದ ನರಸಿಂಗಪುರ ಜಿಲ್ಲೆಯ ಕಚವಾಡ ಗ್ರಾಮದಲ್ಲಿ ದಶಂಬರ್ 11, 1931ರಂದು ರಜನೀಶ ಜನಿಸಿದ್ದು. ಆಗ ಅವನ ಹೆಸರು ರಜನೀಶ ಚಂದ್ರಮೋಹನ ಜೈನ್. ತರಣಪಂಥಿ ಜೈನ ಕುಟುಂಬದ ಹನ್ನೊಂದು ಮಕ್ಕಳಲ್ಲಿ ಇವನು ಅತ್ಯಂತ

1. ನನ್ನ ಜೊತೆ ಚರ್ಚೆಯಲ್ಲಿ ಹೇಳಿದ ಮಾತು.
2. ಗೂಗಲ್ ಸರ್ಚನಲ್ಲಿ ರಜನೀಶ್ ಕುರಿತು ಸಿಕ್ಕ ಮಾಹಿತಿಯ ಆಧಾರ

ಹಿರಿಯ. ಅದೊಂದು ಬಟ್ಟೆ ಮಾರಾಟ ಮಾಡುವ ವ್ಯಾಪಾರಿ ಕುಟುಂಬ. ತನ್ನ ಎಳನೆಯ ವಯಸ್ಸಿನಿಂದ ರಜನೀಶನು ತನ್ನ ತಾಯಿಯ ಅಪ್ಪ ಅಮ್ಮನ ಜೊತೆಗಿದ್ದ. ಅವನು ಅಲ್ಲಿ ತುಂಬ ಸ್ವತಂತ್ರವಾಗಿ ಬೆಳೆದ, ಅವನ ವಿದ್ಯಾಭ್ಯಾಸ ಕೂಡ ಅವನದೇ ಸ್ವತಂತ್ರ ರೀತಿ.

ರಜನೀಶ ಬಾಲ್ಯದಿಂದಲೇ ತುಂಬ ತುಂಟ ಹುಡುಗನೆಂದು ಪ್ರಖ್ಯಾತಿ ಪಡೆದಿದ್ದ. ಅವನ ಅಜ್ಜಿಯ ಮರಣಾನಂತರ ಅವನು ಮತ್ತೆ ತಂದೆ ತಾಯಿಯ ಬಳಿ ಮರಳಿದ. ಅವನು ಯೌವನಕ್ಕೆ ಕಾಲಿಡುವ ಹೊತ್ತಿಗೆ ವಶೀಕರಣ ವಿದ್ಯೆಯಲ್ಲಿ ಆಸಕ್ತನಾಗಿದ್ದ ಮತ್ತು ನಾಸ್ತಿಕನಾಗಿದ್ದ. ಸ್ವಲ್ಪ ಕಾಲ ಅವನು ಭಾರತದ ಸ್ವಾತಂತ್ರ ಚಳುವಳಿಗಳಾದ ದಿ ಇಂಡಿಯನ್ ನ್ಯಾಷನಲ್ ಆರ್ಮಿ, ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಗಳ ಜೊತೆ ಗುರುತಿಸಿಕೊಂಡಿದ್ದ. ಸಮಾಜವಾದದಲ್ಲಿ ಅವನು ಆಸಕ್ತನಿದ್ದ.

ಅವನು ಪ್ರೌಢಶಾಲೆಯ ವಿದ್ಯಾಭ್ಯಾಸ ಗದಲ್‌ವರದಲ್ಲಿ ಮುಗಿಸಿ 1951ಕ್ಕೆ ಜಬಲ್‌ಪುರಕ್ಕೆ ಹೋದ. ಆಗ ಅವನ ವಯಸ್ಸು 19. ಅವನು ಜಬಲ್‌ಪುರದ ಹಿತಕಾರಿಣಿ ಎಂಬ ಕಾಲೇಜ್ ಸೇರಿಕೊಂಡ. ಅಲ್ಲಿ ಅಧ್ಯಾಪಕರ ಜತೆಗಿನ ಸಂಘರ್ಷದಿಂದ ಅವನನ್ನು ಡಿ.ಎನ್. ಜೈನ್ ಕಾಲೇಜಿಗೆ ವರ್ಗಾಯಿಸಲಾಯಿತು. ಅವನನ್ನು 1953ರ ಮಾರ್ಚ್ 21ರಂದು 'ಸಾಕ್ಷಾತ್ಕಾರ'ಗೊಂಡವ ಎಂದು ಹೇಳಲಾಗುತ್ತದೆ. ಅವನು ಅದರ ಬೆನ್ನಿಗೆ ಬಿ.ಎ. ಪದವಿಯನ್ನು ಜಬಲ್‌ಪುರ ವಿ.ವಿ.ಯಿಂದ 1955ರಲ್ಲಿ ಪಡೆದು ಸಾಗರ ವಿಶ್ವವಿದ್ಯಾಲಯದಿಂದ 1957ಕ್ಕೆ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ.

ಅದೇ ಹೊತ್ತಿಗೆ ವಾರ್ಷಿಕ ಸರ್ವಧರ್ಮ ಸಮ್ಮೇಳನ, ಜಬ್ಬಲ್‌ಪುರದಲ್ಲಿ ತನ್ನ ಮೊತ್ತಮೊದಲ ಸಾಮಾಜಿಕ ಭಾಷಣವನ್ನು ಮಾಡಿದ. ಅವನು ಉಪನ್ಯಾಸ ಮಾಡುವ ಅಭ್ಯಾಸವನ್ನು ಸುಮಾರು 1951–1968ರವರೆಗೆ ಮುಂದುವರಿಸಿದ.

1957ರಲ್ಲಿ ರಾಯ್‌ಪುರದ ಸಂಸ್ಕೃತ ಕಾಲೇಜಿನಲ್ಲಿ ಉಪನ್ಯಾಸಕನಾದ. ಅವನ ಅಸಾಂಪ್ರದಾಯಿಕ ವಿಚಾರಧಾರೆಗಳಿಗಾಗಿ ಅಲ್ಲಿಂದ ಅವನನ್ನು ಬೇರೆ ಕಡೆ ವರ್ಗಾಯಿಸಲಾಯಿತು. 1958ರಲ್ಲಿ ಅವನು ಪ್ರೊಫೆಸರ್ ಎಂಬ ಅಂಕಿತಗಳಿಸಿ ಜಬಲ್‌ಪುರ ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರ ಪಾಠ ಹೇಳುತ್ತಿದ್ದ. ಆಗ ಅವನು ದೇಶಾದ್ಯಂತ ತಿರುಗಾಡಿ ಸಮಾಜವಾದ ಮತ್ತು ಗಾಂಧಿಯ ಕುರಿತು 'ಆಚಾರ್ಯ ರಜನೀಶ್' ಎಂಬ ಹೆಸರಲ್ಲಿ ಉಪನ್ಯಾಸ ನಡೆಸಿದ.

ಸಂಪ್ರದಾಯವಾದಿ ಭಾರತೀಯ ಧರ್ಮವನ್ನು ರಜನೀಶ ಬಹಳವಾಗಿ ಆಗ ಖಂಡಿಸಿದ. ಹೀಗಾಗಿ ಅವನಿಗೆ ಹಲವು ವಿರೋಧಿಗಳು ಹಲವು ಜನ ಅನುಯಾಯಿಗಳು ಹುಟ್ಟಿಕೊಂಡಿದ್ದರು.

1970ರಲ್ಲಿ ರಜನೀಶ್ ಜಬಲ್‌ಪುರದಿಂದ ಮುಂಬಯಿ ಕಡೆಗೆ ನಡೆದ. ಅಲ್ಲಿ ಅವನು ಮೊದಲ ಬಾರಿಗೆ 'ಡೈನಮಿಕ್ ಮೆಡಿಟೇಶನ್' ಅನ್ನುವ ಕ್ರಮವನ್ನು ಆರಂಭಿಸಿದ. 1970 ಸೆಪ್ಟೆಂಬರ್ 26ರಂದು ಅವನು ಮೊದಲ ಬಹಿರಂಗ ಧ್ಯಾನ ಕ್ರಮದ ಸಭೆಯನ್ನು ಆರಂಭಿಸಿದ. 1971ರ ಹೊತ್ತಿಗೆ ಅವನು ಆಗಲೇ 'ಭಗವಾನ್ ಶ್ರೀ ರಜನೀಶ' ಆಗಿಬಿಟ್ಟಿದ್ದ.

1974 ಆರೋಗ್ಯದ ಕಾರಣಕ್ಕಾಗಿ ಮುಂಬಯಿಯಿಂದ ಪುಣೆಗೆ ಸ್ಥಳಾಂತರಗೊಂಡ ಅವನು ಅಲ್ಲಿಯೇ ಒಂದು ಆಶ್ರಮ ಆರಂಭಿಸಿದ. ಅವನು 1974–81ರವರೆಗೆ ಪಾಠ ಮಾಡುತ್ತಿದ್ದ. ಪುಣೆಯ ಆಶ್ರಮವು ಅವನ ಭಾಷಣಗಳ ಧ್ವನಿಮುದ್ರಣ, ವಿಡಿಯೊ ಮುದ್ರಣ, ಪುಸ್ತಕ ಪ್ರಕಟಣೆ ಮುಂತಾದ ಕೆಲಸ ಕಾರ್ಯಗಳ ಜೊತೆಗೆ ಅವನ ಬರೆಹ ಮುಂತಾದ ಎಲ್ಲ ದಾಖಲೆಗಳನ್ನು ದೇಶ ವಿದೇಶಾದ್ಯಂತ ಪ್ರಸರಿಸುವ ಕಾರ್ಯವನ್ನು ಮಾಡಿತು. ಆಗಲೇ ಅನೇಕ ವಿದೇಶಿ ಅನುಯಾಯಿಗಳು ಪುಣೆ ಆಶ್ರಮವನ್ನು ಬಂದು ಸೇರಿಕೊಂಡಿದ್ದರು. 'ಓಶೋ ಇಂಟರ್‌ನ್ಯಾಷನಲ್ ಮೆಡಿಟೇಶನ್ ಸೆಂಟರ್' ಎಂದು ಅದು ಪ್ರಖ್ಯಾತವಾಗಿತ್ತು.

15 ವರುಷಗಳ ನಿರಂತರ ಅಧ್ಯಾಪನದ ಬಳಿಕ ರಜನೀಶ್ ಮೂರೂವರೆ ವರ್ಷಗಳ ಮೌನವ್ರತವನ್ನು 1981ಕ್ಕೆ ಆರಂಭಿಸಿದ. 1984ಕ್ಕೆ ಅವನು ಮತ್ತೆ ಸಾರ್ವಜನಿಕರನ್ನು ಉದ್ದೇಶಿಸಿ ಮಾತಾಡಲು ತೊಡಗಿದರೂ ನಿರ್ದಿಷ್ಟ ಅವಧಿಗೆ ಮಾತ್ರ ಅದನ್ನು ಸೀಮಿತಗೊಳಿಸಿಕೊಂಡ.

1981ರ ಜೂನ್ 1 ರಂದು ಅವನು ಅಮೆರಿಕಕ್ಕೆ ಪಯಣ ಬೆಳೆಸಿದ. ಅದು ಅವನ ಬೆನ್ನುನೋವಿನ ಚಿಕಿತ್ಸೆಗಾಗಿ ನಡೆಸಿದ ಪಯಣ. ವಾಸ್ಕೊ ದೇಶದಲ್ಲಿ ಅವನ ಅನುಯಾಯಿಗಳು ಓರೆಗಾಂವ್ [oregon] ಎಂಬ ಸ್ಥಳದಲ್ಲಿ ದೊಡ್ಡ ಜಮೀನು ಖರೀದಿಸಿ ಅದನ್ನು ರಜನೀಶಪುರ ಎಂದು ಕರೆದರು. ಅದು ಆ ದೇಶದಲ್ಲಿ ರಜನೀಶನ ವಿರುದ್ಧ ಸಂಘರ್ಷಕ್ಕೆ ಕಾರಣವಾಯಿತು. ಅವನ ಅಧ್ಯಯನ ಕ್ರಮ, ಅನುಯಾಯಿಗಳ ಬದುಕು ಎಲ್ಲವೂ ಪ್ರಶ್ನೆಗಳಾದವು.

1985 ರಜನೀಶ್ ಮತ್ತು ಅವನ ಅನೇಕ ಶಿಷ್ಯರು ದೇಶಾಂತರ ಪರ್ಯಟನೆ ಕಾನೂನು ಉಲ್ಲಂಘನೆಯ ಪ್ರಶ್ನೆ ಎದುರಿಸಿದರು. 25 ಅಕ್ಟೋಬರ್ 1985 ರಜನೀಶ್ ಅವನ ಶಿಷ್ಯರು ಮತ್ತು ಅವನ ಖಾಸಗಿ ವೈದ್ಯರು ಉತ್ತರ ಕೊಲನಿಯಾದಲ್ಲಿ ಬಂಧಿತರಾದರು. ಅವನು ಕೇಳಿದ ಜಾಮೀನಿಗೆ ಅಮೆರಿಕವನ್ನು ಬಿಟ್ಟು ಹೋಗಬೇಕು ಎಂಬ ನಿಯಮದೊಂದಿಗೆ ಜಾಮೀನು ನೀಡಲಾಯಿತು.

ಅವನು ಮನಸ್ಸಿಲ್ಲದ ಮನಸ್ಸಿನಿಂದ ಅಮೆರಿಕವನ್ನು ಬಿಟ್ಟು ಮರಳಿ ಭಾರತಕ್ಕೆ ಬಂದ ಮತ್ತು ಹಿಮಾಚಲಪ್ರದೇಶದಲ್ಲಿ 6 ವಾರಗಳ ಕಾಲ ತಂಗಿದ. ಆಗ ಅವನು ತನ್ನನ್ನು 'ಓಶೋ'

[OSHO] ಎಂದು ಕರೆದ. ಅಲ್ಲಿಂದ ಅವನು ಕಟ್ಮಂಡುವಿಗೆ ತೆರಳಿದ. ಅಲ್ಲಿಂದ ಗ್ರೀಸ್ ದೇಶದ ಕ್ರೀಟ್ [crete] ನಲ್ಲಿದ್ದ. ಬೇರೆ ಬೇರೆ ದೇಶಗಳಿಂದ ಪುನಃ ತಿರಸ್ಕೃತನಾಗಿ ಮರಳಿ ಭಾರತಕ್ಕೆ ಬಂದ. 1986ಕ್ಕೆ ಭಾರತಕ್ಕೆ ಬಂದವ 1987ಕ್ಕೆ ಪುನಃ ಪುಣೆಯ ಆಶ್ರಮಕ್ಕೆ ವಾಪಾಸಾದ. ಇಲ್ಲಿ ಪುನಃ ಧ್ಯಾನ ತಂತ್ರಗಳ ಹಲವು ಕ್ರಮಗಳನ್ನು ಆರಂಭಿಸಿದ. ಅಲ್ಲಿಯೇ ಹಲವು ದಿನಗಳ ಕಾಲ ಅವನು ತನ್ನ ಆಧ್ಯಾತ್ಮ ಸಾಧನಾ ಕ್ರಮಗಳನ್ನು ಪ್ರಚುರ ಪಡಿಸಿದ.

1990ರಲ್ಲಿ ಅವನು ಮರಣಿಸಿದಾಗ ಪುನಃ ಅದು ಒಂದು ವಿವಾದಾತ್ಮಕ ವಿಷಯವೇ ಆಗಿತ್ತು. ಅವನು ಹೃದಯಾಘಾತದಿಂದ ಮರಣಿಸಿದ ಎಂದರೆ, ಅವನು ಅಮೆರಿಕಾದವರು ಕೊಟ್ಟ ನಿಧಾನ ವಿಷದ [Slow poisoning] ಪರಿಣಾಮದಿಂದ ಸತ್ತ ಎಂದೇ ನಂಬಲಾಗಿತ್ತು. ಅವನ ಅಂತ್ಯ ಅತ್ಯಂತ ಗೊಂದಲವಾಗಿಯೇ ಪ್ರಚಾರ ಪಡೆದಿತ್ತು ಅವನ ಬದುಕಿನ ಹಾಗೆ.

ಬದುಕಿನ ಆರಂಭದಿಂದ ಕೊನೆಯವರೆಗೂ ತುಂಬ ವಿವಾದಾತ್ಮಕವಾಗಿ ತನ್ನ ಸಾಧನಾಕ್ರಮ, ಬದುಕುವ ರೀತಿ, ಕಾಮದ ಕುರಿತ ಅಭಿಪ್ರಾಯ, ಯೇಸು, ಬುದ್ಧ ಗಾಂಧಿಯ ಕುರಿತ ನೇರ ಮಾತು, ವಿಮರ್ಶೆಗಳಿಂದ ಪ್ರಚಲಿತನಾಗಿದ್ದ. ವಿದೇಶದಾದ್ಯಂತ ಅವನು ಯೇಸುವಿನ, ಅಥವಾ ಅನೇಕ ಬೈಬಲ್ ವಿಚಾರಧಾರೆಗಳನ್ನು ವಿರೋಧಿಸಿದ. ಎಂಬ ಕಾರಣಕ್ಕಾಗಿಯೇ ಕ್ರಿಶ್ಚಿಯಾನಿಟಿಗೆ ಒಂದು ನಡುಕವಾಗಿ ಬಿಟ್ಟಿದ್ದ. ಆದರೆ ಅವನು ಮೂಲ ಸತ್ವವನ್ನು ಹೇಗೆ ತಿಳಿ ಹೇಳುತ್ತಿದ್ದ ಎಂಬುದರ ಕಡೆಗೆ ಗಮನ ಕೊಡದೆ ಇಂಥ ಬಾಹ್ಯ ಸಂಗತಿಗಳ ಅಬ್ಬರವೇ ಹೆಚ್ಚಾಗಿ ಬಹಳಷ್ಟು ಟೀಕೆಗಳನ್ನು ಎದುರಿಸಿದ. ಸ್ವತಃ ರೇಗನ್ ಕಾಲದಲ್ಲಿ ಅಮೆರಿಕಾದಲ್ಲಿ ಬಂಧಿತನಾದಾಗಲೂ You can kill this body but not the thoughts of Osho ಎಂಬ ಧೀರತೆಯ ಮಾತುಗಳನ್ನೇ ಆಡಿದ್ದ.

ಬದುಕಿನಲ್ಲಿ ಸಾಕ್ಷಾತ್ಕಾರ ಮುಂತಾದ ಕುರಿತ ಯಾವುದೇ ವೈಯಕ್ತಿಕ ವಿವರಗಳು ಲಭ್ಯವಿಲ್ಲದೆ ಇದ್ದರೂ ಅವನಿಗೆ ಅವನೇ 'ಗುರು'ವಿದ್ದಂತೆ ಕಾಣುತ್ತದೆ. ಯಾವುದೇ ಗುರುಮುಖೇನ ತಾನು ಅಧ್ಯಯನ ಮಾಡಿದ್ದಾಗಲಿ, ಅದನ್ನು ಉದಾಹರಿಸುವುದಾಗಲಿ ಕಾಣಿಸುವುದಿಲ್ಲ. ಪಾಠ ಕೇಳಿ ಬೆಳೆದವನಲ್ಲ ಎಂಬುದು ಅವನೇ ಹೇಳಿಕೊಳ್ಳುವ ಕೆಲವು ವಿನೋದ ಪ್ರಸಂಗಗಳಲ್ಲಿ ವ್ಯಕ್ತವಾಗುತ್ತದೆ.

ತಾನು ಪ್ರತೀ 7 ವರುಷಕ್ಕೊಮ್ಮೆ ಮರಣದ ಜೊತೆ ಮುಖಾಮುಖಿಯಾದೆ. ತನ್ನ 7ನೆಯ ವಯಸ್ಸಿಗೆ ತನ್ನನ್ನು ಅತ್ಯಂತ ಪ್ರೀತಿಯಿಂದ ಬೆಳೆಸಿದ ಅಜ್ಜಿ, ಆ ಬಳಿಕ 14ನೆಯ ವಯಸ್ಸಿಗೆ ತಂದೆ ಹೀಗೆ ತಾನು ಮರಣದೊಂದಿಗೆ ಅನುಸಂಧಾನ ಮಾಡಿದೆ ಎಂಬ ಮಾತು ಹೇಳುತ್ತಾನೆ. ತನ್ನ

ಅಜ್ಜಿಯ ಮರಣ ಅದು ತನ್ನದೇ ಆಗಿತ್ತು ಎಂಬ ಅನುಭವವನ್ನು ಅವನು ಹಂಚಿಕೊಳ್ಳುತ್ತಾನೆ. ಇದರ ಪುನರಾವರ್ತನೆ 14ರಲ್ಲಿ ಆಯಿತು ಎಂಬುದು ಅವನದೇ ವಿವರಣೆ. ಅವನ 21ಕ್ಕೆ ಅವನಿಗೆ ಸಾಕ್ಷಾತ್ಕಾರ ಎಂಬ ವಿವರವಿದೆ. ಅಂದರೆ ಅವನು ಯಾವುದೇ ಒಂದು ವೈಧಾನಿಕ ಶಾಲೆಯಲ್ಲಿ ಇದನ್ನು ಕಲಿತವನಲ್ಲ ಆದರೆ ಅದು ಅವನ ಸತತ ಪರಿಶ್ರಮ ಎಂದೇ ಕಾಣಿಸುತ್ತದೆ.

ಸತ್ಯಕಾಮರ ಪರಿಚಯ : ಅವರು ಹುಟ್ಟಿದ ದಿನಾಂಕ ಜುಲೈ 8 1920 ಅಂದರೆ ಆಷಾಢ ಮಾಸದ ಉತ್ತರಾಬಾದ್ರ ನಕ್ಷತ್ರ, ಮೀನ ರಾಶಿ, ಕರ್ಕಾಟ ಲಗ್ನದಲ್ಲಿ. ಅವರ ಹೆಸರು ಅನಂತ. ಅವರ ಮರಣದ ದಿನಾಂಕ ಅಕ್ಟೋಬರ್ 20 1998 ದೀಪಾವಳಿಯ ಮರುದಿವಸ ಅಮಾವಾಸ್ಯೆಯಂದು.

ಅವರ ಹುಟ್ಟೂರು ಅವರ ತಾಯಿಯ ತವರೂರು ಮೈಗೂರಿನಲ್ಲಿ ಸಂಭವಿಸಿದೆ ಎಂದು ಸರ್ವೇಸಾಮಾನ್ಯವಾಗಿ ನಂಬಲಾಗಿದೆ. (ಶಾಂತಮಠಪತಿ ಕೂಡ ಹಾಗೆಯೇ ತನ್ನ ಸಂಶೋಧನಾ ಅಧ್ಯಯನದಲ್ಲಿ ಬರೆದಿದ್ದಾರೆ) ಆದರೆ ಸತ್ಯಕಾಮರೇ ತನ್ನ ತಾಯಿ ತನ್ನನ್ನಿನ್ನೂ ಬಸುರಾಗಿದ್ದಾಗ ಆ ಕಾಲಕ್ಕೆ ಬಯಕೆ ಊಟ ಶಾಸ್ತ್ರಕ್ಕೆ ಹಿರಿಯರು, ನೆಂಟರು ಮನೆಗೆ ಕರೆವ ಸಂಪ್ರದಾಯವಿತ್ತು. ಹಾಗೆ ತನ್ನ ತಾಯಿಯನ್ನು ನೆಂಟರು ಜಮಖಂಡಿ ಸಮೀಪದ ಕಲ್ಲಹಳ್ಳಿಗೆ ಕರೆದಿದ್ದರು. ಆಗಿನ್ನೂ ಗರ್ಭಕ್ಕೆ ಒಂಭತ್ತು ತಿಂಗಳು ತುಂಬಿಲ್ಲದ ಏಳನೆಯ ಮಾಸ. ಆ ಬಯಕೆ ಊಟಕ್ಕೆ ಬಂದ ತಾಯಿ ಅಲ್ಲೇ ಹೆರಿಗೆ ನೋವು ಬಂದು ತನ್ನನ್ನು ಹೆತ್ತದ್ದಾಗಿಯೂ ತಾನು ಅವಸರದಿಂದ ವಾಮದೇವನಂತೆ ತಾಯಿಯನ್ನು ಬೇಗ ಒದ್ದು ಬಂದದ್ದಾಗಿಯೂ ಸತ್ಯಕಾಮರು ನನ್ನ ಬಳಿ ಹೇಳಿದ್ದರು. ಆ ದಿಶೆಯಲ್ಲಿ ಅವರ ಹುಟ್ಟೂರು ಕಲ್ಲಹಳ್ಳಿ. ಮುಂದೆ ಅವರು ಖಾಯಂ ಆಗಿ ತನ್ನ ನೆಲೆ ಕಂಡುಕೊಂಡದ್ದು ಕಲ್ಲಹಳ್ಳಿಯಲ್ಲೇ ಎಂಬುದೊಂದು ಆಕಸ್ಮಿಕ.

ತಂದೆ ಕೃಷ್ಣಾಚಾರ್ಯ ಮತ್ತು ತಾಯಿ ರುಕ್ಮಿಣಿದೇವಿ ಈಗಿನ ಬಾಗಲಕೋಟೆ ಜಿಲ್ಲೆಯಲ್ಲಿರುವ ಬೀಳಗಿ ತಾಲೂಕಿನ ಕೃಷ್ಣಾನದಿ ತಟದ ಗಲಗಲಿ ಅವರು ಬೆಳೆದ ಊರು, ತಂದೆಯ ಊರು. ತಂದೆ-ತಾಯಿಗೆ ಇವರಲ್ಲದೆ ಇತರ ಇಬ್ಬರು ಸಹೋದರರು ಮತ್ತು ಐವರು ಸಹೋದರಿಯರು ಇವರದು ಬಡ ಕುಟುಂಬ.

ಅಜ್ಜ ಅಣ್ಣಯ್ಯ ಆಚಾರ್ಯರು ಸಂಸ್ಕೃತ ವಿದ್ವಾಂಸರು. ತಂದೆ ಶಾಲಾಭ್ಯಾಸ ಮಾಡಿದವರೇ ಆದರೂ ಸತ್ಯಕಾಮರಿಗೆ ಶಾಲೆ ಹೆಚ್ಚು ಹಿಡಿಸಲಿಲ್ಲ. ಅವರು ಶಾಲೆಗಿಂತಲೂ ಸ್ವಾತಂತ್ರ್ಯ ಹೋರಾಟದ ನಾಯಕತ್ವ, ನಾಟಕ ಹೀಗೆ ಇನ್ನಿತರ ಬಯಲಿನ ಪಾಠವನ್ನೇ ಹೆಚ್ಚು ಓದಿದವರು.

ಗಲಗಲಿಯ ಪಾಂಡಿತ್ಯದ ವಾತಾವರಣ, ಸಾಹಿತ್ಯದ, ಕಾವ್ಯದ ಆಸಕ್ತಿಗಳು ಇವರಲ್ಲೂ ಮೈಗೂಡಿದ್ದವು. ಆದರೆ ಅವರಿಗೆ ಆ ಊರು, ಆ ಮನೆ ಚಿಕ್ಕದು ಎನಿಸಿ ಬಹಳ ಬೇಗನೆ ಮನೆ ತೊರೆದರು. ಸ್ವಾತಂತ್ರ್ಯ ಹೋರಾಟದ ನೆಪದಲ್ಲಿ ಮನೆಯಿಂದ ಹೊರಗೆ ಬಿದ್ದ ಸತ್ಯಕಾಮರು ಅವರೇ ಹೇಳಿಕೊಂಡ ಹಾಗೆ ತನಗೆ ಅಂತರಂಗ ಸ್ವಾತಂತ್ರ್ಯ ಹೋರಾಟವೇ ಮುಖ್ಯವಾಯಿತು ಹೊರತು ಈ ದೇಶ ಸ್ವಾತಂತ್ರ್ಯದ ಉದ್ದೇಶ ಇರಲಿಲ್ಲ. (ವಿವರಗಳಿಗೆ ತರಂಗದ ಸಂದರ್ಶನ ಕಾಲಿನಲ್ಲಿ ಕಣ್ಣೀರಲಿ ಎಂಬ ಕೃತಿಯಲ್ಲಿ ಪ್ರಕಟವಾಗಿದೆ ಗಮನಿಸಿ).

ಸ್ವಾತಂತ್ರ್ಯ ಹೋರಾಟಗಾರರಾಗಿ ದೊಂಬಿ, ಗಲಭೆಗಳಲ್ಲಿ ಪಾಲ್ಗೊಂಡು ಪೋಸ್ಟ್ ಆಫೀಸ್ ಸುಟ್ಟು ಹಾಕಿದ್ದ ಕಾರಣಕ್ಕೆ ಅವರ ಮೇಲೆ ಬ್ರಿಟೀಷ್ ಅರೆಸ್ಟ್ ವಾರೆಂಟ್ ಕೂಡ ಇತ್ತು. ಅದಕ್ಕಾಗಿ ಅಜ್ಞಾತ ಇರುವ ಉದ್ದೇಶದಿಂದ ಅವರು ಕಲ್ಬುರ್ಗಿಗೆ ಬಂದು ಅಲ್ಲಿ ಮೃತ್ಯುಂಜಯ ಎಂಬ ಹೆಸರಿನಿಂದ ಕೆಲಕಾಲ ಇರುತ್ತಾರೆ. ಅಲ್ಲಿ ನೀಲಾಂಬಿಕೆ ಎನ್ನುವ ಮೊತ್ತಮೊದಲ ಹೆಣ್ಣಿನ ಪರಿಚಯವಾಗುತ್ತದೆ.

ಇವರು ಬ್ರಹ್ಮಚಾರಿ 'ನಾನು ಮದುವೆಯಾಗಿಲ್ಲ ಇರಬಹುದು ಆದರೆ ನಿಪುತ್ರಿಕನಲ್ಲ' ಎಂಬ ಮಾತುಗಳನ್ನು ಹೇಳಿ ಜನರನ್ನು ಕಂಗಾಲು ಬೀಳಿಸುವುದು, ಕುತೂಹಲಕ್ಕೆ ತಳ್ಳುವುದು ಇವರ ವಿಶಿಷ್ಟ ಗುಣ. ಹೃದಯಕ್ಕೆ ಮಕ್ಕಳು ಹುಟ್ಟುತ್ತಾರೆ. ನನಗೆ ಅಂತಹ ಅನೇಕ ಮಕ್ಕಳಿದ್ದಾರೆ ಎಂದು ನಿಜ ಕಾಳಜಿಯಿಂದ ಕೇಳಿದವರಿಗೆ ಮಾತ್ರ ಉತ್ತರಿಸುತ್ತಿದ್ದರು. ತನ್ನ ಹೆಸರನ್ನು ಉಡುಪಿಯಲ್ಲಿ ಪದ್ಮನಾಭ ಹಾಗೆ ಬರೆಹದಲ್ಲಿ ಕಪಿಲ, ಶಾಂತ, ಕೊನೆಗೆ ಸತ್ಯಕಾಮ ಹೀಗೆ ಬೇರೆ ಬೇರೆ ರೀತಿಯಲ್ಲಿ ಬದಲಾಯಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಮಾತೆಲ್ಲಾ ಸುಳ್ಳುಗಳನ್ನೇ ಹೇಳುತ್ತಿದ್ದುದರಿಂದ ನಾನು 'ಸತ್ಯಕಾಮ' ಎಂದು ಕೂಡ ತನ್ನ ಹೆಸರಿನ ಕುರಿತು ಕುಚೇಷ್ಟೆಯ ಉತ್ತರವನ್ನು ನೀಡುತ್ತಾರೆ. ಗಲಗಲಿಯಲ್ಲಿ ಇವರು ಬಾಬು ಎಂದು ಇವರ ಕುಟುಂಬಕ್ಕೆ ಶಹಪೂರ್ ಎಂಬ ಅಡ್ಡ ಹೆಸರು ಇದ್ದುದರಿಂದ ಬಾಬುಶಹಪೂರ್ ಎಂದು ಜನ ಕರೆಯುತ್ತಿದ್ದರು.

ಕಾಲಾಂತರದಲ್ಲಿ ತಾನಾಗಿ ಬ್ರಿಟೀಷರ ಬಳಿ ಬಂದು ತಪ್ಪೊಪ್ಪಿಕೊಂಡರೆ ಬ್ರಿಟೀಷರಿಗೆ ಕರುಣೆ ಬಂದು ನಿಜವಾದವನನ್ನು ತಪ್ಪಿಸಲು ಇವನು ಬಂದು ಶರಣಾಗುತ್ತಿದ್ದಾನೆ ಎಂಬ ಅನುಮಾನದ ಕಾರಣಕ್ಕೋ ಇವರನ್ನು ಬ್ರಿಟೀಷರು ದೋಷಮುಕ್ತನೆಂದು ಘೋಷಿಸಿದರು.

ಇವರು ಒಬ್ಬ ಒಳ್ಳೆಯ ನಟ ಎಂಬ ಹೆಸರನ್ನು ಪಡೆದಿದ್ದರು. ಗಲಗಲಿಯಲ್ಲಿ ಜೀವನವಿಲಾಸಿನಿ ನಾಟ್ಯ ಸಂಘ ಸ್ಥಾಪಿಸಿದರೆ ಉಡುಪಿಯಲ್ಲಿ ಮಠದಲ್ಲಿದ್ದು ಅಜ್ಞಾತ ಕಾಲದ ಪಾಠ ಕೇಳುವ ಹೊತ್ತಿಗೆ ಕಲಾರಂಗ ಎಂಬ ಸಾಂಸ್ಕೃತಿಕ ಸಂಘವನ್ನು ಹುಟ್ಟುಹಾಕಿದ್ದರು. ನಾಟಕ

ಮತ್ತು ಸ್ವಾತಂತ್ರ್ಯದ ನಾಟಕ ಎರಡನ್ನೂ ಸತ್ಯಕಾಮರು ಜೀವನವಿಲಾಸಿನಿ ನಾಟ್ಯಸಂಘದ ಮೂಲಕ ಮಾಡಿದ್ದರು.

ಸ್ವಾತಂತ್ರ್ಯ ಹೋರಾಟಗಾರ ಮಾತ್ರವಲ್ಲ ಸತ್ಯಕಾಮರು ಅಪ್ಪಟ ಗಾಂಧಿವಾದಿ ಕೂಡ. ತಾನು ಒಂದಿಷ್ಟು ಕಾಲ ಗಾಂಧೀಜಿಯ ಆಶ್ರಮದಲ್ಲಿ ಇದ್ದುಬಂದ ಕೆಲವು ಅನುಭವಗಳನ್ನು ಅವರು ಹೇಳುತ್ತಿದ್ದರು. ಗಾಂಧೀ ಸತ್ತ ಸುದ್ದಿಕೇಳಿದ ಆ ಸಂಜೆ ತಕ್ಷಣ ನದಿಯ ನೀರಿನಲ್ಲಿ ಮುಳುಗಿ ಸ್ನಾನ ಮಾಡಿದ್ದಾಗಿ ಸತ್ಯಕಾಮರು ನನ್ನ ಬಳಿ ಹೇಳಿದ್ದರು. ಅವರೊಬ್ಬರೇ ಅಲ್ಲ ಅವರಿದ್ದ ಆ ಊರಿನ ಜನರೆಲ್ಲಾ ಹಾಗೆ ಮಾಡಿದ್ದರಂತೆ. ತಂದೆ ಸತ್ತಾಗ ಮಗ ಮಾಡುವ ಕ್ರಿಯೆ ಅದು. ಸತ್ಯಕಾಮರಿಗೆ ಗಾಂಧಿಯ ಕುರಿತು ಅಂತಹದೊಂದು ಸೆಳೆತ ಇತ್ತು. ಬದುಕಿನ ಕೊನೆಯವರೆಗು ಸತ್ಯಕಾಮರು ಅನೇಕ ಸಂದರ್ಭಗಳಲ್ಲಿ ಗಾಂಧಿಯ ಕುರಿತು ಅಪಾರ ಭಕ್ತಿ ಮತ್ತು ಗೌರವ ಆದರಗಳನ್ನು ವ್ಯಕ್ತಪಡಿಸುತ್ತಿದ್ದರು.

ಸ್ವಾತಂತ್ರ್ಯ ಹೋರಾಟಕ್ಕಾಗಿ ಒಂದು ವರ್ಷ ಜೈಲುವಾಸವನ್ನೂ ಅನುಭವಿಸಿದ್ದ ಸತ್ಯಕಾಮರು ಅಲ್ಲಿಯೇ ಗಂಗಾಲಹರಿಯನ್ನು ಕನ್ನಡಕ್ಕೆ ಅನುವಾದ ಮಾಡಿದೆನೆಂದು ಬಳಿಕ ಅದು ಎಲ್ಲಿಯೋ ಕಳೆದುಹೋಯಿತು ಎಂದು ಹೇಳುತ್ತಿದ್ದರು.

ಬಹಿರಂಗ ಸ್ವಾತಂತ್ರ್ಯದ ನಡೆ ಹೀಗಾದರೆ ಅವರ ಅಂತರಂಗ ಸ್ವಾತಂತ್ರ್ಯದ ನಡೆ ಅವರ ಇಪ್ಪತ್ತನೆಯ ವಯಸ್ಸಿಗೆ ಆರಂಭವಾಗುತ್ತದೆ. ಇಪ್ಪತ್ತರ ವಯಸ್ಸಿಗೆ ಮನೆಯಿಂದ ಹೊರಟ ಸತ್ಯಕಾಮರು ದಾರಿಯಲ್ಲಿ ತನಗೆ ದೊಡ್ಡದು ಅನಿಸಿದ ಎಲ್ಲ ಸಂಗತಿಗಳನ್ನು ಕಲಿಯುತ್ತಾ ಹೋಗಿದ್ದಾರೆ. ಅಲ್ಲಲ್ಲಿ ಒಂದೊಂದು ವಿದ್ಯೆಗೆ ಒಬ್ಬೊಬ್ಬ ಗುರು ಅವರಿಗೆ ಮಾರ್ಗದರ್ಶನ ಮಾಡಿ ವಿದ್ಯೆ ಕಲಿಸಿದ ಬಳಿಕ ಮುಂದೆ ಹೋಗುವಂತೆ ನಡೆಸಿದ್ದಾರೆ. ಹಾಗಾಗಿ ಸತ್ಯಕಾಮರು ಕೊನೆಯವರೆಗೂ ಒಬ್ಬ ಗುರುವಿನ ಬಳಿ ಉಳಿಯಲಿಲ್ಲ. ಒಂದೇ ಸ್ಥಳದಲ್ಲಿ ಅವರು ನೆಲೆ ನಿಂತದ್ದಿಲ್ಲ. ಹೀಗೆ ಭೂತ, ಮಂತ್ರ, ಸಂಮ್ಮೋಹಿನಿ, ವಶೀಕರಣ, ಸೂರ್ಯವಿಜ್ಞಾನ, ಖೇಚರಿ, ಸ್ತಂಭನ ಮುಂತಾದ ಹಲವು ಶಕ್ತಿಗಳನ್ನು (ವಿದ್ಯೆಗಳನ್ನು) ವಶಪಡಿಸಿಕೊಂಡು ಕಲ್ಬುರ್ಗಿಯಿಂದ ಉಡುಪಿ, ಕೇರಳ, ಉತ್ತರಭಾರತದ ಉಜ್ಜಯಿನಿ ಕಾಶ್ಮೀರದವರೆಗೆ ದೇಶಾದ್ಯಂತ ಸುತ್ತಿದ್ದಾರೆ.

ಮುಂದೆ ತಂತ್ರಶಾಲೆಯಲ್ಲಿ ವಿದ್ಯಾರ್ಥಿಯ ಹಾಗೆ ಸೇರಿಕೊಂಡ ಸತ್ಯಕಾಮರು ವೈಶಾಲಿ ಮತ್ತು ವಾಮಾಚರಣನ ಸಹಪಾಠಿ ಆಗಿ ಹಲವು ಅನುಭವಗಳನ್ನು ತಂತ್ರಪಥದಲ್ಲಿ ಪಡೆಯುತ್ತಾರೆ. ಅಲ್ಲಿಯೂ ಒಬ್ಬ ಗುರುವಿಲ್ಲದೆ ನಿರಂತರ ನಡೆದ ಅವರು ತನ್ನನ್ನು 'ನಾನು ತಂತ್ರಗ್ರಾಮದ ಅನಾಥ ಶಿಶು' ಎಂದು ಹೇಳಿಕೊಂಡಿದ್ದಾರೆ.

ಬಹಳ ದುರ್ಗಮವಾದ ತನ್ನ ದಾರಿಯನ್ನು ವಿವರಿಸುವ ಸತ್ಯಕಾಮರು ತಂತ್ರಾನುಭವದ ವಿವರವನ್ನು ಕೊಡುತ್ತಾರಾದರೂ, ಅದರಿಂದ ತಾನು ಮಾಗಿರುವ, ಧೀರನಾದ, ಘನವಾದ ಬೆಳವಣಿಗೆಗಳನ್ನು ಹೇಳಿದರೂ, ತಾನು ಮುಟ್ಟಿದ್ದೆಲ್ಲಿ, ಪಡೆದಿದ್ದೇನು ಎಂಬುದನ್ನು ಕೊನೆಯವರೆಗೂ ರಹಸ್ಯವಾಗಿ ಉಳಿಸಿಕೊಳ್ಳುತ್ತಾರೆ. ನಿರಂತರ ಆತ್ಮವಿಮರ್ಶೆ, ಮನುಷ್ಯ ಸಾಧ್ಯತೆಯ ಬಗ್ಗೆ ಅದಮ್ಯ ಉತ್ಸಾಹ, ಅದಿಲ್ಲ ಎನ್ನುವ ಸಂಶಯಸ್ಥರಿಗೆ ಸವಾಲು, ವಿಜ್ಞಾನಕ್ಕೆ ಪಂಥಾಹ್ವಾನ ನೀಡುವ ಸಾಹಸ ಇವುಗಳನ್ನು ತನ್ನ ಎಲ್ಲ ಬರಹಗಳಲ್ಲಿ ತೋರಿಸಿದ್ದಾರೆ.

ಬದುಕಿನ ಮೂಲ ಸೆಲೆ ಪ್ರೀತಿ. ಸ್ವಾತಂತ್ರ್ಯ ಮತ್ತು ನಿರ್ಭೀತಿ ಅದರಿಂದ ಪಡೆಯುವ ಶಕ್ತಿ ಎನ್ನುವುದು ಅವರ ವ್ಯಕ್ತಿತ್ವದಲ್ಲಿ ಪ್ರಕಟವಾಗಿದೆ. ನೋಡುಗರಿಗೆ ಕೃಷಿಕನಾಗಿ, ಸಾಹಿತಿಯಾಗಿ, ಪತ್ರಕರ್ತನಾಗಿ ಕಾಣಿಸುಕೊಳ್ಳುತ್ತಿದ್ದರೇ ವಿನಾ ತಾನು ಓರ್ವ ಹದಿನಾಲ್ಕು ವರ್ಷ ಹಿಮಾಲಯದಲ್ಲಿ ಅನುಭವ ಪಡೆದ ವ್ಯಕ್ತಿ ಎಂಬುದು ಯಾರ ಗಮನಕ್ಕೆ ಬಾರದಂತೆ ರಹಸ್ಯವಾಗಿ ಇರುತ್ತಿದ್ದರು.

ವೈಯಕ್ತಿವಾಗಿ ತೋಟದ ಮೇಲೆ, ಬರೆಹದ ಮೇಲೆ ಆರ್ಥಿಕ ಕಾರಣಗಳಿಗೆ ಅವಲಂಬಿತರಾಗಿದ್ದ ಸತ್ಯಕಾಮರ ಬಳಿ ಹಲವರು ಬಂದುಹೋಗಿದ್ದಾರೆ. ತನ್ನ ಬಳಿಗೆ ಬಂದವರನ್ನು ಸತ್ಯಕಾಮರು ಸಾಧ್ಯವಾದಷ್ಟು ನಡೆಸಿದ್ದಾರೆ. 'ನನ್ನ ಬಳಿ ಹತ್ತು ವರ್ಷಗಳಿಂದ ಎರಡು ನಾಯಿಗಳಿವೆ, ಐವತ್ತು ವರ್ಷಗಳಿಂದ ಮಲ್ಲಪ್ಪನೆಂಬ ಆಳು ಇದ್ದಾನೆ, ನಲವತ್ತು ವರ್ಷಗಳಿಂದ ಸ್ನೇಹಿತ ದಂಪತಿಗಳಿದ್ದಾರೆ, ಅವರಿಗೆ ಏನು ಬೇಕೋ ಅದನ್ನು ಪಡೆದಿದ್ದಾರೆ. ನನಗೆ ಯಾರಿಂದಲೂ ಏನು ಆಗಬೇಕಿಲ್ಲ. ಚಳಿಯಾಗುತ್ತಿದೆ, ಕಂಬಳಿ ಹೊದೆಯಿಸಿ ಎಂದವನಿಗೆ ಕಂಬಳಿ ಹೊದೆಯಿಸಿದ್ದೇನೆ. ಸಿಗರೇಟು ತುಟಿಗಿಟ್ಟು ಅದಕ್ಕೆ ಕಡ್ಡಿ ಹಚ್ಚಿ ಎಂದವರಿಗೆ ಕಡ್ಡಿ ಹಚ್ಚಿದ್ದೇನೆ. ನಿನಗೇನು ಬೇಕು · ಯೋಚಿಸು ನಿರ್ಣಯ ನಿನ್ನದು, ಕೊಡುವುದು ಮಾತ್ರ ನನ್ನ ಕರ್ತವ್ಯ ಎಂಬವರೆಗೆ ನಿಷ್ಠುರದ ನಿರ್ಲೇಪ ಕರ್ತವ್ಯವನ್ನು ಹೇಳುತ್ತಿದ್ದರು.

ತಾನು ಬರೆದ ಅನೇಕ ಕೃತಿ ಹೊಟ್ಟೆಪಾಡಿಗೆ ಮಾತ್ರ ಎಂಬ ಪ್ರಾಮಾಣಿಕತೆ ತನ್ನ ಬರಹ ಎಲ್ಲವೂ ಶ್ರೇಷ್ಠವಾಗಿರಬೇಕಿಲ್ಲ ಎಂಬ ವಿನಯ ಇವರಲ್ಲಿ ಅಗಾಧವಿತ್ತು.

ಕೋಪಕ್ಕೆ ನಿಂತರೆ ಪ್ರಚಂಡ ಮುನಿ, ಪ್ರೀತಿಸಲು ತೊಡಗಿದರೆ ಮಹಾಪ್ರೇಮಿ ಹೀಗೆ ಎಲ್ಲವನ್ನು ಸಂಪೂರ್ಣ ಭಾವದಿಂದ ಅನುಭವಿಸಿದವರು. ಬಹಳಬಾರಿ ಅವರನ್ನು ಪ್ರೀತಿಗಿಂತಲೂ ಭಯದಿಂದ ಕಂಡವರೇ ಹೆಚ್ಚು. ಅತೀ ಗೌರವ, ಪೂಜೆ ಇವುಗಳನ್ನು ಇಷ್ಟಪಡದ ಅವರು ನನ್ನನ್ನು ತಲೆಯಿಂದ ನಮಿಸುವವನಿಗಿಂತಲೂ ಕಾಲಿನಿಂದ ಎದೆಗೆ ಒದೆಯುವವನು ನನಗೆ ತುಂಬ ಪ್ರಿಯ ಎಂದು ಅನೇಕ ಬಾರಿ ಹೇಳಿಕೊಳ್ಳುತ್ತಿದ್ದರು. ತನಗೆ ಮಾಡುವ ಸನ್ಮಾನಗಳನ್ನು ನನ್ನ ಶ್ರಾದ್ಧ

ಎಂದೇ ಕರೆಯುತ್ತಿದ್ದರು. ಅಲ್ಲಿ ಕೊಡುವ ಸನ್ಮಾನದ ಪ್ರತಿಕ್ರಿಯೆಯನ್ನು ಸಾರ್ವಜನಿಕವಾಗಿ ಇದು ನನ್ನ ಉತ್ತರಕ್ರಿಯೆ ಎಂದೇ ಹೇಳಿದ ಪ್ರಸಂಗಗಳಿವೆ.

ಪ್ರೀತಿ, ಸ್ತ್ರೀ, ಕಾಮ, ಗುರು, ಶಿಷ್ಯ ಈ ಮುಂತಾದ ಭಾವಗಳಲ್ಲಿ ಅವರು ಅಪ್ಪಟ ಅಭಿನವನಂತೆಯೇ ಬದುಕಿದ್ದಾರೆ. ಅದರ ವಿವರ ಚರ್ಚೆಗಳನ್ನು ಸಂಬಂಧಪಟ್ಟ ಅಧ್ಯಾಯಗಳಲ್ಲಿ ಮಾಡುವುದರಿಂದ ಹೆಚ್ಚು ವಿಶ್ಲೇಷಿಸುವುದಿಲ್ಲ. ಆದರೆ ಶ್ರೀ ಕೀರ್ತಿನಾಥ ಕುರ್ತಕೋಟಿಯವರು ಬರೆದ ಒಂದು ಮಾತು 'ಒಂದು ದೃಷ್ಟಿಯಿಂದ ಅಭಿನವ ಗುಪ್ತನ ದಾರಿಯೇ ಸತ್ಯಕಾಮರು ತುಳಿಯುತ್ತಿರುವ ದಾರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ'. (VII ತಂತ್ರಯೋನಿ ೨೦೦೮) ಕಾಶ್ಮೀರಕ್ಕೆ ಅಭಿನವ ಕರ್ನಾಟಕಕ್ಕೆ ಸತ್ಯಕಾಮ ಎಂಬಷ್ಟು ಸತ್ಯಕಾಮರ ನಡೆಯನ್ನು ಕುರ್ತಕೋಟಿ ವಿವರಿಸುತ್ತಾರೆ. ಈ ಗೌರವ ತಂತ್ರಮಾರ್ಗದ ಪರಿಚಯ ಇದ್ದವರಿಗೆ ಮಾತ್ರ ಅರ್ಥವಾದೀತು. ಆ ಅರ್ಥದಲ್ಲಿ ಸತ್ಯಕಾಮರು ತಂತ್ರಲೋಕಕ್ಕೆ ಕರ್ನಾಟಕದ ದಿಗ್ಗಜ.

ಹಾವಿನ ಭಯ ನೀಗಲು ಹಾವಿನ ಜೊತೆಗೆ ಬದುಕು ನಡೆಸಿ ಹಾವನ್ನೇ ಸಾಕಿ ಅದರ ಜೊತೆಗೆ ಮಲಗಿದವರು. ನಿತ್ಯ ಹೊಸ ಹೊಸ ಸಾಹಸಗಳಿಗೆ ತೆರೆದುಕೊಂಡ ಸತ್ಯಕಾಮರು ಬೀಭತ್ಸದಲ್ಲಿ ಸೌಂದರ್ಯವಿದೆ ಎಂಬ ಆಗಂತುಕನ ಸವಾಲನ್ನು ಸ್ವೀಕರಿಸಿ ಶವಪೂಜೆ, ತಲೆ ಒಡೆದು ಹೋಳಾಗುವಂತೆ ಮಾಡಿದರೂ ಬೆನ್ನು ಬಿಡದೆ ಹೂವಿನ ಬಣ್ಣ ಬದಲಿಸುವ ಗುರುವಿನ ಬೆನ್ನು ಹತ್ತಿ, ಅಘೋರಿಯ ಮನೆಯಲ್ಲಿ ಆತಿಥ್ಯ ಸ್ವೀಕರಿಸಿ ಈ ಮುಂತಾದ ಹಠಸಾಧನೆ ಮಾಡಿದವರು. ಕೊನೆಗೆ ತಾನು ಪಡೆದ ಎಲ್ಲ ವಿದ್ಯೆಗಳನ್ನು ಅಷ್ಟೇ ಕಠಿಣ ತಪಸ್ಸಿನಿಂದ ಗದಗಿನ ಕಪ್ಪತ ಗುಡ್ಡದಲ್ಲಿ ತ್ಯಜಿಸಿದವರು.

ಮರಳಿಬಂದ ಬಳಿಕ ಪತ್ರಕರ್ತರಾಗಿಯು ಕೆಲಕಾಲ ಕೆಲಸಮಾಡಿದ್ದಾರೆ. 1945ರಿಂದ ಅನೇಕ ಪತ್ರಿಕೆಗಳನ್ನು ನಡೆಸಿದ್ದಾರೆ, ಬರೆದಿದ್ದಾರೆ. ಶ್ರೀ, ಕಲಿ, ಕಲ್ಯಾಣ, ಕರ್ಮವೀರ, ಸೈನಿಕ ಕರ್ನಾಟಕ, ಪ್ರಜಾವಾಣಿ, ಪ್ರಜಾಮತ, ಸುಧಾ ಈ ಮುಂತಾದ ಪತ್ರಿಕೆಗಳಲ್ಲಿ ಒಂದೋ ಸಂಪಾದಕತ್ವ ಇಲ್ಲವೇ ವರದಿಗಾರ ಅಥವಾ ಲೇಖಕರಾಗಿ ಬರೆದಿದ್ದಾರೆ. ದಿನಭವಿಷ್ಯ ವಾರಭವಿಷ್ಯ ಬರೆವ ಜ್ಯೋತಿಷಿಯ ಕೆಲಸವನ್ನು ಕೆಲವೊಮ್ಮೆ ಮಾಡಿದ್ದಾರೆ.

ತನ್ನ ಹಿಮಾಲಯ ಯಾತ್ರೆ ಮುಗಿಸಿ ಮರಳಿದವರು ಸರಕಾರ ಅಳಬಾಳದಲ್ಲಿ ಕೊಟ್ಟ ಸ್ವಾತಂತ್ರ್ಯ ಹೋರಾಟಗಾರನೆಂಬ ಗೌರವದ ಭೂಮಿಯನ್ನು ಕುಗ್ರಾಮ ಕಲ್ಲಹಳ್ಳಿ (ಜಮಖಂಡಿ ತಾಲ್ಲೂಕಿನಿಂದ 12 ಕಿ.ಮೀ. ಒಳಗೆ)ಯಲ್ಲಿರುವ ತಂಗಿಯ ಜಮೀನಿನೊಂದಿಗೆ

ಬದಲಾಯಿಸಿಕೊಂಡು ಚಿರತೆ, ತೋಳಗಳ ಬೀಡಾದ ಆ ಗುಡ್ಡಗಾಡನ್ನು ಮಲೆನಾಡಾಗಿ ಪರಿವರ್ತಿಸಿ ಮರಣಕಾಲದವರೆಗೂ ಅಲ್ಲೇ ಒಂದು ಪುಟ್ಟ ಮನೆ ನಿರ್ಮಿಸಿ ವಾಸವಾಗಿದ್ದರು.

ಸಾಹಸ ಪ್ರಿಯತೆಯನ್ನು ಕೃಷಿಗೂ ವಿಸ್ತರಿಸಿ ವಿದ್ಯುತ್ತನ್ನು ಕಲ್ಲಹಳ್ಳಿಗೆ ಮೊತ್ತಮೊದಲು ತರಲು ಯಶಸ್ವಿಯಾಗಿ, ಬಾವಿ ತಾವೇ ಅಗೆದು ನೀರು ಪಡೆದದ್ದರಲ್ಲಿ ಕೃಷಿ ನಡೆಸಿದವರು. ಕೇವಲ ಎಲ್ಲರೂ ಬೆಳೆ ಬೆಳೆಯದ ಹೊಸ ತಳಿಯ ಬೀಜ ಉತ್ಪಾದಿಸಿ ಮಾರುವುದು, ಸಾವಯವದಿಂದಲೇ ನಿಂಬೆ, ಹೈನುಗಾರಿಕೆ ಮುಂತಾದ ಅನೇಕ ಪ್ರಯೋಗಗಳನ್ನು ಮಾಡಿ ಕೃಷಿಯಲ್ಲೂ ಪ್ರಸಿದ್ಧರಾಗಿದ್ದವರು. ಹಳ್ಳಿಯ ಮಂದಿಗೆಲ್ಲಾ ದಾದಾ ಎಂದೇ ಹೆಸರಾಗಿದ್ದ ಸತ್ಯಕಾಮರು ಕೃಷಿಕರಿಗೆ ಬೇಕಾದ ಸಲಹೆ, ಸಹಕಾರ, ಧನಸಹಾಯ ಕೊಟ್ಟು ನಿಜವಾದ ದಾದ (ಅಣ್ಣ) ಆಗಿದ್ದರು.

ಸುಮಾರು 40 ಕೃತಿಗಳನ್ನು ರಚಿಸಿರುವ ಸತ್ಯಕಾಮರು ತುಂಬ ಕಡಿಮೆ ಮಾತಿನ ಸ್ವಭಾವ. ಮಾತು ಆಡಿದರೂ ಅದರ ಹಿಂದೆ ಒಂದು ಘನ ಮೌನವಿರುತ್ತಿತ್ತು. ಅವರ ಶೈಲಿಯೂ ಅಷ್ಟೇ ತುಂಬ ಚುಟುಕು, ಬದಲಿಸಲಾಗದಂತಹ ಅತ್ಯಂತ ಉಚಿತ ಪದಪ್ರಯೋಗ ಅವರ ರೀತಿ. ವಿಷಯದಲ್ಲಿಯೂ ಪೌರಾಣಿಕ ಮತ್ತು ಸಾಮಾಜಿಕ ಹಾಗೂ ವೈಯಕ್ತಿಕ ಅನುಭವ ವಿಭಾಗಗಳಲ್ಲಿ ತನ್ನ ಕೃತಿಗಳನ್ನು ಬರೆದಿದ್ದಾರೆ. ಸತ್ಯಕಾಮರು ಆಯ್ದುಕೊಳ್ಳುವ ಶೀರ್ಷಿಕೆಯೆ ಒಂದು ವಿಶಿಷ್ಟ ಅರ್ಥ ನೀಡುವಂತಹದ್ದು. ತಣ್ಣಗಿನ ಬೆಂಕಿ, ಬೆಂಕಿಯ ಮಗಳು, ತಂತ್ರಯೋನಿ... ಹೀಗೆ.

ಬ್ರಹ್ಮಚರ್ಯ, ತಂತ್ರಪಥ, ಸ್ತ್ರೀಕಾರಣಗಳಿಂದಾಗಿ ಸತ್ಯಕಾಮರ ಕುರಿತು ಅನೇಕ ಊಹಾಪೋಹಗಳು, ಅಪವಾದಗಳೂ ಇವೆ. ಅವರದು ಒತ್ತಾಯದ ಬ್ರಹ್ಮಚರ್ಯವಲ್ಲ. ಅದು ಅವರ ಆನಂದದ ಆಯ್ಕೆ. ಅದನ್ನು ಅವರು ಬೇರೆ ಬೇರೆ ಬರೆಹ ಮತ್ತು ಮಾತುಗಳಲ್ಲಿ ಸ್ಪಷ್ಟಪಡಿಸುತ್ತಾರೆ. ಅದನ್ನು ಶಾಂತಮಠಪತಿಯಂತಹ ಸಂಶೋಧಕಿ ಕೂಡ ತಪ್ಪಾಗಿ ಅರ್ಥೈಸಿದ್ದಾರೆ. ಹಾಗೆಯೇ ಅವರ ತಂತ್ರಜಗತ್ತಿನ ಅನೇಕ ಅನುಭವ ಮತ್ತು ಅವರಿಗೆ ಇದ್ದ ಅನೇಕ ಸ್ತ್ರೀ ಸಂಗದಿಂದಾಗಿ ಅವರ ಕುರಿತೂ ರೆಕ್ಕೆಪುಕ್ಕದ ಮಾತುಗಳಿಗೆ ಬರಗಾಲವಿರಲಿಲ್ಲ. ಸತ್ಯಕಾಮರು ಅಂತಹ ಅಪಾರ್ಥಕ್ಕೆ ಮನ್ನಣೆ ಕೊಟ್ಟವರಲ್ಲ. ತನ್ನನ್ನು ಎಲ್ಲರೂ ಅರ್ಥೈಸಿಕೊಳ್ಳಬೇಕು ಎಂಬ ಹಂಬಲ ಅವರಲ್ಲಿ ಇರಲಿಲ್ಲ. ಅವರು ಸಮಾಜದ ಎಲ್ಲ ರೀತಿ-ನೀತಿಗಳಿಗೂ ಸೆಡ್ಡು ಹೊಡೆದು ತೀರ ಹೊಸದಾಗಿ ವಿಶಿಷ್ಟವಾಗಿಯೇ ಕಡೆಯವರೆಗೆ ಬದುಕಿ ನಿರ್ಗಮಿಸಿದವರು. ಹಾಗೆ ನೋಡಿದರೆ ಅವರು ಹುಟ್ಟಿದ್ದು ಕಡುಸಂಪ್ರದಾಯಸ್ಥ ಮಡಿವಂತ ಮಾಧ್ವ ಕುಟುಂಬದಲ್ಲಿ.

ತನ್ನ ಮರಣಕ್ಕೆ ಎರಡು ತಿಂಗಳ ಮೊದಲು ಅವರು ಮರಣ ಪತ್ರವನ್ನು ಬರೆದಿದ್ದಾರೆ. ನನ್ನ ಬಳಿಗೆ ಬಂದ ಯಾರನ್ನೂ ನಾನು ಬರಿಗೈಯಲ್ಲಿ ಮರಳಿಸಿಲ್ಲ. ಇನ್ನೊಮ್ಮೆ ನನ್ನ ಬಳಿ ಸಾವು ಬಂದರೆ ಅದನ್ನೂ ಹಾಗೆಯೇ ಮರಳಿಸುವುದಿಲ್ಲ ಎಂದು ಆ ಪತ್ರದಲ್ಲಿ ಉಲ್ಲೇಖಿಸಿದಂತೆ ಅವರು ನಡೆದಿದ್ದಾರೆ.

ರಜನೀಶ್ ತನ್ನ ಬಗ್ಗೆ ಬರೆಹದಲ್ಲಿ ಹೇಳಿಕೊಂಡ ಕೆಲ ವಿಚಾರಗಳು:

- ರಜನೀಶ್ ತಂತ್ರ ದಿ ಸುಪ್ರೀಂ ಅಂಡರ್ ಸ್ಟಾಡಿಂಗ್ ಕೃತಿಯಲ್ಲಿ ತಾನು ಬಾಲ್ಯದಲ್ಲಿ ತುಂಬ ಬೇಗನೆ ಎದ್ದು ನದಿ ದಡಕ್ಕೆ ಹೋಗಿ ಕೂತು ಬೆಳಕಾದ ಮೇಲೆ ಸ್ನಾನಮಾಡಿ ಆಚೆ ದಡಕ್ಕೆ ಹೋಗಿ ಮೈ ಒಣಗಿಸಿ ಮನೆಗೆ ಬರುತ್ತಿದ್ದೆ. ಇದೊಂದು ನಾಲ್ಕು ಗಂಟೆಯ ಅವಧಿ ನನ್ನ ಮೊದಲ ಸತೋರಿ ಅನುಭವ ಅಲ್ಲೇ ಆಯಿತು ಏಂದು ಹೇಳಿಕೊಂಡಿದ್ದಾನೆ. (ಪುಟ ಸಂಖ್ಯೆ. 3 ರಲ್ಲಿ ವಿವರಗಳಿವೆ)

- ರಜನೀಶ್ ಹೋಲಿಕೆಯ ಕುರಿತು ಒಂದು ಮಾತು ಹೇಳುತ್ತಾನೆ. 'as much as possible avoid comparing and evaluating individuals because it serves no purpose : it has no meaning. Even if I tell you have no means to verify it.' (P. 110 Kundalini yoga Vol-I 1998)

- ತಾನು ಕೃಷ್ಣಮೂರ್ತಿಯ ಹಾಗೂ ಅಲ್ಲ ಮಹೇಶ್ ಯೋಗಿಯ ಹಾಗೂ ಅಲ್ಲ. ಜೆ. ಕೃಷ್ಣಮೂರ್ತಿ ಅವೇರ್‌ನಸ್ ಬಗ್ಗೆ ಹೇಳುತ್ತಾನೆ. ಮಹೇಶ್ ಯೋಗಿ ಟೆಕ್ನಿಕ್ ಹೇಳುತ್ತಾನೆ. ನಾನು ಎರಡೂ ಅಲ್ಲ ಅಥವಾ ಎರಡೂ ಹೌದು. ಆದ್ದರಿಂದ ನಾನು ಕನ್‌ಫ್ಯೂಸಿಂಗ್ (128 Tantra the supreme understanding google search osho)

- ತಾನು ಯಾಕೆ ಬರೆಯಲಿಲ್ಲ ಎಂಬುದನ್ನು ರಜನೀಶ್ ಹೀಗೆ ವಿವರಿಸುತ್ತಾನೆ. 'I have never written a book I cannot ! because for whom ? who will read it ? unless I know that man who will read it, and unless he creates a situation, I cannot write - for whom ? I have written only letters because then I know that I am writing to somebody. He may be somewhere in the united states, it makes no difference – a moment I write a letter to him it is a personal phenomenon : he is there. While I am writing he helps me to write. Without him it is not possible it is a dialog' (151 Tantra the supreme understanding google search osho)

* ರಜನೀಶ್ ಗಾಂಧಿ, ಪತಂಜಲಿ, ಜೆ.ಕೆ., ಮಹೇಶ್ ಯೋಗಿ, ಬುದ್ಧ, ಕ್ರಿಸ್ತ, ಹೀಗೆ ಬಹುತೇಕ ಎಲ್ಲರ ಬಗ್ಗೆಯೂ ಅಭಿಪ್ರಾಯಗಳನ್ನು ಹೇಳುತ್ತಾನೆ. ಉದಾ: 1) ಅರಬಿಂದೊ ಖಂಡಿತಕ್ಕೂ ಪತಂಜಲಿಗಿಂತ ದೊಡ್ಡ ಗುರು ಆಗುತ್ತಿದ್ದ ಆದರೆ ಅವನಿಗೆ ಭಾರತೀಯ ತತ್ವಶಾಸ್ತ್ರದ ಪರಿಚಯ ಪಾಶ್ಚಾತ್ಯ ಪ್ರಭಾವದ ಬಳಿಕ ಆಯಿತು. 2) ಜೀಸಸ್ ಭಾರತ ಮತ್ತು ಈಜಿಪ್ಟ್ ಎರಡೂ ದೇಶಕ್ಕೆ ಭೇಟಿ ನೀಡಿರುವ ಎಲ್ಲ ಸಾಧ್ಯತೆ ಇದೆ. ಅವನು ನಳಂದ ವಿಶ್ವವಿದ್ಯಾನಿಲಯದಲ್ಲಿದ್ದು ಬುದ್ಧನ ಪ್ರಭಾವ ಪಡೆದಿದ್ದಾನೆ. ಭಾರತದ ಸ್ವಸ್ತಿಕ್ಕೆ ಮುಂದೆ ಕ್ರೈಸ್ತ ಕ್ರಾಸ್ ಆಯಿತು. ಅದು ಅವನಿಗೆ ನಮ್ಮಿಂದ ಆದ ಪ್ರಭಾವ. ಹಿಂದೂಗಳ ಓಂನ ಮೇಲ್ಭಾಗವೇ ಮುಸ್ಲಿಮರ ಸಿಂಬಲ್ ಆಗಿದೆ. ಕ್ರಿಶ್ಚಿಯಾನಿಟಿಯ ಅಮೆನ್ ಕೂಡ ಓಂನ ಪ್ರಭಾವವೇ. (165 Kundalini yoga Vol-I 1998)

* ರಜನೀಶ್ ಗಾಂಧಿಯನ್ನು ವಿರೋಧಿಸಿದ ಹಾಗೆ ಬಹುಶಃ ಬೇರೆ ಯಾರನ್ನು ವಿರೋಧಿಸಿರಲಿಕ್ಕಿಲ್ಲ. ಗಾಂಧಿ ಆಡುವ ಸತ್ಯಗಳೆಲ್ಲಾ ಅಂತರಂಗದ ಸುಳ್ಳೆಂದು, ಅವನು ಅತ್ಯಂತ ಹಿಂಸಾತ್ಮಕ ಇದ್ದುದರಿಂದಲೇ ಅಷ್ಟು ಅಹಿಂಸೆಯ ಮಾತಾಡಿದನೆಂದೂ ಅತ್ಯಂತ ಕಠೋರವಾಗಿ ಟೀಕಿಸುತ್ತಾನೆ. ಅವನ ಅನೇಕ ಕೃತಿಗಳಲ್ಲಿ ಅದರ ಉಲ್ಲೇಖಗಳಿವೆ.

ಸತ್ಯಕಾಮರು ತನ್ನ ಬಗ್ಗೆ ಬರೆಹದಲ್ಲಿ ಹೇಳಿಕೊಂಡ ಕೆಲ ವಿಚಾರಗಳು:

* ತಾನು ಮರಳಿ ಈ ಸಮಾಜದ ಲೌಕಿಕಕ್ಕೆ ಬಂದಾಗ ಅವರು ಹೇಳಿಕೊಂಡಿರುವ ಮಾತುಗಳು. ನನ್ನ ಬಿಟ್ಟು ಲೋಕಕ್ಕೆ ಗತಿಯಿಲ್ಲ. ಲೋಕವನ್ನು ಬಿಟ್ಟಿರಬೇಕೆಂದರೆ ನನಗೆ ಆಗಲಿಲ್ಲ... ನಾನು ಹೊಂದಿಕೊಳ್ಳುವ ಲೋಕ ಹುಟ್ಟುವುದಿಲ್ಲವೇ ? ಹುಟ್ಟಿದ ಲೋಕಕ್ಕೆ ಹೊಂದಿಕೊಂಡು ಬಿಡಲೇ ? (111 ಕಪಿಲವಸ್ತು 2004)

* ಮನೆಗೆ ಮರಳಿದ ಬಗ್ಗೆ – ಸನ್ಯಾಸಿ ಮತ್ತೆ ಗೃಹಸ್ಥಾಶ್ರಮಿ ಆಗುವುದೇ ? ಇದು ಒಳಿತೇ ಕೆಡುಕೇ ಎರಡೂ ಅಲ್ಲ, ಎರಡೂ ಇರಬಹುದು... ನಾನು ಮಾತಿನ ಸೂತಕದಿಂದ ಶುದ್ಧನಾಗಬೇಕಿದ್ದರೆ ಮೌನ ಹಾಗೂ ಸಮರ್ಥ ಮಾತು ಕುರಿತು ನಾನು ಚಿಂತಿಸುವುದು ಅಗತ್ಯವಿತ್ತು. ಅದಕ್ಕೆ ಇದೇ ಮನೆ ಬೇಕು ಎನ್ನುವ ಅಗತ್ಯ ಇರಲಿಲ್ಲ. ಇದರೊಳಗೆ ಬಂದಾಗ ಇದು ಬೇಡ ಎಂಬ ನಿಷೇಧವು ತೋರಲಿಲ್ಲ. (227 ಸ್ವತಂತ್ರ 2004)

* ಕೃಷಿ ಬಗ್ಗೆ – ನಾನು ಇನ್ನೊಬ್ಬರ ಕಣ್ಣಿಗೆ ಎದುರಾಗಿ ಬದುಕುವುದಕ್ಕಿಂತ ಮಣ್ಣಿನಲ್ಲಿ ಎದೆ ಬೆರೆಸಿ ಅನ್ನ ಉಣ್ಣುವುದು ಓತವೆನ್ನಿಸಿ ಕೃಷಿಗೆ ಬಂದೆ. ಕೃಷಿ ಮೊದಲು ಮಣ್ಣಿನ ಬೆಲೆ

ಹೆಚ್ಚಿಸುತ್ತವೆ. ಬಳಿಕ ಅನ್ನ ವಿಸ್ತರಿಸುತ್ತಿದೆ. ನಂತರ ಬದುಕನ್ನು ವಿಸ್ತರಿಸುತ್ತಿದೆ. ಕೃಷಿಯಿಂದ ನಾನು ತೃಪ್ತ, ಋಷಿತ್ವಕ್ಕೆ ಕೃಷಿ ಸರಿಯಾದ ದಾರಿ. (64 ಕಾಲಿನಲ್ಲಿ ಕಣ್ಣಿರಲಿ 2009)

- ಸತ್ಯಕಾಮರಿಗೆ ಮಾತು ಅಪ್ರಿಯ. ಬರೆಹ ಹೆಚ್ಚು ಪ್ರಿಯ. 'ಬರೆಹ ಯಂತ್ರ ಮಾತು ಮಂತ್ರ. ಮಾತಿನಲ್ಲಿ ಆಟವಿದೆ, ಬರೆಹದಲ್ಲಿ ಮಾಟವಿದೆ. ಭಾಷಣ ಎಂದರೆ ಕರ್ಣ ಪಿಶಾಚಿಯನ್ನು ಸಾಕುವುದು, ಬರೆಯುವುದು ಎಂದರೆ ನಿರ್ಜನ ಅರಣ್ಯದಲ್ಲಿ ತಪಸ್ಸು ಮಾಡುವುದು. ಸ್ತುತಿ ಕೇಳದೆ ಹೋದರೆ ಬಾಷಣಕಾರನಿಗೂ ಕರ್ಣಶೂಲಿ! ಬರೆಯುವವನು ಬೆರೆಯದೇನೇ ಇರುತ್ತಾನೆ. ಅವನಿಗೆ ಅರತಿರ್ಜನ ಸಂಸದಿ. ಪ್ರವಚನ ಸಂತೆಯ ವ್ಯವಹಾರ ಬರೆಯುವುದೋ ಏಕಾಂತ ಸೇವೆ... ಮಾತು ಇಳುಕಲ್ಲಿಗೆ ಬಿದ್ದ ನೀರು. ಬರಹ ನೆಲ ಎದೆಯಿಂದ ಚಿಮ್ಮುವ ಚಿಲುಮೆ. ತನ್ನನ್ನು ತೋರಿಸಿಕೊಳ್ಳಲು ಮಾತು ಬೇಕು ಮುಚ್ಚಿಕೊಳ್ಳಲು ಬರೆಹ ಸಾಕು'. (67 ಕಾಲಿನಲ್ಲಿ ಕಣ್ಣಿರಲಿ 2009)

ಈ ಮೇಲಿನ ಅಂಶಗಳ ಆಧಾರದಿಂದಲೂ ಕೆಲವು ಪ್ರಮುಖ ಸಂಗತಿಗಳನ್ನು ನಾವು ಗಮನಿಸಬೇಕು. ರಜನೀಶ್ ಎಲ್ಲ ವ್ಯಕ್ತಿಗಳ ಕುರಿತು ಮಾತಾಡಿದರೆ ಸತ್ಯಕಾಮರು ಯಾರ ಕುರಿತು ಟೀಕೆ ಮಾಡಿದ್ದು, ಅಭಿಪ್ರಾಯ ಹೇಳಿದ್ದು ಕಾಣಿಸುವುದಿಲ್ಲ. ಹಾಗೆಯೇ ಮಾತು ಮತ್ತು ಬರೆಹಕ್ಕೆ ಇರುವ ವ್ಯತ್ಯಾಸವನ್ನು ಸತ್ಯಕಾಮರೇ ಹೇಳಿದ ಹಾಗೆ ಅವರಿಬ್ಬರ ವ್ಯಕ್ತಿತ್ವವನ್ನು ಅವರ ಅಭಿಪ್ರಾಯಗಳು ಪ್ರತಿನಿಧಿಸುತ್ತವೆ. (ತನ್ನನ್ನು ತೋರಿಸಿಕೊಳ್ಳಲು ಮಾತು ಬೇಕು = ರಜನೀಶ್, ಮುಚ್ಚಿಕೊಳ್ಳಲು ಬರೆಹ ಸಾಕು = ಸತ್ಯಕಾಮ).

ರಜನೀಶ್ ಗಾಂಧಿಯ ಕುರಿತು ತಳೆದಿರುವ ನಿಲುವಿಗೂ ಅವನು ತನ್ನ ಯೌವ್ವನ ಕಾಲದಲ್ಲಿ ಆರ್.ಎಸ್.ಎಸ್. ಅಥವಾ ಸಂಘದ ಸದಸ್ಯನಾಗಿರುವುದಕ್ಕೂ ಸಂಬಂಧ ಇದೆಯೋ ಎಂಬುದು ನನ್ನ ಗುಮಾನಿ. ಅದು ಆರ್.ಎಸ್.ಎಸ್. ಪ್ರೇರಣೆಯಿಂದಲೇ ಆಗಿದ್ದರೆ ನಾವು ವಿಷಾದಿಸಬೇಕು. ಹಾಗಲ್ಲದೆ ಅದು ಅವನ ವೈಯಕ್ತಿಕ ನಿಲುವೇ ಆಗಿದ್ದರೆ ಒಬ್ಬ ತತ್ವಶಾಸ್ತ್ರಜ್ಞನಾಗಿಯೂ ರಜನೀಶನಿಗೆ ಇಂತಹ ಮನೋಧರ್ಮ ಇರುವುದು ಆಶ್ಚರ್ಯ.

ಸತ್ಯಕಾಮರು ರಜನೀಶ್ ಕುರಿತು ಒಂದು ಧಾರಾವಾಹಿ ರೂಪದ ಸರಣಿ ಲೇಖನಗಳನ್ನು ಪತ್ರಿಕೆಗೆ ಬರೆದಿದ್ದರು. ಅದರ ತುಂಬ ಅವರು ರಜನೀಶನನ್ನು ಮೋಸಗಾರ, ವಂಚಕ, ಸ್ತ್ರೀ ಲೋಲುಪ ಇಂತಹ ಅಭಿಪ್ರಾಯಗಳನ್ನು ಪ್ರಕಟಿಸಿದ್ದರು. ತುಂಬ ಪೂರ್ವದಲ್ಲಿ ಬರೆದಿದ್ದ ಆ ಲೇಖನಗಳ ಪತ್ರಿಕೆಯ ಸಂಗ್ರಹ ಒಮ್ಮೆ ನನಗೆ ಸಿಕ್ಕಿತ್ತು. ಅದನ್ನು ನಾನು ಓದತೊಡಗಿದರೆ ಸತ್ಯಕಾಮರು ಅದು ನನ್ನ ಪೂರ್ವದ ಅಭಿಪ್ರಾಯ. ಈಗ ನಾನು ಹಾಗೆ ಅವನ ಬಗ್ಗೆ

ಯೋಚಿಸುತ್ತಿಲ್ಲ. ನೀನು ಅವುಗಳನ್ನು ಓದಕೂಡದು ಎಂದು ಆ ಸಂಗ್ರಹವನ್ನು ಹರಿದು ಹಾಕಿದ್ದರು. ಈ ಅಧ್ಯಯನಕ್ಕಾಗಿ ನಾನು ಅವುಗಳನ್ನು ಮತ್ತೆ ಹಲವು ಪತ್ರಿಕೆಗಳಿಂದ ಸಂಗ್ರಹಿಸಬೇಕು ಎಂಬ ಪ್ರಯತ್ನ ಮಾಡಿದರೂ ನನಗೆ ಅದು ನಿರ್ದಿಷ್ಟವಾಗಿ ಯಾವ ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂಬುದು ತಿಳಿದಿಲ್ಲವಾದ್ದರಿಂದ ಕಡೆಗೂ ಹುಡುಕುವುದು ಸಾಧ್ಯವಾಗಲಿಲ್ಲ. ಈಗಲೂ ಸಿಕ್ಕರೆ ಸತ್ಯಕಾಮರ ಪೂರ್ವದ ಮನೋಭಾವ ರಜನೀಶನ ಕುರಿತು ಹೇಗೆ ಪ್ರತಿಕ್ರಿಯಿಸಿತು ಎಂಬುದನ್ನು ನೋಡಬಹುದು. ಆದರೆ ಅವರು ತನ್ನನ್ನು ತಿದ್ದಿಕೊಂಡು ಅವನ ಅಭಿಪ್ರಾಯವನ್ನು 'ಓಶೋ ದೊಡ್ಡವರು ನಿಜ ಆದರೆ ಧ್ಯಾನದ ವಿಷಯದಲ್ಲಿ ನಮ್ಮನ್ನು ನಡೆಸುವ ಹಲವು ಪ್ರಾಜ್ಞರೂ ಚಿಕ್ಕವರಲ್ಲ. ಯಾರೂ ಎಷ್ಟು ದೊಡ್ಡವರಿದ್ದರು ನಾವು ನಮ್ಮ ಕಾಲಿನಿಂದ ಮಾತ್ರ ನಡೆಯಬೇಕು. ಓಶೋ ನಿಮ್ಮಿಂದ ದೊಡ್ಡವನಾಗಿಲ್ಲ. ಆತ ಓಶೋ ಆಗಿದ್ದರಿಂದ ದೊಡ್ಡವನಾಗಿದ್ದಾನೆ. ಓಶೋ ಬದುಕಿನ ಬಗ್ಗೆ ಇರುವ ಕಾಳಜಿಯನ್ನು ಯಾರೂ ಅಲ್ಲಗಳೆಯುವುದಿಲ್ಲ. ಓಶೋ ಕೂಡ ಇತರರ ಬದುಕಿನ ಚಿಂತನೆಯನ್ನು ಒಪ್ಪಿಕೊಳ್ಳುತ್ತಾರೆ'. (೧೦೩ ತಂತ್ರಯೋನಿ ೨೦೦೮) ಇಷ್ಟು ದೊಡ್ಡ ಮನಸ್ಸಿನಿಂದ ಸ್ವೀಕರಿಸಿರುವಾಗ ಹಳೆಯದರ ಅವಶ್ಯಕತೆ ಇಲ್ಲ ಎಂದೆ ನನ್ನ ನಂಬಿಕೆ. ಹೀಗೆ ದೊಡ್ಡ ವ್ಯಕ್ತಿ ಒಬ್ಬ ತನ್ನ ಅಭಿಪ್ರಾಯಗಳನ್ನು ಕಾಲ ಕಾಲಕ್ಕೆ ತಿದ್ದಿ ಪರಿವರ್ತಿಸಿಕೊಳ್ಳುವುದು ಕಲಿಯಬೇಕಾದ ಲಕ್ಷಣ.

ರಜನೀಶ್‌ನ ಪ್ರಕಟಣಾ ಸಂಸ್ಥೆಯು ಅವನ ಒಂದೇ ಕೃತಿಗಳನ್ನು ಬೇರೆ ಬೇರೆ ಹೆಸರಿನಲ್ಲಿ ಪ್ರಕಟಿಸಿದೆ. ಉದಾ: ದಿ ಬುಕ್ ಆಫ್ ಸೀಕ್ರೇಟ್ಸ್ ಅನ್ನುವ ಕೃತಿಯೇ ವಿಜ್ಞಾನ ಭೈರವ ತಂತ್ರ ಸಂ. 1, 2 ; ತಂತ್ರ ವಿಶನ್ ಸಂ. 1, 2 ಇವುಗಳನ್ನೇ ದಿ ತಾಂತ್ರಿಕ್ ಎಕ್ಸ್‌ಪೀರಿಯನ್ಸ್, ದಿ ತಾಂತ್ರಿಕ್ ಟ್ರಾನ್ಸ್‌ಫಾರ್ಮೇಷನ್ ಎಂದೂ ಪ್ರಕಟಿಸಿವೆ. ಓದುಗರನ್ನು ತಪ್ಪು ದಾರಿಗೆ ಎಳೆಯಬಹುದಾದ ಒಂದು ಮಾರಾಟದ ತಂತ್ರಗಾರಿಕೆ ಇಲ್ಲಿ ಕಾಣಿಸುತ್ತದೆ. ಇದು ರಜನೀಶನ ವ್ಯಕ್ತಿತ್ವಕ್ಕೆ ಶೋಭೆ ಅಲ್ಲ.

ಬೆಟ್ಟದ ಮೇಲು ಪದರವೇ ಬೆಟ್ಟವಲ್ಲ, ಅದರ ಎತ್ತರ ಘನ ಎಲ್ಲವೂ ಅನುಭವವಾಗಬೇಕಾದರೆ ಬೆಟ್ಟವನ್ನು ಏರಿ, ಅದರ ಒಳಗಿನ ಸತ್ವವನ್ನು ಅಗೆದು ನೋಡಬೇಕು ಇಲ್ಲದೆ ಹೋದರೆ ದೂರದ ಬೆಟ್ಟ ನೋಡಲು ನುಣ್ಣಗೆ ಎಂಬ ಗಾದೆಯ ಮಾತಿನಂತೆ ವ್ಯಕ್ತಿತ್ವ ಪರಿಚಯವು ಹೊಗಳಿಕೆಯೂ ಆಗಬಹುದು, ತೆಗಳಿಕೆಯಾಗಿಯೂ ಕಾಣಬಹುದು. ನಮ್ಮ ದೃಷ್ಟಿಯ ಒಳಗೆ ಅವರನ್ನು ಕೂಡಿಸುವ ಹೊತ್ತಿನಲ್ಲಿ ನಮ್ಮ ದೃಷ್ಟಿಯ ಮಿತಿಯೂ ಕೆಲಸ ಮಾಡುತ್ತದೆ ಎಂಬ ಅರಿವು ಈ ಬರವಣಿಗೆಯಲ್ಲಿದೆ.

4. ಕುಂಡಲಿನಿ ಮತ್ತು ಶಕ್ತಿಪಾತ

'ಅದು ಮೊದಲಿಗೆ ಒಂದೇ ಇತ್ತು. ಒಂದಕ್ಕೆ ಜೀವರಮಿಸಲಿಲ್ಲ. ಅದಕ್ಕೆ ಅದು ಇನ್ನೊಂದನ್ನು ಸೃಷ್ಟಿಸಿತು. ಎರಡು ಒಂದಾಯಿತು. ಅದು ಆನಂದ ಪಟ್ಟಿತು' ಹೀಗೆ ಉಪನಿಷತ್ತಿನಲ್ಲಿ ವಿವರಣೆ ಇದೆ. ನಮ್ಮ ಆ್ಯಡಂ ಈವ್ ಕತೆ ಕೂಡ ಇಂಥದ್ದೇ. ವಾಸ್ತವಿಕ ಬ್ರಹ್ಮ ತಾನಾಗಿ ಇದ್ದ. ಸರಸ್ವತಿಯನ್ನು ಹುಟ್ಟಿಸಿದ. ಮಗಳೇ ಹೆಂಡತಿಯಾದಳು ಎಂಬ ಕಥೆ ಕೂಡ ಇಂಥದ್ದೇ. ಇಲ್ಲಿ ಆನಂದಕ್ಕಾಗಿ ಒಂದು ನಿರಂತರ ಪ್ರಯತ್ನ ನಡೆದಿದೆ. 'ಏಕಾಂಗಿ ನ ರಮತೇ' ಎಂಬುದರಿಂದ ಆರಂಭವಾದ ಅದು 'ದ್ವಿತೀಯಾದ್ವಯೀ ಭಯಂ ಭವತಿ' ಎಂಬ ಎಚ್ಚರಿಕೆಯನ್ನೂ ನೀಡುತ್ತದೆ. ಒಂದು ತಾನಾಗಿ ರಮಿಸದು ನಿಜ ಆದರೆ ಎರಡು ಭಯವನ್ನು ಹುಟ್ಟಿಸುತ್ತದೆ ಎಂಬುದು ಇದರ ತಾತ್ಪರ್ಯ.

ಮನುಷ್ಯ ಅನಾದಿ ಕಾಲದಿಂದ ಸಮಾಜಜೀವಿಯಾಗಿಯೇ ನಮಗೆ ಗೊತ್ತು. ಒಬ್ಬನೇ ಹುಟ್ಟಿದನೋ, ಇದ್ದನೋ ಬೆಳೆದನೋ ಗೊತ್ತಿಲ್ಲ. ಆದರೆ ಅವನ ಸಂಘಜೀವನದ ಕತೆ ಇತಿಹಾಸದಲ್ಲಿದೆ. ಮೂಲತಃ ಒಬ್ಬನೇ ಇದ್ದರೂ ಅವನು ಕಾಲಕ್ರಮೇಣ ಒಂದು ಗುಂಪಿನ ಜತೆ, ಒಂದು ಸಮೂಹ, ಜನಾಂಗದ ಜೊತೆಗೆ ಗುರುತಿಸಿಕೊಂಡಿದ್ದಾನೆ. ಈ ಕಾರಣದಿಂದ ಮನುಷ್ಯ ಒಂಟಿ ಇರಲಾರ ಮತ್ತು ಅವನು ಒಂದು ನಿರ್ದಿಷ್ಟ ಗುಂಪಿನ ಜೊತೆಗೆ ಜೀವಿಸುತ್ತಾನೆ ಎಂಬುದು ಪರಿಪಾಠವಾಯಿತು. ಇದು ಕೆಲವು ರೀತಿ, ರಿವಾಜು, ನಿಯಮ, ಸಂಸ್ಕೃತಿ, ಬೇಕು-ಬೇಡಗಳನ್ನೆಲ್ಲ ಸೃಷ್ಟಿಸಿದೆ. ಮನುಷ್ಯ ಎಂದಾಕ್ಷಣ ಈ ಕಾರಣಕ್ಕಾಗಿಯೇ ಒಂದು ಪ್ರಜ್ಞಾಪೂರ್ವಕ ವ್ಯವಸ್ಥೆಯ ಒಳಗೆ ಬದುಕುವ ಕಡ್ಡಾಯ ನಿಯಮವಿದೆ. ಅದನ್ನು ಮೀರಿ ಬದುಕಿನ ವ್ಯವಸ್ಥೆಯನ್ನು ಇಲ್ಲಿ ಒಪ್ಪಲಾಗದು ಮತ್ತು ಅದು ಸ್ವೇಚ್ಛಾಚಾರ ಅಥವಾ ಅಸಾಮಾಜಿಕದ ಹೆಸರಿನಲ್ಲಿ ತಿರಸ್ಕೃತವಾಗಿ ಬಿಡುತ್ತದೆ.

ಒಂದು ಗುಂಪು, ಸಮಾಜದ ಜೊತೆಗೆ ಗುರುತಿಸಿಕೊಂಡವರಿಗೆ ಇದು ಅನಿವಾರ್ಯ. ಅವರ ಬೇಕು ಬೇಡಗಳೂ ಕೂಡ ಇಲ್ಲಿ ಎಷ್ಟೋ ಬಾರಿ ಕೇವಲ ವೈಯಕ್ತಿಕವಾಗಿರುವುದಿಲ್ಲ. ಆಗ ಅನಿವಾರ್ಯವಾಗಿ ಸ್ವಾರ್ಥ, ತ್ಯಾಗಗಳಿಗೆಲ್ಲ ವಿಶೇಷ ಅರ್ಥಗಳೂ ಹುಟ್ಟಿಕೊಳ್ಳುತ್ತವೆ. ಆದ್ದರಿಂದಲೇ ಒಬ್ಬ ಸಾಮೂಹಿಕ ಜೀವಿಯ ಜೀವನದಲ್ಲಿ ಸಂಬಂಧ, ಮದುವೆ, ಮಕ್ಕಳು ಇವುಗಳಿಗೆ ವಿಶೇಷ ಅರ್ಥವಿದೆ. ಇದನ್ನು ಸಾಮಾಜಿಕ ಅರ್ಥಶಾಸ್ತ್ರದ ನೆಲೆಯಲ್ಲಿಯೇ ನಾವು ಅರ್ಥೈಸಿಕೊಳ್ಳಬೇಕು.

ಆಗ ಅವನ ಬದುಕಿನ ಅಂತಃಸೆಲೆಯಾದ ಪ್ರೀತಿ ಮತ್ತು ಸ್ವಾತಂತ್ರ್ಯಕ್ಕೂ ಆ ಪರಿಧಿಯೊಳಗಿನ ಕಟ್ಟಿನಲ್ಲೇ ಅರ್ಥವಿರುತ್ತದೆ. ಅದು ಖಂಡಿತಕ್ಕೂ ವೈಯಕ್ತಿಕ ಇರುವುದಿಲ್ಲ. ಈ ಪರಿಧಿಯೊಳಗೆ ಅವನು ತನ್ನನ್ನು ಗುರುತಿಸಿಕೊಂಡು ಸಾಮಾಜಿಕ ಸ್ಥಾನಮಾನ, ಅಭಿಮಾನ ಇವುಗಳನ್ನು ಕಾಪಾಡಿಕೊಳ್ಳುತ್ತಾನೆ. ಇಲ್ಲಿ ಒಂದು ನಿರಂತರ ವೈಯಕ್ತಿಕ ಮತ್ತು ಸಾಮಾಜಿಕದ ಸಂಘರ್ಷವಿದ್ದರೂ, ಒಪ್ಪಂದದ ರೀತಿಯಲ್ಲಿ ಹೊಂದಾಣಿಕೆ ನಡೆದು ಬಿಟ್ಟಿರುತ್ತದೆ. ಎಷ್ಟೋ ಬಾರಿ ಸುಖ ಸ್ವಾತಂತ್ರ್ಯದ ವೈಯಕ್ತಿಕ ವಿಶ್ಲೇಷಣೆ, ಪರಾಮರ್ಶೆಗಳು ನಡೆದು ಮನಸ್ಸು ಸಂಘರ್ಷಕ್ಕೂ ಒಳಗಾಗುತ್ತದೆ. ಅಂಥ ಸಂದರ್ಭದಲ್ಲಿ ವೈಯಕ್ತಿಕ ಜೀವಶಕ್ತಿಯ ಅರ್ಹತೆಗಳು ಸಾಮಾಜಿಕ ಕಟ್ಟುಪಾಡಿನ ಬಂಧನಕ್ಕಿಂತ ದುರ್ಬಲವಿದ್ದರೆ ವ್ಯಕ್ತಿ ತನ್ನ ಹಿತಾಸಕ್ತಿಗಳನ್ನು ಬಿಟ್ಟುಕೊಡುತ್ತಾನೆ. ಒಂದೊಮ್ಮೆ ಜೀವಶಕ್ತಿಯ ಬಲವೇ ಪ್ರಬಲವಾಗಿ ಸಾಮಾಜಿಕ ಬಲ ಕಡಿಮೆಯಿದ್ದರೆ ವ್ಯಕ್ತಿ ಸ್ಫೋಟಗೊಂಡು ಹೊರಕ್ಕೆ ಚಿಮ್ಮಿಕೊಳ್ಳುತ್ತಾನೆ.

ಇದಕ್ಕೆ ಕಾರಣಗಳು ಹಲವು. ಜೀವದ ಹಸಿವು ವ್ಯಕ್ತಿಯಿಂದ ವ್ಯಕ್ತಿಗೆ, ಖಂಡಿತಕ್ಕೂ ಭಿನ್ನವಾಗಿರಲೇ ಬೇಕು. ತನ್ನ ಆಂತರ್ಯದ ಹಸಿವನ್ನು ಅರಿತು ನಡೆವುದು ಒಂದು ದಾರಿ. ಇತರರ ಹಸಿವನ್ನೇ ತನಗೂ ಆರೋಪಿಸಿ ಒಪ್ಪಿಕೊಂಡು ನಡೆಯುವುದು ಇನ್ನೊಂದು ದಾರಿ. ಬಹಳಷ್ಟು ಬಾರಿ ಆಂತರಂಗಿಕ ಹಸಿವಿಗೆ ಬೆಲೆ ಕೊಡುವ ಧೀರತೆ ವ್ಯಕ್ತಿಗಿರುವುದಿಲ್ಲ. ಆ ಕಾರಣದಿಂದ ವ್ಯಕ್ತಿ ಒಂದು ನಿರ್ದಿಷ್ಟ ಕಟ್ಟುಪಾಡುಗಳಿಗೆ ಕಟ್ಟಿಕೊಂಡು ಬದುಕುತ್ತಾನೆ. ಇತರರ ಜೊತೆಗೆ ತಾನು ಇರುವ ಒಂದು ಭ್ರಮೆ ಅವನಿಗೆ ತಾತ್ಕಾಲಿಕ ಪರಿಹಾರವಾಗಿಯೂ ಕಾಣಿಸುತ್ತದೆ. ಹಾಗಾಗಿ ಇಡೀ ಸಮಾಜವು ಒಂದು ನಿರ್ದಿಷ್ಟ ಭಯಕ್ಕಾಗಿ ಒಪ್ಪಿಕೊಂಡ ಬಂಧನ ಮಾತ್ರ. ಇದರ ಮೂಲ ಸೆಲೆಯೇ ಪರಾವಲಂಬನೆ ಮತ್ತು ಭೀತ ಬದುಕು. ಭೀತಿ ಮತ್ತು ಬಂಧನಗಳು ಒಳಗಿರುವ ಪೊಳ್ಳುತನಗಳೇ. ಪ್ರತೀ ಜೀವಕ್ಕೂ ಇರುವ ಮೂಲ ಸೆಲೆ ಅದು. ಭೀತನಿಲ್ಲದ ವ್ಯಕ್ತಿಯೇ ವಾಸ್ತವಿಕ ಇಲ್ಲ. ಭೀತಿ ಪ್ರತೀ ಜೀವಕ್ಕೆ ಹುಟ್ಟಿನಿಂದಲೇ ಬರುವ ವಾಸನಾ ಪರಂಪರೆ.

ನಾವು ಹೀಗೆ ಹೇಳಿದಾಕ್ಷಣ ಅದು ಅವೈಜ್ಞಾನಿಕ ಆಗಬಾರದು. ಜೀವ ಪರಂಪರೆಯ ಕುರಿತು ಹಿಂದೆ ನೋಡಿದ್ದೇವೆ. ಅದು ತನ್ನ ಬೆಳವಣಿಗೆಯಲ್ಲಿ ದಾಟುವ ಹಂತಗಳೂ ಗೊತ್ತು. ಅದರ ಒಟ್ಟು ಪರಿಪೂರ್ಣ ಬೆಳವಣಿಗೆ ಮನುಷ್ಯ ಜೀವನದಲ್ಲಿ ಸಂಭವಿಸುತ್ತದೆ. ಇಲ್ಲಿ ಪೂರ್ಣಮದಃ ಪೂರ್ಣಮಿದಂ ಸ್ಥಿತಿಯನ್ನು ಸೇರುವ ಸಾಧ್ಯತೆ. ವಾಸ್ತವಿಕ ಪ್ರತೀ ಜೀವ ತಾನು ಪರಿಪೂರ್ಣ ಆಗುವುದರ ಕಡೆಗೆ ನಡೆಯಲೇ ಬೇಕು. ಇಲ್ಲದೆ ಇದ್ದರೆ ಅದಕ್ಕೆ ನಿಂತಲ್ಲೇ ನಿಲ್ಲುವ ನಿರ್ಗತಿಕ ಅವಸ್ಥೆ ಎಂಬುದನ್ನು ನೋಡಿದ್ದೇವೆ. ಈ ಪರಿಪೂರ್ಣತೆ ಹೊರಗಿನಿಂದ

ಪಡೆಯುವುದಲ್ಲ. ಒಳಗನ್ನು ನಿಧಾನ ಬಿಡಿಸಿ ಬಿಡಿಸಿ ಒಂದೊಂದು ಕೋನಗಳಲ್ಲೂ ಅರಿಯದ ಭಾಗವನ್ನೆಲ್ಲ ಅರಿವ ಕೆಲಸ. ಈ ಅರಿವಿನ ಹಿಂದೆ ಒಂದು ನಿರಂತರ ತಪಸ್ಸು ಇದೆ. ಅರಿವಿನ ಮೂಲ ಶೋಧಕ್ಕೆ ಹೋಗಲು ಇರುವ ಏಕಮಾತ್ರ ಅಡ್ಡಿ ನಮ್ಮ ಒಳಗೆ ಮನೆ ಮಾಡಿರುವ ಭಯ. ಈ ಭಯ ಕೂಡ ಹೊರಗಿನ ಕಾರಣದಿಂದ ಹುಟ್ಟಿದ್ದಲ್ಲ. ಅದೂ ಕೂಡ ಸೃಷ್ಟಿಯ ಒಟ್ಟಿಗೆ ಮನೆ ಮಾಡಿ ಬಂದಿರುವ ಅವಿಭಾಜ್ಯ ಅಂಗ. ಅದು 'ಸಾವು' ಎನ್ನುವ ತಾನು ಇಲ್ಲವಾಗುವ ಭಯ.

ಇಡೀ ಆಧ್ಯಾತ್ಮ ಈ ಸಾವು ಎಂಬ ಭಯವನ್ನು ನೀಗಲಿಕ್ಕಾಗಿಯೇ ಇದೆ. ಪ್ರತೀ ಮನುಷ್ಯನ ಒಳಗೂ ಈ 'ಇಲ್ಲ' ವಾಗುವ ಭಯಕ್ಕಾಗಿಯೇ ಅವನು ಬೇರೆ ಬೇರೆ ಅವಲಂಬನೆಗಳನ್ನು ಕಟ್ಟಿಕೊಂಡಿದ್ದಾನೆ. ಆಗ ಅವನಿಗೆ ತಾನು ತನ್ನ ನಂತರಕ್ಕೂ ಇರುವ ಒಂದೊಂದು ತೃಪ್ತಿಗಳನ್ನು ಕಾಣುತ್ತಾನೆ. ಅದು ಮಕ್ಕಳ ಮುಖಾಂತರ ಅವನ ಒಂದು ವಾಂಛೆಯನ್ನು ಈಡೇರಿಸಿಕೊಳ್ಳುತ್ತದೆ. ಕಡೆಗೆ ಮಕ್ಕಳು ಕುಟುಂಬ ತನ್ನ ಇರುವಿಕೆಯು ರಕ್ಷಣೆ ಎಂದು ಭ್ರಮಿಸುತ್ತಾನೆ. ಆದರೆ ಭಯ ಎಂದೂ ಅವನನ್ನು ಬಿಡುವುದಿಲ್ಲ. ಅದರ ಅರಿವನ್ನು ಅವನು ಅನುಭವಿಸುವುದು ಮತ್ತೆ ಸಾವಿನ ಸಂದರ್ಭದಲ್ಲೇ.

ಜೀವಕ್ಕೆ ಈ ಭಯದ ವಾಸನಾ ಪರಂಪರೆ ಇದೆ ಎಂದದ್ದು ಈ ಅರ್ಥದಲ್ಲೇ. ಪ್ರತೀ ಮರಣದಲ್ಲೂ ಆ ಭಯವನ್ನು ನಾವು ಹೊತ್ತು ಸಾಗುತ್ತೇವೆ. ಆದ್ದರಿಂದಲೇ ಹುಟ್ಟಿದ ಮಗುವೂ ಬೆಚ್ಚಿ ಬೀಳುತ್ತದೆ. ಅದಕ್ಕೆ ಇನ್ನು ನಾವು ತಿಳಿದ ಪ್ರಜ್ಞಾವಸ್ಥೆ ಬಂದಿಲ್ಲ. ಅರಿವು ಪಡೆದ ಬೆಳವಣಿಗೆ ಆಗಿಲ್ಲ. ಆದರೂ ಅದು ಬೆಚ್ಚಿ ಬೀಳುತ್ತದೆ. ಹಿರಿಯರು 'ಕನಸು ಕಂಡಿರಬೇಕು' ಎಂದು ವಿಶ್ಲೇಷಿಸಿ ಬಿಡುತ್ತಾರೆ. ಕನಸು ಎಲ್ಲಿಯದು? ಯಾವ ಪೂರ್ವ ವಾಸನೆಯದು?

ಈ ರೀತಿ ಒಂದು ಭಯ ಆವರಿಸಿದೆ ಎಂಬುದು ಸತ್ಯ. ಈ ಭಯದ ಮೂಲ ತುಂಬ ಸುಂದರವಿದೆ. ನಮಗೆ ಪ್ರತಿಕ್ರಿಯೆಯ ರೂಪದ ಭಯಗಳು ಗೊತ್ತು. ಕಳ್ಳ ಬಂದಾನು ಎಂಬುದಕ್ಕೆ ಪ್ರತಿಕ್ರಿಯೆ, ಹುಲಿ ಕಂಡರೆ, ಹಾವು ಕಂಡರೆ ಭಯ. ಅಂದರೆ ಏನೋ ಒಂದು ಸಂಭವಿಸಿದ್ದಕ್ಕೆ ನಾವು ಪ್ರತಿಕ್ರಿಯೆಯಾಗಿ ಭಯ ಅನುಭವಿಸಿದ್ದೇವೆ. ಇದು ಕಾರಣ ಕಾರ್ಯ ಸಂಬಂಧ ಉಳ್ಳ ಭಯ. ಹಾವು ಹೋದ ಬಳಿಕ, ಕಳ್ಳ ಇಲ್ಲವಾದಾಗ, ಹುಲಿಯನ್ನು ಕೊಂದರೆ ಭಯ ತಾತ್ಕಾಲಿಕ ನಿವಾರಣೆಯಾಗುತ್ತದೆ ಅದು ಕಾರಣದೊಂದಿಗೆ ಉಪಶಮನಗೊಳ್ಳುವ ಭಯ. ಆದರೆ ಇಲ್ಲಿ ಒಂದು ಸತ್ಯ ನಮಗೆ ಗೊತ್ತಿರಬೇಕು. ಪ್ರತೀ ಸಂದರ್ಭದಲ್ಲಿ ಭಯ ತಾತ್ಕಾಲಿಕ ನಿವಾರಣೆ ಆಗಿದೆ ಶಾಶ್ವತವಾಗಿ ಭಯ ನಿರ್ಮೂಲ ಆಗಿಲ್ಲ. ಭಯ ನಿರ್ಮೂಲ ಆಗುವುದಕ್ಕೆ ಮುನ್ನ ಒಂದು

ಸಂಗತಿಯನ್ನು ತಿಳಿದಿರಬೇಕು. ನಮಗೆ ಒಳಗೆ ಒಂದು ನಿಷ್ಕಾರಣ ಭಯವಿದೆ. ಆ ನಿಷ್ಕಾರಣ ಭಯದ ಶೋಧವೇ ಅದರ ನಿರ್ಮೂಲದ ಪ್ರಾರಂಭ ಕೂಡ.

ಇದರ ತುಂಬ ಸುಂದರ ಉದಾಹರಣೆ ಶ್ರೀ ರಮಣ ಮಹರ್ಷಿ. ಬದುಕಿನ ಪುಟ್ಟ ವಯಸ್ಸಿಗೆ ಹುಟ್ಟಿದ ಸಾವಿನ ಭಯ. ಒಂದು ರೋಗದ ಭಯ ಕಡೆಗೆ ತನ್ನನ್ನು ತಾನು ಅರಿಯುವ ಶೋಧವನ್ನು ತಲುಪಿ ಅದನ್ನು ಮುಗಿಸಿ ಹೊರಗೆ ಬಂದಿದೆ. ಇದರ ಹಿಂದೆ ಒಂದು ನೀರುಳ್ಳಿಯನ್ನು ಬಿಡಿಸಿ ನೋಡುವಂಥ ಸಾಧನಾ ಕ್ರಮವಿದೆ. ಪೂರ್ಣ ಬಿಡಿಸಿದ ನಂತರ ಏನೂ ಉಳಿಯದ ಕ್ರಿಯೆ.

ವಾಸ್ತವಿಕವಾಗಿ ಈಗಾಗಲೇ ಗಮನಿಸಿದ ಸಾಮಾಜಿಕ ಜೀವನಕ್ಕಿಂತ ತುಂಬ ಭಿನ್ನವಾದ ರೀತಿಯದು. ವ್ಯಕ್ತಿ ತನ್ನನ್ನು ತಾನು ನೋಡಿಕೊಳ್ಳುವ ಮತ್ತು ಅಂತಃಶೋಧದ ಗಮನದಲ್ಲಿ ವೈಯಕ್ತಿಕ ಜೀವನಕ್ಕೆ ಮಹತ್ವಕೊಟ್ಟು ಇರುವುದನ್ನು ಬಿಟ್ಟು ನಡೆದ ಕ್ರಿಯೆ ಇದು. ಇಂಥ ಹಲವು ಉದಾಹರಣೆಗಳು ನಮ್ಮ ಮುಂದೆ ಇವೆ. ಅಕ್ಕಮಹಾದೇವಿ ಬಿಟ್ಟು ನಡೆದದ್ದೇ ಹೊರಗಿನ ಕಟ್ಟುಪಾಡುಗಳನ್ನು.

ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಸ್ವಾತಂತ್ರ್ಯ ಮತ್ತು ನಿರ್ಭೀತಿಯ ಕುರಿತು ಇರುವುದನ್ನು ತೋರೆಯುವ ಹಿಂದೆ ವ್ಯಕ್ತಿಗೆ ಇರುವ ಅದಮ್ಯ ಹಸಿವು ಮೊದಲು ಅವನನ್ನು ಸ್ವತಂತ್ರಗೊಳಿಸುತ್ತದೆ. ಆ ಸ್ವಾತಂತ್ರ್ಯದ ತೀವ್ರತೆಗೆ ಯಾವ ಬಂಧನಗಳ ಭಯವಿಲ್ಲ. ಇದು ಒಂದು ದೃಷ್ಟಿಯಿಂದ ಮೂಲ ಭಯದ ಶೋಧವೇ ಆದ ಕಾರಣ ವ್ಯಕ್ತಿಗೆ ತನ್ನ ಇತರ ಸಾಮಾನ್ಯ ಭಯಗಳನ್ನು (ಕಾರಣ ಸಹಿತ ಭಯಗಳನ್ನು) ದಿಕ್ಕರಿಸಿ ನಡೆವ ಧೈರ್ಯ ಹುಟ್ಟಿಕೊಳ್ಳುತ್ತದೆ. ಆದ್ದರಿಂದಲೇ ಇಲ್ಲಿಯ ಮುಖ್ಯ ಶೋಧ ನಿರ್ಭೀತಿ ಮತ್ತು ಸ್ವಾತಂತ್ರ್ಯ. ಇವೆರಡರ ಮೂಲ ಬಿಂದುವಿರುವುದು ಜೀವದ ಕುರಿತು ಇರುವ ಅದಮ್ಯ ಪ್ರೇಮದಲ್ಲಿ.

ಒಂದು ಸುಂದರ ಪ್ರೇಮಕಥೆ ಆಧ್ಯಾತ್ಮ. ಒಳಗೆ ಪ್ರೇಮದ ಅಮಲು ಹುಟ್ಟಿಬಿಟ್ಟವರು ಕುರುಡಾಗಿ ಅವರಿರವರನ್ನು ಗಣಿಸದೆ, ಕುಟುಂಬ ಮನೆ ಧಿಕ್ಕರಿಸಿ ಅವಳ ಅಥವಾ ಅವನ ಹಿಂದೆ ಹೋಗಿ ಬಿಡುತ್ತಾರಲ್ಲ ಹಾಗೆ ಇಲ್ಲಿಯೂ ಜೀವ ಪ್ರೇಮಕ್ಕೆ ಅಂಥ ಬಲವಿರುತ್ತದೆ. ಅದು ತಾನು ಹುಟ್ಟಿದಲ್ಲಿಗೆ ಸೇರುವ ಒಂದು ಅದಮ್ಯ ಶಕ್ತಿಯಾಗಿ ಚಿಮ್ಮುತ್ತಿರುತ್ತದೆ. ಹಾಗೆ ಹುಟ್ಟಿದ ಆ ಪ್ರೇಮಕ್ಕೆ ತಂದೆ, ತಾಯಿ, ಕುಟುಂಬ, ಮನೆ ಯಾವ ಬಂಧನವೂ ಹಿಡಿಸುವುದಿಲ್ಲ. ಅದಕ್ಕೆ ಚೆನ್ನಾಗಿ ಗೊತ್ತು ಇದನ್ನೂ ಹುಟ್ಟಿಸಿದ ಒಂದು ಚೈತನ್ಯವಿದೆ. ಅದನ್ನು ಸೇರಬೇಕು. ಇದು ಸಮುದ್ರವನ್ನು ಸೇರುವ ನದಿಯ ತುಡಿತ. ಒಂದು ಹನಿ, ತನ್ನನ್ನು ತಂದ ಅನಂತವನ್ನು ಸೇರಲು ಇಚ್ಛೆ ಪಡುವ

ಪ್ರಾಮಾಣಿಕ ಹಸಿವು. ಹಾಗೆ ಹೊರಡುವುದು ಆರಂಭ ಮಾತ್ರ, ಮುಂದಿನದು ಅನಂತದ ಕಡೆಗೆ ನಡೆವ ನಡೆ. ಅಲ್ಲಿ ಒಂದೇ ಒಂದು ದಿಕ್ಸೂಚಿಗಳಿಲ್ಲ. ಅಥವಾ ಸೇರಬೇಕಾದದ್ದರ ಗುರಿಯ ವಿವರಗಳಿಲ್ಲ. ಅದು ಗೊತ್ತಿಲ್ಲದ್ದರ ಕಡೆಗಿನ ನಡೆ. ಹೋದವನು ಮುಟ್ಟಿಯೇ ಮುಟ್ಟುತ್ತಾನೆ ಎಂಬ ನಿಯಮವೂ ಇಲ್ಲ. ಆದರೆ ಮರಳಿ ಬರಲಾಗದಷ್ಟು ಮುಂದೆ ಸೆಳೆದಿರುತ್ತದೆ ಜೀವ. ಅಂಥ ಒಂದು ಅಚಾನಕ್ ಪ್ರೇಮದಿಂದ ಆರಂಭವಾಗುವ ಆ ವೇಗ ಒಂದು ಸ್ಫೋಟಕಾರಕ ಘಟನೆಯೊಂದಿಗೆ ಥಟ್ಟಂತ ನಿಂತು ಬಿಡುತ್ತದೆ. ಆ ನಿಲ್ಲುವ ಕ್ಷಣವೇ ಪ್ರತೀ ಮುಂದಿನ ನಡೆಯ ನಿರ್ಣಾಯಕ ಹಂತ. ಸ್ಫೋಟದ ಆರ್ಭಟ ಸಾಧಾರಣವಲ್ಲ. ಬಂದದಾರಿಯ ಬಗ್ಗೆ ಸಿಂಹಾವಲೋಕನ ಆರಂಭವಾಗುತ್ತದೆ. ಬಂದದ್ದು ತಪ್ಪಾಯಿತಾ ಎಂಬ ಭಯ. ಮುಂದೆ ನಡೆಯಲು ಅಸಾಧ್ಯ ಎಂಬ ವಿಚಿತ್ರ ಸೋಲು ಎಲ್ಲವೂ ಮನುಷ್ಯನೊಳಗೆ ಆ ಕ್ಷಣಕ್ಕೆ ಆವಿರ್ಭವಿಸುತ್ತದೆ. ಅಂದರೆ ಅದು ಇಡೀ ಇಲ್ಲಿಯವರೆಗಿನ ಜೀವಕ್ರಮಣದ ಪ್ರಳಯಾಂತಿಕ ಅವಸ್ಥೆ. ನರನಾಡಿಗಳಲ್ಲೆಲ್ಲ ನಡೆವ ಪರಿವರ್ತನೆಯ ಸ್ಫೋಟ ಅದು. ಅದರ ಪರಿಣಾಮದಿಂದ ವ್ಯಕ್ತಿಯ ಇಡೀ ಇದುವರೆಗೆ ನಂಬಿದ ಬದುಕು ಬುಡಮೇಲಾಗುತ್ತದೆ. ಕಾಲಿನಿಂದ ತಲೆಯವರೆಗೆ ಒಟ್ಟು ಛಿದ್ರಗೊಳ್ಳುವ ಅನುಭವ. ಮನುಷ್ಯ ಇದುವರೆಗೆ ತಿಳಿದ ಧೈರ್ಯವೂ ಧೈರ್ಯವಾಗಿ ಉಳಿಯುವುದಿಲ್ಲ. ಇಲ್ಲಿವರೆಗಿನ ನಂಬಿಕೆಯೂ ಹುಸಿಯಾಗಿ ಸಂಶಯ, ಅಧೀರತೆ, ಸಾವಿನ ಭಯ ಒಟ್ಟು ಮನುಷ್ಯನ ಎಲ್ಲ ಎಲ್ಲ ನೇತ್ಯಾತ್ಮಕ ಭಾವಗಳು ಘನೀಭವಗೊಂಡು ಅಂದು ಬದುಕಿನ ಭರವಸೆಯನ್ನು ಮುಗಿಸಿ ಬಿಡುತ್ತವೆ. ಆಗ ಆರಂಭವಾಗುವುದು ಮತ್ತು ಆವರಿಸಿ ಬಿಡುವುದು ಸಾವಿನ ಭಯ ಮಾತ್ರ. ಅದು ಕೇವಲ ತಾನು ಇಲ್ಲವಾಗುವ ಭಯ. ಅದೊಂದು ಜೀವಮೂಲದಲ್ಲಿ ಹುಟ್ಟಿ ಏಳುವ ಭಾರಿ ದೊಡ್ಡ ಪ್ರಳಯ. ಅದರ ಚಳಿಗೆ ಮೂಲ ಬಿಂದು ಬೆನ್ನಿನ ಹುರಿಯ ಕೆಳಭಾಗ. ಅದು ಬೇರೇನೂ ಅಲ್ಲ ನಮ್ಮ ಒಳಗೆ ಸುಪ್ತವಾಗಿದ್ದ ನಮ್ಮದೇ ಪರಮಶಕ್ತಿಯ ಎಚ್ಚರಗೊಳ್ಳುವ ಆರಂಭ. ಇಲ್ಲಿಯವರೆಗೂ ನಮಗೆ ಪರಿಚಯವಿಲ್ಲದ ನಮ್ಮ ಪೂರ್ಣಶಕ್ತಿ ತನ್ನ ಪ್ರಕಟಣೆಯನ್ನು ಆರಂಭಿಸುವ ಹಂತ. ನಮಗೆ ಕೈ ಎತ್ತುವ, ಕಾಲು ಎತ್ತುವ, ಹೊಡೆಯುವ, ನಡೆಯುವ ಹೀಗೆ ಬೇರೆ ಸಂದರ್ಭಗಳಲ್ಲಿ ಮೆದುಳಿನ ಆಜ್ಞೆಗೆ ಅನುಗುಣವಾಗಿ ಪ್ರಕಟವಾಗುವ ಶಕ್ತಿಯ ಪರಿಚಯವಿದೆ. ಆದರೆ ಈಗ ಹೇಳುತ್ತಿರುವ ಅವಸ್ಥೆಯನ್ನು ರಿಮೋಟ್ ಕಂಟ್ರೋಲ್ ಕೂಡ ಕಳೆದಿದೆ. ಯಾವ ಮೆದುಳು ಇಲ್ಲಿಯವರೆಗೆ ನಮ್ಮ ಶಕ್ತಿಯನ್ನು ಅವಯವಗಳ ಮೂಲಕ ಪ್ರಹರಿಸಿತ್ತೋ ಅದು ಇಂದು ತಾನೇ ನಷ್ಟಾವಸ್ಥೆಗೆ ಹೋಗಿದೆ. ಒಂದು ದಟ್ಟ ಪ್ರವಾಹದಲ್ಲಿ ಸಿಕ್ಕ ಹುಲ್ಲುಕಡ್ಡಿಯ ಹಾಗೆ. ಹಾಗಾಗಿ ಹೀಗೆ ಹೀಗೆ ನಡೆ ಅಂತ ಇದುವರೆಗೆ ಮನುಷ್ಯ ಪ್ರಜ್ಞೆ ನಡೆಸಿತಲ್ಲಾ, ಅದೇ ಈಗ ಗಂಡಾಂತರದಲ್ಲಿದೆ. ಯಾಕೆಂದರೆ ಅದು ಮುಂದೆ ಒಂದೆ ಗೊತ್ತಿಲ್ಲದೆ ಒಂದು ವಿಚಿತ್ರ ಸನ್ನಿವೇಶದಲ್ಲಿ ನಿಂತ ಜೀವಕ್ರಮಣದ

ಕೈಗೊಂಬೆ ಆಗಿದೆ. ಈಗ ಈ ಕ್ಷಣದಲ್ಲಿ ಬೇರೇನೂ ಇಲ್ಲ. ಅದು, ಆ ಅದು ಮಾತ್ರ ಎದ್ದು ನಿಂತಿದೆ. ಅದರ ಕೈಯಲ್ಲಿ ಭರಾಟೆಗೆ ಸಿಕ್ಕ ಜೀವಚ್ಛವ ಮಾತ್ರ ಈಗ ಇದುವರೆಗಿನ ಪ್ರಜ್ಞೆ, ಇಲ್ಲಿಯವರೆಗಿನ ಯಾವ ತಯಾರಿ, ತಪಸ್ಸು, ತಾನು ಎಂಬ ಗರ್ವ, ಅಹಂಕಾರ ಯಾವುದೂ ಆಗ ಕೆಲಸಕ್ಕೆ ಬರುವುದಿಲ್ಲ. ಮಹಾಘನ ಶಕ್ತಿಯೊಂದು ನಮ್ಮ ಒಳಗಿಂದಲೇ ಎದ್ದು ನಿಧಾನಕ್ಕೆ ಚಿಮ್ಮುತ್ತಾ ಚಿಮ್ಮುತ್ತಾ ಬೃಹದಾಕಾರವಾಗಿ ವ್ಯಾಪಿಸುತ್ತಾ ನಾವು ಅಣುವಿನಲ್ಲಿ ಅಣುವಾಗುತ್ತಾ ಹೋಗುವ ಅನುಭವ ಅದು. ಅದನ್ನು ಆಧ್ಯಾತ್ಮಿಕ ಪರಿಭಾಷೆಯಲ್ಲಿ ಕುಂಡಲಿನೀ ಎಂದು ಕರೆಯಲಾಯಿತು.

ಇದು ತುಂಬ ಅಪೂರ್ವ ಪ್ರಸಂಗ. ಆದ್ದರಿಂದಲೇ ಇದು ತುಂಬ ಹೊಸದು. ಪ್ರತಿಯೊಬ್ಬನ ಬದುಕಿನಲ್ಲಿ ಒಮ್ಮೆ ಮಾತ್ರ ಸಂಭವಿಸುವಂಥದು. ಈ 'ಸಂಭವ'ಕ್ಕೆ ಸರಿಯಾಗಿ ಸ್ಪಂದಿಸಿದರುಂಟು. ಇಲ್ಲದೆ ಇದ್ದರೆ ಇಲ್ಲ, ವ್ಯಕ್ತಿ ಸರಿಯಾದ ರೀತಿಯಲ್ಲಿ ಗಮಿಸಿದರೆ ದಾಟಿಕೊಳ್ಳುತ್ತಾನೆ, ಆಚೆಗಾಗುತ್ತಾನೆ. ಸ್ಥಿಮಿತ ತಪ್ಪಿದವ ಹುಚ್ಚನಾಗುತ್ತಾನೆ. ಇನ್ನು ಕೆಲವೊಮ್ಮೆ ಅವನದು ಆತ್ಮಹತ್ಯೆಯ ಅವಸ್ಥೆ. ಯಾಕೆಂದರೆ ಇದು ಅಂಥ ಒಂದು ಪ್ರಾಣಾಂತಿಕ ಸ್ಥಿತಿ.

ಇದು ಎಲ್ಲರಿಗೂ ಸಂಭವಿಸಲೇ ಬೇಕು. ಜೀವನದ ಪ್ರತೀ ಮುಕ್ತಾಯ ಇಂಥ ಆರಂಭದಿಂದಲೇ ಆಗಬೇಕು, ಆಗುತ್ತದೆ. ವ್ಯಕ್ತಿಯ ಜೀವ ತನ್ನ ಅಂತ್ಯವನ್ನು ಕಾಣುವ ಆರಂಭ ಈ ಶಕ್ತಿಯ ಉತ್ಕ್ರಮಣ; ತುಂಬ ವಿಶೇಷ ರೀತಿಯಲ್ಲಿ ಈ ಪ್ರಸಂಗ ಪ್ರತೀ ವ್ಯಕ್ತಿಯ ಬದುಕಿನಲ್ಲಿ ಉಂಟಾಗಿಯೇ ತೀರುತ್ತದೆ. ಈ ಇಡೀ ಘಟನೆಯನ್ನು ತುಂಬ ಸುಂದರವಾಗಿ ರಜನೀಶ್ ಒಂದು ಕತೆಯ ಮೂಲಕ ವಿಶದೀಕರಿಸುತ್ತಾನೆ. ಅನುಭವ ಹೀಗಿದೆ. ನೀವು ಒಂದು ದಟ್ಟಕಾಡಿನಲ್ಲಿ ಹೊರಟಿದ್ದೀರಿ. ಹೊರಡುವ ಹೊತ್ತಿಗೆ ಬೆಳಕಿತ್ತು. ನಿಮಗೆ ದಾರಿಯು ತಿಳಿದಿತ್ತು. ಆದರೆ ಬರಬರುತ್ತಾ ಕತ್ತಲಾಗಿದೆ. ನಿಮಗೆ ದಾರಿ ಅಸ್ಪಷ್ಟವಾಗಿ ನೀವು ದಿಕ್ಕು ತಪ್ಪಿದ್ದೀರಿ. ಈಗ ನಿಮಗೆ ಹಿಂದೆ ಹೋಗುವ ದಾರಿಯು ಗೊತ್ತಿಲ್ಲ. ಮುಂದಿನ ದಾರಿ ಕಾಣಿಸುತ್ತಿಲ್ಲ. ನಿಮಗೆ ಕತ್ತಲು ಸಂಗಾತಿಯಾಗಿ ಇದೆ. ನೀವು ನಡೆಯದೆ ಒಂದು ಕ್ಷಣ ನಿಲ್ಲುತ್ತೀರಿ. ನಿಮ್ಮ ಉಸಿರು ಬಿಟ್ಟರೆ ಅಲ್ಲಿ ಇಲ್ಲಿ ಕೇಳುವ ಖಗ ಮೃಗಗಳ ದನಿ. ಅದರಲ್ಲೂ ಸ್ವಲ್ಪ ಸಾವರಿಸಿಕೊಂಡು ಇದ್ದಬದ್ದ ಧೈರ್ಯವನ್ನು ಒಟ್ಟುಗೂಡಿಸುತ್ತೀರಿ. ಸ್ವಲ್ಪ ಹೊತ್ತು ಅನ್ನುವುದು ಕೂಡ ಈಗ ಒಂದು ಯುಗಾನುಭವ. ನೀವು ಹೇಗೋ ಎರಡು–ಮೂರು ಉಸಿರು ಕಳೆದಿದ್ದೀರಿ. ಆಗ ನಿಮಗೆ ನಿಮ್ಮ ಹಿಂದೆ ಅನತಿ ದೂರದಲ್ಲಿ ಒಂದು ಹುಲಿಯ ಗರ್ಜನೆ ಕೇಳುತ್ತದೆ. ಈಗ ನಿಮಗೆ ಗೊತ್ತಾಗಿದೆ, ಹುಲಿ ಒಂದು ಸಮೀಪಿಸುತ್ತಿದೆ ಎಂದು. ಕಾಲು ತಡವರಿಸಿದೆ. ಹುಲಿಯ ದನಿ ನಿಮ್ಮ ಕಿವಿಗೆ ಅದು

ಸಮೀಪ ಬರುವ ಸೂಚನೆ ನೀಡುತ್ತಿದೆ. ನೀವು ನಿಲ್ಲಲಾರಿರಿ. ಮೆಲ್ಲಗೆ ಮುಂದಡಿ ಇಟ್ಟರಿ. ಹುಲಿ ಮತ್ತಷ್ಟು ಸಮೀಪ ಬಂದ ಅದರ ಓಟದ 'ಚುರುಚುರು' ದನಿಯೂ ಈಗ ಕೇಳಿಸುತ್ತಿದೆ. ನೀವು ಓಟಕ್ಕಿತ್ತಿದ್ದೀರಿ. ಎಲ್ಲಿಗೆ ಗೊತ್ತಿಲ್ಲ, ಕತ್ತಲಲ್ಲಿ ಮರಗಿಡಕ್ಕೆ ಡಿಕ್ಕಿ ಹೊಡೆಯುತ್ತಾ, ಬಿದ್ದು ಎದ್ದು ಸಾವರಿಸುತ್ತಾ ಓಡುತ್ತಿದ್ದೀರಿ. ನಿಮಗೆ ಮೊದಲಿನಿಂದಲೂ ಯಾರ ಮೇಲೂ ಯಾವುದರ ಮೇಲೂ ವಿಶ್ವಾಸವಿಲ್ಲ. ನೀವು ನಂಬಿದ್ದು ನಿಮ್ಮನ್ನು ಮಾತ್ರ. ಈಗ ಓಡುತ್ತಿದ್ದೀರಿ. ಎಷ್ಟೋ ದೂರ ಬೆಟ್ಟ ಏರಿ ಬಂದಂತೆ ಏರಿ ಬಂದಿದ್ದೀರಿ. ನಿಜಕ್ಕೂ ಈಗ ನೀವು ಒಂದು ಬೆಟ್ಟದ ತುದಿಗೆ ಬಂದು ನಿಂತಿದ್ದೀರಿ. ಆಕಾಶದ ಬೆಳದಿಂಗಳೂ ಈಗ ನಿಮಗೆ ಎದುರಿಗೆ ಇರುವ ಕಣಿವೆಯನ್ನು ತೋರುತ್ತಿದೆ ಕಣಿವೆಯ ಆಳವೇ ಬಹಳವಿಲ್ಲ. ಅದೂ ಸ್ಪಷ್ಟ ಕಾಣಿಸುತ್ತದೆ. ತಳ ನೋಡುತ್ತೀರಿ ಹಿಂದಿನ ಹುಲಿಯಿಂದ ಪಾರಾಗಲು ಇದೊಂದೇ ಗತಿ. ನೀವು ಇನ್ನೊಮ್ಮೆ ಆಳದ ಅಳತೆ ಮಾಡಲು ಹೋಗುತ್ತೀರಿ. ಈಗ ನಿಮಗೆ ಇನ್ನೊಂದು ಭಯಾನಕ ಸಂಗತಿ ಎದುರಿಗಿದೆ. ಕೆಳಗೆ ಸಿಂಹವೊಂದು ಬಾಯಿ ತೆರೆದು ಗರ್ಜಿಸುತ್ತಿದೆ. ಓಡುತ್ತಿರುವವರಿಗೆ ಈಗ ಹಿಂದೆ ಹುಲಿ, ಮುಂದೆ ಸಿಂಹ, ಬದುಕುವ ಕಾಲಾವಕಾಶ ಕೈಯಲ್ಲಿಲ್ಲ. ಇರುವುದು ಒಂದೇ ಒಂದು ಸಾಧ್ಯತೆ. ಅದು ರಜನೀಶ ಪ್ರಕಾರ ಎಷ್ಟು ಕಡಿಮೆ ಎಂದರೆ ನಂಬಿಕೆಯ ಮೇಲೆ ನಿಂತಿದೆ. ಪೂರ್ಣ ನಂಬಿಕೆ ಅಂದರೆ ಒಂದರೆಕ್ಷಣವೂ ಅನುಮಾನವೇ ಇಲ್ಲದ ಪೂರ್ಣ ನಂಬಿಕೆ. ಮೊನೆಯಂಥ ನಂಬಿಕೆ. ಆ ನಂಬಿಕೆ ಎಷ್ಟು ಹೊತ್ತಿಗೆ ಸಾಕು. ರಜನೀಶ್ ಹೇಳುತ್ತಾನೆ ಈ ಬೆಟ್ಟದ ತುದಿಯಿಂದ ಕಣಿವೆಯ ತಳ ಸೇರುವವರೆಗಿನ ಅವಧಿಯಿದೆಯಲ್ಲ ಅಲ್ಲಿ ಪಾರಾಗುವ ಏಕಮಾತ್ರ ಚಾನ್ಸ್ ಇದೆ. ಆ ಬಾಯಿಯಿಂದ ಈ ಬಾಯಿಗೆ ಬೀಳುವವರೆಗಿನ ಕ್ಷಣಿಕ ಅವಧಿ. ಅಷ್ಟರವರೆಗೆ ಪರಿಪೂರ್ಣವಾಗಿ ನಂಬಲು ಸಾಧ್ಯವಾ? ಹಾರಿ jump.. ಒಂದು ಚಾನ್ಸ್ ತೆಗೆದುಕೊಂಡು ನೋಡಿ.. ಅಲ್ಲಿ ನಂಬಿಕೆಯಿಂದ ಹಾರಿದವನು ಖಂಡಿತಕ್ಕೂ ಪಾರಾಗುತ್ತಾನೆ ಎನ್ನುತ್ತಾನೆ ರಜನೀಶ್. ಹೌದು ಹಿಂದೆ ಬಂದದ್ದರ ಕಡೆ ಮರಳಲಾಗದು. ಮುಂದಿನ ದಾರಿ ಗೊತ್ತಿಲ್ಲ. ನಡುವಿನ ಕ್ಷಣಿಕ ಜೀವನ್ಮರಣ ಅವಸ್ಥೆಯೇ ಕುಂಡಲಿನೀ ಎಂದರು ಸತ್ಯಕಾಮ. [ಗಮನಿಸಿ ಪು. ಸಂ. ೨೦೦-೨೦೬, ತಂತ್ರಯೋನಿ, ೨೦೦೮] ಇಲ್ಲಿ ಒಂದು ಅಂಶ ಗಮನಿಸಬೇಕು. ಈ ಸಂಗತಿಯು ಎರಡರಿಂದ ಆರಂಭವಾಗಿ ಒಂದರಲ್ಲಿ ಕೊನೆಗೊಳ್ಳುತ್ತದೆ. ಈ ಎರಡು ಯಾವಾಗಲೂ ಸಂಶಯದಿಂದ ಹುಟ್ಟುತ್ತದೆ. ಮತ್ತು ಒಂದೆನ್ನುವ ಹೊತ್ತಿಗೆ ಪರಿಪೂರ್ಣ ನಂಬಿಕೆಯಲ್ಲಿ ಕೊನೆಗೊಳ್ಳುತ್ತದೆ.

ಇದೊಂದು ಜೈವಿಕ ಪರಿವರ್ತನೆಯ ಕ್ಷಣ. ಇಡೀ ದೇಹದ ಅಣುಅಣುವಿನಲ್ಲೂ ಆಗುವ ಸ್ಫೋಟಕಾರಕ ಅವಸ್ಥೆ. ಯಾಕೆ ಹೀಗಾಗಲೇ ಬೇಕು ಎನ್ನುವುದಕ್ಕೆ ತುಂಬ ವಿವರ ಅವಶ್ಯಕತೆಯಿಲ್ಲ. ಯಾಕೆಂದರೆ ಇದುವರೆಗಿನ ನಾವು ನಂಬಿದ. ಕಟ್ಟಿಕೊಂಡ ಪೂರ್ವ ಸಂಸ್ಕಾರದ ಎಲ್ಲ

ವಾಸನೆಗಳನ್ನು ಕಳಚಿಕೊಂಡು ಬಂದದ್ದನ್ನೇ ಸೇರುವ ಕ್ರಿಯೆ ತಾನೇ ಇದು? ಆದ್ದರಿಂದ ಇದು ಹೀಗಾಗದೆ ಬೇರೆ ಗತಿಯಿಲ್ಲ.

ಒಂದು ಮುಖ್ಯ ಸಂಗತಿ ಎಂದರೆ ಇದು ಆರಂಭವಾಗುವುದು ಮಹತ್ತರವಾದ ಒಂದು ಭೀತಿಯಲ್ಲಿ. ಮತ್ತು ಕೊನೆಗೊಳ್ಳುವುದು ನಿರ್ಭೀತಿಯಲ್ಲಿ, ಹಾಗೆಯೇ ಇದರ ಆರಂಭ ಪರಮ ಬಂಧನದೊಳಗೆ ಮುಕ್ತಾಯ ಪರಮ ಸ್ವಾತಂತ್ರ್ಯದಲ್ಲಿ. ಅನೇಕರು ಈ ಕುಂಡಲಿನೀ ಜಾಗೃತಿಗೊಳಿಸುವ ಶಿಬಿರ ನಡೆಸುತ್ತಾರೆ. ಅದು ಒಂದು ವ್ಯವಸ್ಥೆಯ ಒಳಗೆ ಸಂಭವಿಸಲು ಸಾಧ್ಯವಿಲ್ಲ ಎಂಬುದಕ್ಕೆ ಈ ವಿವರ ಸಾಕು.

ಅಂತೆಯೇ ಈ ಕ್ರಿಯೆ ಅನೇಕರಿಗೆ ಅನೇಕ ರೂಪದಲ್ಲಿ ಸಂಭವಿಸಿದೆ. ಬಾಲ್ಯದಿಂದಲೇ ಅಂಥದೊಂದು ಹಸಿವಿನಿಂದ ಮನೆ ಮಠ ಬಿಟ್ಟು ನಡೆದವರು ಮುಂದೆ ಎಲ್ಲೋ ಅಂಥ ಪ್ರಸಂಗಕ್ಕೆ ಇದಿರಾಗಿ ಗೆದ್ದಿದ್ದಾರೆ. ಇನ್ನು ಕೆಲವರು ಬದುಕಿನ ಪೂರ್ಣ ಘಟ್ಟದವರೆಗೂ ಸಾಮಾಜಿಕ ಬದುಕಿನಲ್ಲಿದ್ದು ಯಾವುದೋ ಒಂದು ಆಕಸ್ಮಿಕ ಪ್ರಸಂಗದಲ್ಲಿ ಕಟ್ಟುಪಾಡು ತೊರೆದು ಹೋಗಿದ್ದಾರೆ. ಮೊದಲನೆಯದಕ್ಕೆ ರಮಣರು, ಉದಾಹರಣೆಯಾದರೆ ಎರಡನೆಯದಕ್ಕೆ ಅಕ್ಕ ಮಹಾದೇವಿಯನ್ನು ಉದಾಹರಿಸಬಹುದು. ತಮ್ಮಷ್ಟಕ್ಕೆ ಸಾಮಾಜಿಕ ಬದುಕಿನಲ್ಲಿ ಇರುವವರನ್ನು ಗುರು ಎಂಬ ಆಕರ್ಷಣೆ ಸೆಳೆದು ಸಾಮಾಜಿಕ ಕಟ್ಟನ್ನು ಹರಿಯುವುದಿದೆ. ವಿವೇಕಾನಂದರು ಅಂಥವರು.

ಆದರೆ ಇಲ್ಲಿ ಎಲ್ಲವೂ ಆರಂಭ ಮಾತ್ರ. ಮುಂದೆ ಘಟಿಸುವ ಕುಂಡಲಿನೀ ಶಕ್ತಿಯ ಜಾಗೃತಿಗೆ ನಾವು ಮನೆ ಬಿಟ್ಟು ಬಂದ ಕಾರಣವಾಗಲಿ, ನಮ್ಮ ಬಾಲ್ಯದ ಹಸಿವಾಗಲಿ, ಅಥವಾ ಗುರು ಸೆಳೆದು ತಂದ ಕಾರಣಗಳೇ ಆಗಲಿ ಉತ್ತೇಜಕವಾಗಬೇಕೆಂದಿಲ್ಲ. ಅದು ಸಂಭವಿಸುವ ಹಿನ್ನಲೆ ವ್ಯಕ್ತಿಯಿಂದ ವ್ಯಕ್ತಿಗೆ ತೀರ ವೈಯಕ್ತಿಕ ಮತ್ತು ಭಿನ್ನ. ಅದನ್ನು ಇನ್ನೊಬ್ಬರಿಂದ ತರಬೇತಿ ಪಡೆದು ತಿಳಿದು, ಗೆಲ್ಲುವುದಕ್ಕೆ ಆ ಕಾರಣದಿಂದಲೇ ಸಾಧ್ಯವಿಲ್ಲ.

ಹೀಗೆ ಜಾಗೃತನಾದ ವ್ಯಕ್ತಿ ವೈಯಕ್ತಿಕವಾಗಿ ದೈಹಿಕ ಮತ್ತು ಮಾನಸಿಕ ಈ ಎರಡೂ ಹಂತಗಳಲ್ಲಿ ಬಹಳ ವಿಶೇಷವಾದ ಮಾರ್ಪಾಡುಗಳನ್ನು ಅನುಭವಿಸುತ್ತಾನೆ. ಈ ಮಾರ್ಪಾಡುಗಳು ಸಾಮಾಜಿಕವಾಗಿ ಗೋಚರ ಆಗುವಷ್ಟು ವ್ಯಕ್ತವಾಗುತ್ತದೆ. ಮತ್ತು ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿಯೇ ಇರುತ್ತದೆ.

ಹೀಗೆ ಕುಂಡಲಿನೀ ಜಾಗೃತಿಯಲ್ಲಿ ಬದುಕು ಒಂದು ಪರಿವರ್ತನೆಗೆ ಕಾರಣವಾದ ಸಂದರ್ಭದಲ್ಲಿಯೇ ಇನ್ನೊಂದು ಮುಖ್ಯ ಅಂಶ ಸಂಭವಿಸಿ ಬಿಡುವುದು. ಅದೇ ಶಕ್ತಿಪಾತ. ಇಲ್ಲಿ ಯಾರೋ ಬಂದು ನಮ್ಮ ಮೇಲೆ ಏನನ್ನೋ ಉದುರಿಸುವುದಿಲ್ಲ. ನಾವು ಮಾರ್ಪಾಟಾಗುತ್ತಾ

ಹೋದಂತೆಲ್ಲ ಅನೇಕ ಸಹಜವಾದ ಪ್ರಾಕೃತಿಕ ಶಕ್ತಿಗಳೆಲ್ಲ ನಮ್ಮನ್ನು ಸೇರುತ್ತವೆ. ಹನಿ ತಾನಾಗಿ ಸಮುದ್ರವನ್ನು ಸೇರಿದ ತಕ್ಷಣ ಹನಿಯ ಸಣ್ಣತನವನ್ನು ಕಳಕೊಂಡು ಸಮುದ್ರ ಬಲ ಪಡೆಯುತ್ತದಲ್ಲ ಹಾಗೆ. ಇದು ಹನಿಯನ್ನು ಬಿಟ್ಟುಕೊಡುವ ಸಮರ್ಪಣೆಯೇ ಅದರ ವಿಸ್ತಾರವನ್ನು ನಿರ್ಣಯಿಸುವಂತೆ ಇದು. ಇಲ್ಲಿ ಪರೋಕ್ಷ ಶಕ್ತಿಪಾತದ ರೂಪದಲ್ಲಿ ವ್ಯಕ್ತಿ ತಾನಾಗಿ ಹಂತ ಹಂತದಲ್ಲಿ ಹಿಗ್ಗುತ್ತಾ ಹೋಗುತ್ತಾನೆ. ಈ ಹಿಗ್ಗುವಿಕೆ ಅನಂತವಾಗುವವರೆಗೂ ನಡೆಯುತ್ತದೆ.

ಇನ್ನೊಂದು ತುಂಬ ಪ್ರಚಲಿತ ಇರುವ ಪ್ರತ್ಯಕ್ಷ ಶಕ್ತಿಪಾತ. ಇಲ್ಲಿ ಗುರುಮುಖೇನವೇ ಇದು ನಡೆಯಬೇಕು. ಕುತೂಹಲದ ಸಂಗತಿ ಎಂದರೆ ಗುರುವೊಬ್ಬ ತಾನು ಪೂರ್ಣನಾದ ನಂತರ ತಾನು ಮತ್ತೆ ಹುಟ್ಟುವ ಅಥವಾ ಬೆಳೆಯುವ ಒಂದು ಹಸಿವಿನಲ್ಲಿ ನಿಲ್ಲುತ್ತಾನೆ. ತಾನು ಬೆಳೆಯುವ ಹಸಿವಿರುವವರೆಗೆ ಅವನಿಗೆ ತನ್ನನ್ನು ಮುಂದುವರಿಸುವ ಇನ್ನೊಂದು ಅಣುವಿನ ಹುಡುಕಾಟವಿರುತ್ತದೆ. ಅಂಥ ಗುರುವು ಒಬ್ಬ ಅಂತೇವಾಸಿಯನ್ನು ತನ್ನ ಪರಮ ಶಿಷ್ಯನನ್ನಾಗಿ ಮಾಡಿಕೊಂಡು ತನ್ನದನ್ನು ಅಲ್ಲಿಡುವ ಕೆಲಸ ಆರಂಭಿಸುತ್ತಾನೆ. ಏನು ಹಾಗಂದರೆ?

ಇದರ ಆರಂಭ ಪರಮ ಪ್ರೇಮದಲ್ಲಿ. ಗುರು ಎನ್ನುವವನು ಯಾವಾಗಲೋ ರಕ್ತ ಸಂಬಂಧ, ಕಟ್ಟುಪಾಡುಗಳನ್ನು ಕಳಕೊಂಡ ನಿರ್ಭೀತ ಸ್ವತಂತ್ರ ವ್ಯಕ್ತಿ. ಅವನಿಗೆ ಇರುವುದು ಒಂದು ಪರಿಪೂರ್ಣ ಸೃಷ್ಟಿಯ ಕನಸು. ತನ್ನನ್ನು ಕಟ್ಟಿಕೊಂಡವನಿಗೆ ಮನೆ ಮಕ್ಕಳು. ಕಟ್ಟಿಕೊಳ್ಳದವನಿಗೆ ಜನ್ಮಜನ್ಮಾಂತರದ ಎಲ್ಲ ಸಂಬಂಧಗಳೂ ಮತ್ತೆ ಮುಖಾಮುಖಿಯಾಗುತ್ತವೆ. ಈ ದಿಶೆಯಲ್ಲಿ ಅವನು ಎಲ್ಲರನ್ನು ಸೇರುವ ಮಾಧ್ಯಮ ಪ್ರೀತಿ, ರಕ್ತವಲ್ಲ, ಆ ಪ್ರೀತಿಗೆ ಒಲಿವ ಜೀವಗಳ ಮೇಲೆಲ್ಲ ಅವನ ದಯೆ ಮತ್ತು ಅವನು ಅವರನ್ನು ತನಗಾದಷ್ಟು ಮುನ್ನಡೆಸುತ್ತಾನೆ. ಹೀಗೆ ಹೊರಟಾಗ ಗುರುವಿಗೆ ತನ್ನ ಪರಿಕ್ರಮಣದ ಹಂತ ಹಂತದಲ್ಲಿ ಶಿಷ್ಯಂದಿರ ಹೊಸ ಹೊಸ ಪ್ರವೇಶ. ತನ್ನ ನಡೆಯ ಕೊನೆಯ ಹಂತ ತಲುಪಿದ ಗುರುವಿಗೆ ಕೊನೆಯ ಕ್ರೀಮ್ ಅಥವಾ ಸತ್ವವನ್ನು ಇಟ್ಟು ಹೋಗುವ ಇನ್ನೊದು ಜೀವದ ಹಸಿವು. ಅಂಥ ಸಂಧರ್ಭಕ್ಕೆ ಹುಟ್ಟುವ ಆ ಕೊನೆಯ ಶಿಷ್ಯ ಅವನ ಮುಂದಿನ ಸಂತಾನ.

ಈ ಆಯ್ಕೆಯು ಒಂದು ದೊಡ್ಡ ಪರೀಕ್ಷೆ. ಗುರು ಮತ್ತು ಶಿಷ್ಯ ಇಬರಿಗೂ ಗುರುವನ್ನು ಒಪ್ಪಿಕೊಳ್ಳಲಾಗದ ಸಂಶಯ ಅಪನಂಬಿಕೆಯಲ್ಲಿ ಶಿಷ್ಯ ಒದ್ದಾಡುತ್ತಿರುತ್ತಾನೆ. ಆದರೆ ಜೀವ ತನ್ನ ಸೆಳೆತಕ್ಕೆ ಸಿಕ್ಕಿಬಿಟ್ಟು ಆತನನ್ನು ಬಿಡಲೂ ಆಗದೆ ಒದ್ದಾಡುತ್ತಿರುತ್ತದೆ. ಈ ಸಂಶಯ ಅಪನಂಬಿಕೆ ಮೀರಿ ಶಿಷ್ಯ ತನ್ನ ಬಳಿಗೆ ಬರುವವರೆಗೆ ಗುರುವಿನ ಜೀವಕ್ಕೆ ವಿಶ್ರಾಂತಿಯಿಲ್ಲ. ಗುರು ತನ್ನ ಎಲ್ಲವನ್ನು ಧಾರೆಯೆರೆದು ಶಿಷ್ಯನಿಗೆ ತನ್ನನ್ನು ತೋರುತ್ತಾನೆ. ಆದರೂ ಸಂಬಂಧವಿಲ್ಲದ

ಕಾರಣವಿಲ್ಲದ, ಅನಿರೀಕ್ಷಿತ ಭೇಟಿಯಾದ ವ್ಯಕ್ತಿ ತೋರುವ ಪ್ರೀತಿ, ತೋರುವ ಬಾಂಧವ್ಯ, ಕೊಡುವ ಸರ್ವ ಸಂಪತ್ತುಗಳನ್ನು ಶಿಷ್ಯ ಮತ್ತೂ ಅನುಮಾನಿಸುತ್ತಲೇ ಹೋಗುತ್ತಾನೆ. ಗುರುವಿಗೆ ಶಿಷ್ಯ ಅನುಮಾನಿಸಿದಷ್ಟೂ ತನ್ನನ್ನು ಅರ್ಪಿಸಿಕೊಳ್ಳುವ ಭಾವ ಹೆಚ್ಚುತ್ತಲೇ ಹೋಗುತ್ತದೆ. ಅಲ್ಲಿಂದ ಸುರಿಯುತ್ತಾ ಹೋದದ್ದು ಇಲ್ಲಿ ಶಿಷ್ಯನೊಳಗೆ ನಿಲ್ಲದೆ ಪೋಲಾಗುತ್ತ ಬಂದಷ್ಟು ಗುರುವಿಗೆ ನಿರಂತರ ಚಡಪಡಿಕೆ. ನಿತ್ಯವೂ, ಕ್ಷಣವೂ ಗುರು ಮರಣಾನುಭವ ಅನುಭವಿಸುತ್ತಾನೆ. ಕಾರಣ ಇಷ್ಟೆ ಗುರುವಿಗೆ ಅನೇಕ ತಪಾನುಭವಗಳ ಮೂಲಕ ಒಂದು ಪರಿಚಯಸ್ಥ ನಡೆ ಇದೆ. ಅದನ್ನು ಶಿಷ್ಯನೊಳಗೂ ಪೂರ್ತಿಯಾಗಿ ಬೆಳೆಯಿಸುವವರೆಗೆ ಗುರುಶಿಷ್ಯರ ನಡುವೆ ಈ ಘರ್ಷಣೆ ಇದ್ದೇ ಇರುತ್ತದೆ. ಗುರುವಿನ ಪ್ರತೀ ಚಟುವಟಿಕೆ ಶಿಷ್ಯನಿಗೆ ಅನುಮಾನದಿಂದಲೇ ಅರ್ಥವಾಗುತ್ತದೆ. ಆದರೂ ಅದರ ವಿರುದ್ಧ ದಿಕ್ಕಿನಲ್ಲಿ ಪರಮ ಆಕರ್ಷಣೆಯೊಂದು ಸೆಳೆಯುತ್ತಲೇ ಇರುತ್ತದೆ. ಈ ಬಿಡಲಾರದ ಆಕರ್ಷಣೆಯಿಂದಲೇ ಎಲ್ಲ ಅನುಮಾನಗಳನ್ನು ಶಿಷ್ಯ ದಾಟುತ್ತಾ ಹೋಗುತ್ತಾನೆ. ಆ ಪರಮ ಆಕರ್ಷಣೆಯ ಕೇಂದ್ರ ಬಿಂದು ಗುರು ತೋರುವ ನಿರ್ವ್ಯಾಜ ಪ್ರೇಮ. ಗುರುವಿಗೆ ತಾನು ಹುಟ್ಟುವ ಜಾಗೆಯ ಮೇಲೆ ಆ ರೀತಿಯ ನಿರ್ವ್ಯಾಜ ಪ್ರೇಮ ಬಾರದೆ ಸಾಧ್ಯವಿಲ್ಲ. ಅದು ಅವನ ಅನಿವಾರ್ಯ ಕ್ಷಣ. ಅವನು ಹಾಗೆ ತನ್ನ ಎಲ್ಲ ಪ್ರೇಮವನ್ನು ಸುರಿದು ದಿನದಿಂದ ದಿನಕ್ಕೆ ತಾನು ಕರಗಿ ಕರಗಿ ಶಿಷ್ಯನನ್ನು ತೊಳೆದು ಪುತ್ಥಳಿಯಾಗಿಸುತ್ತಾನೆ. ಇದು ಕೆಲವು ವರುಷಗಳ ಕಾಲದ ಪ್ರಕ್ರಿಯೆ ನಿಧಾನವಾಗಿ ಒಂದೊಂದು ಅಡಿ ಶಿಷ್ಯ ಹತ್ತಿರಾಗುವ ಒಂದು ಕ್ರಿಯೆ ನಡೆಯುತ್ತದೆ.

ಶಿಷ್ಯ ತನ್ನನ್ನು ಇನ್ನಿಲ್ಲದಂತೆ ನಂಬುವ, ಜೀವಕ್ಕೆ ಜೀವ ಕೊಡುವ ಸ್ಥಿತಿ ತಲುಪಿದ ಮೇಲೆ ಗುರು ನಿಧಾನಕ್ಕೆ ಶಿಷ್ಯನ ಜೀವದ ಪರಿಕ್ರಮಣ ಪ್ರವೇಶಿಸುತ್ತಾನೆ. ಅಲ್ಲಿ ತನ್ನನ್ನು ತಾನಿಟ್ಟು ನಿಧಾನಕ್ಕೆ ದೇಹದಿಂದ ತಾನು ಹೊರಗಾಗುವ ಕೆಲಸ ಆರಂಭಿಸುತ್ತಾನೆ. ಇಷ್ಟು ನಡೆವ ವೇಳೆಗೆ ಶಿಷ್ಯ ತನ್ನ ಎಲ್ಲ ಬಂಧು ಬಾಂಧವರನ್ನು ಬಿಟ್ಟು ಬಹಳ ದೂರ ಸಾಗಿರುತ್ತಾನೆ. ಈಗ ಅವನ ದಾರಿಯ ತುಂಬ ಗುರು, ಮತ್ತು ಗುರುಮಾತ್ರ ಎಂಬ ಅವಸ್ಥೆ. ಅವನಿಗೆ ಮೂರನೆಯದಲ್ಲ ಎರಡು ಬದುಕಿರುವ ಅರಿವೂ ಇರುವುದಿಲ್ಲ. ತಾನು ಮತ್ತು ಅವನು ಒಂದೇ ಎಂಬ ಏಕೀಭಾವ. ಆ ಸ್ಥಿತಿಯಲ್ಲಿ ಅದು ಗುರುವಿಗೆ ಪರಮ ಸ್ಥಿತಿ. ಶಿಷ್ಯನಿಗೆ ಬೇರೆ ಕಣ್ಣು ಕಿವಿಯಿಲ್ಲದಂತೆ ಮಾಡಿ ತನ್ನ ಪ್ರೇಮದ ಪರಮ ಬಂಧನಕ್ಕೆ ಒಳಗಾಗಿಸಿ... ಗುರು ದೇಹ ಕಳಚುತ್ತಾನೆ. ಈಗ ಶಿಷ್ಯನಿಗೆ ಮತ್ತೆ ಎಚ್ಚರ. 'ತಾನು' ತನ್ನವರು, ಒಂಟಿ ಎಲ್ಲ ತಿಳಿಯುತ್ತದೆ. ಇಲ್ಲಿಯವರಗೆ ನಡೆಸಿದ ಗುರುವಿಲ್ಲ. ಬಿಟ್ಟು ಬಂದ ದಾರಿಗೆ ತಿರುಗಲು ಸ್ವಾಭಿಮಾನ ಕೇಳದು. ಆಗ ಹುಟ್ಟಿತು ಜೀವನ್ಮರಣದ ಸ್ಥಿತಿ. ಹುಲಿ ಸಿಂಹಗಳ ಬಾಯಿಯ ಮಧ್ಯೆ ಬೀಳುವ ಅವಧಿಯಲ್ಲಿ ಮಾತ್ರ ತಪ್ಪಿಸಿಕೊಳ್ಳಬಹುದಾದ ಒಂದು ಮೊನೆಯ ಕ್ಷಣ. ಇಲ್ಲಿ ಈ ಕ್ಷಣದಲ್ಲಿ ಗುರುವಿನ ಕುರಿತು ನಂಬಿಕೆ ಉಳಿಯಿತೋ

ದಾಟುತ್ತಾನೆ. ಇಲ್ಲದೆ ಇದ್ದರೆ ಸಂಶಯಾತ್ಮ ವಿನಶ್ಯತಿ. ಇದು ಹೀಗೆ ಒಂದು ಪರಮ ನಂಬಿಕೆಗೆ ನಡೆವ ಕ್ಷಣ. ಆ ನಂಬಿಕೆಯು ಸ್ಥಿರವಾದ ತಕ್ಷಣ ಶಿಷ್ಯನ ಒಳಗೆ ಒಂದು ಮಹಾ ಪರಿವರ್ತನೆ. ಅದರ ಮುಂದಿನ ಭಾಗವೇ ಶಕ್ತಿಪಾತ. ಗುರು ನಿಧಾನವಾಗಿ ಒಂದೊಂದರ ಒಳಗೂ ಶಿಷ್ಯನಲ್ಲಿ ಪ್ರವೇಶಿಸುವ ಸಂದರ್ಭ. ತಾನು ಜೀವವನ್ನು ಬಿಟ್ಟುಕೊಟ್ಟು ಗುರುವಿನ ಜೀವ ತನ್ನಲ್ಲಿ ನೆಲೆಯೂರುವವರೆಗೆ ಈ ಪ್ರಕ್ರಿಯೆ. ಜೀವ ಬಿಡುವುದೇ ಮರಣಾನುಭವ. ಈ ಮರಣವನ್ನೇ ಸಾಕ್ಷಾತ್ಕಾರ ಎಂದದ್ದು. ಇದನ್ನೇ ನಿಷ್ಕಾರಣ ಭಯ ಈ ಸಂದರ್ಭದಲ್ಲಿ ವ್ಯಕ್ತಿ ಕಳಚಿಕೊಂಡು ನಿರ್ಭೀತನಾಗಲಿಕ್ಕಿದೆ ಎಂದದ್ದು. ಇದನ್ನು ಹೀಗೆ ಎಂದು ವಿವರಿಸಲಾಗದು. ಗರ್ಭದ ಒಳಗೆ ಇರುವ ಮಗುವಿಗೆ ತಾಯಿ ಉಸಿರು ಕೊಟ್ಟಿರುತ್ತಾಳಲ್ಲ ಹಾಗೆ. ಮಗು ಬದುಕಿಯೇ ಇರುತ್ತದೆ- ತಾನು ಉಸಿರಾಡದೆಯೂ (ಅಂಥದೇ ಅವಸ್ಥೆ ಶಿಷ್ಯನೊಳಗೂ.) ಅವನು ಆ ಜೀವ ಈ ಜೀವದ ಒಳಗೆ ಪ್ರವೇಶಿಸಿ ಕುಳಿತುಕೊಳ್ಳುವ ವೇಳೆಯಲ್ಲಿ ತನ್ನ ಮರಣವನ್ನು ಅನುಭವಿಸಿರುತ್ತಾನೆ. ಆದರೂ ಅವನ ಉಸಿರು ನಿಲ್ಲದಂತೆ ಅವನ ಹುಟ್ಟನ್ನು ಅನುಭವಿಸುವಂತೆ ಆ ಜೀವದ ಉಸಿರಾಟ ಕಾಯುತ್ತದೆ. ಗುರುವಿಗೆ ತಾನು ನಿಂತಲ್ಲಿಂದ ಮುಂದೆ ನಡೆಸುವ ಹೊಣೆಯಿರುತ್ತದೆ. ಅದನ್ನು ಶಿಷ್ಯನಲ್ಲಿ ಮುಂದುವರಿಸುತ್ತಾನೆ. ಇದನ್ನು ಶಕ್ತಿಪಾತ (ಪ್ರತ್ಯಕ್ಷ) ಎಂದು ಕರೆಯಲಾಯಿತು.

ಹೀಗೆ ಹುಟ್ಟುತ್ತಾ ಒಂಟಿಯಿದ್ದವ ಇನ್ನೊಂದನ್ನು ಸೇರಿದ. ಇನ್ನೊಂದನ್ನು ಬಿಟ್ಟು ಒಂಟಿಯಾದವ ಪರಮವನ್ನು ತಲುಪಿದ. ಇದಕ್ಕೆ ಇರುವ ಮೂಲ ಕಾರಣ ಭಯ. ಇದನ್ನು ಗೆಲ್ಲುವ ಏಕಮಾತ್ರ ಮಾರ್ಗ ಪ್ರೀತಿ. ಪ್ರೀತಿ ಎನ್ನುವುದಕ್ಕೆ ರಕ್ತಬಂಧವಿಲ್ಲದ ಪರಮ ಬಂಧನ ಅಂತ ಹೆಸರು. ಅಂಥ ಪ್ರೇಮದ ಸೆಲೆಗೆ ಸಿಕ್ಕವನಿಗೆ ಮತ್ತೆ ಭೀತಿಯಿಲ್ಲ. ಅವನಿಗೆ ಬಂಧನಗಳಿಲ್ಲ. ಆದ್ದರಿಂದಲೇ ಅವನು ಪರಮ ಸ್ವತಂತ್ರ ಮತ್ತು ನಿರ್ಭೀತ. ಅವನು ಆ ಕಾರಣಕ್ಕಾಗಿಯೇ ಎಲ್ಲವನ್ನು ದಾಟಿದ ಅನಂತಕ್ಕೆ ತನ್ನನ್ನು ವಿಸ್ತರಿಸಿಕೊಳ್ಳಬಲ್ಲ ಎಂಬುದನ್ನು ತಂತ್ರ ಮಾರ್ಗ ಹೇಳಿತು.

ತಂತ್ರಮಾರ್ಗದ ಈ ಕುಂಡಲಿನೀ ಜಾಗೃತಿಯ ವಿವರಣೆಗೆ ದೇಹ ಒಂದು ಒಳ್ಳೆಯ ಸಾಧನ. ಈ ಸಾಧನಕ್ಕೆ ಏಳು ಚಕ್ರಗಳು. ಈ ಚಕ್ರಗಳನ್ನು ಒಂದೊಂದು ಶಕ್ತಿಕೇಂದ್ರವಾಗಿ ಗುರುತಿಸಲಾಗಿದೆ. ಈ ಚಕ್ರದ ಪರಿಕ್ರಮಣ ಹಲವು ಪುಸ್ತಕಗಳಲ್ಲಿ ತಲೆಚಕ್ರ ಬರುವಷ್ಟು ಪುನರಾವರ್ತನೆ ಆಗಿದೆ. ಆದರೆ ಇದರ ಮೂಲದಲ್ಲಿರುವ ಪ್ರೇಮ ಕಥೆ ಗುರುಶಿಷ್ಯರ ಅನುಭವಕ್ಕೆ ಮಾತ್ರ ಲಭ್ಯ. ಹಾಗಾಗದೆ ಇದು ಸಂಭವಿಸದು.

5. ಸಾಧನಾ ಪಥದಲ್ಲಿ ಗುರು ಮತ್ತು ಶಿಷ್ಯರ ಮಾರ್ಗ ಸಾಧ್ಯತೆ ಮತ್ತು ಪರಸ್ಪರ ಅರ್ಹತೆಗಳು

ನಮ್ಮ ಮುಂದೆ ಎರಡು ಸುಂದರ ಕತೆಗಳಿವೆ. ಒಂದು ತಿರುಕನ ಕನಸಿನ ಹಾಗೆ. ಮತ್ತೊಂದು ಬುದ್ಧನ ನನಸಿನ ಕಥೆ. ತನ್ನ ಬದುಕಿನ ನಿಜದಲ್ಲಿ ಭಿಕ್ಷುಕನಾದವ ರಾತ್ರಿಯ ಕನಸಿನಲ್ಲಿ ರಾಜನಾದ ಕಥೆ. ರಾಜನಾಗಿದ್ದ ಸಿದ್ಧಾರ್ಥ ಒಂದು ರಾತ್ರಿಯಲ್ಲಿ ಸಂಪತ್ತು ತೊರೆದು ಭಿಕ್ಷುಕನಾದ ಕಥೆ. ಇವೆರಡೂ ಕೂಡ ಪ್ರತೀ ಜೀವಜಗತ್ತು ಬೆಳವಣಿಗೆಯ ಕಡೆಗೆ ನಡೆವ ಸಾಧ್ಯತೆಯನ್ನು ತೋರುವ ರೋಚಕ ಮಾದರಿಗಳು.

'ಇರುವುದೆಲ್ಲವ ಬಿಟ್ಟು ಇರದರದರೆಡೆಗೆ ತುಡಿವುದೆ ಜೀವನ' ಇದು ಬದುಕಿನ ಪ್ರತೀ ಅವಸ್ಥೆಯಲ್ಲೂ ತುಂಬ ನಿಜವಾದದ್ದು. ಇಲ್ಲಿರುವ ಸ್ಥಿತಿಯಲ್ಲಿ ಒಂದು ಬೇಸರಿಕೆ [boredom], saturation ಬಂದಾಕ್ಷಣ ಆ ವ್ಯಕ್ತಿ ಒಂದು ಬದಲಾವಣೆಗೆ ಹಾತೊರೆಯುತ್ತಾನೆ. ಈ ದೃಷ್ಟಿಯಲ್ಲಿ ಪ್ರತಿಯೊಂದು ಜೀವವೂ ಇರುವುದನ್ನು ಕಳಚಿದೆ.

ಆದ್ದರಿಂದಲೇ ಇದು ಜೀವಜಗತ್ತಿನ ಅನಿವಾರ್ಯ ಅವಸ್ಥೆ ಅನ್ನುವುದು. ಪ್ರತಿಯೊಂದು ಕೂಡ ಅಂತಿಮವಾಗಿ ಇಲ್ಲಿಯದನ್ನು ಕಳೆದು ಇನ್ನೇನನ್ನೋ ಸೇರುವ ಹಸಿವನ್ನು ವ್ಯಕ್ತಪಡಿಸುತ್ತದೆ. ಇಂಥ ಸಾಧ್ಯತೆಯಲ್ಲಿ ಜೀವಜಗತ್ತಿನ ಹಸಿವು ಎಲ್ಲರಿಗಲ್ಲ ಎಂಬುದು ಸರಿಯಲ್ಲ. ಅದು ಎಲ್ಲರಿಗೂ ಸಂಭವಿಸಲೇಬೇಕಾದ ಅವಸ್ಥೆ. ಪ್ರತಿಯೊಬ್ಬರು ಅಣುತ್ವದಿಂದ ಪರಮಾಣುತ್ವದ ಕಡೆಗೆ ನಡೆಯಲೇ ಬೇಕು. ಅಣು ಪರಮಾಣು ಆಗುವುದೇ ಅದರ ಮುಕ್ತಾಯ. ಕೆಲವರು ಮೊದಲು ಮತ್ತು ಕೆಲವರು ಅನಂತರ ಎಂಬುದು ನಮ್ಮ ಕಾಣುವ ಕಣ್ಣಿನ ಲೆಕ್ಕಾಚಾರ. ಆಯಾ ಜೀವ ಬೆಳವಣಿಗೆಯ ಕ್ರಮಕ್ಕೆ ಅನುಗುಣವಾಗಿ ಕೆಲವು ಮೊದಲು ಕೆಲವರು ನಂತರ. ಇದನ್ನೇ ರಜನೀಶ, ಜೆ.ಕೆ. ಮುಂತಾದವರು ನೀವೇ ಬುದ್ಧರು you are Buddha ಎಂದು ಪದೇ ಪದೇ ಹೇಳಿದ್ದು. ಇಲ್ಲಿ ಎಲ್ಲವೂ ಅದೇ ಇದೆ ಎಂದು ಅನುಭವಿಸಿದ್ದು. ಆದ್ದರಿಂದ ಇಂಥ ಜೀವಬೆಳವಣಿಗೆ ಆಯಾ ಜೀವಸಂಸ್ಕಾರದ ಬೆಳವಣಿಗೆಗೆ ಅನುಗುಣವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ ರೀತಿಯಲ್ಲಿ ಪ್ರಕಟವಾಗುತ್ತದೆ. ಈ ಬೆಳವಣಿಗೆ ಸಾಧ್ಯತೆಗಳು ಮೂರು ರೀತಿ.

1. ಹುಟ್ಟಿನಿಂದ ಆ ದಿಕ್ಕಿಗೆ ನಡೆವವರು.
2. ಒಂದು ಆಕಸ್ಮಿಕದ ಮೂಲಕ ಪರಿವರ್ತನೆ.
3. ಗುರುಮುಖೇನ ಎಚ್ಚರ ಪಡೆದವರು.

1. ಹುಟ್ಟಿನಿಂದಲೇ ಆ ದಿಕ್ಕಿಗೆ ನಡೆವವರು :

ಕೆಲವರು ತಮ್ಮ ಬಾಲ್ಯದಿಂದಲೇ ಅಂಥ ಆಧ್ಯಾತ್ಮಿಕ ಪ್ರವೃತ್ತಿಯನ್ನು ಪ್ರಕಟಿಸುತ್ತಾರೆ. ಆ ರೀತಿ ಒಂದು ಮಗುವಿನ ವರ್ತನೆ ಇದ್ದಾಕ್ಷಣ ಅದನ್ನು ಪವಾಡದಂತೆ ಕಾಣುವುದು ನಮ್ಮಲ್ಲಿರುವ ಸಾಮಾನ್ಯ ಕ್ರಮ. ಅಂಥ ಕ್ರಮ ಸಾಮಾನ್ಯವಾಗಿ ನಮ್ಮ ಅಜ್ಞಾನದಿಂದಲೇ ಸಂಭವಿಸುತ್ತದೆ. ವಾಸ್ತವಿಕ ಪ್ರತೀ ಜೀವವೂ ಒಂದು ನಿರಂತರ ಬೆಳವಣಿಗೆ ಎಂದು ತಿಳಿದರೆ ಅದು ಹೆಚ್ಚು ಪರಿಪೂರ್ಣ.

ಅನಗತ್ಯ ವೈಭವೀಕರಣ ಯಾವುದೋ ರೆಡಿಮೇಡ್ ಸಂಭವಿಸಿದಂತೆ ಮಾಡುತ್ತದೆ. ಇಲ್ಲಿ ಯಾವುದೋ ಹಾಗೆ ಒಂದು ದಿನದಿಂದ ಹುಟ್ಟುವುದಿಲ್ಲ. ಪ್ರತಿಯೊಂದು ಆಗುತ್ತದೆ. ಈ 'ಆಗುವಿಕೆ'ಯ ಮಾಗಿದ ಪ್ರಕಟಣೆಯೇ ಈ ಬೆಳವಣಿಗೆ. ಪೂರ್ವಸಿದ್ಧತೆಗಳನ್ನು ತನ್ನ ಈ form ಸೇರುವ ಮೊದಲು ಈ ಜೀವ ಸಾಗಿ ಬಂದಿದೆ ಎಂಬುದು ಸ್ಪಷ್ಟ.

ಹಾಗಾಗಿಯೇ ಇಲ್ಲಿ ಯಾರೂ ಅನರ್ಹರಿಲ್ಲ. ಇಂತಹ ಹಲವು ಉದಾಹರಣೆಗಳು ನಮಗೆ ಲಭ್ಯ. ನಮ್ಮ ಪುರಾಣಕಾಲದ ಪ್ರಹ್ಲಾದ ಅಂಥದೇ ಒಂದು ಉದಾಹರಣೆ. ಆ ನಂತರದಲ್ಲಿ ನಾವು ಇತ್ತೀಚೆಗಿನ ಕಾಲಘಟಕ್ಕೆ ಬಂದರೆ ಶಂಕರ, ಮಧ್ವಾಚಾರ್ಯರು, ಮುಂತಾದವರು ಬಾಲ್ಯದಿಂದಲೇ ಯಾರೂ ಹೇಳದೆ ಆ ಕಡೆಗೆ ನಡೆದದ್ದನ್ನು ಗಮನಿಸುತ್ತೇವೆ. ಜೀವದ Instinct ನಲ್ಲೇ ಆ ಹಸಿವು ಅಡಗಿದ್ದು ಅವರು ಹಾಗೆಯೇ ಆ ದಿಕ್ಕಿಗೆ ನಡೆದದ್ದು ಇತಿಹಾಸದಿಂದ ವ್ಯಕ್ತವಾಗುತ್ತದೆ. ಸ್ವಂತ ತಂದೆತಾಯಿಗೇ ಗಾಬರಿಯಾಗಿ ಅವರ ವಿರೋಧದ ನಡುವೆಯೂ ಇವರ ನಡೆ ಬೆಳೆದಿದೆ. ಇಂಥ ಸಾಧ್ಯತೆಯುಳ್ಳ ಬೆಳವಣಿಗೆ ಒಂದು ರೀತಿಯಾದುದು.

ಒಂದು ದೃಷ್ಟಿಯಿಂದ ರಜನೀಶನ ಬದುಕಿನ ವಿವರಗಳನ್ನು ಅಲ್ಲಿ ಇಲ್ಲಿ ಕಲೆ ಹಾಕಿದಾಗ ಅವನೂ ಕೂಡ ನಮಗೆ ಇಂಥದ್ದೇ ಸಾಧ್ಯತೆಯ ಹಾಗೆ ಕಾಣಿಸುತ್ತಾನೆ. ವಿವರಣಾತ್ಮಕವಾದ ಅವನ ಜೀವನ ಚರಿತ್ರೆ ನಮಗೆ ಲಭ್ಯವಿಲ್ಲದಿದ್ದರೂ ಬಾಲ್ಯದಿಂದ ಅವರ ಒಟ್ಟು ವರ್ತನೆಯಲ್ಲಿ ಒಂದು ವಿಕ್ಷಿಪ್ತತೆ, ಒಂದು ಪ್ರತ್ಯೇಕ ರೀತಿಯ ಬೆಳವಣಿಗೆ ಮತ್ತು ನಡೆನುಡಿಗಳು ಗೋಚರಿಸುತ್ತವೆ. ಪ್ರತೀ ಕ್ರಿಯೆಯಲ್ಲೂ ಉಳಿದವರಿಗಿಂತ ಭಿನ್ನವಾಗಿ ಸ್ಪಂದಿಸುವ ರಜನೀಶ ಕಾಲಾಂತರದಲ್ಲಿ ಒಂದು ವಿಶೇಷ ಅನುಭವವನ್ನು ದಾಟಿಬಂದ ಅಪೂರ್ಣ ವಿವರಗಳು ದೊರೆಯುತ್ತವೆ. ಒಂದು ದೃಷ್ಟಿಯಿಂದ ಇವನದು ಗುರುವಿಲ್ಲದೆ ನಡೆದ ಒಳಗಣ ಹಸಿವಿಗೆ ಅಂಥದೊಂದು ತಾನಾಗಿ ಕಿಡಿಹೊತ್ತಿ ಉರಿದ ಸ್ವಂತ ಬೆಳವಣಿಗೆ.

ಸತ್ಯಕಾಮರ ನಡೆಯಲ್ಲಿಯೂ–ಅವರದೇ ಚರಿತ್ರಾತ್ಮಕ ಅನುಭವ ಬರಹಗಳು ತಿಳಿಸುವಂತೆ –ಬಾಲ್ಯದಿಂದಲೇ ಅಂಥದೊಂದು ಇದೆ ಎಂಬಂಥ going to the unknown ಹುಡುಕಾಟ ಇತ್ತು. ಆದರೆ ಅದಕ್ಕೆ ನಿರ್ದಿಷ್ಟ ಗೊತ್ತು ಗುರಿಯಿಲ್ಲ. ಅದು ಸ್ಪಷ್ಟವಾಗಿ ಎಂಬ ರೀತಿಯದ್ದೇ. ಎಲ್ಲಿಗೆ ಎಂದು ಗೊತ್ತಿಲ್ಲ. ಏನು ಸಿಕ್ಕಿತೋ ಅದು ಎಂಬ ಪೂರ್ಣ ತೆರೆದ ಸ್ವೀಕರಣ ಭಾವದಿಂದ ಹೊರಟದ್ದು. ಆದರೆ ಹೀಗೆ ಹೊರಟವರನ್ನು ದಾರಿಯುದ್ದಕ್ಕೂ ಹಲವು ಗುರುಗಳು ನಡೆಸಿಕೊಂಡು ಹೋಗಿ, ಕೊನೆಗೊಂದು ತನ್ನದೇ ನಿರ್ಣಯ ತಲುಪಿದ ಸೂಚನೆ ಇವರ ಬದುಕಿನಲ್ಲಿದೆ. ಹಾಗಾಗಿ ಇವರ ಬೆಳವಣಿಗೆಯಲ್ಲಿ ಮೊದಲ ಮತ್ತು ಮೂರನೆಯ (ಗುರು ಮುಖೇನ) ಸಾಧ್ಯತೆಯ ಸಮ್ಮಿಲನವಿದೆ.

2. ಆಕಸ್ಮಿಕ ಪರಿವರ್ತನೆ :

ಬದುಕಿನ ರೀತಿನೀತಿಗಳಲ್ಲಿ ಎಲ್ಲರಂತೆ, ಪ್ರತೀ ಚಟುವಟಿಕೆಗಳಲ್ಲಿ ತೊಡಗಿದ ವ್ಯಕ್ತಿ ಯಾವುದೋ ಒಂದು ಸಣ್ಣ ಘಟನೆಯಿಂದ ಪೂರ್ಣ ಪರಿವರ್ತಿತನಾಗುವುದು ಇನ್ನೊಂದು ರೀತಿ. ಅದಕ್ಕೂ ಪೂರ್ವದಲ್ಲಿ ಅವರ ಬದುಕಿನಲ್ಲಿ ಅಂಥ ಯಾವ ಸೂಚನೆಗಳೂ ಇರುವುದಿಲ್ಲ. ತೀರ ಅಪ್ಪಟ ಲೌಕಿಕದ ವ್ಯವಹಾರಿಯಂತೆ, ಅಥವಾ ಭೌತಿಕ ಸುಖದುಃಖಗಳಲ್ಲಿ ಉಳಿದವರಿಗಿಂತಲೂ ಅಧಿಕವೆನ್ನಿಸುವಷ್ಟು ತಲ್ಲೀನರಾದವರೂ ಹೀಗೊಂದು ಆಕಸ್ಮಿಕದಲ್ಲಿ ಪರಿವರ್ತಿತರಾದ ಉದಾಹರಣೆಗಳು ನಮ್ಮ ಮುಂದೆ ಸಾಕಷ್ಟಿವೆ.

ಪುರಾಣ ಕಾಲದ ಧ್ರುವ ಇದಕ್ಕೆ ಒಳ್ಳೆಯ ಉದಾರಹರಣೆ. ಚಿಕ್ಕಮ್ಮನ ಮಗ ಉತ್ಥಾನನಂತೆ ತಾನೂ ತಂದೆಯ ತೊಡೆಯಲ್ಲಿ ಕುಳಿತುಕೊಳ್ಳಬೇಕೆನ್ನುವ ಒಂದು ಕೇವಲ ಹಂಬಲ ಚಿಕ್ಕಮ್ಮನಿಂದ ತಿರಸ್ಕೃತವಾಗುತ್ತದೆ. ಇದು ಅಂಥ ಒಂದು ವಿಶೇಷ ಘಟನೆಯೇ ಅಲ್ಲ ಎಂಬಷ್ಟು ಸರಳ. ಆದರೆ ಧ್ರುವನಿಗೆ ಅದು ಪ್ರಾಣಕ್ಕೂ ಮಿಗಿಲಾದ ಹಸಿವು. ಆದ್ದರಿಂದಲೇ 'ನಾರಾಯಣನನ್ನು ಕೇಳು' ಎಂಬ ತಾಯಿಯ ಮಾತು ಅವನಿಗೆ ದಾರಿದೀಪವಾಗುತ್ತದೆ. ಆ ಕಾರಣ ತಂದೆಯ ತೊಡೆ ಸಿಗುವವರೆಗೂ ಆ ನಂಬಿಕೆಯ ಬೆನ್ನು ಹತ್ತಿ ನಡೆಯುತ್ತಾನೆ. ಆ ನಡೆಯ ಪರಿಣಾಮ ಅವನು ನಾರಾಯಣ ತೊಡೆಯನ್ನೇ ಪಡೆದ ಎಂಬವರೆಗೆ ಎಲ್ಲ ಕಾಲಕ್ಕೂ ಶಾಶ್ವತವಾದ ನಕ್ಷತ್ರನಾದ ಎಂಬುದು ಪುರಾಣ ಕಥೆ.

ಆಗಿನ ಕಾಲದ ಧ್ರುವನಿದ್ದನೇ? ನಕ್ಷತ್ರವಾಗಿ ಏನು ಸಾಧನೆ ಮಾಡಿದಂತಾಯಿತು? ಎಂಬ ಪ್ರಶ್ನೆಗಳಲ್ಲಿ ನಾವು ಕಾಲಹರಣ ಮಾಡುವುದಕ್ಕಿಂತ ವರ್ತಮಾನದ ಬದುಕಿಗೆ ತುಂಬ ಹತ್ತಿರದ ಉದಾಹರಣೆಗಳನ್ನು ಗಮನಿಸುವುದು ಒಳ್ಳೆಯದು. ಆಗ ಧ್ರುವನೂ ಹೆಚ್ಚು ಅರ್ಥವಾಗಲಿಕ್ಕೆ ಸಾಕು.

ರಮಣ ಎಂಬ ಹದಿನೈದು ವರುಷದ ಹುಡುಗನಿಗೆ ಬಂದ ಸಾವಿನ ಭಯ ಅವನ ಬದುಕನ್ನು ಪರಿವರ್ತಿಸಿದ ರೀತಿ ನಮಗೆಲ್ಲ ಗೊತ್ತಿದೆ. ಸಾವಿನಿಂದ ತಾನು ಇಲ್ಲವಾಗುವ, ಇಲ್ಲವಾದರೆ ಹೇಗೆ ಎಂಬ ಭಯವೇ ಊಟ ನಿದ್ರೆಗಳನ್ನೇ ಕಳೆದುಕೊಂಡು, ಅದರೊಳಗೇ ಮುಳುಗಿ ಸಮಾಧಿಗೆ ಹೋದ ರಮಣರು ಎಲ್ಲರಂತೆ ಎದ್ದವರಲ್ಲ. ಈ ಸಾವಿನ ಭಯ ಹುಟ್ಟಿದ್ದು ಮುದುಕನಿಗೂ ಅಲ್ಲ ಒಬ್ಬ ಹುಡುಗನಿಗೆ. ಇನ್ನೂ ಎಂಬತ್ತು ವರ್ಷ ಆಯುಸ್ಸಿದೆಯಲ್ಲ ಎಂದು ಮುಂದೂಡ ಬಹುದಾಗಿದ್ದ ಕಾಲ. ಆದರೆ ಅದು ಒಂದು ಬುದ್ಧಿಯ ಲೌಕಿಕ ನೂಕಲ್ಲ. ಆದ್ದರಿಂದಲೇ ಅದು ಜೀವದೊಳಗೆ ಕುಳಿತು ಒದ್ದಿತು, ಎಬ್ಬಿಸಿತು. ಅಂಥ ನೂಕಿನಿಂದ ಕಣ್ಣುಮುಚ್ಚಿದ ರಮಣರಿಗೆ ಉತ್ತರ ಸಿಗದೆ ಏಳಲಾಗದ ಸಮಾಧಿ ಸ್ಥಿತಿಯಿತ್ತು. ಎಚ್ಚರಾದವರು ಮಹರ್ಷಿಗಳಾದದ್ದು ಪುರಾಣವಲ್ಲ, ಇತಿಹಾಸ. ಕಾಲಾಂತರದಲ್ಲಿ ಪುರಾಣವಾದರೆ ಅಚ್ಚರಿಯಿಲ್ಲ.

ಇವರಂತೆ ಅನಿರೀಕ್ಷಿತ ಪರಿವರ್ತಿತನಾದ ಮೊದಲ ಉದಾಹರಣೆ ಸಿದ್ದಾರ್ಥ-ಬುದ್ಧನಾದದ್ದು. ಅತ್ಯಂತ ಶ್ರೀಮಂತ ಜಿಪುಣ ವ್ಯವಹಾರಿ ನವಕೋಟಿ ನಾರಾಯಣ-ಪುರಂದರ ದಾಸರಾದದ್ದು. ಕಾಮಾತುರನಾದ ಸ್ತ್ರೀಲೋಲುಪ ಪತ್ನಿಯಿಂದಲೇ ಪರಿವರ್ತನೆಯಾಗಿ-ತುಳಸೀದಾಸನಾದದ್ದು. ಒಂದು ಯೋಧತ್ವವನ್ನು ಅನುಭವಿಸಿದ ಯೋಧ ಮೂರ್ಛೆಯಿಂದೆದ್ದು-ಕನಕದಾಸರಾದದ್ದು.

ಇಂಥ ಅನೇಕ ಹೆಸರುಗಳನ್ನು ಪಟ್ಟಿ ಮಾಡಬಹುದು. ಇತ್ತೀಚೆಗೆ ಆಗಿಹೋದ ಶ್ರೀ ರಾಮಚಂದ್ರಭಟ್ಟ ಎಂಬ ಕೃಷಿಕ ಪುತ್ತೂರಜ್ಜ ಆದದ್ದು ಕೂಡ ಹೀಗೆ ಪರಿವರ್ತಿತ ಕಥೆಯೇ.

3. ಗುರುಮುಖೇನ ಎಚ್ಚರ ಪಡೆದವರು :

ತಮ್ಮ ಜೀವಿತ ಕಾಲಾವಧಿಯಲ್ಲಿ ಅಂಥ ಯಾವ ಸೂಚನೆಗಳಿಲ್ಲದೆ, ಲೌಕಿಕದಲ್ಲಿ ತುಂಬ ತೊಡಗಿಸಿಕೊಂಡು, ತಮ್ಮ ತಮ್ಮ ಕೆಲಸಗಳನ್ನು ತುಂಬ ಪ್ರಾಮಾಣಿಕತೆಯಿಂದ, ಹೆಚ್ಚು perfect ಆಗಿ ಮಾಡುವ, ಸಾಮಾನ್ಯವಾಗಿ ಬಾಹ್ಯ ಆಚರಣೆಗಳಲ್ಲಿ ಅಷ್ಟಾಗಿ ಆಸಕ್ತಿಯಿಲ್ಲದ, ಅನುಮಾನದಿಂದಲೇ ಆ ಸಂಗತಿಗಳನ್ನು ಒರೆಹಚ್ಚಿ ನೋಡುವವರ ಗುಂಪು ಇದೆ. ಇವರು ಒಂದು ಸಂದರ್ಭದಲ್ಲಿ ಒಬ್ಬ ವ್ಯಕ್ತಿಯ ಮೂಲಕ ಆ ಆಧ್ಯಾತ್ಮಕ ನಡೆಗೆ ಪ್ರವೇಶಿಸುತ್ತಾರೆ. ಹೀಗೆ ಕರೆಸಿಕೊಂಡು ಬಂದ ವ್ಯಕ್ತಿ ಮತ್ತು ನಡೆಯುವ ವ್ಯಕ್ತಿ ಇಬ್ಬರೂ ಕೂಡ ಒಂದು ಜವಾಬ್ದಾರಿ ನಿರ್ವಹಿಸುವವರಂತೆ ಕಾಣುತ್ತಾರೆ.

ನಮಗೆ ಕಾಣಿಸುವ ಅತ್ಯಂತ ಪ್ರಮುಖ ಉದಾಹರಣೆ ನರೇಂದ್ರ–ವಿವೇಕಾನಂದರಾದದ್ದು. ಶ್ರೀರಾಮಕೃಷ್ಣ ಪರಮಹಂಸರು ಬಂದು ಎಚ್ಚರಿಸುವವರೆಗೂ ಓದು, ಜ್ಞಾನಾರ್ಜನೆ, ವಕೀಲನಾಗುವ ಕಡೆ ಹೆಚ್ಚು ತೊಡಗಿಸಿಕೊಂಡಿರುವ ನರೇಂದ್ರರಿಗೆ ಶ್ರೀರಾಮಕೃಷ್ಣ ಪರಮಹಂಸರು ಮೊದಮೊದಲಿಗೆ ಒಬ್ಬ ಹುಚ್ಚರು. ಆದರೆ ನಿರಂತರ ಅವರನ್ನು ಕಾಯುವ ರಾಮಕೃಷ್ಣ ಪರಮಹಂಸರಿಗೆ ಅವರು target. ನಿರಂತರ ಸಂವಹನ, ಭೇಟಿ, ಜವಾಬ್ದಾರಿಗಳನ್ನು ತಿಳಿಸಿ, ಎಚ್ಚರಿಸಿ, ಕಾಲಾಂತರದಲ್ಲಿ ನರೇಂದ್ರರ ದಾರಿಯನ್ನು ಬದಲಾಯಿಸಿ ವಿವೇಕಾನಂದರಾದದ್ದು ನೂರೈವತ್ತು ವರ್ಷಗಳ ಹಿಂದೆ ನಡೆದದ್ದು. ಅದರ ದಾಖಲೆಯನ್ನು ಸ್ವತಃ ವಿವೇಕಾನಂದರೆ ಬಿಟ್ಟು ಹೋಗಿದ್ದಾರೆ.

ಬಾಲ್ಯದ ತನ್ನ ಹಸಿವಿನಿಂದ ತಾನಾಗಿ ಹೊರಟೂ ಕಾಲಾಂತರದಲ್ಲಿ ಭಿನ್ನ ಭಿನ್ನ ಗುರುಗಳ ಮೂಲಕ ಪಾಠ ಕಲಿಯುತ್ತಾ ಬೆಳೆದ ಸತ್ಯಕಾಮರ ರೀತಿ ಕೂಡ ಅಂಥದೇ ನಡೆಯನ್ನು ಸೂಚಿಸುತ್ತದೆ.

ಜೆ. ಕೃಷ್ಣಮೂರ್ತಿ ಕೂಡ ತನ್ನಷ್ಟಕ್ಕೇ ಆಟ ಆಡುತ್ತಿದ್ದ ಹುಡುಗ. ಆದರೆ ತನಗೆ ಕನಸಿನಲ್ಲಿ ಕಾಣಿಸಿಕೊಂಡ ಬೆಳೆಯಲಿಕ್ಕಿರುವ ಹುಡುಗ ಇವನೇ ಎಂದು ಎತ್ತಿಕೊಂಡು ಹೋಗಿ ಆ ಎಚ್ಚರ ಮೂಡಿಸಿದ್ದು ಥಿಯೋಸಾಫಿಕಲ್ ಸೊಸೈಟಿಯ ಅನಿಬೆಸೆಂಟ್. ಅಲ್ಲಿ ತಿದ್ದಿ ತೀಡಿ ರೂಪುಗೊಂಡು ಜೆ.ಕೆ. ತಾನು ಗುರುವಲ್ಲ ಎಂದು 'ಗುರು ಘೋಷಣೆ'ಯ ವೇದಿಕೆಯಲ್ಲೇ ಪ್ರಕಟಿಸಿದ್ದು, ಆ ಬಳಿಕ ಹಲವರಿಗೆ ತನ್ನ ಉಪನ್ಯಾಸಗಳಿಂದ ದಾರಿತೋರಿದ್ದು ಕಳೆದ ಮೂವತ್ತು ವರ್ಷಗಳ ಹಿಂದಿನ ಇತಿಹಾಸ.

ಹೀಗೆ ಜೀವಿಯೊಬ್ಬ ಆ ದಿಸೆಯಲ್ಲಿ ಬೇರೆ ಬೇರೆ ಸೂಚನೆಗಳ ಮೂಲಕ ಆಧ್ಯಾತ್ಮಿಕ ಪಥವನ್ನು ಪ್ರವೇಶಿಸಿ ನಡೆದಿದ್ದಾರೆ. ಪ್ರತೀ ವ್ಯಕ್ತಿಯ ಪ್ರವೇಶ ಹೇಗೆ ಬೇರೆ ಬೇರೆ ರೀತಿಯಿಂದ ಸಾಧ್ಯವಾಗುವುದೋ ಹಾಗೆಯೇ ಈ ದಾರಿಯನ್ನು ತೋರುವ ಗುರುಗಳ ಮಾರ್ಗದರ್ಶನ ಸಾಧ್ಯತೆ ಕೂಡ ನಾಲ್ಕು ರೀತಿಯಲ್ಲಿ ನಮ್ಮ ಮುಂದೆ ಗೋಚರವಾಗುತ್ತದೆ.

ಗುರು ಸಾಧ್ಯತೆಗಳು :

1. ಪೀಠಾಧಿಪತಿ ಅಥವಾ ಸಾಂಸ್ಥಿಕ ಗುರುಗಳು.
2. ಸಾಧಕರು.
3. ದಾರ್ಶನಿಕರು.
4. ಋಷಿಗಳು.

1. **ಪೀಠಾಧಿಪತಿ ಅಥವಾ ಸಾಂಸ್ಥಿಕ ಗುರುಗಳು** : ಪ್ರತೀ ಸಮಾಜದಲ್ಲಿ ಧಾರ್ಮಿಕ ಗುರುಗಳಿದ್ದಾರೆ. ಇವರು ಒಂದು ಮಠಪರಂಪರೆಯ ಅಥವಾ ಪೀಠ, ಸಂಸ್ಥೆಗಳಿಗೆ ಸಾಂಸ್ಥಿಕ ಒಡೆಯರಾಗಿರುತ್ತಾರೆ. ಜವಾಬ್ದಾರಿಯ ದೃಷ್ಟಿಯಿಂದ ಆಧ್ಯಾತ್ಮದ ಹೆಸರಲ್ಲೇ ಇವರೂ ತಮ್ಮನ್ನು ಗುರುತಿಸಿ ಕೊಳ್ಳುವುದರಿಂದ ಅವರನ್ನು ಉಪೇಕ್ಷಿಸಿ ಮುಂದುವರಿಯಲಾಗುವುದಿಲ್ಲ. ಕ್ರೈಸ್ತರ ಪಾದ್ರಿ, ಮುಸ್ಲಿಮರ ಮುಲ್ಲಾ, ಹಿಂದೂಗಳ ಸ್ವಾಮೀಜಿ–ಮತ್ತೆ ಒಳಪಂಗಡ ಜಾತಿಗಳಿಗನುಗುಣವಾಗಿ ಅನೇಕ ಹಿಂದೂ ಸ್ವಾಮೀಜಿಗಳು ಇವರು ಧರ್ಮದ ಹೊಣೆ ಹೊತ್ತಿರುತ್ತಾರೆ.

ಇಂಥವರು ನಮ್ಮನ್ನು ಹರಸುತ್ತಾರೆ, ಉಪದೇಶಿಸುತ್ತಾರೆ. ಮತ್ತು ಅನೇಕ ಬಾರಿ ಮಾರ್ಗದರ್ಶನ ನೀಡುತ್ತಾರೆ. ಇವರ ಕುರಿತು ಸಾರ್ವಜನಿಕವಾಗಿ ಒಂದು ಪೂಜ್ಯಭಾವ, ಗೌರವಭಾವ ಇರುವುದು ಬೇರೆಮಾತು. ಆದರೆ ಇಂಥ ಗುರುಗಳು ಅಂತರಂಗ ದರ್ಶನಕ್ಕೆ ಮಾರ್ಗದರ್ಶಕರಾದದ್ದು ನಮಗೆ ಕಾಣಿಸುವುದಿಲ್ಲ. ಅಪರೂಪಕ್ಕೆ ಅಪವಾದಗಳಿದ್ದರೆ ಅವರ ಅನುಮತಿ ಪಡೆದು ಹೇಳಬಹುದಾದದ್ದು ಇವರು ಕೇವಲ ಸಾಮಾಜಿಕ, ಸಾಮೂಹಿಕ ಮತ್ತು ಧಾರ್ಮಿಕ ಅನಿವಾರ್ಯತೆಯಾಗಿ ಮಾತ್ರ ನಮಗೆ ಕಾಣಿಸುತ್ತಾರೆ.

ಶೃಂಗೇರಿ ಪೀಠದಲ್ಲಿ ಈಗ್ಗೆ ನೂರುವರ್ಷಗಳ ಇತಿಹಾಸದಲ್ಲಿ ಆಗಿಹೋದ ಶ್ರೀಚಂದ್ರಶೇಖರ ಭಾರತಿಗಳೆಂಬ ಪೀಠಾಧಿಪತಿ ಲೋಕದ ರೂಢಿಯಲ್ಲಿ ಹುಚ್ಚರೆನಿಸಿಕೊಂಡು ಅನೇಕರಿಗೆ ದಾರಿತೋರಿದ ಉದಾಹರಣೆಗಳು ಸಾಕಷ್ಟು ಇವೆ. ಸ್ವತಃ ಸತ್ಯಕಾಮರು ಅವರ ಬಳಿ ಕೇಳಿದ ಸೌಂದರ್ಯ ಲಹರಿ ಪಾಠವನ್ನು “ಅದೊಂದು ದರ್ಶನ” ಎಂದು ವಿವರಿಸಿದ್ದಾರೆ. [ಪು. ಸಂ. ೧೪೭–೧೪೯, ತಂತ್ರಯೋನಿ; ೨೦೦೮]

ವಿರಕ್ತ, ವೈರಾಗ್ಯವೇ ತಳಹದಿಯಾಗಿರುವ ಈ ಸ್ವಾಮಿಪರಂಪರೆ ಇತ್ತೀಚೆಗಿನ ದಿನಗಳಲ್ಲಿ ಅಂತಹ ಯಾವ ಕುರುಹನ್ನು ಉಳಿಸಿಕೊಂಡಿಲ್ಲ. ಈಗಿನ ಮಠಾಧೀಶರಂತೂ ವ್ಯವಹಾರಿಕ ಪ್ರಪಂಚದ ಸ್ವಾಮಿತ್ವ ಅಥವಾ ಒಡೆಯರ ಹಾಗೆ ಕಾಣಿಸುತ್ತಾರೆ. ಪ್ರತೀ ಸಂಸಾರಿಯೂ ತನ್ನ ಮತ್ತು ಕುಟುಂಬಕ್ಕೆ ದುಡಿದ ಹಾಗೆ ಮಠಾಧೀಶರು ತಮ್ಮ ಪೀಠ ಮತ್ತು ಮಠಕ್ಕಾಗಿ ದುಡಿಯುತ್ತಾರೆ. ಪ್ರತೀ ಸ್ವಾಮಿಯ ಗಳಿಕೆ ಆದಾಯದ ಮೇಲೆ ಆ ಸ್ವಾಮಿಗಳ ವಿಜೃಂಭಣೆ ವೈಭವವನ್ನು ಅಳೆಯುವ ಮಟ್ಟಕ್ಕೆ ಬಂದಿದೆ. ಇದು ಸ್ವಾಮಿತ್ವಕ್ಕೂ ಅದನ್ನು ನಂಬಿದ ಮನುಷ್ಯ ಸಂಕುಲಕ್ಕೂ ಒಳತಿನ ಲಕ್ಷಣವಾಗದೆ ಅಪಾಯಕಾರಿಯಾಗಿದೆ. ಆದ್ದರಿಂದ ಮಠ, ಮಠಪರಂಪರೆ ಗುರುಗಳ ಕುರಿತ ಗೌರವಭಾವ ನಷ್ಟವಾಗುತ್ತಿದೆ.

ಇದಕ್ಕಾಗಿ ಯಾವ ಖೇದ ವ್ಯಕ್ತಪಡಿಸಬೇಕಾದ ಅವಶ್ಯಕತೆಯಿಲ್ಲ. ಒಂದು ತಾನು ಕೆಡುತ್ತಾ ಹೋಗುವುದರಿಂದ ಒಳತಿನ ಮೂಲ ಹುಡುಕಲು ಪ್ರಚೋದಕವಾಗಿ ಕೆಲಸ ಮಾಡುತ್ತದೆ. ಹಾಗಾಗಿ ಪ್ರತಿಯೊಂದು ನಷ್ಟಭಾವ ಇನ್ನೊಂದು ಒಳತಿನ ಶುಭೋದಯ. ಇವರು ನಮ್ಮನ್ನು ನಡೆಸಲಾರರು ಎಂದು ತಿಳಿಯುವುದು ಒಂದು ಸಾಮಾನ್ಯ ಬೆಳವಣಿಗೆಯಲ್ಲ. ತಾವು ಕಾಣಬೇಕಾದ ನಿಜಗುರು ಬೇರೆ ಎಂಬ ಎಚ್ಚರ ಹುಟ್ಟುತ್ತದೆಯಲ್ಲ ಅಷ್ಟು ಸಾಕು. ಇದಲ್ಲ ಎಂಬ ನೇತಿಭಾವವೇ ಇತಿಯನ್ನು ಹುಟ್ಟಿಸುತ್ತದೆ. ಆ ದೃಷ್ಟಿಯಲ್ಲಿ ಸಮಾಜ ಈಗ ಬೇರೆ ದಾರಿಯ ಕಡೆಗೆ ಇದೆ.

2. **ಸಾಧಕರು** : ಈ ಸಾಧನಾ ಮಾರ್ಗದ ಸಾಧಕರು ಇಂದಿನ ಪೀಠಾಧಿಪತಿಗಳಂತೆ ಒಂದು ದಿನ ಯಾರಿಂದಲೂ ನಿಯುಕ್ತರಾದವರಲ್ಲ. ಸಾಮಾಜಿಕ, ಧಾರ್ಮಿಕ ಅನಿವಾರ್ಯತೆಯಿಂದ ಗೌರವವನ್ನು ಪಡೆದವರೂ ಅಲ್ಲ. ಇವರಿಗೆ ತಮ್ಮ ಸಾಧನಾ ಪಥದ ಅನುಭವ ಮತ್ತು ಅದರ ಮೂಲಕ ಒಂದಿಷ್ಟು ಸಾಧನೆ ಹಾಗೂ ಪರಿಣಾಮಗಳಿರುತ್ತವೆ.

ಸಾಧನಾ ಪಥದಲ್ಲಿ ನಡೆದ ಅನುಭಾವಿಗಳು ತಮ್ಮ ಅನುಭವವನ್ನು ಲೋಕಕ್ಕೆ ವಿಸ್ತರಿಸುವ ಒಂದು ಹಸಿವಿಗೆ ಒಳಗಾಗುತ್ತಾರೆ. ಕೆಲವೊಮ್ಮೆ ತಮ್ಮ ಪಾಡಿಗೆ ತಾವು ಅನುಭವಿಸಿ ಹೊರಟು ಹೋಗುತ್ತಾರೆ. ಸಾಧನಾ ಪಥದ ಅಪರಿಪೂರ್ಣತೆ ಕೆಲವೊಮ್ಮೆ ಸಾಧನಾಪಥದಲ್ಲಿ ಹುಟ್ಟಿದ ದಯಾಮಯಿತ್ವ ಈ ಕಾರಣಗಳಿಂದ ಅವರು ಲೋಕಮುಖಿಗಳಾಗುತ್ತಾರೆ. ಇಲ್ಲಿ ಅಪರಿಪೂರ್ಣತೆಯಿಂದ ಲೋಕಮುಖವಾದ ಸಾಧಕರು ಕಾಲಾಂತರದಲ್ಲಿ ಲೌಕಿಕರಾಗುವ ಸಾಧ್ಯತೆಗಳೂ ಇಲ್ಲದಿಲ್ಲ.

ಇವರು ಸ್ವಂತ ಪರಿಶ್ರಮ ಅಥವಾ ಗುರುಮುಖೇನ ಹಲವು ಕಷ್ಟದ ದಾರಿಯನ್ನು ನಡೆದವರು. ಅಂಥವರು ಅದರ ಫಲವಾಗಿ ಕೆಲವು ಶಕ್ತಿಸಾಧ್ಯತೆಗಳನ್ನು ಪಡೆದಿರುತ್ತಾರೆ. ಹಾಗೆ ಸಿದ್ಧರಾದ ಕೆಲವು ಸಾಧಕರಿಗೆ ತಮ್ಮಲ್ಲಿರುವ ಶಕ್ತಿಯನ್ನು ಲೋಕಕಲ್ಯಾಣಕ್ಕಾಗಿ ಬಳಸಬೇಕು ಎಂಬ ನಡೆ ಆರಂಭವಾಗುತ್ತದೆ. ಅಂಥವರು ತಮಗಾದಷ್ಟು ಮಟ್ಟಿಗೆ ಹಲವರನ್ನು ಮುನ್ನಡೆಸುತ್ತಾರೆ.

ಇಂಥ ಸಾಧನಾ ಪರಂಪರೆಯ ಪ್ರಮುಖ ಉದಾಹರಣೆಗಳಾಗಿ ಬಸವಣ್ಣ, ರಾಘವೇಂದ್ರ ಸ್ವಾಮೀಜಿ, ಶಿರ್ಡಿಬಾಬಾ, ಯೇಸುಕ್ರಿಸ್ತ, ಅಲ್ಲಾ ಹೀಗೆ ಹಲವರನ್ನು ಹೆಸರಿಸಬಹುದು. ಇಂಥ ಸಾಧಕರು ಅನೇಕರನ್ನು ಆಗಲೂ ಮತ್ತು ಈಗಲೂ guide ಮಾಡುತ್ತಿದ್ದಾರೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಅವೆಲ್ಲವೂ ಆಯಾ ಕಾಲಘಟ್ಟದಲ್ಲಿ ವ್ಯಕ್ತಿಗಳಿಗೆ ಆಗಿರುವ ವೈಯಕ್ತಿಕ ಪರಿಣಾಮ. ಹೀಗೆ ನಡೆಯುವ ಹಸಿವುಳ್ಳ ಸಾಧಕರನ್ನು ನಡೆಸಿದ ಕೆಲವು ಪ್ರಮುಖರಲ್ಲಿ ಜೆ.ಕೆ.

ಯು.ಜಿ. ಇವರನ್ನು ಕೂಡ ಹೆಸರಿಸಬಹುದು. ಅಲ್ಲಮನಂಥವರು ಭಿನ್ನ ಎಂಬುದು ಪ್ರತ್ಯೇಕ ಹೇಳಬೇಕಾಗಿಲ್ಲ.

ತಾನು ಮಾತ್ರ ನಡೆದರೆ ಸಾಲದು ತನ್ನಂತೆ ಬೆಳೆಯಬೇಕೆಂಬ ಹಸಿವು ಒಂದು ರೀತಿಯಾದರೆ ತಾನು ದೊಡ್ಡವ ಎಂಬುದನ್ನು ತೋರಿಸಲು ಈ ಲೋಕಕ್ಕೆ ಬರುವುದು ಇನ್ನೊಂದು ರೀತಿ. ಮೊದಲನೆಯದು ಪರಿಪೂರ್ಣ ಸಾಧಕನ ದಯಾಮಯಿತ್ವವಾದರೆ ಎರಡನೆಯದು ಅಪರಿಪೂರ್ಣ ಸಾಧಕನ ಅಹಂಕಾರ ಫಲ. ಮೊದಲಿನವನು ನಡೆಯುತ್ತಾನೆ. ಎರಡನೆಯವನು ಇವೆರಡರಲ್ಲೂ ಎಡವುತ್ತಾನೆ.

ಮೊದಲನೆಯ ಪಥಕ್ಕೆ ಮೇಲೆ ಹೇಳಿದ ಸಾಧಕರನ್ನು ಉದಾಹರಿಸಿದ್ದಾಯಿತು. ಎರಡನೆಯ ವರ್ಗದವರಲ್ಲಿ ರಜನೀಶ್ ಮತ್ತು ಸತ್ಯಸಾಯಿಬಾಬಾರನ್ನು ಹೆಸರಿಸಬಹುದು.

ತಾನು ನಡೆದ ಸಾಧನಾ ಪಥದಲ್ಲಿ ನಿಮ್ಮನ್ನು ನಡೆಸುತ್ತೇನೆ ಎಂದು ಮುಕ್ತ ಕರೆಕೊಟ್ಟು ಕಾಲದಿಂದ ಕಾಲಕ್ಕೆ ಪುಣೆಯಿಂದ ಪ್ರಾರಂಭಿಸಿ ವಿಶ್ವದಾದ್ಯಂತ ಬೆಳೆದವ ರಜನೀಶ್. ತನ್ನ ತಂತ್ರಪಥದ ಸಾಧನೆಗಳನ್ನು ಮುಕ್ತವೇದಿಕೆಯಲ್ಲಿ ಸಾರ್ವಜನಿಕವಾಗಿ ಅರುಹಬಲ್ಲೆನೆಂಬ ಸವಾಲಿನಿಂದ ಹೊರಟವ. ಆ ಕಾಲಕ್ಕೆ ತುಂಬ ಕ್ರಾಂತಿಕಾರಿಯಾಗಿ ಮುಕ್ತಕಾಮದ ಮೂಲಕ ದೇವರ ಮಾರ್ಗ ಸಾಧ್ಯ ಎಂಬುದನ್ನು ಘಂಟಾಘೋಷವಾಗಿ ಹೇಳಿ ಕಂಗಾಲು ಬೀಳಿಸಿದವ.

ರಜನೀಶ ತಾನು ನಡೆದನೋ ನಡೆಸಿದನೋ ಬೇರೆ ಮಾತು. ಸಾಧನಾ ಪಥದ ಒಂದು ಉದಾಹರಣೆಯಂತೂ ಹೌದು. ಒಂದು ದೃಷ್ಟಿಯಿಂದ ಗುರುವೊಬ್ಬ ಹೀಗೆ ಸಾಮಾಜಿಕವಾಗಿ ಮಾರ್ಗದರ್ಶನ ಕೆಲಸ ಮಾಡುವ ಸಾಧ್ಯತೆಯನ್ನೇ ಬಹುಶಃ ಮೊದಲ ಬಾರಿಗೆ ಹೇಳಿದವ. ಶರಣರು, ದಾಸರು ಒಂದು ಸಾಮಾಜಿಕ ಎಚ್ಚರ ಹುಟ್ಟಿಸುವಂತೆ ಜನಸಾಮಾನ್ಯರ ಬಳಿ ಬಂದಿದ್ದರೂ, ತಾವು ಗುರು, ಜನರನ್ನು ಉದ್ಧರಿಸುತ್ತೇವೆ ಎಂಬ ಘೋಷಣೆಯೊಂದಿಗೆ ಅವರು ಬರಲಿಲ್ಲ. ಆದ್ದರಿಂದ ಹೀಗೆ ಸಾಮಾಜಿಕ ಘೋಷಣೆ ಇವನದೇ. ಈ ದಿಶೆಯಲ್ಲಿ ರಜನೀಶನದು ಒಂದು ಹೊಸ ಆವಿಷ್ಕಾರ.

ಹಾಗೆ ನಡೆಸುವ ದಾರಿಯಲ್ಲಿ ರಜನೀಶ ಎಡವಿದ್ದಾನೆ. ಪ್ರತ್ಯಕ್ಷವಾಗಿ ತಾನು ಪಡೆದದ್ದನ್ನು ತೋರುವ ಅವನ ದಾರಿ ವಿಫಲವಾಗಿದೆ. ಅವನು ಹೇಳುವ ಮಾತನ್ನು ಮತ್ತು ನಡೆಯನ್ನು ಸ್ವೀಕರಿಸುವ ಪಾತ್ರೆಗೂ ಅರ್ಹತೆ ಇರಬೇಕು ಎನ್ನುವುದು ಮೊದಲ ಮಾತು.

ರಜನೀಶ ಒಂದು ಹಂತದವರೆಗೆ ತನ್ನ ದಾರಿಯ ಸಾಧ್ಯತೆಯನ್ನು ಖಂಡಿತಕ್ಕೂ ತಲುಪಿದ್ದಾನೆ. ಆದರೆ ಸಾಧಕನೊಬ್ಬ ತಲುಪಬಹುದಾದ ಕೊನೆಯಸಾಧ್ಯತೆ, ಅಥವಾ ರಜನೀಶ್

ತಲುಪಿದ ಸ್ಥಾನವನ್ನೂ ಮೀರಿ ಬೆಳೆವ ಸಾಧ್ಯತೆಯ ದೃಷ್ಟಿಯಿಂದ ಅವನಿಗೆ ಅದು ಸಾಧ್ಯವಾಗಿಲ್ಲ ಎಂದೇ ಹೇಳಬೇಕು. ಕನಿಷ್ಠ ಅಂತಹ ಜೀವಂತ ಉದಾಹರಣೆಗಳಂತೂ ಇಲ್ಲ ಎಂಬುದು ಸ್ಪಷ್ಟ. ಇದಕ್ಕೆ ಸಾಮಾಜಿಕವಾಗಿ ಹಲವು ಕಾರಣಗಳನ್ನು ಹೇಳಬಹುದು. ಬಹಳ ಬಾರಿಯಂತೂ ಸಾಂಪ್ರದಾಯಿಕ ಕಾಮದ ಮಡಿವಂತಿಕೆಯಲ್ಲಿದ್ದವರೆಲ್ಲ ಕುತೂಹಲದಿಂದಲೇ ಇವನ ಮಾರ್ಗವನ್ನು ಅನುಸರಿಸುವ ಸಾಧ್ಯತೆ. ಇದಲ್ಲದೆ ಮುಕ್ತಕಾಮದ ಮುಖಾಂತರ ತಂತ್ರಮಾರ್ಗ ಹೇಳುವ ನಿಜವಾದ ಮಾನಿನಿ ಎಂಬ ಮುದ್ರೆಯ ಯಥಾಸಾಧ್ಯತೆಯನ್ನು ರಜನೀಶ ಶಿಷ್ಯರಿಗೆ ಮನವರಿಕೆ ಮಾಡಿಸಿಕೊಡುವಲ್ಲಿ ಆಗಿರುವ ವೈಫಲ್ಯ. ಜೊತೆಗೆ ಕುತೂಹಲ ಮತ್ತು ಚಪಲಗಳು ಖಂಡಿತಕ್ಕೂ ಆಧ್ಯಾತ್ಮದ ದಾರಿಯ ಅವಶ್ಯಕ ಅರ್ಹತೆಗಳು ಅಲ್ಲವೇ ಅಲ್ಲ ಎನ್ನುವುದು ಇನ್ನೊಂದು ಕಾರಣ.

ಇದೆಲ್ಲಕ್ಕೂ ಮಿಗಿಲಾದ ಮತ್ತು ರಜನೀಶ್ ಮಾತ್ರವಲ್ಲದೆ ಯಾರಿಗೂ ಅನ್ವಯಿಸಿ ಹೇಳಬಹುದಾದ ಬಹುಮುಖ್ಯ ಕಾರಣ ಆಧ್ಯಾತ್ಮ ಒಂದು ರಹಸ್ಯಮಾರ್ಗ ಎನ್ನುವುದು. ಇದನ್ನು ಸಾಮಾಜಿಕಗೊಳಿಸಲು ಸಾಧ್ಯವಿಲ್ಲ ಏಕೆಂದರೆ ಅದು ಪೂರ್ಣವಾಗಿ ಅಂತರಂಗಕ್ಕೆ ಸಂಬಂಧಪಟ್ಟದ್ದು. ಸ್ವತಃ ಅಭಿನವಗುಪ್ತನೇ ಇಂತಹ ಎಲ್ಲ ಏಕಾಂತದ ಮತ್ತು ರಹಸ್ಯದ ಅವಶ್ಯಕತೆಗಳನ್ನು ತನ್ನ ಕೃತಿ ತಂತ್ರಾಲೋಕದಲ್ಲಿ ಸೂಚಿಸಿದ್ದಾನೆ. ಮತ್ತು ನಿಯಮದಂತೆ ವಿಧಿಸಿದ್ದಾನೆ. ಎಲ್ಲ ಉಪನಿಷತ್ತುಗಳೂ ಇದನ್ನು ಸೂಚಿಸಿವೆ. [ಗಮನಿಸಿ–ತಂತ್ರಾಲೋಕ ದಿ 29th ಚಾಪ್ಟರ್ 2003)

ಆದರೆ ಇವೆಲ್ಲವುಗಳನ್ನು ಬಲ್ಲ ರಜನೀಶ್ ಒಂದು ಹೊಸ ಸಾಧ್ಯತೆಯ ಪ್ರಯೋಗ ಮಾಡಿದ್ದು ಮಾತ್ರ ಆ ಕಾಲದ ವಿಶೇಷ ಸಂಗತಿ. ಅದರ ಪರಿಣಾಮಕ್ಕೂ ಮೊದಲು ಪ್ರಯೋಗದ ಧೈರ್ಯದ ಮಟ್ಟಿಗೆ ಅವನು ಧೀರ.

ಆದರೆ ಆ ಪ್ರಯೋಗಗಳ ನೆಪದಲ್ಲಿ ಅವನು ಅಲ್ಲಲ್ಲಿ ಮಾಡಿರುವ ಉಪನ್ಯಾಸಗಳೆಂಬ ರೂಪದ ಕೃತಿಗಳು ಮಾತ್ರ ಅವನ ಅಸಾಧಾರಣ ಪ್ರತಿಭೆ, ಬುದ್ಧಿಮತ್ತೆಯ ಜೊತೆಗೆ ಅವನ ಒಳಗಿದ್ದ ಸಾಧನಾ ಮಾರ್ಗದ ಅನುಭವಗಳನ್ನು ಅದ್ಭುತವಾಗಿ ಪ್ರಕಟಿಸುತ್ತವೆ. ಈಗಲೂ ಆ ಕೃತಿಗಳು ನಿಜಹಸಿವಿನ ಸಾಧಕನನ್ನು ಮಾರ್ಗದರ್ಶನ ರೂಪದಲ್ಲಿ ನಡೆಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಸಾಧನೆಯಿಂದ ಅನೇಕ ಶಕ್ತಿಗಳನ್ನು ಪಡೆದು ಸಿದ್ಧಿಗಳನ್ನು ಕೈವಶ ಮಾಡಿಕೊಂಡವರು ಇನ್ನು ಹಲವು ಮಂದಿ. ಇವರು ತಮ್ಮ ಶಕ್ತಿಯನ್ನೇ ತಮ್ಮ ಆಸ್ತಿಯೆಂದು ಅದನ್ನು ಆ ಮೂಲಕ

ಪ್ರಕಟಿಸಿ ಗುರುಗಳಾಗಿ ಬಿಡುತ್ತಾರೆ. ಆಗ ಪವಾಡವೇ ವಿಶೇಷವಾಗಿ ಪ್ರಕಟಿಸುವ ವ್ಯಕ್ತಿ ಮಹಾತ್ಮನಾಗಿ ಸಹಸ್ರ ರೀತಿಯ ಅನುಯಾಯಿಗಳನ್ನು ಸಂಪಾದಿಸುತ್ತಾರೆ.

ಈ ರೀತಿಯ ಪವಾಡ ಪುರುಷರಿಗೆ ಇನ್ನೊಬ್ಬರನ್ನು ಬೆಳೆಸುವುದಕ್ಕಿಂತಲೂ ತಾವು ಬೆಳೆದು ದೊಡ್ಡವರೆನಿಸಿಕೊಳ್ಳುವುದೇ ಮುಖ್ಯವಾಗುತ್ತದೆ. ಏಕೆಂದರೆ ಸಾಧನಾ ಪಥದ ಶಕ್ತಿ ಕೈವಶವಾಗುವ ಸ್ಥಿತಿಯೇ ಅಂಥದ್ದು. ಅದಿನ್ನು ನಿರ್ವಾಣ ಅವಸ್ಥೆಯಲ್ಲ. ಹಾಗಂತ ವಿಶೇಷ ಸಾಧ್ಯತೆಯನ್ನು ಪಡೆದ ಮಾನವಾತೀತ ಅವಸ್ಥೆ. ಅಲ್ಲಿ ಒಂದು ಗರ್ವ ಇನ್ನೂ ಇರುತ್ತದೆ. ತಾನಿನ್ನು ದೊಡ್ಡದನ್ನು ಸೇರದ ಅಪೂರ್ಣ ಅವಸ್ಥೆ ಆದ್ದರಿಂದ ತಾನು ದೊಡ್ಡವನೆಂದುಕೊಳ್ಳಬೇಕು ಎಂಬ ಹಸಿವನ್ನು ಉಳಿಸಿಕೊಂಡಿರುತ್ತದೆ. ಪರಿಪೂರ್ಣ ಅವಸ್ಥೆಯ ಸಣ್ಣವನಾಗುವುದು ಅದಕ್ಕೆ ಸಾಧ್ಯವಿಲ್ಲ.

ಇಂಥವರು ಕಾಲಾಂತರದಲ್ಲಿ ಪವಾಡ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ವೈಯಕ್ತಿಕವಾಗಿ ತಮ್ಮ ಶಕ್ತಿಯೂ ಹ್ರಾಸವಾಗಿರುತ್ತದೆ. ಹಾಗಾಗಿ ಅವರು ದುರ್ಬಲರಾಗಿ, ನಮ್ಮಂತೆ ಅನಾರೋಗ್ಯ ಪೀಡಿತರಾಗಿ ಗತಕಾಲದಲ್ಲಿ ತಾವು ಮಾಡಿದ, ಆಡಿದ ಪವಾಡದ ಆಟಗಳ ನೆನಪಿನಿಂದಲೇ ಕೆಲಕಾಲ ಉಳಿಯುತ್ತಾರೆ. ಕಾಲಕ್ರಮೇಣ ಆಕರ್ಷಣೆ ಕಳೆದುಕೊಂಡು ಹೊಸ ಶಿಷ್ಯರಿಲ್ಲದೆ ಹಳೆ ಸಂಸಾರಕ್ಕೆ ಕಟ್ಟು ಬೀಳುತ್ತಾರೆ. ಇದು ಶಕ್ತಿಯ ಬೆನ್ನುಹತ್ತಿದ ಸಾಧಕರ ದುರಂತವೂ ಹೌದು. ಅಂಥವರ ಬೆನ್ನುಹತ್ತಿದ ಅನುಯಾಯಿಗಳ ದುರಂತವು ಹೌದು. ಇದಕ್ಕೆ ನಮ್ಮ ಕಾಲದ ಸತ್ಯಸಾಯಿಬಾಬಾ ಅವರು ಅತ್ಯಂತ ಒಳ್ಳೆಯ ಉದಾಹರಣೆ.

ಈ ಸಾಧಕರ ಮೂರನೆಯ ಹಂತ ಅನುಯಾಯಿಗಳ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡು ಆ ಮುಖೇನ ದಾರಿತೋರಿಸುವ ಗುರುಗಳೆಂಬ ಸಾಧಕರು. ಇವರು ತಮ್ಮ ವೈಯಕ್ತಿಕ ಜೀವನದಲ್ಲಿ ಯಾವ ಕಠೋರ ದಾರಿಯನ್ನು ಸವೆಸಿರಬೇಕಾಗಿಲ್ಲ. (ಅಪವಾದಗಳಿರಬಹುದು, ಅಪರೂಪಕ್ಕೆ) ಆದರೆ ಯಾವುದೋ ಬದುಕಿನ ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ (ಬಡತನ, ಪ್ರೇಮ ವೈಫಲ್ಯ, ಅವಮಾನ, ನಿರುದ್ಯೋಗ) ಬ್ರಹ್ಮಚರ್ಯ, ತಪಸ್ಸು, ಅಥವಾ ದೇವಮಾರ್ಗ ಎಂಬಂಥ ಸಾಧ್ಯತೆಯನ್ನು ಪ್ರವೇಶಿಸುತ್ತಾರೆ. ಇದೊಂದು ಭ್ರಮನಿರಸನ ಅಥವಾ ಕುತೂಹಲ ಮುಂತಾದ ಪರಿಣಾಮವಾಗಿ ನಡೆದ ಪ್ರವೇಶಿಕೆ. ಅಂಥ ಸಾಧಕರು ಯೋಗದ ಕೆಲವು ಆಸನ, ಸಿದ್ಧಿ, ಧ್ಯಾನ, ಪ್ರಾಣಾಯಾಮ ಮುಂತಾದ ದೈಹಿಕ ವ್ಯಾಯಾಮದ ತಾಂತ್ರಿಕ ಅಂಶಗಳನ್ನು ಕಲಿತುಕೊಂಡು, ಕಾಲಾಂತರದಲ್ಲಿ ತಾವಿದ್ದ ಆಶ್ರಮವನ್ನು ತೊರೆದು ತಮ್ಮ ಹೆಸರಿನ ಹೊಸ ಆಶ್ರಮ ತೆರೆಯುತ್ತಾರೆ. ತಮ್ಮನ್ನು ತಾವು ಗುರುವೆಂದು ಘೋಷಿಸಿಕೊಳ್ಳುತ್ತಾರೆ.

ಗುರುತ್ವಕ್ಕೆ ಬೇಕಾದ ವೇಷಭೂಷಣ, ಜೊತೆಗೆ ಕೆಲವು ಅಂಥ ಮಾತು, ಉಪದೇಶದ ಸಹಿತ ಕೆಲವು ಮಾದರಿಯಾಗಿ ನೀಡಬಲ್ಲ ಯೋಗಾಸನಗಳನ್ನು ಆರಂಭಿಸುತ್ತಾರೆ. ಇದು ಆಧುನಿಕ ಕಾಲಘಟ್ಟದ ರೋಗ.

ಇಲ್ಲಿ ಬರುವ ವ್ಯಕ್ತಿಗಳಿಗೆ ತುಂಬ ಹಣವಿದೆ ಭೌತಿಕ ಅನುಕೂಲಗಳು ಹೆಚ್ಚಾಗಿ ಹೊಳೆ ಹರಿದಿದೆ. ಆದರೆ ಮನಃಶಾಂತಿಯಿಲ್ಲ. ಎಲ್ಲದಕ್ಕೂ ಏನೋ ಇಲ್ಲದ ಕೊರತೆ. ಇಂಥವರು ಮೇಲೆ ಹೇಳಿದ ಸಾಧಕರನ್ನು ಬಹಳ ಬೇಗ ನಂಬುತ್ತಾರೆ. ಬಡವನನ್ನು ಉದ್ಧರಿಸುವುದಕ್ಕಿಂತಲೂ ಈ ಗುರುವಿನ ಹೊಟ್ಟೆ ತುಂಬಿಸಿ ಕೃತಾರ್ಥರಾಗುತ್ತಾರೆ.

ಯಾಕೆಂದರೆ ಇವರಿಗೆ ಮಾನಸಿಕ ಅಶಾಂತಿಯ ಫಲವಾದ ಬಿ.ಪಿ. ಶುಗರ್ ಮುಂತಾದ ರೋಗಬಾಧೆಗಳಿರುತ್ತವೆ. ಅವರಿಗೆ ಒಂದು ಅಭಯಹಸ್ತದ ತುರ್ತು ಇದೆ. ಮತ್ತು ಈಗಿಂದೀಗ ರೋಗವಾಸಿಯಾಗುವ ಒಂದು ಬಲಬೇಕಾಗಿದೆ. ಇಂಥವರನ್ನೇ ಬಂಡವಾಳ ಮಾಡಿಕೊಂಡು ಈ ರೋಗ ನಿವಾರಣೆ ಮತ್ತು ಮಾನಸಿಕ ನೆಮ್ಮದಿಯ ನಂಬಿಕೆ ಹುಟ್ಟಿಸಿ ದಂಧೆ ಆರಂಭಿಸುವ ಸಾಧಕರಿದ್ದಾರೆ. ಅವರು ಆ ಮೂಲಕ ಹೆಸರು ಮತ್ತು ಹಣಸಂಪಾದಿಸಿ ಧನಿಕರಾಗಿದ್ದಾರೆ. ಇವರಿಗೆ ಇದು ಒಂದು ಉದ್ಯೋಗ. ಇಲ್ಲಿ ಸ್ಪಷ್ಟವಾಗಿ ಇಂತಹ ತರಬೇತಿಗೆ ಇಷ್ಟು ಹಣ ಎಂಬ ಮುಕ್ತಮಾರುಕಟ್ಟೆಯ ವ್ಯವಹಾರವಿದೆ. ಇದನ್ನು ನಂಬಿ ನಡೆವ ಶ್ರೀಮಂತ ಮೂರ್ಖರಿದ್ದಾರೆ. ಇಬ್ಬರೂ ಪರಸ್ಪರ ಮೋಸ ಮಾಡಿಕೊಳ್ಳುತ್ತಿದ್ದಾರೆ.

ಇದು ಈ ಪರಿಣಾಮವನ್ನು ಪಡೆಯುವುದು ತುಂಬ ಸಹಜವೇ ಆಗಿದೆ. ಯಾಕೆಂದರೆ ಹಾಗೆ ಒಬ್ಬನನ್ನು ಹಣ ಎಂಬ ಫಲಾಪೇಕ್ಷೆಯಿಂದ ನಡೆಸುವ ಮಾರ್ಗವೇ ಅಲ್ಲ ಇದು. ಅದಕ್ಕೆ ತಾನು ಹೆಸರು ಪಡೆದು ಶ್ರೀಮಂತನಾಗುವ ಉದ್ದೇಶವೇ ಇರುವುದಿಲ್ಲ. ಈಗಿನ ಸಾಧಕರು ರಶೀದಿ ಹರಿದು ಹಣ ಸಂಪಾದಿಸುತ್ತಿದ್ದಾರೆ. ಈ ಕ್ಷೇತ್ರ ಫಲಾಕಾಂಕ್ಷೆ ಇಲ್ಲದ್ದು ಮಾತ್ರವಲ್ಲ ವಾಸ್ತವಿಕ ಕರ್ಮಲೇಪವೂ ಇಲ್ಲದ್ದು. ಆದ್ದರಿಂದಲೇ ಇದು ಆಧ್ಯಾತ್ಮವೇ ಅಲ್ಲ, ಅದರ ಸಂತೆ. ಇದೂ ನಡೆಯಬೇಕು ಆ ಮೂಲಕ ಇದು ಆಧ್ಯಾತ್ಮವಲ್ಲ ಎಂಬ ತಿಳುವಳಿಕೆ ಹುಟ್ಟಬೇಕು. ಆ ಕಾರಣಕ್ಕಾಗಿಯೇ ಇದೂ ನಡೆದಿದೆ. ಕಾಳಸಂತೆಯಲ್ಲಿ ಸತ್ಯದ ಹುಡುಕಾಟ ಆಗಿಯೇ ಅಗುತ್ತದೆ. ಇದು ಸುಳ್ಳು ಹಾಗಲ್ಲ ಎಂದು ಬೋಧಿಸುವುದರಿಂದ ಪರಿಣಾಮವಾಗದು. ಸ್ವತಃ ಸೋತು ಬರಬೇಕು ಅದಕ್ಕೆ ಬಲಿಷ್ಠ ಪರಿಣಾಮವಿರುತ್ತದೆ.

3. **ದಾರ್ಶನಿಕರು** : ಇಂಥ ಸಮಯ ಸಾಧಕರ ಮಧ್ಯೆ ನಮಗೆ ತುಂಬ ಅಪರೂಪವಾಗಿ ಸಿಗುವ ಕೆಲವು ದಾರ್ಶನಿಕರಿದ್ದಾರೆ. ಇವರು ಆ ಲೋಕವನ್ನು ಕಂಡವರು. ಆದರೆ

ದೈಹಿಕವಾಗಿ ಇನ್ನು ಈ ಲೋಕದಲ್ಲೇ ಇರುವವರು. ಆದರೆ ಈ ಲೋಕದವರಲ್ಲ ಎಂಬುದನ್ನು ಸೂಚಿಸುವ ಎಲ್ಲ ಕುರುಹುಗಳೂ ಅವರಲ್ಲಿ ಕಾಣಿಸುತ್ತದೆ. ಅವರ ನಡೆನುಡಿ, ಇರುವಿಕೆ, ನೋಟ ಮುಂತಾದ ಎಲ್ಲ ಸಂಗತಿಗಳೂ ಜನಸಾಮಾನ್ಯರಿಗಿಂತ ತುಂಬ ಭಿನ್ನವಾಗಿರುತ್ತದೆ.

ಎಷ್ಟೋ ಬಾರಿ ಲೋಕದ ಕಣ್ಣಿಗೆ ಅವರು ಹುಚ್ಚರಂತೆಯೂ ಕಾಣಿಸುವ ಸಾಧ್ಯತೆಗಳಿವೆ. ಅಂತೆಯೇ ಅವರು ಇಲ್ಲಿಯೇ ಇದ್ದು ತಮ್ಮ ಪಾಡಿಗೆ ತಮ್ಮ ಕೆಲಸ ನಿರ್ವಹಿಸುತ್ತಿರುತ್ತಾರೆ. ಇಲ್ಲಿಯ ಒಳಿತಿಗಾಗಿ ಅವರು ದುಡಿಯುವ ದುಡಿಮೆ ನಮ್ಮ ಅರಿವಿಗೆ ಬರುವುದಿಲ್ಲ. ಅದು ಭೌತಿಕ ಜಗತ್ತಿಗೆ ಗೋಚರಿಸುವ ದುಡಿಮೆಯೂ ಅಲ್ಲ.

ಇಂಥವರು ತಮ್ಮ ಪಾಡಿಗೆ ತಾವಿರುತ್ತಾರೆ. ಯಾರನ್ನು ತಾವು ಉದ್ಧರಿಸುತ್ತೇವೆ ಎಂದು ಘೋಷಿಸುವುದಿಲ್ಲ. ಗುರುತ್ವದ ಯಾವ ಲೇಪಭಾವವೂ ಅವರಲ್ಲಿ ಇರುವುದಿಲ್ಲ. ಅವರು ಸಹಜವಾಗಿಯೇ ಮಾಡಿದ ಯಾವುದೋ ಘಟನೆ ವಿಶೇಷವಾಗಿ ಬಿಡುತ್ತದೆ. ಇಂಥ ವಿಶೇಷ ಘಟನೆಗಳೇ ಪವಾಡಗಳಾಗಿ ಜನ ಕುತೂಹಲದಿಂದ ಅವರ ಬಳಿ ಸಾರುತ್ತಾರೆ. ಕಾಲಾಂತರದಲ್ಲಿ ಅವರ ಪವಾಡಕ್ಕೇ ಮುಗಿಬೀಳುವ ಮಂದಿ ಅವರ ಅನುಯಾಯಿಗಳಾಗುತ್ತಾರೆ. ಮತ್ತು ನೋಡನೋಡುತ್ತಾ ಅದನ್ನೇ ಕಥೆ ಮಾಡಿ ಬೆಳೆಸುವ ಗುಂಪು ದೊಡ್ಡದಾಗುತ್ತದೆ.

ದಾರ್ಶನಿಕರು ಅದನ್ನು ಒಂದಿಷ್ಟು ಲೇಪಭಾವವಿಲ್ಲದೆ ನೋಡುತ್ತಾರೆ. ಅವರಿಗೆ ತಾನು ಮಾಡಿದೆನೆಂಬ ಕರ್ಮಲೇಪವೂ ಇರುವುದಿಲ್ಲ. ಅವರಿಗೆ ತೋರ್ಪಡಿಕೆಯ ಯಾವ ಉದ್ದೇಶವೂ ಇಲ್ಲ, ಅದು ಅವರ ಕಸುಬೂ ಅಲ್ಲ. ಅಲ್ಲಮ, ರಮಣರು ಈ ನಡೆಯವರು.

4. **ಋಷಿಗಳು** : ಈ ದಾರಿಯಲ್ಲಿ ಸಿಗುವ ಮತ್ತೊಂದು ಪರಂಪರೆ ಋಷಿಗಳದು. ನೋಡಲು ಪಕ್ಕಾ ನಮ್ಮ ಹಾಗೆಯೇ ಇದ್ದು. ಅಥವಾ ನಮಗಿಂತಲೂ ಸಾಮಾನ್ಯರಂತೆ ಕಾಣುತ್ತಾ, ಒಂದು ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡು ಈ ಭೂಮಿಯ ಮೇಲೆ ಅವರು ತಿರುಗಾಡುತ್ತಿರುತ್ತಾರೆ ಇವರು ತಮ್ಮ ಬದುಕಿನ ತಪೋ ಭಾಗವನ್ನು ಮುಗಿಸಿ, ಪರಿಪೂರ್ಣವನ್ನು ಕಂಡು, ಆಚೆಗಿನ ಆದೇಶವನ್ನು ಪಾಲಿಸಲಿಕ್ಕಾಗಿ ನಿಯುಕ್ತರಾದಂತೆ ವರ್ತಿಸುತ್ತಾರೆ.

ನಾವು ಹೇಗೆ ಭಾವಿಸುತ್ತೇವೆಯೋ ಹಾಗೆ ತಮ್ಮನ್ನು ತೋರುವವರು. ನಮಗೆ ಹೇಗೆ ಬೇಕೋ ಹಾಗೆ ತನ್ನನ್ನು ಪ್ರಕಟಿಸಿ ಗುಟ್ಟಾಗಿ ಉಳಿಯುವವರು. ತಮ್ಮ ಉದ್ದೇಶಿತ ವ್ಯಕ್ತಿಯ Wavelengthನ ಅರ್ಹತೆಗನುಗುಣವಾದಷ್ಟೇ ತಮ್ಮನ್ನು .ಪ್ರಕಟಿಸುವವರು. ಒಂದು ಕೆಲಸ ಮುಗಿಸಲಿಕ್ಕಾಗಿ ಕಾಯುವವರು. ಕಾಯುವುದನ್ನು ತಪಸ್ಸಾಗಿ ಮಾಡಿಕೊಂಡು, ಆ ತಪಸ್ಸಿನ target ಗಾಗಿ ಮಾರುವೇಷದಲ್ಲಿ ತಿರುಗುವವರು.

ಕಾಣುವವರ ಕಣ್ಣಿಗೆ ವ್ಯಾಪಾರಿಯ ಹಾಗೆ, ಜಗಜಟ್ಟಿಯ ಹಾಗೆ, ಕೃಷಿಕನಂತೆ, ಬಡವನಂತೆ, ಬರಹಗಾರನಂತೆ ಇನ್ನೇನೋ ಎಲ್ಲವೂ ಆಗಿ ಕಾಣಿಸಿಕೊಳ್ಳುವರು. ನಿಜ ಉದ್ದೇಶ ಅದಲ್ಲ. ಅದು ಬೇಕಾಗಿಯೂ ಇಲ್ಲ. ಆದರೆ ಅದು ತಾನಲ್ಲ ಎಂಬ ನಿರಾಕರಣೆಯೂ ಇಲ್ಲ. ಅದೆಲ್ಲ ತಾನೆಯೇ ಏನೋ ಎಂಬಷ್ಟು ಎಲ್ಲರಿಗೂ ನಂಬಿಕೆ ಹುಟ್ಟಿಸುವವರು.

ಇದಕ್ಕೆ ಒಳ್ಳೆಯ ಉದಾಹರಣೆ ರಾಮಕೃಷ್ಣ ಪರಮಹಂಸರು.

ರಾಮಕೃಷ್ಣ ಪರಮಹಂಸರು, ಹಾಗೆ ನೋಡಿದರೆ, ದೇವಿಯ ಅರ್ಚಕ. ಪೂಜೆಗೆ ನೇಮಿಸಿದ ಒಡೆಯನಿಗೇ ಕೆನ್ನೆಗೆ ಛಡಿಯೇಟು ಕೊಟ್ಟವರು. ಅಲ್ಲಿ ಇಲ್ಲಿ ಪೂಜೆಗೆ ಕರೆದಾಗ ಹೋದವರು. ಹೆಂಡತಿಯನ್ನೇ ತಾಯಿ ಎಂದು ನಂಬಿ ಪೂಜಿಸಿದವರು. ಒಂದು ದೃಷ್ಟಿಯಿಂದ ಲೋಕದ ಕಣ್ಣಿಗೆ ಯಾಕೆ ಸ್ವತಃ ನರೇಂದ್ರರ ಕಣ್ಣಿಗೆ ಹುಚ್ಚನಂತೆ ಭಾಸವಾದವರು.

ಆದರೆ ಪದೇ ಪದೇ ನನಗೆ ಕೆಲಸವಿದೆ. ನನ್ನ ಕೆಲಸಕ್ಕಾಗಿ ಹೀಗೆ ಮಾಡು ಅಂತ ಬೇರೆ ಬೇರೆ ಸಂದರ್ಭಗಳಲ್ಲಿ ನರೇಂದ್ರರನ್ನು ಪರಿಪರಿಯಾಗಿ ಬೇಡಿಕೊಂಡು, ಅವರ ಅನೇಕ ಬದುಕಿನ ನಿರ್ಣಯಗಳನ್ನು ಬದಲಿಸಿದವರು. ತನ್ನ ಅಂತೇವಾಸಿಯ ಸ್ಥಾನವನ್ನು ನರೇಂದ್ರರಿಗೆ ಕೊಟ್ಟು, ಏಕಾಂತದಲ್ಲಿ ಬೇರೆ ಬೇರೆ ರೀತಿಯ ಪ್ರೀತಿಯ ಪ್ರವಾಹದಿಂದ ನರೇಂದ್ರರನ್ನು ಪರಿವರ್ತಿಸಿದವರು. ನರೇಂದ್ರರನ್ನು ನರೇಂದ್ರರಾಗಿ ಉಳಿಯಗೊಡದೆ ವಿವೇಕಾನಂದರಾಗಲು ಕಾರಣರಾದವರು.

ನರೇಂದ್ರರು ಸಿದ್ಧರಾದ ಸೂಚನೆ ಬಂದ ಬಳಿಕ ಸಮಾಧಿ ಸ್ಥಿತಿಗೆ ಹೋಗಿ ಪ್ರಾಣತ್ಯಾಗ ಮಾಡಿದವರು. ಒಂದು ಶಕ್ತಿಪಾತಕ್ಕೆ ಅಪೂರ್ವ ಉದಾಹರಣೆಯಾಗಿ ಹೊರಟುಹೋದವರು.

ಇಂತಹ ಋಷಿಗಳಿಗೆ ತಾನು ಮಾಡಿರುವ ಕೆಲಸ ಗೊತ್ತು. ಶಿಷ್ಯ ಮಾಡಲಿಕ್ಕೆ ಇರುವ ಕೆಲಸದ ಮುಂದುವರಿಕೆಯೂ ಗೊತ್ತು. ಅದನ್ನು ಮುಂದೆ ನಡೆಸುವಂತೆ ಮಾಡುವ ತಯಾರಿ ಅವರದು. ನಂತರದ ನಡೆ ಅವನದು. 'ಆಚಾರ್ಯಃ ಪೂರ್ವರೂಪಂ ಅಂತೇವಾಸಿ ಉತ್ತರರೂಪಂ' ಎಂದಿದೆ ಉಪನಿಷತ್ತು. ನಿಜವಾದ ಗುರು ತನ್ನ ಉತ್ತರರೂಪ ಎಂದೇ ಶಿಷ್ಯನನ್ನು ಬೆಳೆಸುತ್ತಾನೆ. ಒಂದು ದೃಷ್ಟಿಯಿಂದ ಅದು ತನ್ನದೇ ಜೀವಸೃಷ್ಟಿ. 'ಆತ್ಮಾವೈಃ' ಎಂಬುದು ಉಪನಿಷತ್ತಿನ ಮಾತು. ನಾನೇ ಮತ್ತೆ ಜನಿಸಿದೆ ಎಂಬ ಭಾವ. ಆದ್ದರಿಂದಲೇ ರಾಮಕೃಷ್ಣ ಪರಮಹಂಸರಂತೆ ವಿವೇಕಾನಂದರು ಕಾಳಿಯ ಗುಡಿಯಲ್ಲಿ ಅರ್ಚನೆ ಮಾಡುತ್ತಾ ಕೂಡುವುದಿಲ್ಲ. ರಾಮಕೃಷ್ಣರ ಒಳಗಿದ್ದ ಹೊಸ ಜವಾಬ್ದಾರಿಯನ್ನು ಇವರು ನಡೆಸುತ್ತಾರೆ. ಇದು ಹೀಗೆ ಆಗಬೇಕು.

ಇಲ್ಲಿ ಎರಡು ಜೀವಗಳು ಪರಸ್ಪರ ವಿನಾಕಾರಣ ಸೆಳೆತಕ್ಕೊಳಗಾಗುತ್ತವೆ ಮತ್ತು ಅದು ಇದನ್ನು. ಇದು ಅದನ್ನು ಸೇರಲು ಹವಣಿಸುತ್ತದೆ. ಶಿಷ್ಯನಿಗೆ ಇದು ಗೊತ್ತಿಲ್ಲವಾದರೂ ಈ ಋಷಿಗೆ ಅದು ಪೂರ್ವನಿರ್ಧರಿತ target. ಆದ್ದರಿಂದಲೇ master is not accidential ಎಂಬ ಮಾತು ಹುಟ್ಟಿತು.

ಈ ಋಷಿಗಳು ಸಾವಿರ ಶಿಷ್ಯರ ಹಸಿವುಳ್ಳವರಲ್ಲ, ತನ್ನ ಉದ್ದೇಶವನ್ನು ನಡೆಸಬಲ್ಲ ಒಬ್ಬ ಅಂತೇವಾಸಿ [ಸಾವಿರದವನನ್ನು] ಯನ್ನು ಕಣ್ಣಿನಲ್ಲಿಟ್ಟು ಹುಡುಕುವವರು. ಇವರಿಗೆ ಗುರು ಎನ್ನುವ ಯಾವ ಭಾವವೂ ಇರುವುದಿಲ್ಲ. ಅದಕ್ಕೂ ಮೀರಿದ ಮಾತೃತ್ವ ಮತ್ತು ಅನ್ಯಾದೃಶ ನಿರ್ವ್ಯಾಜ ಪ್ರೇಮ ಇವರ ಆಸ್ತಿ. ಈ ಪ್ರೀತಿ ಎಷ್ಟು ಬಲಿಷ್ಠ ಎನ್ನುವುದನ್ನು ಅನುಭವಿಸಿದವರು ಬಲ್ಲರು. ಅದಕ್ಕೆ ಯಾವುದೇ ಪ್ರತಿಫಲಾಕಾಂಕ್ಷೆ ಇಲ್ಲ. ಅದರಲ್ಲಿ ತಾನು ಮುಳುಗಿದೆ, ಕೊಚ್ಚಿಹೋದೆ, ಮಾರುಹೋದೆ ಎಂಬ ಮಾತನ್ನು ಸ್ವತಃ ವಿವೇಕಾನಂದರೂ ಹೇಳಿಕೊಂಡಿದ್ದಾರೆ.

ಈ ಜಗದ ಆಕರ್ಷಣೆಯನ್ನು ಪೂರ್ತಿಯಾಗಿ ಕಳಚಿ ಅದನ್ನೇ ಸೇರಲು ಈ ಪ್ರೀತಿ ಅತ್ಯಂತ ಅವಶ್ಯ. ಇನ್ನೊಂದರ ಹಸಿವನ್ನೇ ಹುಟ್ಟಿಸದ ಪ್ರೀತಿ. ಆದ್ದರಿಂದಲೇ ಇಂಥ ಪ್ರೀತ್ಯಾಸ್ಪದ ಗುರು ಒಂದು ದಿನ ವಿನಾಕಾರಣ ಇಲ್ಲವಾಗಿ ಬಿಟ್ಟಾಗ ಶಿಷ್ಯನ ನಿಜಬದುಕು ಆರಂಭವಾಗುತ್ತದೆ. ಹಿಂದೆ ಯಾರೂ ಇಲ್ಲದಂತೆ ಅವನು ಆವರಿಸಿಬಿಟ್ಟಿರುತ್ತಾನೆ. ಮುಂದೆ ನಡೆಸುವ ನಂಬಿಕೆಯೊಂದನ್ನು ಬಿಟ್ಟು ಅನಿರೀಕ್ಷಿತ ಇಲ್ಲವಾಗುತ್ತಾನೆ. ಇದು ಗುರು ಶಿಷ್ಯನ ಮೇಲೆ ಮಾಡುವ ಪರೀಕ್ಷೆ. 'ಹಿಂದಣ ಹಳ್ಳ ಮುಂದಣ ತೊರೆ ಹದುಳವಿನ್ನೆಲ್ಲಿಯದು ಹೇಳಾ?' ಎಂಬ ಪರಿಸ್ಥಿತಿ ಅದು. ಅಲ್ಲಿಂದಲೇ ಶಿಷ್ಯನ ನಡೆ ಆರಂಭ. ಆಗ ನಡೆಯದವನು ಅತಂತ್ರ. ಇದೊಂದು ಅಪೂರ್ವ ಶಕ್ತಿಪಾತದ ಸಾಧ್ಯತೆ. ಆ ಕುರಿತು ಕುಂಡಲಿನೀ ಮತ್ತು ಶಕ್ತಿಪಾತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಇವರು ಏನು ಮಾಡಲಿಕ್ಕಿದ್ದಾರೆ ಬಿಡಿಸಿ ಹೇಳುವವರಲ್ಲ. ಮಾಡಬೇಕಾದನ್ನು ಮಾಡಿ ಮುಂದೆ ನಡೆಸುವವರು. ಅದರ ಪರಿಪೂರ್ಣತೆಯ ಹೊಣೆ ಹೊತ್ತಷ್ಟೇ ಅಪರಿಪೂರ್ಣತೆಯ ಹೊಣೆಯನ್ನು ಹೊರುವವರು. ಇವರ ಶಿಷ್ಯನ ಮಟ್ಟಿಗೆ ಇವರು ಎಷ್ಟು ಕಟಿಬದ್ಧರೆಂದರೆ ಶಿಷ್ಯ ಪೂರ್ಣನಾದರೆ ಇವರು ಪೂರ್ಣ ಶಿಷ್ಯ ಅತಂತ್ರನಾದಾಗ ಇವರೂ ಅತಂತ್ರ ಶಿಷ್ಯ ಪೂರ್ಣನಾಗುವವರೆಗೂ ಅಂತರಪಿಶಾಚಿಯಂಥ ದುಃಖಿತ ಬದುಕನ್ನು ಅನುಭವಿಸುತ್ತಾ ದಡಮುಟ್ಟಿಸಿಯೇ ನಿರ್ಗಮಿಸುವವರು.

'ನೀನು ನನ್ನನ್ನು ಬಿಟ್ಟರೂ ನಾನು ನಿನ್ನನ್ನು ಬಿಡುವುದಿಲ್ಲ'

'ನಾನು ನಿನಗಾಗಿ ಬಂದವನಲ್ಲ, ನನಗಾಗಿ ಬಂದವನು'

'ನನ್ನ ಬದುಕಿನ tale end ನಲ್ಲಿ ಬಂದವಳು ನೀನು, ನನ್ನನ್ನು ನಿರಾಶೆಗೊಳಿಸಬೇಡ'

'ನಾನು ನನ್ನ ಎದೆಯಲ್ಲಿರುವುದನ್ನು ನಿನ್ನ ಎದೆಯಲ್ಲಿಟ್ಟು ಹೋಗುತ್ತೇನೆ. ನನ್ನನ್ನು ನಂಬು'

ಇವು ಸತ್ಯಕಾಮರು ಬೇರೆ ಬೇರೆ ಸಂದರ್ಭಗಳಲ್ಲಿ ನನ್ನೊಡನೆ ಹೇಳಿದ ಮಾತುಗಳು. ಇದರ ಮುಂದಿನ ಹಂತಕ್ಕೆ ನಡೆಸುವ ರೀತಿ ಮತ್ತು ನಡೆ ಪೂರ್ತಿಯಾಗಿ ಅವರಿಗೆ ಸೇರಿದ್ದು. ಗುರುವಿನ ಒಟ್ಟು ಅರ್ಹತೆ ಮತ್ತು ನಡೆಯ ಕುರಿತು ತಂತ್ರಯೋನಿಯ ಗೌರವ ಅಧ್ಯಾಯದಲ್ಲಿ ಸತ್ಯಕಾಮರು ವಿಶದವಾಗಿ ಬರೆದಿದ್ದಾರೆ.

ಇಂಥ ಒಂದು ಗುರುಶಿಷ್ಯ ಮಿಲನಕ್ಕೆ ಪರಸ್ಪರ ಅರ್ಹತೆಗಳೂ ಅವಶ್ಯ.

ಅರ್ಹತೆಗಳು : ಸಾಧನಾ ಪಥದ ಜೀವದ ಹಸಿವು, ಅದರ ಕಡೆಗೆ ನಡೆವ ಸಾಧ್ಯತೆಗಳನ್ನು ಗಮನಿಸಿದಂತೆ, ಒಬ್ಬ ವಿದ್ಯಾಕಾಂಕ್ಷಿಯ ಮೂಲಭೂತ ಅರ್ಹತೆಗಳನ್ನು ಕೂಡ ಮುಖ್ಯವಾಗಿ ಗಮನಿಸಬೇಕು. ಆಯಾ ಅರ್ಹತೆಗೆ ತಕ್ಕಂತೆ ಆಯಾಫಲ.

1. ಕುತೂಹಲ, ಚಪಲ
2. ವಿಸ್ಮಯ
3. ಭಕ್ತಿ
4. ಸಮರ್ಪಣೆ

1. ಕುತೂಹಲ : ಬಹಳ ವಿದ್ಯಾಕಾಂಕ್ಷಿಗಳು ಕುತೂಹಲ ಮತ್ತು ಚಪಲದಿಂದಲೇ ಈ ಮಾರ್ಗವನ್ನು ಪ್ರವೇಶಿಸುತ್ತಾರೆ. ಇಲ್ಲಿ ಏನಿದೆ, ತಮಗೂ ಅದು ಸಂಭವಿಸಬಹುದು. ಅಪರೂಪವಾದದ್ದನ್ನು ತಾವೂ ಕಾಣಬಹುದು. ಇದು ಅದರ ಮೂಲ. ಬಹಳ ಬಾರಿ ಆಧ್ಯಾತ್ಮದ ನಿಜ ಪ್ರವೇಶಿಕೆಗಿಂತಲೂ ಅಂತೆಕಂತೆಗಳ ರೋಚಕ ಕಥೆಗೆ ಕಿವಿಕೊಟ್ಟ ಕಾರಣದಿಂದ ಹುಟ್ಟಿದ ಅಪೇಕ್ಷೆ ಮಾತ್ರ ಇದು. ಇದರಲ್ಲಿ ಯಾವುದೇ ಧೀರತೆ ಅಥವಾ ದೊಡ್ಡದನ್ನು ಕಂಡೇ ತೀರಬೇಕು ಎಂಬ ಬಲಿಷ್ಠವಾದ ಹಸಿವು ಇರುವುದಿಲ್ಲ ಏನಾಗುತ್ತದೆ ನೋಡೋಣ ಎಂಬ ಸಾಮಾನ್ಯ ಕುತೂಹಲಕ್ಕೆ ಹುಟ್ಟಿದ ಈ ಹಸಿವು ತಾತ್ಕಾಲಿಕ ಪರಿಣಾಮಗಳೊಂದಿಗೆ, ಬಹುತೇಕ ಬಾರಿ ಇಷ್ಟೆಯಾ ಎಂಬ ನಿರಾಶೆಯಿಂದ ಮುಗಿಯುತ್ತದೆ. ಪ್ರವೇಶದ ಹಸಿವೆಷ್ಟೋ ಅಷ್ಟನ್ನೆ ನಿರ್ಗಮನದಲ್ಲಿ ಪಡೆಯುತ್ತಾರೆ.

2. ವಿಸ್ಮಯ : ದೊಡ್ಡವರ ಕುರಿತ ಯಾವುದೋ ಘಟನೆ ಮತ್ತು ಅದರಿಂದ ಪುಳಕಿತರಾದ ವಿಸ್ಮಯ ಇವರನ್ನು ಈ ದಾರಿಗೆ ಸೆಳೆಯುತ್ತದೆ. ಇಂಥವರು ಆಶ್ಚರ್ಯಕ್ಕೆ ಬಿದ್ದು

ಇಂಥವರನ್ನು ತಮ್ಮ ಮರಣಕಾಲದವರೆಗೂ ಗುರುವೆಂದೇ ನಂಬಿ ಪೂಜಿಸಿ ನಡೆವವರಿದ್ದಾರೆ. ಒಂದು ನಂಬಿಕೆಯನ್ನು ಇವರು ಈ ಮೂಲಕ ಕಟ್ಟಿಕೊಳ್ಳುತ್ತಾರೆಯೇ ಹೊರತು ತಾವಾಗಲಿ, ಗುರುವಾಗಲಿ ಇದರಿಂದ ಪರಸ್ಪರ ಬೆಳೆಯುವುದಿಲ್ಲ. ಬೆಳೆಯುವ, ಬೆಳೆಸುವ ಉದ್ದೇಶದಿಂದ ಇವರು ಸಮೀಪ ಬಂದವರಲ್ಲ. ಇವರು ಸಾಮಾನ್ಯವಾಗಿ ತಮ್ಮ ಗುರುವಿನ ಪ್ರವಚನವನ್ನು ಇತರರಿಗೆ ವಿವರಿಸಿ, ಗುರುಮಹಿಮೆಯನ್ನು ಬೆಳೆಸಿ, ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆ. ಬಹಳ ಬಾರಿ ಅಂಥ ಪವಾಡ ಪುರುಷ ನಮಗೆ ಗೊತ್ತು. ಅವರು ನಮ್ಮ ಮನೆಗೆ ಬಂದಿದ್ದಾರೆ ಎಂಬ ವೈಭವವೇ ಗರ್ವಾಹಂಕಾರಗಳಿಗೆ ಕಾರಣವಾಗಿ ಗುರುವಿನ ನಿಜಪರಿಣಾಮವನ್ನು ಕಳೆದುಕೊಳ್ಳುತ್ತಾರೆ. 'ನನಗೆ ಪಾದಕ್ಕೆ ಭಕ್ತಿಯಿಂದ ನಮಿಸುವವನಿಗಿಂತ ಪ್ರೀತಿಯಿಂದ ಎದೆಗೆ ಒದೆಯುವವನು ತುಂಬ ಸೇರುತ್ತಾನೆ' ಎಂದು ಸತ್ಯಕಾಮರು ಹಲವು ಬಾರಿ ಹೇಳುತ್ತಿದ್ದರು.

3. **ಭಕ್ತಿ** : ಹಲವರಿಂದ ಕೇಳಿ, ಕೆಲವನ್ನು ತಾನೇ ಕಂಡು ಒಂದು ಅದ್ಭುತ ಪೂಜನೀಯ ಭಾವವನ್ನು ಗುರುವಿನಲ್ಲಿ ಕಾಣುವವರಿದ್ದಾರೆ. ಇವರು ದೇವನಿಗೆ ಕೊಡುವ ಸ್ಥಾನವನ್ನೇ ಈ ಗುರುವಿಗೂ ನೀಡಿ ಪ್ರತಿಯೊಂದನ್ನು ಅವನ ಅಪ್ಪಣೆಯಂತೆ ನಡೆಯುತ್ತಾರೆ. ಇವರು ಭಕ್ತರು. ಈ ಭಕ್ತಿಯ ಪರಾಕಾಷ್ಠೆಯಲ್ಲಿ ಗುರುವಿಗೆ ದೈವತ್ವವನ್ನು ಕೊಟ್ಟು ಅವನ ಸಮೀಪಕ್ಕೆ ಎಂದೂ ಹೋಗದೆ, ಒಂದು ನಿರಂತರ ಅಂತರ, ಅಂತಸ್ತಿನಲ್ಲೇ ಅವನನ್ನು ಗೌರವಿಸುತ್ತಾರೆ, ಈ ಭಕ್ತಿಗೆ ಪೂಜೆ ಒಂದೇ ಗುಣವಾದ್ದರಿಂದ ಇವರು ಗುರುಪಾದಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುತ್ತಾರೆ. ಎಂದೂ ಗುರುವಿನ ಎದೆಯೊಳಗೆ ಇವರು ಇಳಿಯುವುದಿಲ್ಲ. ಅದು ಅವರಿಗೆ ಬೇಡ ಕೂಡ. ಗುರುವು ಕೂಡ ಅವರನ್ನು ದೂರದಿಂದ ಆಶೀರ್ವದಿಸಿ ತನ್ನ ಕರ್ತವ್ಯ ಪಾಲಿಸುತ್ತಾನೆ. ಎದೆಯೊಳಗೆ ಇಳಿಯದವರನ್ನು ಎದೆಯಿಂದ ಎತ್ತುವುದು ಗುರುವಿಗೆ ಸಲ್ಲದ ಕೆಲಸ.

4. **ಸಮರ್ಪಣೆ** : ಈ ಮೇಲಿನ ಎಲ್ಲ ಭಾವಗಳ ಪರಿಪೂರ್ಣ ಸಮಪಾಕ ಸಮರ್ಪಣೆ. ಶರಣಾಗತಿ, ಶರಣಾಗುವುದು ಎಂಬ ಇನ್ನೊಂದು ಪದವಿದೆ. ಅದು ಒಂದು ಸೋತಭಾವ. ಹಾಗಾಗಿ ಸಮರ್ಪಣೆಯೇ ಉಚಿತವಾದ ಪದ. ಇಲ್ಲಿ ನಾನು ಅವನೆಂಬ ಭೇದವಳಿದ ಭಾವ. ನಾನು ಅವನನ್ನು ಅವನು ನನ್ನನ್ನು ಸೇರುವ ತೀವ್ರ ಹಸಿವು. ಅದು ದೈಹಿಕವಲ್ಲ ಎಂಬ ಭಾವ ಖಚಿತವಾಗಿ ಆಗ ಅನುಭವಕ್ಕೆ ಬರುತ್ತದೆ. ದೈಹಿಕ ಮಿಲನಾಕಾಂಕ್ಷೆಗೆ ಒಂದು ದಣಿವು ವಿಶ್ರಾಂತಿಯ ಅಗತ್ಯವಿದ್ದರೆ ಇದು ಅವಿಶ್ರಾಂತ ಮತ್ತು ಅನಾಹತ. ದಿನದ

ಇಪ್ಪತ್ತನಾಲ್ಕು ಗಂಟೆಯೂ ಅವನಿಲ್ಲದೆ ಇರಲಾಗದ ಅವಸ್ಥೆ. ಆದ್ದರಿಂದ ಇದು ಪರಸ್ಪರ. ಈ ಸ್ಥಿತಿಯಲ್ಲಿ ಮಾತ್ರ ಗುರು ನಡೆಸಬಲ್ಲ. ಅಲ್ಲೊಂದು ಕ್ಷಣಮಾತ್ರದ ಮೌನೆ ಜಾಗವೂ ಇನ್ನೊಂದನ್ನು ಯೋಚಿಸದ. ಧ್ಯಾನಿಸದ ಅವನು ಮಾತ್ರವಾಗಿ ವ್ಯಾಪಿಸಿರುವ, ಉನ್ಮತ್ತಸ್ಥಿತಿ. ಇದು ಆರಂಭ. ಅಂಥ ಸಮರ್ಪಿತನ ಜೊತೆಗೆ ಗುರುವಿನ ಕೆಲಸ ಆರಂಭ. ಆದರೆ ಇದು ಮೊದಲಿಗೆ ಪರಸ್ಪರವೇ. ನಂತರಕ್ಕೆ ನಾನು ನೀನು ಭೇದವಳಿದ ನಾನೇ ನೀನಾಗುವ ಪ್ರಕ್ರಿಯೆ. ಅದಕ್ಕೆ 'master is not accidential' ['ಗುರು'ವು ಆಕಸ್ಮಿಕನಲ್ಲ] ಎಂಬ ಮಾತನ್ನು ಪದೇ ಪದೇ ರಜನೀಶ್ ಉಲ್ಲೇಖಿಸುತ್ತಾನೆ. ಇಲ್ಲಿ ಗುರುವು ಎಲ್ಲವೂ ಆಗುವ ಸರ್ವಸ್ವಭಾವ ಇದೆ. 'ನೀನು ನನಗೇನಾಗಬೇಕು? ತಂದೆ, ಗುರು, ದೇವ, ಗಂಡ, ನಲ್ಲ, ಗೆಳೆಯ...ಏನು?' ನಾನು ಸತ್ಯಕಾಮರಿಗೆ ಕೇಳಿದ ಪ್ರಶ್ನೆಗೆ 'ನಾನು ನಿನ್ನ ಚರಣ ಸೇವಕ' ಅವರ ಉತ್ತರ. 'ಅದೊಂದು ಮಾತ್ರ ಹೇಳಬೇಡ' ಎಂದು ನಾನು ತಡೆದರೆ, 'ನಾನು ಸೇವಕನಾಗದಿದ್ದರೆ ಆ ಜಾಗಕ್ಕೆ ನೀನು ಬೇರೊಬ್ಬನನ್ನು ತರುತ್ತಿ. ಅಷ್ಟರ ಮಟ್ಟಿಗೆ ನಾನು ನಿನ್ನಿಂದ ಹೊರಗಾದೆನಲ್ಲ' ಎಂದರು. ಸರ್ವಸ್ವಭಾವಕ್ಕೆ ಇದಕ್ಕೂ ಮೀರಿದ ಉದಾಹರಣೆ ಬೇಕಿಲ್ಲ. 'ನಿನಗಾಗಿ ನಾನು ಭಿಕ್ಷೆ ಬೇಡಲೂ ಹಿಂದೆ ಮುಂದೆ ನೋಡುವುದಿಲ್ಲ' ಎಂದು ರಾಮಕೃಷ್ಣರು ನರೇಂದ್ರನಿಗೆ ಹೇಳಿದ ಮಾತು ಕೂಡ ಅಂಥದೇ. ಪರಸ್ಪರ ಲೀನವಾಗಲು ಅದಲ್ಲದೆ ಬೇರೆದಾರಿಯಿಲ್ಲ.

ಈ ಸಮರ್ಪಣೆ ಬೆಳೆವ ಶಿಷ್ಯನ ನಿಜವಾದ ಅರ್ಹತೆ. ಇದು ಅವನನ್ನು ಬೆಳೆಸುತ್ತದೆ ಯಾಕೆಂದರೆ ಅವನು ಇಲ್ಲಿ ಅಳಿಯುತ್ತಾನೆ. ತನ್ನನ್ನು ಕಳೆದುಕೊಳ್ಳದವ ತನ್ನನ್ನು ಪಡೆಯಲೂ ಆರ. ಒಂದು ದೃಷ್ಟಿಯಿಂದ ಇದು ಗುರುಕಾರುಣ್ಯ ಮತ್ತು ಶಿಷ್ಯನ ತಪೋಬಲ ಎರಡರ ಮೇಲೆ ನಿಂತಿದೆ. ಅದು ಅವನೇ ನಾನಾಗುವ ಪರಮ ಐಕ್ಯಾನುಭವ. ಆದರೂ ಇದು ಸಮರ್ಪಿತರಾದ ಎಲ್ಲರಿಗೂ ಅಲ್ಲ. ಹಾಗಾಗಿಯೇ ಈ ದ್ವೈತ ಅದ್ವೈತ ಭೇದಗಳು ಉಳಿದವು. ಒಬ್ಬೊಬ್ಬ ಒಂದೊಂದು ಅಂತ್ಯ ತಲುಪಿದ. ಅವನವನ ಅನುಭವಕ್ಕೆ ಅವನವನು ಕಂಡಂತೆ ವ್ಯಾಖ್ಯಾನ. ಅದು ವೈಯಕ್ತಿಕ ಅನುಭವ. ಅಂತಿಮ ಸತ್ಯ ಅದರಾಚೆಗೆ ಇದೆ. ಅಂತಿಮವನ್ನು ಮುಟ್ಟಿದವನು ಎಂದೂ ಅದನ್ನು ವಿವರಿಸಿಲ್ಲ. ವಿವರಿಸಿದವರ ಜೊತೆ ಪಂಡಿತರಂತೆ ವಾದ, ಚರ್ಚೆಗೆ ಇಳಿದಿಲ್ಲ. ದೇವಾನುಭವ ಹೀಗೆಯೇ ಇರಬೇಕು ಎಂದು ವಾದಿಸುವವರು ಸತ್ಯದ ದಾರಿಗೆ ಇನ್ನೂ ದೂರದವರು.

ಏಕೆಂದರೆ ರಮಣರೇ ಹೇಳುವ ಹಾಗೆ, 'ಹನಿ ಸಮುದ್ರ ಸೇರುವುದು ಎಲ್ಲರಿಗೂ ತಿಳಿದೀತು, ಹನಿಯಲ್ಲಿ ಸಮುದ್ರ ಸೇರಿದ್ದು ಕೆಲವರಿಗೇ ಗೊತ್ತು'.

6. ತಂತ್ರಮಾರ್ಗ ಮತ್ತು ಸ್ತ್ರೀ

ವೇದವು ಜಾನ್ನತ್ಯದಲ್ಲಿದ್ದಾಗ ಅದು ತನ್ನ ಆಚರಣೆ ಮತ್ತು ವಿಚಾರಗಳಿಗಾಗಿ ಕೆಲವು ಆತಂಕಗಳಲ್ಲಿಯೂ ಇತ್ತು. ವೈದಿಕ ಧರ್ಮಕ್ಕೆ ಪರ್ಯಾಯವಾದ ಹೊಸತೊಂದರ ಹುಡುಕಾಟ ಆಗ ಜನರೊಳಗೆ ಇದ್ದಿರಬೇಕು–ಎಂದೇ ಶಂಕರ, ಬುದ್ಧರ ಸೃಷ್ಟಿಯಾಯಿತು. ಆದರೆ ಅದೂ ಕೂಡ ಸಾಲದು. ಶಂಕರರು ಮತ್ತು ಬುದ್ಧರ ಮಾರ್ಪಾಟುಗಳೂ ಕೂಡ ಕೆಲವು ಮಿತಿಗಳಲ್ಲೇ ಇದ್ದವು. ಒಂದು ದೃಷ್ಟಿಯಿಂದ ತಾಯಿಯ ಮಮತೆ ಈ ಎಲ್ಲ ಧರ್ಮಗಳಲ್ಲು ಇರಲಿಲ್ಲ. ತಂದೆಯ ಅಧಿಕಾರ ಸಾಕಾದಂತೆ ಧರ್ಮಕ್ಕೊಂದು ಮಮತೆಯ ಸ್ಪರ್ಶ ಬೇಕಾಗಿತ್ತು. ಆಗ ಹುಟ್ಟಿದ ಹೊಸ ಪಥವೇ ತಂತ್ರ.

The Vedic path was a strict and orthodox father with very high standards... Tantra was the mother, accepting everyone else, the low of birth, the dark skinned, the female [P. 42. ದಿ ಯೋಗ ಆಫ್ ಕಾಶ್ಮೀರ್ ಶೈವಿಸಮ್] ಈ ರೀತಿಯಲ್ಲಿ ಧರ್ಮವು ಎಲ್ಲರಿಗೂ ಬಾಗಿಲು ತೆರೆದದ್ದು ತಂತ್ರದ ಮುಖಾಂತರವೇ.

ಆರನೆಯ ಶತಮಾನದ ಆಗಮ ಶಾಸ್ತ್ರದಲ್ಲೇ ತಂತ್ರದ ಕೆಲವು ಸೂಚನೆಗಳು ಇದ್ದರೂ ಅದು ಪೂರ್ಣವಾಗಿ ಬೆಳಕಿಗೆ ಬಂದದ್ದು ಸುಮಾರು 9ನೆಯ ಶತಮಾನದ ಕೊನೆಯ ಭಾಗ ಮತ್ತು ಹತ್ತನೆಯ ಶತಮಾನದ ಆರಂಭದಲ್ಲಿ. ಒಂಬತ್ತನೆಯ ಶತಮಾನದ ವಸುಗುಪ್ತನಿಗೆ ಒಂದು ರಾತ್ರಿ ಶಿವಕನಸಿನಲ್ಲಿ ಬಂದು ಪ್ರಪಂಚ ದಾರಿ ತಪ್ಪಿದೆ ಅದಕ್ಕೆ ಸತ್ಯಪಥದ ತಿಳುವಳಿಕೆ ಹೇಳು ಎಂದಾಗ ವಸುಗುಪ್ತ ಯೋಗದ ಮೇಲೆ ಒಂದು ಕೃತಿ ಬರೆದ. ಶಿವಸೂತ್ರ ಎಂದು ಅದರ ಹೆಸರು. ಅಲ್ಲಿಂದ ತಂತ್ರಪಥದ ಆರಂಭ ಎನ್ನುತ್ತಾರೆ.

ತಂತ್ರದಲ್ಲಿ ಕಾಶ್ಮೀರಿ ಶೈವಿಸಮ್ ಎನ್ನುವ ಒಂದು ವಿಭಾಗ ತುಂಬ ಪ್ರಚಲಿತವಾದದ್ದು. ಕಾರಣ ಅದರ ಹುಟ್ಟು ಬೆಳವಣಿಗೆಗಳೆಲ್ಲ ಉತ್ತರಭಾರತದ ಕಾಶ್ಮೀರದಲ್ಲಿ ಹೆಚ್ಚಾಗಿ ವ್ಯಾಪಿಸಿದ್ದು, ಆದ್ಯಪ್ರವರ್ತಕರೆಲ್ಲ ಆ ಭಾಗದಿಂದ ಬಂದವರೇ ಆಗಿದ್ದರು. ಆ ಕಾಶ್ಮೀರಿ ಶೈವ ಸಂಪ್ರದಾಯದಲ್ಲಿ ನಾಲ್ಕು ಪಂಥಗಳು (schools)

1. ಕುಲ
2. ಕ್ರಮ
3. ಸ್ಪಂದ
4. ಪ್ರತ್ಯಭಿಜ್ಞ

ಕುಲ ಮತ್ತು ಕ್ರಮ ಪಂಥಗಳು ಬಹುತೇಕ ನಾಲ್ಕನೆಯ ಶತಮಾನದಷ್ಟು ಹಳೆಯ ಸಂಪ್ರದಾಯಗಳು. ಅಂದರೆ ಅವುಗಳ ಮೂಲವನ್ನು ಅಲ್ಲಿಂದ ಗುರುತಿಸಬಹುದಾಗಿದೆ.

ಈ ನಾಲ್ಕು ಪಂಥಗಳಲ್ಲಿ ಕುಲ ಪಂಥಕ್ಕೆ ತುಂಬ ತುಂಟ ಪಂಥ ಎಂದೇ ಹೆಸರು. ತಂತ್ರದ ಪಂಚ'ಮ' ಗಳನ್ನು ಒಳಗೊಂಡ ಪಂಥ ಇದು. ಮದ್ಯ, ಮಾಂಸ, ಮುದ್ರೆ, ಮೈಥುನ, ಮಂತ್ರ ಇವು ಆ ಪಂಚ'ಮ' ಕಾರಗಳು. ಒಂದು ಪ್ರಚಲಿತ ಗಾದೆ ಕುಲತಂತ್ರದ ಕುರಿತು ಹೀಗಿದೆ, 'ದಿನದಲ್ಲಿ ವೈಷ್ಣವನಾಗು, ಮನೆಯಲ್ಲಿ ಶೈವನಾಗು, ರಾತ್ರಿಯಲ್ಲಿ 'ಕುಲ' ನಾಗು'.

ಕಾರಣ ಇಷ್ಟೆ, ಕುಲ ಸಂಪ್ರದಾಯವು ಕುಂಡಲಿನೀ ಯೋಗದ ಮುಖಾಂತರವೇ ಕೊನೆ ಮುಟ್ಟುವ ಸಂಗತಿಯನ್ನು ಹೇಳುತ್ತದೆ. ಮತ್ತು ಆಗ ಅಂತರಂಗ ಮಿಲನಕ್ಕೆ ಲೈಂಗಿಕ ಮಿಲನವನ್ನು ಪ್ರಮುಖ ಅಸ್ತ್ರವೆಂದು ಪರಿಗಣಿಸುತ್ತದೆ. ಕುಲಪಂಥದ ದೀಕ್ಷೆ ಪಡೆದ ಅಭಿನವಗುಪ್ತ ಕಾಶ್ಮೀರಿ ಶೈವ ಸಂಪ್ರದಾಯಕ್ಕೆ ಕುಲಪಂಥವನ್ನು, ಅದರ ಎಲ್ಲ ವಿಚಾರಧಾರೆಗಳನ್ನು ಪ್ರಚುರಪಡಿಸಿದ ಮೊದಲಿಗ.

ಕ್ರಮ ಪಂಥವು ಹಂತಹಂತವಾಗಿ ಏರುವ ರೀತಿಯನ್ನು ಹೇಳುತ್ತದೆ. ಸಾಕ್ಷಾತ್ಕಾರವು ಒಮ್ಮಿಂದೊಮ್ಮೆಗೆ ನಡೆವ ಕ್ರಿಯೆಯಲ್ಲ. ಅದು ವಿವಿಧ ಹಂತಗಳಲ್ಲಿ ಸೋಪಾನವನ್ನು ಏರುತ್ತಾ ಹೋಗುವ ಒಂದು ಪ್ರಕ್ರಿಯೆ. ಇಡಿಯ 'ಕ್ರಮ' ಪಂಥವು 12 ಕಾಳಿಯ ಅಥವಾ ದೇವಿಯರ ಆರಾಧನೆಯನ್ನು ಹೇಳಿತು. ಈ ದೇವಿಯರೇ ನಮ್ಮ ಎಲ್ಲ ಚೈತನ್ಯವನ್ನು ಆಳುವವರು ಮತ್ತು ಶಕ್ತಿಚಕ್ರವನ್ನು ಹದ್ದುಬಸ್ತಿನಲ್ಲಿ ತಂದವರು ಎಂಬುದನ್ನು ಹೇಳಿತು.

ಸ್ಪಂದ ಸಂಪ್ರದಾಯವು ದೈವೀ ಶಕ್ತಿಯನ್ನು ಕೇಂದ್ರೀಕೃತವಾಗಿಸಿದೆ. (divine energy) ಈ ವಿಶ್ವ ಮತ್ತೇನೂ ಅಲ್ಲ ಅದು ಒಂದು ಚೈತನ್ಯಪೂರ್ಣ ಎಚ್ಚರ ಮತ್ತು ಆ ಚೈತನ್ಯವೇ ಭೌತಶಾಸ್ತ್ರ ಹೇಳುವ energy ಯೂ ಆದರೆ ಅದು ದೈವೀ ಎಂಬುದನ್ನು ವಿಜ್ಞಾನ ಒಪ್ಪುವುದಿಲ್ಲ. ಸ್ಪಂದ ಆ ಚೇತನವನ್ನೇ ದೈವೀ ಶಕ್ತಿ ಎಂದು ಒಪ್ಪಿ ಅದರ ಸಾಕ್ಷಾತ್ಕಾರಕ್ಕೆ ನಡೆಯುತ್ತದೆ. ಸ್ಪಂದ ಸಂಪ್ರದಾಯವನ್ನು ವಸುಗುಪ್ತ ಅಥವಾ ಶಿಷ್ಯ ಕಲ್ಲಟ ಬರೆದ ಎಂದು ನಂಬಲಾಗಿದೆ.

ಪ್ರತ್ಯಭಿಜ್ಞಾ ಸಂಪ್ರದಾಯವು ಗುರುತಿಸುವುದನ್ನು ಹೇಳುತ್ತದೆ. ಈ ಸಂಪ್ರದಾಯದ ಪ್ರಕಾರ ನಾನೇ ಶಿವ, ಆದ್ದರಿಂದ ನಮ್ಮ ಕೆಲಸ ನಮ್ಮೊಳಗಿನ ಶಿವನನ್ನು ಗುರುತಿಸುವುದು. ಶಿವನನ್ನು ಗುರುತಿಸಿದ ತಕ್ಷಣ ನಮ್ಮ ಹುಡುಕಾಟ ಪೂರ್ಣವಾಯ್ತು.

ಈ ನಾಲ್ಕು ಪರಂಪರೆಗಳಲ್ಲಿ ಕುಲಸಂಪ್ರದಾಯವು ಪೂರ್ತಿಯಾಗಿ ಸ್ತ್ರೀಗೆ ಸಂಬಂಧ ಪಟ್ಟದ್ದು. ವಾಸ್ತವಿಕವಾಗಿ ಕುಲಸಂಪ್ರದಾಯವನ್ನು ಆಚರಣೆ ಮತ್ತು ಗ್ರಂಥಗಳೆರಡರಲ್ಲೂ ಬಹಳ

ಪ್ರಸಿದ್ಧಿಗೆ ತಂದವನು ಅಭಿನವಗುಪ್ತ, ಇವನ ಹತ್ತನೆಯ ಶತಮಾನದಲ್ಲಿ ಬಂದ 'ತಂತ್ರಾಲೋಕ' ವೇದಾಂತ ಲೋಕದ ವಿದ್ವಾಂಸರಿಗೆ ನೀರು ಕುಡಿಸಿತು. ತಂತ್ರಾಲೋಕದ ಜೊತೆಗೆ ಮಾಲಿನಿ ವಿಜಯತಂತ್ರ, ವಿಜ್ಞಾನ ಭೈರವ ತಂತ್ರ ಮತ್ತು ಸ್ವಚ್ಛಂದ ತಂತ್ರ ಎಂದು ಮೂರು ಇತರ ಕೃತಿಗಳನ್ನು ತಂತ್ರಕ್ಕೆ ಸಂಬಂಧಪಟ್ಟು ರಚಿಸಿದ್ದಾನೆ.

ತನ್ನ ತಂತ್ರಾಲೋಕದ 29ನೆಯ ಅಧ್ಯಾಯದಲ್ಲಿ ಸಂಪೂರ್ಣವಾಗಿ ಕುಲ ಸಂಪ್ರದಾಯದ ಆಚರಣೆಗಳನ್ನು ವಿವರಿಸುವ ಅಭಿನವ ಗುಪ್ತ ಅದರಲ್ಲಿ ಅನೇಕ ಮಡಿವಂತರಲ್ಲದವರಿಗೂ ಮುಜುಗರ ಎನಿಸಬಹುದಾದ ಸಂಗತಿಗಳನ್ನು ತಿಳಿಸುತ್ತಾನೆ.

ಶಿವ ಮತ್ತು ಶಕ್ತಿಯನ್ನು ಬಿಂಬ ಪ್ರತಿಬಿಂಬ ಎಂದೇ ಭಾವಿಸುವ ಅಭಿನವಗುಪ್ತ ಶಕ್ತಿಯ ರೂಪವಾಗಿಯೇ ಸ್ತ್ರೀ ಆರಾಧನೆಯನ್ನು ಹೇಳುತ್ತಾನೆ. ದೀಕ್ಷೆಗೆ ಒಳಗಾದ ಸಾಧಕ ನಿರಂತರವಾಗಿ ತನ್ನ ದೇಹವನ್ನು ನಿರಾಕರಿಸುತ್ತಾ ಹೋಗುವುದು ಅದರ ಆರಂಭ. ಹಾಗೆ ನಿರಂತರ ದೇಹ ನಾನಲ್ಲ ಎನ್ನುವುದಕ್ಕೆ ಅವನು ಕೊಡುವ ಕಾರಣ ದೇಹ ನಿರಾಕರಣೆಯಲ್ಲ. ಹಾಗೆ ನೋಡಿದರೆ ತಂತ್ರ ಇಲ್ಲಿರುವ ಯಾವುದನ್ನು ನಿರಾಕರಿಸುವುದಿಲ್ಲ. ಅದು ಸ್ಪಷ್ಟವಾಗಿ 'Yoga can and should be practiced amidst the ordinary circumstances of family life. It is a simple and spontaneous refining of the spirit, attuning the mind and heart to the divine presence, even in everyday life. The shaivist approach is not to forsake the world in search of the spirit but to bring the world into the spirit, to discover in fact that the world is spirit [P.56 Yaga of Kashmir Shaivism' 2006]

ವೇದಾಂತವು ಇಲ್ಲಿರುವ ಪ್ರತಿಯೊಂದನ್ನು ಭ್ರಮೆಯೆಂದೂ, ನೇತಿಭಾವದಿಂದ ನೋಡುವಂತೆಯೂ ಹೇಳಿದರೆ ತಂತ್ರವು ಇಲ್ಲಿರುವ ಪ್ರತಿಯೊಂದು ಆ ಮಹತ್ತರವಾದದ್ದರ ಅಣುರೂಪ ಎಂದು ನೋಡಲು ಹೇಳಿತು. ಇದು ಅದೇ ಅವನದೇ ಎಂಬ ಭಾವವನ್ನು ಬೆಳೆಸಿತು. ಆದ್ದರಿಂದಲೇ ಅದು ಯಾವುದನ್ನು ನಿರಾಕರಿಸಲಿಲ್ಲ ಮಾತ್ರವಲ್ಲ, ಇಲ್ಲಿರುವ ಪ್ರತಿಯೊಂದನ್ನು ದೈಹಿಕವಾಗಿ ಕಂಡಿತು ಮತ್ತು ದೈವಿಕತೆಯನ್ನು ಅನುಭವಿಸಲು ಹೇಳಿತು. ನೋಡುವ ವಸ್ತು ಮತ್ತು ನೋಡುವ ಚೈತನ್ಯಕ್ಕೆ ಸಂಬಂಧ ಹೇಳಿತು. ಅದು ಇದೇ ಎಂಬುದನ್ನು ಅನುಭವಿಸುವಂತೆ ಮಾಡಿತು.

ಈ ಹಿನ್ನೆಲೆಯಲ್ಲಿ ತಂತ್ರಕ್ಕೆ ಪ್ರತೀ ಕಾರ್ಯವೂ ದೇವಕಾರ್ಯ, ಪ್ರತಿ ಚೈತನ್ಯವೂ ದೇವ ಚೈತನ್ಯ. ಇಂಥ ಮಾರ್ಗವನ್ನು ಸಾಧನೆಯ ರೂಪದಲ್ಲಿ ನಡೆವ ಸಾಧಕನಿಗೆ ಮೂರು ಸಾಧ್ಯತೆಗಳಿವೆ. ಅದು ತಂತ್ರಪಥವನ್ನು ನಡೆವ ಮೂರು ರೀತಿಯೂ ಹೌದು. 1. ಕಾದಿ 2. ಹಾದಿ, 3. ಸಾದಿ.

1. ಇಲ್ಲಿಯೇ ಇದ್ದು ಇಲ್ಲಿರುವ ಪ್ರತಿಯೊಂದು ಲೌಕಿಕ ಎನ್ನುವ ಕೆಲಸಕಾರ್ಯಗಳನ್ನು ಮಾಡುತ್ತಾ, ಶಕ್ತಿಯ ಆರಾಧನೆ ಮತ್ತಿತರ ಪೂಜೆ ಕಾರ್ಯಗಳನ್ನು ಸಾಧ್ಯವಾದಷ್ಟು ಬದುಕಿನ ಅಂಗವಾಗಿ ಪಾಲಿಸುತ್ತಾ ಬರುವುದು. ಇಲ್ಲಿಯ ಯಾವ ಸಾಂಸಾರಿಕ ಚಟುವಟಿಕೆಗಳಿಗೂ ಅಡ್ಡಿ ಬಾರದಂತೆ ಆ ಶಕ್ತಿಯ ಆರಾಧನೆಗೂ ಸಮಯ ಸಾಧ್ಯವಾದಾಗ ಹೊಂದಿಸಿ ನಡೆಯುವ ಒಂದು ಸಾಧ್ಯತೆ ಇದನ್ನು ಕಾದಿಮಾರ್ಗ ಎಂದು ಕರೆಯಲಾಯಿತು.

2. ಇಲ್ಲಿಯ ಯಾವ ಸಾಮಾಜಿಕ, ಕೌಟುಂಬಿಕ ಚಟುವಟಿಕೆಗಳನ್ನು ಚಾಚೂ ತಪ್ಪದೆ ಪಾಲಿಸಿಯೂ ಅಪರೂಪಕ್ಕೊಮ್ಮೆ ನಿಗೂಢವಾಗಿ ಕಣ್ಮರೆಯಾಗುವ, ಕೆಲಕಾಲ ನಾಪತ್ತೆಯಾಗಿ ಬಿಡುವ ಮತ್ತು ಅಂತಹ ಕಾಲ ಸಂದರ್ಭಗಳಲ್ಲಿ ಶ್ಮಶಾನವಾಸ, ಶವಪೂಜೆ ಮುಂತಾದ ಗುಪ್ತ ಪೂಜಾಕ್ರಮಗಳನ್ನು ಸಾಧನಾಕ್ರಮಗಳನ್ನು ಪಾಲಿಸುತ್ತಾ ಬದುಕುವ ಇನ್ನೊಂದು ಸಾಧಕವರ್ಗವಿದೆ. ಇವರು ಇಲ್ಲಿಯೂ ನೂರಕ್ಕೆ ನೂರು ಸಲ್ಲುವರು, ಅಲ್ಲಿಯೂ ಅಷ್ಟೇ ಬಲಿಷ್ಠವಾಗಿ ಸಲ್ಲುವರು. ಇವರು ಆದಷ್ಟು ತಮ್ಮ ಸಾಧನಾ ಪಥದ ಸಂಗತಿಗಳನ್ನು ನಿಗೂಢ ಮತ್ತು ರಹಸ್ಯವಾಗಿಯೇ ಅನುಭವಿಸುತ್ತಾರೆ ಮತ್ತು ಇರುತ್ತಾರೆ. ಈ ಮಾರ್ಗವನ್ನು ಹಾದಿ ಮಾರ್ಗ ಎಂದು ಕರೆಯಲಾಗಿದೆ.

3. ಸಾದಿ ಮಾರ್ಗವು ಸಂಪೂರ್ಣವಾಗಿ ಇಲ್ಲಿರುವುದನ್ನು ತೊರೆದು ದೂರ ಹೋಗಿ, ಸಾಧನೆಗಾಗಿಯೇ ಪೂರ್ತಿ ಸಮಯವನ್ನು ಮುಡಿಪಿಟ್ಟು, ಅದರ ಎಲ್ಲ ಹಂತ ಹಂತವಾಗಿ ಸಾಧನಾಕ್ರಮವನ್ನು ಪಾಲಿಸುತ್ತಾ, ನಮ್ಮಂಥ ಲೌಕಿಕರಿಗೆ ಅಪರಿಚಿತವೂ ದೂರವೂ ಉಳಿದು ಬಿಡುತ್ತದೆ. ಇಂಥವರು ಸಾಮಾನ್ಯರಿಂದ ತುಂಬ ಮರೆಯಲ್ಲೇ ಇರುತ್ತಾರೆ. ಇವರನ್ನು ಕೂಡ ತಂತ್ರಮಾರ್ಗವು ಸಾಧಕರೆಂದೇ ಹೇಳುತ್ತದೆ.

ಈ ಮೂರು ಭಿನ್ನ ರೀತಿ ಏನೇ ಇದ್ದರೂ ನೇತಿ ಭಾವವಿಲ್ಲದೆ ಪ್ರತಿಯೊಂದನ್ನು ಅನುಭವಿಸುವುದು ಪ್ರತೀ ವ್ಯಕ್ತಿಗೂ ಸರ್ವೇ ಸಾಮಾನ್ಯ.

ತಂತ್ರ ಪಥದ ಅನೇಕ 'ಮ'ಕಾರಗಳಲ್ಲಿ ಮದ್ಯದ ಕುರಿತು ಒಂದು ಪೂಜ್ಯಭಾವ, ಮಾಂಸವನ್ನು ಕೂಡ ಯಾವುದೇ ಕೀಳರಿಮೆಯಿಲ್ಲದೆ ಪೂಜನೀಯವಾಗಿ ಮಾಡುವ ಸಂಪ್ರದಾಯವಿದ್ದು. (ಬುದ್ಧ ಹೇಳಿದ ಮಾಂಸಾಹಾರದ ಕುರಿತ ಮೈಲಿಗೆಯನ್ನು ದೂರ ಮಾಡುವ

ಉದ್ದೇಶದಿಂದಲೇ ಇದು ಬಳಕೆಗೆ ಬಂದಿರಬೇಕು. ಯಾವುದರ ಕುರಿತು ನೇತಿಭಾವ ಇರಬಾರದು ಎಂಬ ಮೂಲಸೂತ್ರವಂತೂ ಇದ್ದೇ ಇದೆ) ಮೀನು ಪೂಜೆಯ ಅವಿಭಾಜ್ಯ ಅಂಗವಾಗಿ ಬಳಕೆಯಾಗುತ್ತದೆ.

ದೀಕ್ಷೆ ಸ್ವೀಕರಿಸಿದ ಸಾಧಕನು ಹಂತಹಂತವಾಗಿ ಒಂದೊಂದೇ 'ಮ' ಕಾರಗಳನ್ನು ಪಾಲಿಸಬೇಕು. ತಾನು ಈ ದೇಹವಲ್ಲ ಎಂಬ ನೇತಿಭಾವದ ಜೊತೆಗೆ, ಸಾಧಕನಿಗೆ ಕೆಲವು ಶಿಸ್ತುಗಳನ್ನು, ಸ್ವಚ್ಛತೆಯನ್ನು ಅಗತ್ಯ ಅರ್ಹತೆಯಾಗಿ ಹೇಳಲಾಗುತ್ತದೆ. ಅವನು ಒಂದು ನಿಯಮಿತ ಸಮಯಕ್ಕೇ ಏಳಬೇಕು. ಸ್ನಾನ ಮುಂತಾದ ಶುಚಿಸಬಂಧಿ ಸಂಗತಿಗಳನ್ನು ಅಗತ್ಯ ಪಾಲಿಸಿಕೊಂಡೇ ತನ್ನ ಸಾಧನೆಯ ಸ್ಥಳಕ್ಕೆ ಕಾಲಿಡಬೇಕು. ಸಾಧನೆಗೆ ಕುಳಿತುಕೊಳ್ಳುವ ಸ್ಥಳ ಮಲಿನವಾಗಬಾರದು. ನಿದ್ರೆ ಮುಂತಾದ ದೈಹಿಕ ಕ್ರಿಯೆಗಳಿಂದ ಆ ಜಾಗವನ್ನು ಮುಕ್ತವಾಗಿಡಬೇಕು. ಸಾಧನೆಯ ಆಚರಣೆಗಳನ್ನಲ್ಲದೆ ಬೇರೆ ಸಂಗತಿಗಳಿಂದ ಸ್ಥಳವನ್ನು ಮಲಿನಗೊಳಿಸಬಾರದು. ಅದು ಆದಷ್ಟು ಮುಚ್ಚಿರಬೇಕು. ಅಥವಾ ಮರೆಯಲ್ಲಿರಬೇಕು, ಸಾರ್ವಜನಿಕ ಸ್ಥಳ ಆಗಿರಬಾರದು.

ಇಂತಹ ಒಂದು ಸ್ಥಳದ ಆಯ್ಕೆಯ ಬಳಿಕ ತನ್ನ ಒಂದು ಅನುಕೂಲ ಆಸನದಲ್ಲಿ ಕೆಲಕಾಲ ಕುಳಿತುಕೊಳ್ಳುವ ಅಭ್ಯಾಸ ನಿರಂತರ ಕರಗತವಾದ ಮೇಲೆ ಒಂದೊಂದೆ ಪ್ರಯೋಗಗಳನ್ನು ಸಾಧಕ ಅಳವಡಿಸಿಕೊಳ್ಳಬೇಕು. ಸಾಮಾನ್ಯವಾಗಿ ಗುರುವಿನ ದೀಕ್ಷೆಯೊಂದಿಗೆ ಆರಂಭವಾಗುವ ಈ ಕ್ರಿಯೆ ಗುರುವಿನ ಉಪಸ್ಥಿತಿಯಲ್ಲಿ ಅವನ ಪ್ರತ್ಯಕ್ಷ ಅಥವಾ ಪರೋಕ್ಷ ಮಾರ್ಗದರ್ಶನದ ಮೂಲಕವೇ ಮುಂದುವರಿಯುತ್ತದೆ.

ಅಭಿನವನ ಪ್ರಕಾರ ಈ ದೇಹ ತಾನಲ್ಲ ಎಂಬ ನಿರಂತರ ಅಭ್ಯಾಸದಿಂದ ಮುಂದುವರಿಯುವ ಈ ಅಭ್ಯಾಸ ಕಾಲಕ್ರಮೇಣ ಈ ದೇಹಕ್ಕೆ ಬೇರೆ ಬೇರೆ ಶಕ್ತಿ ಆವಾಹಿಸಿಕೊಳ್ಳಲು ಅನುಕೂಲವಾಗುತ್ತದೆ. ಈ ದೇಹದ ಖಾಲಿತನ ನಮಗೆ ಅಲ್ಲಿ ಇನ್ನೊಂದನ್ನು ತುಂಬಿಕೊಳ್ಳಲು ಪೂರಕವಾಗುತ್ತದೆ. ಅಂತಹ ಸಂದರ್ಭದಲ್ಲಿ ನಿಧಾನವಾಗಿ ತೋಳು, ಭುಜ, ತೊಡೆ, ಹೃದಯ, ಕಾಲು, ಪಾದ, ಹೀಗೆ ಬೇರೆ ಬೇರೆ ಅವಯವಗಳಿಗೆ ಒಂದೊಂದಾಗಿ ಶಕ್ತಿಯನ್ನು ಆವಾಹಿಸುತ್ತಾ ಮಂತ್ರ ಶಕ್ತಿಯ ನಿರಂತರ ಪ್ರಭಾವ ಮತ್ತು ಅಭ್ಯಾಸದ ಪರಿಣಾಮವಾಗಿ ಕಾಲಕ್ರಮೇಣ ಶಕ್ತಿಗಳು ದೇಹದಲ್ಲಿ ವಾಸ ಮಾಡುವ ಹಂತವನ್ನು ಸಾಧಕ ತಲುಪುತ್ತಾನೆ. ಇದನ್ನು ಒಂದೆರಡು ದಿನಗಳಲ್ಲಿ ಆಗುತ್ತದೆಂದು ಭಾವಿಸದೆ ಒಂದು ನಿರಂತರ ತಪೋ ಕ್ರಿಯೆಯಂತೆ ಮಾಡಿದರೆ ಕಾಲಕ್ರಮೇಣ ಅದು ಸಾಧಿತವಾಗಿಯೇ ತೀರುತ್ತದೆ. ಅನೇಕ

ಬಾರಿ ಆಯಾ ಶಕ್ತಿ ದೇವತೆಗಳಿಗೆ ಕೆಲವು ಶಕ್ತಿಪೀಠವನ್ನು ಸೂಚಿಸುವ ಅಭಿನವನು, ಅಂಥ ಶಕ್ತಿಪೀಠಗಳಿಗೆ ಸ್ವತಃ ಸಾಧಕನು ಹೋಗಿ ಕುಳಿತು ಸಾಧಿಸಿದರೆ ಪರಿಣಾಮ, ಪ್ರಭಾವ ಹೆಚ್ಚು ಆಗಬಹುದು ಎಂಬುದನ್ನು ಹೇಳುತ್ತಾನೆ.

ಹೀಗೆ ಶಕ್ತಿಯನ್ನು ದೇಹದಲ್ಲಿ ಧರಿಸಿದ ಸಾಧಕ ಮತ್ತೆ ಇನ್ನು ಅನೇಕ ಸಾಧನ ಪ್ರಯೋಗಗಳಿಗೆ ಸಿದ್ಧನಾಗುತ್ತಾನೆ. ಅಂತಹ ಸಾಧನಾ ಕ್ರಮದಲ್ಲಿ ಅವನು ಮಂಡಲ ಪೂಜೆಯ ಹಲವು ವಿಧಿವಿಧಾನಗಳನ್ನು ಗುರುವಿನ ಆಜ್ಞೆಯಂತೆ ನಡೆಯುತ್ತಾನೆ. ಆಗ ಮದ್ಯವನ್ನು, ಮೀನು ಮುಂತಾದ ಕೆಲವು ಮಾಂಸ ಸೇರಿಸಿದ ಮತ್ತು ಸ್ತ್ರೀ ಮೂತ್ರವನ್ನು ಒಳಗೊಂಡ ಒಂದು ದ್ರವಸಂಯೋಜನೆಯನ್ನು ತೀರ್ಥ ರೂಪದಲ್ಲಿ ಸ್ವೀಕರಿಸುವುದು ಕೂಡ ಅವನ ಅಭ್ಯಾಸಕ್ರಮದಲ್ಲಿ ಒಂದು ಅಂಗ. ಅದನ್ನು ಕುಡಿಯುವಾಗ ಯಾವುದೇ ಒಂದು ಕ್ಷಣಿಕ ಅಸಹ್ಯ ಭಾವವೂ ಇಡಿಯ ಅವನ ಸಾಧನೆಯನ್ನು ನಾಶ ಮಾಡುತ್ತದೆ ಎಂಬ ಎಚ್ಚರಿಕೆಯೂ ಇಲ್ಲಿರಬೇಕು. ಒಂದು ಸಣ್ಣ ಸಂಶಯ, ಅಪನಂಬಿಕೆ, ಅಸಹ್ಯಭಾವ ಒಟ್ಟು ಸಾಧಕನ ಘನ ಸಾಧನೆಗಳನ್ನು ಕ್ಷಣ ಮಾತ್ರದಲ್ಲಿ ಪುಡಿ ಮಾಡಬಲ್ಲುದು. ಆ ಅಸಹ್ಯ, ಸಂಶಯ, ಅಪನಂಬಿಕೆ ನಿವಾರಣೆಗಾಗಿಯೇ ಮಂತ್ರ, ಮುದ್ರೆ ಅಭ್ಯಾಸಗಳ ಮೂಲಕ ಮನಸ್ಸನ್ನು ತರಬೇತುಗೊಳಿಸುವಂತೆ ಈ ಮದ್ಯ ಮಾಂಸ ಮುಂತಾದ ಪದಾರ್ಥ ಸೇವನೆಗಳ ಮೂಲಕ ದೇಹ ತರಬೇತನ್ನು ನೀಡಲಾಗುತ್ತದೆ.

ಹೀಗೆ ಎರಡಲಗಿನಿಂದ ನಮ್ಮನ್ನು ನಾವೇ ಒರೆಹಚ್ಚುತ್ತಾ ಈ ಸಾಧನಾಪಥ ನಡೆವ ಸಾಧಕನ ಕುಲ ಆಚರಣೆಯ ಇನ್ನೊಂದು ಹಂತವೇ ಮೈಥುನ. ನಾವು ಕಾಮ ಸುಖದಲ್ಲಿ ದೇವರನ್ನು ನೆನೆಯಲು ಸಾಧ್ಯವೇ ಇಲ್ಲ ಮತ್ತು ಅದು ಪೂರ್ತಿಯಾಗಿ ದೇಹ ಸುಖಕ್ಕೆ ಇರುವ ಸಾಧನ ಎಂದೇ ನಂಬಿದವರು. ಕುಲ ಆಚರಣೆಯಲ್ಲಿ ಅಭಿನವ ಲೈಂಗಿಕ ಮಿಲನವನ್ನೇ ಹೇಗೆ ಉನ್ನತಕ್ರಮಣಕ್ಕೆ ಅಗತ್ಯವಾಗಿ ಬಳಸಿಕೊಳ್ಳಬೇಕು ಎಂಬುದನ್ನೇ ಬಹಳ ವಿಶದವಾಗಿ ವಿವರಿಸಿದ್ದಾನೆ.

ಈ ಮೈಥುನಕ್ಕೆ ಆಯ್ಕೆ ಮಾಡಿಕೊಳ್ಳಬೇಕಾದ ಸ್ತ್ರೀಯ ಕುರಿತು ಅಭಿನವ ಕೆಲವು ಕಟ್ಟುನಿಟ್ಟಾದ ನಿಯಮಗಳನ್ನು ಹೇಳುತ್ತಾನೆ. ಅವಳು ಎಂದಿಗೂ ನಮ್ಮ ಹೆಂಡತಿಯಾಗಬಾರದು ಅಂದರೆ ಅವಳು ಪರಸ್ತ್ರೀಯೇ ಆಗಬೇಕು. ಅವಳು ಉಚ್ಚಜಾತಿಯ ಸ್ತ್ರೀ ಆಗಿರಬಾರದು. ಕುಲೀನ ಸ್ತ್ರೀಯೇ ಆಗಿರಬೇಕು. ಹೆಂಡತಿಯಾದರೆ ಅವನ ಸಾಧಕನಿಗೂ ಕೆಲವು ಕಟ್ಟುಗಳಿರುತ್ತವೆ. ಅದು ಕಟ್ಟುಗಳಲ್ಲದ ಮುಕ್ತತೆಯಲ್ಲಿರಬೇಕು. ಜೊತೆಗೆ ಕೂಡುವ ಸ್ತ್ರೀ ಹೆಂಡತಿಯಾದರೆ ಸೃಷ್ಟಿ ಅದರ ಉದ್ದೇಶವಾಗುತ್ತದೆ. ಅದು ಇದರ ಉದ್ದೇಶವಾಗಬಾರದು. ಅಂತೆಯೇ ದೇಹಸುಖವೂ ಈ ಮಿಲನದ ಪರಿಣಾಮವಲ್ಲವೆಂಬುದನ್ನು ಅಭಿನವ ಸಾದ್ಯಂತವಾಗಿ ವಿವರಿಸುತ್ತಾನೆ.

ಜೊತೆಯನ್ನು ಆಯ್ಕೆ ಮಾಡುವುದರಿಂದ ತೊಡಗಿ ಮಿಲನಕ್ಕೆ ಬೇಕಾಗುವ ಅವಶ್ಯಕತೆಗಳಾದ ಆತ್ಮೀಯತೆ, ಸಲುಗೆ ಮತ್ತು ಪ್ರೀತಿಯನ್ನು ಬೆಳೆಸುವಂತಹ ಅನೇಕ ಪೂರಕ ವಿಧಿ ವಿಧಾನಗಳನ್ನು ಅಭಿನವ ಹೇಳುತ್ತಾನೆ. (ಮದುವೆಯ ಆಚರಣೆಯಲ್ಲಿ ದೈಹಿಕವಾಗಿ ನಿಧಾನಕ್ಕೆ ಪರಸ್ಪರ ಸಮೀಪಕ್ಕೆ ತರುವ ಆಚರಣೆಗಳಂತೆ) ಹೀಗಾಗಿ ಒಬ್ಬರಿಗೊಬ್ಬರು ಪರಸ್ಪರ ಆತ್ಮೀಯವಾದ ಬಳಿಕ ದೈಹಿಕವಾಗಿ ಸಮೀಪಕ್ಕೆ ಬರಲು ನೋಟ, ಸಣ್ಣಗಿನ ಸ್ಪರ್ಶ ಮುಂತದ ಸೂಚನೆಗಳನ್ನು ಹೇಳಿ ಅಭಿನವ ಅದರ ಮುಂದುವರಿಕೆಯ ಮಿಲನಕ್ಕೆ ಪರಸ್ಪರ ಅನುಕೂಲವಾದ ಅವರವರ ಸಂಜ್ಞೆಗಳನ್ನು ಅನುಸರಿಸುವಂತೆ ಹೇಳುತ್ತಾನೆ.

ಆ ಬಳಿಕದ ಮಿಲನದ ಹಂತಹಂತ ವಿವರವನ್ನು ಮುಗಿಸಿ ದೈಹಿಕ ಮಿಲನದ ಉನ್ನತ ಹಂತವಾದ ಸಂಭೋಗದ ಸ್ಥಿತಿಯನ್ನು ಅಲ್ಲಿಂದ ವಿವರಿಸಲಾಗದು ಎಂಬಲ್ಲಿಗೆ ಮುಗಿಸುತ್ತಾನೆ. ಆದರೆ ಸಂಭೋಗದ ಉತ್ತರ ಭಾಗವಾದ ವಿಸರ್ಜನೆಯ ಹಂತಕ್ಕೆ ಬಂದಾಗ ಸ್ತ್ರೀಯ ಯೋನಿದ್ರವವನ್ನು ಪುರುಷ ಕುಡಿಯಬೇಕೆಂದು ಪುರುಷನ ವಿಸರ್ಜನವನ್ನು ಸ್ತ್ರೀ ಕುಡಿಯಬೇಕೆಂದು ಸೂಚಿಸುತ್ತಾನೆ. ಅಲ್ಲಿಯವರೆಗೆ ಸಂಭೋಗದ ಮುದ್ರೆಗಳನ್ನು ವಿವರಿಸದೆ ಇರುವ ಅಭಿನವ ಉತ್ತರ ಪರಿಣಾಮದ ವಿವರಗಳನ್ನು ಹೀಗೆ ಸೂಚಿಸುತ್ತಾನೆ.

ಇದರಿಂದ ಅಸ್ಪಷ್ಟವೇ ಇರುವ ಸಂಗತಿಯಲ್ಲಿ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಪುರುಷ ವಿಸರ್ಜನೆ ಯೋನಿಯಲ್ಲಿ ಸಂಭವಿಸಲಾಗದು ಅದು ಸ್ತ್ರೀಯ ಬಾಯಿಯ ಮುಖಾಂತರ ದೇಹ ಸೇರಬೇಕು. ಹಾಗೆಯೇ ಸ್ತ್ರೀಯ ಯೋನಿದ್ರವ ಕೂಡ ಪುರುಷ ಬಾಯಿಯಿಂದ ಸೇವಿಸಬೇಕು. ಅವನ ಪ್ರಕಾರ ಇವೆರಡು ದೇಹದ ಅತ್ಯಂತ ಬಲಿಷ್ಠ ಜೀವಸತ್ವ (Essence of body) ಈ ಜೀವ ಸತ್ವವನ್ನು ಕುಡಿಯುವುದರಿಂದ ಮತ್ತೆಂದೂ ಮರಣ ಸಂಭವಿಸದು. ಕಾರಣ ಅದು ಅಮೃತದೇಹದ ಸುಪ್ತದ ಒಳಗೆ ಚೇತನ ಆನಂದದಿಂದ ಉಕ್ಕುವ ದ್ರವವಾದ್ದರಿಂದ–ಆ ಅಮೃತ. ಸೇವನೆ ಸಾಧಕನಿಗೆ ಅಮೃತತ್ವವನ್ನು ಕೊಡುತ್ತದೆ ಎನ್ನುತ್ತಾನೆ. ಈ ಆಚರಣೆಗೆ ಪುನರಾವರ್ತನೆಗಳಿಲ್ಲವೇ? ಒಮ್ಮೆ ಸಂಭವಿಸಿದರೆ ಮುಗಿಯಿತೇ? ಒಂದು ಘಟಿತದಲ್ಲಿ ಅಮೃತತ್ವ ಸಂಭವಿಸಬೇಕೇ? ಎಂಬುದನ್ನು ಅಭಿನವ ವಿವರಿಸುವುದಿಲ್ಲ. ಒಂದು ಸೃಷ್ಟಿಗೆ ಕಾರಣವಾಗಬಲ್ಲ ಬಲಿಷ್ಠ ಜೀವಸತ್ವ ಇದಾದ್ದರಿಂದಲೇ ಅದನ್ನು ತಪೋಭಾಗವಾಗಿ ಕುಡಿಯುವ ಸಾಧಕನಿಗೂ ಅಮೃತತ್ವ ಸಾಧ್ಯ ಎಂಬುದು ಅವನ ಪ್ರತಿಪಾದನೆ. ಆದ್ದರಿಂದ ಇದು ಒಮ್ಮೆಗೇ ಸಂಭವಿಸಬೇಕಾದ ಘಟನೆ ಎಂದೇ ತಿಳಿಯಬಹುದು. ನಿರಂತರ ಪುನರಾವರ್ತನೆ ಎನ್ನುವುದು ಸಾಮಾನ್ಯ ದೇಹಸಂಭವ ಕ್ರಿಯೆಯಾಗುವುದರಿಂದ ಮತ್ತು ಪ್ರತೀ ಆಚರಣೆಯೂ ಅವನ ಹಂತ ಹಂತವಾಗಿ

ತೇರ್ಗಡೆಯನ್ನೇ ಅಪೇಕ್ಷಿಸುವುದರಿಂದ ಇದು ಒಮ್ಮೆಲೇ ನಡೆಯುವ ಘಟನೆ ಎಂದು ತೀರ್ಮಾನಿಸಬೇಕು.

ಇಷ್ಟು ಮಾತ್ರವಲ್ಲದೆ ಇಲ್ಲಿ ಆತ ಸಾಧಕನ ಅಮೃತತ್ವವನ್ನು ಮಾತ್ರ ಹೇಳಿ ಸ್ತ್ರೀಯ ಕುರಿತು ಮುಂದಿನ ಹಂತ, ಸಾಧನೆ ಇದರ ವಿವರವನ್ನು ತಿಳಿಸದೆ ಇರುವ ಒಂದು ಕುತೂಹಲದ ಸಂಗತಿ ಇದೆ. ಸಾಧಕನ ಸಾಧನೆಗೆ ಮೈಥುನದ ಮುಖಾಂತರ ಮುಂದೆ ನಡೆಯಲು ಸ್ತ್ರೀ ಇಲ್ಲಿ ನೆರವಾಗುತ್ತಾಳೆ ಹೊರತು ಅವಳು ಮುಂದೆ ಸಾಧನಾ ಪಥ ನಡೆಯುವ, ಪಂಚ'ಮ'ಕಾರಗಳನ್ನು ದಾಟುವ ಯಾವ ಸೂಚನೆಯೂ ಇಲ್ಲಿ ಕಾಣಿಸುವುದಿಲ್ಲ. ಮತ್ತು ಈ ಪಂಚ'ಮ'ಕಾರಗಳಲ್ಲಿ ಪುರುಷ ಸಾಧಕನ ವಿವರಗಳಿವೆಯೇ ಹೊರತು ಸ್ತ್ರೀ ಸಾಧಕರ ವಿವರ ಕಾಣಿಸುವುದಿಲ್ಲ.

ವೈದಿಕಧರ್ಮ, ಶಂಕರ, ಬುದ್ಧ ಇವರ ಕಾಲದಲ್ಲೂ ಕಾಣಿಸದ ಸ್ತ್ರೀ ಪ್ರವೇಶ ತಂತ್ರ ಮಾರ್ಗದಲ್ಲಿ ತುಂಬ ಪ್ರಚಾರವಾಯಿತು. ಒಂದು ದೃಷ್ಟಿಯಿಂದ ಈ ಕಾರಣಕ್ಕಾಗಿಯೇ ಮೈಲಿಗೆಯಾಯಿತು. ಕಾಲಾಂತರದಲ್ಲಿ ಅಪ್ರಸ್ತುತವೂ ಆಯಿತು. ಆ ಕಾಲಕ್ಕೆ ಸ್ತ್ರೀಯನ್ನು ಧರ್ಮಪಥ ನಡೆವಲ್ಲಿ ಮೈಲಿಗೆಯಲ್ಲದ ಪೂಜ್ಯವ್ಯಕ್ತಿ ಎಂದು ಪ್ರಚಾರ ತಂದ ಗರಿಮೆ ತಂತ್ರದ್ದು. ಆದರೆ ಇಲ್ಲಿಯೂ ಬೀಜ ಮತ್ತು ಕ್ಷೇತ್ರದ ಕಲ್ಪನೆಯಂತೆ ಒಂದು ಮಾಧ್ಯಮವಾಗಿ ಅವಳನ್ನು ಬಳಸುವ ರೀತಿ ಮೇಲ್ನೋಟಕ್ಕೆ ಕಾಣಿಸಬಹುದು.

ಆದರೆ ಇದರ ಹಿಂದೆ ಒಂದು ತುಂಬ ಅದ್ಭುತವಾದ ಸಂಗತಿಯಿದೆ. ಶಿವ ಮತ್ತು ಶಕ್ತಿ ಮಾತ್ರ ಇಲ್ಲಿ ಅಸ್ತಿತ್ವದಲ್ಲಿ ಇರುವ ತತ್ವಗಳು. ಶಿವನನ್ನು ಬಿಟ್ಟರೆ ಇರುವ ಇನ್ನೊಂದು ಶಕ್ತಿ ಅದು ಸ್ತ್ರೀ ಅಥವಾ ಅದೇ ಶಿವನ ಪ್ರತಿಬಿಂಬ. ಪುರುಷ ಎನ್ನುವುದು ಶಿವ ಆದರೆ ಶಕ್ತಿ ಎನ್ನುವುದು ಸ್ತ್ರೀ. ಪುರುಷ ಸ್ವಯಂ ಪೂರ್ಣ ಅವನಿಗೆ ಆಗಲಿಕ್ಕೆ ಏನೂ ಇಲ್ಲ. ಅಪೂರ್ಣ ಇರುವ ನಾವು ಆ ಪುರುಷನಾಗುವ ಹಂತವೇ ಸಾಧನಾಪಥದ ಸಾಕ್ಷಾತ್ಕಾರ. ಅದನ್ನು ಬಿಟ್ಟರೆ ಇನ್ನೊಂದು ಪುರುಷನ ಪ್ರತಿಬಿಂಬ ರೂಪವಾಗಿ ಇರುವುದು ಸ್ತ್ರೀ. ಅದು ಪ್ರಕೃತಿ. ಈ ಪ್ರಕೃತಿಗೂ ಏನೂ ಆಗಲಿಕ್ಕಿಲ್ಲ. ಅದು ಕೂಡ ತನ್ನಷ್ಟಕ್ಕೆ ಪರಿಪೂರ್ಣ. ಅದರಿಂದ ಇನ್ನಾರಿಗೋ ಏನೋ ಆಗಬೇಕಿದೆ ಮತ್ತು ಅದರ ಮುಖಾಂತರ ಇನ್ನೊಬ್ಬರು ಬೆಳೆಯಲಿಕ್ಕಿದೆ. ಪ್ರಕೃತಿ ತನ್ನಷ್ಟಕ್ಕೆ ತಾನು ಪೂರ್ಣ ಇರುವುದರಿಂದ ಆಗಲಿಕ್ಕೆ ಏನೂ ಇಲ್ಲ. ಆ ಪ್ರಕೃತಿಯೇ ಸ್ತ್ರೀ.

ಈಗ ಒಂದು ಪ್ರಶ್ನೆ. ಇಲ್ಲಿರುವ ಪುರುಷರು ಹಾಗಾದರೆ ಶಿವರು, ಮತ್ತು ಸ್ತ್ರೀಯರು ಪ್ರಕೃತಿ. ಇಬ್ಬರೂ ಪೂರ್ಣವೇ ಆದರಲ್ಲ? ತುಂಬ ಸ್ವಾರಸ್ಯದ ಸಂಗತಿಯೊಂದಿದೆ. ಜಗದಲ್ಲಿ ಪುರುಷ ಒಬ್ಬನೇ ಅವನು ಆಶಿವ. ಇದನ್ನು ಭಾಗವತ ಕೂಡ ಹೇಳುತ್ತದೆ. ಜಗದಲ್ಲಿ ಗಂಡಸು

ಎಂದು ಯಾರಾದರೂ ಇದ್ದರೆ ಅದು ಆ ಅವನು-ಭಗವಂತ ಮಾತ್ರ. ಹಾಗಾದರೆ ಉಳಿದವರೆಲ್ಲ? ಉಳಿದವರು ಎಲ್ಲರೂ ಸ್ತ್ರೀಯರು, ಅವರೆಲ್ಲರೂ ಆ ಪುರುಷನನ್ನು ಸೇರಲಿಕ್ಕಾಗಿ ಇದ್ದಾರೆ.

ಸ್ತ್ರೀಯರು ಆಗಲೇ ಹುಟ್ಟಿನಿಂದಲೇ ಶಕ್ತಿ ಅಥವಾ ಪ್ರಕೃತಿ. ಅವರು ಅವನ ಪ್ರತಿಬಿಂಬಗಳು. ಪ್ರತಿಬಿಂಬ ಕನ್ನಡಿ ಒಡೆದ ತಕ್ಷಣ ಬಿಂಬವೇ ಆಗುತ್ತದೆ. ಅದು ದೇಹ ನಿರ್ವಾಣ. ಅವರು ಅದಕ್ಕಾಗಿ ಸಾಧನೆ ಮಾಡಲಿಕ್ಕಿಲ್ಲ. ಅವರು ಹುಟ್ಟಿನಿಂದಲೇ ಪರಿಪೂರ್ಣರಾಗಿ, ಶಕ್ತಿಯಾಗಿ ಹುಟ್ಟಿದ್ದಾರೆ. ಆದರೆ ಈ ಲೋಕದ ಗಂಡಸರು ಅವರು ಶಿವನಾಗ ಬೇಕಾದರೆ ಮೊದಲು ಸ್ತ್ರೀಯರಾಗಬೇಕು. 'ಎನ್ನ ದೇವ ಚನ್ನಮಲ್ಲಿಕಾರ್ಜುನಂಗೆ ಜಗವೆಲ್ಲ ಹೆಣ್ಣು ನೋಡಾ' ಎಂದು ಅಕ್ಕಮಹಾದೇವಿ ಹೇಳಿದ್ದು ಇದೇ ಅರ್ಥದಲ್ಲಿ. ಅವನನ್ನು ನಾವು ಹೆಣ್ಣಾಗದೆ ಸೇರಲಾರೆವು. ಮೈಸೂರಿನ ಹಿರಿಯ ವಿದ್ವಾಂಸರಾದ ಶ್ರೀ ವರದಾಚಾರ್ಯರು, "ನಾವು ಇನ್ನೂ ಸ್ತ್ರೀಯರಾಗಿಲ್ಲ ತಾಯಿ, ನೀವು ಹುಟ್ಟಿನಿಂದ ಸ್ತ್ರೀಯರು. ಹಾಗಾಗಿ ಅವನಿಗೆ ಹತ್ತಿರದವರು, ನಾವು ಮೊದಲು ಸ್ತ್ರೀಯರಾಗಬೇಕು. ಆ ಬಳಿಕ ಅವನನ್ನು ಸೇರಲು ಅರ್ಹರಾಗುತ್ತೇವೆ" ಎಂದದ್ದು ಇದೇ ಅರ್ಥದಲ್ಲಿ.

ಇಡಿಯ ಕೃಷ್ಣ-ಗೋಪಿಕೆಯರ ಸಂಕೇತವೂ ಸಾರುವುದು ಇದನ್ನೇ. ಹೆಣ್ಣಿಗೆ ಹೆಣ್ಣಾಗಲು ಏನೂ ಇಲ್ಲ. ಕೃಷ್ಣನಿಗೆ ಅರ್ಪಿಸಲಿಕ್ಕೆ ಇದೆ. ಹಾಗೆಯೇ ಪುರುಷನಿಗೆ ಅರ್ಪಿಸಿಕೊಳ್ಳಲು ಬೇರೆದಾರಿಯಿಲ್ಲ. ಅವನು ಸ್ತ್ರೀಯಾಗಬೇಕು. ಏಕೆಂದರೆ ಆ ಪರಮ ಪುರುಷನಿಗೆ ತಮ್ಮನ್ನು ಅರ್ಪಿಸಿಕೊಳ್ಳಲು ಅವರು ಸ್ತ್ರೀಯರಾಗಬೇಕು. ಈ ಕಾರಣದಿಂದಲೇ ಎಲ್ಲ ದಾಸರು ತಾವು ಗೋಪಿಕೆಯರಾದದ್ದು. ತಮ್ಮನ್ನು ದೈಹಿಕವಾಗಿ ಅರ್ಪಿಸಿಕೊಂಡು ಕೃಷ್ಣನಿಗೆ ಗೆಳತಿಯಾದದ್ದು, ಬಳಿಕ ತಾಯಿಯಾದದ್ದು. ತಾಯಿಯಾಗುವುದೆಂದರೆ ಇನ್ನೊಂದನ್ನು ದಾಟಿಸಲು ಸಿದ್ಧವಾಗುವುದು ಎಂದು ಅರ್ಥ. ಆ ಕಾರಣಕ್ಕಾಗಿಯೇ ಪ್ರತೀ ಸಾಧಕ ಆರಂಭದಲ್ಲಿ ಸ್ತ್ರೀಯ ದೇಹ ಮಿಲನದಲ್ಲಿ ಅವಳನ್ನು ನಲ್ಲೆಯಾಗಿ ಆರಾಧಿಸಿ, ಹಂತ ಹಂತವಾಗಿ ಪೂಜಿಸುತ್ತಾ, ಕೊನೆಯ ಹಂತದಲ್ಲಿ ದೇವರ ಶಕ್ತಿಯನ್ನು ಅಥವಾ ತಾಯಿಯನ್ನು ಕಾಣುತ್ತಾನೆ.

ಆದ್ದರಿಂದಲೇ ಪುರುಷನಿಗೆ ಸ್ತ್ರೀಯಾಗದೆ ಮುಕ್ತಿಯಿಲ್ಲ. ಸ್ತ್ರೀ ತಾಯಿಯಾಗಿ ಪುರುಷ (ಭಗವಂತ)ನನ್ನು ಸೇರುತ್ತಾಳೆ. ಇದು ಒಂದು ಪರಿಪೂರ್ಣ ಚಕ್ರ. ಇದನ್ನು ತಂತ್ರಮಾರ್ಗ ವಿಧಿಬದ್ಧವಾಗಿ ಹೇಳಿದೆ. ಇದನ್ನು ಆಟವೆಂದು ತಿಳಿದ ಸಾಧಕರು ಪೂಜೆಯ ವೇಳೆಯಲ್ಲಿ ಮರಣಿಸಿದ್ದಾರೆ. ಇದು ನಾವು ತಿಳಿದ ದೈಹಿಕ ಬಾಂಧವ್ಯವಾದರೆ ನಿರ್ಗತಿಕ ಸ್ಥಿತಿಯೇ ಪರಿಣಾಮ. ಅಂಥ ಒಂದು ದುರಂತ ಮಂಡಲ ಪೂಜೆಯಲ್ಲಿ ಸತ್ಯಕಾಮರ ಸಹಪಾಠಿ, ತಂತ್ರ ಶಾಲೆಯ

ವಿದ್ಯಾರ್ಥಿ ವಾಮಾಚರಣನಿಗೆ ಒದಗಿ ಬರುತ್ತದೆ. ಅವನು ಸ್ತ್ರೀಯನ್ನು ಮೊದಲು ಪೂಜಿಸಬೇಕಾಗಿದ್ದ ವಿಧಿವಿಧಾನಗಳ ಹೊತ್ತಿಗೆ ಮಾನಸಿಕ ಮೋಹಕ್ಕೆ ಒಳಗಾದ ಪರಿಣಾಮ ಮಂಡಲದಲ್ಲಿಯೇ ಮೂರ್ಛೆ ಹೋಗುತ್ತಾನೆ. ತನ್ನ ಗೆಳೆಯ ಬಿದ್ದನೆಂಬ ಕಾರಣಕ್ಕೆ ಅವನನ್ನು ಎತ್ತಿ ನಡೆದ ಸತ್ಯಕಾಮರು ತಂತ್ರಶಾಲೆಯ ನಿರ್ಮೋಹವನ್ನು ಪಾಲಿಸಲಿಲ್ಲ ಎಂದು ಉಚ್ಚಾಟಿತರಾಗುತ್ತಾರೆ. [ವಿವರಗಳು ಪಂಚ'ಮ'ಗಳ ನಡುವೆ ಮತ್ತು ಕಪಿಲವಸ್ತು ಎರಡು ಕೃತಿಗಳಲ್ಲೂ ಇವೆ].

ಆದ್ದರಿಂದ ತಂತ್ರದ ಪ್ರತೀ ಅಭ್ಯಾಸವೂ ಒಂದು ಕಠಿಣ ಪ್ರಯೋಗ. ಅದು ದೇಹ ಮತ್ತು ಮನಸ್ಸು ಎರಡನ್ನು ಏಕಕಾಲದಲ್ಲಿ ವಿಕಸಕ್ಕೆ ಒಡ್ಡುತ್ತದೆ. ಆದ್ದರಿಂದ ಕುಲ ಆಚರಣೆಯ ಈ ಮಿಥುನವು ಒಂದು ಆಕರ್ಷಣೆ ಎಂದು ತಿಳಿದು ಬಂದವರು ಯಾರೂ ತಂತ್ರದ ಬೆಂಕಿಯಲ್ಲಿ ಸುಡದೆ ಹೋಗುವುದಿಲ್ಲ. ಅದನ್ನು ತುಂಬ ಅದ್ಭುತವಾಗಿ ಪರಿಪಾಲಿಸಿದವರು ಖಂಡಿತಕ್ಕೂ ಒಂದಿಲ್ಲ ಒಂದು ಪರಿವರ್ತನೆಯನ್ನು ಪಡೆದೇ ಪಡೆಯುತ್ತಾರೆ.

ತಂತ್ರಶಾಲೆಯ ಈ ಆಚರಣೆಯನ್ನೇ ರಜನೀಶ್ ಹೇಳಿದ್ದು. ಅವನು ಈ ಎಲ್ಲ ಆಚರಣೆಗಳನ್ನು ಹೇಳಿದ್ದರೂ ಅವನ ಈ ಆಚರಣೆಯೇ ಹೆಚ್ಚು ಪ್ರಚುರವಾಯಿತು. ಅಭಿನವನ ಕಾಲಕ್ಕೂ ಸುದ್ದಿ ಮಾಡಿ ವಿಶೇಷವಾದದ್ದು ಅವನ ಈ ಪ್ರಯೋಗವೇ. ಆದರೆ ರಜನೀಶ ಅದನ್ನು ಸಾರ್ವತ್ರಿಕಗೊಳಿಸುವ ಒಂದು ದುಸ್ಸಾಹಸಕ್ಕೆ ಕೈ ಹಾಕಿದ. ಅವನು ಸಂಭೋಗದ ಕುರಿತು ಪದೇ ಪದೇ ದೇಹಸುಖ ಅದರ ಪರಿಣಾಮವಲ್ಲ, ವಿಸರ್ಜನೆಯಿಲ್ಲದೆ ಸಂಭೋಗ ಸಾಧ್ಯ. ವಿಸರ್ಜನೆಯು ಸಂಭೋಗದ ತಕ್ಷಣ ಪರಿಣಾಮವಾದರೆ ಅದು ದೇಹ ಮಿಲನ, ಮುಂತಾದ ಮಾತುಗಳನ್ನು ಹೇಳುತ್ತಿದ್ದದ್ದು ಈ ಅರ್ಥದಲ್ಲೇ. ಮತ್ತು ಅದನ್ನು ಹೇಳಿದಷ್ಟು ಸುಲಭವಾಗಿ ಆಚರಣೆಗೆ ತರುವುದು ಸರಳವಲ್ಲ ಆದ್ದರಿಂದಲೇ ಅದು ತುಂಬ ದುರ್ಬಳಕೆಯಾಯಿತು. ರಜನೀಶ ಹೆಚ್ಚು ಅಪಾರ್ಥಿತನಾದ. ಕಾರಣ ಅದನ್ನು ಯಾರು ಯ್ಯಾರಿಗೂ ಮಾಡಿತೋರಿಸಿ, ಅನುಕರಿಸಿ ಅನುಭವಕ್ಕೆ ತರಬಹುದಾದ ಅಭ್ಯಾಸವಲ್ಲ ಅದು. ಅದಕ್ಕೆ ಒಂದು ಅದ್ಭುತವಾದ ಮನೋಭೂಮಿಕೆ ಮತ್ತು ದೈಹಿಕ ಮಾನಸಿಕ ಸ್ಥೈರ್ಯಗಳ ಪೂರ್ವ ತಯಾರಿಬೇಕು ಮತ್ತು ಅದು ಸಾರ್ವಜನಿಕ ಸ್ಥಳದಲ್ಲಿ ಸಾರ್ವತ್ರಿಕವಾಗಿ ಸಂಭವಿಸಲು ಸಾಧ್ಯವಿಲ್ಲ. ಏಕೆಂದರೆ ಏಕಾಂತ ಅದರ ಆಲಂಬನ ಮತ್ತು ಮಿಲನ ಅದರ ಉದ್ದೀಪನ. ಇವೆರಡೂ ರಜನೀಶನ ಆಚರಣೆಯಲ್ಲಿ ಇರಲಿಲ್ಲ. ಆ ಅರ್ಥದಲ್ಲಿ ಅವನು ಒಬ್ಬ failure.

ಸತ್ಯಕಾಮರು ಈ ಪಥವನ್ನು ನಡೆದ ಅನೇಕ ಸೂಚನೆಗಳನ್ನು ಪಂಚ'ಮ'ಗಳ ನಡುವೆ ಕೃತಿಯಲ್ಲಿ ನೀಡಿದ್ದಾರೆ. ಅವರು ವೈಶಾಲಿಯ ಜೊತೆಗೆ ಈ ಪ್ರಯೋಗಗಳನ್ನು ನಡೆದು ಬೆಳೆದ ವಿವರಗಳು ಆ ಕೃತಿಯಲ್ಲಿ ಇವೆ. ಮಾತ್ರವಲ್ಲದೆ ಅವರ ಕಾದಂಬರಿಯ ಅನೇಕ ಮಿಲನದ ವಿವರಗಳು ಯಾವ ಸೂಚನೆಯನ್ನು ಕೊಡದೆ ಅವರು 'ಪರಿವರ್ತಿತರಾದ ಅಂದರೆ ಅವರು ಒಂದು ಬೆಳಕಾದ ವಿವರವನ್ನು ನೀಡುತ್ತಾರೆ. ಆ ಬೆಳಕೇ ಈ ಪರಿವರ್ತನೆ ಅಥವಾ ಅಮೃತತ್ವ ಎಂಬುದು ತಂತ್ರ ಪಥದ ಹಿನ್ನೆಲೆಯಿಂದ ಅರ್ಥೈಸಿಕೊಳ್ಳಬಹುದು.

ಒಟ್ಟಿನಲ್ಲಿ ಧರ್ಮ ಪಥದಲ್ಲಿ ಸ್ತ್ರೀಯನ್ನು ಮಡಿ ಎಂದು ತುಂಬ ದೂರವಿಟ್ಟಿದ್ದ ಸಂಗತಿಗೆ ಬಹಳ ತದ್ವಿರುದ್ಧವಾಗಿ ಮತ್ತು ತೀರ ವಿಶೇಷ ರೀತಿಯಲ್ಲಿ ಅವಳಿಗೆ ಪ್ರವೇಶಿಕೆ ಕೊಟ್ಟದ್ದು ತಂತ್ರ. ತಂತ್ರ ಮಾರ್ಗ ಹೆಚ್ಚು ಕಾಲ ಉಳಿಯಲಿಲ್ಲ. ಮತ್ತು ಅದು ಈಗಲೂ ಕೆಲವು ರಹಸ್ಯ ವ್ಯಕ್ತಿಗಳ ತಪೋಮಾರ್ಗವಾಗಿ ಉಳಿದಿದೆ ಎನ್ನುವುದು ಬೇರೆ ಮಾತು. ಆದರೆ ತಂತ್ರ ಪಥದಲ್ಲಿ ಸ್ತ್ರೀಯನ್ನು ಅವಳ ಒಟ್ಟು ಬಲಸಾಧ್ಯತೆ ಮೂಲಕ ಕಾಣುವ ಪ್ರಯತ್ನವಿದೆ.

ಬಹುಶಃ ತಂತ್ರಮಾರ್ಗದಲ್ಲಿ ಸ್ತ್ರೀಯ ಪರಿಪೂರ್ಣತೆ ಪ್ರಕಟವಾದಷ್ಟು ಬೇರೆ ಯಾವುದೇ ಪಂಥದಲ್ಲೂ ಅದು ಇಲ್ಲವೇ ಇಲ್ಲ. ತಂತ್ರ ಒಂದು ದೃಷ್ಟಿಯಿಂದ ಸ್ತ್ರೀಯ ಬಾಲಿಶ್ಯವನ್ನು ಬೆಳಕಿಗೆ ತರುವ ಕಾರಣಕ್ಕೂ ಅಪ್ರಸ್ತುತ ಆಗಿರಲಿಕ್ಕೆ ಸಾಕು. ಒಂದು ದೃಷ್ಟಿಯಿಂದ ಸ್ತ್ರೀಯ ಶಕ್ತಿಯ ಮುಂದೆ ಪುರುಷನೂ ಸಣ್ಣವನಾಗಿ ಬಿಡುವ ಅಪಾಯ ಇಲ್ಲಿತ್ತು. ಈ ಹಿನ್ನೆಲೆಯಲ್ಲಿ ಸ್ತ್ರೀ ತನ್ನಷ್ಟಕ್ಕೆ ಪರಿಪೂರ್ಣಳು. ಅವಳಿಗೆ ಆಗಲಿಕ್ಕೆ ಏನೂ ಇಲ್ಲ. ಅವಳು ಶಿವನದೇ ಪ್ರತಿರೂಪವಾದ ಶಕ್ತಿ ಮತ್ತು ಶಿವನನ್ನು ಸೇರಲು ಹೊರಟಿರುವ ಅತ್ತ ಶಿವನೂ ಅಲ್ಲದ, ಶಕ್ತಿಯೂ ಅಲ್ಲದ ಗಂಡಸರನ್ನು ದಾಟಿಸಲಿಕ್ಕೆ ಬಂದವಳು ಎಂಬ ಸಂಗತಿಯೇ ತುಂಬ ವಿಶೇಷವಾದುದು ಮತ್ತು ವಿಶಿಷ್ಟವಾದದ್ದು. ತಂತ್ರ ಆ ಅರ್ಥದಲ್ಲಿಯೇ ಶಕ್ತಿಮಾರ್ಗ ಎಂದೇ ಪ್ರಚುರವಾಯಿತು. ಅದು ಅವಳನ್ನು ಬಿಟ್ಟಿಲ್ಲ. ಆ ಶಿವನನ್ನು ಸೇರಲು ಶಕ್ತಿಯಲ್ಲದೆ ಬೇರೆ ಮಾಧ್ಯಮವೂ ಇಲ್ಲ. ಹಾಗಾಗಿ ಇಲ್ಲಿಯ ಗಂಡಸು ಆ ಪುರುಷನನ್ನು ಸೇರಲು ಇವಳು ಸೇತುವೆ. ಇವಳಿಲ್ಲದವರು ನಡೆದಿಲ್ಲ. ಈ ಅರ್ಥದಲ್ಲೇ ಸತ್ಯಕಾಮರು 'ತಾಯಿಯನ್ನು ಕಾಣದ ಮಗು ತಂದೆಯನ್ನು ಕಂಡೀತು ಹೇಗೆ?' ಎಂದು ಪ್ರಶ್ನಿಸುತ್ತಿದ್ದದ್ದು. ಆ ಪುರುಷನನ್ನು ಬಲ್ಲವಳು ಈ ಪ್ರಕೃತಿ ಮಾತ್ರ. ಪ್ರಕೃತಿಯೂ ಅಲ್ಲದ ಪುರುಷನೂ ಅಲ್ಲದ ಗಂಡೆಂಬ ಜೀವಕ್ಕೆ ಆ ಪುರುಷನ ಸೇರಲು ಇರುವ ಏಕಮಾತ್ರ ಸಾಧನ ಈ ಪ್ರಕೃತಿ. ಅವಳಿಗೆ ನಮಿಸದವರು ಅವನನ್ನು ಸೇರಲಿಲ್ಲ. ಇದು ತಂತ್ರದ ನಂಬಿಕೆ. ಜೀವ ಬೆಳವಣಿಗೆಯ ಅರಿವು ಇರುವ ಎಲ್ಲರ ನಂಬಿಕೆಯೂ ಹೌದು.

7. ಕನ್ನಡ ಸಾಹಿತ್ಯ ಮತ್ತು ತಂತ್ರ

ಕನ್ನಡ ಸಾಹಿತ್ಯ ಪಂಪನಿಂದ ಆರಂಭವಾಗಿ ಇಂದಿನವರೆಗೆ ತುಂಬ ವೈವಿಧ್ಯಗಳಲ್ಲಿ ಬೆಳೆದಿದೆ. ಅದರ ಎಲ್ಲ ಒಳಹೊರಗನ್ನು ಮುಟ್ಟಿ ಬರೆಯುವುದು ಒಂದು ವಿಸ್ತೃತ ಪ್ರಬಂಧದವರೆಗಾದೀತು. ಆದರೆ ಅದಕ್ಕೊಂದು ಸ್ಥೂಲ ಸ್ಪರ್ಶ ನೀಡಿದರೆ ಒಟ್ಟು ಬೆಳವಣಿಗೆಯ ಸಣ್ಣ ಚರ್ಚೆಯೂ ಸಾಧ್ಯವಿದೆ.

ಪಂಪ ಭಾರತದಿಂದ ತೊಡಗಿ ರನ್ನ, ರಾಘವಾಂಕ ಅಥವಾ ಕುಮಾರವ್ಯಾಸನವರೆಗಿನ ಕನ್ನಡ ಸಾಹಿತ್ಯದಲ್ಲಿ ವಿಷಯದ ದೃಷ್ಟಿಯಿಂದ ಬಹಳ ಸಾಮ್ಯವಿದೆ. ಪಂಪನಿಂದ ತೊಡಗಿ ಕುಮಾರವ್ಯಾಸನವರೆಗೆ ಕನ್ನಡ ಸಾಹಿತ್ಯಕ್ಕೆ ಇರುವ ಒಟ್ಟು ಛಾಯೆ ಮಹಾಭಾರತ. ಆಧುನಿಕ ಎನಿಸುವವರೆಗೆ ಮುದ್ದಣ ಕೂಡ ರಾಮಾಯಣ ಪ್ರೇರಿತನೇ. ನಮ್ಮ ಎಲ್ಲ ಮಹಾಕಾವ್ಯಗಳು ದೃಷ್ಟಿಕೋನದಿಂದ ವಿಭಿನ್ನ ಕವಿಗಳ ಛಾಪನ್ನು ಪಡೆದಿದ್ದರೂ ವಸ್ತುವಿನ ದೃಷ್ಟಿಯಿಂದ ಮಹಾಭಾರತ ಮತ್ತು ರಾಮಾಯಣಗಳ ನೆರಳೇ.

ಸಂಸ್ಕೃತದಲ್ಲಿ ಏನನ್ನು ಯಾರು ಬರೆದರೂ ಅದು ಕಾಳಿದಾಸನ ಎಂಜಲು ಎಂಬ ಒಂದು ಮಾತಿದೆ. ಕನ್ನಡ ಸಾಹಿತ್ಯ ಅಥವಾ ಭಾರತೀಯ ಸಾಹಿತ್ಯಕ್ಕೆ ಒಂದು ಮಾತನ್ನು ನಾವು ಇದೇ ಅರ್ಥದಲ್ಲಿ ಹೇಳಬಹುದು. ಒಟ್ಟು ಭಾರತೀಯ ಎಲ್ಲ ಸಾಹಿತ್ಯ ರಚನೆಯ ಹಿಂದೆ ಇರುವುದು ಮಹಾಭಾರತ ಮತ್ತು ರಾಮಾಯಣಗಳ ಪ್ರೇರಣೆಯೇ. ಪ್ರೇಮಕಥೆಯಾದರೆ ಅದು ರಾಮಾಯಣದ ತಿರುಳನ್ನೇ ಅಲ್ಪ ಸ್ವಲ್ಪ ಮಾರ್ಪಾಟುಗಳೊಂದಿಗೆ ಹುಟ್ಟಿದ್ದು, ಸಾಮಾಜಿಕವಾದರೆ ಅದು ಮಹಾಭಾರತದ ದಾಯಾದಿ ಸಂಘರ್ಷ, ಅದರೊಳಗಿನ ರಾಜಕೀಯ ಇವುಗಳನ್ನು ಅನುಸರಿಸಿದ್ದೇ ಆಗಿದೆ. ಹೀಗೆ ಹೇಳಿದರೆ ತುಂಬ ಸರಳೀಕರಿಸಿದಂತೆ ಕಾಣಬಹುದು. ಆದರೆ ಇದು ಸತ್ಯ ಹೌದು. ಆದರೆ ಇದನ್ನು ಬಿಟ್ಟರೆ ಬೇರೆ ಸಾಹಿತ್ಯವೇ ರಚಿತವಾಗಿಲ್ಲವೇ ಎಂಬ ಪ್ರಶ್ನೆ ಇದೆ.

ಪಂಪನಿಂದ ತೊಡಗಿ ಆಧುನಿಕ ಸಾಹಿತ್ಯದ ಎಲ್ಲ ಜನಪ್ರಿಯ ಕಥೆ ಕಾದಂಬರಿ ಕುರಿತು ಮೇಲಿನ ಹೇಳಿಕೆ ಅನಿವಾರ್ಯ. ಆದರೆ ನಮ್ಮ ಶರಣ ಸಾಹಿತ್ಯ, ದಾಸ ಸಾಹಿತ್ಯ ಮತ್ತು ನವ್ಯಸಾಹಿತ್ಯಗಳ ಕುರಿತು ನಾವು ಬೇರೆಯೇ ರೀತಿಯಲ್ಲಿ ಯೋಚಿಸಬೇಕಾಗಿದೆ. ಕಾಲದಿಂದ ಕಾಲಕ್ಕೆ ಬರೆಹಗಳ ಹಿಂದೆ ಒಂದು ಪ್ರಭಾವಲಯ ಇದ್ದೇ ಇದೆ. ಆದರೆ ಅದರ ಜೊತೆಗೆ ಕೆಲಸ ಮಾಡುವ ಒಂದು ಅಂತರಂಗವೂ ಇದೆ. ಈ ಕಾರಣದಿಂದ ನಮ್ಮ ಬರೆಹಗಳಲ್ಲಿ ಇಂತಹ ಬದಲಾವಣೆಗಳು ಕಾಣಿಸುತ್ತವೆ.

ತುಂಬ ವರುಷಗಳ ಕಾಲ ಮಹಾಭಾರತ ರಾಮಾಯಣಗಳ ನೆರಳಿನಲ್ಲೇ ಬೆಳೆದ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಮಾರ್ಪಾಟನ್ನು ತಂದು ಕೊಟ್ಟವರು ಶರಣರು. ಶರಣ ಸಾಹಿತ್ಯ ಕಾವ್ಯ ಪ್ರಯೋಗ, ಶೈಲಿಯ ದೃಷ್ಟಿಯಿಂದ ಮಾತ್ರವಲ್ಲ ವಿಷಯ ವಸ್ತುವಿನ ದೃಷ್ಟಿಯಿಂದ ತುಂಬ ಹೊಸದು. ಕಾವ್ಯ ಪರಂಪರೆಯ ಆ ದೀರ್ಘತ್ವವನ್ನು ಥಟ್ಟಂತ ತುಂಡರಿಸಿ ಒಂದು ಚುಟುಕಿನ ಹಾಗೆ ಪದ್ಯದ ರಚನೆಯನ್ನು ವಾಕ್ ರೂಪದಲ್ಲಿ ಮಾಡಿ, ಆ ಪ್ರಮಾಣದಲ್ಲಿ ಚಳವಳಿಯ ಹಾಗೆ ಕಾವ್ಯಲೋಕಕ್ಕೂ ಲಗ್ಗೆಯಿಟ್ಟದ್ದು ವಚನಕಾಲದ ವಿಶೇಷ. ವಸ್ತುವಿನ ದೃಷ್ಟಿಯಿಂದ ಪೂರ್ತಿಯಾಗಿ ಸಾಮಾಜಿಕ, ರಾಜಕೀಯ, ತಲ್ಲಣಗಳನ್ನು ಅಂತರಂಗ ದರ್ಶನದ ಮೂಲಕ ನೋಡಿ, ಆ ಕಡೆಗೆ ನಡೆಸಿದವರು ಶರಣರು.

ಹತ್ತರಿಂದ ಹನ್ನೆರಡನೆಯ ಶತಮಾನದವರೆಗೆ ಹಾಗೆ ಬೆಳೆದ ಕನ್ನಡ ಸಾಹಿತ್ಯಕ್ಕೆ ಕಾವ್ಯದ ಜೊತೆಗೊಂದು ದರ್ಶನದ ಅಥವಾ ಕಾಣ್ಕೆಯ ಸಾಧ್ಯತೆ ಹುಟ್ಟಲು ಕಾರಣವಿದೆ. ವೇದಕಾಲದ ಒಂದು ಪ್ರಭಾವಲಯದಿಂದ ಶಂಕರರ ಅದ್ವೈತ ಸೃಷ್ಟಿಯ ಹೊಸದೊಂದು ವ್ಯಾಖ್ಯಾನ ಆರಂಭ ಆದ ಹಾಗೆ ಅವೆರಡಕ್ಕೂ ಪ್ರತಿಭಟನೆಯ ಹಾಗೆ ಬುದ್ಧ ಕಾಣಿಸಿಕೊಂಡ. ಅಲ್ಲಿಂದ ಕೆಲಕಾಲದವರೆಗೂ ಬುದ್ಧಧರ್ಮದ ಪ್ರಭಾವಲಯ ಸಮೃದ್ಧವಾಗಿಯೇ ಇತ್ತು. ಧರ್ಮಪಥದಲ್ಲೂ ದೋಷ, ಅಪ್ರಸ್ತುತೆಗಳು ಸಾಮಾನ್ಯ ಆ ಕಾರಣದಿಂದಲೇ ಬುದ್ಧ, ಶಂಕರ, ವೇದ ಈ ಮೂವರನ್ನು ಬೇರೆ ದಿಕ್ಕಿನಿಂದ ಯೋಚಿಸುವಂತೆ ಮಾಡುವ ತಂತ್ರಮಾರ್ಗ ಹುಟ್ಟಿಕೊಂಡಿತು. ಅಭಿನವಗುಪ್ತ ಒಬ್ಬ ಕಾಶ್ಮೀರಿ ಇದರ ಆರಂಭಿಕನಾದ. ಅವನು ಅದನ್ನು ಸಿದ್ಧಾಂತ ರೂಪದಲ್ಲಿ ಹೇಳುವ ಹೊತ್ತಿಗೆ ಶಂಕರ ಬುದ್ಧರು ಮತ್ತು ವೇದಕಾಲದ ಧರ್ಮ ಹೇಳದೆ ಬಿಟ್ಟಿದ್ದ ಮತ್ತು ನಿಷೇಧ ಹೇರಿದ್ದ ಸಂಗತಿಗಳನ್ನೇ ಪ್ರಮುಖವನ್ನಾಗಿ ಬಳಸಿಕೊಂಡು ತಂತ್ರಪಥವನ್ನು ಬೆಳೆಸಿದ.

ಜಾತಿಯ ದೃಷ್ಟಿಯಿಂದ ಮತ್ತು ಸ್ತ್ರೀಯರಿಂದ ಧರ್ಮವನ್ನು ದೂರವಿಟ್ಟಿದ್ದ ವೇದಕಾಲವು ಶಂಕರರಲ್ಲೂ ಹಾಗೇ ಉಳಿದು ಅಂತರಂಗ ದರ್ಶನಕ್ಕೆ ಸ್ತ್ರೀಯರನ್ನು ಬ್ರಾಹ್ಮಣೇತರರನ್ನು ದೂರವಿಟ್ಟಿತ್ತು. ಬಳಿಕ ಬಂದ ಬುದ್ಧ ಶಂಕರರೂ ವೇದಕ್ಕೂ ಹೊಸದಾದ ಸಂಗತಿಗಳನ್ನು ಹೇಳಿದರೂ ಸಮಾಜದ ಸ್ತ್ರೀಯನ್ನು ದೇವಪಥಕ್ಕೆ ಒಳಗೊಳಿಸುವ ಧೈರ್ಯ ಮಾಡಲಿಲ್ಲ. ಇಂಥ ಸಂದರ್ಭದಲ್ಲಿ ಅಭಿನವ ಅಂತರಂಗದ ದರ್ಶನ ಸಾಧ್ಯತೆಗೆ ಸ್ತ್ರೀಯನ್ನು ಬಳಸಿಕೊಳ್ಳಲೇ ಬೇಕಾದ ಹೊಸ ಸಾಧ್ಯತೆಗಳನ್ನು ಹೇಳಿ ಅವನು ತಂತ್ರಪಥದ ಮುಖಾಂತರ ಸ್ತ್ರೀಯನ್ನು ಬಹಳ ಪ್ರಮುಖವಾಗಿ ದೇವಮಾರ್ಗಕ್ಕೆ ಆಹ್ವಾನಿಸಿದ. ಇದರ ಪರಿಣಾಮವಾಗಿ ಸ್ತ್ರೀಯರನ್ನು

ದೇವಮಾರ್ಗದಲ್ಲಿ ದೂರವಿಟ್ಟಿದ್ದ ಮೈಲಿಗೆ ಎಂದು ಭಾವಿಸಿದ್ದ ಸಂಗತಿಗೆ ಹೊಸ ತಿರುವು ಬಂತು. [ಗಮನಿಸಿ ಪು.ಸಂ. ೧೩೦-೨೫೦, ಜಾನ್ ಆರ್. ಡುಪುಚೆ, ೨೦೦೩]

ತಂತ್ರ ಎಂದ ತಕ್ಷಣ ಹಲವು ಅಪಕಲ್ಪನೆಗಳು ಇವೆ. ತಂತ್ರವನ್ನು ಟೆಕ್ನಿಕ್ ಎಂಬ ಅರ್ಥದಲ್ಲಿ ರೂಢಿಯಲ್ಲಿ ಬಳಸುವ ಒಂದು ಕ್ರಮವಲ್ಲದೆ ತಂತ್ರ ಎಂದರೆ ಸರ್ವೇಸಾಮಾನ್ಯವಾಗಿ ಇರುವ ತಿಳುವಳಿಕೆ ಮಾಟ ಮಂತ್ರ, ಭೂತ ಪ್ರೇತ ಇದಕ್ಕೆ ಸಂಬಂಧಪಟ್ಟ ಮಾರ್ಗ ಎಂದು. ವಾಸ್ತವಿಕವಾಗಿ ತಂತ್ರ ಎನ್ನುವುದಕ್ಕೆ ಇದೂ ಒಂದು ಅರ್ಥವಿದೆ. ಅದು ಅಲ್ಲ ಎಂದಲ್ಲ. ಆದರೆ ಅದೇ ತಂತ್ರವಲ್ಲ ಎಂಬುದು ಇನ್ನೂ ಕೂಡ ಅನೇಕರಿಗೆ ತಿಳಿದಿಲ್ಲ. ಕಾರಣ ತಂತ್ರಮಾರ್ಗವು ಒಂದು ವಿಚಿತ್ರ ರೀತಿಯ ಮುಕ್ತ ಮಾರ್ಗ. ಯಾವುದೇ ವಿಧಿ ನಿಷೇಧಗಳನ್ನು ಒಪ್ಪದ, ಮಡಿ ಮೈಲಿಗೆಗಳನ್ನು ಅಂಟಿಸಿಕೊಳ್ಳದ, ಸುರ ಅಸುರ ಬೇಧಗಳಿಲ್ಲದ ಎಲ್ಲವನ್ನು ಸಮಾನ ಮನಸ್ಸಿನಿಂದ ಸ್ವೀಕರಿಸುತ್ತಾ ಸಾಗುವ ಮಾರ್ಗ. ಆದ್ದರಿಂದ ಇದು ಎಲ್ಲ ವಿದ್ಯೆಗಳನ್ನು ತನ್ನ ದಾರಿಯಲ್ಲಿ ಬೆಳೆವ ಮಾರ್ಗ ಎಂದೇ ನಂಬಿ ಸ್ವೀಕರಿಸುತ್ತದೆ. ತತ್ಕಾರಣವಾಗಿ ಮಾಟ ಮಂತ್ರ ಭೂತ ವಿದ್ಯೆಗಳನ್ನು ಕೂಡ ದೇವವಿದ್ಯೆಯಷ್ಟೇ ಗೌರವದಿಂದ, ದುಷ್ಟವಿದ್ಯೆ, ಅಸುರ ವಿದ್ಯೆ ಎಂದು ಭೇದ ಎಣಿಸದೆ, ಬೆಳವಣಿಗೆಯ ಕಾಲದಲ್ಲಿ ಕಲಿಯುತ್ತಾ ಮುಂದೆ ನಡೆಯುತ್ತದೆ. ಆದ್ದರಿಂದಲೇ ತಂತ್ರವಿದ್ಯೆ ಎಂದರೆ ಈ ವಿದ್ಯೆಗಳೇ ಎಂದೂ, ತಂತ್ರಮಾರ್ಗದಲ್ಲಿ ನಡೆವವನು ತಾಂತ್ರಿಕ ಎಂದೂ ಅರ್ಥ ಕಟ್ಟಲಾಯಿತು.

ಆದರೆ ವಾಸ್ತವಿಕ ಅಭಿನವಗುಪ್ತನು ಹೇಳುವ ತಂತ್ರಮಾರ್ಗ ನಮ್ಮನ್ನು ನಾವು ಎಲ್ಲ ಪರೀಕ್ಷೆಗಳಿಗೆ ಒಡ್ಡಿಕೊಂಡು, ಯಾವುದರಿಂದಲೂ ಅಂಟಿಸಿಕೊಳ್ಳದೆ ಬೆಳವಣಿಗೆಯ ಕಡೆಗೆ ನಡೆವ ಮಾರ್ಗ. ಸರ್ವವಿದ್ಯೆ, ಶಾಸ್ತ್ರಗಳನ್ನು ಒಂದೊಂದಾಗಿ ಕಲಿಯುತ್ತಾ ಬೆಳೆವ ನಡೆ. ಇದರ ಸೂಚನೆಗಳು ವೇದ ಉಪನಿಷುತ್ತುಗಳಲ್ಲಿ ಇದ್ದರೂ ಅದನ್ನೊಂದು ಶಾಸ್ತ್ರ ಪಥವಾಗಿ ಬರೆದು ನಡೆದವ ಅಭಿನವಗುಪ್ತ. ಇಂತಹ ಮಾರ್ಗವು ತುಂಬ ಪ್ರಚಲಿತವಾಗಿ ಬಳಕೆಗೆ ಬಂದದ್ದು ೯ನೆಯ ಶತಮಾನದ ಕೊನೆಯ ಭಾಗದಲ್ಲಿ, ಬೆಳೆವ ಹೊತ್ತಿಗೆ ಹತ್ತನೆಯ ಶತಮಾನದ ಆರಂಭ. ಅದರ ಹುಟ್ಟು ಬೆಳವಣಿಗೆ ಎಲ್ಲ ಉತ್ತರ ಭಾರತದಲ್ಲಿ. ಅದು ಆ ಬಳಿಕ ಕೆಲವೇ ವರ್ಷಗಳಲ್ಲಿ ಉತ್ತರ ಭಾರತದಲ್ಲೂ ಒಂದು ಪಂಥವಾಗಿ ಅಪ್ರಸ್ತುತವಾಯಿತು. ಮುಸ್ಲಿಮರ ಆಕ್ರಮಣ ಮತ್ತು ವೈಯುಕ್ತಿಕವಾಗಿ ಒಂದೂ ಧರ್ಮದಲ್ಲೇ ಇದ್ದ ಮಡಿವಂತಿಕೆ ಈ ಎಲ್ಲ ಕಾರಣಗಳಿಂದ ತಂತ್ರ ಅಷ್ಟು ಪ್ರಭಾವೀ ಜನಪ್ರಿಯ ಮಾರ್ಗವಾಗಿ ಬೆಳೆಯಲಿಲ್ಲ.

ಅದರ ಪ್ರಭಾವ 'ಕಾಶ್ಮೀರಿ ಶೈವಿಸಂ' ರೂಪದಲ್ಲಿಯೇ ಕರ್ನಾಟಕಕ್ಕೂ ಬರುವ ವೇಳೆಗೆ ಆಗಲೇ ೧೧ನೇ ಶತಮಾನದ ಕೊನೆಯಾಗಿರಬೇಕು. ಪಂಥದ ರೂಪದಲ್ಲಿ ತಂತ್ರ ಎಲ್ಲಿಯೂ ಬೆಳೆಯದಿದ್ದರೂ ಅಲ್ಲಿ ಇಲ್ಲಿ ವೈಯಕ್ತಿಕ ಸಾಧನೆಯ ಹಿನ್ನೆಲೆಯಲ್ಲಿ ಅದನ್ನು ಪಥವಾಗಿ ನಡೆದವರು ಇಂದಿಗೂ ಇದ್ದಾರೆ. ಆ ದೃಷ್ಟಿಯಲ್ಲಿ ಶರಣ ಚಳವಳಿಯ ಕಾಲಕ್ಕೆ ಒಟ್ಟು ಪುರಾಣ ಮಹಾಭಾರತಗಳ ಛಾಪು ಮಾಯವಾಗಿ ವ್ಯಕ್ತಿಯ ವೈಯಕ್ತಿಕ ಬೆಳವಣಿಗೆ ಮತ್ತು ಅಂತರಂಗ ಸಾಧನೆಯ ನಿಟ್ಟಿನಲ್ಲಿ ಈ ಪಥದ ಛಾಪು ಬೆಳೆಯಿತು. ಆದ್ದರಿಂದಲೇ ವಸ್ತುವಿನ ದೃಷ್ಟಿಯಿಂದ ಅದುವರೆಗೆ ಮಹತ್ತೆಂದು ಪರಿಗಣಿತವಾಗಿದ್ದ ವಿಷ್ಣು, ಕೃಷ್ಣ, ರಾಮರು ಮಾಯವಾಗಿ ಅಂತರಂಗ ಸಾಧನೆಯ ಶಿವಸಾಧ್ಯತೆಯೇ ಪ್ರಮುಖವಾದ ವಚನ ಸಾಹಿತ್ಯ ಬೆಳಕಿಗೆ ಬಂತು. ಅಲ್ಲಿಯವರೆಗೆ ವಸ್ತು, ವಿಷಯ ಶೈಲಿಗಳಲ್ಲಿ ಆ ಕಾರಣದಿಂದಲೇ ಮಾರ್ಪಾಟಾದುವು. ಒಂದು ವಿಶೇಷ ತಿರುವಿನ ಹಾಗೆ ಲಿಂಗ, ಶಿವ, ಶಕ್ತಿಯರ ನಡೆ ಇಲ್ಲಿ ಆರಂಭವಾಯಿತು.

ಅದರ ವೈಭವ ಶರಣರೊಂದಿಗೆ ಮುಗಿಯಿತೆಂದೇ ಹೇಳಬೇಕು. ಆ ಬಳಿಕದ ದಾಸಪಂಥ ಮತ್ತೆ ವಿಷಯದ ದೃಷ್ಟಿಯಿಂದ ಅಂತರಂಗ ಬೆಳವಣಿಗೆ, ಸಾಧನಾಪಥಕ್ಕೆ ಸಂಬಂಧ ಪಟ್ಟದ್ದೇ ಆದರೂ, ವಸ್ತುವಿನ ದೃಷ್ಟಿಯಿಂದ ಅದು ಮತ್ತೆ ಕೃಷ್ಣರಾಮರ, ಸೀತೆ ಸಾವಿತ್ರಿಯರ ಆದರ್ಶವನ್ನು ನಂಬಿತ್ತು. ಆದರೂ ಅಲ್ಲಲ್ಲಿ ಅಂತರಂಗ ಸಾಧನೆಯೂ ಮೇಳೈಸಿದ್ದರಿಂದ ವಸ್ತುವಿನೊಳಗೆ ಅದ್ಭುತವಾದ ಗೋಪ-ಗೋಪಿ ಲೀಲೆಗಳು ಕಾಣಿಸಿದವು. ಅಷ್ಟರಮಟ್ಟಿಗೆ ಮಡಿವಂತಿಕೆ ಕಡಿಮೆ ಆಯಿತೆಂದೇ ಹೇಳಬೇಕು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲೂ ಜನಪ್ರಿಯ ಎನಿಸುವ ಎಲ್ಲ ಸಾಹಿತ್ಯಗಳಲ್ಲೂ ಒಂದು ಪ್ರೀತಿ, (ರಾಮ-ಸೀತೆ), ಆ ಪ್ರೀತಿಗೆ ಅಡ್ಡಿಮಾಡುವ ಒಬ್ಬ ದುಷ್ಟ, ಕಡೆಗೆ ಅವನನ್ನು ಮೀರಿ ಬೆಳೆದು ಒಂದಾಗುವ ಪ್ರೇಮಿಗಳು ಮುಂತಾದ ಸುಖಾಂತ ರಾಮಾಯಣದ ಪ್ರೇಮ, ಇವು ಕಾದಂಬರಿ. ಸಿನೆಮಾ ಇಲ್ಲೆಲ್ಲ ಆವರಿಸಿ ಬಿಟ್ಟಿವೆ. ಅದಕ್ಕೂ ಮೀರಿ ಹೋದರೆ ಕುಟುಂಬ, ಕುಟುಂಬದ ಒಳಗೆ ಸಂಶಯ, ದ್ವೇಷದ ಕಿಚ್ಚು ಹಚ್ಚುವ ಮಾವ ಹೀಗೆ ಮಹಾಭಾರತಗಳ ಪುನರಣನ. ಇವಲ್ಲದೆ ಶಿವರಾಮಕಾರಂತ, ಕುವೆಂಪು ಮುಂತಾದವರಲ್ಲಿ ವಾಸ್ತವ ನೆಲೆಯಿಂದ ಹುಟ್ಟಿದ ಸಾಮಾಜಿಕ ಸ್ಥಿತಿಗಳ ಚಿತ್ರಣ ಒಂದು ಕಡೆಯಾದರೆ; ಅನಂತಮೂರ್ತಿ, ಲಂಕೇಶ್, ಚಿತ್ತಾಲರ ಬರೆಹಗಳು ತುಂಬ ಅಂತರಂಗದ, ಏಕವ್ಯಕ್ತಿ ಸಂಬಂಧಿ ಚಿತ್ರಣಗಳ ಕಡೆಗಿವೆ. ಇವುಗಳನ್ನು ತುಂಬ ಸ್ಥೂಲವಾಗಿ ವಿಭಜಿಸಬಹುದಾದ ವಿಭಾಗವಾದರೂ, ಎರಡು ಭಿನ್ನ ನಿಟ್ಟಿನಿಂದ ಹುಟ್ಟಿದ ಬರೆಹಗಳೆಂದೇ ಹೇಳಲಾಗುತ್ತದೆ.

ಒಂದು ದೃಷ್ಟಿಯಿಂದ ಒಟ್ಟು ಸಾಹಿತ್ಯ ಕಥನವನ್ನೇ ಜ್ಞಾನ ಸಾಹಿತ್ಯ ಮತ್ತು ದಾರ್ಶನಿಕ ಸಾಹಿತ್ಯ ಎಂದು ವಿಭಜಿಸುವುದು ಸೂಕ್ತ ಎಂದು ಕಾಣುತ್ತದೆ. ಪರಂಪರೆಗಳ ಒಟ್ಟು ಓದಿನಿಂದ ಹುಟ್ಟಿ ಬೆಳೆದ ಸಾಹಿತ್ಯಕ್ಕೆ ಜ್ಞಾನ ಸಾಹಿತ್ಯ ಎಂದೂ, ಅಂತರಂಗ ಬೆಳವಣಿಗೆಯ ಸಾಧ್ಯತೆಯನ್ನು ಹುಡುಕಿ ಬರೆದ ಸಾಹಿತ್ಯವನ್ನು ದಾರ್ಶನಿಕ ಸಾಹಿತ್ಯ ಎಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ಪಾರಂಪರಿಕ ಜ್ಞಾನವನ್ನು ಓದಿ ಅರಗಿಸಿಕೊಂಡು ಅದರ ಹಿನ್ನೆಲೆಯಲ್ಲೇ ಅಥವಾ ಆ ಪ್ರಭಾವಲಯದಲ್ಲಿ ಬೆಳೆದ ಎಲ್ಲ ಸಾಹಿತ್ಯವನ್ನು ಜ್ಞಾನಸಾಹಿತ್ಯದ ಪ್ರಭೇದದಲ್ಲಿ ಗುರುತಿಸಬಹುದು. ಆದರೆ ವ್ಯಕ್ತಿಯ ಆತ್ಮಶೋಧ, ಅಂತರಂಗದ ಸಾಧನೆ, ಮನೋಶೋಧ ಇವೆಲ್ಲವುಗಳನ್ನು ಒಳಗೊಂಡ ಸಾಹಿತ್ಯವನ್ನು ದಾರ್ಶನಿಕ ಸಾಹಿತ್ಯ ಎಂದು ಕರೆಯಬಹುದು.

ಇದು ತುಂಬ ಸರಳೀಕೃತ ವಿಂಗಡಣೆಯಂತೆ ಕಾಣುವ ಎಲ್ಲ ಸಾಧ್ಯತೆ ಇವೆ ಮತ್ತು ಹಾಗೆ ಮಾಡುವುದು ಅಸಮಂಜಸ ಕೂಡ ಎನ್ನುವುದು ಸರಿಯೇ. ಏಕೆಂದರೆ ಎಲ್ಲ ಪಾರಂಪರಿಕ ಪ್ರೇರಿತ ಸಾಹಿತ್ಯಗಳು ಒಂದೇ ತೆರನಾಗಿಲ್ಲ. ಅದರಲ್ಲೂ ವ್ಯಕ್ತಿ ವ್ಯಕ್ತಿಯ ಶೈಲಿ, ದೃಷ್ಟಿಕೋಣಗಳ ಕೆಲಸಗಳು ಇದ್ದೇ ಇವೆ. ಶರಣರನ್ನು, ಆಧುನಿಕ ಕಾದಂಬರಿಕಾರರನ್ನು ಒಂದೇ ನೆಲೆಯಿಂದ ನೋಡುವುದು ಅಸಾಧ್ಯದ ಮಾತು. ಹಾಗೆ ನೋಡಿದರೆ ಶರಣರ 'ನುಡಿದು ನಡೆಯದವನ... ಈ ಮಾತನ್ನು ಆಧುನಿಕ ಬರೆಹಕಾರರಿಗೆ ಹೇಳಲು ಸಾಧ್ಯವಿಲ್ಲ. ಬೇಂದ್ರೆಯಂಥ ಕವಿಗಳೇ ಕವಿತೆಗೆ ಅರ್ಥ ಕೇಳಿದಾಗ ಬರೆದವ ಅಂಬಿಕಾತನಯದತ್ತ, ಬೇಂದ್ರೆಗೆ ಗೊತ್ತಿಲ್ಲ' ಎಂದು ಪ್ರಾಮಾಣಿಕವಾಗಿ ಭೇದ ಒಪ್ಪಿಕೊಂಡವರು. ಆದ್ದರಿಂದ ದರ್ಶನಾಪಥದ ಛಾಪು ನವ್ಯದ ಬರೆಹಕಾರರಲ್ಲಿ ಇತ್ತು ಎನ್ನಬಹುದೇ ಹೊರತು ಅವರ ಸಾಹಿತ್ಯಕ್ಕೆ ದರ್ಶನ ಸಾಧ್ಯತೆ ಇತ್ತು ಎನ್ನುವುದು ಕಷ್ಟ. ಆದರೆ ವ್ಯಕ್ತಿಯ ವೈಯಕ್ತಿಕ ಅಂತರಂಗ ಶೋಧನೆಯೇ ಇವರ ವಸ್ತು ಮತ್ತು ವಿಷಯ ಎನ್ನುವ ಅರ್ಥದಲ್ಲಿ ಇದು ದರ್ಶನಪಥದ ಮೂಲದಿಂದ ಹೊರಟ ನಡೆ ಎನ್ನಲು ಅಡ್ಡಿಯಿಲ್ಲ.

ದರ್ಶನಪಥದ ಪೂರ್ಣ ಸಾಧ್ಯತೆಯನ್ನು ನುಡಿದು ನಡೆದ ವೀರಶೈವ ಚಳುವಳಿಯ ಪಥ ಒಂದು ಕಡೆಗಾದರೆ, ದಾಸಸಾಹಿತ್ಯವು ಅದರ ಸೆಳವಿನಲ್ಲಿ ಮುಂದುವರಿಯಿತು. ಆಧುನಿಕ ಸಾಹಿತ್ಯದ ವೇಳೆಗೆ ಕೆಲ ಕಾಲ ಅದರಲ್ಲೂ ವಿಶೇಷವಾಗಿ ನವ್ಯದ ಕಾಲಘಟ್ಟದಲ್ಲಿ ದರ್ಶನ ಪಥದ ಛಾಪಿನಲ್ಲಿ ವ್ಯಕ್ತಿಶೋಧ ಮುಂದುವರಿಯಿತು. ಅದನ್ನು ಬಿಟ್ಟರೆ ನುಡಿದು ನಡೆವ ಬರೆಹಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳವಾದುವು.

ಆಧುನಿಕ ಸಾಹಿತ್ಯದ ಇಂದಿನ ಕಾಲಘಟ್ಟದಲ್ಲಿ ತಂತ್ರವನ್ನು ಪುನಃ ಅಪಕಲ್ಪಿಸಿ ಮಾಟ ಮಂತ್ರದ ಅರ್ಥದಲ್ಲಿ ಬರೆದ ಕೆಲ ಜನಪ್ರಿಯ ಕಾದಂಬರಿಕಾರರು ಇದ್ದಾರೆ. ಇಂದಿರಾತನಯ,

ಕೌಂಡಿಣ್ಯ ಮುಂತಾದವರ ಹೆಸರನ್ನು ಆ ನಿಟ್ಟಿನಲ್ಲಿ ಹೇಳಬಹುದು. ಅಭ್ಯಾಸದ ದೃಷ್ಟಿಯಿಂದ, ಸಂಶೋಧನೆ ವಿಮರ್ಶೆಯ ಹಿನ್ನೆಲೆಯಲ್ಲಿ ತಂತ್ರವನ್ನು ಅಧ್ಯಯನ ಮಾಡಿದ ಎಸ್.ಕೆ. ರಾಮಚಂದ್ರರಾಯರು (ಸಾ.ಕೃ.) ರಾ. ಸತ್ಯನಾರಾಯಣ ಮತ್ತು ಆರ್.ಗಣೇಶ್ ಮುಂತಾದ ಕೆಲವು ಹೆಸರುಗಳನ್ನು ಉದಾಹರಿಸಬಹುದು. ಅಧ್ಯಯನವನ್ನು ಮೇಳವಿಸಿಕೊಂಡು ಜನಪ್ರಿಯವಾಗಿಯೂ ಓದಿಸಬಹುದಾದ ಸಾಧ್ಯತೆಯನ್ನು ಉಳಿಸಿಕೊಂಡು ರವಿಬೆಳಗೆರೆಯಂಥವರು ಮಾಟಗಾತಿಯಂತಹ ಕಾದಂಬರಿಯನ್ನು ಬರೆದಿದ್ದಾರೆ. ಆದರೆ ಇಲ್ಲಿ ಎಲ್ಲಿಯೂ ತಂತ್ರದಲ್ಲಿ ಅಭಿನವಗುಪ್ತ ಹೇಳಿದ ಸಂಗತಿಗಳ ಪ್ರಕಟಣೆಯಾಗಲೀ ಆಚರಣೆಯಾಗಲೀ ಕಾಣಿಸುವುದಿಲ್ಲ.

ತಂತ್ರ ಅಂದರೆ ಅಣುವೊಂದು ಪರಮಾಣುವಾಗುವ ನಡೆ ಮತ್ತು ಬೆಳವಣಿಗೆ ಹಾಗೆ ಬೆಳವಣಿಗೆಯಾಗಬೇಕಾದರೆ ಅವನು ನಡೆಯಬೇಕಾದ ದುರ್ಗಮ ಹಾದಿ, ಅಲ್ಲಿ ಅವನು ಗೆಲ್ಲಬೇಕಾದ ಎಲ್ಲ ಪರೀಕ್ಷೆ, ಇವುಗಳ ಜೊತೆಗೆ ವ್ಯಕ್ತಿಯು ತನ್ನ ದೇಹವನ್ನೇ ನಿಕಷಕ್ಕೆ ಒಡ್ಡಿ ಬೆಳೆಯಬೇಕಾದ ಕ್ರಮ. ಅದಕ್ಕೆ ಅವನು ಮಾಡಿಕೊಳ್ಳಬೇಕಾದ ತಯಾರಿ, ಮಂಡಲಪೂಜೆ, ಯೋನಿಪೂಜೆ ಮುಂತಾದ ಕಠಿಣ ಅಭ್ಯಾಸ ಸಾಧನೆಗಳ ಹಿನ್ನೆಲೆಯಲ್ಲಿ ತಂತ್ರವನ್ನು ನಡೆದು ನುಡಿದು ಬರೆದು ಹೋದವರ ಹೆಸರನ್ನು ಆಧುನಿಕ ಸಾಹಿತ್ಯದಲ್ಲಿ ಸತ್ಯಕಾಮರಿಗೆ ಮಾತ್ರ ಹೇಳಬಹುದು. ಅದಕ್ಕೆ ಅವರ ಪಂಚಮಗಳ ನಡುವೆ, ತಂತ್ರಯೋನಿ, ಕಪಿಲವಸ್ತು, ಅರ್ಧದಾರಿ, ಸ್ವತಂತ್ರ, ದೇವನ ಇನ್ನೊಂದು ಬಾಗಿಲು ಮುಂತಾದ ಅನುಭವ ಬರೆಹಗಳು ಮತ್ತು ಅಭಿನವ, ಅಶ್ವಘೋಷ, ವಿಜ್ಞಾನ ಭೈರವ ಮುಂತಾದ ಕಾದಂಬರಿಗಳು ಪ್ರಮಾಣ.

ತಂತ್ರ ಬಹಳ ಮುಖ್ಯವಾಗಿ ಹೇಳುವ ಯೋನಿಪೂಜೆ ಅಥವಾ ಇನ್ನಿತರ ವೈಯಕ್ತಿಕ ಸಾಧನಾ ಪಥದ ಸ್ತ್ರೀಸಂಬಂಧಿ ಮಂಡಲಪೂಜೆಗಳು ಇಂದಿಗೂ ಮೈಲಿಗೆಯ ಪಟ್ಟಿಯಲ್ಲೇ ಉಳಿದಿದೆ. ದೇವಪಥದಲ್ಲಿ ಇನ್ನೂ ಅದನ್ನು ಅನುಸರಿಸಿದವರು ವಿರಳ. ರಾಮಕೃಷ್ಣ ಪರಮಹಂಸರು ಶಾರದಾದೇವಿಯನ್ನು ಮಾತೆಯಾಗಿ ಕಂಡರು ಎಂಬಲ್ಲಿಗೆ ಅದು ಮುಕ್ತಾಯವಾಗುತ್ತದೆ. ಆದರೆ ತಾಯಿಯಾಗಿ ಕಾಣುವುದು ಎಂದರೆ ಏನು, ಅದು ತುಂಬ ಅಸಂಗತ, ಅಪ್ರಸ್ತುತ ಮತ್ತು ಅಪ್ರಾಯೋಗಿಕ ಎಂದು ಕೇವಲ ಥಿಯರಿಯ ಹಂತದಲ್ಲಿದ್ದರೆ ಯಾರಾದರೂ ಹೇಳಲು ಸಾಧ್ಯ. ಸಾದ್ಯಂತವಾಗಿ ಯೋನಿಪೂಜೆ ಮತ್ತು ಗಂಡು ಹೆಣ್ಣಿನ ಮಿಲನದಲ್ಲಿ ಇರುವ ಒಂದು ಹೊಸ ಸಾಧ್ಯತೆಯನ್ನು ಅಭಿನವ ವಿವರಿಸುತ್ತಾನೆ. ಅವನ ತಂತ್ರಾಲೋಕದಲ್ಲಿ, ಪರಸ್ಪರ ಅರ್ಹತೆಯುಳ್ಳ ಜೋಡಿಗಳು ಸಮಾನ ಮನಸ್ಪಂದನದಿಂದ ಮಂಡಲಪೂಜೆಯಲ್ಲಿ ಪಾಲ್ಗೊಂಡು ಒಂದಾಗುವ ವಿವರಣೆಯಿದೆ. ಆ ಒಂದಾಗುವಿಕೆ ದೈಹಿಕ

ಸುಖಕ್ಕೆ ಅಲ್ಲ, ಅದಕ್ಕಾಗಿ ಇರಬೇಕಾದ ಮೂಲಭೂತ ಅರ್ಹತೆಗಳೇನು, ಅವರು ಸಂಬಂಧಿಗಳಾಗಿರಬಾರದು. ಸೃಷ್ಟಿ ಅದರ ಉದ್ದೇಶವಲ್ಲ. ದೇಹಮಿಲನಕ್ಕೆ ಅದು ಕಾರಣವಲ್ಲ ಕೆಲವು ಸಂಧಿಗ್ಧ ಸಂಗತಿಗಳನ್ನು ಅಭಿನವ ವಿವರಿಸುತ್ತಾನೆ.

ಇಲ್ಲಿಯೇ ತಂತ್ರ ಬರೆಹ ಭಿನ್ನವಾಗುವುದು. ಅಕ್ಕ ಹೇಳುವ ಚನ್ನಮಲ್ಲಿಕಾರ್ಜುನ ಮಿಲನವನ್ನು ಆ ಕಾರಣಕ್ಕಾಗಿಯೇ ತುಂಬ ಬೇರೆ ಎಂದು ಅರ್ಥವಾಗುವುದು. ಅದಕ್ಕೆಂದೇ 'ಸಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ, ಒಜ್ಜೆ ಓಸರಿಸಿ ತಲೆಕೆಳಗಾದೆನವ್ವಾ' 'ಅಪ್ಪಿದಡೆ ಅಸ್ತಿಗಳು ನುಗ್ಗುನುಸಿಯಾಗುವಂತಿರ ಬೇಕು', ಎಚ್ಚಡೆ ಬಾಣಗರಿದೋರದಂತಿರಬೇಕು' ಎಂಬ ವಾಕ್ಯಗಳನ್ನು ಈ ಹಿನ್ನೆಲೆಯಲ್ಲಿಯೇ ತಿಳಿದು ಕೊಳ್ಳಬೇಕು. ಸತ್ಯಕಾಮರು ಅಕ್ಕಮಹಾದೇವಿಯನ್ನು ಸ್ವಯಂ ಭೂಭೈರವಿ ಎಂದು ಈ ಅರ್ಥದಲ್ಲೇ ಉದ್ಧರಿಸಿದ್ದು.

ಆದ್ದರಿಂದಲೇ ರಜನೀಶನ ಮುಕ್ತಕಾಮವನ್ನು ತಿಳಿಯಬೇಕಾದ ಬಗೆ ಬೇರೆ. ಅವನು ಹೇಳಿದ ಸಾಧನಾಪಥದ ಶೋಧ ಮುಂದುವರಿದರೆ ಅವನು ನಡೆದ ನಡೆ ನಮ್ಮ ನಿಮ್ಮಂಥ ಜನಸಾಮಾನ್ಯ ನಡೆಯಲ್ಲ. ಅವನು ಕನ್ನಡಿಗನಲ್ಲ ಎಂಬುದನ್ನು ಬಿಟ್ಟರೆ ತಂತ್ರ ಪಥದಲ್ಲಿ ಅಭಿನವನ ನಂತರ ಹಾಗೆ ಹೇಳಲಿಕ್ಕೆ ಇರುವ ಇನ್ನೊಂದು ಹೆಸರು ಅವನೇ. ಆದರೆ ಅವನು ಕನ್ನಡಿಗನಲ್ಲದ ಕಾರಣ ಮತ್ತು ಅವನ ಸಾಧನಾ ಮಾರ್ಗದಲ್ಲಿ ಹಲವು ದೋಷಗಳಿದ್ದವು ಎಂಬ ಕಾರಣಕ್ಕೆ ಮತ್ತು ಶಿಶುನಾಳ ಶರೀಫರಂಥವರು ರಹಸ್ಯವಾಗಿ ಉಳಿದ ಕಾರಣದಿಂದ ಕನ್ನಡ ಸಾಹಿತ್ಯದಲ್ಲಿ ಅಭಿನವ ಗುಪ್ತನಂತೆಯೇ ನಡೆದು ನಡೆಸಿ, ನುಡಿದು ಬರೆದು ಹೋದವರು ಸತ್ಯಕಾಮರು.

ಅವರ ಕಾದಂಬರಿಯಲ್ಲೂ ಸ್ತ್ರೀಪುರುಷ ಮಿಲನಗಳಿವೆ. ಅದರ ವಿವರಣೆ ಗಮನಿಸಬೇಕು ಅದು ತೊಡೆ, ಯೋನಿ, ಸ್ತನಗಳ ವರ್ಣನೆಯನ್ನು ಮಾಡುವುದಿಲ್ಲ. ಆ ಮಿಲನದಲ್ಲಿ ಒಂದು ಬೆಳಕಿನ ವಿವರಣೆಯಿದೆ. [ಗಮನಿಸಿ ಪು. ಸಂ. 5-11 ಅರ್ಧನಾರಿ; 2004) ಆ ಬಳಿಕ ಒಂದು ಪರಿವರ್ತನೆಯನ್ನು ಹೇಳುತ್ತದೆ. ಮಿಲನದ ಬಳಿಕದ ಆ ಬೆಳಕು, ಆ ಪರಿವರ್ತನೆಯನ್ನೇ ತಂತ್ರ ಹೇಳುವುದು. ಅದು ಏನು ಎಂತು ಎಂಬುದನ್ನು ತಂತ್ರ ಎಂದೂ ಗುಟ್ಟಾಗಿಯೇ ಇಟ್ಟಿದೆ. ಆ ರಹಸ್ಯ ಸಂಗತಿ. ಸತ್ಯಕಾಮರಿಗೆ ಅಭಿನವನಿಗೆ ಮಾತ್ರ ಗೊತ್ತು. ಪ್ರತೀ ಸಾಧನೆಯ ಸಾಧಕನಿಗೆ ಆರಂಭದಲ್ಲಿ ಸ್ತ್ರೀ ಸ್ತ್ರೀಯಾಗಿಯೇ ಇದ್ದು ಮಿಲನಾನಂತರ ತಾಯಿಯಾಗುವುದು ಈ ಸಂದರ್ಭದಲ್ಲೇ. ಅದಕ್ಕೆಂದೇ ಇದು ಪರಿವರ್ತನೆಯ ಮಿಲನ. ಬೆಳಕಿನ ಮಾರ್ಗ. ಇದನ್ನು ನಡೆದವರು ವಿರಳ. ಹಾಗೆ ನಡೆದರೂ ಗುರಿ ಮುಟ್ಟಿದವರು ಅಪರೂಪ. ಒಂದೊಮ್ಮೆ ಗುರಿ

ಮುಟ್ಟಿದರೆ ಅದು ಶಿವಶಕ್ತಿಯ ಮಿಲನ. ಅದಕ್ಕೆಂದೇ ಅದು ಕತ್ತಿಯಲಗಿನ ನಡೆ. ಇಂಥದೊಂದು ಸಾಧ್ಯತೆಯನ್ನು ಅಬಿನವ ಹೇಳಿದ. ಸತ್ಯಕಾಮರು ನಡೆದರು. ಅದನ್ನು ಅವರು ರಹಸ್ಯ ಸೂತ್ರದಲ್ಲಿಯೇ ಬರೆವಣಿಗೆಯಲ್ಲಿ ಮೂಡಿಸಿದ್ದಾರೆ. ಆ ದೃಷ್ಟಿಯಿಂದ ಅದು ಒಂದು ದರ್ಶನ ಕೂಡ, ದಾರ್ಶನಿಕ ಕಣ್ಣಿಲ್ಲದೆ ಅದು ಅರ್ಥವಾಗದು. ಅದು ಅರ್ಥವಾಗದವ ದಾರ್ಶನಿಕನೂ ಆಗಲಾರ. ಈ ಅರ್ಥದಲ್ಲಿ ಸತ್ಯಕಾಮರು ದಾರ್ಶನಿಕ ಸಾಹಿತಿ.

ಉತ್ತರಾರ್ಧ : ಸಮಾಗಮ

1. ಇಬ್ಬರು ಆಚಾರ್ಯರ ದೃಷ್ಟಿಯಲ್ಲಿ ತಂತ್ರಮಾರ್ಗ.

2. ಕುಂಡಲಿನೀ ಮತ್ತು ಶಕ್ತಿಪಾತದ ಕುರಿತು ರಜನೀಶ್ ಹಾಗೂ ಸತ್ಯಕಾಮ.

3. ರಜನೀಶ್ ಸತ್ಯಕಾಮರು ಕಂಡ ಗುರು–ಶಿಷ್ಯರು

4. ಆಚಾರ್ಯದ್ವಯರು ಕಂಡ ಕಾಮ, ಪ್ರೇಮ ಮತ್ತು ಸ್ತ್ರೀ.

5. ಸ್ವಪ್ನಮಂಜರಿ, ಸ್ವಪ್ನಶಾಸ್ತ್ರದ ಕುರಿತು ಕೆಲವು ಹೊಳಹುಗಳು ಮತ್ತು ರಜನೀಶ್ ಬಳಸುವ ವಿನೋದ (ಜೋಕ್ಸ್) ಹಾಗೂ ಕಥೆಗಳು.

ಉಪಸಂಹಾರ

1. ಇಬ್ಬರು ಆಚಾರ್ಯರ ದೃಷ್ಟಿಯಲ್ಲಿ ತಂತ್ರಮಾರ್ಗ

ಬದುಕನ್ನು ನಡೆಸುವ ಒಂದು ವಸ್ತು ಇದೆ. ಅದನ್ನು ಗಾಳಿ, ಆಮ್ಲಜನಕ, ಪ್ರಾಣ, ಪ್ರಾಣವಾಯು ಹೀಗೆ ಹಲವು ಹೆಸರಿನಿಂದ ಕರೆಯಲಾಗಿದೆ. ದೇಹ ತನ್ನಷ್ಟಕ್ಕೆ ಇರುವುದಿಲ್ಲ. ಅದಕ್ಕೆ ಒಂದು ಚೇತನ ಬೇಕು. ಈ ಚೇತನ ಒಳಗೆ ಇದೆ. ಅದು ನಮಗೆ ಕಾಣಿಸುವುದಿಲ್ಲ. ಅದಕ್ಕೆ ಜೀವಾತ್ಮ ಎಂದು ಹೆಸರು ಈ ಮುಂತಾದ ಮಾತುಗಳನ್ನು ನಾವು ಸರ್ವೇ ಸಾಮಾನ್ಯವಾಗಿ ಕೇಳಬಲ್ಲೆವು. ಇದನ್ನೇ ಚೈತನ್ಯದ ಪರಮಾವಸ್ಥೆಯೆಂಬ ಅರ್ಥದಲ್ಲಿ ಬ್ರಹ್ಮ ಎಂದೂ ಕರೆದವರಿದ್ದಾರೆ. ಆದರೆ ಇವು ನಮ್ಮ ಬ್ಯಾಹ್ಯೇಂದ್ರಿಯಗಳ ಅನುಭವಕ್ಕೆ ಕಾಣುವ ವಸ್ತುವಲ್ಲ. ಆದರೆ ನಾವು ಜೀವ ನಿಂತಿದೆ ಮತ್ತು ನಡೆದಿದೆ ಎಂಬುದನ್ನು ಗುರುತಿಸುವುದು ಅದರ ಉಸಿರಾಟದ ಮುಖಾಂತರ. ಅದು ಸ್ಪಷ್ಟವಾಗಿ ನಮ್ಮ ಅನುಭವಕ್ಕೆ ಬರುವ ಗಾಳಿ, ವಾಯು ಅಥವಾ ಪ್ರಾಣ ಎನಿಸಿಕೊಂಡಿದೆ. ಅದಕ್ಕೆಂದೇ ಉಪನಿಷತ್ತಿನ ಶಾಂತಿ ಮಂತ್ರದಲ್ಲಿ 'ನಮಸ್ತೇ ವಾಯೌ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ, ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ' ಎಂದು ನಮಿಸಿದೆ. ಕಣ್ಣಿಗೆ ಕಾಣುವ ಪ್ರತ್ಯಕ್ಷ ಬ್ರಹ್ಮ ನೀನೇ, ನೀನೇ ಎಂಬ ಪುನರಾವರ್ತಿತ ಗೌರವ ಮಂತ್ರ ಅದು.

ಇದನ್ನೇ ಸೇವಿಸಿ ಪ್ರತಿಯೊಬ್ಬನೂ ಬದುಕುತ್ತಿದ್ದಾನೆ. ಅದರಿಂದಲೇ ಅವನ ಅಸ್ತಿತ್ವದ ಇರುವಿಕೆ ಮತ್ತು ನಿರಾಕರಣೆ. ಆದರೂ ವ್ಯಕ್ತಿ ವ್ಯಕ್ತಿಯಿಂದ ಭಿನ್ನವೇ ಇದ್ದಾನೆ. ಅದಕ್ಕೆ ಹಲವು ಕಾರಣಗಳು ಇರಲಿಕ್ಕೆ ಸಾಕು. ಮೂಲತಃ ಪ್ರತೀ ವ್ಯಕ್ತಿಯ ಬೆಳವಣಿಗೆಯನ್ನು ಅವನ ಹುಟ್ಟಿನಿಂದ ಬಂದ ಜೀನ್ಸ್, ಸುತ್ತಮುತ್ತಲಿನ ಪರಿಸರ ಮತ್ತು ಅವನ ಜೀವಕ್ಕೇ ಇರುವ ಕೆಲವು ಸ್ವಭಾವಗಳು ನಿರ್ಣಯಿಸುತ್ತವೆ ಎನ್ನಲಾಗಿದೆ. ಇಂಥ ಜೀವ ತನ್ನ ಬೆಳವಣಿಗೆಯ ಸಂದರ್ಭದಲ್ಲಿ ಹಲವನ್ನು ಬೆಳವಣಿಗೆಯ ಮಾರ್ಗವಾಗಿ ಅನುಸರಿಸಿದಂತೆ ಕೆಲಜೀವಕ್ಕೆ ಆಧ್ಯಾತ್ಮವೇ ಅಂತಿಮ ಹುಡುಕಾಟದ ಹಾಗೆ ಒಂದು ಗುಣವಿರುತ್ತದೆ.

ಜೀವ ವಿಕಾಸದ ಹಂತದಲ್ಲಿ ಹೀಗೆ ಆಧ್ಯಾತ್ಮ ಪಥದಲ್ಲಿ ಅದು ನಡೆಯುವುದು ಅನಿವಾರ್ಯ ಕೂಡ. ಹೀಗೆ ಹೊರಟ ಜೀವವು ತನ್ನ ಗತಿಯನ್ನು ಬೇರೆ ಬೇರೆ ಪಥದ ಮೂಲಕ ಆಯ್ಕೆ ಮಾಡಿಕೊಳ್ಳಬಹುದು. ಅಂಥ ವಿವಿಧ ಪಥಗಳಲ್ಲಿ ಜ್ಞಾನಮಾರ್ಗ, ಕರ್ಮಮಾರ್ಗ ಮತ್ತು ಭಕ್ತಿಮಾರ್ಗ ಎಂದು ಮೂರು ಪಥಗಳನ್ನು ಗುರುತಿಸಲಾಗಿದೆ.

ಸತತ ಅಧ್ಯಯನ ಅಧ್ಯಾಪನ ಭಗವಂತನ ಕುರಿತಾಗಿ ಮಾಡಿ ಜ್ಞಾನ ಸಂಪಾದನೆ, ಜ್ಞಾನಾರ್ಜನೆಯನ್ನು ನಡೆಸುವುದು ಜ್ಞಾನಮಾರ್ಗ. ಇಲ್ಲಿ ದೇವರನ್ನು ಸ್ವತಃ ಅಧ್ಯಯನ ಅಧ್ಯಾಪನದ ಮೂಲಕವೇ ತಿಳಿಯುವ ಪ್ರಯತ್ನ ಬೇರೆ ಬೇರೆ ಹಿರಿಯರ ಬರೆಹ, ವೇದ ಪುರಾಣ ಮುಂತಾದ ಪೂರ್ವ ಋಷಿಗಳ ತಿಳಿವಳಿಕೆ, ಅದರ ವ್ಯಾಖ್ಯಾನ, ಜಿಜ್ಞಾಸೆ ಇವುಗಳನ್ನೇ ಇಲ್ಲಿಯ ಮೂಲ ಸೆಳಹುಗಳನ್ನಾಗಿ ನಂಬಲಾಗುತ್ತದೆ. ಜಿಜ್ಞಾಸೆ ವಿಮರ್ಶೆ ಜತೆಜತೆಗೆ ತಿಳುವಳಿಕೆಯ ವಿಸ್ತಾರ ಆ ಮೂಲಕ ವಿನಯ ಸೌಜನ್ಯಗಳನ್ನು ವಿಸ್ತರಿಸುವ ಜ್ಞಾನ ಮಾರ್ಗ ಒಂದು ದೃಷ್ಟಿಯಿಂದ ಓದಿನ ಮೂಲದ್ದು.

ಭಕ್ತಿ ಮಾರ್ಗವು ಒಂದನ್ನು ಸ್ಥಿರವಾಗಿ ನಂಬಿ, ಅದಕ್ಕೇ ಅರ್ಪಿಸಿ, ಅದನ್ನೇ ಧ್ಯಾನಿಸಿ ಅದರೊಳಗೇ ಮುಳುಗೇಳುವ ತನ್ಮಯತೆ. ಇಲ್ಲಿ ಪೂರ್ತಿಯಾಗಿ ಸಮರ್ಪಣೆ ಮತ್ತು ಸಂಕಲ್ಪವೇ ತಳಹದಿ. ಆ ಅದು ಒಂದು ವಿಶೇಷ ಕಾರಣದ ಆಸಕ್ತಿಯಾಗಿ ಯಾವುದೋ ಒಂದು ಕ್ಷಣದಲ್ಲಿ ಅಪರಿಮಿತವಾಗಿ ಆಕರ್ಷಿಸಿ ಅದಿಲ್ಲದೆ ಬದುಕಲಾಗದು ಎಂಬ ತಾದಾತ್ಮ್ಯದಲ್ಲಿ ಮುಳುಗಿಸಿ ಬಿಡುತ್ತದೆ. ಕಡೆಯವರೆಗೂ ಅದನ್ನೇ ಪೂಜಿಸಿ, ಒಲಿಸುವ, ಮತ್ತು ಆ ಮೂಲಕ ತನ್ನನ್ನು ಕೊಟ್ಟುಕೊಳ್ಳುವ, ತಾನಿಲ್ಲವಾಗುವ ಪರಮಭಕ್ತಿಗೆ ಜೀವಿ ಒಳಗಾಗುತ್ತಾನೆ.

ಕರ್ಮ ಮಾರ್ಗವು ಪೂರ್ತಿಯಾಗಿ ತಾನು ಮಾಡುವ ಕ್ರಿಯೆಗಳಲ್ಲಿ ಅವನನ್ನು ಕಾಣುವ, ಅವನಿಗಾಗಿಯೇ ಮಾಡುವ, ಮತ್ತು ಆ ಕ್ರಿಯೆಗಳನ್ನು ಅವನಿಗೆ ಅರ್ಪಿಸುವ ರೀತಿಯದು. ಒಂದು ದೃಷ್ಟಿಯಿಂದ ತನ್ನ ಎಲ್ಲ ಕೃತಿಗಳನ್ನು ಅವನದೆಂದೇ ನಂಬಿ ನಡೆವ ರೀತಿ. ಜತೆ ಜತೆಗೆ ತನ್ನನ್ನು ಎಂಥ ಪ್ರಯೋಗಕ್ಕೂ ಒಪ್ಪಿಸಿಕೊಳ್ಳಲು ಹಿಂದೆ ಮುಂದೆ ನೋಡದ ಹಠದ ದಾರಿ. ಕ್ರಿಯೆ ಎಲ್ಲವೂ ಅವನದು ಎಂದ ಮೇಲೆ ಯಾವ ಕ್ರಿಯೆಗೂ ಹಿಂಜರಿಯದ ಸಾಹಸೀ ಮಾರ್ಗ. ಕತ್ತಿಯಲಗಿನ ಮೇಲೆ ನಡೆವಂಥ ಎದೆಗಾರಿಕೆ ಇರಬೇಕಾದ್ದು. ಏಕೆಂದರೆ ಇಲ್ಲಿ ಮಾಲಿನ್ಯದ ಭಾವವೇ ಇಲ್ಲ. ಎಲ್ಲಕ್ಕು ಅವನ ಕುರಿತ ಪರಮ ಆಲಂಬನ. ಆದ್ದರಿಂದಲೇ ಇದರಲ್ಲಿ ಅಪಾಯಗಳು ಹೆಚ್ಚು. ಅದಕ್ಕೆ ಕರ್ಮ ಮಾರ್ಗವನ್ನು ಅನುಸರಿಸಿದಂತೆ ಸೂಚಿಸುವ ಮಂದಿಯೇ ಬಹಳ.

ತಂತ್ರಮಾರ್ಗವನ್ನು ಕರ್ಮಮಾರ್ಗ ಎಂದೇ ಹೇಳಬಹುದು. ತನ್ನ ಎಲ್ಲ ಕ್ರಿಯೆಗಳನ್ನು ಒರೆಗೆ ಹಚ್ಚಿ ಮಾಡುವ ಕ್ರಿಯೆಗಿಂತಲೂ ಅದರ ಭಾವಕ್ಕೆ ಒತ್ತುಕೊಟ್ಟು, ಪ್ರತಿಯೊಂದು ಸಾಹಸೀ ಕೆಲಸಗಳಿಗೂ ಹಿಂದೆ ಮುಂದೆ ನೋಡದೆ ನಡೆವ ಧೀರತೆ ಇಲ್ಲಿದೆ. ಅದರ ಹಿಂದಿರುವ ಮೂಲ ಸತ್ವ ಒಂದೇ ಅದು ಎಲ್ಲಕ್ಕೂ ಸಿದ್ಧವಾದ ಧೀರತೆ ಮತ್ತು ನಿರ್ಭೀತಿ, ಧೀರತೆ ಮತ್ತು ನಿರ್ಭೀತಿ ಅದರ ಅಂತಿಮ ಸಾಧ್ಯತೆಯೇ ಹೊರತು ಆರಂಭದಲ್ಲಿಯೇ ಸಾಧಕ ಧೀರ ಮತ್ತು

ನಿರ್ಭೀತನಿರುವುದಿಲ್ಲ. ಆದರೆ ಅಂಥದೊಂದು ಹಸಿವೆ ಇಲ್ಲದೆ ಈ ದಾರಿಗೆ ಪ್ರವೇಶ ಸಾಧ್ಯವೇ ಇಲ್ಲ. ಆ ಹಸಿವೆಯಿಂದ ಒಳಹೊಕ್ಕವನು ತಂತ್ರದ ಬಾಗಿಲಿನ ಮುಕ್ತಾಯದಲ್ಲಿ ಧೀರತೆ ಮತ್ತು ನಿರ್ಭೀತಿಯನ್ನು ಪಡೆದೇ ಹೊರಬರುತ್ತಾನೆ ಎಂಬುದು ತೀರ್ಮಾನ.

ರಜನೀಶ್ ಮತ್ತು ತಂತ್ರ ಪಥ :

ಜೀವ ಜೀವಕ್ಕೆ ಭೇದವಿರುವುದು ಅನುಭವದಿಂದಲೇ ಅರಿವಿಗೆ ಬಂದಿದೆ. ಹುಟ್ಟು, ಸ್ವಭಾವ, ಸಮಾಜ, ಸಮಾಜ ಎಂಬ ಮೂರು ಕಾರಣಗಳು ಖಂಡಿತಕ್ಕೂ ಪ್ರಭಾವ ಬೀರುತ್ತವೆ ನಿಜ. ನಾವು ತೆಗೆದುಕೊಳ್ಳುವ ಗಾಳಿಗೇ ನಮ್ಮ ಮೇಲೆ ತನ್ನ ಪರಿಣಾಮ ಬೀರುವ ಶಕ್ತಿ ಇದೆ ಎಂದ ಮೇಲೆ ಉಳಿದವು ಪ್ರಭಾವ ಬೀರದಿರುವುದು ಅಸಾಧ್ಯ. ಒಬ್ಬ ಕೆಟ್ಟವನ ಜತೆ ಒಂದು ರೀತಿ, ಒಂದು ಮರದ ಕೆಳಗೆ ಇನ್ನೊಂದು ರೀತಿ, ಆಸ್ಪತ್ರೆಯ ರೋಗಿಗಳ ಮಧ್ಯೆ ಮತ್ತೊಂದು ರೀತಿ ಅನುಭವ ಪಡೆಯುತ್ತೇವೆ. ಸೇವಿಸುವ ಗಾಳಿಯ ಸೂಕ್ಷ್ಮ ನೆಲೆಯಲ್ಲಿ ಇಂಥದೊಂದು ಸಾಧ್ಯತೆ ಇದೆ ಎನ್ನುವ ರಜನೀಶ್ ಕೂಡ ಗಾಳಿ ಬರೇ ಗಾಳಿಯಲ್ಲ ಅದು ಪ್ರಾಣ. ಅದಕ್ಕೆ ಇಂತಹ ವ್ಯತ್ಯಾಸ ಉಂಟಾಗುತ್ತದೆ ಎಂದು ಜರ್ಮನ್ ಮನಃಶಾಸ್ತ್ರಜ್ಞ ವಿಹೆಲ್ಮ್ ರಿಚ್ (wihelm Raich) ಎನ್ನುವವನ ಮಾತನ್ನು ಉದ್ಧರಿಸುತ್ತಾನೆ. 'Air is the material thing – but something suttle non-material is moving through it' (ಪು. 62, ವಿಜ್ಞಾನ ಭೈರವ ತಂತ್ರ, ಗೂಗಲ್ ಸರ್ಚ್ ಓಶೊ)

ಇಂಥ ವಾಯು ಅಥವಾ ಗಾಳಿಯ ಸೇವನೆಯಿಂದಲೇ ಎಲ್ಲವೂ ಬದುಕಿವೆ. ಆದರೆ ಮನುಷ್ಯ ಮಾತ್ರ ಇಲ್ಲಿ ತುಂಬ ಭಿನ್ನವಾದ ಒಂದು ಪ್ರಯತ್ನದಲ್ಲಿದ್ದಾನೆ. ಅದು ಸಹಜವೇ. ನಾವು ಒಂದು ಎಮ್ಮೆಗೋ ನಾಯಿಗೋ, ಎಮ್ಮೆಯಾಗು ನಾಯಿಯಾಗು ಎಂದು ಪಾಠ ಹೇಳುವುದಿಲ್ಲ. ಮನುಷ್ಯನಿಗೆ ಮಾತ್ರ ಆತ ಇನ್ನು ಪ್ರಾಣಿಯ ಅವಸ್ಥೆಯಲ್ಲೇ ಇದ್ದಾನೆ ಮನುಷ್ಯನಾಗಿಲ್ಲ ಎನ್ನುವ ಪ್ರಯೋಗವಿದೆ. ಮನುಷ್ಯನಿಗೆ ಮಾತ್ರ ಈ ಆಗುವ ಸಾಧ್ಯತೆ, ಪಶುಪಕ್ಷಿಗಳಲ್ಲಿ ಇಲ್ಲ. ಈ ಆಗುವ ಸಾಧ್ಯತೆಯು ಅವನ ನಿತ್ಯ ಚಟುವಟಿಕೆಯ ಹುಡುಕಾಟ. ಹೀಗೆ ಆಗುವ ಹೊತ್ತಿಗೆ ಕೆಲವರು ಎಂಜಿನಿಯರ್, ಕೆಲವರು ವೈದ್ಯ, ವಿಜ್ಞಾನಿ, ಕೃಷಿಕ, ಇನ್ನೇನೋ ಎಲ್ಲ ಆಗಿ ಸಂತೃಪ್ತರಾಗ ಬಹುದು. ನಿಜವಾಗಿಯೂ ಆಗುವ ಕ್ರಿಯೆ ಎನ್ನುವುದು ಅವರವರ ಆಯ್ಕೆ. ಆದರೆ ಮಹತ್ವದ ಸಂಗತಿ ಎಂದರೆ ಕೆಲ ಜೀವಿಗಳ ಒಳಗೆ ಮಾತ್ರ ಒಳಗೊಂದು ಆ ಅದೇ ಆಗುವ, ದೇವರಾಗುವ, ದೊಡ್ಡದು ಎನ್ನುವುದನ್ನು ಮುಟ್ಟುವ ನೋಡುವ ಹಸಿವು ಇರುತ್ತದೆ. ಬಹುಶಃ ಜೀವದ ಪರಮ ಆಗುವಿಕೆಯ ನಡೆ ಎಂದೇ ಜೀವ ವಿಕಾಸದಲ್ಲಿ ಅದನ್ನು ಗುರುತಿಸಬಹುದು.

ಇಂಥ ನಡೆಗೆ ದೇಹವನ್ನು ನಿರಾಕರಿಸಿ, ಭೌತಿಕ ಸಂಗತಿಗಳನ್ನು ತ್ಯಜಿಸಿ ನಡೆವ ಒಂದು ಕ್ರಮವಿದೆ. ಇದನ್ನು ತಂತ್ರಮಾರ್ಗ ಒಪ್ಪುವುದಿಲ್ಲ. ರಜನೀಶ್ ಇದನ್ನು ಎಲ್ಲಾ ಬರೆಹಗಳಲ್ಲೂ ಪ್ರಮುಖವಾಗಿ ಹೇಳಿದ್ದಾನೆ. ಅದರಲ್ಲೂ ಅವನ ಪ್ರಕಾರ ದೇಹವು ಒಂದು ಸುಂದರವಾದ ಮಂದಿರ. ಒಳಗೆ ಇರುವ ಭಗವಂತನನ್ನು ಸೇರಲು ಈ ಮಂದಿರವನ್ನು ಪೂಜನೀಯವಾಗಿ ಕಾಣಲೇಬೇಕು. ಮತ್ತು ಅದರ ಮುಖಾಂತರವೇ ಗರ್ಭಗುಡಿ ಪ್ರವೇಶಿಸುವ ಒಂದು ಸುಂದರ ನಡೆ ತಂತ್ರ.

ಆದರೆ ರಜನೀಶ್ ಈ ಜೀವಕ್ಕೆ ಇರುವ ಒಂದು ಅದ್ಭುತಶಕ್ತಿಯನ್ನು ಸ್ಪಷ್ಟಪಡಿಸುತ್ತಾನೆ. ಅದು ದೇಹವನ್ನು ಮೀರಿ ಬೆಳೆದ ಅದರ ಹಸಿವು. ಅದನ್ನು ಬಹಳ ಸುಂದರವಾಗಿ ನ್ಯೂಟನ್ ಲಾ ನೆಪದಲ್ಲಿ ಉಲ್ಲೇಖಿಸುವ ರಜನೀಶ್ ಸೇಬುಹಣ್ಣು ಮರದಿಂದ ಬಿತ್ತು ನ್ಯೂಟನ್ನಿನ ಲಾ ಹುಟ್ಟಿತು. ಅದನ್ನು ವಿಜ್ಞಾನ ಒಪ್ಪಿತು. ಆದರೆ ಯೋಗ ಅಥವಾ ಆಧ್ಯಾತ್ಮಕ್ಕೆ ಒಂದು ಪ್ರಶ್ನೆ ಇದೆ. ಈ ಸೇಬು ಮರದ ಮೇಲೆ ಹೋದದ್ದು ಹೇಗೆ ಮತ್ತು ಯಾಕೆ ? 'Something was pulling the apple upwords. What is that ignorance is under law of gravity .... Struggle alone will not be of much help, unless you enter a different law – the law of levitation. That is what SAMADHI is the does for levitation.... It is not that now you can control there is no need to control you simply cannot flow downwords now. As it was impossible before to rise upwords now it is impossible to flow downwords' (562; ವಿಜ್ಞಾನ ಭೈರವ ತಂತ್ರ, ಗೂಗಲ್ ಸರ್ಚ್ ಓಶೊ)

ಹೀಗೆ ಜೀವಕ್ಕೆ ಒಂದು ಮೇಲ್ಮುಖದ ನಡೆ ಇದೆ ಎಂಬ ಮೂಲ ತಿಳುವಳಿಕೆಯಿಂದ ಹೊರಡುವ ರಜನೀಶ್ ತಂತ್ರದ ಕುರಿತು ಮಾತ್ರ ಮಾತಾಡಿಲ್ಲ. ಅವನ ಸವಿಸ್ತಾರವಾದ ಉಪನ್ಯಾಸಗಳು ಪತಂಜಲಿಯ ಯೋಗ, ಬುದ್ಧಿಸಮ್, ಝೆನ್, ತಾವೊಯಿಸಮ್, ಸೂಫಿಯಿಸಮ್ ಉಪನಿಷತ್ತು, ಕಬೀರ ಹೀಗೆ ಒಂದು ನಿರ್ದಿಷ್ಟ ಸೀಮಾರೇಖೆಯಿಲ್ಲದೆ ನಿಸ್ಸೀಮವಾಗಿದೆ. ಅಂಥ ಎಲ್ಲ ರೀತಿಯ ತತ್ವಶಾಸ್ತ್ರವನ್ನು ಭೇದವಿಲ್ಲದೆ ಒಂದು 'ಇಸಂ'ಗೆ ತನ್ನನ್ನು ಕಟ್ಟುಹಾಕಿಕೊಳ್ಳದೆ ಆಯಾ ವಸ್ತು ವಿವೇಚನೆಯಲ್ಲಿ ತೊಡಗಿದ್ದು ರಜನೀಶ್ ವಿಶೇಷ. ಅವನ ತಂತ್ರದ ಕುರಿತ ವಿಚಾರಧಾರೆಗಳೂ ಅವನು ತಂತ್ರ ಪಥದವನೇ ಇರಬೇಕು ಎಂಬಷ್ಟು ನಮ್ಮನ್ನು ಮುಟ್ಟುತ್ತವೆ. ಆದರೆ ಅವನು ಹಾಗೆಯೇ ಬೇರೆ ಎಲ್ಲ ಪಂಥದ ಬಗ್ಗೆಯೂ ಮಾತಾಡಬಲ್ಲ ಎಂಬುದೇ ಅವನ ಭಿನ್ನತೆ. ಆದರೆ ಅವನು ತಂತ್ರದ ಕುರಿತು ಬರೆಯುವಾಗ 'Tantra is a play, because

Tantra is a highly evolved form of love, love is play (12, Tantra vision Vol-I, Google search osho)' ಎಂಬಷ್ಟೇ ಲೀಲೆಯಂತೆ ಅದರ ಒಳಗಾಗುತ್ತಾನೆ.

ಆದರೆ ಅವನು ತಾನು ಯಾವುದಕ್ಕೂ ಕಟ್ಟಿಕೊಂಡವನಲ್ಲ ಎಂಬುದನ್ನು ಹೇಳಲು, I am Christian, a hindu, a jew, a mohammadan because I am no one. And the truth once known, is beyond all scriptures. All scriptures indicate towords it, the scriptures are nothing but fingers pointing to the moon. Fingers may be millions, the moon is the same. Once you know, you have known all (P. No. 73 Tantra the supreme understanding, google search osho) ಎಂಬವರೆಗೆ ತಾನು ಎಲ್ಲವೂ ಹೌದು, ಯಾವುದೂ ಅಲ್ಲ ಎಂಬ ಧೋರಣೆಯ ಜೊತೆಗೆ ಒಂದನ್ನು ಕಂಡವನಿಗೆ ಎಲ್ಲವೂ ಸರಳ ಎಂಬ ಧಾರ್ಷ್ಟ್ಯವನ್ನೂ ವ್ಯಕ್ತಪಡಿಸುತ್ತಾನೆ. ಅವನ ಈ ರೀತಿಯ ಧೋರಣೆ ಕೇವಲ ಬೌದ್ಧಿಕ ಧಾರ್ಷ್ಟ್ಯವಲ್ಲ ಎಂಬುದು ಅವನ ಕೃತಿಗಳಲ್ಲಿ ವ್ಯಕ್ತವಾಗುತ್ತದೆ. ಅದು ಆಂತರಂಗಿಕ ಸೌಜನ್ಯ ಎಂದೇ ಅಹಂಕಾರ ಎನಿಸುವುದಿಲ್ಲ.

ಹೀಗೆ ಹೇಳುತ್ತಲೇ ರಜನೀಶ್ ತನ್ನ ಕುರಿತು ತಂತ್ರದ ಸಂಬಂಧವನ್ನು ವಿವರಿಸುವ ಒಂದು ವಿಶೇಷ ಮಾತನ್ನು ಇದೇ ಕೃತಿಯಲ್ಲಿ ವ್ಯಕ್ತಪಡಿಸುತ್ತಾನೆ... 'my attitude is that of tantra, it is not of Yoga. I talk on patanjali also for those who are not able to comprahend tantra otherwise, my attitude is that of tantra – every body is welcome... Tantra is for all. It is not for the chosen few. It become a path for the chosen few because every body wont understand it but it is not for the chosen few it is for all, it is for everybody who is ready to take the jump.' (84, Tantra the supreme understanding, google search osho)'

ರಜನೀಶ ಇಲ್ಲಿ ತಾನು ತಂತ್ರವನ್ನು ಒಪ್ಪಿಕೊಂಡ ಸೂಚನೆ ಕಾಣಿಸುತ್ತದೆ. ಅವನು ಹಾಗಾಗಿ ತಂತ್ರ ಪಥದವನೇ ಎಂಬ ತೀರ್ಮಾನಕ್ಕೂ ನಾವು ಬಂದು ಬಿಡಬಹುದು. ಆದರೆ ರಜನೀಶ್ ಅಷ್ಟು ಸುಲಭವಾಗಿ ತನ್ನನ್ನು ಯಾವುದಕ್ಕು ಕಟ್ಟಿ ಹಾಕಿಕೊಳ್ಳುವುದಿಲ್ಲ. ಅವನದೇ ಇದೇ ಕೃತಿಯ ಇನ್ನೊಂದು ಮಾತು, 'And when I talk about tantra I am so absorbed with it because that's how I am. I cannot be portrait, I am total whatsoever I do. If I am talking about tantra I am totally in it, then nothing matters, only tantra matters. That may give you a false impression I am not talking comparatively – nothing matters to me. Tantra is the highest, ultimate flower. This is because if I look totally at it, it is. When I am talking about yoga the same will

happen again, because I am total. This has nothing to do with yoga or tantra – it is my totality that bring to anything. When I bring it to yoga and patanjali I will be again saying this is the last (126, tantra the supreme understanding, google ... osho) ಹೀಗೆ ಗಾಬರಿ ಹುಟ್ಟಿಸಿ ಬಿಡುತ್ತಾನೆ. ಇದನ್ನು ಬುದ್ಧಿವಂತಿಕೆ, ಪಲಾಯನವಾದದ ಹಾಗೆ ಕಾಣುವ ಮಾತುಗಳೆಂದು ನಮ್ಮಂಥ ಬುದ್ಧಿಜೀವಿಗಳು, ಒಂದೇ ಇಸಂಗೆ ಕಟ್ಟಿಬಿದ್ದವರು ಆರಾಮಾಗಿ ಹೇಳಿ ಬಿಡಬಹುದು. ಅದಕ್ಕೆ ಅವನು ಆ ಜವಾಬ್ದಾರಿಯನ್ನು ಕೂಡ ಕೇಳುವವರ ಮೇಲೆ ಒಪ್ಪಿಸುತ್ತಾನೆ. 'so don't be distracted, always remember this is my totality and my quality that and bring to ti. If you can remember that you will be helped. Even through my paradoxical being you will not be confused. '(127, Tantra the supreme understanding, google search osho)

ಒಬ್ಬ ಗುರುವಾಗಿ ರಜನೀಶ್ ಇಂಥ ಅನೇಕ ವಿರೋಧಾಭಾಸಗಳನ್ನು ಮತ್ತು ಅದನ್ನು ಮೀರಿದ ವಿವರಗಳ ಸಾಧ್ಯತೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ನೀಡಿದ್ದಾನೆ. ಈ ದೃಷ್ಟಿಯಲ್ಲಿ ರಜನೀಶ್ ತಂತ್ರದ ಪ್ರಕಾರ, ಝೆನ್ ಪ್ರಕಾರ ಒಬ್ಬ ಒಳ್ಳೆಯ ಗುರುವೇ. ಶಿಷ್ಯನನ್ನು ತೀರ ಕಕ್ಕಾಬಿಕ್ಕಿ ಮಾಡಿ, ಅದಲ್ಲ ಇದು ಎಂಬೆಲ್ಲ ವಿರೋಧಾಭಾಸಗಳನ್ನು ಒಟ್ಟಿಗೆ ತೋರಿ ಶಿಷ್ಯನನ್ನು ತನ್ನ ದಾರಿ ತಾನೇ ಹುಡುಕುವುದಕ್ಕೆ ಪ್ರಚೋದಿಸುವವನಿಗೆ ಒಳ್ಳೆಯ ಗುರು ಎಂದೇ ಹೆಸರು. ಈ ಹಿನ್ನೆಲೆಯಲ್ಲಿ ತಂತ್ರದ ಕುರಿತ ಅವನ ಕಮಿಟ್‌ಮೆಂಟ್ ಹೇಗೆ ಮತ್ತು ಎಷ್ಟು ಎಂಬುದನ್ನು ಒಪ್ಪಿಕೊಂಡು, ಅಥವಾ ಅರ್ಥೈಸಿಕೊಂಡು ನಾವು ಅವನು ಹೇಳುವ ತಂತ್ರದ ಕುರಿತ ಬರೆಹಗಳನ್ನು ಮುಂದೆ ಗಮನಿಸಬಹುದು.

ತಂತ್ರವು ಪೂರ್ತಿ ದೇಹವನ್ನು ಅದ್ಭುತ ಸಾಧನ ಎಂದು ಒಪ್ಪಿ ನಡೆಯುವುದನ್ನೇ ರಜನೀಶ್ ಕೂಡ ಹೇಳುತ್ತಾನೆ. ಅದರ ಶಕ್ತಿ ಇರುವುದೇ ಈ ದೇಹದ ಮುಖಾಂತರವೇ ಆ ದೇಹದ ಆಚೆಗೆ ನಡೆಯುವುದರಲ್ಲಿ. (form ನಿಂದ formless) ಈ ಕುರಿತು ರಜನೀಶ್‌ನಿಗೆ ತಂತ್ರದ ಒಟ್ಟು ಮಾರ್ಗಕ್ರಮಣದ ಬಗ್ಗೆ ವಿಶೇಷ ಒಲವು ಇದೆ. ತಂತ್ರವು ದೇಹಕ್ಕೆ ಮತ್ತು ಕಾಮಕ್ಕೆ ಪ್ರಮುಖ ಸ್ಥಾನವನ್ನು ನೀಡಿದ್ದನ್ನು ಮತ್ತು ಆ ದೇಹದಲ್ಲೇ ಅದು ಗುರುತಿಸುವ 7 ಚಕ್ರಗಳನ್ನು ರಜನೀಶ್ ಒಪ್ಪಿಕೊಂಡೇ ಮತ್ತು ಇಷ್ಟಪಟ್ಟೇ ಮುಂದುವರಿಯುತ್ತಾನೆ. ದೇಹವನ್ನು ನಿರಾಕರಿಸುವ ವೈರಾಗ್ಯ ತತ್ತ್ವದಲ್ಲಿ ರಜನೀಶ್‌ಗೆ ಕೂಡ ಏನೂ ಒಲವಿಲ್ಲ. ಆದರೆ ರಜನೀಶ್ ಏಳೇ ಚಕ್ರ, ಇತ್ಯಾದಿ ತಾಂತ್ರಿಕ (Technical) ಸಂಗತಿಗಳಿಗೆ ಅಷ್ಟಾಗಿ ಮಹತ್ವ ಕೊಡುವುದಿಲ್ಲ. ಅವನೇ ಹೇಳುವಂತೆ ಬುದ್ಧಿಸ್ಟ್‌ಗೆ 9 ಚಕ್ರ, ಹಿಂದೂಗಳಿಗೆ 7 ಚಕ್ರ, ಟಿಬೇಟಿಯನ್ಸ್‌ಗೆ 13 ಚಕ್ರ. 'you can find your own also there is no need to study about these' (163, vijnana Bhairava Tantra,

google search osho) ಎಂಬಷ್ಟು ಅವುಗಳನ್ನು ಕಡೆಗಣಿಸಿ ಬಿಡುತ್ತಾನೆ. ಆದರೆ ಅದರ ಹಿಂದಿರುವ ಮೂಲ ಸ್ರೋತವನ್ನು ಒಪ್ಪಿಕೊಂಡೇ ಅವನು ತಂತ್ರದ ನಡೆಯನ್ನು ಅನುಮೋದಿಸುತ್ತಾನೆ. 'sex is the lowest chakra and sahasrara is the highest and between these two the sex energy moves.... when it is released from the sex centre you become a cause to reproduce some one else. When the same energy is released from the sahasrara from the head into the cosmos, you give new birth to yourself'. (287-288, vijnana bhairava tantra vol I, google search osho) ತಂತ್ರದ ಇಂಥ ದೇಹದ ಮುಖಾಂತರ ಬೆಳೆವ ಸಾಧ್ಯತೆಯ ಬಗ್ಗೆ ರಜನೀಶನ ಪೂರ್ಣ ಸಮ್ಮತಿಯಿದೆ. ಆದ್ದರಿಂದಲೇ ರಜನೀಶ್ ಇದು ತುಂಬ ಅವಶ್ಯವಾದ ತಿಳುವಳಿಕೆ ಮನುಷ್ಯನನ್ನು ಖಂಡಿತಕ್ಕೂ ದೇಹದಿಂದ ಬೇರ್ಪಡಿಸಿ ನೋಡಲಾಗದು. ಅಂಥ ಭೇದ ಮನುಷ್ಯನನ್ನು ಪೂರ್ತಿ ಕಕ್ಕಾಬಿಕ್ಕಿಯಾಗಿಸಿ ಗೊಂದಲಕ್ಕೆ ಒಳಗು ಮಾಡುತ್ತದೆ ಎಂಬ ಅಭಿಪ್ರಾಯವನ್ನು ತಳೆಯುತ್ತಾನೆ. ಹೀಗೆ ವಿರೋಧಗಳನ್ನು ದ್ವಂದ್ವಗಳನ್ನು ಹೇಳದೆ ಯಾವ ಭೇದವೂ ಇಲ್ಲದೆ ಎಲ್ಲವನ್ನು ಒಪ್ಪಿಕೊಳ್ಳುವ ಏಕೈಕ ಮಾರ್ಗ ಎಂಬ ಕುರಿತು ರಜನೀಶಗೆ ತಂತ್ರದ ಬಗ್ಗೆ ಅಪಾರ ಗೌರವವಿದೆ. ಅವನು ತನ್ನ ಬರೆಹದಲ್ಲಿ ದೇಹ ಮನಸ್ಸು ಬೇರೆ ಬೇರೆಯಲ್ಲ ಇದರಿಂದ ಅದು, ಅದರಿಂದ ಇದು ಪರಸ್ಪರ ಪ್ರಭಾವಿತ ಎಂಬುದಕ್ಕೆ ಮನಸ್ಸಿನಲ್ಲಿ ಕಾಮದ ಬಗ್ಗೆ ಯೋಚಿಸಿ, ದೇಹ ಅದಕ್ಕನುಗುಣವಾಗಿ ಉದ್ರೇಕಗೊಳ್ಳ ತೊಡಗುತ್ತದೆ. ನೀವು ಮದ್ಯ ಸೇವಿಸಿ, ಸೇವಿಸಿದ್ದು ದೇಹವಾದರೂ ಮನಸ್ಸು ಸ್ತಿಮಿತ ತಪ್ಪುತ್ತದೆ ಎಂಬಂತಹ ಅಪೂರ್ವ ಮತ್ತು ತುಂಬ ಒಪ್ಪಬಹುದಾದಂಥ ಉದಾಹರಣೆಗಳನ್ನು ಕೊಟ್ಟು ಈ ಭೇದ ಯಾವತ್ತೂ ಆರೋಗ್ಯಕರವಲ್ಲ ಎಂಬುದನ್ನು ಪದೇ ಪದೇ ಹೇಳುತ್ತಾನೆ. ಆ ಕಾರಣಕ್ಕಾಗಿಯೇ ತಂತ್ರವನ್ನು ಅವನು ತುಂಬ rebellious ಎಂದು ಕರೆಯುತ್ತಾನೆ. ಅವನ ಪ್ರಕಾರ ಅದು revelutionary ಅಲ್ಲ. ತಂತ್ರವನ್ನು ಅದರ ಕ್ರಾಂತಿಕಾರಿ ವಿಚಾರಗಳೊಂದಿಗೆ ಒಪ್ಪಲು ತನ್ನ ಕಾಲದ ಜನರ ಮನಃಸ್ಥಿತಿ ಇನ್ನೂ ಸಿದ್ಧವಾಗಿಲ್ಲ. ಆದರೆ ಇನ್ನು ಮುಂದಿನ ಕಾಲ ಮಾತ್ರ ತಂತ್ರದ್ದೇ ಆಗುತ್ತದೆ. ಅದು ಇನ್ನಷ್ಟು ಮುಂದುವರಿದ ಮನೋ ವಿಚಾರಗಳ ವಿಷಯವನ್ನು ಬೆಳೆಸಬಲ್ಲ ಕಾಲ. ತನ್ನ ಕಾಲದಿಂದ ಬಹಳ ಬಹಳ advanced ಆಗಿ ತಂತ್ರಪಥ ಇರುವುದರಿಂದ ಮುಂದಿನ ಜನಾಂಗಕ್ಕೆ ತಂತ್ರ ಹೆಚ್ಚು ಮಾದರಿ ಎಂಬಷ್ಟು ತಂತ್ರದ ಆಧುನಿಕ ಮನೋಭಾವವನ್ನು ರಜನೀಶ ಮೆಚ್ಚುತ್ತಾನೆ.

ತಂತ್ರ ಯವುದನ್ನೂ ಇಲ್ಲ ಎನ್ನದ ಸ್ವೀಕರಣಾ ಮನೋಭಾವವುಳ್ಳದ್ದು. ಆದ್ದರಿಂದ ಅದು ನಮ್ಮೊಳಗೆ ಒಂದು ಯುದ್ಧವನ್ನು ಸೃಷ್ಟಿಸುವುದಿಲ್ಲ. ಒಂದನ್ನು ಒಪ್ಪಿ ಇನ್ನೊಂದನ್ನು

ನಿರಾಕರಿಸುವುದರಿಂದ ಹೊರಗಣ ಸಂಗತಿಗೆ ಏನೂ ಆಗುವುದಿಲ್ಲ. ಅದು ಪೂರ್ತಿಯಾಗಿ ನಮ್ಮ ಒಳಗೇ ಒಂದು ವಿರೋಧವನ್ನು ಸೃಷ್ಟಿಸಿ ನಾವೇ ಗೊಂದಲದಲ್ಲಿ ಮುಳುಗುತ್ತೇವೆ. ಈ ನಮ್ಮೊಳಗಿನ ಯುದ್ಧ ನಮ್ಮನ್ನೇ ನಾಶ ಮಾಡುತ್ತದೆ ಎಂಬುದು ರಜನೀಶನ ಅಭಿಪ್ರಾಯಗಳಲ್ಲಿ ವ್ಯಕ್ತವಾಗಿದೆ.

ಅವನ ಪ್ರಕಾರ ಇಂಥ ವಿರೋಧವಿಲ್ಲದೆ ಇರುವುದರಿಂದ ತಂತ್ರ ತುಂಬ ಅಹಿಂಸಾತ್ಮಕ. ನಮ್ಮ ಒಳಗೆ ಬೇಕು, ಬೇಡಗಳಿದ್ದಾಗ ನಾವು ಒಳಗೊಳಗೆ ಒಂದು ಹಿಂಸೆಯನ್ನು ಮಾಡುತ್ತೇವೆ. ಆ ಹಿಂಸೆಯೂ ಇಲ್ಲಿ ಇಲ್ಲವಾದ್ದರಿಂದ ಇದು ನಮ್ಮ ಒಳಗನ್ನು ತುಂಬ ಮೃದು ಮಾರ್ದವ ಮತ್ತು ಕಠಿಣ, ಕಾಠೋರ್‍ಯಗಳೆಲ್ಲಕ್ಕೂ ಏಕಕಾಲದಲ್ಲಿ ಸಿದ್ಧಗೊಳಿಸುವ ರೀತಿಯದು ಎಂದು ಮೆಚ್ಚುತ್ತಾನೆ.

ರಜನೀಶ್ ತನ್ನ ಎಲ್ಲ ವಿವರಣೆಗಳಲ್ಲೂ ವೈಜ್ಞಾನಿಕ ತಳಹದಿಯನ್ನು ಗಟ್ಟಿಯಾಗಿ ಇರುವಂತೆ ನೋಡಿಕೊಂಡವ. ಆಧ್ಯಾತ್ಮದ ಮಾತೆಂದರೆ ಆತ್ಮ, ಪರಮಾತ್ಮ, ಮುಕ್ತಿ ಹೀಗೆ ಗಾಳಿಯ ಮಾತಾಗುವ ಯಾವ ವಿವರಣೆಯೂ ಇವನಲ್ಲಿ ನಮಗೆ ಸಿಗುವುದಿಲ್ಲ. ತಂತ್ರಕ್ಕೂ ಇಂಥದೇ 1+1=2 ಎಂಬಂಥ ಸ್ಪಷ್ಟ ವೈಜ್ಞಾನಿಕ ತಳಹದಿಯೇ ಇದೆ. ಅವೈಜ್ಞಾನಿಕವಾದ ಅಮೂರ್ತ ಕಲ್ಪನೆ ಅದರ ದಾರಿಯಲ್ಲ. ಹೀಗೆ ನಡೆದರೆ ಹೀಗೆ ಆಗಬೇಕು, ಹೀಗೆ ಮಾಡಿದ್ದಕ್ಕೆ ಇಂಥದೇ ಫಲ ಎಂಬಷ್ಟು accuracy ಮತ್ತು perfection ನ್ನು ನಂಬಿ ನಡೆವ ಪಥವೆಂದೇ ತಂತ್ರದ ಕುರಿತ ಅಭಿಪ್ರಾಯಗಳಿವೆ. ರಜನೀಶ್ ಕೂಡ ಅದರ ಈ ವೈಜ್ಞಾನಿಕತೆಯನ್ನು ಬಹಳ ಮುಖ್ಯವೆಂದೇ ಹೇಳುತ್ತಾನೆ. 'Tantra is not a philosophy. Rather it is a science, with one difference, science is objective tantra is subjective. But still it is a science and not a philosophy. Philosophy thinks about the truth, the unknown, the ultimate; science tries to discover what is… Tantra is not concerned with the ultimate. It is concerned with the immediate the here and now.' (435, vijnana Bhairava tantra, vol I, Google search osho)

ತಂತ್ರದ ಮದ್ಯಮಾಂಸಗಳ ಕುರಿತು ಅನೇಕರಿಗೆ ಇರುವ ಆಕರ್ಷಣೆಯ ಬಗ್ಗೆ ರಜನೀಶ್ ಅನುಕಂಪ ಪಡುತ್ತಾನೆ. ಅವನು ಆ ಎಲ್ಲ ಪ್ರಯೋಗಗಳು ನಿಮ್ಮ ಪರೀಕ್ಷೆಗಳಾಗಿ ಇವೆ. ಆಕರ್ಷಣೆಗೆ ಬಿದ್ದು ನೀವು ಹೋದರೆ ನೀವು ಬೇಗನೆ ಮೋಸ ಹೋಗುತ್ತೀರಿ ಎಂದು ಎಚ್ಚರಿಸುತ್ತಾನೆ. ಅಂಥ ಎಲ್ಲ ಮದ್ಯ ಮಾಂಸಗಳ ಮತ್ತು ಮಾನಿನಿಯ ಕುರಿತು ತಂತ್ರ ಯಾಕೆ ಗಮನವಿಟ್ಟಿದೆ ಎಂದರೆ ನಮ್ಮನ್ನು ಆಕರ್ಷಿಸಲು ಅಲ್ಲ ಬದಲಿಗೆ ಪರಿವರ್ತಿಸಲು ಎಂಬ

ಸಂಗತಿಯನ್ನೇ ಅನುಮೋದಿಸುತ್ತಾನೆ. ರಜನೀಶ್‌ಗೆ ಈ ಕುರಿತು ಯಾವುದೇ ಪೂರ್ವಗ್ರಹಗಳಿಲ್ಲ ಮತ್ತು ವಿರೋಧಗಳೂ ಇಲ್ಲ.

ತಂತ್ರ ಇಲ್ಲಿಯ ಅನುಭವಕ್ಕೆ ಬಾರದ ಸ್ವರ್ಗ, ನರಕ, ದೇವರು ಇತ್ಯಾದಿಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಅದು ನಮ್ಮ ಇರುವಿಕೆಯ ಕುರಿತು ಹೆಚ್ಚು ಕಾಳಜಿ ಹೊಂದಿದೆ. ತನ್ನನ್ನು ಬಿಟ್ಟು ಇನ್ನೊಂದು ಇಲ್ಲ ಎಂಬುದೇ ತಂತ್ರದ ನಂಬಿಕೆ. ಆದ್ದರಿಂದಲೇ ಅದು ನಮ್ಮ ಕುರಿತೇ ಯೋಚಿಸುತ್ತದೆ. 'So Tantra never asks whether there is God whether there is Moksha, liberation, or whether there is hell or heaven. Tantra asks basic questions about life, that is why there is much interest in sex and love. They are basic. You ARE through them you are part of them (453, vijnana bhairava tantra, vol I. google search osho)

ತಂತ್ರ ಹೀಗೆ ಎಲ್ಲವನ್ನು ಇಲ್ಲಿ, ಈ ಕ್ಷಣದಲ್ಲಿ ಅನುಭವಿಸುವ ವರ್ತಮಾನ ಮತ್ತು ಅದನ್ನು ಅನುಭವಿಸಬಲ್ಲ ಈ ದೇಹಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತದೆ. ಅಂಥ ಸಂದರ್ಭಗಳಲ್ಲಿ ತಂತ್ರ ಹೇಗೆ ನಮ್ಮ ನಿತ್ಯ ಜೀವನದ ರೂಢಿಯ ಕಾಮ, ರೂಢಿಯಲ್ಲಿರುವ ಮದ್ಯ ಮಾಂಸ, ಇತ್ಯಾದಿಗಳ ಬದಲಾವಣೆ ಮಾಡಿಕೊಳ್ಳುತ್ತದೆ ಎಂಬುದನ್ನು ರಜನೀಶ ಸೋದಾಹರಣವಾಗಿ ವಿವರಿಸಿ ಒಪ್ಪಿಕೊಳ್ಳುತ್ತಾನೆ. ಅವನು ಮಂತ್ರದ ಕುರಿತು ಅಪರೂಪಕ್ಕೆ ಒಂದೆರಡು ಸಂಗತಿಗಳನ್ನು ವಿಶದಪಡಿಸುತ್ತಾನೆಯೋ ಹೊರತು ಮುದ್ರೆ ಮಂತ್ರಗಳ ಬಗ್ಗೆ ಅತ್ಯಂತ ಕಟ್ಟುನಿಟ್ಟಿನ ಶಿಸ್ತು ಪಾಲನೆಗಳಲ್ಲಿ ಅವನಿಗೆ ನಂಬಿಕೆಯಿಲ್ಲ.

ಅವನ ಪ್ರಕಾರ ದೇಹವು ಮದ್ಯ, ಮಾಂಸ ಮತ್ತು ಮಾನಿನಿಗಳ ಮುಖಾಂತರ ಪರಿವರ್ತನೆಗೊಳ್ಳುವ ಸಂಗತಿ ಹೆಚ್ಚು ಪ್ರಮುಖವಾದದ್ದು. ಒಂದು ದೃಷ್ಟಿಯಿಂದ ಅದು ನಿಜಕೂಡ ಅವನಿಗೆ ತಂತ್ರದ ಇಂಥ ಮುಖಾಮುಖಿಯ ಸಂಗತಿಗಳಲ್ಲೇ ಹೆಚ್ಚು ನಂಬಿಕೆ. ಒಂದು ದೃಷ್ಟಿಯಿಂದ ಮಂತ್ರ ಮತ್ತು ಮುದ್ರೆಗಳಲ್ಲಿ ಇನ್ನೊಬ್ಬರ ಇನ್ನೊಂದರ ಆಲಂಬನ ಅಥವಾ ಮುಖಾಮುಖಿ ಇಲ್ಲದಿರುವುದೇ ಅದಕ್ಕೆ ಕಾರಣ ಇರಬಹುದು.

ತಂತ್ರದ ಇತಿಹಾಸದ ಬಗ್ಗೆಯೂ ಹೆಚ್ಚೇನೂ ತಲೆಕೆಡಿಸಿಕೊಳ್ಳದ ರಜನೀಶ್ ಆ ಕುರಿತು ತನ್ನದೇ ಆದ ಒಂದು ನಕ್ಷೆಯನ್ನು ನೀಡಿದ್ದಾನೆ.

ಬುದ್ಧಿಸಮ್ ಮೊದಲಿಗೆ ಇತ್ತು

ಬುದ್ಧ
↓
ಮಹಾಕಶ್ಯಪ
↓
ಬೋಧಿಧರ್ಮ
↓
ಝೆನ್ (ಚೀನಾ, ಕೊರಿಯಾ, ಜಪಾನ್)

ಬುದ್ಧ
↓
ರಾಹುಲ ಭದ್ರ (ಬುದ್ಧನ ಮಗ)
↓
ಶ್ರೀಕೀರ್ತಿ
↓
ಸಾರಹ (ಬುದ್ಧನ ೨೦೦ ವರ್ಷಗಳ ನಂತರದವ)
↓
ನಾಗಾರ್ಜುನ
↓
ತಂತ್ರ (ಟಿಬೆಟ್)

ಇಂಥದೊಂದು ಬೆಳವಣಿಗೆಯನ್ನು ರಜನೀಶ್ ಹೇಳುತ್ತಾನೆ.

ತಂತ್ರವನ್ನು ಅದರ ಜೀವಂತಿಕೆಗಾಗಿ ತುಂಬ ಇಷ್ಟ ಪಡುವ ರಜನೀಶ್ ವಿಜ್ಞಾನ ಒಂದು ಆಟೋಮಿಕ್ ಬಾಂಬ್ ಜತೆ ಕೆಲಸ ಮಾಡಿದರೆ ತಂತ್ರ ಸಂಪೂರ್ಣ ಜೀವಂತ ಬಾಂಬ್ ಜತೆ ಕೆಲಸ ಮಾಡುತ್ತದೆ. ಮತ್ತು ಅದು ಒಂದು Live wire ಅನ್ನು ಹಿಡಿದ ಹಾಗೆ ಅದರಲ್ಲಿ ನಡೆವವನಿಗೆ ತುಂಬ ಧೀರತೆ ಬೇಕು ಎಂಬ ಸಂಗತಿಯನ್ನೇ ಹೇಳುತ್ತಾನೆ. ಇವೆಲ್ಲದರ ನಡು ನಡುವೆ ತಾನು ತಂತ್ರವನ್ನು ತುಂಬ ಮೆಚ್ಚುವ ಸಂಗತಿಯೂ ಅವನ ಮಾತಿನಲ್ಲಿ ಇದೆ. Tantra is a new gestalt to look at life. And I have never come across anything more profound than Tantra (59, Tantra vision, volume I, google search osho) ತಂತ್ರ ದೇವರ ಕುರಿತು ಮಾತಾಡುವುದಿಲ್ಲ. ಆಗ ದೇವರನ್ನು ನಾಯಿಯ, ಕಲ್ಲಿನ ಕುದುರೆಯ ಅಥವಾ ಎಲ್ಲ ಜೀವ ಸಂತತಿಯ ಹಾಗೆ ಎಂದು ತಿಳಿಸಬೇಕಾಗುತ್ತದೆ. ಆ ಗೊಂದಲಕ್ಕೆ ತಂತ್ರ ಹೋಗುವುದಿಲ್ಲ. ಅದು ಕೇವಲ ಸತ್ಯದ ಕಡೆಗಷ್ಟೆ ಗಮನ ಸೆಳೆಯುತ್ತದೆ. ಅಲ್ಲಿ ಎಲ್ಲಿಯೂ ಯಾವ ದೇವರ ಅಥವಾ ಒಬ್ಬ ಮಧ್ಯವರ್ತಿಯ ಅವಶ್ಯಕತೆ ಬರುವುದಿಲ್ಲ. ಎಂದೇ ಅದು ಪೂರ್ತಿಯಾಗಿ ನಾವು ಮತ್ತು ಸತ್ಯದ ಕುರಿತು ಮಾತ್ರ ಯೋಚಿಸುವಂತೆ ಮಾಡುತ್ತದೆ ಎಂಬುದು ರಜನೀಶನ ನಿಲುವು. Tantra is a vision beyond time. (115) Tantra creates no priesthood Tantra says it is between you and truth itself and there should be no one standing between you and truth (117, Tantra vision vol. I google search osho)

ತಂತ್ರ ಸ್ವಾತಂತ್ರ್ಯ ಮತ್ತು ನಿರ್ಭೀತಿಯನ್ನು ಕೊಡುತ್ತದೆ ಎಂಬುದೇ ಅದರ ಉದ್ಘೋಷ. ಆ ನಿಟ್ಟಿನಲ್ಲಿ ರಜನೀಶ್ ಕೂಡ ತಂತ್ರವನ್ನು ಹಾಗೆಂದೇ ವಿಶ್ಲೇಷಿಸುತ್ತಾನೆ. ಅದನ್ನು ಸೇರುವುದು ಧೀರರಿಗೆ ಮಾತ್ರ ಸಾಧ್ಯ ಎಂಬುದರಲ್ಲೂ ಅವನ ಒಪ್ಪಿಗೆಯಿದೆ. ಧೀರರು ಅದನ್ನು ಸೇರಿ ಸ್ವತಂತ್ರ

ಮತ್ತು ನಿರ್ಭೀತರಾಗುವುದು ಏನು ದೊಡ್ಡದು? ದುರ್ಬಲರಿಗೆ ಇದರಿಂದ ಏನು ಉಪಯೋಗ ಎಂಬ ಪ್ರಶ್ನೆ ಉದಯಿಸದೆ ಇರದು.

ಧೀರತೆ ಎಂಬುದು ಕೇವಲ ಅಂತರಂಗದ ಹಸಿವೇ ಹೊರತು ಪ್ರವೇಶಿಸುವ ಹೊತ್ತಿಗೆ ವ್ಯಕ್ತಿ ದುರ್ಬಲನೇ ಇರುತ್ತಾನೆ. ಆದರೆ ಒಳಗೆ ಧೀರನಾಗುವ ಸಂಕಲ್ಪ ಮಾತ್ರ ಅಚಲವಾಗಿರಬೇಕು ಎಂಬುದಷ್ಟೇ ಇದರ ತಾತ್ಪರ್ಯ. ಧೀರನಾಗಲೇಬೇಕು ಎಂಬುದಕ್ಕೆ ದೃಢ ಸಂಕಲ್ಪ ಮಾಡಿಕೊಳ್ಳದವ ತನ್ನ ದೌರ್ಬಲ್ಯಗಳನ್ನು ಹರಿದು ಒಳಗಿರುವ ತನ್ನದೇ ಗಟ್ಟಿತನವನ್ನು ಹೊರಗೆ ತೆಗೆಯಲಾರ. ಆದ್ದರಿಂದ ಪ್ರವೇಶದ ಹಂತದಲ್ಲೇ ಅವನು ನಿರ್ಭೀತ ಮತ್ತು ಸ್ವತಂತ್ರನಾದ ಧೀರನಲ್ಲ. ಅದರ ಪ್ರವೇಶದಲ್ಲಿ ಅವನ ಒಳಗೆ ಅಂಥದೊಂದು ತೀವ್ರ ಹಂಬಲ ಮತ್ತು ಹಸಿವಿದ್ದು ಬರುವ ಎಲ್ಲ ಭೀತ ಮತ್ತು ನಮ್ಮನ್ನು ಪುಡಿ ಮಾಡಬಲ್ಲ ಸಂಗತಿಗಳಿಗೆ ಎದೆಕೊಟ್ಟು ನಿಲ್ಲುವೆನೆಂಬ ಧೀರತೆ ಬೇಕು. ಇದನ್ನು ತಂತ್ರ ಧೀರರ ದಾರಿ ಎಂದದ್ದು. ಇಂಥ ಕಾರಣಕ್ಕಾಗಿಯೇ ರಜನೀಶ್, 'It is walking on a tight rope ; it is one of the greatest of balances. It is not as easy as it appears, it needs very delicate awarness. It is a great harmony' ಎಂದಿದ್ದಾನೆ.

(41, Tantra vision vol II google search osho)

ತನ್ = ವಿಸ್ತಾರ ತ್ರ = ಪ್ರಜ್ಞೆ, ಇವೆರಡರ ಸಮಾಗಮವೇ ತಂತ್ರ. ಅಂದರೆ ಇದು ಪ್ರಜ್ಞೆಯ ವಿಸ್ತಾರ. ಇಂಥ ತಂತ್ರದಲ್ಲಿ ನಿಜಕ್ಕೂ ಪ್ರಜ್ಞೆಯ ವಿಸ್ತಾರವಿದೆ ಕೇವಲ ಘೋಷಣೆಯಲ್ಲ ಎಂಬುದನ್ನು ರಜನೀಶ್ ಒಪ್ಪಿಯೇ ತನ್ನ ಅಭಿಪ್ರಾಯಗಳನ್ನು ಹೇಳುತ್ತಾನೆ. 'Tantra trusts in your body Tantra trusts in your senses. Tantra trusts in your energy, Tantra trusts in you – in TOTO. Tantra does not deny anything, but transforms everything (20, Tantra vision vol II, google search osho) ಎಂಬ ರಜನೀಶನ ಮಾತನ್ನು ತಂತ್ರದ ಕುರಿತ ಸಾರಾಂಶ ಎನ್ನಬಹುದು. ಅವನ ಪ್ರಕಾರ ಮನುಷ್ಯ ಪ್ರಜ್ಞೆಯು ಕಂಡು ಹಿಡಿದ ಅತ್ಯಂತ ರೆಬೆಲ್ಲಿಯಸ್ ಸಾಧ್ಯತೆ ತಂತ್ರ. 'Wherever joy is God is that is the Tantra message in short (162, Tantra vision Vol II, google search osho) ಎಂಬ ಸಂದೇಶದೊಂದಿಗೆ ರಜನೀಶನ ತಂತ್ರದ ಅಭಿಪ್ರಾಯವನ್ನು ಮುಗಿಸಬಹುದು.

ಹೀಗೆ ರಜನೀಶನ ಎಲ್ಲ ಕೃತಿಗಳನ್ನು (ತಂತ್ರ ಸಂಬಂಧಿ) ಗಮನಿಸಿದರೆ ಅದರಲ್ಲಿ ಅವನಿಗೆ ತಂತ್ರದ ಕುರಿತು ವಿಶೇಷ ಗೌರವ ಮತ್ತು ಅದು ಹೆಚ್ಚು ವರ್ತಮಾನದ ಮತ್ತು ಮುಂದಿನ ಪೀಳಿಗೆಗೆ ಹೆಚ್ಚು ಹತ್ತಿರವಾಗಬಲ್ಲ ಒಂದು ಪಥ ಎಂಬ ಅಭಿಪ್ರಾಯ ಎದ್ದು ಕಾಣಿಸುತ್ತದೆ. ಸ್ವತಃ

ತಾನು ಆ ದಾರಿಯವನೋ ಅಲ್ಲವೋ, ಅದರ ಕುರಿತು ಹೇಳುವ ಹೊತ್ತಿಗೆ ತಾನೇ ಅದನ್ನು ನಡೆದಷ್ಟು. ಆ ಪಥದಲ್ಲಿ ತಾನು ಇನ್ನಿತರರನ್ನು ನಡೆಸುವಷ್ಟು ಸಮರ್ಥವಾಗಿ ಅದನ್ನು ಅನುಭವಿಸುತ್ತಾನೆ. ಇಂಥ ಒಂದು ಅದ್ಭುತ ಬೋಧನಾ ಸ್ಥಿತಿಯಲ್ಲಿಯೇ ರಜನೀಶ ತನ್ನನ್ನು ತಾನು ಭಿನ್ನವಾಗಿಸಿಕೊಳ್ಳುತ್ತಾನೆ.

ತಂತ್ರ ಕೂಡ ತನ್ನನ್ನು ಯಾವುದಕ್ಕೂ ಕಟ್ಟಿಹಾಕಿಕೊಳ್ಳದ, ಯಾವುದೇ ಮಿತಿ ಬಂಧನಗಳನ್ನು ಇಷ್ಟಪಡದ ಮತ್ತು ಒಂದರಲ್ಲಿ ತನ್ನನ್ನು ಗುರುತಿಸುವುದರಿಂದ ನಮ್ಮ ಬೆಳವಣಿಗೆ ಕುಂಠಿತವಾಗುತ್ತದೆ ಎಂಬುದನ್ನು ನಂಬುವ ಪಥವಾದ್ದರಿಂದ ರಜನೀಶ್ ಹೆಚ್ಚು ತಂತ್ರ ಸಾಧಕನ ಹಾಗೆಯೇ ಕಾಣಿಸುತ್ತಾನೆ. ತಾನು ಇದಲ್ಲ ಎಂದು ಕೊಂಡೇ ಅದೆಲ್ಲವನ್ನು ತಾನು ಸಂಪೂರ್ಣವಾಗಿ ಅನುಭವಿಸಬಲ್ಲ ಗುಣವೇ ತಂತ್ರದ್ದು. ಈ ಹಿನ್ನೆಲೆಯಲ್ಲಿ ರಜನೀಶನನ್ನು ತಂತ್ರ ಗುರು ಎಂದೇ ನಂಬಿದರೂ ಅದರ ಓಘಕ್ಕೆ ಅಡ್ಡಿಯಿಲ್ಲ. ಅವನು ಅದಲ್ಲದೆ ತಂತ್ರವನ್ನು ಒಪ್ಪಿ, ಓದಿ, ಬೆಳೆದನೆಂದರೂ ಅದು ತಂತ್ರಕ್ಕೆ ಅದ್ಭುತ ಸ್ವೀಕಾರಾರ್ಹವೇ. ಈ ದಿಶೆಯಲ್ಲಿ ರಜನೀಶ ತಂತ್ರಪಥಕ್ಕೆ ಒಂದು ಒಳ್ಳೆಯ ಉದಾಹರಣೆ ಅಥವಾ ಮಾದರಿ.

ಇಲ್ಲಿ ಇನ್ನೊಂದು ಮುಖ್ಯ ಸಂಗತಿಯನ್ನು ಗಮನಿಸಬೇಕು. ರಜನೀಶ್ ತಂತ್ರ ಪಥದ ಸಾಧ್ಯತೆ, ಅದರ ಬೆಳವಣಿಗೆಯಲ್ಲಿ ಇರುವ ಅರ್ಹತೆ, ಅಗತ್ಯಗಳ ವಿವರಣೆ ನೀಡುತ್ತಾನೆಯೇ ಹೊರತು ಯಾವುದೇ ತಂತ್ರಪಥದ ಪ್ರಾಯೋಗಿಕ ವಿವರ ಅಥವಾ ಪ್ರಾತ್ಯಕ್ಷಿಕ ವಿವರಣೆಯಿಲ್ಲ. ಅವನದು ತಾನು ದೂರದಿಂದ ನಿಂತು ತಂತ್ರಪಥದ ವಿಧಾನಗಳನ್ನು ವಿವರಿಸುವ, ವ್ಯಾಖ್ಯಾನಿಸುವ ಬೋಧನಾ ರೀತಿಯದ್ದು. ರಜನೀಶ್ ಇಲ್ಲಿ ವೈಯಕ್ತಿಕವಾಗಿ ಪಾಲ್ಗೊಂಡಿಲ್ಲ. ದೊಡ್ಡ ಅರಣ್ಯ ದಟ್ಟವಾಗಿ ನಿಂತಿದೆ. ನಾವು ನಿಧಾನಕ್ಕೆ ಅದರೊಳಗೆ ಕಾಲ್ನಡಿಗೆಯಲ್ಲಿ ಪ್ರವೇಶಿಸುತ್ತೇವೆ. ಆಗ ನಮ್ಮ ವಿವರಣೆಗೂ, ನಾವು ಮೇಲಿನಿಂದ ವಿಮಾನದ ಮೂಲಕ ಹಾರುತ್ತಿದ್ದೇವೆ, ನಮ್ಮ ಕಣ್ಣಿಗೊಂದು ಸೂಕ್ಷ್ಮದರ್ಶಕದ ಸಹಾಯ ಪಡೆದಿದ್ದೇವೆ, ನಿಧಾನ ಮೇಲಿನಿಂದ ಹಾರಾಡಿ ಸೂಕ್ಷ್ಮದರ್ಶಕದ ಮುಖಾಂತರ ಅದರ ಮೂಲೆ ಮೂಲೆಗಳ ವಿವರವನ್ನು ಕೊಡುವುದಕ್ಕೂ ಬಹಳ ವ್ಯತ್ಯಾಸವಿದೆ. ರಜನೀಶ ದಟ್ಟ ಅರಣ್ಯವನ್ನು ತೀರ ಎತ್ತರದಿಂದ ತನ್ನ ವಿಶೇಷ ದೃಷ್ಟಿ ತೆರೆದು ನೋಡಿ ನಮಗೆ ವಿವರಿಸಿದಂತೆ ಅವನ ಬರೆಹವಿದೆ. ಅದು ಮೈಕೈ ಎಲ್ಲ ಗಾಯ ಮಾಡಿಕೊಂಡು ಕಾಲುಗಳಿಗೆ ಮುಳ್ಳು ಒತ್ತಿಸಿಕೊಂಡು ರಕ್ತ ಹರಿಯಿಸಿದ ವ್ಯಥೆಯ ವಿವರಣೆಯಲ್ಲ. ಒಳಹೊಕ್ಕು ಆರಾಮಾಗಿ ಹೊರಗೆ ಬಂದ ಮೇಲ್ನೋಟಕನ ವೈಮಾನಿಕ ದೃಷ್ಟಿ. ಅದರಲ್ಲಿ ಹಾರಿಕೆಯ ಮನೋಧರ್ಮ ಇಲ್ಲ ಎಂಬುದು ಸ್ಪಷ್ಟ ಆದರೂ ಪಾಲ್ಗೊಳ್ಳುವಿಕೆ ಇಲ್ಲ ಎಂಬುದನ್ನು ಗಮನಿಸಬೇಕು.

ಹಾಗಂತ ರಜನೀಶ್ ತನ್ನ ಪ್ರಯೋಗಗಳಲ್ಲಿ ಬರೆದ ಇತರ ಬರೆಹಗಳಲ್ಲೂ ಅವನ ಮನೋಧರ್ಮದಲ್ಲಿ ತಂತ್ರ ಪಥದ ಗಾಢ ಪರಿಣಾಮವಿದೆ. ಅವನು ಎಲ್ಲ ವಿದ್ಯಾರ್ಥಿಗಳನ್ನು ನಡೆಸಿದ ರೀತಿ ಆಗ ಬಳಸುವ ಅನೇಕ ಮುದ್ರೆಯ ಚಿತ್ರಗಳು ಇದನ್ನು ಸಾಬೀತು ಪಡಿಸುತ್ತವೆ. ಆದರೆ ತಂತ್ರ ಹೇಳುವ ನಿಗೂಢ, ರಹಸ್ಯ ಮತ್ತು ಏಕಾಂತದಲ್ಲಿ ಈ ಎಲ್ಲ ಸಂಗತಿಗಳು ನಡೆಯಬೇಕು ಎಂಬ ಆಧ್ಯಾತ್ಮ ಪಥದ ವ್ಯತಿರಿಕ್ತ ರೀತಿಯನ್ನು ಇವನ ನಡೆಯಲ್ಲಿ ಗಮನಿಸಬಹುದು. ಕಾಲದಿಂದ ಕಾಲಕ್ಕೆ ಪಥದಲ್ಲಿ ನಮಗೆ ಬೇಕಾದ ಮಾರ್ಪಾಟು ಮಾಡಿಕೊಳ್ಳಬಹುದು ಎಂಬ ಕ್ರಾಂತಿಕಾರಿ ಮನೋಧರ್ಮ ತಂತ್ರಕ್ಕೂ ಇದೆ. ಈ ಹಿನ್ನೆಲೆಯಲ್ಲಿ ತಂತ್ರ ಪಥಕ್ಕೆ ಅವನು ಮಾಡಿಕೊಂಡ ಮಾರ್ಪಾಟು ಸ್ವೀಕಾರಾರ್ಹವೇ. ಆ ದೃಷ್ಟಿಯಲ್ಲಿ ಅವನದು ಇದುವರೆಗೆ ನಾವು ಗುರುತಿಸಿದ ತಂತ್ರ ಪಥಕ್ಕೆ ಒಂದು ಹೊಸ ಸ್ವರೂಪ ಅಥವಾ ಹೊಸ ಪ್ರಯೋಗ ಎಂದೇ ಭಾವಿಸಬೇಕು.

ಸತ್ಯಕಾಮರು ಮತ್ತು ತಂತ್ರ : ಬಹುಶಃ ರಜನೀಶನ ಕುರಿತ ಮಾತು ಮುಗಿಸಿದಲ್ಲಿಂದ ನಾವು ಸತ್ಯಕಾಮರ ಕುರಿತ ಮಾತು ಆರಂಭಿಸಬಹುದು. ವಿಮಾನದಿಂದ ನೆಲಕ್ಕೆ ಇಳಿದು ದಟ್ಟ ಅರಣ್ಯವನ್ನು ಗೊತ್ತಿಲ್ಲದ ವ್ಯಕ್ತಿ ಪ್ರವೇಶಿಸಿ, ಅದರ ಒಳಗಿನ ಒಂದೊಂದನ್ನು ಅನುಭವಿಸುತ್ತಾ, ಮೈ ಕೈಗೆ ಮುಳ್ಳು ತರಿದು, ಕಾಲಿಗೆ ಕಲ್ಲು ಎಡವಿ, ಒಣಗಿದ ಮರ ತಲೆಯ ಮೇಲೆ ಬಿದ್ದು ಏಟು ತಿಂದುಕೊಂಡು, ಕತ್ತಲಲ್ಲಿ ಕಣ್ಣು ಕಾಣಿಸದೆ, ಎಚ್ಚರ ಬೆಳಕಿನಲ್ಲಿ ಕಣ್ಣು ಕಂಡರೂ ಕ್ರೂರವಾದದ್ದು ಎಗರಿ ಅದರಿಂದ ಪಾರು ಮಾಡಿಕೊಂಡು ಒಬ್ಬ ಆಗಂತುಕ ಕಾಡನ್ನು ಸೇರಿ ನಡೆದ ಕತೆ ಸತ್ಯಕಾಮರದು. ಅವರು ಅದಕ್ಕೆ ಹೇಗೆ ಬಂದರು ಯಾಕೆ ಬಂದರು ಎಂಬ ಪ್ರಶ್ನೆಯ ಬಗ್ಗೆ ಅದು ಒಂದು ಆಕಸ್ಮಿಕ ಎಂಬುದೇ ಉತ್ತರ.

ಇದು ಕಾಡು, ಇದು ತುಂಬ ದುರ್ಗಮವಿದೆ ಎಂದು ಗೊತ್ತಿದ್ದು ಸತ್ಯಕಾಮರು ಪ್ರವೇಶಿಸಿದವರಲ್ಲ. ಅವರಿಗೆ ಎಲ್ಲಿಗೆ ಹೋಗಬೇಕು ಗೊತ್ತಿಲ್ಲ. ಇರುವುದು ಸಾಕು ಅನಿಸದೆ, ಇಲ್ಲದ್ದು ಬೇಕೆಂಬ ಹಂಬಲ. ಹೊಸತೊಂದರ ಹುಟುಕಾಟದಲ್ಲಿ ಅವರು ಒಂದು ದಿನ ಏಕಾಏಕಿ ತನಗೆ ಏನೋ ಬೇಕು ಎಂಬ ವಿಚಿತ್ರ, ತನಗೇ ಗೊತ್ತಿರದ ಹಸಿವೊಂದರ ಸೆಳೆತಕ್ಕೆ ಸಿಕ್ಕು ಮನೆ ಬಿಟಿದ್ದಾರೆ. ಹಾಗೆ ನಡೆವಾಗ ಅವರು ಸಿಕ್ಕಿದ್ದನ್ನೆಲ್ಲ ತಿಂದಿದ್ದಾರೆ, ನೋಡಿದ್ದಾರೆ, ಕೆಲವನ್ನು ಕೇಳಿದ್ದಾರೆ, ಪ್ರಶ್ನಿಸಿದ್ದಾರೆ. ಕೆಲವಕ್ಕೆ ತನ್ನನ್ನು ಅರ್ಪಿಸಿದ್ದಾರೆ. ಹಾಗೆ ನಡೆದಾಗ ಅವರು ಈ ತಂತ್ರ ಎಂಬ ಅರಣ್ಯ ಪ್ರವೇಶಿಸಿದ್ದಾರೆ. ಸ್ತಂಭನ ವಿದ್ಯೆ ಅದರ ಆರಂಭ. ಅಲ್ಲಿ ಅದನ್ನು ಕಲಿಯುವುದರಿಂದ ಅಧಃಪತನವೂ ಸಾಧ್ಯ ಎಂಬ ವಿದ್ಯೆ ಕಲಿಸುವವನ ಎಚ್ಚರಕ್ಕೂ ಸೋಲದೆ,

'ಏನೋ ಆಶೆಯಾಗಿದೆ. ನನ್ನ ಬೀಳು ಪೂರ್ವ ನಿಯೋಜಿತವಿದ್ದರೆ ನಾನು ಪೌರುಷವನ್ನು ಬಗೆದು ನೋಡುವ ಹಟದವ. ದಯವಿಟ್ಟು ನನಗೆ ಈ ವಿದ್ಯೆ ಹೇಳಿಕೊಡಿ (27, ಕಪಿಲವಸ್ತು, 2004) ಎಂಬ ಮಾತಿನೊಂದಿಗೆ ತಂತ್ರಲೋಕ ಪ್ರವೇಶಿಸಿದವರು. ಅಂದರೆ ಇದು ತಂತ್ರಲೋಕ ಇಂಥದ್ದು ಇಲ್ಲಿ ಕಲಿಯಲು ಇದೆ ಎಂಬ ಅರಿವೂ ಆಗ ಅವರಲ್ಲಿ ಇಲ್ಲ. ಹಾಗೆ ನಡೆದ ಸತ್ಯಕಾಮರು ಮಾತ್ರ ಮತ್ತೆಂದಿಗೂ ಹಿಂತಿರುಗಿ ನೋಡಿದ್ದು ಕಾಣುವುದಿಲ್ಲ. ಮುಂದೆ ಹೊಕ್ಕ ಅರಣ್ಯದ ಎಲ್ಲ ಎಲ್ಲ ಮೂಲೆ ನೋಡುವ ಸಾಹಸ ಮಾಡುತ್ತಾರೆಯೆ ಹೊರತು ಹಿಂತಿರುಗಿ ಹೋಗುವ ಯೋಚನೆ ಮಾಡುವುದೇ ಇಲ್ಲ.

ತಂತ್ರಕ್ಕೆ ಯಾವುದೇ ಭೇದವಿಲ್ಲ. ಅದು ಇದು ಎಂಬ ಸ್ವೀಕಾರ ತಿರಸ್ಕಾರಗಳಿಲ್ಲ, ಒಳಿತು ಕೆಡುಕಿನ ಲೇಪವಿಲ್ಲ. ನಮ್ಮ ಪ್ರಜ್ಞೆಯ ವಿಸ್ತಾರಕ್ಕೆ ಏನೆಲ್ಲ ಬೇಕೋ ಅದೆಲ್ಲವನ್ನು ಪಡೆವ, ಕೊಳ್ಳುವ ಮತ್ತು ಆ ಮೂಲಕ ಆ ಅದರವರೆಗೆ ತನ್ನನ್ನು ವಿಸ್ತರಿಸಿಕೊಳ್ಳುವ ಪಥ ಎಂಬ ಮಾತಿಗೆ ಒಂದು ಜೀವಂತ ನಿದರ್ಶನದ ಹಾಗೆ ಸತ್ಯಕಾಮರ ಒಟ್ಟು ಅನುಭವ ವಿವರಣೆ ಇದೆ.

ದಾರಿಯುದ್ದಕ್ಕೆ ಅವರು ಭೂತವಿದ್ಯೆ. ಸಮ್ಮೋಹಿನಿ, ವಶೀಕರಣ, ಖೇಚರಿ, ಅನೇಕ ಸಿದ್ಧಿ ಶಕ್ತಿಗಳನ್ನು ಸಂಪಾದಿಸಿಕೊಂಡು ನಡೆಯುತ್ತಲೇ ಅವುಗಳ ಜೊತೆ ಜೊತೆಗೇ ತನಗೆ ನಡೆಯಲ್ಲಿ ದೊರೆತ ಪ್ರತೀ ಸ್ತ್ರೀಯರಲ್ಲೂ ಒಂದು ತಾಯ್ತನದ ಅನುಭವ, ದರ್ಶನವನ್ನು ಅನುಭವಿಸುತ್ತಾ ತಾನು ಆ ಮೂಲಕ ಬೆಳೆವ ದಾರಿಯನ್ನು ಹೆಚ್ಚು ಸ್ವಚ್ಛಗೊಳಿಸುತ್ತಾ ನಡೆದಿದ್ದಾರೆ.

ಪಥವು ಎಷ್ಟು ಭಯಾನಕ, ಎಷ್ಟೊಂದು ಅನಾಹುತಕಾರಕ, ಹೇಗೆಲ್ಲ ನಮ್ಮನ್ನು ದಂಡಿಸಿ, ಒರೆಹಚ್ಚಿ, ಎಳೆದಾಡಬಲ್ಲದು ಎಂಬ ಎಲ್ಲ ವಿವರಗಳೂ ಸತ್ಯಕಾಮರ ಬರೆಹಗಳಲ್ಲಿ ಲಭ್ಯವಿದೆ. ಇಷ್ಟೆಲ್ಲ ಇದ್ದರೂ ಅವರು ಅದಕ್ಕೆ ಬೆನ್ನು ಹಾಕದೆ ತಂತ್ರ ದಾರಿಯಲ್ಲಿ ತಾನು ಕಂಡ ಮತ್ತು ಇನ್ನೂ ಕಾಣಲಿಕ್ಕಿರುವ ಸಂಗತಿಗಳನ್ನು ವಿವರಿಸುವ ಮತ್ತು ನಿಗೂಢವಾಗಿಡುವ ರೀತಿಯಲ್ಲೇ ಅವುಗಳನ್ನು ಅಭಿವ್ಯಕ್ತಿಸಿದ್ದಾರೆ.

ಒಂದು ದೃಷ್ಟಿಯಿಂದ ರಜನೀಶರ ಥಿಯರಿ ಕ್ಲಾಸ್ ಮುಗಿಸಿ ಲ್ಯಾಬ್‌ಗೆ ಬಂದಂತೆ ಸತ್ಯಕಾಮರ ಓದಿನ ಅನುಭವ. ಸತ್ಯಕಾಮರು ತಂತ್ರವನ್ನು ನಡೆದಿದ್ದಾರೆ. ಅದರಲ್ಲಿ ಅವರು ಪ್ರಯೋಗ ಪಶು. ಅದು ಅವರಿಗೆ ಬದುಕು ಮತ್ತು ಬೆಳಕು ಎರಡೂ ಕೂಡ.

ಇಂಥ ದುರ್ಗಮ ಅರಣ್ಯದಲ್ಲಿ ಅವರಿಗೆ ದೊರೆತ ಅಪೂರ್ವ ಅನುಭವಗಳನ್ನು ಅವರು ಹಂಚಿಕೊಂಡಿದ್ದಾರೆ. ಶಕ್ತಿ ಮತ್ತು ಸಿದ್ಧಿಗಳನ್ನು ಒಂದೇ ಗುರುವಿನಿಂದ ಕಲಿತವರಲ್ಲ ಸತ್ಯಕಾಮರು. ಹಲವು ಶಕ್ತಿ, ಹಲವು ಸಿದ್ಧಿಗಳಿಗೆ ಹಲವು ಗುರುಗಳು ಹಲವು ಮಾರ್ಗದರ್ಶಕರು. ಅವರು

ಅದರಿಂದ ವಿಚಲಿತರಾಗಿಲ್ಲ. ತಾನು 'ತಂತ್ರಗ್ರಾಮದ ಅನಾಥ ಶಿಶು' ಅಂತ ತನ್ನನ್ನೇ ತಾನು ಸಮಾಧಾನಿಸಿಕೊಂಡು ಛಲ ಬಿಡದೆ ನಡೆದಿದ್ದಾರೆ. ಹಲವು ಅದ್ಭುತ ಶಕ್ತಿಗಳನ್ನು ಸಂಪಾದಿಸಿಯೂ ಒಂದು ವಿಶೇಷ ವೈರಾಗ್ಯಕ್ಕೆ ಒಳಗಾಗಿದ್ದಾರೆ. ಅವುಗಳನ್ನು ಕಪ್ಪತಗುಡ್ಡದಲ್ಲಿ ಕಠೋರ ತಪಸ್ಸಿನ ಮೂಲಕ ತ್ಯಜಿಸಿದ್ದಾರೆ.

ಇಂಥ ದಾರಿ ನಡೆದ ಬಳಿಕ ಹಲವು ಸಂಗತಿಗಳನ್ನು ಅನುಭವ ಕೃತಿಗಳ ಮೂಲಕ ಹೇಳಿಕೊಂಡಿದ್ದಾರೆ. 'ತಂತ್ರ ಎಂಬುದೊಂದು ದೇವಾಲಯವಾದರೆ ಅದನ್ನು ಸುತ್ತಿ ಬಂದವ ಈ ಶಾಸನವನ್ನು ಓದುತ್ತಾನೆ.

ದೇವರನ್ನು ಕಡಿಮೆ ಒಪ್ಪಿದವ ಹೆಚ್ಚು ಸುಖಿ.

ದುಡಿಯದವನ ಜತೆಗೆ ದೇವರ ಒಗೆತನವಿಲ್ಲ.

ಮೌಲ್ಯಗಳು ಜೀವದ ನೆತ್ತರ ಕುಡಿಯುವ ಜಿಗಣೆಗಳಲ್ಲ

(III ಮುನ್ನುಡಿ, ಪಂಚಮಗಳ ನಡುವೆ, 2010)

ತಂತ್ರ ಮಾರ್ಗದಲ್ಲಿರುವ ಎಲ್ಲವುಗಳನ್ನು ಮುಕ್ತ ಮನಸ್ಸಿನಿಂದ ಹೇಳುವ ಸತ್ಯಕಾಮರು ಅದರ ದೋಷಗಳನ್ನು ಹೇಳಲು ಮರೆಯುವುದಿಲ್ಲ. 'ತಂತ್ರ ಒಂದು ಪ್ರಯೋಗ ಶಾಲೆ. ಯೋಗ್ಯತೆ ಇಲ್ಲದವನಿಗೆ ಅದರಲ್ಲಿ ಪ್ರವೇಶ ಇಲ್ಲ. ತಾಂತ್ರಿಕರು ಹೊರಗಿನ ಕಲಾಪಗಳಿಗಿಂತ ಒಳಗಿನ ಚಟುವಟಿಕೆಗಳಲ್ಲಿ ಆಸಕ್ತರು. ಮನಸ್ಸಿನ ಆಳ ಅಗಲ ಗೊತ್ತಿಲ್ಲದವರಿಗೆ ತಂತ್ರ ಪ್ರವೇಶ ನಿರಾಕರಿಸುತ್ತದೆ. ಕಳ್ಳ ದಾರಿಯಿಂದ ಹೊಕ್ಕವರನ್ನು ಅಲ್ಲಿ ಉಳಿಸಲಾಗುವುದಿಲ್ಲ. ಅಲ್ಲಿ ಮದ್ಯವಿದೆ, ಮೈಥುನವೂ ಉಂಟು.

ದೀಪದ ಹುಳು ಅಲ್ಲಿ ಹಾರಾಡಿದರೆ ಸುಟ್ಟುಕೊಂಡು ಹೋಗುವುದೇ ಅದು ಸಾಧಿಸುವ ಕೆಲಸ. ಮೈಥುನವು ಕಾಮಿಗೆ ರತಿಕ್ರೀಡೆ. ತಂತ್ರಜ್ಞಾನಿಗೋ ಕಾಮುಕತೆ ಕಾಮಶಕ್ತಿಯ, ಕಲೆ ಅದನ್ನು ಅಭಿವ್ಯಕ್ತಿಗೊಳಿಸುವ ವಿಧಾನ. ನಾಯಿ, ಕತ್ತೆಗಳಿಗೆ ಮೈಥುನದ ಅರ್ಥವಾಗುತ್ತದೆಯೇ? (127, ಪಂಚ'ಮ'ಗಳ ನಡುವೆ 2010) ಇಂಥ ಕುತೂಹಲಗಳಿಗೆ ನಿಷ್ಠುರದ ಧಾಟಿಯೇಟು ನೀಡಿ ತಂತ್ರವನ್ನು ಪರಿಚಯಿಸುತ್ತಾರೆ.

ತಂತ್ರ ಧೀರರ ದಾರಿ. ಇಲ್ಲಿ ಭೇದವಿಲ್ಲ ಈ ಮುಂತಾದ ಅಭಿಪ್ರಾಯಗಳು ಸತ್ಯಕಾಮರ ಬರೆಹಗಳಲ್ಲೂ ಇವೆ. ಪುನರಾವರ್ತನೆ ಅನಗತ್ಯ ಮತ್ತು ತಂತ್ರ ಪಥಕ್ಕೂ ಸಲ್ಲದ

ಸಂಗತಿಯಾದ್ದರಿಂದ ಅವುಗಳ ಪುಟಪುಟದ ಉದ್ಧರಣೆಗೆ ಹೋಗುವುದಿಲ್ಲ. ಸತ್ಯಕಾಮರಿಗೇ ವಿಶೇಷವಾದ ಕೆಲವು ತಂತ್ರ ಕುರಿತ ಅವರ ಸಂವೇದನೆಗಳನ್ನು ಮಾತ್ರ ಗಮನಿಸೋಣ.

'ತಾಂತ್ರಿಕರ ಸಹವಾಸದಲ್ಲಿ ಸಾಕಷ್ಟು ಗಳಿಸಿದ್ದೆ.

ಆದರೆ ಸ್ವಾತಂತ್ರ್ಯವನ್ನೇ ಕಳೆದುಕೊಂಡಿದ್ದೆ' (161, ಪಂಚ'ಮ'ಗಳ ನಡುವೆ, 2010)

ತಂತ್ರದ ಜತೆ ನಾನು ಹಿಗ್ಗಿನಿಂದಲೇ ಇದ್ದೆ. ಆದರೆ ಒಂದೇ ಒಂದು ನಿರಾಶೆ ಎಂದರೆ ಧೀರರಾದ ತಾಂತ್ರಿಕರಿಗೆ ಸ್ವಾತಂತ್ರ್ಯದ ಕಲ್ಪನೆ ಹೋದದ್ದು. (172, ಪಂಚ'ಮ'ಗಳ ನಡುವೆ, 2010)

ಯಾಕೋ ನನ್ನ ಬಗ್ಗೆ ನಿನಗೆ (ಓದುಗನಿಗೆ) ಕೆಟ್ಟ ಸಂಗತಿ ಹೇಳಿದ್ದಾರೆ. 'ನಾನು ತಾಂತ್ರಿಕನೆಂದು, ಅದಿಲ್ಲ ಎಂದು ನಾನು ಹೇಳುವುದಿಲ್ಲ. ಅದಲ್ಲದೆ ನನ್ನಂಥವ ಇನ್ನೇನಿರಲು ಸಾಧ್ಯ? ಆದರೆ ನಾನು ಪಡೆದ ತಂತ್ರವೇ ಬೇರೆ. ನಿನಗೆ ಕರ್ಣ ಪಿಶಾಚಿ ಹೇಳಿದ ತಂತ್ರವೇ ಬೇರೆ_

ತಂತ್ರದಲ್ಲಿದ್ದೂ ಕುಡಿಯದೆ ಒಣಒಣಗುಟ್ಟುವವನು. ಸಿದ್ಧಿ ಪವಾಡ ನನಗೆ ಗೊತ್ತಿಲ್ಲ. ಬೆನ್ನು ಹತ್ತಿ ಬಂದವನ್ನು ಕಪ್ಪತಗುಡ್ಡದಲ್ಲಿ ಬಿಟ್ಟು ಬಂದವನು. ಅವುಗಳನ್ನು ನಾನು ಬಿಟ್ಟರೂ ನನ್ನಿಂದ ಅವುಗಳನ್ನು ನನ್ನವರು ಬಿಡಿಸಬೇಕಿಲ್ಲ. ಈಗ ನಾನು ತಂತ್ರವನ್ನು ಬಿಟ್ಟಿದ್ದೇನೆ. ಆದರೆ ಅದು ಮಾತ್ರ ನನ್ನನ್ನು ಬಿಟ್ಟಿಲ್ಲ. ಬದುಕನ್ನು ಬಿಡುವುದು ಹೇಗೆ ಸಾಧ್ಯ? '(16–17, ಸ್ವತಂತ್ರ, 2004)

ಹೀಗೆ ತಂತ್ರದ ದೋಷಗಳನ್ನು ಹೇಳುತ್ತಾ, ಅದರ ಕುರಿತ ನಮ್ಮ ತಿಳುವಳಿಕೆಯನ್ನು ಅಲ್ಲಗಳೆಯುತ್ತಾ, ತಾನು ತಾಂತ್ರಿಕನೇ ಅಲ್ಲ ಎಂಬ ಘೋಷಣೆ ಮಾಡಿದವರು. ಮುಂದೆ ನಾನು ಬಿಟ್ಟರೂ ಅದು ನನ್ನನ್ನು ಬಿಟ್ಟಿಲ್ಲ ಬದುಕನ್ನು ಬಿಡುವುದು ಹೇಗೆ ಸಾಧ್ಯ ಎಂಬ ಮಾತಿನ ಮೂಲಕ ಬದುಕೇ ತಂತ್ರ ಎಂಬ ಅಂತಿಮ ವ್ಯಾಖ್ಯಾನವನ್ನು ಸೂಚ್ಯವಾಗಿ ನೀಡುತ್ತಾರೆ.

ಸತ್ಯಕಾಮರಿಗೆ ನಿಜಕ್ಕೂ ಇಂಥದೊಂದು ತಾದಾತ್ಮ್ಯ ಇದೆ. ಆದ್ದರಿಂದಲೇ ಅವರು ತಂತ್ರವನ್ನು ಬದುಕುತ್ತಾರೆ ಬೋಧಿಸುವುದಿಲ್ಲ. ಅವರು ಅದನ್ನು ಅನುಭವಿಸಿದ ಬಳಿಕ ಅದರ ಅರ್ಹತೆಯು ಅವರಿಗೆ ಮನದಟ್ಟಾಗಿದೆ. 'ಅತಿ ಚಿಕ್ಕ ಸಂಗತಿಗಾಗಿ ಮನಸ್ಸನ್ನು ಉದ್ರೇಕಕ್ಕೀಡು ಮಾಡುವವ ಇಲ್ಲಿ ಸಲ್ಲ. ಉಂಡು ಮಲಗುವವ, ಊಟವನ್ನೇ ಕಾಣದವ, ಅನ್ನಕ್ಕಾಗಿಯೇ ಕೈಚಾಚಿದವನನ್ನು ತಂತ್ರ ಆಮಂತ್ರಿಸುವುದಿಲ್ಲ. (19, ತಂತ್ರಯೋನಿ, 2008)

'ತಂತ್ರವನ್ನು ಒಂದು ಮಾರ್ಗ ಎಂದವರುಂಟು. ಇದು ಅತಂತ್ರ ಎಂದು ಹೇಳುವವರೂ ಇದ್ದಾರೆ. ಇದು ಶುದ್ಧ ಅಪಲಾಪ. ಬದುಕೆಲ್ಲವೂ ತಂತ್ರ ಬದುಕಿಸುವುದೆಲ್ಲವೂ ಅದುವೆ' ಎಂಬಲ್ಲಿಯವರೆಗಿನ ತಾದಾತ್ಮ್ಯ ಅವರಲ್ಲಿದೆ.

ತಂತ್ರವು ಅನುಭವ ಜ್ಞಾನ. ಓದಿನ ಜ್ಞಾನಕ್ಕಿಂತಲೂ ಇದು ದೊಡ್ಡದು ಎಂದೇ ಸತ್ಯಕಾಮರ ನಂಬಿಕೆ. ಅವರು ಓದನ್ನು ಬಂಧ ಎಂದೇ ಕಂಡಿದ್ದಾರೆ. ಬರಿಯ ಶುಷ್ಕ ಪಾಂಡಿತ್ಯದ ಬಗ್ಗೆ ಅವರಿಗೆ ಗೌರವವಿಲ್ಲ. ಸಾವನ್ನು ಗೆಲ್ಲುವ, ನಿರ್ಭೀತಿ, ಸ್ವಾತಂತ್ರ್ಯವನ್ನು ಪಡೆಯುವ ಶಕ್ತಿ ತಂತ್ರಕ್ಕಿದೆ ಎಂಬುದು ಅವರ ಅನುಭವ. ತಂತ್ರ ಕೇವಲ ಮಾಟ ಮಂತ್ರವಲ್ಲ ಅವಿಷ್ಟೇ ಇದಾಗಿದ್ದರೆ ಅದಕ್ಕೆ ತಂತ್ರ ಎಂಬ ಹೆಸರೇ ಬೇಡ ಎಂಬವರೆಗೆ ಅದನ್ನು ನಿರಾಕರಿಸುತ್ತಾರೆ.

ಮದ್ಯಮಾಂಸಗಳ ಮೈಥುನ ಕುರಿತ ಇವರ ನಿಲುವು ತುಂಬ ಆತ್ಮವಿಮರ್ಶಾತ್ಮಕವಾಗಿದೆ. ಹಾಗಾಗಿ ಸಾಮಾಜಿಕ ಸಾಧ್ಯತೆಯ ಮುಖವಾಡಕ್ಕೆ ನಿಷ್ಠುರವಾದ ಛಾಟಿ ಏಟಿನಂತಿದೆ. ಮತ್ತು ಸತ್ಯ ಎನಿಸುವಂತೆ ಸೋಲೊಪ್ಪಿ ಮುಖ ತಗ್ಗಿಸುವ ಹಾಗಿದೆ.

ಶಿಷ್ಟ ಜೀವನದಲ್ಲಿ ಮದ್ಯವಿಲ್ಲವೆ? ಮಂತ್ರವೂ ಉಂಟಲ್ಲವೆ? ಯಾವ ಗೃಹಸ್ಥ ತನ್ನ ಮನೆಯಲ್ಲಿ ಮೈಥುನ ಆಚರಿಸದೆ ಇದ್ದಾನೆ? ಕೆಡುವ ಮನುಷ್ಯ ತಂತ್ರಕ್ಕಾಗಿಯೇ ಯಾಕೆ ಕಾಯಬೇಕು? ಕೆಟ್ಟವರು ತಂತ್ರವನ್ನು ಬಳಸಿಲ್ಲ ಎಂಬುದು ಸ್ಪಷ್ಟವಿದೆ. ತಂತ್ರದ ತಲೆಗೆ ಈ ಕೆಟ್ಟದನ್ನು ಕಟ್ಟಿದರೂ ಅದು ಕೆಡದೆ ಉಳಿದಿದೆ. ವಿಕಾರ ಹೇತುಗಳಿದ್ದರೂ ವಿಕೃತಿಗೊಳ್ಳದಿರುವುದೇ ಧೀರತೆಯಲ್ಲವೇ? '(20, ತಂತ್ರಯೋನಿ, 2008)'

ತಂತ್ರದ ಎಲ್ಲ ಮುದ್ರೆಗಳು, ಯಂತ್ರಗಳು ಇಂಥ ಸೈದ್ಧಾಂತಿಕ ವಿವರಣೆಗಳನ್ನು ಕೂಡ ಅಚ್ಚುಕಟ್ಟಾಗಿ ಅರಿತುಕೊಂಡು ಅದರ ವಿವರಗಳನ್ನು ತಂತ್ರಯೋನಿಯಲ್ಲಿ ವಿವರಿಸಿದ್ದಾರೆ. ಜೊತೆ ಜೊತೆಗೆ ತಾನು ಅವುಗಳನ್ನು ಮೀರುವ ಅಥವಾ ಒಟ್ಟು ಪಥದಲ್ಲಿ ಯಾವುದೇ ವೈಧಾನಿಕ ಪದ್ಧತಿಯನ್ನು ಮೀರುವ ಸ್ವಾತಂತ್ರ್ಯ ಸಾಧಕನಿಗೆ ಇರಬೇಕು ಎಂಬ ನಿಲುವನ್ನೇ ತಾಳಿದ್ದಾರೆ.

ತಾನು ಇಷ್ಟೆಲ್ಲ ದಾರಿ ಸೂಚಿಸಿ ಏನು ಕಂಡೆ ಎಂಬ ಕುತೂಹಲ ಎಲ್ಲರಿಗೂ ಇರಬಹುದು ಎಂಬ ಎಚ್ಚರದಿಂದಲೇ ಅದಕ್ಕೆ ಕಾಲ ಕೂಡಿ ಬಂದಾಗ ಹೇಳುವೆ, ಈಗ ಹೇಳಿದ್ದಕ್ಕಿಂತಲೂ ದೃಢವಾದುದು ಇನ್ನು ಏನೋ ಇದೆ, ಮಾಗಿದಾಗ ಮಾಧುರ್ಯ ಎಂಬ ಭರವಸೆಯನ್ನು ಪಂಚ'ಮ'ಗಳ ನಡುವೆ ಮತ್ತು ಸ್ವತಂತ್ರ ಕೃತಿಯಲ್ಲಿ ನೀಡಿದ್ದರೂ ಆ ಕುರಿತು ಕೊನೆಯವರೆಗೂ ಹೇಳಲೇ ಇಲ್ಲ. ಅಥವಾ ಅಂಥದೊಂದು ನಿಗೂಢ, ಹೇಳಲಿಕ್ಕಾಗದ ಸತ್ಯವನ್ನೇ ಸಾಧಕ ಪಡೆಯುತ್ತಾನೆ ಎಂಬ ಸೂಚನೆ ಕೊಟ್ಟರೂ ಕೊಟ್ಟಿರಲಿಕ್ಕೆ ಸಾಕು.

ಹೀಗೆ ಸತ್ಯಕಾಮರದು ನಿರಂತರ ಶೋಧನೆಯ ಪ್ರಯೋಗಾತ್ಮಕ ವಿವರ. ಅವರು ರಜನೀಶನ ಹಾಗೆ ಅದನ್ನು ವಿವರಿಸುವ ಬೋಧಕನಲ್ಲ. ಅದರ ಒಳಗೆ ನಡೆದು ಅನುಭವಿಸಿದ ಅನುಭವಿ. ಸತ್ಯಕಾಮರು ತಂತ್ರವನ್ನು ಬಿಟ್ಟರೆಂಬುದಕ್ಕಾಗಲಿ, ಅವರು ಮರಳಿ ಬಂದು ಎಲ್ಲ

ಸಾಮಾನ್ಯರಂತೆ ಮನೆ ತೋಟ ಮಾಡಿಕೊಂಡದ್ದಕ್ಕಾಗಲಿ ಜನ ಅವರವರದೇ ವಿವರಣೆ ಕೊಟ್ಟಿದ್ದಾರೆ. ಕೆಲವರಿಗೆ ಅವರು ಯೋಗ ಭ್ರಷ್ಟ (ಅಂದರೆ ಈ ದಾರಿಯಲ್ಲಿ ಮುಂದೆ ನಡೆಯದಂತೆ ಕೆಳಗೆ ಬಿದ್ದವ), ಇನ್ನು ಕೆಲವರಿಗೆ ಅವರು ಒಬ್ಬ ತಾಂತ್ರಿಕನಾಗಿ ಏನೋ ಉದ್ದೇಶ ಇಟ್ಟು ಮರಳಿದವರು. ಮತ್ತೆ ಕೆಲವರಿಗೆ ಅವರು ನಿಗೂಢ, ರಹಸ್ಯ. ಈ ಕುರಿತು ಅವರದೇ ಅಭಿಪ್ರಾಯಗಳನ್ನು ಉತ್ತರಾರ್ಧದ ಐದನೆಯ ಅಧ್ಯಾಯದಲ್ಲಿ ಕೊಡಲಾಗಿದೆ.

ಇವೆಲ್ಲವನ್ನೂ ಅವರೇ ಬರೆದ ತಂತ್ರದ ಕುರಿತ ಅವರ ಅನುಭವ ಬರೆಹಗಳಲ್ಲಿ ಸೂಕ್ಷ್ಮ ಉತ್ತರವಿದೆ. ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಮರಳಿದ ಮತ್ತು ಅತಿ ಎಚ್ಚರದಿಂದಲೇ ತನ್ನ ಇರುವಿಕೆಯನ್ನು ಸಮಾಜದ ಮಧ್ಯೆ ಮಾಡಿಕೊಂಡ ಸತ್ಯಕಾಮರ ಬದುಕಿನಲ್ಲಿ ತಂತ್ರದ ಪ್ರೇರಣೆಯೇ ಇದೆ. ಇಲ್ಲಿಯದನ್ನು ನಿರಾಕರಿಸದೆ ಇದರೊಳಗೆ ಅದನ್ನು ನಡೆಯುವ ಬದುಕೇ ಅವರಿಗೆ ತಂತ್ರ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. 'ತಂತ್ರದಲ್ಲಿ ಸ್ವತಂತ್ರತೆ, ನಿರ್ಭಯತೆ, ಪ್ರಗಲ್ಭ ಪ್ರಜೆಗಳು ಮೂರು ಅಗತ್ಯ ಎನ್ನುತ್ತಾರೆ. ಇವುಗಳಲ್ಲಿ ಯಾವುದೊಂದು ಇಲ್ಲದೆ ಹೋದರೂ ಅವರಿಗೆ ಕೈ ಕೊಡುತ್ತದೆ. ವಿಫಲವಾಗುತ್ತದೆ. ಹೀಗಾಗಿ ಅದರಲ್ಲಿ ಮುಂದುವರೆಯುವ ಬದಲು ಅನುಭವಗಳನ್ನೇ ತಮ್ಮದಾಗಿಸಿಕೊಂಡ ತಂತ್ರ ಲೋಕದಿಂದ ಕಾಲು ಇತ್ತರು (40, ಸತ್ಯಕಾಮ ಕೃತಿಗಳು, ಒಂದು ಅಧ್ಯಯನ, 1997) ಇಂಥ ತೀರ್ಮಾನವನ್ನು ಸಂಶೋಧಕ ಶಾಂತಾ ಮಠಪತಿ ಅವರು ಸತ್ಯಕಾಮರ ಸಕಲ ಕೃತಿಗಳ ಅಧ್ಯಯನದ ಬಳಿಕವೂ ತಲುಪುತ್ತಾರೆ. ಬಹುಶಃ ಸತ್ಯಕಾಮರು ಇದ್ದಿದ್ದರೆ ಇಂತಹ ಅಭಿಪ್ರಾಯಗಳ ಬಗ್ಗೆ ಕನಿಕರ ಪಡುತ್ತಿದ್ದರು.

ವಾಚಿಕವಾಗಿ ತುಂಬ ಪರೋಕ್ಷ ಮಾತಾಡುವ ಸತ್ಯಕಾಮರು ತಂತ್ರವನ್ನು ಪರೋಕ್ಷ ಮಾರ್ಗದಂತೆಯೇ ತೋರಿದ್ದಾರೆ. ಪ್ರತ್ಯಕ್ಷದಲ್ಲಿ ಹಾಗೆ ತೋರದ ಒಂದು ಗುಣ ವಿಶೇಷ ಅವರಲ್ಲಿ ದಟ್ಟವಾಗಿದೆ. ತಂತ್ರದ ಮೂರು ಮಾರ್ಗಗಳಲ್ಲಿ ಕಾದಿ, ಹಾದಿ, ಸಾದಿ ಎಂದು ಮೂರು ವಿಭಾಗ, ಇವುಗಳನ್ನು ಈಗಾಗಲೇ ವಿವರಿಸಲಾಗಿದ್ದು, ಈ ಸಮಾಜದಲ್ಲಿ ಸಾಮಾನ್ಯರಂತೆ ಬದುಕಿ, ಅಪರೂಪಕ್ಕೊಮ್ಮೆ ಗುಪ್ತವಾಗಿದ್ದು ಆ ಪಥದ ಎಲ್ಲ ಕ್ರಿಯಾಚರಣೆಗಳಲ್ಲಿ ತೊಡಗುವ ಪಥವೂ ಇದೆ. ಸತ್ಯಕಾಮರು ಅಂಥವರು. ಅವರು ಇಲ್ಲಿಯವರಿಗೆ ಸಾಮಾನ್ಯರಂತೆ ಕಂಡು ಆ ಬಳಿಕ ಅಪರೂಪಕ್ಕೊಮ್ಮೆ ಎಲ್ಲಿದ್ದಾರೆಂಬುದನ್ನು ತಿಳಿಸದೆ ತನಗೆ ಇಷ್ಟವಾದ ಏಕಾಂತ ಜಾಗಕ್ಕೆ ಹೋಗಿ ಬಿಡುತ್ತಿದ್ದರು. ಅವರ ಅಲ್ಲಿಯ ಕೆಲಸ ಮುಗಿದ ಬಳಿಕ ಮತ್ತೆ ಮರಳಿ ಬರುವ ಪರಿಪಾಠ ಅವರ ಮರಣ ಕಾಲದವರೆಗೂ ಇತ್ತು. ಇದನ್ನು ಅವರ ಸಮೀಪದಲ್ಲಿರುವ ಎಲ್ಲರೂ ಬಲ್ಲರು. ಹೀಗಾಗಿ ಅವರು ಕಾಲು ಕೀಳುವ ಮಾತೇ ಇಲ್ಲ. ಎಲ್ಲಕ್ಕೂ ಮಿಗಿಲಾಗಿ ಇಡಿಯ ಅನುಭವದ ಅವರ

ವಿವರವೇ ಅವರು ಪಡೆದಿರುವ ಧೀರತೆ, ನಿರ್ಭಯತ್ವ, ಸ್ವಾತಂತ್ರ್ಯಾನುಭವಗಳನ್ನು ಹೇಳುತ್ತದೆ. ಅವರಲ್ಲಿ ಮರಳಿ ಬರಲು ಬೇಕಾಗುವ ಯಾವ ಅಶಕ್ತೆಯೂ ಇರಲೇ ಇಲ್ಲ. ಹಾಗೆ ಹೇಳುವುದು ನಮ್ಮ ಕನಿಕರ ಮಾತ್ರ.

ಇಬ್ಬರೂ ನೋಡಿದ ಮತ್ತು ನಡೆದ ಪಥದ ವಿವರಣೆ ಗಮನಿಸಿದರೆ ಎರಡು ಮುಖ್ಯ ಸಂಗತಿಗಳು ಗಮನಕ್ಕೆ ಬರುತ್ತವೆ.

1) ಸತ್ಯಕಾಮರದು ಪ್ರಯೋಗಾತ್ಮಕ ತಂತ್ರ. ರಜನೀಶರದು ಬೋಧನಾತ್ಮಕ ತಂತ್ರ.

2) ದೇವ ಮತ್ತು ಸಾಧಕನ ಮಿಲನದಲ್ಲಿ ನಾಲ್ಕು ರೀತಿಗಳಿರಬೇಕು. ಪ್ರೇಮಿಗಳ ಮಿಲನದ ಹಾಗೆ. ಅ) ತುಂಬ ಬಯಸಿ ಹೋದವನು ತಿರಸ್ಕಾರಕ್ಕೆ ಒಳಗಾಗುವುದು. ಆ) ಪ್ರೀತಿಸಿದವನಿಗೆ ಪ್ರೀತಿಸಿದವಳು ಒಲಿಯುವುದು. ಇ) ಪ್ರೀತಿಸಿದವಳನ್ನು ಬಲಾತ್ಕಾರ ಮಾಡಿ ಸೇರುವುದು. ಈ) ಅವನು ಪ್ರೀತಿಸಲಿ ಬಿಡಲಿ ತಾನು ನಿರಂತರ ಪ್ರೀತಿಸುವುದು.

ಮೊದಲನೆಯದರಲ್ಲಿ ತಪಸ್ವಿ ತುಂಬ ಅಪೇಕ್ಷಿಸಿ ಶ್ರದ್ಧೆಯಿಂದ ಅವನ ಕಡೆಗೆ ನಡೆದಿದ್ದಾನೆ. ಆದರೆ ಅವನು ಒಲಿಯುವುದೇ ಇಲ್ಲ. ಒಂದು ತಿರಸ್ಕಾರ. ಕಡೆಯವರೆಗೂ ಕಾಯುವಿಕೆ. ಇದಕ್ಕೆ ಸತ್ಯಕಾಮರು ಉದಾಹರಣೆಯಂತೆ ಕಾಣುತ್ತಾರೆ.

ಇವನೂ ಪ್ರೀತಿಸಿದ್ದಾನೆ. ಆ ದೇವರಿಗೂ ಇವನ ಮೇಲೆ ಅಪಾರ ಪ್ರೀತಿ. ಇಬ್ಬರೂ ಪರಸ್ಪರ ಒಲಿದು ಕೂಡಿದ್ದಾರೆ ಅದೊಂದು ಅದ್ಭುತ ಮಿಲನಾನುಭವ. ಮಹದಾನಂದ ಇಂಥ ಮಿಲನಕ್ಕೆ ರಜನೀಶ ಉದಾಹರಣೆಯಾಗಬಲ್ಲನೇನೋ.

ಮೂರನೆಯದು ಈ ವ್ಯಕ್ತಿಗೆ ದೇವನ ಬಗ್ಗೆ ಒಲವಿಲ್ಲ. ಅವನಿಗೆ ಇವನು ಬೇಡವೂ, ಆದರೆ ದೇವನಿಗೆ ಇವನ ಮೇಲೆ ಅಪಾರ ಪ್ರೀತಿ, ಒಲವು ಬಿಡಲೇ ಆರೆನೆಂಬ ಅದಮ್ಯ ಬಯಕೆ, ಮೋಹ ತನ್ನನ್ನು ಅವನಲ್ಲಿ ಐಕ್ಯಗೊಳಿಸಲೇ ಬೇಕು ಎಂಬ ಹಠ. ಇವನ ಒಪ್ಪಿಗೆಗಾಗಿ ದೇವ ಕಾಯುತ್ತಾನೆ ಹಪಹಪಿಸುತ್ತಾನೆ. ಆದರೆ ಇವನು ಒಲಿಯುವುದಿಲ್ಲ. ಆಗ ದೇವನಿಗೆ ಒಂದೇ ದಾರಿ. ಬಲಾತ್ಕಾರದಿಂದ ಅವನನ್ನು ಸೇರುವುದು. ಇವನು ಅನಿವಾರ್ಯ ದೌರ್ಬಲ್ಯದಿಂದಾಗ ಅವನ ಬಲಾತ್ಕಾರವನ್ನು ಅನುಭವಿಸುವುದು ಮುಂದೆಂದೂ ಅದು, ಅವನು ಬೇಡ ಎಂಬ ಹಂತ ತಲುಪುವುದು. ಮೊನ್ನೆ ಮೊನ್ನೆ ಆಗಿ ಹೋದ ಯು.ಜಿ. ಕೃಷ್ಣಮೂರ್ತಿ ಇಂಥ ಒಂದು ಸಾಧ್ಯತೆಗೆ ಉದಾಹರಣೆಯಾಗಿ ಕಾಣುತ್ತಾರೆ.

ನಾಲ್ಕನೆಯ ರೀತಿಗೆ ಅಕ್ಕಮಹಾದೇವಿ, ಮೀರಾಬಾಯಿ ಮುಂತಾದವರನ್ನು ಉದಾಹರಿಸಬಹುದು.

ನಾನು ಈ ರೀತಿಯ ಒಂದು ಊಹೆಯನ್ನು ತಲುಪಲು ಪ್ರೇರಣೆ ಕೇನ ಉಪನಿಷತ್ತಿನ ಶಾಂತಿಮಂತ್ರದ 'ಮಾಹಂಬ್ರಹ್ಮನಿರಾಕುರ್ಯಾಂ, ಮಾಮಾಬ್ರಹ್ಮನಿರಾಕರೋತ್' ಎಂಬ ವಾಕ್ಯದಲ್ಲಿದೆ. ಇಲ್ಲಿ ನಾನು ಬ್ರಹ್ಮನನ್ನು ನಿರಾಕರಿಸದಿರಲಿ ಬ್ರಹ್ಮ ನನ್ನನ್ನು ನಿರಾಕರಿಸದರಿಲಿ ಎಂಬ ಪ್ರಾರ್ಥನೆ ಇದೆ. ಅಂದರೆ ದೇವ ಪಥದಲ್ಲೂ ಕೂಡ ಅವನು ನಮ್ಮನ್ನು ನಿರಾಕರಿಸುವ ಮತ್ತು ನಾವು ಕೆಲವೊಮ್ಮೆ ಅವನು ಒಲಿದು ಬರುವಾಗ ನಿರಾಕರಿಸುವ ಸಾಧ್ಯತೆ ಇದೆ ಎಂಬುದನ್ನು ಗಮನಿಸಿ ಈ ಮಿಲನದಲ್ಲೂ ನಾಲ್ಕು ಸಾಧ್ಯತೆಯನ್ನು ಗುರುತಿಸಿದೆ. ಅದಕ್ಕೆ ಆಯಾ ವ್ಯಕ್ತಿಗಳನ್ನು ಉದಾಹರಿಸಲು ಅವರ ಬರಹದಲ್ಲಿರುವ ಮತ್ತು ಬದುಕಿನಲ್ಲಿರುವ ಅಂಶಗಳೇ ಕಾರಣ.

ಈ ದಿಶೆಯಲ್ಲಿ ಸತ್ಯಕಾಮರ ನಡೆಯುಲ್ಲಿ ಇಂಥ ಒಂದು ತಿರಸ್ಕಾರ. ತನಗೆ ಬೇಕೆಂದರೂ ದೊರೆಯದ ಯಾವುದೋ ಅಪೇಕ್ಷೆ ಈ ದಾರಿಯಲ್ಲಿ ಇದ್ದಂತೆ ಕಾಣಿಸುತ್ತದೆ. ಅದರ ಒಂದು ಅನುಮಾನಿತ ನೋವು ಅವರ ಪೂರ್ಣ ವಿವರಗಳಲ್ಲಿ ಲಭ್ಯವಿದೆ.

ಇದು ಸಾಧನಾ ಪಥ ನಡೆದ ನನ್ನ ಅನುಭವದ ಆಧಾರದಲ್ಲಿ ಒಂದು ಅನುಮಾನ ಅಥವಾ ಊಹೆ ಮಾತ್ರ. ಇದಕ್ಕೆ ಸಾಧಾರ ಪ್ರಮಾಣಗಳಿಲ್ಲದಿದ್ದರೂ ನಡೆವ ವೇಳೆಗೆ ಗೋಚರಕ್ಕೆ ಬಂದ ಕೆಲ ಪ್ರಮೇಯಗಳು. ಇದರ ತಿದ್ದುಪಡಿ ಅಥವಾ ಬೆಳವಣಿಗೆ ಮುಂದೊಂದು ದಿನದಲ್ಲಿ ನಡೆದರೂ ಅಚ್ಚರಿಯಿಲ್ಲ ಎಂಬ ನಮ್ರತೆಯೊಂದಿಗೇ ಇದನ್ನು ಹಂಚಿಕೊಂಡಿದ್ದೇನೆ.

ಇಬ್ಬರ ವಿವರಣೆಗಳಿಂದ ನಮ್ಮ ಮೇಲೆ ಆಗುವ ಪರಿಣಾಮಗಳನ್ನು ಗಮನಿಸಿದರೆ ಒಂದು ಮಾತು ಹೇಳಬೇಕು. ರಜನೀಶ ಒಬ್ಬ ಎತ್ತರದಲ್ಲಿ ನಿಂತು ಅರಣ್ಯ ಪರಿಚಯಿಸಿ ಅದರಿಂದ ನಮ್ಮನ್ನು ಪಾರು ಮಾಡುತ್ತಾನೆ. ರಜನೀಶನ ವಿವರಗಳು ಆಪ್ತವಾಗಿಯೂ, ನಡೆಗೆ ನಮ್ಮನ್ನು ಹಚ್ಚಬಹುದಾದಷ್ಟು ಪ್ರಚೋದಕವೂ, ಪ್ರೋತ್ಸಾಹದಾಯಕವೂ ಕಾಣಿಸುತ್ತದೆ. ಸತ್ಯಕಾಮರ ಪ್ರಾಯೋಗಿಕ ಅನುಭವ ಅದರ ಕಾಠಿಣ್ಯತೆಯನ್ನು ನಮ್ಮಲ್ಲೂ ಮುಟ್ಟಿಸಿ, ಒಂದು ಕ್ಷಣ ರೋಚಕ ಎನಿಸಿ, ಕೂಡಲೇ ತಂತ್ರಪಥದ ಕುರಿತು ಭಯ ಬೆಳೆಯಿಸಿಕೊಳ್ಳಬಹುದಾದ, ನಮಗೆ ಇಂಥ ಸಾಹಸ ಬೇಡ ಎಂಬಂಥ ಅಧೀರತೆಯನ್ನು ತರಲಿಕ್ಕೆ ಸಾಕು. ಇದಕ್ಕೆ ಶಾಂತಾಮಠಪತಿಯವರ ಸಂಶೋಧನೆಯ ಮಾತುಗಳೇ ಉದಾಹರಣೆ. ಎಲ್ಲ ಅವರವರ ಓದಿನ ಮತ್ತು ಅವರವರ ಸಾಮರ್ಥ್ಯದ ಮೇಲೆ ಅವಲಂಬಿಸಿದೆ. ಆದರೆ ಇಷ್ಟು ಮಾತ್ರ ಸತ್ಯ ರಜನೀಶ ವಿವರಿಸುವ ತಂತ್ರದ ಮಾಧುರ್ಯ, ಮಾದಕತೆ, ಮೋಡಿ ಮಾಡಿ ಬಿಡುವ ಆಕರ್ಷಣೆ ಸತ್ಯಕಾಮರ ಬರಹದಲ್ಲಿ ಇಲ್ಲ.

ಅವರು ಎದೆತಟ್ಟಿ ತೊಡೆತಟ್ಟಿ ಧೀರರನ್ನು ಪಂಥಾಹ್ವಾನಕ್ಕೆ ಕರೆವ ರೀತಿ ಇದೆ. ಧೀರರಷ್ಟೇ ಸತ್ಯಕಾಮರ ಪ್ರಯೋಗ ಶಾಲೆಗೆ ಅರ್ಹರಾದಾರು. ರಜನೀಶರನ್ನು ನಂಬಿ ಯಾರೂ ಆ ಕಡೆಗೆ ಹೆಜ್ಜೆ ಇಡಬಹುದು. ತಂತ್ರದ ಎರಡು ಮುಖಗಳ ಪರಿಚಯದಂತೆ ಇವನ್ನು ಪರಿಭಾವಿಸಿಕೊಳ್ಳಬೇಕು. ತಂತ್ರಕ್ಕೆ ಈ ಎರಡೂ ಬೇಕು. ಅದಿಲ್ಲದೆ ಇದಿಲ್ಲ, ಇದಿಲ್ಲದೆ ಅದು ಸಾಧ್ಯವಿಲ್ಲ.

2. ಕುಂಡಲಿನಿ ಮತ್ತು ಶಕ್ತಿಪಾತದ ಕುರಿತು ರಜನೀಶ್ ಮತ್ತು ಸತ್ಯಕಾಮ

ಮನುಷ್ಯನ ಒಳಗೊಂದು ವಿಶೇಷ ಶಕ್ತಿಯಿದೆ. ಅದು ಅತ್ಯಂತ ಮಹತ್ವವಾದ್ದನ್ನು ಸಾಧಿಸಬಲ್ಲದು ಎಂಬುದನ್ನು ಅನೇಕರು ಮನಗಂಡಿದ್ದಾರೆ. ಕೆಲವರು ಒಪ್ಪುತ್ತಾರೆ, ಇನ್ನು ಕೆಲವರು ಅಲ್ಲಗಳೆಯುತ್ತಾರೆ. ಅಂಥದೊಂದು ಶಕ್ತಿ ಆಂತರಂಗಿಕವಾಗಿದ್ದು ಬಹಿರಂಗಕ್ಕೆ ಗೋಚರಿಸುವುದಿಲ್ಲ. ಮತ್ತು ಅದನ್ನು ವ್ಯಕ್ತಿ ತನ್ನ ಅನುಭವದಿಂದಲೇ ಅನುಭವಿಸಬೇಕು. ಇನ್ನೊಬ್ಬರು ವಿವರಿಸಿ ಅಥವಾ ತೋರಿಸಿ ಅದನ್ನು ಮನಗಾಣುವುದು ಸಾಧ್ಯವಿಲ್ಲ ಎಂಬುದು ಎಲ್ಲರ ತಿಳುವಳಿಕೆ.

ಸಾಧನಾ ಪಥದಲ್ಲಿ ಈ ಶಕ್ತಿಗೆ ಕುಂಡಲಿನಿ ಶಕ್ತಿ ಎಂದು ಹೆಸರು. ಈಗಿನ ಆಧುನಿಕ ಸಾಧಕರು ಅಂತೂ ಈ ಶಕ್ತಿಯನ್ನು ಜಾಗೃತಗೊಳಿಸುವ ಮತ್ತು ಆ ಮೂಲಕ ನಿಮ್ಮನ್ನು ಜಗತ್ತಿನ ತುತ್ತತುದಿಗೆ ಮುಟ್ಟಿಸುವ ಅನೇಕ ಭರವಸೆಯ ಮಾರಾಟ ನಡೆಸುತ್ತಿದ್ದಾರೆ. ಅದಕ್ಕೆ ಅದರದೇ ಆದ ಶಾಸ್ತ್ರ ವಿಧಿ ನಿಯಮಗಳನ್ನು ತಾವು ಹೇಳಿಕೊಡುವುದಾಗಿಯೂ ಮತ್ತು ಅದಕ್ಕೆ ನಿರ್ದಿಷ್ಟ ಮೊತ್ತದ ಫೀಸನ್ನು ಕಟ್ಟಬೇಕೆಂದೂ ಧನದಿಂದ ಅಳೆಯುತ್ತಾರೆ. ಇದನ್ನು ನಂಬಿ ಕುಂಡಲಿನಿ ಜಾಗೃತಿ ಶಿಬಿರಗಳಿಗೆ ಎಡತಾಕುವ ಅನೇಕ ವಿದ್ಯಾವಂತ ಶಿಷ್ಯರೂ, ಪರಮಾವಧಿ ಜ್ಞಾನಿಗಳೆಂಬ ಗುರುಗಳೂ ನಮ್ಮ ಕಣ್ಮುಂದೆ ಸಾಕಷ್ಟಿದ್ದಾರೆ.

ವೈಯಕ್ತಿಕವಾಗಿ ಯಾರನ್ನು ಕೇಳಿದರೂ ಕುಂಡಲಿನಿ ಎಂದರೆ ಏನು, ಆಗ ಏನಾಗುತ್ತದೆ. ಅದರ ಅನುಭವ ವಿವರಿಸಿ ಎಂದಾಗ, ಅದು ಎಚ್ಚರಾದಾಗ ತಾವು ಮೈ ಮರೆತು ಆನಂದ ತುಂದಿಲರಾಗುವುದಾಗಿಯೂ, ನೆಲದಿಂದ ಎಷ್ಟೋ ಎತ್ತರ ತೇಲಿದಂತೆಯೂ, ಆಗ ತಮಗೆ ಅಗೋಚರಗಳೆಲ್ಲ ಗೋಚರ ಆದಂತೆಯೂ ವಿವರಿಸುತ್ತಾರೆ.

ಕುಂಡಲಿನಿ ಇದೆಯೇ? ಇದ್ದರೆ ಅದರ ವಿವರಣೆ ಏನು? ಈಗಿನವರು ನಂಬಿರುವುದೇ ಅದರ ರೀತಿಯೇ? ಅಥವಾ ಅದರ ಬೇರೆ ಸಾಧ್ಯತೆಗಳೇನು? ಅದು ಹೇಗೆ ಜಾಗೃತವಾಗುತ್ತದೆ? ಯಾಕೆ ಅದಕ್ಕೆ ಅಷ್ಟು ಪ್ರಮುಖ ಸ್ಥಾನ ಎಂಬ ಮುಖ್ಯ ಪ್ರಶ್ನೆಗಳೊಂದಿಗೆ ಈ ಚರ್ಚೆಯನ್ನು ಆರಂಭಿಸುವುದು ಒಳ್ಳೆಯದು.

ನಾನು ಇದುವರೆಗೆ ಓದಿರುವ ಅಲ್ಪಮಿತಿಯಲ್ಲಿ ಕುಂಡಲಿನಿಯ ಕುರಿತು ಸ್ಪಷ್ಟ ಮತ್ತು ನಿಖರ ವಿವರಗಳು ನನಗೆ ದೊರೆತಿಲ್ಲ. ಎಲ್ಲರೂ ಅದು ಮೂಲಾಧಾರದಲ್ಲಿ ಇರುವ ಶಕ್ತಿ ಮತ್ತು ಅದು ಸಾಧನೆಯಿಂದ ಜಾಗೃತವಾಗುತ್ತದೆ ಎಂಬ ವಿವರವನ್ನು ಮಾತ್ರ ನೀಡಿದ್ದಾರೆ. ಅದು

ಸಂಭವಿಸಿದಾಗ ದೈಹಿಕ ಮತ್ತು ಮಾನಸಿಕ ವ್ಯತ್ಯಾಸಗಳಾಗುವ ವಿವರವನ್ನು ಸ್ವಲ್ಪ ಮಟ್ಟಿಗೆ ಯು.ಜಿ. ಕೃಷ್ಣಮೂರ್ತಿಯ ಅನುಭವ ವಿವರಗಳಲ್ಲಿ ಗಮನಿಸಬಹುದು. (ವಿವರಗಳಿಗೆ ಗಮನಿಸಿ– The mystique of Enlightenment (origin) U.G. Krishnamurthy, (collection) Rodney Arms – 1980) ಆದರೆ ನಿಜಕ್ಕೂ ಅಂಥ ಪರಿವರ್ತನೆ ಆಗುವುದು ಯಾಕೆ? ಮತ್ತು ಅದರ ಪರಿಣಾಮಗಳು ಏನು ಎಂಬ ವಿವರಗಳು ಅವರ ಕೃತಿಯಲ್ಲೂ ಕಾಣಲು ಸಿಗುವುದಿಲ್ಲ.

ಅದು ತುಂಬ ಅಪಾಯಕಾರಿ, ಆ ಕುಂಡಲಿನಿ ಕೆರಳಿತು ಎಂದರೆ ಹುಚ್ಚು ಹಿಡಿಯಬಹುದು. ಆತ್ಮಹತ್ಯೆ ಮಾಡಿಕೊಳ್ಳಬಹುದು ಎಂದು ಹೆದರಿಸಿದವರೂ ಇದ್ದಾರೆ. ಆದರೆ ಕುಂಡಲಿನಿಯ ನಿಜ ರೀತಿಯ ಕುರಿತು ಸ್ಪಷ್ಟ ಮಾಹಿತಿ ಎಲ್ಲಿಯೂ ದೊರೆಯುವುದಿಲ್ಲ.

ಇಂಥದೊಂದು ಶಕ್ತಿ ಸಾಧ್ಯತೆ ಇರುವ ಕುರಿತು ರಜನೀಶ್ ಮತ್ತು ಸತ್ಯಕಾಮ ಇಬ್ಬರೂ ತಮ್ಮ ಕೃತಿಗಳಲ್ಲಿ ಹೇಳಿಕೊಂಡಿದ್ದಾರೆ. ಸತ್ಯಕಾಮರು ತನ್ನ ಕೃತಿ ತಂತ್ರಯೋನಿಯ ಒಂದು ಅಧ್ಯಾಯದಲ್ಲಿ ಮಾತ್ರ ಅದರ ಕುರಿತು ಅಲ್ಪಸ್ವಲ್ಪ ಸಂಗತಿಗಳನ್ನು ವಿವರಿಸಿದ್ದರೆ, ರಜನೀಶ್ ಕುಂಡಲಿನಿ ಯೋಗ ಸಂ. I ಮತ್ತು II ಕೃತಿಗಳ ಮೂಲಕ ಕುಂಡಲಿನಿ ಕುರಿತ ಅನೇಕ ಸ್ಪಷ್ಟ ಮಾಹಿತಿ ಮತ್ತು ವಿವರಣೆಯನ್ನು ನೀಡಿದ್ದಾನೆ. ರಜನೀಶ್ ಮೊತ್ತಮೊದಲನೆಯದಾಗಿ ಇದುವರೆಗೆ ಯಾರೂ ವಿವರಿಸದ ರೀತಿಯಲ್ಲಿ ಕುಂಡಲಿನಿ ಶಕ್ತಿಯನ್ನು ವಿವರಿಸುತ್ತಾನೆ. ಕುಂಡ ಅಂದರೆ ಮೂಲಾಧಾರದ ಕಾಮಕೇಂದ್ರದ ಹತ್ತಿರ ಇರುವ ಕೊಳ. ಅಲ್ಲಿರುವ ಶಕ್ತಿಯ ಉತ್ಕ್ರಮಣವು ಕುಂಡಲಿನಿ ಶಕ್ತಿ. ಹೀಗೆ ಹೇಳಿದರೆ ನಾವು ಏನನ್ನೂ ವಿವರಿಸಿದಂತೆ ಆಗುವುದಿಲ್ಲ. ಅದು ಏಳುವುದು ಅಂದರೆ ಎಲ್ಲಿ? ಎಲ್ಲಿಂದ ಎಲ್ಲಿಗೆ? ಅದಕ್ಕೂ ಹಾವಿಗೂ ಏನು ಸಂಬಂಧ? ಈ ಮುಂತಾದ ಪ್ರಶ್ನೆಗಳು ನಮಗೆ ಎಲ್ಲರಿಗೂ ಸಾಮಾನ್ಯವಾಗಿ ಇವೆ.

ರಜನೀಶ್‌ನ ವಿವರಣೆ ಈ ರೀತಿ ಆರಂಭವಾಗುತ್ತದೆ. ಬೀಜ ಒಂದು ದಿನ ಒಂದು ದೊಡ್ಡ ಮರ ಅದರಲ್ಲಿರುವ ಕಾಯಿ, ಹಣ್ಣು, ಅದರ ಎತ್ತರ, ಸೌಂದರ್ಯ, ವೈಶಾಲ್ಯ, ಅದು ಕೊಡುವ ನೆರಳು ಎಲ್ಲವನ್ನು ನೋಡಿ 'ಅಬ್ಬ ! ನೀನು ಎಷ್ಟು ದೊಡ್ಡವ. ನಿನ್ನಷ್ಟು ದೊಡ್ಡವನಾಗುವುದು ನಮಗಂತೂ ಅಸಾಧ್ಯ. ನಿನ್ನ ಸಾಮರ್ಥ್ಯ ನಮಗೆಲ್ಲಿದೆ?' ಎಂದು ಕೈ ಮುಗಿಯುತ್ತದೆ. ಆದರೆ ಆ ಬೀಜಕ್ಕೆ ಗೊತ್ತಿಲ್ಲ ತನ್ನ ಒಳಗೂ ಅಂಥದೇ ಒಂದು ಮರವಿದೆ. ತಾನೂ ಅಷ್ಟೇ ಎತ್ತರ ವಿಶಾಲ ಬೆಳೆಯ ಬಲ್ಲೆ. ಆ ಶಕ್ತಿ ಸಾಮರ್ಥ್ಯಗಳನ್ನು ತಾನು ತನ್ನೊಳಗೇ ಮುಚ್ಚಿಕೊಂಡಿದ್ದೇನೆ ಎಂದು. ಒಂದು ದಿನ ಅದೂ ಕೂಡ ತನ್ನನ್ನು ಮಣ್ಣಿಗೆ ಸಮರ್ಪಿಸಿ ತಾನು ಕಟ್ಟಿಕೊಂಡ ಚಿಪ್ಪೆಂಬ ಗೋಡೆಯೊಡೆದರೆ ಒಳಗಿರುವ ಜೀವ ಗಿಡವಾಗಿ ಬೇರೂರಿ ಮುಂದೆ ಅಂಥದೇ ಬಲಿಷ್ಠ

ಮರವಾಗುತ್ತದೆ. ಇದೇ ಪ್ರತೀ ಜೀವದ ಬೆಳವಣಿಗೆ. ಪ್ರತೀ ವ್ಯಕ್ತಿಯೂ ಹೀಗೆ ಬುದ್ಧನನ್ನು ನೋಡಿ ವಿಸ್ಮಿತರಾಗಬೇಕಿಲ್ಲ. ಒಳಗೊಬ್ಬ ಬುದ್ಧ ಎಲ್ಲರಲ್ಲೂ ಮಲಗಿದ್ದಾನೆ. ಎಚ್ಚರ ಮಾಡುವುದು ನಮ್ಮ ಕೆಲಸ ಎಂಬ ಭರವಸೆಯೊಂದಿಗೆ ಅವನ ಕುಂಡಲಿನಿ ಶಕ್ತಿಯ ವಿವರಣೆ ಆರಂಭವಾಗುತ್ತದೆ.

ಮೂಲಾಧಾರದಲ್ಲಿದೆ, ಎದ್ದೇಳುತ್ತದೆ, ಇತ್ಯಾದಿಗಳಿಗೂ ಅವನು ಎರಡು ಅತ್ಯಂತ ಉತ್ತಮ ಉಪಮೆಗಳನ್ನು ನೀಡುತ್ತಾನೆ. ಒಂದು ಬೀಜವಿದೆ ಬುಡದಲ್ಲಿ, ಮೇಲೆ ತಲೆ ಎತ್ತರದಲ್ಲಿ ಹೂವು ತುಂಬ ಸುಂದರವಾಗಿ ಅರಳಿ ನಿಂತಿದೆ. ಅವೆರಡಕ್ಕೂ ಸಂಪರ್ಕ ಹುಟ್ಟಿಸುವ ಗಿಡದ ಕಾಂಡ ಮಾತ್ರ ಇನ್ನೂ ಪರಸ್ಪರ ಸಂಪರ್ಕ ಕೊಟ್ಟಿಲ್ಲ. ಒಮ್ಮೆ ಸಂಪರ್ಕವಾಯಿತೆಂದರೆ ನಿಮ್ಮ ಒಳಗೆ ಅರಳಿರುವ ಹೂವಿನ (ಸಹಸ್ರಾರ–ತಾವರೆ) ಸುಗಂಧ ಸರ್ವರನ್ನು ತಲುಪಲಿಕ್ಕಿದೆ. ಈ ಕಾಂಡವನ್ನು ಜೋಡಿಸುವುದೇ ಕುಂಡಲಿನಿ. ಬೀಜಕ್ಕೂ ಹೂವಿಗೂ ನಡುವಿನ ಸಂಪರ್ಕ ಕಡಿದು ಬೀಜ ಹೂವನ್ನು ಅರಿಯದೆ ಉಳಿದಿದೆ ಎನ್ನುತ್ತಾನೆ.

ಇನ್ನೊಂದು ಉಪಮೆ ಇಂಧನದ ಶಕ್ತಿ ಮೂಲದಲ್ಲಿ ಅಗಾಧವಾಗಿ ಸುತ್ತುಗಟ್ಟಿ ಕುಳಿತಿದೆ. ಮೇಲೆ ತಲೆ ಎತ್ತರದಲ್ಲಿ ಒಂದು ಬೆಳಕು ಸಿದ್ಧವಾಗಿ ಹತ್ತಿಕೊಂಡು ಉರಿಯುತ್ತಿದೆ. ಅದು ಅಂತಿಂಥ ಬೆಳಕಲ್ಲ. ಜಗವಿಡೀ ಬೆಳಗಬಲ್ಲ ಬೆಳಕು. ಜಗವನ್ನು ತೋರಬಲ್ಲ ಬೆಳಕು. ಬುಡದಲ್ಲಿರುವ ಇಂಧನಕ್ಕೆ ತಲೆ ಎತ್ತರದ ಮೇಲಿರುವ ಬೆಳಕಿನ ಪರಿಚಯವಾಗಿಲ್ಲ. ಕಾರಣ ಅವರೆಡನ್ನು ಪರಸ್ಪರ ಸಂಪರ್ಕಿಸುವ ವಯರ್ ಇನ್ನೂ ಸಂಪರ್ಕ ಪಡೆದಿಲ್ಲ. ಒಮ್ಮೆ ವಯರ್ ಇಂಧನ ಮೂಲದಿಂದ ತಲೆಗೆ ಸಂಪರ್ಕ ಕಲ್ಪಿಸಿತೆಂದರೆ ಜಗಕ್ಕೆ ಬೆಳಕು. ಬೆಳಗಿದ ವ್ಯಕ್ತಿಗೂ ಬೆಳಕಿನ ಅವಸ್ಥೆ. ಇವೆರಡೂ ಅಸಂಪರ್ಕದಲ್ಲಿ ಮೈ ಮರೆತು ಇದ್ದಾವೆ.

ಈ ಬೀಜ–ಹೂವು, ಈ ಇಂಧನ ಶಕ್ತಿ – ಬೆಳಕಿನ ಬಲ್ಬ್‌ನ್ನು ಪರಸ್ಪರ ಜೋಡಿಸುವ ಸಂಪರ್ಕಕ್ಕೆ ತರುವ ವಸ್ತು ಯಾವುದು? ಅದೇ ಬೆನ್ನು ಹುರಿ. ಈ ಬೆನ್ನು ಹುರಿಗೆ ಬುಡದಿಂದ ಒಮ್ಮೆ ಸಂಪರ್ಕ ಆಗಬೇಕು ಅದು ಒಮ್ಮೆಲೇ ಜೀವಂತವಾಗಿ ಸೆಟೆದು ನಿಂತು ತಲೆಯ ಸಹಸ್ರಾರವನ್ನು ಸಂಪರ್ಕಿಸಿ ಬಿಟ್ಟರೆ ಆಗ ಮಹಾ ತಾವರೆಯ ಅರಳುವಿಕೆ, ಜಗದ ಬೆಳಕು ಹತ್ತಿಕೊಂಡು ಬಿಡುತ್ತದೆ. ಇಂಥದೊಂದು ಅದ್ಭುತ ಹೋಲಿಕೆಯಿಂದ ಕುಂಡಲಿನಿ ಶಕ್ತಿಯನ್ನು ಪರಿಚಯಿಸುವ ರಜನೀಶ್ ಆ ಸಂಪರ್ಕ ಸಾಧ್ಯ ಆಗುವುದು ಹೇಗೆ ಎಂಬ ವಿವರವನ್ನು ನೀಡುತ್ತಾನೆ.

ದೀರ್ಘ ಶ್ವಾಸ ಮತ್ತು ನಾನು ಯಾರು ಎಂಬ ಪ್ರಶ್ನೆಯ ನಿರಂತರ ಧ್ಯಾನ ಇಂಥದೊಂದು ಕುಂಡಲಿನಿ ಜಾಗೃತಿಗೆ ಪ್ರೇರಕ ಮತ್ತು ಪೂರಕ ಎನ್ನುತ್ತಾನೆ. ನಾನು ಯಾರು

ಎಂಬ ಪ್ರಶ್ನೆ ಮಾನಸಿಕ ಸ್ತರದಲ್ಲಿ ನಮ್ಮನ್ನು ಮೂಲಕ್ಕೆ ಸೆಳೆದರೆ, ನಮ್ಮ ದೀರ್ಘ ಶ್ವಾಸೋಚ್ಛ್ವಾಸಗಳು ನಮ್ಮನ್ನು ದೇಹದ ಮೂಲದವರೆಗೆ ಸೆಳೆಯುತ್ತವೆ. ಇವು ಕುಂಡಲಿನಿ ಜಾಗೃತಿಗೊಳಿಸುವ ಸಾಧಕನಿಗೆ ನೆರವು ಅಥವಾ ಪೂರಕ ಅಂಶಗಳೇ ಹೊರತು ಇದರಿಂದಲೇ ಕುಂಡಲಿನಿ ಜಾಗೃತಿಯಾಗುವ ಭರವಸೆಯನ್ನು ರಜನೀಶ್ ಕೊಡುವುದಿಲ್ಲ.

ಹೀಗೆ ಜಾಗೃತವಾಗುವ ಹೊತ್ತಿಗೆ ಸುತ್ತಿಕೊಂಡಿದ್ದ ಮೂಲದ ಶಕ್ತಿ ಒಮ್ಮೆಲೆ ಜಾಗೃತವಾಗಿ ಎದ್ದು ನಿಲ್ಲುವ ಆ ಅನುಭವ ಸುತ್ತುಗಟ್ಟಿ ಮಲಗಿದ್ದ ಹಾವು ಥಟ್ಟಂತ ಹೆಡೆ ಎತ್ತಿ ನಿಂತರೆ ಹೇಗೋ ಹಾಗೆಯೇ ಇರುವುದರಿಂದ ಕುಂಡಲಿನೀ ಶಕ್ತಿಯನ್ನು ಸರ್ಪಕ್ಕೆ ಹೋಲಿಸಿದ್ದಾರೆ ಎಂಬ ಅಭಿಪ್ರಾಯ ಇಬ್ಬರಲ್ಲೂ ವ್ಯಕ್ತವಾಗಿದೆ.

ಆದರೆ ಕುಂಡಲಿನಿ ಜಾಗೃತಿಯು ಹೇಗೆ ಸಂಭವಿಸಬೇಕು ಅದಕ್ಕೆ ನಿಜವಾದ ಆಕರ ಅಥವಾ ಕಾರಣ ಯಾವುದು ಎಂಬುದಕ್ಕೆ ಸತ್ಯಕಾಮ ಮತ್ತು ರಜನೀಶ್ ಇಬ್ಬರೂ ಆಯಾ ವ್ಯಕ್ತಿಗೆ ಅವರವರದೇ ಕಾರಣಗಳು ಎಂಬ ನಿರ್ಣಯವನ್ನೇ ಹೇಳುತ್ತಾರೆ. ಇಬ್ಬರೂ ಕಾರಣಗಳ ವಿವರಗಳಿಗೆ ಹೋಗುವುದಿಲ್ಲ. ಯಾಕೆಂದರೆ ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ ಎಂಬ ನಿಲುವೇ ಇಬ್ಬರಲ್ಲೂ ಇದೆ. ಆದರೆ ಮುಂದೆ ಬಂದಾಗಿದೆ, ಹಿಂದೆ ಹೋಗಲು ತಿಳಿಯುವುದಿಲ್ಲ ಅಂಥದೊಂದು ಅತಂತ್ರ ಅವಸ್ಥೆಯಲ್ಲಿ ಮನುಷ್ಯನ ಶಕ್ತಿ ಜಾಗೃತವಾಗುತ್ತದೆ. ಅದೇ ಕುಂಡಲಿನಿ ಶಕ್ತಿ ಎಂಬ ವಿವರವನ್ನು ಸತ್ಯಕಾಮರು ನೀಡಿದರೆ, (ತಂತ್ರಯೋನಿಯನ್ನು ಗಮನಿಸಿ ವಿವರಗಳಿಗೆ) ರಜನೀಶ್, It is a powerful shock and it is not at all a bufer (208, Kundalini yoga Vol I, 1998) ಎಂಬ ಮಾತನ್ನು ಹೇಳುತ್ತಾನೆ.

ಅಂದರೆ ಅದು ಒಂದು ಆಕಸ್ಮಿಕ, ಗೊತ್ತಿಲ್ಲದೆ ಸಂಭವಿಸುವಂಥದು. ಅನಿರೀಕ್ಷಿತ ಪ್ರಸಂಗದಲ್ಲಿ ಏನು ಮಾಡಬೇಕು ತೋಚದಿದ್ದಾಗ, ಅತ್ಯಂತ ಅತಂತ್ರ ಪರಿಸ್ಥಿತಿಯ ಅಥವಾ ಇನ್ಯಾವುದೋ ಕಾರಣಕ್ಕೆ ಉಂಟಾಗ ಬಹುದಾದ ಶಾಕ್ ಎಂಬುದನ್ನು ಹೇಳುತ್ತಾನೆ. ಮತ್ತು ಈ ಶಾಕ್ ಪ್ರತೀ ಜೀವಿಗೂ ಒಂದಲ್ಲ ಒಂದು ದಿನ ಸಂಭವಿಸಲೇಬೇಕು ಎಂದು ತೋರುತ್ತದೆ. ಸಾಮಾನ್ಯವಾಗಿ ಈ shock ತುಂಬ ಆಘಾತಕಾರಿ ಇರುವುದರಿಂದ ನಮ್ಮ ಮೂಲ ಶಕ್ತಿಯನ್ನು ಕೆಣಕಿದಂತಾಗಿ ಅದು ಎದ್ದೇಳುವ ಸಾಧ್ಯತೆ ಇರಬಹುದು. ಆದ್ದರಿಂದಲೇ ಅದು ತುಂಬ ಭಯಾನಕ ಮತ್ತು ಆಗ ವ್ಯಕ್ತಿ ಪೂರ್ತಿ ಶಂಕೆ, ಅನುಮಾನ ಭಯಗಳಲ್ಲಿ ಮುಳುಗುತ್ತಾನೆ. ಅದರ ಪರಿಣಾಮವಾಗಿಯೇ ಶಕ್ತಿಪಾತ ಸಂಭವಿಸುತ್ತದೆ. ಮತ್ತು ಆ ಶಕ್ತಿಪಾತದ ಎರಡು ಮೂರು

ಪುನರಾವರ್ತನೆಗಳ ಬಳಿಕವೇ ಅವನ ಅನುಮಾನ ಭಯಗಳು ಇಲ್ಲವಾಗುತ್ತವೆ ಎಂಬ ವಿವರವನ್ನು ತಿಳಿಸುತ್ತಾನೆ. (154, Kundalini Yoga Vol. I, 1998)

ಗುರ್ಡ್ಜೀಫ್ ಎಂಬ ತತ್ತ್ವಶಾಸ್ತ್ರಜ್ಞನ ಪ್ರಕಾರ ಕುಂಡಲಿನಿ ಜಾಗೃತಿ ಬೇಡ. ಅದು ಜ್ಞಾನ ಸಂಪಾದನೆಗೆ ಒಂದು ಅಡ್ಡಿ. (Bufer) ಆದರೆ ರಜನೀಶ್ ಆ ಮಾತನ್ನು ಒಪ್ಪುವುದಿಲ್ಲ. ಬದಲಿಗೆ ಅವನ ಪ್ರಕಾರ ಒಮ್ಮೆ ಜಾಗೃತವಾದ ಜೀವ ಮಾತ್ರ ಅನುಮಾನ ಭಯಗಳನ್ನು ಕಳೆದುಕೊಂಡು ನಿರ್ಭೀತ ಮತ್ತು ನಿರ್ಮಲ ಮನಸ್ಸಿನಿಂದ ಮುಂದಿನ ದಾರಿಗೆ ಸಿದ್ಧವಾಗುತ್ತದೆ. ಗೋಪೀಕೃಷ್ಣ ಎಂಬ ತತ್ತ್ವಶಾಸ್ತ್ರಜ್ಞನ ಪ್ರಕಾರ ಕುಂಡಲಿನಿಯು ಸಾಧಕ ತಲುಪುವ ಅಂತಿಮ ಸ್ಥಿತಿ. ಆದರೆ ರಜನೀಶ್ ಆ ಅಭಿಪ್ರಾಯವನ್ನು ಒಪ್ಪುವುದಿಲ್ಲ ಮತ್ತು ಅದರ ಬಗ್ಗೆ ಅನುಕಂಪ ಪಡುತ್ತಾನೆ.

ರಜನೀಶನ ಪ್ರಕಾರ ಆಗ ಅನೇಕ ಸೂಕ್ಷ್ಮ ಸಂಗತಿಗಳು ಸಂಭವಿಸಿ ಆತ್ಮವು ನಿಧಾನಕ್ಕೆ ಎರಡು ರೀತಿಯ ಬೆಳವಣಿಗೆಯನ್ನು ತಲುಪಬಹುದು. ಎಲ್ಲ ಶಕ್ತಿಗಳು ಒಂದೊಂದಾಗಿ ಪರಿಚಯ ಆಗುತ್ತಾ ಕಡೆಗೆ ಆತ್ಮದ ಅರಿವು ಆಗುವುದು ಅಥವಾ ನೇರವಾಗಿ ಪ್ರಜ್ಞೆ ಆತ್ಮದ ಜೊತೆ ಐಕ್ಯ ಆಗಿ ಬಿಡುವುದು ಇವೆರಡೂ ಇಲ್ಲದೆ ಏಕಾಏಕಿ ದೇವರ ಅಥವಾ supreme energy ಯ ಜೊತೆಗೂ ಮುಖಾಮುಖಿಯಾಗಿ ಬಿಡಬಹುದು. (173, Kundalini Yoga Vol I 1998)

ಇಂಥ ಕುಂಡಲಿನಿ ಜಾಗೃತವಾಗುವಾಗ ಅದರ ಪರೋಕ್ಷ ಕಾರಣವಾಗಿ ಶಕ್ತಿಪಾತವೂ ಸಂಭವಿಸುತ್ತದೆ ಎಂಬುದು ರಜನೀಶ್ ಮತ್ತು ಸತ್ಯಕಾಮರ ನಂಬಿಕೆ. ಕಾರಣ ವ್ಯಕ್ತಿಗೆ ಆಗ ತಾನು ನಡೆದ ದಾರಿಯ ಮತ್ತು ಸಾಧನೆಯ ಕುರಿತು ಅನುಮಾನ ಮತ್ತು ಭೀತಿ ಹುಟ್ಟುತ್ತದೆ. ಅದನ್ನು ನಿವಾರಿಸಲು ಇಂಥದೊಂದು ಸಾಧನಾ ಪಥದ ಅನುಗ್ರಹವೂ ಜತೆಜತೆಗೆ ನಡೆಯುತ್ತದೆ. ಇದು ಗುರುವಿದ್ದು ಪ್ರತ್ಯಕ್ಷವಾಗಿಯೂ ಸಂಭವಿಸಬಹುದು. ಗುರುವಿಲ್ಲದೆ ಪರೋಕ್ಷವೂ ಸಂಭವಿಸಬಹುದು.

ಹೀಗೆ ಕುಂಡಲಿನಿ ಜಾಗೃತವಾದ ಪರಿಣಾಮವಾಗಿ 'As a result many new suttle senses within you will become awake and active. As a result many new scuttle senses within you will become awake and active. These extraordinary centres make you telepathic and clair voyant. You will begin to see and hear things which are beyond the reach of your ordinary eyes and ears (173, Kundalini yoga Vol. I, 1998) ಎಂಬ ಘಟನೆಗಳನ್ನು ವಿವರಿಸುತ್ತಾನೆ.

ಕುಂಡಲಿನಿ ಜಾಗೃತವಾಗುವ ಹೊತ್ತಿಗೆ ಸಂಭವಿಸಬಹುದಾದ ಕೆಲವು ಸಂಗತಿಗಳನ್ನು ರಜನೀಶ್ ಸೂಚಿಸುತ್ತಾನೆ. ನಾವು ಕಂಡೇ ಇರದ ಹಲವು ಬಣ್ಣಗಳು ಕಾಣುತ್ತವೆ. ಇದುವರೆಗೆ

ಕೇಳದ ಶಬ್ದಗಳು, ಅನುಭವಿಸದ ಅನುಭವ, ಹಳೆಯ ಎಲ್ಲ ದೇಹಗಳ ರೂಪಾಂತರ, ಅದರ ಅನುಭವ ಇರುತ್ತದೆ. ಎಲ್ಲರೂ ನಗದಾಗ ಇವನು ನಗಬಹುದು, ಎಲ್ಲರೂ ನಕ್ಕಾಗ ಇವನು ಸುಮ್ಮನಿರಬಹುದು. ಒಟ್ಟಿನಲ್ಲಿ ಹುಚ್ಚು ಅನಿಸಿಕೊಳ್ಳಬಹುದು. ಕಂಡರಿಯದ ಭೀತಿಯೂ ಆಗ ಕಾಣಿಸಿಕೊಳ್ಳುತ್ತದೆ. (150-51, Kundalini Yoga, Vol. I 1998)

ಆದರೆ ಒಂದು ಸಂಗತಿಯನ್ನು ಗಮನಿಸಬೇಕು. ಇದು ಕಾಲ್ಪನಿಕ ಆಗಲು ಸಾಧ್ಯವಿಲ್ಲ. ನಮಗೆ ಗೊತ್ತಿರುವ ಅನುಭವವನ್ನು ಮಾತ್ರ ನಾವು ಕಲ್ಪಿಸಬಹುದೇ ಹೊರತು, ಇದುವರೆಗೆ ಕಂಡು ಕೇಳರಿಯದ ಅನುಭವವನ್ನು ಕಲ್ಪಿಸುವುದು ಹೇಗೆ? ಹಾಗಾಗಿ ಇದೊಂದು ಸ್ಫೋಟ ಮತ್ತು ತಾನಾಗಿಯೇ ಸಂಭವಿಸುತ್ತದೆ. ವೈಯಕ್ತಿಕ ಕಾರಣಗಳಿಂದಲೇ ಸಂಭವಿಸುತ್ತದೆ ಅದಕ್ಕೆ ಗುರು, ದೇವರು ಮುಂತಾದ ನೆಪಗಳನ್ನು ಹೇಳಲಾಗುತ್ತದೆ ಅಷ್ಟೇ.

ಈ ಕುಂಡಲಿನಿ ಸಂಭವಿಸಲು ಬೇಕಾದ ದೇಹಕ್ಕೆ ಇರುವ ಕಾರ್ಯ ಕಾರಣಗಳು, ಅದರ ವೈಜ್ಞಾನಿಕ ವಿವರಗಳನ್ನು ರಜನೀಶ್ ನೀಡುತ್ತಾನೆ. ಇದರ ತಪ್ಪು ಒಪ್ಪುಗಳನ್ನು ಅನುಮಾನಿಸುವವರಿಗೆ ಒಂದು ಸುಂದರ ವೈಜ್ಞಾನಿಕ ವಿವರಣೆಯ ಹಾಗೆ ಆ ವಿವರ ಇದೆ.

ಏಳು ಚಕ್ರಗಳು	**ಏಳು ದೇಹಗಳು**	**ಅವಧಿಗಳು**
ಮೂಲಾಧಾರ	ಸ್ಥೂಲ ಶರೀರ (Physical Body)	1–7 ನೇ ವರ್ಷ
ಸ್ವಾಧಿಷ್ಠಾನ	ಭಾವ ಶರೀರ (Etheric Body)	7–14 ನೇ ವರ್ಷ
ಮಣಿಪೂರ	ಸೂಕ್ಷ್ಮ ಶರೀರ (Astral Body)	14–21ನೇ ವರ್ಷ
ಅನಾಹತ	ಮಾನಸ ಶರೀರ (Psychic Body)	21–28 ನೇ ವರ್ಷ
ವಿಶುದ್ಧಿ	ಆತ್ಮ ಶರೀರ (Spiritual Body)	28–35 ನೇ ವರ್ಷ
ಆಜ್ಞಾ	ಬ್ರಹ್ಮಶರೀರ (Cosmic Body)	35–42 ನೇ ವರ್ಷ
ಸಹಸ್ರಾರ	ನಿರ್ವಾಣ ಶರೀರ (No Body)	42–49ನೇ ವರ್ಷ

1) ರಜನೀಶನ ಪ್ರಕಾರ 1–7ರವರೆಗೆ ನಮಗೆ ದೇಹಮಾತ್ರ. ಅದು ನಾನು ನನ್ನದು ಭಾವವಿಲ್ಲದ ಸ್ಥಿತಿ. ಅದೊಂದು ಸ್ಥೂಲ ಶರೀರ ಅವಸ್ಥೆ. ಆಗ ಅದು ಹುಟ್ಟುತ್ತಲೇ ಗಂಡು, ಲಿಂಗವಿದ್ದರೆ ಆ ದೇಹ ಗಂಡು ದೇಹ. ಹುಟ್ಟುತ್ತಲೇ ಹೆಣ್ಣು ಲಿಂಗವಿದ್ದರೆ ಅದು ಹೆಣ್ಣು ದೇಹ. ಅದರ ಸ್ಥಾನ ಮೂಲಾಧಾರ ಚಕ್ರ.

2) ಅಲ್ಲಿಂದ 7–14 ಭಾವಶರೀರ. ಇಲ್ಲಿ ನಾನು ನನ್ನದು ಪ್ರೀತಿ, ಪ್ರೇಮ ಭಾವನೆಗಳ ಅರ್ಥವಾಗುವ ಕಾಲ. ಅದು ಪುರುಷ ದೇಹದಲ್ಲಿ ಎರಡನೆಯ ಶರೀರವಾಗಿ ಸ್ತ್ರೀಯಾಗಿರುತ್ತದೆ. ಅದೇ ಸ್ತ್ರೀ ದೇಹದಲ್ಲಿ ಪುರುಷನಾಗಿ ಇರುತ್ತದೆ. ಆದ್ದರಿಂದಲೇ ಅದು ಮೊದಲ ಶರೀರ ಗಂಡು ಎರಡನೆಯ ಶರೀರ ಹೆಣ್ಣು meet ಆಗುವ ಕಾಲ ಅಥವಾ ಮೊದಲ ಶರೀರದ ಸ್ತ್ರೀ ಎರಡನೆಯ ಶರೀರದ ಪುರುಷನನ್ನು ಮುಖಾಮುಖಿಯಾಗುವ ಕಾಲ. ಆದ್ದರಿಂದಲೇ ಪರಸ್ಪರ ವಿರುದ್ಧ ಲಿಂಗದ ಆಕರ್ಷಣೆ ಈ ಹೊತ್ತಿಗೆ ಭೌತಿಕ (7–14ರ ವಯಸ್ಸು) ಜಗತ್ತಿನಲ್ಲೂ ಸಂಭವಿರುತ್ತದೆ. ಸ್ವಾಧಿಷ್ಠಾನ ಈ ಶರೀರದ ಸ್ಥಾನ.

3) 14–21ನೇ ವರ್ಷಕ್ಕೆ ಅದು ಸೂಕ್ಷ್ಮ ಶರೀರದ ಕಡೆಗೆ ಹೊರಳುತ್ತದೆ. ಅದು ಪುನಃ ಗಂಡು ದೇಹದಲ್ಲಿ ಗಂಡು, ಮತ್ತು ಹೆಣ್ಣು ದೇಹಕ್ಕೆ ಹೆಣ್ಣು ಈ ರೀತಿ ಇರುತ್ತದೆ. ಇದರ ಸ್ಥಾನ ಮಣಿಪೂರ. ಇಲ್ಲಿ ತರ್ಕ, ಕಾರ್ಯಕಾರಣ, ಯೋಚನೆ, ಬುದ್ಧಿವಂತಿಕೆ, ಪ್ರೌಢಿಮೆ ಇವುಗಳು ಸಂಭವಿಸುವ ಕಾಲ.

4) 21–28ನೆಯ ವರ್ಷಕ್ಕೆ ಇದು 4ನೇಯ ಶರೀರ ಪ್ರವೇಶಿಸುವ ಬೆಳವಣಿಗೆ ಅದೇ ಮಾನಸ ಶರೀರ. ಇಲ್ಲಿ ಟೆಲಿಪತಿ, ಸಂಪರ್ಕ, ಮನಸ್ಸನ್ನು ಓದುವುದು, ದೇಹದಿಂದ ಸೂಕ್ಷ್ಮಶರೀರ ಪಯಣ ಇವೆಲ್ಲ ಸಾಧಿಸಬಹುದು. ಸಾಧನಾ ಪಥದಲ್ಲಿ ಅಲ್ಲದೆ ಹೋದರೆ ಇದು ಮಿಲನದ ಕಾಲ. ಮದುವೆ ಸಂಸಾರ, ಕೂಡುವಿಕೆ ಇತ್ಯಾದಿ. ಯಾಕೆಂದರೆ ಈ ನಾಲ್ಕನೆಯ ಶರೀರ ಪುನಃ ದೇಹಲಿಂಗಕ್ಕೆ ವಿರುದ್ಧ ಲಿಂಗವಿರುತ್ತದೆ. ಪುರುಷನ ನಾಲ್ಕನೆಯ ಶರೀರ ಸ್ತ್ರೀ, ಸ್ತ್ರೀಯ ನಾಲ್ಕನೆಯ ಶರೀರ ಪುರುಷ. ಆದ್ದರಿಂದಲೇ ಇದರ ಸ್ಥಾನ ಅನಾಹತ ಅಂದರೆ ಹೃದಯ. ಇವು ವಯೋಮಾನಕ್ಕೆ ಅನುಗುಣವಾಗಿ ನಮ್ಮೊಳಗೆ ಎಚ್ಚರವಾಗುವ ಶರೀರಗಳೆಂದೇ ರಜನೀಶ್ ಹೇಳುತ್ತಾನೆ. ಅದಕ್ಕೆ ಆಯಾ ವಯೋಮಾನಕ್ಕೆ ಆಯಾ ಅಪೇಕ್ಷೆಗಳು ಆಯಾ ಶರೀರಗಳ ಲಿಂಗಕ್ಕೆ ಅನುಗುಣವಾಗಿ ನಿರ್ಧಾರವಾಗುತ್ತವೆ ಎನ್ನುವುದು ಅವನ ಸಿದ್ಧಾಂತ.

5) 28–35 ವರ್ಷದ ಅವಧಿಗೆ ಆತ್ಮಶರೀರ. ಅದರ ಸ್ಥಾನ ವಿಶುದ್ಧಿ ಅವನ ಪ್ರಕಾರ ಈ ಐದನೆಯ ಶರೀರದ ನಂತರ ಲಿಂಗಭಾವ ಹೊರಟು ಹೋಗುತ್ತದೆ. ಒಂದು ಪರಿವರ್ತಿತ

ಸಂವೇದನೆ ಆರಂಭ ಆಗುತ್ತದೆ. ಆಗ ದೇಹದಲ್ಲಿ ವಿಶೇಷ ಮಾರ್ಪಾಟಾಗುವ ಸಾಧ್ಯತೆ ಕೂಡ ಅನಾಹತದಲ್ಲಿ ಎರಡು ಶರೀರಗಳ ಲಿಂಗ ಮಿಲನ ಆಗಿ ದೇಹಕ್ಕೆ ಇರುವ ಲಿಂಗ ಭಾವ ಕಳಚುವುದರಿಂದ ಪುರುಷನಲ್ಲಿ ಒಂದು ಸ್ತ್ರೀತ್ವ ಅಥವಾ ಸ್ತ್ರೀ ಭಾವ ಮತ್ತು ಸ್ತ್ರೀಯಲ್ಲಿ ಒಂದು ಪುರುಷತ್ವ ಕಾಣಿಸುವುದನ್ನು ಅವನು ವಿವರಿಸುತ್ತಾನೆ. ಇಂಥ ಭಾವ ಇಲ್ಲಿ ಆರಂಭವಾಗಿ ಪುರುಷನಿಗೆ ಸ್ತ್ರೀಯ ಕಡೆಗೆ ಸ್ತ್ರೀಗೆ ಪುರುಷನ ಕಡೆಗಿನ ಸೆಳೆತ ಕಡಿಮೆ ಆಗುವ ಆರಂಭದ ಹಂತ ಎಂದು ವಿವರಿಸುತ್ತಾನೆ.

6) 35–42 ವರ್ಷದ ಬ್ರಹ್ಮಶರೀರಕ್ಕೆ ಈ ದೇಹ ತಲುಪಿದಾಗ ವ್ಯಕ್ತಿಯಲ್ಲಿ ಪೂರ್ಣ ಲಿಂಗಾತೀತ ಭಾವ ಸಂಭವಿಸುತ್ತದೆ. ಏಕೆಂದರೆ ಅವನ ಮತ್ತು ಅವಳ ಒಳಗಿನ ಸ್ತ್ರೀಪುರುಷ ಮಿಲನಾನುಭವ ಮುಗಿದಿರುತ್ತದೆ ಎಂದು ಸೋದಾಹರಣವಾಗಿ ವಿವರಿಸುತ್ತಾನೆ. ಹೆಣ್ಣು ದೇಹವು ಅನೇಕ ಪರಿವರ್ತನೆಗೆ ಒಳಗಾಗಿ ಮುಟ್ಟು ನಿಲ್ಲುವ, ಮತ್ತು ಅಲ್ಲಲ್ಲಿ ಮೀಸೆ ಗಡ್ಡ ಬೆಳೆಯುವ ಒಂದು ಪುರುಷತ್ವ ಅವಳಲ್ಲಿ ಸಂಭವಿಸುವುದನ್ನು ಸೂಚಿಸುತ್ತಾನೆ. ಅದಕ್ಕೆ ಅವನು ಕೊಡುವ ಕಾರಣ ಸ್ತ್ರೀಯ ನಾಲ್ಕನೆಯ ಶರೀರ ಪುರುಷ. ಹಾಗಾಗಿ ಅವಳಲ್ಲಿ ಪುರುಷತ್ವ ಪ್ರಧಾನವಾಗುತ್ತದೆ. ಅದೇ ಪುರುಷನ ನಾಲ್ಕನೆಯ ಶರೀರ ಸ್ತ್ರೀ ಆದ್ದರಿಂದ ಅವನಲ್ಲಿ ಒಂದು ಮಾತೃತ್ವ ಜಾಗೃತವಾಗುತ್ತದೆ. ಇದಕ್ಕೆ ಆಜ್ಞಾ ಚಕ್ರದ ಸ್ಥಾನವನ್ನು ಹೇಳುತ್ತಾನೆ.

7) 42–49 ವರ್ಷ – ಇದು ಪೂರ್ತಿ ನಿರ್ವಾಣ ಶರೀರ ಅಥವಾ ಶರೀರವಿಲ್ಲದ ಭಾವವನ್ನು ಹೇಳುತ್ತಾನೆ. ಇಲ್ಲಿ ದೇಹವಿಲ್ಲ, ಲಿಂಗವಿಲ್ಲ ಮಾತ್ರವಲ್ಲ ಆತ್ಮ ಪರಮಾತ್ಮನೂ ಇಲ್ಲ, ಬರೇ ಶೂನ್ಯ, ಬಯಲು, ಒಂದು ದೃಷ್ಟಿಯಿಂದ ಮನುಷ್ಯ ತೀರ ವೈರಾಗ್ಯ ಮಾತಾಡುವ ಕಾಲ. (ವಿವರಗಳಿಗೆ ಪುಟ–70–75, Kundalini Yoga Vol II 2001)

ರಜನೀಶ ಇಂಥದೊಂದು ಇವರ ನೀಡಿದಾಗ ಇದರ ಹಿಂದೆ ಒಂದು ವೈಜ್ಞಾನಿಕತೆ ಇದ್ದಂತೆ ಭಾಸವಾಗುತ್ತದೆ. ಆದರೆ 49ರ ನಂತರದ ಮರಣದವರೆಗಿನ ಅವಸ್ಥೆ ಏನು ಎಂಬ ಪ್ರಶ್ನೆಯೂ ಬಾರದೆ ಇರುವುದಿಲ್ಲ. ಆದರೂ ಮನುಷ್ಯನ ದೇಹ, ಆಕರ್ಷಣೆ, ಆಂತರಂಗಿಕ ಬೆಳವಣಿಗೆಯ ಮಟ್ಟಿಗೆ ಇದನ್ನು ಒಂದು ವಿಶೇಷ ವಿಶ್ಲೇಷಣೆಯಂತೆ ಗಮನಿಸಬಹುದು.

ಪುರುಷ	ಸ್ತ್ರೀ
ಮೊದಲ ಶರೀರ ಪುರುಷ.	ಮೊದಲ ಶರೀರ ಸ್ತ್ರೀ
ಎರಡನೆಯ ಶರೀರ ಸ್ತ್ರೀ	ಎರಡನೆಯ ಶರೀರ ಪುರುಷ
ಮೂರನೆಯ ಶರೀರ ಪುರುಷ	ಮೂರನೆಯ ಶರೀರ ಸ್ತ್ರೀ
ನಾಲ್ಕನೆಯ ಶರೀರ ಸ್ತ್ರೀ	ನಾಲ್ಕನೆಯ ಶರೀರ ಪುರುಷ
ಐದರಿಂದ ನಿರ್ಲಿಂಗ	ಐದರಿಂದ ನಿರ್ಲಿಂಗ

ಈ ಏಳು ಶರೀರಗಳ ಅವಸ್ಥೆಯ ಒಂದೊಂದು ಜಾಗೃತಿಯ ಹಂತವು ಕುಂಡಲಿನಿಯಲ್ಲಿ ಸಂಭವಿಸುತ್ತದೆ. ಅದು ಏಳು ಚಕ್ರಗಳ ಮುಖಾಂತರ ನಡೆಯುತ್ತದೆ. ಇದರ ಜಾಗೃತಿ ನಾಲ್ಕನೆಯ ಚಕ್ರದ ಹಂತಕ್ಕೆ ನಿಂತವರು ಪವಾಡಗಳಲ್ಲಿ ಮುಳುಗುತ್ತಾರೆ. ಸಿದ್ಧಿಗಳಲ್ಲಿ ಸುಖಪಡುತ್ತಾರೆ, ಮುಂದುವರೆಯುವುದಿಲ್ಲ. (P. 70 Kundalini Yoga Vol. II 2001)

ಈ ಹಿನ್ನೆಲೆಯಲ್ಲಿ ಶಕ್ತಿಪಾತವನ್ನು ಗಮನಿಸುವ ರಜನೀಶ್ ಸ್ತ್ರೀ ಹೆಚ್ಚು ಸ್ವೀಕಾರ ಗುಣವುಳ್ಳವಳು. ಆದರೆ ಪುರುಷ ತುಂಬ aggressive (ಆಕ್ರಮಣಕಾರಿ) ಮತ್ತು ಕೊಡುವ ಗುಣವುಳ್ಳವನು. ಆದ್ದರಿಂದ ಸ್ತ್ರೀಗೆ ಶಕ್ತಿಪಾತ ಬೇಗ ಸಂಭವಿಸಬಹುದು. ಅವಳು ಬೇಗನೆ ಸ್ವೀಕರಿಸಬಲ್ಲಳು. ಆದರೆ ಅವಳಿಂದ ಶಕ್ತಿಪಾತ ಬೇರೆಯವರಿಗೆ ಸಂಭವಿಸುವುದು ಕಷ್ಟ. ಅದಕ್ಕೆ ಗುರುಪರಂಪರೆಯಲ್ಲಿ ಸ್ತ್ರೀಯರ ಹೆಸರು ಕಡಿಮೆ ಎಂದು ಉಲ್ಲೇಖಿಸುತ್ತಾನೆ. ಆದರೂ ರಜನೀಶನ ಪ್ರಕಾರ 45ರ ನಂತರ ಅವಳು ವಿಶುದ್ಧಿ ಚಕ್ರದ ಹಂತ ತಲುಪಿದಾಗ ಪುರುಷತ್ವ ಹೆಚ್ಚಾಗಿ ಸ್ತ್ರೀ ಭಾಗ ಕಡಿಮೆಯಾಗುವ ಕಾಲಘಟ್ಟದಲ್ಲಿ ಅವಳಿಂದಲೂ ಶಕ್ತಿಪಾತ ಸಾಧ್ಯವಾದರೆ ಆಗಬಹುದು ಎಂಬ ವಿವರ ನೀಡುತ್ತಾನೆ. ಈ ಕಾರಣಕ್ಕೆ ಮಹಾವೀರ, ಬುದ್ಧ ಸ್ತ್ರೀಯರನ್ನು ಆಧ್ಯಾತ್ಮ ಪಥಕ್ಕೆ ಪರಿಗಣಿಸಿರಲಿಕ್ಕಿಲ್ಲ ಎಂಬ ಊಹೆಯನ್ನು ಮಾಡುತ್ತಾನೆ. (ವಿವರಗಳಿಗೆ 174–175 Kundalini Yoga Vol. II 2001)

ಕುಂಡಲಿನಿ ಶಕ್ತಿಯ ಜಾಗೃತಿಯಿಂದ ದೇಹವೂ ಪರಿವರ್ತನೆಗೆ ಒಳಗಾಗುತ್ತದೆ ಎಂಬ ಮಾತುಗಳು ಪ್ರಚಲಿತದಲ್ಲಿವೆ. ಅದನ್ನೇ ರಜನೀಶ ಉಲ್ಲೇಖಿಸುತ್ತಾನೋ ಗೊತ್ತಿಲ್ಲ. ಸ್ತ್ರೀಯು ಪುರುಷನಾಗುವುದಕ್ಕೆ ಸಾಧನಾ ಪಥದಲ್ಲಿ ಕೆಲವು ತಂತ್ರಗಳಿವೆ ಆ ಮೂಲಕ ಅವಳಿಗೂ ದೇಹ ಪರಿವರ್ತನೆ ಸಾಧ್ಯ ಎನ್ನುತ್ತಾನೆ. ರಜನೀಶನ ಪ್ರಕಾರ ಮಲ್ಲಿನಾಥ ಎಂಬ ಜೈನ ತೀರ್ಥಂಕರ

ಮೂಲತಃ ಮಲ್ಲಿಬಾಯಿ ಎಂಬ ಸ್ತ್ರೀ. ಅವಳು ಕಾಲಾಂತರದಲ್ಲಿ ಪುರುಷತ್ವವನ್ನು ತಪಸ್ಸಿನಿಂದ ಪರಿವರ್ತಿಸಿ ಪಡೆದವಳು. (179-180 Kundalini Yoga Vol. II 2001) ಇತ್ತೀಚೆಗೆ ಆಗಿ ಹೋದ ಯು.ಜಿ. ಕೃಷ್ಣಮೂರ್ತಿ ಎಂಬ ತತ್ವಶಾಸ್ತ್ರಜ್ಞ ಕೂಡ ತನ್ನ ಪರಿವರ್ತನೆಯ ನಂತರ ದೇಹವು ಮಾರ್ಪಾಟಾಗಿ ತನಗೆ ಮೊಲೆ ಮೂಡಿದುದಾಗಿಯೂ ತನ್ನ ಶಿಶ್ನವು ಮಗುವಿನಂತೆ ಸಣ್ಣ ಆಕೃತಿಗೆ ತಿರುಗಿದ್ದಾಗ್ಗಿಯೂ ಹೇಳುತ್ತಾನೆ. (ವಿವರಗಳಿಗೆ ಯು.ಜಿ. ಕೃಷ್ಣಮೂರ್ತಿ–ದಿ ಮಿಸ್ಟಿಕ್ ಆಫ್ ಎನ್‌ಲೈಟನ್‌ಮೆಂಟ್)

ಹೀಗೆ ಕುಂಡಲಿನಿ ಜಾಗೃತಿ ದೈಹಿಕವಾಗಿ ಚಕ್ರಮುಖೇನ ಪರಿವರ್ತನೆಗೊಳ್ಳುವ ಕಾಲಘಟ್ಟವಾದರೆ, ಶಕ್ತಿಪಾತವು ಅದೇ ಕಾಲಕ್ಕೆ ಅನುಗ್ರಹದ ಮುಖಾಂತರ ಮೇಲಿನಿಂದ ಕೆಳಕ್ಕೆ ಇಳಿಯುವ ಆಶೀರ್ವಾದ. ಅದಕ್ಕೆ ಶಕ್ತಿ–ಪಾತ–ಅಂದರೆ ಶಕ್ತಿ ಇಳಿಯುವುದು ಕೃಪೆಯಾಗುವುದು ಎಂದು ಹೆಸರು. ಕುಂಡಲಿನಿ ಕೆಳಗಿನಿಂದ ಮೇಲ್ಮುಖವಾಗಿ ಶಕ್ತಿ ಸಂಚರಿಸುತ್ತಾ ವ್ಯಕ್ತಿಯ ಲಿಂಗ ಮತ್ತು ಭೌತಿಕ ಪರಿವರ್ತನೆಗಳನ್ನು ಮಾಡಿದರೆ, ಅದೇ ಹೊತ್ತಿಗೆ ಪರಮಶಕ್ತಿಯು ಈ ಸೂಕ್ಷ್ಮ ಶಕ್ತಿಯ ಮೇಲೆ ಇಳಿದುಬಂದು ಅನುಗ್ರಹಿಸುವ ಕೆಲಸವನ್ನು ಶಕ್ತಿಪಾತ ಮಾಡುತ್ತದೆ. ಇವೆರಡೂ ಸಾಮಾನ್ಯವಾಗಿ ಜೊತೆ ಜೊತೆಗೆ ನಡೆಯುತ್ತದೆ ಎಂಬ ನಂಬಿಕೆಯಿದೆ. ಇದು ನಾಲ್ಕನೆಯ ಶರೀರದವರೆಗಿನ ತಯಾರಿಯ ಬಳಿಕವೇ ನಡೆಯುತ್ತದೆ. ಅಲ್ಲಿಯವರೆಗೆ ಸಾಧಕ ದೇಹದಲ್ಲಿಯೇ ಇರುವುದರಿಂದ ಶಕ್ತಿಪಾತ ಸಾಧ್ಯವಿಲ್ಲ ಎಂಬ ನಂಬಿಕೆ ಇದೆ.

ಹೀಗೆ ನಮ್ಮ ದೇಹಮಿತಿಯನ್ನು ಅರಿವಿಗೆ ತಂದು, ಲಿಂಗವನ್ನು ದಾಟಿಸಿ, ಆ ಮೂಲಕ ಅದರೊಳಗಿರುವ ಜೀವದ ತನಕವೂ ಎಚ್ಚರ ಹುಟ್ಟಿಸಿ ನಮ್ಮನ್ನು ಅಣುವಿನಿಂದ ಪರಮಾಣುವಿನೊಳಗೆ ಬೆಳೆಸುವ ಶಕ್ತಿಗೆ ಕುಂಡಲಿನಿ ಜಾಗೃತಿ ಎನ್ನಬಹುದು. ರಜನೀಶ್ ಅಂತೂ ಅಗತ್ಯ ಅನಿವಾರ್ಯತೆಗಳ ಪ್ರಶ್ನೆಗೆ ಹೋಗದೆ ಅದು ಜೀವಿಗೆ ಆಗಲೇ ಬೇಕಾದ ಬೆಳವಣಿಗೆ ಎಂಬ ಅರ್ಥದಲ್ಲೇ ಅದನ್ನು ವಿವರಿಸುತ್ತಾನೆ. ಈ ಜೀವವೊಂದು ಪರಮದ ಕಡೆಗೆ ಬೆಳೆದು ನಿಂತಾಗ ಪರಮವೂ ತಾನೊಲಿದು ಈ ಅಣುವಿನ ಮೇಲೆ ಕರುಣೆಯಿಂದ ಮಾಡುವ ಅನುಗ್ರಹವೇ ಶಕ್ತಿಪಾತ.

ಸ್ತ್ರೀ ಯಾಕೆ ಪುರುಷನಾಗಬೇಕು? ಪುರುಷನಾಗುವುದರಿಂದಲೇ ಆಧ್ಯಾತ್ಮ ಪಥದ ಬೆಳವಣಿಗೆ ಪೂರ್ಣಗೊಳ್ಳುತ್ತದೆ ಎಂಬ ರಜನೀಶನ ವಿವರಗಳು ಅಷ್ಟು ಸಮಾಧಾನಕರ ಅನಿಸುವುದಿಲ್ಲ. ಆದರೂ ಅವನು ಹೇಳುವ ಕೊನೆಗೆ ಸ್ತ್ರೀಯಾಗಿಯೇ ಮುಕ್ತಿ ಆ ಕಾರಣದಿಂದಲೇ ಪುರುಷ ನಾಲ್ಕನೇ ಶರೀರ ದಾಟಿದಾಗ ಸ್ತ್ರೀಯಾಗುತ್ತಾನೆ. ಆ ಸಾಧ್ಯತೆ ಸ್ತ್ರೀ ದೇಹದಲ್ಲಿಲ್ಲ ಎಂಬ

ವಿವರವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಅವನ ಕೃಷ್ಣ, ಬುದ್ಧ, ಮಹಾವೀರ ಎಲ್ಲರೂ ಎಷ್ಟು ಮಾತ್ರ ಸ್ವರೂಪಿಗಳಿದ್ದಾರೆ ಎಂಬ ಮಾತನ್ನು ಅಲ್ಲಗಳೆಯಲಾಗುವುದಿಲ್ಲ.

ಸತ್ಯಕಾಮರು ಈ ಕುರಿತು ಹೆಚ್ಚು ಮಾತಾಡಿಲ್ಲ. ಅವರಿಗೆ ಅದು ಮೈಮನಸ್ಸಿನ ಆಚೆಗೆ ಭುಸುಗುಡುವ ಹಾವು ಅದನ್ನು ಸುಮ್ಮನೆ ಕೆಣಕಬಾರದು. ಅದನ್ನು ಪತಂಜಲಿ ಉಲ್ಲೇಖಿಸಿಲ್ಲ ಎಂದ ಮಾತ್ರಕ್ಕೆ ಅದು ಇಲ್ಲ ಎಂದು ಭಾವಿಸಬಾರದು. ಪತಂಜಲಿ ಹೇಳುವಷ್ಟೇ ವಸ್ತುಗಳು ನಮ್ಮೊಳಗಿರಬೇಕೆಂದೇನು ಇಲ್ಲ ಎಂಬಂತಹ ಕಠೋರ ನಿಷ್ಠುರ ಸಂಗತಿಗಳನ್ನು ಹೇಳುತ್ತಾರೆ. ಮೂಲಕ್ಕೆ ಅಂಟಿದ ಜಾಡ್ಯ ಕಳೆಯಲು ಹುಟ್ಟಬೇಕಾದ ಎಚ್ಚರವಿದು ಎಂಬ ವಿವರಣೆ ನೀಡುತ್ತಾರೆ. ಆದರೆ ಹಲ್ಲು ತೆಗೆದರೂ ಹಾವಾಡಿಸಿದರೂ ಹಾವಿಗೆ ಹಲ್ಲು ಶಕ್ತಿಯೇ ಎನ್ನುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಮಲಗಿದ ಹಾವನ್ನು ಕೆಣಕಬಾರದು ಎನ್ನುವುದು ಅವರು ನೀಡುವ ಎಚ್ಚರ.

ಆದರೆ ಚಕ್ರದ ಕುರಿತ ಇವರ ವಿವರ ತುಂಬ ವಾಸ್ತವಕ್ಕೆ ಸಮೀಪವಿದೆ. 'ಕುಂಡಲಿನಿಯ ನೆಲೆಗಳು ಎಂದು ಹೇಳುವ ಚಕ್ರಗಳು, ಅವುಗಳ ಸ್ಥಾನಗಳು ಶುದ್ಧ ಕಾಲ್ಪನಿಕಗಳು. ಮೂಲಾಧಾರದಿಂದ ಸಹಸ್ರಾದವರೆಗೆ ಹೇಳುವ ಏಳು ಚಕ್ರಗಳು ಏಳು ಅವಸ್ಥೆಗಳನ್ನು ಮಾತ್ರ ಹೇಳುತ್ತವೆ. ಅವು ಸ್ಥೂಲ ದೇಹದಲ್ಲಿಯೇ ಆಗಲಿ, ಸೂಕ್ಷ್ಮ ದೇಹದಲ್ಲಿಯೇ ಆಗಲಿ ಎಲ್ಲೂ ವ್ಯವಸ್ಥೆಗೊಂಡಿಲ್ಲ... ಇದೊಂದು ಗಣಿತದ ಕಾಲ್ಪನಿಕ ಅರಿವು... ದುರ್ದೈವದ ವಿಷಯವೆಂದರೆ ಇವುಗಳ ವಿಷಯದಲ್ಲಿರುವ ಗ್ರಹಿಕೆಗೆ ಭೌತಿಕ ಅಸ್ತಿತ್ವ ಇರುವುದೆಂಬ ಭ್ರಮೆ' (೨೦೪ ತಂತ್ರಯೋನಿ ೨೦೦೮)

ನಾಳಿನ ಮಾನವನ ಸಾಮಾನ್ಯ ಶಕ್ತಿಯ ಇಂದಿನ ವಿಶೇಷ ಪ್ರದರ್ಶನವೇ ಕುಂಡಲಿನೀ ಎಂದು ಸತ್ಯಕಾಮರು ಒಪ್ಪುತ್ತಾರಾದರೂ ಅದನ್ನು ಒಂದು ಸಂಪ್ರದಾಯ ಮಾಡಿ ವಸ್ತುನಿಷ್ಠ ಸತ್ಯ ಎಂಬ ಭ್ರಮೆಯ ಅನುಭವ ಬೆಳೆಸುತ್ತಾ ಹೋಗುವುದು ಸಾಧನೆಯ ದೊಡ್ಡ ಅಪಾಯ ಎಂಬ ಎಚ್ಚರವನ್ನು ಕಾಯ್ದುಕೊಳ್ಳುತ್ತಾರೆ.

ಯೋಗದಲ್ಲಿ ಶಕ್ತಿಯ ಕೊಡುಕೊಳೆ ಸರಾಗವಾಗಿ ನಡೆಯುತ್ತದೆ. ಅದರ ವಿಶೇಷ ಶಕ್ತಿಯನ್ನೇ ಶಕ್ತಿಪಾತ ಎನ್ನುತ್ತಾರೆ (69 ದೇವನ ಇನ್ನೊಂದು ಬಾಗಿಲು 2010) ಎಂದು ಸತ್ಯಕಾಮರು ಶಕ್ತಿಪಾತವನ್ನು ವ್ಯಾಖ್ಯಾನಿಸಿದ್ದಾರೆ. ಯೋಗ ಎನ್ನುವುದು ವಿದ್ಯೆಯಾದರೆ ಶಕ್ತಿಪಾತ ಎನ್ನುವುದು ಅದರ ಶಿಕ್ಷಣಕ್ರಮ. ದೀಕ್ಷೆಯು ಒಂದು ವಿಧದ ಶಕ್ತಿಪಾತ (69 ದೇವನ ಇನ್ನೊಂದು ಬಾಗಿಲು 2010) ಕೊಡುವವನ ಮತ್ತು ಕೊಳ್ಳುವವನ ಇಬ್ಬರ ತಯಾರಿಯೂ ಪರಸ್ಪರ ಪೂರಕ ಇರಬೇಕು. ಸಂಕುಚಿತ, ಪಾಪಿ, ಅಪವಿತ್ರನಿಗೂ ಶಕ್ತಿಪಾತ ಮಾಡಬಹುದು. ಆದರೆ ಅದರ ಪ್ರಕ್ರಿಯೆ ಬೇರೆ

ಎಂಬ ಸೂಚನೆಯನ್ನು ನೀಡುತ್ತಾರೆ. ಸ್ವೀಕರಿಸುವವನಿಗೆ ತಿಳಿಯದಂತೆ ಶಕ್ತಿಪಾತ ನಡೆಯಬಹುದು. ಆದರೆ ಕೊಡುವವನಿಗೆ ಅದರ ಕುರಿತು ಪೂರ್ಣ ಎಚ್ಚರ ಮತ್ತು ಅರಿವು ಇರುತ್ತದೆ ಎನ್ನುತ್ತಾರೆ. ತನಗೆ ವೈಯಕ್ತಿಕವಾಗಿ ಶಕ್ತಿಪಾತವಾದದ್ದನ್ನೂ ಅವರು ಹೇಳಿಕೊಂಡಿದ್ದಾರೆ. 'ಎಷ್ಟೋ ದಿನಗಳ ನಂತರ ನನಗೆ ತಿಳಿಯಿತು ಆ ದಿನ ನನಗೆ ವಿಶುದ್ಧಿಯಲ್ಲಿ ಶಕ್ತಿಪಾತವಾಯಿತು ಎಂದು. (101 ದೇವನ ಇನ್ನೊಂದು ಬಾಗಿಲು 2010)

ಸತ್ಯಕಾಮರೆಲ್ಲರ ಬರೆಹಗಳಂತೆ ಕುಂಡಲಿನಿಯ ಕುರಿತ ಬರೆಹವೂ ಹೆಚ್ಚು ವಿವರವಿಲ್ಲ. ರಜನೀಶನಷ್ಟು ತಿಳಿನೀರಾಗಿ ಸಂಗತಿಗಳನ್ನು ಸರಳಗೊಳಿಸುವ ರೀತಿ ಸತ್ಯಕಾಮರಿಗೆ ಸಂದಿಲ್ಲ. ಅವರು ಅವರ ಅನುಭವಕ್ಕೆ ತಕ್ಕಂತೆ ಮಾತಾಡುತ್ತಾರೆ. ಅವರ ಅನುಭವ ಕಠಿಣ, ಗುಹ್ಯ, ಇನ್ನೂ ಕೆಲವು ಅಲಭ್ಯದಂತೆ ಇರುವುದರಿಂದಲೋ ಅಥವಾ ಅವರು ತಂತ್ರವು ರಹಸ್ಯಮಾರ್ಗ ಎನ್ನುವುದನ್ನು ತಂತ್ರಶಾಲೆಯ ಅಭ್ಯಾಸ ಮುಖೇನ ಕಲಿತ ವಿದ್ಯಾರ್ಥಿಯ ಕಾರಣಕ್ಕೋ ಅವರು ಆದಷ್ಟು ಸಂಗತಿಗಳನ್ನು ಗುಪ್ತವಾಗಿಯೇ ಉಳಿಸುತ್ತಾರೆ.

ಇಬ್ಬರೂ ಕುಂಡಲಿನಿ ಜಾಗೃತಿ ಎನ್ನುವ ಸಂಗತಿ ಇದೆ ಎಂದು ಒಪ್ಪುತ್ತಾರೆ. ಸತ್ಯಕಾಮರಿಗಂತೂ ಮುಂದಿನ ಪೀಳಿಗೆಗೆ ಕುಂಡಲಿನಿ ಎನ್ನುವುದು ಒಂದು ಸಾಮಾನ್ಯ ಶಕ್ತಿಯ ಪ್ರದರ್ಶನ ಆಗುವವರೆಗೆ ಮನುಷ್ಯ ಬೆಳೆಯುತ್ತಾನೆ ಎಂಬ ದೂರದೃಷ್ಠಿ ಇದೆ. ಕುಂಡಲಿನಿ ತಾನಾಗಿ ಸಂಭವಿಸಬೇಕು ಎಂಬ ಮಟ್ಟಿಗೆ ಇಬ್ಬರಲ್ಲೂ ಸಹಮತವಿದೆ. ರಜನೀಶ್ ಸೋದಾಹರಣವಾಗಿ ಯಾವ ಚಕ್ರಕ್ರಮವನ್ನು ವಿವರಿಸಿದ್ದನೋ ಅದನ್ನು ಸತ್ಯಕಾಮರು ಒಂದೇ ಮಾತಿನಲ್ಲಿ ಖಡಾಖಂಡಿತವಾಗಿ ಅಲ್ಲಗಳೆದದ್ದನ್ನು ನೋಡಿದ್ದೇವೆ. ವಾಸ್ತವಿಕ ಅದು ಹಾಗೆ ಭಾಸಮಾತ್ರವಾಗುವ ವಿಚಾರ ಎಂದು ಕಾಣಿಸುತ್ತದೆ. ಏಕೆಂದರೆ ಸ್ವತಃ ತನಗೆ ವಿಶುದ್ಧಿಯಲ್ಲಿ ಶಕ್ತಿಪಾತವಾಯಿತು ಎಂದು ಸತ್ಯಕಾಮರು ಹೇಳುವುದನ್ನು ನೋಡಿದರೆ ಅವರು ಚಕ್ರಪರಿಕ್ರಮವನ್ನು ಬಿಟ್ಟಂತಿಲ್ಲ. ಆಧುನಿಕ ಆಧ್ಯಾತ್ಮ ಪಥದಲ್ಲಿ ಈ ಚಕ್ರಗಳ ಕುರಿತ ವಿವರಣೆ, ಧ್ಯಾನಕ್ರಮಗಳಲ್ಲಿ ಅವುಗಳ ಕುರಿತು ತೋರುವ ವಿಶೇಷ ಆಸ್ಥೆ, ಅನಗತ್ಯ ಕುತೂಹಲಗಳಿಗಾಗಿ ಸತ್ಯಕಾಮರು ಗಮನವನ್ನು ಚಕ್ರದಾಚೆಗೂ ಇರುವ ಮೂಲಸತ್ವದ ಕಡೆಗೆ ಸೆಳೆಯಲು ಹಾಗೆ ಹೇಳಿರಬಹುದು. ಅಥವಾ ದಾರ್ಶನಿಕರು ಹೀಗೆ ತುಂಬಾ ವಿರೋಧಾಭಾಸಗಳಿಂದ ಮಾತಾಡುತ್ತಾರೆ ಎಂಬ ನೆಲೆಯಲ್ಲಿಯೇ ಅದನ್ನು ಅರ್ಥೈಸಿಕೊಂಡರೂ ಒಪ್ಪಿಕೊಳ್ಳಬಹುದು. ಎಲ್ಲಕ್ಕೂ ಮಿಗಿಲಾಗಿ ಈ ಚಕ್ರ, ಅದರ ಹೆಸರು, ಸ್ಥಾನ, ಇವುಗಳ ಅರಿವಿಲ್ಲದವನಿಗೆ ಕುಂಡಲಿನಿ ಜಾಗೃತವಾಗುವುದಿಲ್ಲ ಎಂದೇನೂ ಇಲ್ಲ. ಆದ್ದರಿಂದ ಚಕ್ರಗಳನ್ನು ಅತ್ತ ಮರೆತು, ತನ್ನಷ್ಟಕ್ಕೆ ಬದುಕುವ ಸಾಧಕನ ಒಳಗೂ ಇದು ಸಂಭವಿಸಬಹುದು ಎಂದಮೇಲೆ

ಚಕ್ರಕ್ಕಾಗಿ ತಲೆಚಕ್ರ ತರಿಸಿಕೊಳ್ಳಬೇಕಿಲ್ಲ ಎಂಬುದೇ ಸಮಂಜಸ. ರಜನೀಶ್ ಕೂಡ ನಿಮಗೆಷ್ಟು ಚಕ್ರ ಬೇಕೋ ಅಷ್ಟು ಎಂಬಷ್ಟು ಅದರ ಬಗ್ಗೆ ಉದಾಸೀನನಾಗಿದ್ದಾನೆ.

ಇಬ್ಬರಿಗೂ ಕುಂಡಲಿನಿ ಅನುಭವ ಕಣ್ಣಳತೆಯಲ್ಲಿಯೋ ಹೃದಯದಳತೆಯಲ್ಲಿಯೋ ಸಂಭವಿಸಿದಷ್ಟು ಸಮೀಪದ ವಿವರಣೆ ಇದೆ. ಯಾರಿಗೆ ಹೇಗೆ ಸಂಭವಿಸಿತು ಎಂಬ ವೈಯಕ್ತಿಕ ವಿವರಗಳಿಲ್ಲ. ನಾವಾದರೂ ಅದನ್ನು ತಿಳಿಯಬೇಕಾದರೆ ನಮ್ಮ ಅಲ್ಪತೆ ಮೀರಬೇಕು. ಅರಿವಿಲ್ಲದೇ ಈ ವಿಷಯ ಮಾತಾಡುವುದು ಕಷ್ಟ ಎಂಬಷ್ಟರ ಮಟ್ಟಿಗಾದರೂ ನಾವು ಅದರ ಅರಿವಿನ ದೊಡ್ಡಿತೆಯನ್ನು ಅರ್ಥೈಸಿಕೊಳ್ಳಬೇಕು ಅಷ್ಟೇ. ಸತ್ಯಕಾಮರು ಕುಂಡಲಿನಿ ಜಾಗೃತಿಯ ಕೆಲವು ವಿವರಗಳನ್ನು ತನಗೆ ಸಂಭವಿಸಿರುವ ಅರ್ಥದಲ್ಲೇ ಹೇಳಿದ್ದಾರೆ.

ಕೊನೆಯದಾಗಿ ಒಂದು ಪ್ರಶ್ನೆ ರಜನೀಶ್ ಮತ್ತು ಸತ್ಯಕಾಮರ ಪ್ರಕಾರ ಕುಂಡಲಿನಿ ಜಾಗೃತಿ ಸಾಧನಾ ಪಥದಲ್ಲಿ ಅಗತ್ಯವೇ, ಅನಿವಾರ್ಯವೇ ? ಈ ಕುರಿತು ನೇರವಾಗಿ ಇಬ್ಬರು ಪ್ರಸ್ತಾಪಿಸಿಲ್ಲ ಎಂಬುದು ಸ್ಪಷ್ಟ. ಆದರೆ ಗುರ್ಜಿಫ್ ಕುಂಡಲಿನೀ ಒಂದು ಅಡ್ಡಿ (Bufer) ಜ್ಞಾನಮಾರ್ಗಕ್ಕೆ ಒಂದು ತಡೆ ಎಂಬ ಅಭಿಪ್ರಾಯವನ್ನು ಹೇಳಿದರೆ ಗೋಪೀಕೃಷ್ಣ ತನ್ನ ಕುಂಡಲಿನಿ ಕೃತಿಯಲ್ಲಿ ಅದು ಅಂತಿಮ ಅನುಭವ ಬೇಕೇ ಬೇಕು ಎಂದು ಪ್ರತಿಪಾದಿಸುವಂತೆ ರಜನೀಶ್ ಮತ್ತು ಸತ್ಯಕಾಮರ ಬರೆಹಗಳಲ್ಲಿ ಕಾಣಿಸುವುದಿಲ್ಲ.

ರಜನೀಶ್ ಗುರ್ಜಿಫ್ ಭಾವಿಸುವಂತೆ ಅದು ಖಂಡಿತ ಜ್ಞಾನಸಂಪಾದನೆಗೆ ಅಡ್ಡಿಯಲ್ಲ ಎಂಬ ತಿದ್ದುಪಡಿ ನೀಡುತ್ತಾನೆಯೇ ಹೊರತು ಅದೇ ಅಂತಿಮ ಎನ್ನುವ ಗೋಪೀಕೃಷ್ಣನ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ ಅದು ಅಪಾಯಕಾರಿ ಒಬ್ಬ ಗುರು ಅಥವಾ ಒಂದು ಶಕ್ತಿಯ ಅನುಗ್ರಹದಿಂದ ಇದು ಸಂಭವಿಸಿದರೆ ಒಳ್ಳೆಯದು. ಸಿಡಿಲು ಬಡಿಯುವಾಗ ಒಂದು ಕಬ್ಬಿಣದ ತುಂಡನ್ನು ಅಂಗಳಕ್ಕೆ ಎಸೆದರೆ ಅದು ಹೇಗೆ ಆ ಸಿಡಿಲಿನ ವಿದ್ಯುತ್ ಶಕ್ತಿಯನ್ನು ಹೀರಿಕೊಳ್ಳುತ್ತದೆಯೋ ಹಾಗೆ ಗುರುವು ಒಂದು ಮಾಧ್ಯಮವಾಗಿ ಉಪಸ್ಥಿತನಿರಬೇಕು. ಅವನು ಆಗ ಒಂದು ಚೆಕ್ ಪಾಯಿಂಟ್ ಇಲ್ಲದೆ ಇದ್ದರೆ ಶಿಷ್ಯನು ಸರ್ವನಾಶ ಆಗಬಹುದು ಎಂಬವರೆಗೆ ಎಚ್ಚರಿಸುತ್ತಾನೆ. (152, Kundalini Yoga Vol I. 1998)

ಅದು ಕೇವಲ ಅನಾಹತ ಚಕ್ರದ ಹಂತಕ್ಕೆ ಉಳಿದರೆ ಆಗ ವ್ಯಕ್ತಿಯು ಪವಾಡ ಪುರುಷನಾಗಿ ಸಿದ್ಧಿಯಲ್ಲಿ ಮೈಮರೆಯುವ ಅಂಶವನ್ನು ಸೂಚಿಸಿರುವುದನ್ನೂ ನಾವು ಗಮನಿಸಿದ್ದೇವೆ. ಈ ವಿವರಗಳು ಶಕ್ತಿಪಾತ ತುಂಬಾ ಅಪಾಯಕಾರಿ, ಅರ್ಧವಾದರೆ ಅವನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ ಮತ್ತು ಪೂರ್ಣವಾದಾಗಲೂ ಗುರು ಅಥವಾ ಯಾವುದಾದರೂ

ಮಾಧ್ಯಮದ ಅನುಗ್ರಹವಿಲ್ಲದೇ ಇದ್ದರೆ ಸರ್ವನಾಶ ಎನ್ನುವ ವಿವರಗಳನ್ನು ಗಮನಿಸಿದರೆ ಕುಂಡಲಿನಿ ಶಕ್ತಿಯ ಜಾಗೃತಿ ಬೇಡ ಎಂಬುದನ್ನೇ ರಜನೀಶ್ ಸೂಚಿಸುತ್ತಿರಬೇಕು.

ಆದರೂ ಅದಕ್ಕಾಗಿ ಅವನು ಎರಡು ಸಂಪುಟಗಳಷ್ಟು ಮಾತಾಡಿದ್ದಾನೆ. ರಜನೀಶ್ ಎಲ್ಲವನ್ನೂ ಮುಕ್ತ ಭಾವದಿಂದ ನೋಡುವ ಗುಣದವನಾದ್ದರಿಂದ ಮತ್ತು ಎಲ್ಲಕ್ಕೂ ಮಿಗಿಲಾಗಿ ಅವನು ದೇಹವನ್ನು ಒಂದು ವಾಹನ ಮತ್ತು ಅದರೆಲ್ಲಾ ಸಾಧ್ಯತೆಗಳನ್ನು ಈ ಪಥದಲ್ಲಿ ಇರುವವರಿಗೆ ತಿಳಿಸುವ ಉದ್ದೇಶದಿಂದ ಆ ಕುರಿತು ಉಳಿದ ವಿಷಯದಷ್ಟೇ ಆಸ್ಥೆಯಿಂದ ಮಾತಾಡಿದನೆಂದು ಭಾವಿಸಬಹುದು.

ತನ್ನ ವೈಯಕ್ತಿಕ ಶಿಬಿರಗಳಲ್ಲೂ ರಜನೀಶ್ ಕುಂಡಲಿನಿ ಜಾಗೃತಿ ಎಂಬ ಸಂಗತಿಗೆ ಮಹತ್ವ ಕೊಟ್ಟು, ಶಿಷ್ಯರಿಗೆ ಅದರ ತಂತ್ರಗಳನ್ನು ಹೇಳಿದಂತೆ ಕುಂಡಲಿನಿ ಯೋಗ ಕೃತಿಯ ವಿವರಗಳಿವೆ. ಆದರೂ ಅವನು ತನ್ನೆಲ್ಲಾ ಪ್ರವಚನಗಳಲ್ಲೂ ಸ್ಪಷ್ಟವಾಗಿ ಆನಂದ, ಬ್ಲಿಸ್, ಎಕ್ಸ್‌ಟೆಸಿ ಈ ದಿಕ್ಕಿಗೆ ನಡೆವಂತೆ ಸೂಚಿಸುತ್ತಾನೆ. ಈ ಹಿನ್ನೆಲೆಯಲ್ಲಿ ರಜನೀಶ್ ಅದು ಅನಿವಾರ್ಯ ಎಂದು ಎಲ್ಲಿಯೂ ಭಾವಿಸಿದಂತಿಲ್ಲ.

ಸತ್ಯಕಾಮರು ವೈಯಕ್ತಿಕವಾಗಿ ಎಲ್ಲ ಬರೆಹಗಳಲ್ಲೂ ರಹಸ್ಯ ಕಾಯ್ದವರು. ಅವರು ವಿವರಿಸಿದ ವಿವರಣೆಯೇ ಆದಷ್ಟು ಚುಟುಕಿನಲ್ಲಿ ಮತ್ತು ಆದಷ್ಟು ಮೇಲುಸ್ತರದಲ್ಲಿ ಮುಗಿಯುತ್ತವೆ. ಹಾಗೆಯೇ ಕುಂಡಲಿನಿಯ ವಿವರಣೆ ಕೂಡ ಇದೆ. ಅವರಿಗೆ ಅದು ಸ್ವತಃ ಅನುಭವವಾದ ಸಂಗತಿ ಎಂಬುದಕ್ಕೆ 'ಮಾತೃ ಲಹರಿ' ಎಂಬ ಅವರ ಕವನಗಳ ಗುಚ್ಛದಲ್ಲಿ ಕೆಲವು ವಿವರಗಳು ಲಭ್ಯವಿವೆ.

ಏನು ಶೂನ್ಯವದು ಕರ್ಮವಿರತ ಜಡಜೀವವೀತ ಸ್ಪಂದ
ಶಬ್ದಹೀನ ಪಾತಾಳಘಾತ ಪರಿಪಾತ ಸರ್ಪಬಂಧ
ತಮದ ಗರ್ಭದಲಿ ಕೃಷ್ಣ ಜಿಹ್ವೆಗಳ ಚಾಚಿ ಬರುವ ಭಯವು
ಸ್ವಯಕೆ ಹಮ್ಮದವ ತಂದು ನಿಂತ ಕ್ಷಣ ಇತ್ತು ಎಷ್ಟೋ ಯುಗವು

(6ನೇ ಪದ್ಯ, ಪು. 2 ಮಾತೃಲಹರಿ 2006)

ಪ್ರಾಣಮೂಲದಲಿ ಅವಿತ ಅಸುರಕುಲ ಕೇಣಗೊಂಡು ನುಗ್ಗಿ
ಯುದ್ಧಸಾರಿ ಬರೆ ಭೀಮರೋಷದಲಿ ಮನವ ಮೀರಿ ಜಗ್ಗಿ
ನನ್ನ ಜೀವದಣು ಅಣುಗಳಲ್ಲಿ ನೀ ಕಾಲಿ ರೂಪ ತಾಳಿ
ಕದನ ತುಮುಲದಲಿ ಪ್ರಕಟವಾಗಿ ನೀನಸುರರೆದೆಯ ಸೀಳಿ

(7ನೇ ಪದ್ಯ ಪು. 2 ಮಾತೃಲಹರಿ 2006)

ಅದರ ಜೊತೆಗೆ ಅವರು ಅದಕ್ಕೆ ಕೊಡುವ ಕರೆ-

ಏಳು ! ನನ್ನ ಕುಲಕುಂಡದಲ್ಲಿ ನಿಜವಾಸವಿದ್ದ ಕೌಲಿ
ನಿನ್ನ ಸಮಯಕನುಸಾರ ಸಾಗಿಹೆನು ಮಂತ್ರ ದೀಕ್ಷೆ ತಾಳಿ

(9ನೇ ಪದ್ಯ ಪು. 3 ಮಾತೃಲಹರಿ 2006)

ಸಂಪೂರ್ಣವಾಗಿ ತಂತ್ರಮಾರ್ಗದ ಕೌಲಮಾರ್ಗ ಅಂದರೆ ಕುಲಸಂಪ್ರದಾಯವನ್ನು ಪ್ರಮುಖ ಎಂದು ಪರಿಗಣಿಸಿದ ನಡೆ ಇಲ್ಲಿ ಕಾಣಿಸುತ್ತದೆ. ಮತ್ತು ಅದು ಕುಂಡದಲ್ಲಿ ವಾಸವಿರುವ ಆ ಶಕ್ತಿಯ ಪ್ರಚೋದನೆಯನ್ನೇ ಉದ್ದೇಶಿಸಿದೆ. ಮುಂದೆ ಅದು ಹೇಗೆ ಒಂದು ಸರ್ಪ ಭುಸುಗುಟ್ಟಿ ಎದ್ದಂತೆ ಎದ್ದಿತು ಎಂಬ ವಿವರ ಇಲ್ಲಿದೆ –

ಮಂತ್ರಪುಷ್ಪ ಮಕರಂದ ಗುಪ್ತೆ ನೀ ಮೂಲಚಕ್ರದಿಂದೆ
ಸರ್ಪದರ್ಪದಲಿ ಎದ್ದು ಬರಲು ಮಣಿಪೂರ ದಾಟಿಮುಂದೆ
ಹೃದಯಕಮಲ ಕೆಲಸಾರೆ ಮಿಂಚು ಹೊಳೆ ತುಳುಕಿದಂತೆ ನಾದ
ಎದ್ದು ಬಂದಿತದು ಅಗ್ನಿವರ್ಣದಲಿ ಏನು ಸ್ವಾಂತ ಶೋಧ

(22ನೇ ಪದ್ಯ ಪು. 6 ಮಾತೃಲಹರಿ 2006)

ಇಲ್ಲಿ ಸ್ಪಷ್ಟವಾಗಿ ಕುಂಡಲಿನಿಯ ಭೀಭತ್ಸ ಮತ್ತು ಸೌಂದರ್ಯ ಎರಡನ್ನೂ ವಿವರಿಸಿದ್ದಾರೆ. ಸತ್ಯಕಾಮರೇ ಹೇಳುವ ಹಾಗೆ ಅವರಿಗೆ ಗುರುಗಳಿಲ್ಲ ಆದರೆ ಇದು ತನ್ನಷ್ಟಕ್ಕೆ ಸಂಭವಿಸಿತೇ ಅದರ ಸಂಯಮ ಅವರು ಆಗ ಸಾಧಿಸಿದ್ದು ಹೇಗೆ ಎಂಬುದು ಅವರು ತನ್ನ ಕುರಿತು ಆಡಿಕೊಳ್ಳದ ರಹಸ್ಯಭಾಗದಲ್ಲಿಯೇ ಉಳಿದುಕೊಳ್ಳುತ್ತದೆ.

ಸತ್ಯಕಾಮರು ಕೂಡ ಇಷ್ಟೆಲ್ಲಾ ಅನುಭವಿಸಿಯೂ ಅದು ಬೇಕೇ ಬೇಕು ಪ್ರತೀ ಶಿಷ್ಯನೂ ಅದನ್ನು ದಾಟದೆ ಗತಿಯಿಲ್ಲ ಎಂಬ ತೀರ್ಮಾನದ ಹೇಳಿಕೆಯನ್ನು ಕೊಟ್ಟಿಲ್ಲ. ಅವರಿಗೆ ಮನುಷ್ಯ ಪ್ರಜ್ಞೆಯ ವಿಸ್ತಾರ ಕಾಲದಿಂದ ಕಾಲಕ್ಕೆ ತುಂಬ ಬೆಳವಣಿಗೆಯ ಕಡೆಗೆ ಇದೆ ಎಂಬ ಪೂರ್ವ ದೃಷ್ಟಿ ಇರುವುದರಿಂದ ಕುಂಡಲಿನೀ ಕಾಲಾಂತರದಲ್ಲಿ ಬೇಕಾಗಿಲಿಕ್ಕೆ ಇಲ್ಲ ಎಂಬ ಮನೋಧರ್ಮವಿದೆ. ಆದರೂ ಕುಂಡಲಿನಿಯ ಜೊತೆಗೆ ಮಕ್ಕಳಾಟ, ಕುತೂಹಲ ಇವುಗಳು ಆದಷ್ಟು ದೂರವಿದ್ದರೆ ಲೇಸು ಎಂಬ ಮೌನನಿಷೇದವು ಅವರ ಬರೆಹದಲ್ಲಿದೆ. ಪತಂಜಲಿ ಅದನ್ನು ಉಲ್ಲೇಖಿಸಲಿಲ್ಲ ಎಂಬ ಮಾತ್ರಕ್ಕೆ ಅದಿಲ್ಲ ಎಂಬ ತೀರ್ಮಾನವನ್ನು ಮಾಡದೆ ಅವನು ಹೇಳಿದ್ದಕ್ಕೂ ಮೀರಿದ ಸಂಗತಿಗಳು ನಮ್ಮ ದೇಹದಲ್ಲಿ ಇವೆ ಎಂಬ ಮಟ್ಟಿಗೆ ವಿಚಾರಶೀಲರಾಗಿದ್ದಾರೆ.

ಒಟ್ಟಿನಲ್ಲಿ ಇಬ್ಬರು ಆಚಾರ್ಯರು ಅದರ ಸಾಧಕ-ಬಾಧಕಗಳ ಎಲ್ಲವನ್ನು ವಿವರಿಸಿ ಬೇಕು ಬೇಡದ ಕುರಿತ ನಿಶ್ಚಿತ ತೀರ್ಮಾನವನ್ನು ಸೂಚಿಸಿಲ್ಲ. ಆದರೆ ತಂತ್ರಪಥವು ದೇಹಮುಖೇನ ಹಾಗಾಗಿ ಕಾಮ ಮುಖೇನವೇ ಆ ಪ್ರಜ್ಞೆಯ ವಿಸ್ತಾರಕ್ಕೆ ನಡೆವ ಕ್ರಿಯೆಯಾದ್ದರಿಂದ ದೇಹದ ಎಲ್ಲಾ ಶಕ್ತಿ ಸಾಧ್ಯತೆಯನ್ನು ವಿವರಿಸುವ ಮತ್ತು ಅನುಭವಿಸುವ ಹಿನ್ನೆಲೆಯಲ್ಲಿ ತಂತ್ರಪಥಕ್ಕೆ ಇದು ಅನಿವಾರ್ಯ ಸಂಗತಿ ಎಂದು ಹೇಳಬಹುದು.

ಆದರೆ ದೇವಮಾರ್ಗಕ್ಕೆ ಹಲವು ಪಥಗಳು ಇರುವುದರಿಂದ ಎಲ್ಲಾ ಸಾಧಕರಿಗೂ ಈ ಅನುಭವ ಬೇಕಿರಲಿಕ್ಕಿಲ್ಲ. ಇದನ್ನು ಅನುಭವಿಸದೆ ಸಾಧನ ಪಥದ ಮೋಕ್ಷಾನುಭವ ಮತ್ತು ಮುಕ್ತಿಯ ಸಾಕ್ಷಾತ್ಕಾರವನ್ನು ಕಂಡರಿಸಿದವರು ಇದ್ದಾರೆ ಎಂಬ ತಿಳುವಳಿಕೆಯೇ ಆಧ್ಯಾತ್ಮದಲ್ಲಿ ಸಾರ್ವತ್ರಿಕವಾಗಿದೆ.

ತನ್ನನ್ನು ದೇಹ ಮುಖಾಂತರ ವಿಸ್ತರಿಸುವ ಛಲವಾದಿಗೆ ಇಂಥದೊಂದು ದೇಹಶಕ್ತಿಯ ವಿಸ್ತಾರ ಸಾಧ್ಯ ಎಂಬ ಮಟ್ಟಿಗೆ ಮಾತ್ರ ಕುಂಡಲಿನಿಯನ್ನು ಒಪ್ಪಿಕೊಳ್ಳಲು ಅಡ್ಡಿಯಿಲ್ಲ. ಶಕ್ತಿಪಾತವೊಂದು ಶಿಷ್ಯನ ಅನುಭವಕ್ಕೂ ಬಾರದೆ ನಡೆಯಬಹುದಾದ ಕ್ರಿಯೆ ಎಂದ ಮೇಲೆ ಅದು ಕುಂಡಲಿನಿ ಜಾಗೃತಿಯ ಅನಿವಾರ್ಯತೆಯಲ್ಲೇ ನಡೆಯಬೇಕಿಲ್ಲ ಎಂದಂತೆ ಆಯಿತು. ಎಲ್ಲಕ್ಕೂ ಮಿಗಿಲಾಗಿ ತಾನು ಇರುವ ಇರುವು, ಈ ದೇಹ ಇವಿಷ್ಟೆಯಾ ? ಇದರಾಚೆಗೆ ಏನು ? ಇಲ್ಲಿ ತಾನು ಪಡೆದ ಹೆಸರು ಸ್ಥಾನಮಾನ ಸಾಕೇ ? ಇದಕ್ಕೂ ಮೀರಿ ತಾನು ಬೆಳೆಯಬಹುದಾದ ಬೇರೊಂದನ್ನು ನೋಡಬಹುದಾದ ಸಾಧ್ಯತೆ ಇಲ್ಲವೇ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವ ಜೀವಮಾತ್ರ ಇದರ ಬಗ್ಗೆ ತಲೆಕೆಡಿಸಿಕೊಂಡರೆ ಸಾಕು. ಚಾಕಲೇಟನ್ನೇ ರುಚಿ ನೋಡದವರಿಗೆ ಫಾರಿನ್ ಚಾಕಲೇಟನ್ನು ಕೊಟ್ಟರೆ ವ್ಯತ್ಯಾಸ ತಿಳಿದೀತು ಹೇಗೆ ಮತ್ತು ಯಾಕೆ ?

3. ರಜನೀಶ್ ಮತ್ತು ಸತ್ಯಕಾಮರು ಕಂಡ ಗುರು-ಶಿಷ್ಯರು

ಆಧ್ಯಾತ್ಮದಲ್ಲಿ ಗುರುವಿಗೆ ಬಹಳ ದೊಡ್ಡ ಸ್ಥಾನ. ಆದರೆ ಅದು ಕೇವಲ ಆಕಸ್ಮಿಕ ಎಂಬ ನಂಬಿಕೆಯೇ ಹೆಚ್ಚು. ಅನೇಕ ಬಾರಿ ನಾವು ಗುರುವನ್ನು ಹುಡುಕುತ್ತಿದ್ದೇವೆ, ಗುರುವು ನಮಗೆ ಸಿಕ್ಕಿಲ್ಲ ಎಂಬ ಪ್ರಲಾಪ ಸರ್ವೇಸಾಮಾನ್ಯವಾಗಿ ನಾವು ಕೇಳುತ್ತೇವೆ. ಗುರುವನ್ನು ಪಡೆದೇ ತೀರಬೇಕೆಂದು ಹಂಬಲಿಸುವ, ಮತ್ತು ಕಂಡವರನ್ನೆಲ್ಲಾ ಗುರುವೆಂದು ನಂಬುವ ಹೀಗೆ ಭಿನ್ನ ಅಭಿರುಚಿ ಆಧ್ಯಾತ್ಮ ಪಥದ ಕುತೂಹಲಿಗಳಲ್ಲಿ ಇದೆ.

ಆದರೆ ಗುರುವು ಎಂದೂ ಆಕಸ್ಮಿಕನಲ್ಲ. ಅವನನ್ನು ನೀವು ಹುಡುಕಲಾರಿರಿ, ಅವನೇ ನಿಮ್ಮ ಬಳಿಗೆ ಬರುತ್ತಾನೆ ಎಂಬ ಅಭಿಪ್ರಾಯವೇ ದೊಡ್ಡವರಲ್ಲಿ ಇದೆ. ಮೂಲತಃ ಗುರು ಅನಿವಾರ್ಯ ಮತ್ತು ಗುರುವೇ ಬೇಕಾಗಿಲ್ಲ ಎಂಬ ಭೇದವಂತೂ ಇದ್ದೇ ಇದೆ.

ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಅನುಗ್ರಹ ಬೇಕೇ ಬೇಕು. ಆದರೆ ಅದರಲ್ಲಿ ಎರಡು ವಿಧಗಳನ್ನು ಹೇಳಲಾಗಿದೆ-ಪ್ರತ್ಯಕ್ಷ ಅನುಗ್ರಹ, ಪರೋಕ್ಷ ಅನುಗ್ರಹ. ವ್ಯಕ್ತಿಗೆ ಪರೋಕ್ಷ ಅನುಗ್ರಹವಾದಾಗ ಅದಕ್ಕೆ ಮೂರ್ತ ಸ್ವರೂಪದ ಮಾರ್ಗದರ್ಶನವಿರುವುದಿಲ್ಲ. ರಮಣ ಮಹರ್ಷಿ ಅಂಥ ಅನುಗ್ರಹಕ್ಕೆ ಉದಾಹರಣೆ. ಆದರೆ ಕೆಲವು ಅನುಗ್ರಹಗಳು ಪ್ರತ್ಯಕ್ಷವಾದ ಮೂರ್ತ ಸ್ವರೂಪದಿಂದ ಸಂಭವಿಸುತ್ತದೆ. ಅದಕ್ಕೆ ಪ್ರತ್ಯಕ್ಷ ಅನುಗ್ರಹ ಎಂದು ಹೆಸರು. ಅದನ್ನು ಮಾಡುವವನೇ ಗುರು ಎಂದು ತಿಳಿಯಲಾಗಿದೆ.

ಇಂಥ ಗುರುವನ್ನು ಕಂಡು ಹುಡುಕುವುದು ಹೇಗೆ, ಅವರ ಅರ್ಹತೆಗಳೇನು, ಶಿಷ್ಯನ ಅರ್ಹತೆಗಳು, ತಯಾರಿಗಳು ಯಾವುವು ಎಂಬ ನೆಲೆಯಲ್ಲಿ ರಜನೀಶ್ ಮತ್ತು ಸತ್ಯಕಾಮ ಇಬ್ಬರೂ ಅಲ್ಲಲ್ಲಿ ಸಾಕಷ್ಟು ಚರ್ಚೆ ಮಾಡಿದ್ದಾರೆ.

ಮೂಲತಃ ತಂತ್ರವು ಶಾಸ್ತ್ರೋಕ್ತವಾಗಿ ಒಂದೊಂದನ್ನೇ ತಿಳಿಯುತ್ತಾ ಹೋಗುವ ಪಥವಾದ್ದರಿಂದ ತಂತ್ರದಲ್ಲಿ ಗುರುವಿಲ್ಲದೆ ಸಾಧ್ಯವಿಲ್ಲ. ಸತ್ಯಕಾಮರಂತೂ ತಂತ್ರಮಾರ್ಗದಲ್ಲಿ ಗುರುವಿಲ್ಲದವನನ್ನು ನಿರ್ಗತಿಕ ಎಂದೇ ಘೋಷಿಸಿದ್ದಾರೆ. ತಾನು ಗುರುವಿಲ್ಲದೆ ನಡೆದೆನೆಂದೇ ತನ್ನನ್ನು ಅನಾಥ ಶಿಶು ಎಂದು ಕರೆದುಕೊಂಡಿದ್ದಾರೆ. ತಾಯಿಯಿಲ್ಲದ ಮಗುವಿನ ಬೆಳವಣಿಗೆ ಎಷ್ಟು ಕಷ್ಟವೋ ಹಾಗೆಯೇ ಗುರುವಿಲ್ಲದ ಶಿಷ್ಯನ ನಡೆ ಎಂಬುದು ಅವರ ಮಾತಿನ ಅರ್ಥ.

ರಜನೀಶನ ಪ್ರಕಾರ ಒಂದು ಸ್ತ್ರೀ ಶಕ್ತಿ ಇನ್ನೊಂದು ಪುರುಷ ಶಕ್ತಿ. ಶಿಷ್ಯ ಒಂದು ಸ್ತ್ರೀ, ಒಂದು ಸ್ವೀಕರಣೆ, ಒಂದು ಗರ್ಭ. ಗುರು ಒಂದು ಪುರುಷ, ಒಂದು ಬೀಜ. ಒಂದು ಕೆಳಗಿನ ಹಂತದಲ್ಲಿದೆ ಇನ್ನೊಂದು ಮೇಲಿನ ಹಂತದಲ್ಲಿದೆ. ಇವೆರಡೂ ಪರಸ್ಪರ ಕೊಟ್ಟುಕೊಳ್ಳಲು ಸಿದ್ಧವಾದರೆ ಅದು ಧೀಕ್ಷೆ. ಇಲ್ಲಿ ಒಂದು ಅದ್ಭುತ ಸಮರ್ಪಣೆ ಬೇಕು. ಸ್ವೀಕರಿಸುವ ಮೊದಲು ಕೊಡುವ ಗುಣ ದೊಡ್ಡದು. ಅದೇ ತನ್ನನ್ನು ಕೊಟ್ಟುಕೊಳ್ಳುವ ಸಮರ್ಪಣೆ. ಸಮರ್ಪಣೆಯಿಂದ ಅಸಾಧ್ಯವೂ ಸಾಧ್ಯವಾಗಿ ಬಿಡುತ್ತದೆ.

ಸಮರ್ಪಣೆಗೆ ಎಷ್ಟು ಶಕ್ತಿ ಇದೆ ಎಂದರೆ ಅದು ಅತ್ಯಂತ ಜೀವಂತ ವ್ಯಕ್ತಿಗೇ ಸಮರ್ಪಿಸಬೇಕಾಗಿಲ್ಲ. ಕಲ್ಲು, ಮರ, ಒಂದು ನಾಯಿ ಏನಾದರೂ ಆಗಿರಬಹುದು. ಆದರೆ ಪೂರ್ತಿ ಸಮರ್ಪಿತವಾಗಿರಬೇಕು ಇಷ್ಟೇ. ಇಂಥ ಉದಾಹರಣೆಯನ್ನು ಏಕಲವ್ಯನ ಸಂದರ್ಭದಲ್ಲೂ ಗಮನಿಸಬಹುದು.

ಈ ಗುರುವು ಕೇವಲ ಕೊಟ್ಟು ಹೋಗಲು ಬಂದವನಲ್ಲ. ಅವನು ಸಂಪೂರ್ಣವಾಗಿ ಕಾಯುವ, ರಕ್ಷಿಸುವ ಹೊಣೆಯನ್ನು ಹೊರುತ್ತಾನೆ. ದಾರಿ ನಡೆವಲ್ಲಿ ಎಡವದಂತೆ, ಬಿದ್ದರೂ ಎಬ್ಬಿಸುವ, ಪದೇ ಪದೇ ಎಲ್ಲ ದುಃಖಗಳಿಗೂ, ಸುಖಗಳಿಗೂ ನಿರಂತರ ಜೊತೆಯಾಗುವ ತಾಯಿಯಂತೆ ಗುರುವಿನ ಸಂಬಂಧ. 'Infact all masters are more mothers than fathers. They have the quality of the feminine. Buddha is feminine, so is Mahaveera, so is Krishna... you can look into their eyes and you will not find the male aggressiveness'. (P-11 Tantra vision vol-I, google search osho) ಎನ್ನುವ ರಜನೀಶನ ಮಾತುಗಳಲ್ಲಿ ಗುರುವು ತಾಯಿ ಎನ್ನುವ ಧನಿ ಇದೆ. ಅದಕ್ಕೆ ಅವನು ಒಂದು ಸುಂದರ ಕಾರಣವನ್ನು ಕೊಡುತ್ತಾನೆ. 'All that is born is born out of the feminine energy. Male energy can trigger it but cannot give birth' (P-11 Tantra vision vol-I, google search osho) ಗುರುವು ಶಿಷ್ಯನನ್ನು ಹುಟ್ಟಿಸುವವನು ಆದ್ದರಿಂದಲೇ ಅವನು ತಾಯಿ.

ತಾನು ಒಂದು ದಿವಸ ಶಿಷ್ಯನಲ್ಲಿ ಇಲ್ಲವಾಗುವುದಕ್ಕೆ ಕಾಯುವ ಗುರುವು ಶಿಷ್ಯನಿಗಾಗಿಯೂ ಮೊದಲು ಕಾಯುತ್ತಾನೆ. ಶಿಷ್ಯನನ್ನು ಗುರುವು ಶಿಷ್ಯನಿಗೂ ಎಷ್ಟೋ ಮೊದಲೇ ಕಾಯುತ್ತಾನೆ ಎಂಬ ನಂಬಿಕೆ ನಮ್ಮ ಪೂರ್ವಿಕರಲ್ಲಿ ಇತ್ತು. ಅದು ನಿಜಕೂಡ. ಗುರುವನ್ನು ಕಾಯುವುದಕ್ಕೆ ಶಿಷ್ಯನಿಗೆ ಹೇಗೆ ಸಾಧ್ಯ? ಅವನನ್ನು ಗುರುತಿಸುವ ಸಾಮರ್ಥ್ಯ ಇವನಿಗಿರಲು ಸಾಧ್ಯವಿಲ್ಲ. ಅವನು

ಖಂಡಿತಕ್ಕೂ ಆ ಹಂತ ತಲುಪಿದ್ದೇ ಆದಲ್ಲಿ ಅವನಿಗೆ ಗುರುವಿನ ಅವಶ್ಯಕತೆಯೇ ಇಲ್ಲ. ಆದರೆ ಗುರುವಿಗೆ ಶಿಷ್ಯನನ್ನು ಹುಡುಕುವ ಕಾಯುವ ಎಲ್ಲಾ ಸಾಮರ್ಥ್ಯ ಸಾಧ್ಯತೆ ಇದೆ. ಆದ್ದರಿಂದ ಗುರುವನ್ನು ನಾವು ಹುಡುಕುವುದಲ್ಲ ಅವನೇ ನಮ್ಮನ್ನು ಹುಡುಕುತ್ತಾನೆ, ಆರಿಸುತ್ತಾನೆ. ಮತ್ತು ಅವನೇ ತನ್ನನ್ನು ತೋರ್ಪಡಿಸುತ್ತಾನೆ ಎನ್ನುವ ವಿಷಯದಲ್ಲಿ ರಜನೀಶನಿಗೆ ಪೂರ್ಣ ವಿಶ್ವಾಸವಿದೆ. ಹೀಗೆ ಹುಡುಕಿ ತೆಗೆಯುವ ಹಿಂದೆ ರಜನೀಶನಿಗೆ ಒಂದು ತುಂಬ ಅದ್ಭುತ ನಂಬಿಕೆ ಇದೆ.

ನಾವು ದೇವರ ಬಳಿಗೆ ಹೋಗಲಾರೆವು. ಹೋದವರೂ ನಮಗೆ ಅವನ ವಿಳಾಸ ತಿಳಿಸಲಾರರು ಯಾಕೆಂದರೆ ಅವನಿಗೆ ವಿಳಾಸವಿಲ್ಲ. ವಿಳಾಸವೇ ಗೊತ್ತಿಲ್ಲದೆ ನಾವು ಅವನ ಬಳಿಗೆ ಹೋಗುವುದು ಹೇಗೆ? ಅದು ಯಾವಾಗಲು ತದ್ವಿರುದ್ಧವಿರುತ್ತದೆ. ಅವನು ನಮ್ಮ ಬಳಿಗೆ ಬರುತ್ತಾನೆ. ಬಂದು ಬಾಗಿಲು ಬಡಿಯುತ್ತಾನೆ. ಒಂದೇ ಒಂದು ಅರ್ಹತೆ ಎಂದರೆ ನಾವು ಸಿದ್ಧರಿರಬೇಕು.

ಇಂಥದೇ ಪ್ರಕ್ರಿಯೆ ಗುರು–ಶಿಷ್ಯರಲ್ಲೂ ಸಾಮಾನ್ಯ. ಯಾಕೆಂದರೆ ಅವನ ಪ್ರಕಾರ ಇದೊಂದು ಪ್ರೇಮಪ್ರಕರಣ. ಪ್ರೇಮಪ್ರಕರಣವಾದರೂ ದೇಹದೊಂದಿಗೆ ಮುಗಿದೀತು ಗುರು–ಶಿಷ್ಯರ ಪ್ರೇಮಪ್ರಕರಣ ದೇಹದೊಂದಿಗೂ ಮುಗಿಯುವುದಿಲ್ಲ ಯಾಕೆಂದರೆ, a disciple and a Master-it is a soul love affair (P-12 Tantra vision vol-I, google search osho) ಇದು ಆತ್ಮಸಂಗಾತಕ್ಕೆ ನೀನೆನಗುಂಟು ಚೆನ್ನಮಲ್ಲಿಕಾರ್ಜುನ ಎಂಬ ರೀತಿಯದು. ಇಲ್ಲಿ ಗುರು ಆತ್ಮಸಂಗಾತಿ.

ಆದರೆ ಈ ಪ್ರೇಮಪ್ರಕರಣವು ತುಂಬ ಭಯಾನಕವೂ ಇರಬಹುದು. ಅದಕ್ಕೆಂದೇ ಸಾವು, ಸಾವಿನ ನಂತರವೂ ಇದನ್ನು ಅನುಭವಿಸಬೇಕು. ಒಂದಲ್ಲ ಒಂದು ಕಾರಣಕ್ಕೆ ಗುರುವನ್ನು ದ್ವೇಷಿಸುವ ಹಂತ ತಲುಪಿದರೆ ಅಲ್ಲಿಗೆ ಗುರು–ಶಿಷ್ಯ ಇಬ್ಬರ ಬದುಕು ಮುಕ್ತಾಯ. ಅದಕ್ಕೆ ಸಹನಾವವತು ಶಾಂತಿ ಮಂತ್ರದಲ್ಲಿ ಮಾ ವಿದ್ವಿಷಾವಹೈ ಎಂದು ಗುರು–ಶಿಷ್ಯರಿಬ್ಬರು ಪ್ರಾರ್ಥಿಸಿಕೊಳ್ಳುತ್ತಾರೆ. ಅದು ಇಬ್ಬರನ್ನು ಅತಂತ್ರ ಮಾಡಿಬಿಡುವ ಅವಸ್ಥೆ. ಅದಕ್ಕೆ ಆ ಸ್ಥಿತಿ ಬಾರದಿರಲಿ ಎಂಬ ಪ್ರಾರ್ಥನೆ. ಏಕೆಂದರೆ ಗುರುವಿನ ಬೆಳವಣಿಗೆಗಾಗಿ ಶಿಷ್ಯ ಸಾಯಬೇಕು, ಶಿಷ್ಯನ ಹುಟ್ಟಿಗಾಗಿ ಗುರು ಸಾಯುತ್ತಾನೆ. ಆದರೆ ಗುರುವಿಗೆ ಅದು ಅರಿವಿದ್ದು ನಡೆಯುವ ಘಟನೆ, ಶಿಷ್ಯನಿಗೆ ಅದು ಅಹಂಕಾರ ಅಳಿಸಲು ಸಂಭವಿಸುವ ಅರಿವಿರದ ಸಾವು. ಅದಕ್ಕೆ, 'In ancient days in India the Master was called the death because you have to die in the Master the desciple in the Master... only then does he come to know who he

is' (P-157 Tantra vision vol-I, google search osho) ಎಂಬ ಅಭಿಪ್ರಾಯವನ್ನು ರಜನೀಶ್ ಕೂಡ ಹೊಂದಿದ್ದಾನೆ.

Discipline ಮತ್ತು disciple ಶಬ್ದಗಳು ಒಂದೇ ಮೂಲದಿಂದ ನಿಷ್ಪನ್ನಗೊಂಡಿವೆ. ಅವೆರಡರ ಹಿಂದೆಯೂ ಶಿಸ್ತು ಮೂಲದಲ್ಲಿದೆ. ಮತ್ತು ಆ ಶಿಸ್ತನ್ನು ಪರಿಪಾಲಿಸುವ ಕಲಿಯುವಿಕೆಯ ಶಿಸ್ತಿಗೆ ಒಪ್ಪಿಸಿಕೊಂಡವ ಶಿಷ್ಯ ಎನ್ನಿಸಿಕೊಳ್ಳುತ್ತಾನೆ. ಇಲ್ಲಿ ಕಲಿಯುವಿಕೆ ಎಂದರೆ ಆ ಅದು, ದೇವರು, ಅಥವಾ ದೊಡ್ಡದು, ಮಹಾಪ್ರಜ್ಞೆ ಏನಾದರೂ ಅಂದುಕೊಳ್ಳಬಹುದು. ಸಾಮಾನ್ಯವಾಗಿ ನಮಗೆ ಗುರುವು ಆ ದೊಡ್ಡದನ್ನು ತೋರಿಸಲು ಬರುತ್ತಾನೆ ಎಂಬ ನಂಬಿಕೆ ಇದೆ. ಅವನೆಷ್ಟೋ ಬಾರಿ ನಮ್ಮನ್ನು ಇದರಿಂದ ಪಾರು ಮಾಡಿ ಆ ಅದಕ್ಕೆ ಮುಟ್ಟಿಸಲು ಬರುವ ಮಧ್ಯವರ್ತಿ ಎಂಬ ತಿಳುವಳಿಕೆಯೂ ಇದೆ.

ರಜನೀಶ್, 'He is not a bridge between you and God, he is just a bridge between your awareness and awareness (P-119, Tantra vision vol-II, google search osho) ಅಂದರೆ ಗುರುವು ಕೇವಲ ಹೊರಗಣ ಎಚ್ಚರಕ್ಕೆ ಒಳಗಣ ಎಚ್ಚರವನ್ನು ಎಚ್ಚರಿಸಿ ಅವೆರಡಕ್ಕೂ ಸಂಪರ್ಕ ಹುಟ್ಟಿಸಿ ಅಲ್ಲಿಂದ ಮರೆಯಾಗುವವ. ಅವನು ಒಳಗಿಲ್ಲದ್ದನ್ನು ಹೊರಗಿಂದ ತೋರುವುದಿಲ್ಲ. ನಮ್ಮ ಒಳಗೇ ಇರುವ ಶಕ್ತಿಗೆ ಕಿಡಿಹಚ್ಚುವವನು ಮಾತ್ರ ಗುರು ಎಂಬ ನಂಬಿಕೆ ರಜನೀಶನದು. ತಾಯಿ ಮಗುವಿನ ಹಸಿವಿಗೆ ಸ್ಪಂದಿಸಿದಂತೆ. ಇವನ ಸ್ಪಂದನ ಒಳಗಣ ಕೂಗಿಗೆ ಅನುಗುಣವಾಗಿ ಹೊರಗಣ ಗುರುವಿನ ಪ್ರತಿಕ್ರಿಯೆ. ಗುರು ತುಂಬ ಕಾರುಣ್ಯಮಯಿ, ಕಠೋರಿ ತಾಯಿಯ ಹಾಗೆ.

ಪೌರಾತ್ಯ ದೇಶಗಳ ಗುರು ಬೇರೆ, ಪಾಶ್ಚಾತ್ಯ ದೇಶಗಳ ಟೀಚರ್ ಬೇರೆ. The west knows teachers not Masters. Teachers are those who teach you about truth. A Master is one who gives you the taste of it' (P-90 Tantra the supreme understanding, google search osho)

ನಮ್ಮಲ್ಲಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯದ ಕಲ್ಪನೆಯಿದೆ. ಇದನ್ನು ಗುರುವಿಗೂ ಅನ್ವಯಿಸಬಹುದು. ಮೊದಮೊದಲು ಗುರುವಿರುವ ಲೋಕದಲ್ಲಿಯೇ ಇರುವುದು, ಕಾಲಾಂತರದಲ್ಲಿ ಸಮೀಪ ಸಾಲದೆ ಒದ್ದಾಡಿ ಹೆಚ್ಚು ಹತ್ತಿರಾಗುವುದು, ಆ ಬಳಿಕ ಅವನ ರೂಪದಲ್ಲಿ ತನ್ನ ರೂಪ ಕಾಣುವ ತಾದಾತ್ಮ್ಯ, ಮುಂದೆ ಅವನಲ್ಲಿಯೇ ಐಕ್ಯವಾಗಿ ತಾನಿಲ್ಲವಾಗುವ ಸಾಯುಜ್ಯ. ಇಂಥದೊಂದು ಸ್ಥಿತಿ ಗುರುವಿನ ಜೊತೆಗೆ ಸಂಭವಿಸಬೇಕು.

ಇಂಥ ಸ್ಥಿತಿಯಲ್ಲಿ ಗುರುವನ್ನು ಹೇಗೆ ಸಮೀಪಿಸಿದರೂ ಸಾಲದು. ಆಗ ರಜನೀಶ್ ಆ ಬಾಂಧವ್ಯವನ್ನು Eat the Master, drink the Master. Listening won't help because he is a living phenomenon, the energy is their. If you drink and eat him then only you will become aware of a different quality of being (P-90 Tantra the supreme understanding, google search osho) ಎಂಬಷ್ಟು ಸಮೀಪದಲ್ಲಿ ವಿವರಿಸುತ್ತಾನೆ. ಇಲ್ಲಿ ತಿನ್ನುವ ಕುಡಿಯುವ ಕಲ್ಪನೆಯಿದೆ. ತಂತ್ರಪಥದಲ್ಲಿ ಇಂಥದೊಂದು ದೇಹಮುಖೇನ ಪರಿವರ್ತನೆ ತುಂಬ ಪ್ರಭಾವಶಾಲಿಯಾಗಿ ಬಳಕೆಯಲ್ಲಿದೆ. ಇದು ವಾಚಿಕ ಅರ್ಥದಲ್ಲೂ ಹೌದು, ಭೌತಿಕ ಅರ್ಥದಲ್ಲೂ ಹೌದು. ಅಂಥದೊಂದು ತಂತ್ರ ಪಥದ ಗುರು-ಶಿಷ್ಯ ಸಂಬಂಧವೇ ಇಲ್ಲಿಯೂ ರಜನೀಶ್‌ನಿಂದ ಉಲ್ಲೇಖವಾಗಿದೆ.

ಹೀಗೆ ಹೇಳುವಾಗ ರಜನೀಶ್ ಒಬ್ಬ ಗುರುವಿಗೆ ಒಬ್ಬನೇ ಶಿಷ್ಯನಿರಬೇಕು ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದಾನೆ. ಏಕೆಂದರೆ ಇದು ಗುರುಶಿಷ್ಯರ soul love afaire ಎಂದು ಪರಿಗಣಿಸಿದ ಮೇಲೆ ಹಲವರೊಂದಿಗೆ ಸಂಭವಿಸಲು ಸಾಧ್ಯವಿಲ್ಲ. ಈ ಶಿಷ್ಯನ ಏಕಾಂತ, ಅವನೇ ಅಂತಿಮ ಎನ್ನುವ ಸಂಗತಿ ರಜನೀಶನಿಗೆ ತುಂಬಾ ಮುಖ್ಯವಾದುದು. ಸಾವಿರಾರು ಮಂದಿಯನ್ನು ಗುರು ಆಯ್ಕೆ ಮಾಡುವುದಿಲ್ಲ, ಮಾಡಬಾರದು ಎಂಬ ಎಚ್ಚರವನ್ನೂ ರಜನೀಶ್ ಒಪ್ಪುತ್ತಾನೆ. ಸಾಮೂಹಿಕ ಶಿಷ್ಯತ್ವ ಅಪಾಯಕಾರಿ, ಅದು ತನ್ನ ಉಪನ್ಯಾಸದ ದಿಕ್ಕನ್ನೇ ಬದಲಿಸಿತು ಹಾಗಾಗಿ ಈಗ ತಾನು ಕೇವಲ ಕೆಲವರನ್ನು ಆಯ್ಕೆ ಮಾಡಿ ಮಾತನಾಡುತ್ತೇನೆ ಎನ್ನುವವರೆಗೆ ಅದರ ಪ್ರಭಾವವನ್ನು ಹೇಳುತ್ತಾನೆ. ಜೊತೆಗೆ ಮಾತು ಆಡುತ್ತಿರುವಾಗ ಆ ವೇದಿಕೆಯ ಬಳಿಗೆ ಬರುವ ಹೊಸ ವ್ಯಕ್ತಿಯೊಬ್ಬ ತನ್ನ ಮಾತಿನ ಧಾಟಿಯನ್ನು, ವಸ್ತುವನ್ನು ಬದಲಿಸಬಲ್ಲಷ್ಟು ಪ್ರಭಾವಶಾಲಿಯಾಗಬಲ್ಲ ಎನ್ನುತ್ತಾನೆ. ಆದ್ದರಿಂದ ಶಿಷ್ಯನನ್ನು ಆಯ್ಕೆ ಮಾಡುವ ಮತ್ತು ಅವನನ್ನು ಒಬ್ಬನೇ ಎಂದು ಒಪ್ಪಿಕೊಳ್ಳುವ ಅಂತೇವಾಸಿ ಪರಂಪರೆಯಲ್ಲಿ ರಜನೀಶನಿಗೆ ಪೂರ್ತಿ ವಿಶ್ವಾಸವಿದೆ.

ಗುರುವು ಒಂದು ಸಾಧ್ಯತೆ ಮಾತ್ರ. ಆದರೆ ಸ್ವೀಕರಿಸುವ ಶಿಷ್ಯನ ಪಾತ್ರತೆಗೂ ಅಷ್ಟೇ ದೊಡ್ಡ ಸ್ಥಾನವಿದೆ. ಗುರು ತನ್ನ ಶಿಷ್ಯನನ್ನು ಆಯ್ಕೆ ಮಾಡಿ ಅವನಲ್ಲಿ ತನ್ನ ಶಕ್ತಿ ಪ್ರವಹಿಸಲು ಪ್ರಯತ್ನ ಪಡುತ್ತಾನೆ ನಿಜ ಆದರೆ ಆ ಬದಿಯಿಂದ ಸ್ವೀಕರಿಸುವ ಮನಃಸ್ಥಿತಿ ಅಥವಾ ಅರ್ಹತೆ, ಸಿದ್ಧತೆಗಳು ಶಿಷ್ಯನ ಕಡೆಯಿಂದಲೂ ಅಷ್ಟೇ ತೀವ್ರ ಸ್ಪಂದನದಲ್ಲಿ ಪ್ರತಿಕ್ರಿಯೆಯಾಗಿ ಬಾರದೆ ಇದ್ದರೆ ಅದು ಕೇವಲ ಗಾಳಿಯೊಡನೆ ಗುದ್ದಾಟವಾದೀತು. ಗುರುವಿನಿಂದ ಹೊರಟ ಆ ಶಕ್ತಿ ಇಲ್ಲಿ ಬಂದು ನೆಲೆ ನಿಲ್ಲುವ, ಆಸರೆ ಪಡೆವ ಅಪೂರ್ವ ಸಮಾಗಮವೇ ಆಗಬೇಕು. ಅದಕ್ಕೆ ಎಷ್ಟೋ ಬಾರಿ

ಕೊಡುವವನಿಗಿಂತಲೂ ಪಡೆಯುವವನು ದೊಡ್ಡವನು. ಅದು ಕೇವಲ ಗುರುಕೃಪೆಯಲ್ಲ ಶಿಷ್ಯಕಾರುಣ್ಯವೂ ಹೌದು.

ಗುರು ಮಾಡಿದ್ದೆಲ್ಲಾ ಫಲಿಸುತ್ತಿದ್ದರೆ ಅದು ಎಲ್ಲರಿಗೂ ಸಂಭವಿಸಬಹುದಿತ್ತು. ಹಾಗೆ ಸಾಮೂಹಿಕವಾಗಿ ಸಂಭವಿಸುವುದು ಸಾಧ್ಯವೇ ಇಲ್ಲ. ಆದ್ದರಿಂದಲೇ ಹಲವರಲ್ಲಿ ಆಯ್ದು, ಪರೀಕ್ಷಿಸಿ, ಒರೆ ಹಚ್ಚಿ ಗುರು ಒಂದನ್ನು ಹೆಕ್ಕಿ ತೆಗೆಯುತ್ತಾನೆ ಮತ್ತು ಒಂದನ್ನು ಬೆಳೆಸುವುದಕ್ಕೆಂದೇ ತನ್ನ ಪೂರ್ತಿಯನ್ನು ಮುಡಿಪಿಡುತ್ತಾನೆ. ಅಂಥದೇ ಭರವಸೆ, ನಿರೀಕ್ಷೆ ಶಿಷ್ಯನಲ್ಲೂ ಪ್ರಾಪ್ತವಾದಾಗ ಅದು ಪರಸ್ಪರ ದೇವಸಮಯದ ಮಿಲನವಾಗುತ್ತದೆ.

ಇಷ್ಟಾಗಿಯೂ ಶಿಷ್ಯನಲ್ಲಿ ಅನೇಕ ತಯಾರಿಗಳು ಬೇಕು. ಅವನು ಹೇಗೆ ಇದ್ದಾನೋ ಹಾಗೆ ಗುರುವು ಬಳಸಲು ಸಾಧ್ಯವಿಲ್ಲ. ಅವನನ್ನು ಸಂಪೂರ್ಣ ತಿಕ್ಕಿ, ತಿದ್ದಿ ಗಟ್ಟಿಗೊಳಿಸಿ ನೇರ್ಪಡಿಸುವುದು ಗುರುವಿನ ಜವಾಬ್ದಾರಿ. ಏಕೆಂದರೆ ಶಕ್ತಿಯನ್ನು ಪ್ರವಹಿಸುವುದು ಎಂದರೆ ಗೋಲಿ ಆಟವನ್ನೋ, ಮರಕೋತಿ ಆಟವನ್ನೋ ಹೇಳಿಕೊಡುವಷ್ಟು ಮಕ್ಕಳಾಟವಲ್ಲ. 'This preparedness, the capacity to bare depends on so many factors. The nerves in brain, one's physical fitness, one's mental capacity all have their limitations, and the energy we are talking about is unlimited. It is like the ocean falling into the drop, if the drop is not prepared in some way to receive the ocean it will merely die : It will be destroyed and it will attain nothing. (P-34-35 Kundalini Yoga Vol-I 1998)

ಇದರಿಂದ ಗುರುವಿಗೇನು ನಷ್ಟ ಎಂಬ ಪ್ರಶ್ನೆ ಹುಟ್ಟಬಹುದು. ಗುರು ಒಬ್ಬ ಶಿಷ್ಯ ಸತ್ತರೆ ಇನ್ನೊಬ್ಬನನ್ನು ಹುಡುಕಬಲ್ಲ ಎಂಬ ಆಯ್ಕೆಯ ಮಾತನ್ನು ಹೇಳಬಹುದು. ಆದರೆ ಅದು ಹಾಗಲ್ಲ. ಗುರು ತನ್ನನ್ನು ಅರ್ಪಿಸಿಕೊಳ್ಳುವುದು ಎಂದರೆ ಅದು ಶಿಷ್ಯನಲ್ಲಿ ಗುರುವಿನ ಪ್ರಾಣಪ್ರತಿಷ್ಠಾಪನೆ. ಅಲ್ಲಿ ಆ ಪ್ರಾಣ ಈ ಪ್ರಾಣವನ್ನು ನಿರಾಕರಿಸಿತೆಂದರೆ ಅದು ಗುರುವಿನ ಮರಣ ಕೂಡ. ಈ ಅಭಿಪ್ರಾಯವನ್ನು ರಜನೀಶ್ ಆಗಲೇ ಹೇಳಿದ್ದಾನೆ. ಹಾಗಾಗಿ ಗುರುವಿನ ಪ್ರಾಣ ಸ್ವೀಕಾರ ಆಗದೇ ಇದ್ದರೆ ಶಿಷ್ಯನ ನಾಶ ಮಾತ್ರವಲ್ಲ ಅದು ಗುರುವಿನ ನಾಶ ಕೂಡ. ಹಾಗಾಗಿ ಇಬ್ಬರೂ ಅತಂತ್ರವೇ.

ಈ ದೃಷ್ಟಿಯಿಂದ ಗುರು ಇನ್ನೊಂದು ಶಿಷ್ಯ ಎಂಬ ಜೀವದ ಮೇಲೆ ಎಷ್ಟು ಪರಿಣಾಮ ಬೀರಬಲ್ಲ, ಎಂಥ ಪರಿವರ್ತನೆಯನ್ನೆಲ್ಲಾ ಸಾಧ್ಯವಾಗಿಸಬಲ್ಲ ಎಂಬುದನ್ನು ಒಪ್ಪಿದ ರಜನೀಶ್ ಅಂಥ ಗುರುವು ತುಂಬ ನಿಸ್ಪೃಹ ಮತ್ತು ನಿರ್ಘೃಣ ಎಂಬುದನ್ನು ಹೇಳುತ್ತಾನೆ. ಯಾವುದೇ

ಗುರುವನ್ನು ಕೃತಜ್ಞತೆಯಿಂದ ನಮಿಸಿ ನಿರ್ಗಮಿಸಲು ಇದೆಯೇ ಹೊರತು ಅವನನ್ನು ಜೀವಮಾನ ಪರ್ಯಂತ ನೆನೆಯಬೇಕಾಗಿಲ್ಲ ಎಂಬುದನ್ನು ರಜನೀಶ್ ಸ್ಪಷ್ಟಪಡಿಸುತ್ತಾನೆ. (P-43 Kundalini Yoga Vol-I 1998)

ಝೆನ್ ಪಥದಲ್ಲಿ ಗುರುವಿನ ಮೋಹವನ್ನು ಶಿಷ್ಯನಿಂದ ಕಳೆಯಲಿಕ್ಕಾಗಿಯೇ ಶಿಷ್ಯನನ್ನು ತನ್ನ ವಿರೋಧಿ ಗುರುವಿನ ಬಳಿ ಕಳುಹಿಸುವ ಪರಂಪರೆ ಇದೆಯಂತೆ. ಆ ಮೂಲಕ ಈ ಗುರುವಿನ ನಮ್ಮ ಭಾವನೆಗಳ ಪರೀಕ್ಷೆಯೂ ನಡೆಯುತ್ತದೆ. ಆದರೆ ಇಂದಿನ ದಿನಗಳಲ್ಲಿ ಇನ್ನೊಬ್ಬರ ಬಳಿ ಹೋಗುವ ಶಿಷ್ಯರನ್ನು ಕರೆದು ಎಚ್ಚರಿಸುವ ತನ್ನ ಬಳಿಯೇ ಉಳಿಯುವಂತೆ ಮಾಡುವ ಒಂದು ದೊಡ್ಡ ಗುರು ಹುನ್ನಾರವೇ ಇದೆ. ಅದನ್ನು ರಜನೀಶ್ 'It will surprise you to know that many a time the phenomenon of Gurudom (like kingdom) is cause by an inferiority complex that seeks to gather crouwd around itself (P-83 Kundalini Yoga Vol-I 1998)', ಎಂದು ಅಂಥ ಕೀಳರಿಮೆಯ ಗುರುಗಳನ್ನು ಲೇವಡಿ ಮಾಡುತ್ತಾನೆ. ಅವರು ಗುರುಗಳೇ ಅಲ್ಲ ನಿಜವಾದ ಗುರು ನಿಮ್ಮ ಒಳಗೆ ಕಿಡಿ ಹುಟ್ಟಿಸುವುದಕ್ಕೆ ಕಡ್ಡಿ ಗೀರಲು ಅನುಕೂಲವಾಗುವ ಒಂದು ಬೆಂಕಿಪೆಟ್ಟಿಗೆ ಮಾತ್ರ. ಉರಿ ಹತ್ತಿದ ಮೇಲೆ ಶಿಷ್ಯನನ್ನು ಮುಂದಕ್ಕೆ ಹೊರಡುವಂತೆ ದಾಟಿಸುತ್ತಾನೆ. ನನ್ನ ಬಳಿಯೇ ಇರು, ನನಗೇ ಶರಣಾಗು ಅಂತ ಒತ್ತಾಯಿಸುವ ಗುರು ತುಂಬ ಅಪಾಯಕಾರಿ ಎಂದು ಎಚ್ಚರಿಸುತ್ತಾನೆ.

ಬುದ್ಧ, ಜೀಸಸ್ ಮೊದಲಾದವರು ಕೂಡ ತಮ್ಮ ಕೊನೆಯ ಸಂದೇಶ ಕೇಳಿದಾಗ ಹೇಳಿದ್ದೂ ಅದನ್ನೇ. ಬುದ್ಧ 'Be a light unto yourself, do not go after others; do not follow others. Be a light unto yourself. This is my last message' ಎಂದರೆ, ಏಸು ಕ್ರಿಸ್ತನ ಕೊನೆಯ ಸಂದೇಶವೂ ಅಷ್ಟೇ ನಿರ್ಲಿಪ್ತ ಮಾರ್ಗದರ್ಶಕನಂತೆ ಇದೆ. 'On the final day of judgement I shall be your witness'. ಜೀಸಸ್‌ನ ಈ ಮಾತನ್ನು ಉಲ್ಲೇಖಿಸಿ ರಜನೀಶ್ ನಾನು ಕೇವಲ ಸಾಕ್ಷಿ ಮಾತ್ರ ಗುರು ಅಲ್ಲ ಎಂದು ಜೀಸಸ್ ಕೂಡ ಹೇಳಿದ್ದಾನೆ ಎನ್ನುತ್ತಾನೆ.

ಇಂಥ ಗುರು ಹಾಗಾದರೆ ಶಿಷ್ಯನ ಬಳಿ ಬರುತ್ತಾನೆಂಬುದು ಹೇಗೆ ಖಚಿತ? ಹಾಗೆಂದು ಶಿಷ್ಯ ಸುಮ್ಮನೆ ಕುಳಿತುಕೊಳ್ಳುವುದೇ? ಹುಡುಕುವುದು ಬೇಡವೇ? ನಮ್ಮ ಪ್ರಯತ್ನವೇ ಇಲ್ಲದೆ ಅದು ಸಾಧ್ಯವಾಗುತ್ತದೆಯೇ? ಎಂಬ ಹಲವು ಪ್ರಶ್ನೆಗಳು ಆಧ್ಯಾತ್ಮ ಆಸಕ್ತರಲ್ಲೆಲ್ಲಾ ಸರ್ವೇಸಾಮಾನ್ಯವಾಗಿ ಇದೆ.

ರಜನೀಶ್ ಹೇಳುತ್ತಾನೆ, ಶಿಷ್ಯ ಮಾಡಬೇಕಾದದ್ದು ಒಂದೇ ಅದು ಪ್ರಾರ್ಥನೆ. ಪ್ರಾರ್ಥನೆಯೇ ಶಿಷ್ಯತ್ವದ ಮೊದಲ ಅವಶ್ಯಕತೆ. ಪ್ರಾರ್ಥನೆ ಎಂದರೆ ಏನು? ಯಾರಿಗೆ? ಅದಕ್ಕೆ ಅವನ ಉತ್ತರ ಹೀಗೆ ಇದೆ 'prayer is a radiation of our beings suddenly a set a fire it is an infinite and purposeless direction, a brutal accompaniment of our hopes, which travel the universe without reaching any destination... Prayer creates God. Prayer creates the perfect Master. Prayer is creative prayer reveals it, it is a revelatory... one should not go in search of a Master ; one should learn how to pray... and the Master comes... then you don't feel your going ; you feel you are being called. (P-23 The perfect Master Vol.-I 1980) ಎಂಬ ಅದ್ಭುತ ಮತ್ತು ಅವಶ್ಯ ವಿವರಣೆಯನ್ನು ಕೊಡುತ್ತಾನೆ. ಅವನಿಗಾಗಿ ಹುಡುಕುವುದಕ್ಕಿಂತ ಅವನನ್ನು ಕರೆಯುವ ಮಗು ಹಸಿದಿದೆ ಎಂಬುದನ್ನು ಕೂಗಿ ತಿಳಿಸಿದಾಗ ಓಡಿ ಬರುವ ತಾಯಿಯ ರೀತಿಯಲ್ಲಿ ಈ ವ್ಯವಸ್ಥೆ ಇದೆ. ರಜನೀಶನಿಗೆ ಮಗುವಿನ ಬಳಿಗೆ ತಾಯಿ ಬರಬೇಕು, ತಾಯಿಯ ಬಳಿಗೆ ಮಗು ಹೋಗಲಾಗದಷ್ಟು ಶೈಶವಾವಸ್ಥೆ ರಜನೀಶನಿಗೆ ತುಂಬ ಪ್ರಿಯ. ನಮ್ಮಲ್ಲಿ ಮರ್ಕಟ ನ್ಯಾಯ ಮತ್ತು ಮಾರ್ಜಾಲ ನ್ಯಾಯದ ಎರಡು ವಿವರಗಳಿವೆ. ರಜನೀಶ್ ಇಲ್ಲಿ ಮಾರ್ಜಾಲ ನ್ಯಾಯದ ಪರ ಮಾತಾಡುತ್ತಾನೆ. (ಅಂದರೆ ಬೆಕ್ಕು ಮರಿಯನ್ನು ಎತ್ತಿ ಒಯ್ಯುವ ಹಾಗೆ)

ಹಾಗೆಯೇ ದಾಸ ಪಂಥದಲ್ಲೂ 'ಬಯಸಿ ಬೇಡಿದರೆ ಬೇಡಿತ್ತನೀವ ಬಯಸದೇ ಬೇಡಿದರೆ ತನ್ನನೀವ' ಎಂಬ ನಂಬಿಕೆ ಪ್ರಾರ್ಥನೆಯಲ್ಲಿದೆ. ಅಂಥ ಪ್ರಾರ್ಥನೆಯ ಶಕ್ತಿಯನ್ನೇ ಪ್ರಬಲವೆಂದು ರಜನೀಶ್ ನಂಬಿದ್ದಾನೆ.

ಹಲವು ಗಂಡಂದಿರಿದ್ದರೂ ಸಹ್ಯ ಹಲವು ಗುರು ಇರಬಾರದು ಎಂಬ ಮಾತೊಂದು ಸಂಪ್ರದಾಯಸ್ಥ ಹಿಂದೂ ಪರಂಪರೆಯಲ್ಲಿ ಬಳಕೆಯಲ್ಲಿದೆ. ಗುರುವಿನ ಮಟ್ಟಿಗೆ ಅಂಥದೊಂದು ಪಾತಿವ್ರತ್ಯ ಹೇಳಲಾಗಿದೆ. ಅನೇಕ ಗುರು, ಅನೇಕ ಶಿಷ್ಯ, ಎರಡೂ ನಿಷಿದ್ಧ. ಒಂದೇ ಗುರು ಒಂದೇ ಶಿಷ್ಯ ಎಂಬುದೇ ಅತ್ಯಂತ ಕರಾರುವಕ್ಕಾದ ನಿರೀಕ್ಷೆ. ರಜನೀಶ್ ಇಂಥದೇ ಒಂದು ವಿವರಣೆಯನ್ನು ತನ್ನ ಮಾತಿನಲ್ಲಿ ನೀಡಿದ್ದಾನೆ. 'Those who really want to seek remain with a Master, they don't wander. The one who goes on wandering is curious, greedy. He wants to know as much as he can. Hence he cannot stay with one Master. And these things are such that unless you stay with one Master in deep intimacy, with grate love, you will not grow roots. You will be rolling stone which gathers no moss. You can go on rolling and rolling forever, but you will not be enriched by your wanderings. Infact, the more you wander, the more

ವಿದ್ಯೆ ಮುಗಿಯುವವರೆಗೆ ಮಾತ್ರ ಗುರು, ಅಲ್ಲಿಂದ ಮುಂದೆ ಅದನ್ನು ಉಪಸಂಹರಿಸಿ ಮತ್ತೊಂದರ ಕಡೆಗೆ ನಡೆಯುವ ರೀತಿ ಸತ್ಯಕಾಮರದು.

ಹಲವು ಗುರುಗಳನ್ನು ಹಲವು ಶಕ್ತಿಗಳ ಸಂದರ್ಭದಲ್ಲಿ ಪಡೆದ ಸತ್ಯಕಾಮರಿಗೆ ಗುರುವಿನ ಕುರಿತು ಖಚಿತ ತಿಳುವಳಿಕೆಗಳಿವೆ. ಉಳಿದ ವಿಷಯಗಳಲ್ಲಿ ಸತ್ಯಕಾಮರು ಮೌನವಾಗಿದ್ದರೂ ಗುರುವಿನ ಕುರಿತ ವಿವರಗಳಲ್ಲಿ ಸ್ಪಷ್ಟ ಮತ್ತು ಖಚಿತ ಅಭಿಪ್ರಾಯ ಹೇಳಿದ್ದಾರೆ. 'ಪಡೆಯುವವನಿಗೆ ಪಡೆಯುವ ಹಂಬಲ ಇಲ್ಲದಿದ್ದರೂ, ಕೊಡುವವನು ಕೊಡಲು ಎಳಸಿದರೆ ಅದು ಮಹಾಪ್ರಮಾದವಾಗುತ್ತದೆ. ಸಾವಿರಾರು ಜನ ಹೇಳಿದ್ದಾರೆ ಗುರುವನ್ನು ಹುಡುಕು ಎಂದು. ಗುರು ಹುಡುಕಿದರೆ ಸಿಕ್ಕುವ ವಸ್ತುವಲ್ಲ. ಶಿಷ್ಯ ಸಿದ್ಧನಾದರೆ ಗುರು ಅಲ್ಲಿಯೇ ಉದ್ಭವಿಸುತ್ತಾನೆ. ಇದು ವಾಗಾಡಂಬರವಲ್ಲ. ಕಲಿತು ಆಡಿದ ಮಾತಲ್ಲ.' (III ತಂದೆ–ಮಗಳು 2004).

'ಯಾವುದನ್ನು ಅರಿಯುವುದರಿಂದ ಎಲ್ಲವನ್ನು ಅರಿತಂತಾಗುತ್ತದೆ ಅದು ತನಗೆ ಬೇಕು. ಅದನ್ನು ಯಾರು ನೀಡಬಲ್ಲರು ? ಈ ಬಯಕೆಗೆ ದೊರೆತ ಫಲ ಗುರು'. (೪೪ ತಂತ್ರಯೋನಿ ೨೦೦೮) ಎಂದು ಘೋಷಿಸಿಬಿಟ್ಟಿದ್ದಾರೆ. 'ಗುರುವಿಲ್ಲದೆ ಅಜ್ಞಾನ ಕಳೆಯದು. ಜ್ಞಾನದ ಬಾಗಿಲು ತೆರೆಯದು. ಗುರುವಿಗೆ ತಲೆ ಬೆಳ್ಳಗಾಗಬೇಕೆಂಬ ನಿಯಮವಿಲ್ಲ. ಗುರುಪದವಿಗೆ ತರುಣನೂ ಅರ್ಹನು. ಗುರುವಿಗೆ ಗೆಲುವಿನ ಹಮ್ಮು ಎಂದೂ ಇಲ್ಲ. ಆತ ಶಿಷ್ಯರಿಂದ ಸೋಲು ಸಾರ್ಥಕ್ಯವೆಂದು ಅನುಭವಿಸುತ್ತಾನೆ. (೪೯ ತಂತ್ರಯೋನಿ ೨೦೦೮) ಹೀಗೆ ಗುರುವಿನ ವಿಷಯದಲ್ಲಿ ತುಂಬ ಔದಾರ್ಯ ಮತ್ತು ಸಾಂಪ್ರದಾಯಿಕ ಮಡಿಗಳಾಚೆಗೆ ಯೋಚಿಸುತ್ತಾರೆ.

ಶಿಷ್ಯನನ್ನು ಯಾವ ಅವಸರವಿಲ್ಲದೆ ಸಮಯಕ್ಕೆ ಅನುಗುಣವಾಗಿ ಸಿದ್ಧಮಾಡುವ, ಅವನನ್ನು ಬೆಳೆಸುವ ಗುರುತ್ವವನ್ನು ಸತ್ಯಕಾಮರು ಹೇಳಿದ್ದಾರೆ. ಅವಸರಕ್ಕೆ ವಿಕಲಾಂಗ ಮಕ್ಕಳು ಹುಟ್ಟುತ್ತವೆ ಎಂಬ ಮಾತನ್ನು ಅವರು ಸಂದರ್ಭ ಉಚಿತವಾದಾಗಲೆಲ್ಲಾ ಬಳಸುತ್ತಿದ್ದರು. ಆದರೆ ಅವರು ಕೊಡುವ ಗುರು ಸ್ಥಾನದ ಮನ್ನಣೆ ಅಸದೃಶವಿದೆ. ಜಾನ್ ವುಡ್ರೋಫ್ ಕೂಡ ತನ್ನ Introduction to Tantra Sastra ಕೃತಿಯಲ್ಲಿ ಇಂಥದೇ ವಿವರ ನೀಡುತ್ತಾನೆ. ಅಂಥದೇ ಒಂದು ಮಾತು ಸತ್ಯಕಾಮರ ತಂತ್ರಯೋನಿ ಕೃತಿಯಲ್ಲೂ ಉಲ್ಲೇಖವಾಗಿದೆ. 'ದೇವರು ಗುರುಗಳನ್ನು ಕಂಡು ಅರಳುತ್ತಾರೆ ಏಕೆ ? ದೇವರೆಂಬವರಿಗೂ ಗುರು ಇಲ್ಲದೆ ಹೋದರೆ ದೇವತ್ವ ಹೋದುದೂ ಉಂಟು. ದೇವರು ಗುರುವಿಗೂ ಚಿಕ್ಕವ (೫೦ ತಂತ್ರಯೋನಿ ೨೦೦೮) ಎಂಬ ಮಾತುಗಳ ಮೂಲಕ ಕೆಲವು ದೇವನಿಷ್ಠರನ್ನೂ ಗಾಬರಿ ಬೀಳಿಸುತ್ತಾರೆ.

ಗುರು-ಶಿಷ್ಯರ ಕುರಿತ ಅವರ ಅಭಿಪ್ರಾಯವನ್ನು ತಿಳಿಯಲು ತಂತ್ರಯೋನಿಯ ಮುಂದಿನ ವಿವರ ಅತೀ ಮುಖ್ಯ ಕೈಗನ್ನಡಿಯಂತಿದೆ. ಅದನ್ನು ಪೂರ್ತಿ ಉದ್ಧರಿಸಿದರೆ ಸತ್ಯಕಾಮರು ಗುರುವಿಗೂ ಶಿಷ್ಯರಿಗೂ ಕೊಡುವ ಸ್ಥಾನಮಾನ, ವಿವರ ವ್ಯಾಖ್ಯಾನಗಳೆಲ್ಲವೂ ಅರಿವಿಗೆ ಬರಬಹುದು ಎಂಬ ಕಾರಣಕ್ಕೆ ಅದನ್ನಿಲ್ಲಿ ಯಥಾವತ್ತಾಗಿ ಉಲ್ಲೇಖಿಸುತ್ತಿದ್ದೇನೆ.

ವಿದ್ಯೆ ಕಲಿಸಿದವ ಗುರು.

ಎಲ್ಲ ನೋವಿಂದ ನಮ್ಮನ್ನು ಪಾರು ಮಾಡುವುದೇ ವಿದ್ಯೆ.

ಗುರು ಏನು ಮಾಡುತ್ತಾನೆ?

ತನ್ನಂತೆ ಮಾಡುತ್ತಾನೆ.

ತಾನು ಯಾರು?

ಮೃತ್ಯುವನ್ನು ದಾಟಿದ ಅಶಕ್ತತೆಯನ್ನು ಅರಿಯದ ತನ್ನನ್ನು ಅರಸಿಕೊಂಡು ಬಂದವನಿಗೆ ತನ್ನಲ್ಲಿರುವುದನ್ನೆಲ್ಲವನ್ನೂ ಕೊಡುವವ ಎಂದೂ ಚಿಕ್ಕವನಾಗಿರದವನೇ ಗುರುವಾಗುತ್ತಾನೆ. (೫೫ ತಂತ್ರಯೋನಿ ೨೦೦೮)

ಹೀಗೆ ಗುರುವನ್ನು ವ್ಯಾಖ್ಯಾನಿಸುವ ಸತ್ಯಕಾಮರಿಗೆ ತಕ್ಷಣದಲ್ಲೇ ತನಗೆ ಗುರುವಿಲ್ಲದ ನೋವು ಮತ್ತು ಅದರ ಕಾರಣಗಳ ವಿಶ್ಲೇಷಣೆ ಮಾಡಬೇಕೆನಿಸಿರಬೇಕು. ಅವರು ಮುಂದುವರೆದು 'ಗುರುವು ನಮಗೆ ದೊರೆತಿರಲಿಕ್ಕಿಲ್ಲ ಆದರೆ ನಮ್ಮನ್ನು ಗಮನಿಸುತ್ತಲೇ ಇರುತ್ತಾನೆ. ನಮ್ಮ ಅನರ್ಹತೆ ಅವನ ದೂರಕ್ಕೆ ದೊಡ್ಡ ಕಾರಣ' ಎಂದವರೇ ಆ ಅನರ್ಹತೆಯನ್ನೂ ಮೀರಿ ಗುರುವಿನ ಪ್ರಭಾವ ಸಾಧ್ಯ ಎಂಬ ಭರವಸೆಯನ್ನು ನೀಡುತ್ತಾರೆ. 'ಶಿಷ್ಯ ಗುರುವಿನಿಂದ ಭೌಗೋಳಿಕವಾಗಿ ದೂರವಿರಬಹುದು. ಆದರೆ ಸರ್ವವ್ಯಾಪಿಯಾದ ಗುರುವಿಗೆ ದೂರ ಎನ್ನುವುದೂ ಇಲ್ಲ. ಗುರುವು ಕಾಲದೇಶವನ್ನು ಮೀರಿದ ವ್ಯಾಪನಶೀಲ ಜಾಗೃತ ಶಕ್ತಿ' (೫೩ ತಂತ್ರಯೋನಿ ೨೦೦೮).

ಗುರುವು ಸ್ವತಂತ್ರ ಆದರೆ ಶಿಷ್ಯ ಸಾಪೇಕ್ಷ ಎನ್ನುವ ಸತ್ಯಕಾಮರು ಗುರು-ಶಿಷ್ಯ ಮೊದಲಿಗೆ ಮಾತ್ರ ಇಬ್ಬರು ಆ ಬಳಿಕೆ ಒಬ್ಬರೇ ಎನ್ನುವವರೆಗಿನ ಯೋಗ (ಯೂನಿಯನ್) ವನ್ನು ಹೇಳುತ್ತಾರೆ.

ಎಲ್ಲರೂ ಶಿಷ್ಯರಾಗಲು ಅರ್ಹರಲ್ಲ. ಹಾಗೆಯೇ ಗುರುವು ಅಂತಹ ಶಿಷ್ಯರನ್ನೇ ಆಯ್ಕೆಮಾಡಿ ಶಿಷ್ಯತ್ವದ ದೀಕ್ಷೆ ಕೊಡಬೇಕು. ಆ ದೀಕ್ಷೆ ಸ್ವೀಕರಿಸುವವನ ಅರ್ಹತೆ ಏನು ಎಂದು

ಕೇಳಿದರೆ ಅವನು ಮತಿವಂತನಾಗಿರಬೇಕು ಎನ್ನುತ್ತಾರೆ. ಒಂದು ದಿನ ಏಕಾಏಕಿ ತನಗಿದು ಕೊಡು ಎಂದು ಬೇಡುವುದಲ್ಲ. ಅದು ತನಗೆ ಬೇಕು ಎಂಬುದರ ಆತ್ಮದ ಅಗತ್ಯವನ್ನು ಅರಿಯಬೇಕು. ಅದಿಲ್ಲದಿದ್ದರೆ ತನಗೆ ಬದುಕೇ ಇಲ್ಲ ಎಂಬಷ್ಟು ಆ ಹಸಿವಿರಬೇಕು ಎನ್ನುತ್ತಾರೆ. ಹಾಗೆಯೇ ದೀಕ್ಷೆ ಸತ್ಯಕಾಮರ ಪ್ರಕಾರ ಅನಿವಾರ್ಯ. ಅನೇಕ ದೀಕ್ಷಾ ಸಾಧ್ಯತೆಗಳು ಬೇರೆ ಬೇರೆ ತಂತ್ರ ಗ್ರಂಥಗಳಲ್ಲಿ ಉಲ್ಲೇಖವಾಗಿರುವುದನ್ನು ವಿವರವಾಗಿ ಪ್ರಸ್ತಾಪಿಸುವ ಸತ್ಯಕಾಮರು (ವಿವರಗಳಿಗೆ ಗಮನಿಸಿ ೬೯-೭೦ ತಂತ್ರಯೋನಿ ೨೦೦೮) ಅದರಲ್ಲಿ ಪ್ರಮುಖವಾಗಿ ಶಾಂಭವೀ, ಶಾಕ್ತೀ ಮತ್ತು ಮಾಂತ್ರೀ ಎಂಬ ಮೂರು ದೀಕ್ಷೆಗಳನ್ನು ಮುಖ್ಯವಾಗಿ ಹೇಳುತ್ತಾರೆ. 'ತಪ್ಪು ಮಾಡದವ ಗುರುವಲ್ಲ ತಿದ್ದಿಕೊಳ್ಳದವ ಶಿಷ್ಯನಲ್ಲ' ಎಂಬಂತಹ ಅಪರೂಪದ ಶಾಸನವನ್ನೂ ಬರೆಯುತ್ತಾರೆ.

ಇವಲ್ಲದೆ ಅವರ ಕೃತಿಗಳಾದ ಅರ್ಧದಾರಿ ವೈಶಾಲಿಯನ್ನು ಗುರುವು ಹೇಗೆ ಪರಿವರ್ತಿಸಿದ ಎಂಬುದನ್ನು ಹೇಳಿದರೆ ಅಶ್ವಘೋಷ, ವಿಜ್ಞಾನ ಭೈರವಗಳೂ ಕೂಡ ಒಂದು ಪರಿವರ್ತನೆಯ ಗುರು-ಶಿಷ್ಯ ಸಂಬಂಧಗಳ ದಾಖಲೆಯೇ ಆಗಿದೆ. ಇದಕ್ಕೂ ಮೀರಿ ತಂದೆ-ಮಗಳು ಕೃತಿಯಲ್ಲಿ ಸತ್ಯಕಾಮರು ಈ ಸಂಶೋಧಕಿಗೆ ಬರೆದ ಹಲವು ಪತ್ರಗಳಿವೆ. ಆ ಎಲ್ಲ ಪತ್ರಗಳು ಗುರು-ಶಿಷ್ಯನಿಗೆ ಒದಗಿಸುವ ಭರವಸೆ, ನಂಬಿಕೆ, ಕಾಯುವಿಕೆ, ವಚನ, ಪ್ರಮಾಣ ಮತ್ತು ತಾಯ್ತನದಂತಹ ಸಂಬಂಧ; ಜೊತೆಜೊತೆಗೆ ಪ್ರೇಮ, ಕಾಮಗಳು ಹೇಗೆ ಇದರೊಳಗೆ ಬೆಳೆವ ಬೆಳವಣಿಗೆಯ ಅಸ್ತ್ರ ಎಂಬ ಸರ್ವ ವಿವರವನ್ನು ಬರೆದಿದ್ದಾರೆ. ಅದರ ಪ್ರತೀ ಪತ್ರ ವಿವರವು ಅಂಥ ವಿವರವನ್ನೇ ಒಳಗೊಂಡಿದ್ದರಿಂದ ಆ ಕುರಿತು ಪೂರ್ಣ ವಿವರಗಳಿಗೆ ಹೋಗುವುದಿಲ್ಲ. ಅಲ್ಲದೆ ಅದು ಈ ಸಂಶೋಧಕಿಗೆ ಬರೆದ ಪತ್ರಗಳಾದ್ದರಿಂದ ತೀರಾ ವೈಯಕ್ತಿಕ ನೆಲೆಯ ಆತ್ಮಸ್ತುತಿ-ಆತ್ಮನಿಂದೆ ಎರಡೂ ಸಾಧ್ಯ ಎಂಬ ಕಾರಣಕ್ಕೆ ಅದನ್ನು ಉಲ್ಲೇಖಿಸುವುದಿಲ್ಲ. ಪುಟ 63-64ರ ಇಡಿಯ ಪತ್ರವಂತೂ ಒಬ್ಬ ಗುರುವು ಶಿಷ್ಯನಿಗೆ ಕೊಡುವ ವಚನ (Promise) ಕ್ಕೆ ಮಾದರಿ ರೂಪದಂತೆ ಇದೆ. (ವಿವರಗಳಿಗೆ ತಂದೆ-ಮಗಳು ೨೦೦೪)

ಆ ಕೃತಿಯು ಶಿಷ್ಯನ ಅರ್ಹತೆಯನ್ನು, ಅದರಲ್ಲಿ ಸೋತಾಗ ಗುರುವು ಪಡುವ ಪಾಡನ್ನು, ಅದಲ್ಲದೆ ಎಲ್ಲ ಸೋಲುಗಳಿಗೆ ತನ್ನನ್ನೇ ಹೊಣೆಮಾಡಿಕೊಳ್ಳುವ ಗುರುವಿನ ಜವಾಬ್ದಾರಿಯನ್ನು, ಗುರುವಿನ ನಿರೀಕ್ಷೆ, ಅವನು ಶಿಷ್ಯನ ಜೊತೆಗೆ ಇರುವ ರೀತಿ ಎಲ್ಲವನ್ನೂ ತಿಳಿಸುತ್ತದೆ. 'ನಾನು ನಿನಗಾಗಿ ಬಂದಿಲ್ಲ ನನಗಾಗಿ ಬಂದಿದ್ದೇನೆ' 'ನಾನಿಲ್ಲದಿದ್ದರೂ ನೀನು ಇರುತ್ತಿ, ನಡೆಯುತ್ತಿ' 'ನನಗೆ ಭಾರವಾದದ್ದನ್ನು ನಿನಗೆ ಕೊಟ್ಟು ಹಗುರಾಗುವ ಕೆಟ್ಟ ಬಯಕೆ' 'ನೀನು ನನ್ನನ್ನು ಬಿಟ್ಟರೂ ನಾನು

ನಿನ್ನನ್ನು ಬೆಂಬಿಡದ ಭೂತ' ಮುಂತಾದ ಗುರು–ಶಿಷ್ಯ ಸಂಬಂಧಕ್ಕೆ ಮಾತ್ರ ಅರ್ಥವಾಗಬಹುದಾದ ಅನೇಕ ಮಾತುಗಳು ಇಲ್ಲಿವೆ.

'ನೀನು ಅತಂತ್ರಳಾದರೆ ನಾನು ಅತಂತ್ರ. ನೀನು ಪೂರ್ಣವಾಗದಿದ್ದರೆ ನಾನು ಪಿಶಾಚಿ' ಮುಂತಾದ ಶಿಷ್ಯನ ಜವಾಬ್ದಾರಿಯನ್ನು ಎಚ್ಚರಿಸುವ ಮಾತುಗಳನ್ನು ಉಲ್ಲೇಖಿಸಿದ್ದಾರೆ.

ಹೀಗೆ ಗುರು ಶಬ್ದದ ವಿವರಗಳಿಂದ ತೊಡಗಿ ಅರ್ಹತೆ, ದೊಡ್ಡಿತೆ, ಸಾಮರ್ಥ್ಯ, ಗುಣವಿಶೇಷ ಇವುಗಳನ್ನು ಇಬ್ಬರು ಆಚಾರ್ಯರು ವಿವರಿಸಿದ್ದಾರೆ. ಇಬ್ಬರು ತಂತ್ರಪಥದಲ್ಲಿ ಗುರು ಅವಶ್ಯ ಎಂಬ ನಿರ್ಣಯವನ್ನು ತಲುಪಿದ್ದಾರೆ. The word Guru means heavy, very heavy, heavy with energy and the unknown, heavy with divine, heavy like a women who is pregnant... a Master is pregnant with God (91-92 Tantra the supreme understanding google search osho) ಎಂಬ ಮಾತನ್ನು ಹೇಳಿ ರಜನೀಶ ಗುರುವಿನ ಕುರಿತ ಹೊಸದೃಷ್ಟಿಕೋನವನ್ನು ನಮ್ಮ ಮುಂದೆ ಇಡುತ್ತಾನೆ.

ನಾವು ಬಲ್ಲ ಗುರುಪರಂಪರೆಯೆಲ್ಲಾ ಪಾದಕ್ಕೆ ನಮಿಸುವ, ಗೌರವಿಸುವ ಒಟ್ಟಿನಲ್ಲಿ ಒಂದು ನಿರಂತರ ಅಂತರ ಕಾಯ್ದುಕೊಳ್ಳುವ ಗುರುತ್ವ ಮಾತ್ರ ನಮಗೆ ಗೊತ್ತು. ಆದರೆ ರಜನೀಶನ ಹಾಗೆ ಸತ್ಯಕಾಮರು ಕೂಡ 'ನನ್ನನ್ನು ತಿನ್ನು ಮಗಳೆ, ಕುಡಿ, ನನ್ನ ರಕ್ತ ಹೀರು, ನನ್ನ ಪ್ರಾಣವನ್ನು ಸ್ವೀಕರಿಸು' ಎಂಬ ಮಾತನ್ನು ಆಗಾಗ್ಗೆ ಹೇಳುತ್ತಿದ್ದರು. ನಾನು ಅವರನ್ನು ಕಚ್ಚುವ ಮತ್ತು ಅವರನ್ನು ತಿನ್ನುವಂತೆ ಗಾಯಮಾಡಿದ ಹಲವು ಪ್ರಸಂಗಗಳೂ ಇದ್ದವು. ಅದು ಅವರು ಹಾಗೆ ಹೇಳಿದ್ದರಿಂದ ಸಂಭವಿಸಿದ್ದಲ್ಲ ಅಂತಹದೊಂದು ತೀವ್ರತೆ ತಾನಾಗಿ ಸ್ಫುರಿಸುತ್ತಿತ್ತು. ತಂತ್ರ ಮಾರ್ಗದಲ್ಲಿ ಇಂತಹದೊಂದು ಸರ್ವೇಂದ್ರಿಯಗಳ ಮುಖಾಂತರ ಪ್ರವೇಶಿಸುವ, ತಿನ್ನುವ, ಕಚ್ಚುವ ಪರಿಕಲ್ಪನೆ ಇದೆ. ಅದನ್ನು ಇಬ್ಬರೂ ಹೇಳಿದ್ದಾರೆ.

ಇಬ್ಬರು ಆಚಾರ್ಯರ ದೃಷ್ಟಿಯಿಂದಲೂ ಗುರುವಿನ ಕುರಿತು ಸಮಾನ ತಿಳುವಳಿಕೆಗಳಿವೆ. ಗುರು ಸತ್ತ ನಂತರವೂ ಕಾಯುತ್ತಾನೆ ಎಂಬ ಅರ್ಥದ ಮಾತುಗಳನ್ನು ರಜನೀಶ್ ಹೇಳುತ್ತಾನೆ. 'ಒಂದು ತುಣುಕು ಬಟ್ಟೆ, ಚಪ್ಪಲಿ, ಒಂದು ಕಲ್ಲು, ಒಂದು ವಿಗ್ರಹ, ಒಂದು ವೇದಿಕೆ, ಸಮಾಧಿ ಹೀಗೆ ಯಾವುದರ ಜೊತೆಗೆ ಎನ್ನುವುದನ್ನು ತೀರ್ಮಾನಿಸಿಬಿಟ್ಟರೆ ಆ ವಸ್ತುವಿನ ಮುಂದೆ ನನ್ನ ಮರಣಾನಂತರ ಕೂಡ ನಾನು ಅವರಿಗೆ ಕಾಣಿಸಬಹುದು. ಇದು ಸತ್ಯ ಮತ್ತು ಸಾಧಕ. ಆದರೆ ಇದು ಏಕಮುಖಿ ಆಗಬಾರದು. (262 Kundalini Yoga Vol-I 1998) ಇಂಥ ಮಾತುಗಳನ್ನು ಈಗಲೂ ಹಲವರು ಆಡುವುದನ್ನು ನಾವು ಬಲ್ಲೆವು. ಈ ವಿಷಯದಲ್ಲಿ ಸತ್ಯಕಾಮರ ನಿಲುವು

ಭಿನ್ನವೇ ಇದ್ದಂತಿದೆ. ವೈಯಕ್ತಿಕವಾಗಿ ನನಗಂತೂ ಸತ್ಯಕಾಮರು ನಾನು ಸತ್ತ ಬಳಿಕ ಯಾವುದೇ ಒಂದು ಬಹಿರಂಗ ವಸ್ತುಗಳಿಗೆ ನನ್ನನ್ನು ಅಂಟಿಸಿ ಕೂಡಬೇಡ. ನನ್ನ ಫೋಟೋ ಕೂಡ ನಿನ್ನ ಮುಂದಿರಬಾರದು. ಅವರಿಗೆ ಇಂಥ ಬಾಹ್ಯ ಮೋಹಗಳ ಬಗ್ಗೆ ಒಂದಿಷ್ಟು ಅಂಟಿಕೊಳ್ಳಬಾರದೆಂಬ ನಿಲುವಿತ್ತು. ಬದುಕಿರುವಾಗಲೇ ಅಂತಹ ಮೋಹಗಳನ್ನು ಅವರು ಸಹಿಸಿದವರಲ್ಲ.

ಗುರುವಿನ ಬಗ್ಗೆ ನಮಗೊಂದು ಕಲ್ಪನೆಯಿದೆ. ಗುರುವೆಂದರೆ ತುಂಬಾ ಸೌಮ್ಯವ್ಯಕ್ತಿ, ಎಲ್ಲ ಭಾವನೆಗಳನ್ನು ದಾಟಿದ ಪ್ರಶಾಂತ ಸರೋವರ, ಅವನಿಗೆ ಕೋಪ, ದುಃಖ, ದುಗುಡ ಮುಂತಾದ ಸಾಮಾನ್ಯ ಗುಣಗಳಿರುವುದಿಲ್ಲ. ಅವನು ಅವುಗಳನ್ನೆಲ್ಲ ಗೆದ್ದಿರುತ್ತಾನೆ ಇತ್ಯಾದಿ ನಂಬಿಕೆ ನಮ್ಮದು. ರಜನೀಶ್ 'If you have the idea that a Master is never angry, should not be angry, then there will be difficulties. If you have the idea that a Master should not look worried, you will have difficulties. (27 The perfect Master Vol-I 1980) ಈ ಮಾತನ್ನು ಸತ್ಯಕಾಮರ ವಿಷಯದಲ್ಲೂ ಒಪ್ಪಿಕೊಳ್ಳಲೇಬೇಕು. 'ಎಡದ ಕೈಯಲಿ ಹಾಲು ಬಟ್ಟಲು, ಬಲದ ಕೈಯಲಿ ಜೋಗವಟ್ಟಿಗೆ' ಎಂದು ಬಸವಣ್ಣ ಗುರುವನ್ನು ವಿವರಿಸುವಾಗಲೂ ಇಂಥದೇ ಕರುಣೆ ಮತ್ತು ಕಠೋರ ಎರಡರ ಸಮಾಗಮದ ಹಾಗೆ ವಿವರಿಸುತ್ತಾನೆ. ಸತ್ಯಕಾಮರು ಅಪರೂಪಕ್ಕೆ ಗುರುವಿನ ಗುಣಸ್ವಭಾವ ಬರೆದವರು. ಆದರೂ ಅವರಿಗೆ ಸಿಕ್ಕ ಒಬ್ಬ ಹೂವು ಬಣ್ಣ ಬದಲಾಯಿಸುವ ಗುರು ತಲೆ ಒಡೆದು ರಕ್ತ ಬರುವಂತೆ ಇವರನ್ನು ಬಾರಿಸಿದ್ದರ ವಿವರವನ್ನು ನಾವು ಗಮನಿಸಬಹುದು. ಗುರುವು ತಾಯಿಯ ಹಾಗೆ, ಕಾರುಣ್ಯ ಮತ್ತು ಕಾಠೋರ್ಯ ಎರಡನ್ನೂ ಮೈಗೂಡಿಸಿಕೊಂಡು ಇರುತ್ತಾರೆ ಎಂಬ ವಿವರಗಳನ್ನು ಅಲ್ಲಲ್ಲಿ ನೋಡಬಹುದು.

ವೈಯಕ್ತಿಕವಾಗಿ ರಜನೀಶ್ ಗುಣಸ್ವಭಾವದಿಂದ ಹೇಗಿದ್ದ ಎಂಬುದನ್ನು ಬಲ್ಲವರು ಹೇಳಬೇಕು. ಅವನು ಕೋಪಗೊಳ್ಳುತ್ತಿದ್ದ, ಉದ್ವೇಗ, ದುಗುಡ, ಅವನಲ್ಲೂ ಇತ್ತೆಂದು ಅವರನ್ನು ಸಮೀಪದಿಂದ ಕಂಡ ಡಾ॥ ನಿ. ಮುರಾರಿಬಲ್ಲಾಳರು ನನಗೆ ಹೇಳುತ್ತಿದ್ದರು.

ಸತ್ಯಕಾಮರ ಮಟ್ಟಿಗಂತೂ ಕೋಪಿಸಿಕೊಂಡರೆ ಅವರು ಮಹಾಮುನಿ. ಉರಿದು ಭಸ್ಮಮಾಡುವ ಋಷಿಯ ಅವತಾರ. ಪ್ರೀತಿಯ ಹೊತ್ತಿಗೆ ಯಾವ ಹೆತ್ತ ತಾಯಿಯು ಅವರಿಂದ ಪ್ರೀತಿ ಕಲಿಯಬೇಕು ಅಂತಹ ಕಾರುಣ್ಯ. ಅವರಿಗೆ ಮುಂದಿನ ಚಿಂತೆ, ಹಿಂದಿನ ದುಃಖಗಳಿಲ್ಲದಿದ್ದರೂ ಇನ್ನೊಬ್ಬನಿಗಾಗಿ ದುಃಖ ಚಿಂತೆಗಳಿದ್ದು. ನನ್ನ ಅನುಭವದ ಮಟ್ಟಿಗೆ ಹೇಳುವುದಾದರೆ ಅವರ ಕೋಪ, ದುಃಖ, ಕರುಣೆ, ಚಿಂತೆ ಎಲ್ಲವೂ ನನ್ನ ಭಾವನೆಗಳಿಗೆ ಪ್ರತಿಕ್ರಿಯೆಯೇ ಹೊರತು ಸ್ವಕಾರಣವಲ್ಲ. ನಮ್ಮ ಕೋಪ ನಮಗಾಗಿ ಹುಟ್ಟಿ ನಮ್ಮ ಅಹಂಕಾರದಿಂದ ನಮ್ಮನ್ನೇ ಸುಟ್ಟರೆ ಅವರ ಕೋಪ ನಮ್ಮ ಒಳಿತಿಗಾಗಿ ನಮ್ಮನ್ನು ತಿದ್ದಲು

ಕುದಿಯುತ್ತದೆ. ಅದರಲ್ಲಿ ಅವರ ಸ್ವಂತದ ಸ್ಪರ್ಶವಿಲ್ಲ. ಆ ಮಗು ಬೆಳೆಯಲಿ ಎಂಬ ಕೋಪ ಹಾಗೆಯೇ ಇನ್ನೊಂದರ ಬೆಳೆಯ ಚಿಂತೆ ಅದರ ನಡೆಯ ದುಗುಡ ಮಾತ್ರ. ಇದು ಅತಿಶಯೋಕ್ತಿ ಎನಿಸಿದರೆ ಮನ್ನಿಸಬೇಕು. ಇದಕ್ಕೆ ಸ್ವಾನುಭವದ ಆಧಾರವೊಂದೇ ಪ್ರಮಾಣ. ಈ ಮಾತಿನ ಹಿಂದೆ ಗುರುವೆಂಬ ಯಾವುದೇ ಮೋಹವಿಲ್ಲ ಎಂಬ ಮಟ್ಟಿಗೆ ಪ್ರಾಮಾಣಿಕವಾಗಿದ್ದೇನೆ. ನಾನಲ್ಲದೆ ಅವರ ಜೊತೆ ಬದುಕಿದ ಹಲವರ ಅಭಿಪ್ರಾಯವು ಇದೇ ಆಗಿದೆ. ಅವರ ಕೋಪಕ್ಕೂ ಭೀತರಾಗದೆ, ಮತ್ತೆ ಹೋಗಿ ಅವರನ್ನು ತಬ್ಬಿ ಮುದ್ದಾಡಿದವರನ್ನು ಅವರು ತುಂಬ ಹತ್ತಿರ ಸೇರಿಸಿಕೊಂಡಿದ್ದಾರೆ. ಇನ್ನೊಬ್ಬರ ಕೋಪಕ್ಕೆ ಹೆದರಿ ಮುಂದೆ ಬಾರದೆ ಹಿಂದೆ ಉಳಿಯುವವನು ಮಹಾ ಅಹಂಕಾರಿ. ಅವನಿಗೆ ಎಲ್ಲಿ ಅವಮಾನವಾಗುವುದೋ ಎನ್ನುವ ಭಯ. ಹಾಗೆ ಇರುವವನು ಎಂದೂ ಸಮರ್ಪಿಸಿಕೊಳ್ಳಲಾರ, ಅಹಂಕಾರವನ್ನೇ ಪೋಷಿಸುತ್ತಾನೆ. ಅವನು ಈ ದಾರಿಗೆ ಅನರ್ಹ ಎಂದೇ ಅವರು ನನ್ನ ಬಳಿ ಹೇಳುತ್ತಿದ್ದರು.

ಕಲ್ಲಾಗಿ ಇರಬೇಕು ಕಠಿಣ ಭವ ಧರೆಯೊಳಗೆ

ಬಿಲ್ಲಾಗಿ ಇರಬೇಕು ತನ್ನವರ ಒಳಗೆ

ಮೆಲ್ಲಗೆ ಮಾಧವನ ಮನವ ಮೆಚ್ಚಿಸಲು ಬೇಕು

ಬೆಲ್ಲವಾಗಿರಬೇಕು ಬಲ್ಲವರ ಒಳಗೆ

ಎಂಬ ದಾಸರ ಮಾತು ಪರಸ್ಪರ ಗುರು-ಶಿಷ್ಯರಿಬ್ಬರಿಗೂ ಇರಬೇಕಾದ ಅನಿವಾರ್ಯ ಗುಣವಿಶೇಷ. ಸತ್ಯಕಾಮರು ಹಾಗೆಯೇ ಇರುತ್ತಿದ್ದರು. ಅವರಷ್ಟು ಬಿಲ್ಲು ಮೊನೆಯನ್ನು ನಾನು ಅದುವರೆಗೆ, ಆನಂತರ ಕಂಡವಳೇ ಅಲ್ಲ.

ಇಷ್ಟೆಲ್ಲಾ ವಿವರಗಳ ಬಳಿಕ ಗುರುವಿನ ಕುರಿತ ಒಂದು ಕುತೂಹಲದ ಪ್ರಶ್ನೆ ಈ ಇಬ್ಬರನ್ನು ಕೇಳಬೇಕಾಗುತ್ತದೆ. ಗುರುವನ್ನು ಬೇಕೇಬೇಕೆಂದು ಪ್ರತಿಪಾದಿಸುವ ರಜನೀಶ್, ಗುರುವಿಲ್ಲದೆ ತಂತ್ರಮಾರ್ಗದಲ್ಲಿ ನಡೆಯುವುದೇ ಸಾಧ್ಯವಿಲ್ಲ ಎಂದ ಸತ್ಯಕಾಮ ಇಬ್ಬರಿಗೂ ಗುರುಗಳಿಲ್ಲ. ರಜನೀಶ್ ತಾನು ತನ್ನಷ್ಟಕ್ಕೆ ಬೆಳೆದನೆಂಬ ರೀತಿಯಲ್ಲಿ ಅಲ್ಲಲ್ಲಿ ಕೆಲವು ಬಾಲ್ಯದ ಯೌವ್ವನದ ವಿವರಗಳನ್ನು ಕೊಡುತ್ತಾನೆಯೇ ಹೊರತು ಎಲ್ಲಿಯೂ ಅವನು ತನಗೆ ದೀಕ್ಷೆಯಾದ ಅಥವಾ ಗುರುವೊಬ್ಬ ತನ್ನನ್ನು ಅನುಗ್ರಹಿಸಿದ ವಿವರವನ್ನು ನೀಡಿಲ್ಲ. ಈ ಹಿನ್ನೆಲೆಯಲ್ಲಿ ಅವನು ಸ್ವಯಂಭೂ. ಹಾಗೆಯೇ ಸತ್ಯಕಾಮರು ಕೂಡ ತಾನು ಗುರುವಿಲ್ಲದೆಯೇ ನಡೆದ ಹಲವು ಸಂಗತಿ ಹೇಳಿದ್ದಾರೆ. ಹಲವು ಮಾರ್ಗದರ್ಶಕರು ಅವರಿಗೆ ಮಾರ್ಗದರ್ಶನ ಮಾಡಿದ್ದಾರಾದರೂ ದಡ ಮುಟ್ಟಿಸುವವರೆಗೆ ಜೊತೆಗೆ ನಡೆದ ಗುರು ಒಬ್ಬನಿಲ್ಲ. ಎಲ್ಲಕ್ಕೂ ಮಿಗಿಲಾಗಿ ಸತ್ಯಕಾಮರು

ಒಂದೊಂದೇ ವಿದ್ಯೆಯನ್ನು ಅರಸಿದಾಗ ಆ ಸಂದರ್ಭಕ್ಕೆ ಒಬ್ಬ ಗುರು ಒದಗಿಬಂದರೂ ಅವರು ತಾವಾಗಿಯೇ ಇಷ್ಟಕ್ಕೆ ನಿಲ್ಲಬೇಡ ಮುಂದುವರಿ ಎಂದು ಕಳಿಸಿದ ಸೂಚನೆಗಳಿವೆ.

ಸತ್ಯಕಾಮರು ಗುರುವನ್ನು ಅರಸಿದ್ದಾರೆ. ಆದರೆ ಅವರಿಗೆ ಗುರುವು ಸಿಕ್ಕಿಲ್ಲ. ಆದರೆ ಸತ್ಯಕಾಮರು ಇತರರಿಗೆ ಗುರು ಬೇಕು ಅವನ ಅನುಗ್ರಹದಿಂದಲೇ ನಡೆಯುವುದು ಮುಖ್ಯ ಇತ್ಯಾದಿ ಸಂಗತಿಗಳನ್ನು ಆದೇಶದಂತೆ ಶಾಸನ ಮಾಡಿ ಹೇಳುತ್ತಾರೆ.

ಗುರುವಿಲ್ಲದೆ ನಡೆಯುವುದು ಕಷ್ಟ ಎಂಬ ಸ್ವಾನುಭವದ ಕಾರಣಕ್ಕೂ ಅಥವಾ ಗುರುವನ್ನು ಮೊದಲು ಪಡೆದು ನಡೆಯುವುದು ಸರಿಯಾದ ಕ್ರಮ, ತನ್ನಂತೇ ಇತರರು ಕಷ್ಟಪಡುವುದು ಬೇಡವೆಂದೋ, ತಂತ್ರ ಪರಂಪರೆಯೇ ಅದನ್ನು ಹಾಗೆ ನಂಬುವುದರಿಂದಲೂ ಸತ್ಯಕಾಮರು ಗುರು ಅವಶ್ಯ ಎಂದಿರಬೇಕು. ಒಂದನ್ನು ಮಾತ್ರ ನಾವು ಗಮನಿಸಬೇಕು. ಸತ್ಯಕಾಮರು ಯಾರೋ ಹೇಳಿದ ಗೊಡ್ಡು ಪರಂಪರೆಯನ್ನು ಒಪ್ಪುವವರಲ್ಲ. ಅವರು ಸಂದರ್ಭ ಒತ್ತಾಯಿಸಿದರೆ ಪತಂಜಲಿಯ ಯೋಗ ಸೂತ್ರದಲ್ಲಿ ಬದಲಾವಣೆ ತರಬಹುದು, ಕೃಷ್ಣನ ಭಗವದ್ಗೀತೆಯನ್ನು ತಿದ್ದಬಹುದು ಎಂಬವರೆಗೆ ಕ್ರಾಂತಿಕಾರಿ. ಗುರು ಬೇಕು ಎಂದು ಪರಂಪರೆ ಹೇಳಿದ ಅರ್ಥದಲ್ಲಿ ಅವರು ಅದನ್ನು ಹೇಳಿರಲಿಕ್ಕಿಲ್ಲ. ತಂತ್ರಪಥ ತುಂಬ ಸಂಗತಿಗಳನ್ನು ಕಲಿಯುತ್ತಾ ನಡೆಯುವ ಮಾರ್ಗವಾದ್ದರಿಂದ ಗುರು ಬೇಕೆಂಬುದನ್ನು ಅವರು ಅನುಭವದಿಂದಲೇ ಹೇಳಿರಬಹುದು.

ರಜನೀಶ್ ಇಷ್ಟು ಕಡ್ಡಾಯವಾಗಿ ಗುರುವಿಲ್ಲದೆ ಶಾಧ್ಯವಿಲ್ಲ ಎಂದೇನು ಹೇಳುವುದಿಲ್ಲ. ಅಂದರೆ ಅವನು ಗುರುವಿಲ್ಲದೆಯೂ ನಡೆಯುವ ಸಾಧ್ಯತೆಯನ್ನು ಒಪ್ಪಿಕೊಳ್ಳುತ್ತಾನೆ ಎಂಬುದನ್ನು ಅವನ ಮೌನದಿಂದ ತಿಳಿಯಬಹುದು. ಹಾಗೆಯೇ ರಜನೀಶ್ ಮತ್ತು ಸತ್ಯಕಾಮರು ತಂತ್ರಪಥದ ವಿಶ್ಲೇಷಣೆಯ ಹಿನ್ನೆಲೆಯಲ್ಲಿರುವುದರಿಂದ ಗುರುವಿನ ಅವಶ್ಯಕತೆಯ ಕುರಿತು ಮಾತಾಡಿರಬಹುದು.

ತಂತ್ರಪಥ ಒಂದು ಕಠಿಣ ಮಾರ್ಗ. ಇಲ್ಲಿ ಮಾತ್ರ ಗುರು ಬೇಕು ಎಂದೇನು ನಾವು ತೀರ್ಮಾನಿಸಬೇಕಾಗಿಲ್ಲ. ಭಕ್ತಿಪಂಥದ ದಾಸರೂ ಕೂಡ ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ ಎಂದೇ ಹಾಡಿದ್ದಾರೆ. ಒಂದು ದೃಷ್ಟಿಯಿಂದ ಗುರುವಿಲ್ಲದೆ ನಡೆ ಸಾಧ್ಯವಿಲ್ಲ. ಅದೊಂದು ಅನಿವಾರ್ಯ ಅಗತ್ಯ ಎಂದು ಸಾಮಾನ್ಯವಾಗಿ ಭಾವಿಸಬಹುದು. ಇದರಲ್ಲೂ ಅಪವಾದಗಳಿರಬಹುದು. ಕೆಲವು ಅಸಾಮಾನ್ಯರಿಗೆ ಅಪ್ರತ್ಯಕ್ಷ ಅಥವಾ ಪರೋಕ್ಷ ಅನುಗ್ರಹದಿಂದ ಆ ಅದು ಒಲಿದು ಬಿಡಬಹುದು. ಇವರ ಅಭಿಪ್ರಾಯ ಮತ್ತು ಅನುಭವದ ಹಿನ್ನೆಲೆಯಲ್ಲಿ ಹೀಗೆ ತೀರ್ಮಾನಕ್ಕೆ ಬರುವುದು ಅನಿವಾರ್ಯವಾಗಿದೆ.

ಹೀಗೆ ಗುರುವಿಲ್ಲದೆ ನಡೆದ ಇಬ್ಬರು ಆಚಾರ್ಯರು ತಾವೇ ಗುರುವಾಗಿ ಮುಂದೆ ಹಲವರನ್ನು ಮುನ್ನಡೆಸಿದ್ದಾರೆ. ರಜನೀಶನಿಗೆ ಪ್ರಪಂಚದಾದ್ಯಂತ ಹಿಂಬಾಲಕರು, ಶಿಷ್ಯರು, ಗುರುವೆಂದು ನಂಬಿದವರು ಇದ್ದರು. ಸತ್ಯಕಾಮರು ತನ್ನದೇ ಅಂತರಂಗ ವಲಯದಲ್ಲಿ ಹಲವರನ್ನು ನಡೆಸಿದವರು. ಅವರೆಲ್ಲರೂ ಇವರನ್ನು ನಂಬಿ ನಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಇಬ್ಬರು ಗುರುವಾಗಿ ಹೇಗೆ? ಸ್ವಂತಕ್ಕೆ ತೃಪ್ತರು ಎಂಬುದನ್ನು ಕೇಳಲು ಅವರಿಬ್ಬರೂ ದೈಹಿಕವಾಗಿ ಉಳಿದಿಲ್ಲ. ನಡೆಯಿಸಿಕೊಂಡ ಶಿಷ್ಯರು ಅವರಿಂದ ತೃಪ್ತರೇ? ನಡೆಸಿದ್ದರೆ ಹೇಗೆ ನಡೆಸಿದ್ದಾರೆ ಇತ್ಯಾದಿ ಜಿಜ್ಞಾಸೆ ಹುಟ್ಟುವುದು ಸಹಜ.

ರಜನೀಶ್ ತುಂಬ ಪ್ರಭಾವಶಾಲಿ ಗುರು ಎಂಬುದರಲ್ಲಿ ಎರಡು ಮಾತಿಲ್ಲ. ಅನೇಕರು ಈಗಲೂ ವಿಶ್ವದಾದ್ಯಂತ ಅವನಿಂದ ಪ್ರಭಾವಿತರು. ಪರಿಣಾಮದ ಮಟ್ಟಿಗೆ ಮಿಶ್ರ ಅಭಿಪ್ರಾಯವನ್ನೇ ಹೇಳಬೇಕು. ಅನೇಕರು ಅವನೇ ಅಂತಿಮ ಎಂಬಷ್ಟು ಉಘೋ ಉಘೋ ಎಂದರೆ ಅವನನ್ನು ನಂಬಿ ಮೋಸಹೋದೆ ಎಂಬಂಥ ಹ್ಯೂ ಮಿಲೇನ್‌ನ ಚರಿತ್ರೆಗಳೂ ಇವೆ. ಇನ್ನೊಬ್ಬರ ಬಳಿ ಹೋಗದಂತೆ ತಡೆಯುವ ಗುರು ಅಪಾಯಕಾರಿ, ಕಿಂಗ್‌ಡಮ್‌ನಂತೆ ಗುರುಡಮ್ ಸ್ಥಾಪಿಸುವ ಗುರು ಒಳ್ಳೆಯವನಲ್ಲ ಇತ್ಯಾದಿ ಮಾತುಗಳನ್ನು ಹೇಳಿದ ರಜನೀಶನ ಕುರಿತಾಗಿಯೇ ಅಂತಹ ಅಪವಾದಗಳಿವೆ.

ಅವನ ಸಮಕಾಲೀನ ಯು.ಜಿ. ಕೃಷ್ಣಮೂರ್ತಿ ಮೊದಲಿಗೆ ರಜನೀಶ್ ಆಶ್ರಮದಲ್ಲೇ ಇದ್ದು ಹೊರಗೆ ಬಂದವನು. ಅವನು ತನ್ನ ಬೆಂಗಳೂರಿನ ಭೇಟಿಯಲ್ಲೆಲ್ಲಾ ಕೆಲವು ಗುಂಪಿನೊಡನೆ ಚರ್ಚಿಸುವಾಗ, 'ತಾನು ಮೊದಮೊದಲು ರಜನೀಶನ ಬಳಿ ಇದ್ದೆ ಅಲ್ಲಿಂದ ಜೆ.ಕೆ.ಯ ಬಳಿ ಬಂದೆ ಅದು ಗೊತ್ತಾಗಿ ರಜನೀಶ್ ತನ್ನನ್ನು ಜೆ.ಕೆ.ಯ ಬಳಿ ಹೋಗದಂತೆ ಉಪದೇಶಿಸುತ್ತಿದ್ದ. ಆಮೇಲೆ ಇಬ್ಬರನ್ನೂ ಬಿಟ್ಟು ಹೊರಬಂದೆ ಎಂಬ ಮಾತುಗಳನ್ನಾಡುತ್ತಿದ್ದುದನ್ನು ನಾನು ಕೇಳಿದ್ದೇನೆ[1].

ಏನು ಈ ಮಾತಿನ ಅರ್ಥ? ಹಾಗೆ ಹೇಳಿದ್ದು ನಿಜವೇ? ಹೌದಾದರೆ ಅದರ ಹಿಂದೆ ರಜನೀಶನ ಉದ್ದೇಶವೇನು? ತನ್ನನ್ನು ಬಿಟ್ಟು ಹೋಗಬಾರದೆಂದೇ, ಅದು ಯು.ಜಿ.ಯ ಬೆಳವಣಿಗೆಗೆ ಅಡ್ಡಿಯೆಂದೇ? ತೀರ್ಮಾನಿಸುವವರು ಯಾರು? ಗುರು ತನ್ನ ಒಳಿತಿಗಾಗಿಯೇ ಎಲ್ಲವನ್ನು ಹೇಳಬೇಕಾಗಿಲ್ಲ ಎಂದರೆ ಅದು ಯು.ಜಿ.ಯ ಒಳಿತಿಗಾಗಿ. ತನ್ನ ಶಿಷ್ಯ ಸಂಖ್ಯೆ ಕಡಿಮೆಯಾಗಬಾರದೆಂದು ಹಾಗೆ ಹೇಳಿದ್ದರೆ ಇವನ ಒಳಿತಿಗಾಗಿ. ಇವೆಲ್ಲ ತುಂಬ ಸೂಕ್ಷ್ಮ ವಿಚಾರ ಅರ್ಥ ಮಾಡುವುದು ಕಷ್ಟ, ತೀರ್ಮಾನವಂತೂ ಅಸಾಧ್ಯ.

---

1 ಅವರು ಬೆಂಗಳೂರಿನ ಬನಶಂಕರಿಯಲ್ಲಿರುವ ಸ್ನೇಹಿತರ ಮನೆಗೆ ಆಗಾಗ್ಗೆ ಬರುತ್ತಿದ್ದರು. ನಾನು ಅವರನ್ನು ಕೇಳಲು ಹೋಗುತ್ತಿದ್ದೆ.

ರಜನೀಶನಿಗೂ ಒಂದು ದೊಡ್ಡ ಹಿಂಬಾಲಕರ ಗುಂಪು ಇತ್ತು. ಅವನದೇ ಆದ ಆಶ್ರಮ, ಸಂಸ್ಥೆ ಇತ್ತು. ಇಲ್ಲಿ ಅವನು ಬೇಕಾದಷ್ಟು ಐಶಾರಾಮಿಯಾಗಿ ಇದ್ದುದ್ದು ನಿಜ. ಆದರೆ ಅದನ್ನು ಅವನಿದ್ದರೆ ಹೇಗೆ ಸಮರ್ಥಿಸುತ್ತಿದ್ದ ಯಾರಿಗೆ ಗೊತ್ತು? ಎಷ್ಟೋ ಬಾರಿ ಗುರು ತಾನಾಗಿ ಎಲ್ಲರನ್ನೂ ಕಪಿಮುಷ್ಟಿಯಲ್ಲಿಟ್ಟು, ಭಯ ಹುಟ್ಟಿಸಿ, ತನ್ನ ಸಂಘ–ಸಂಸ್ಥೆ ಬೆಳೆಸಿಕೊಳ್ಳುತ್ತಾನೆ. ಇನ್ನು ಕೆಲವೊಮ್ಮೆ ಗುರುವಿನ ಆಕರ್ಷಣೆಯೇ ಅಷ್ಟು ಪ್ರಭಾವಶಾಲಿಯಿದ್ದು ಅವನಿಗೆ ಗೊತ್ತೇ ಇಲ್ಲದೆ ಹಲವರು ದುಂಬಿ ಮುತ್ತಿದಂತೆ ಮುತ್ತುತ್ತಿರುತ್ತಾರೆ. ಅದೇ ಒಂದು ಗುಂಪಾಗಿ ಸಂಸ್ಥೆಯಾಗಿ ಬಿಡುತ್ತಾರೆ. ಮೊದಲನೆಯದಕ್ಕಿಂತ ಎರಡನೆಯದು ವಾಸಿ. ಆದರೆ ನಿಜವಾದ ಗುರು ಇವೆರಡನ್ನೂ ದಾಟಿಯೇ ಇರುತ್ತಾನೆ. ಒಂದು ದೃಷ್ಟಿಯಿಂದ ಸತ್ಯಕಾಮರು ಹಾಗೆಯೇ ಇದ್ದರು. ಅವರು ಒಂದು ದಿನವೂ ಇತರ ಗುರುಗಳ ಬಗ್ಗೆ ಕನಿಷ್ಠವಾಗಿ ಮಾತಾಡಿದ್ದು ನನಗೆ ಗೊತ್ತಿಲ್ಲ. ಅದೇ ಹೊಸದಾಗಿ ನಾನು ಅವರ ಬಳಿ ಬಂದ ದಿನಗಳಲ್ಲಿ ಮಾತಾ ಅಮೃತಾನಂದಮಯಿಯ ಅಲೆ ಆರಂಭವಾಗಿತ್ತು. ನಾನು ಅಲ್ಲಿ ಇಲ್ಲಿ ಅಲ್ಪಸ್ವಲ್ಪ ಕೇಳಿದ್ದೆ. ಯಾಕೊ ನನ್ನೊಳಗೆ ಒಂದು ಅನಾದರ ಇತ್ತು ಕಾಣಿಸುತ್ತದೆ, ಯಾರೋ ಬಂದವರು ಅವಳನ್ನು ಕೇಳಿದ್ದೀರಾ ಅಂತ ನನ್ನನ್ನು ಪ್ರಶ್ನಿಸಿದಾಗ ತುಂಬ ಹಗುರಾಗಿ ಅಸಡ್ಡೆಯ ಉತ್ತರ ಕೊಟ್ಟೆ. ಸತ್ಯಕಾಮರು ಉಗ್ರರಾಗಿ ಕಣ್ಣು ಕೆಂಪು ಮಾಡಿ, 'ನಿನ್ನನ್ನು ಅಳೆದು ನೋಡು ಸಾಕು, ಅಷ್ಟು ದೊಡ್ಡವಳಾಗಿ ಬಿಟ್ಟೆಯಾ?' ಎಂದಾಗಲೇ ನನಗೆ ನನ್ನ ಪ್ರಮಾದದ ಅರಿವಾದದ್ದು.

ಸಂಸ್ಥೆಯ ಬಗ್ಗೆಯೂ ಹಾಗೆಯೇ. ತಾನಾಗಿ ಹೇಗೂ ಸಂಸ್ಥೆ ಕಟ್ಟಿಕೊಳ್ಳುವ, ಆಶ್ರಮ ಮಾಡುವ ವಿಚಾರವನ್ನೇ ಮಾಡಿದವರಲ್ಲ. ಆದರೆ ನಾಲ್ಕು ವ್ಯಕ್ತಿ ಸೇರಿ ಬಹಳ ಬಾರಿ ಅವರ ಭೇಟಿಗೆ ಬಂದರೆ, ಏನಾದರೂ ಅವರಿಗಾಗಿ ಮಾನ, ಸಮ್ಮಾನ, ಸಂಸ್ಥೆ ಕಟ್ಟುವ ವಿಚಾರ ಮಾತಾಡಿದರೆ ಸತ್ಯಕಾಮರು ಹೇಳದೆ ಕೇಳದೆ ಅಲ್ಲಿಂದ ಜಾಗ ಖಾಲಿ ಮಾಡುತ್ತಿದ್ದರು. ಆಗ ಜಂಗಮವಾಣಿ ಇಲ್ಲದ ಕಾಲ, ಎಲ್ಲಿ ಏನೂ ಹೇಳದೆ ಆರೆಂಟು ತಿಂಗಳು ನನ್ನನ್ನು ಕರೆದುಕೊಂಡು ಎಲ್ಲಾದರೂ ಅಜ್ಞಾತವಾಗಿ ಇದ್ದು ಬರುತ್ತಿದ್ದರು. 'ಇಲ್ಲ ಅಂದುಬಿಡಿ ಅದ್ಯಾಕೆ ಸಂಕೋಚ' ಅಂದರೆ 'ಇಲ್ಲ ಅಂದರೆ ಕೇಳಬೇಕಲ್ಲ ನನಗೆ ಬೇಕಾಗಿದೆ ಆದರೂ ಸೌಜನ್ಯಕ್ಕೆ ಬೇಡ ಎನ್ನುತ್ತೇನೆ ಎಂದು ಭಾವಿಸುತ್ತಾರೆ. ಅದಕ್ಕಿಂತ ಕೈಗೆ ಸಿಗದೆ ಪರಾರಿಯಾಗಿಬಿಟ್ಟರೆ ಏಳೆಂಟು ತಿಂಗಳಲ್ಲಿ ಅವರಿಗೂ ಮನಃಪರಿವರ್ತನೆಯಾಗಿರುತ್ತದೆ. ಅಥವಾ ಕನಿಷ್ಠ ನಾನು ಆಸಕ್ತನಿಲ್ಲ ಎಂಬುದರ ಮನವರಿಕೆಯಾದರೂ ಆದೀತು' ಎನ್ನುತ್ತಿದ್ದರು. ಹೀಗೆ ಅವರು ಸಂಘಕ್ಕೆ, ಸಂಸ್ಥೆಗೆ, ಆಶ್ರಮಕ್ಕೆ ಜೋತುಬಿದ್ದವರಲ್ಲ ಕಳಚಿಕೊಂಡು ಓಡಿಹೋಗುವುದರಲ್ಲಿ ಅವರು ತುಂಬ ನಿಸ್ಸೀಮರು.

ಹೀಗೆ ಇರುವ ಇಬ್ಬರು ನಡೆಸಿದ ಗುರುತ್ವದ ಪರಿಣಾಮಗಳೇನು ಶಿಷ್ಯರಿಂದಲೇ ತಿಳಿಯಬೇಕು. ಒಬ್ಬ ದೊಡ್ಡ ಗುರು ಇನ್ನೊಬ್ಬ ದೊಡ್ಡ ಶಿಷ್ಯನನ್ನು ಹುಟ್ಟಿಸಿದ ಉದಾಹರಣೆಗಳು ತುಂಬ ಕಡಿಮೆ. ಬಹುಶಃ ವಿವೇಕಾನಂದರಂತಹ ಉದಾಹರಣೆ ಅಪರೂಪ. ಲೋಕದಲ್ಲಿ ಇನ್ನೊಬ್ಬ ರಜನೀಶ್ ಸಿದ್ಧನಾದದ್ದು ಇಲ್ಲಿಯವರೆಗೆ ನಮಗೆ ಕಂಡುಬಂದಿಲ್ಲ. ಸತ್ಯಕಾಮರ ಕುರಿತು ನಾನು ಹೇಳಲಾರೆ. ಕಾಲವೇ ಉತ್ತರಿಸಬೇಕು. ಅವರ ಪರಿಣಾಮದ ಫಲವನ್ನು ತೋರುವ ಸಾಧ್ಯತೆ ಇದ್ದರೆ ಅದು ಕಂಡೀತು. ವಿಶ್ಲೇಷಣೆಗೆ ಹೊರಟರೆ ಸ್ವ-ವಿಮಶೆಯಾಗುತ್ತದೆ. ತನ್ನ ಕುರಿತು ಯಾರಾದರು ಮಾತಾಡಲು, ಅದರಲ್ಲೂ ಹೊಗಳಿಕೆಗೆ ತೊಡಗಿದರೆ ಸತ್ಯಕಾಮರು ಆ ಜಾಗದಿಂದ ಎದ್ದು ಹೋಗಿ ಬಿಡುತ್ತಿದ್ದರು. ಕನಿಷ್ಠ ಅಂತಹ ಸೌಜನ್ಯವಾದರೂ ನಮಗೆ ಬಂದರೆ ಸಾಕು.

ರಜನೀಶ್ ನಡೆಸಿದನೋ ಬಿಟ್ಟನೋ ಅವನ ಕೃತಿಗಳಂತೂ ಇಂದಿಗೂ ಹಲವರನ್ನು ನಡೆಸಬಲ್ಲ ಸಾಮರ್ಥ್ಯವುಳ್ಳವು. ಋಷಿಗಳ ಉಪನಿಷತ್ತು ಹೇಗೆ ಇಂದಿಗೂ ನಮ್ಮನ್ನು ನಡೆಸಬಲ್ಲವೋ ಹಾಗೆ ರಜನೀಶನ ಅನೇಕ ವಿವರಗಳು, ಅವನು ಬಿಡಿಸಿ ಹೇಳುವಾಗ ಯಾರಿಗೂ ತಿಳಿಯಬಹುದಾದ ಅವನ ಸರಳತೆ, ಆ ವಿವರಗಳಲ್ಲಿ ಅವನು ಹುಟ್ಟಿಸುವ ಆಕರ್ಷಣೆ, ನಮ್ಮ ಒಳಗೂ ಅಂತಹದೊಂದು ಸಾಧ್ಯ ಎಂಬ ಅವನ ಮಾತು ಹುಟ್ಟಿಸುವ ಧೈರ್ಯ ಖಂಡಿತಕ್ಕೂ ರಜನೀಶ್ ಕೃತಿಯಿಂದ ಮಹಾಗುರು ಎಂಬುದನ್ನು ಸಾಬೀತು ಪಡಿಸುತ್ತಿದೆ. ಅವನು ಇನ್ನೂ ಸಹಸ್ರ ಸಹಸ್ರ ಜನರನ್ನು ನಡೆಸಬಲ್ಲ. ರೇಗನ್ ಜೈಲಿಗೆ ಹಾಕಿದಾಗ ರಜನೀಶ್ ನೀವು ಈ ದೇಹವನ್ನು ಬಂಧಿಸಬಲ್ಲಿರಿ, ಈ ದೇಹವನ್ನು ಕೊಂದು ಮುಗಿಸಬಲ್ಲಿರಿ ಆದರೆ ನೀವೆಂದೂ ಈ ರಜನೀಶನನ್ನು ಬಂಧಿಸಲಾರಿರಿ, ಕೊಲ್ಲಲಾರಿರಿ ಅವನಿಗೆ ನಾಶವಿಲ್ಲ ಎಂದು ಘೋಷಿಸಿಕೊಂಡದ್ದು ಅವನ ಕೃತಿಗಳನ್ನು ನೋಡಿದರೆ ನೂರಕ್ಕೆ ನೂರು ಸತ್ಯ.

ಒಬ್ಬ ಹೇಗೆ ಬದುಕಿದ ಎನ್ನುವುದಕ್ಕಿಂತಲೂ ಹೇಗೆ ಸತ್ತ ಎಂಬುದೇ ದೊಡ್ಡ ಚರ್ಚೆ. ರಜನೀಶನ ಮರಣಕ್ಕೂ ಇದರ ಬಾಧೆಗಳಿವೆ. ಅವನು ರೇಗನ್ ಕೊಡಿಸಿದ ಸ್ಲೋ ಪಾಯಸನ್‌ನಿಂದಾಗಿ ಸತ್ತ ಹಾಗಾಗಿ ಅವನ ಕೊನೆಯ ದಿನಗಳು ತುಂಬ ತೊಂದರೆಯಿಂದ ಕೂಡಿದ್ದವು, ಅವನಿಗೆ ಅವನ ಮರಣ ತುಂಬ ಅಹಿತವಿತ್ತು, ಅವನು ಬಹಳ ದಿನ ನರಳಿ ನರಳಿ ಸತ್ತ, ಅವನಿಗೆ ಮುಕ್ತ ಕಾಮದಿಂದ ಏಡ್ಸ್ ಬಂದಿತ್ತು ಈ ಮುಂತಾದ ಗಾಳಿಮಾತುಗಳು ಸಾಕಷ್ಟು ಇದ್ದವು. ಅವನು ಹೇಗೆ ಸತ್ತನೋ ಎಂಬುದು ನಿಗೂಢವೇ ಇರಲಿ. ಮನುಷ್ಯನೊಬ್ಬ ಬದುಕಬಹುದಾದಷ್ಟು ದೀರ್ಘ ಅವಧಿ ಅವನು ಬದುಕಲಿಲ್ಲ ಮತ್ತು ಅವನ ಸಾವು ಸಹಜವಾದ ಸಾವು ಆಗಿರಲಿಲ್ಲ. ಒಂದು ರೋಗಬಾಧೆಯಿಂದ ಸತ್ತ ಎಂಬುದಂತು ಸರ್ವವಿದಿತ.

ರಜನೀಶನೇ ಒಂದು ಕಡೆ ಶರಣನನ್ನು ಮರಣದಲ್ಲಿ ಕಾಣು ಎಂಬ ಮಾತು ಹುಟ್ಟುವುದಕ್ಕೆ ಇರುವ ಕಾರಣವನ್ನು ವಿವರಿಸುತ್ತಾ ಬದುಕಿರುವಾಗ ಒಳಗಿರುವುದನ್ನು ತೋರಿಸದೆ ಹೊರಗೆ ಅಭಿನಯಿಸಬಹುದು (Pretend). ಆದರೆ ಸಾವಿನಲ್ಲಿ ಆ ಸೋಗಲಾಡಿತನ ಸಾಧ್ಯವಿಲ್ಲ. ಆ ಸನ್ನಿವೇಶವೇ ಹಾಗೆ ಮರಣದ ಹೊತ್ತಿಗೆ ತನ್ನನ್ನು ಅದು ತೋರಿಯೇ ಸಾಯುತ್ತದೆ. ಅದರ ಒಳಗಣ ಅನುಭವ ಮುಖದಲ್ಲಿ ವ್ಯಕ್ತವಾಗಿಯೇ ಆಗುತ್ತದೆ. ಹಾಗಾಗಿ ಬದುಕಿರುವಾಗ ಬೇಕಾದಷ್ಟು ಅಸಹಜ, ಕೃತಕವಾಗಿ ಬದುಕನ್ನು ತೋರಬಹುದು. ಸಾವಿನಲ್ಲಿ ಇರುವುದನ್ನೇ ತೋರಬೇಕಾಗುತ್ತದೆ ಎಂಬ ಮಾತನ್ನು ಹೇಳಿದ್ದಾನೆ.

ಸತ್ಯಕಾಮರ ಮರಣ ಬಹುಶಃ ಅಂತಹದೇ ಇತ್ತು. ಅವರು ತನ್ನ ಬಳಿ ಮರಣ ಎರಡು ಬಾರಿ ಬಂದು ಮರಳಿ ಹೋದದ್ದನ್ನು, ಹಾಗೆ ಅದು ಇನ್ನೊಮ್ಮೆ ಬಂದರೆ ಮರಳಿ ಬರಿಗೈಯಲ್ಲಿ ಕಳುಹಿಸುವುದಿಲ್ಲ ಎಂಬ ಮರಣ ಪತ್ರವನ್ನು ತಾನು ಸಾಯುವ ಎರಡು ತಿಂಗಳಿಗೆ ಮೊದಲು ಬರೆದಿಟ್ಟಿದ್ದರು. ಅದರ ಯಥಾಪ್ರತಿ ಸ್ವತಂತ್ರ ಕೃತಿಯ ಕೊನೆಯ ಪುಟದಲ್ಲಿ ಪ್ರಕಟವಾಗಿದೆ. ಅದಾದ ಬಳಿಕ ಅವರು ಎರಡು ತಿಂಗಳಲ್ಲಿ ಬೆಂಗಳೂರಿನ ಒಬ್ಬ ವೈದ್ಯ ಸ್ನೇಹಿತರ ಮನೆಯಲ್ಲಿ ವೈದ್ಯಕೀಯ ಪರೀಕ್ಷೆಗಳೆಲ್ಲ ಮುಗಿದು ಯಾವ ದೈಹಿಕ ಖಾಹಿಲೆಯೂ ಇಲ್ಲ ಎಂಬುದನ್ನು ವೈದ್ಯರಿಂದ ಪ್ರಮಾಣೀಕರಿಸಿಕೊಂಡು ಬಂದ ಒಂದು ಗಂಟೆಯಲ್ಲಿ ಕುಳಿತಿದ್ದಂತೆ, 'ನನ್ನ ಕೈಯಲ್ಲಿ ಇನ್ನು ಆಗುವುದಿಲ್ಲ ಮಗಳೇ' ಎಂಬ ಮಾತು ಮುಗಿಯುವುದರೊಳಗೆ ಹೊರಟು ಬಿಟ್ಟಿದ್ದರು. ಅದು ನಿಜಕ್ಕೂ ತಾನೇ ತಾನಾಗಿ ಒಬ್ಬ ವ್ಯಕ್ತಿ ತನ್ನ ಇಚ್ಛೆಯಿಂದ ದೇಹ ಬಿಟ್ಟು ಹೊರಟಂತೆ ಇತ್ತು ಹೊರತು ಯಮದೂತರು ಬಂದು ಬಾ ಎಂದು ಹಗ್ಗ ಕಟ್ಟಿ ಎಳೆದು ಒತ್ತಾಯ ಮಾಡಿ ನರಳಿದ ಸಾವಾಗಿರಲಿಲ್ಲ. ಅದು ನಾನು ನೋಡಿದ ಅತ್ಯಂತ ಸುಂದರ ಸಾವು ಎಂಬುದನ್ನು ಮಾತ್ರ ಹೇಳಬಲ್ಲೆ. ಶರಣರನ್ನು ನಾನು ಮರಣದಲ್ಲೂ ಕಂಡೆ ಎಂಬ ಧನ್ಯತೆ ಇದೆ. ಅದಕ್ಕೂ ಮೀರಿದ ವಿಶ್ಲೇಷಣೆ ಬೇಡ ಎಂದೇ ನನ್ನ ನಂಬಿಕೆ.

4. ಆಚಾರ್ಯದ್ವಯರು ಕಂಡ ಪ್ರೇಮ, ಕಾಮ, ಮತ್ತು ಸ್ತ್ರೀ

ಆಧ್ಯಾತ್ಮ ಎಂದರೆ ಹೆಣ್ಣು ದೂರ ಇರಬೇಕಾದ ವಸ್ತು, ಅವಳು ಅದಕ್ಕೆ ಅರ್ಹಳಲ್ಲ, ಹೆಣ್ಣಿಗೆ ಮುಕ್ತಿ ಸಿಗಬೇಕಾದರೆ ಅವಳು ಪುರುಷ ದೇಹವನ್ನೇ ಧರಿಸಿ ಬರಬೇಕು ಎನ್ನುವ ನಂಬಿಕೆಯನ್ನೇ ಗಾಢವಾಗಿಟ್ಟುಕೊಂಡ ಪರಂಪರೆ ನಮ್ಮದು. ಅಂತಹ ಪರಂಪರೆಯ ನಡುವೆಯೂ ಅಪರೂಪಕ್ಕೆ ಕೆಲವರು ಹೆಣ್ಣಿಗೆ ದೀಕ್ಷೆ ಕೊಟ್ಟಿದ್ದಾರೆ. ಅವಳಿಗೆ ದೇವ ಪಥ ಪ್ರವೇಶ ನೀಡಿದ್ದಾರೆ. ಅಕ್ಕ, ಮೀರಾ ಅಂತಹ ಉದಾಹರಣೆಗಳು.

ಇಂತಹ ತೀವ್ರ ಮೈಲಿಗೆಯನ್ನು ಇಟ್ಟುಕೊಂಡ ಹಿಂದೂ ಪರಂಪರೆಯಲ್ಲಿಯೇ ಅತ್ಯಂತ ಕ್ರಾಂತಿಕಾರಕವಾಗಿ ಹೆಣ್ಣು ದೇವ ಪಥಕ್ಕೆ ಅನಿವಾರ್ಯ ಮಾಧ್ಯಮ, ಅವಳಿಲ್ಲದೆ ಬೆಳವಣಿಗೆಯಿಲ್ಲ, ಅವಳನ್ನು ಒಪ್ಪಿಕೊಳ್ಳದೆ ಉದ್ಧಾರವಿಲ್ಲ, ಶಕ್ತಿಯಿಲ್ಲದ ಶಿವ ಅಪೂರ್ಣ ಹೇಗೋ ದೇವ ಪಥವೂ ಕೂಡ ಅವಳಿಗೆ ಒಪ್ಪಿಸದೆ ಅಪೂರ್ಣವೇ ಎಂಬುದನ್ನು ಮೊತ್ತ ಮೊದಲ ಬಾರಿಗೆ ತಂತ್ರ ಮಾರ್ಗ ಹೇಳಿತು. ಆದ್ದರಿಂದಲೇ ಅವಳನ್ನು ಪೂಜಿಸುವ ಅವಳ ಮೂಲಕ ಕಾಮವನ್ನು ದಾಟುವ, ತಾಯಿಯ ದರ್ಶನ ಪಡೆಯುವ, ಆ ತಾಯಿಯ ಕೃಪೆಯಿಂದಲೇ ಆ ತಂದೆಯನ್ನು (ಸುಪ್ರೀಮ್ ಎನರ್ಜಿ) ಕಾಣುವ ಸಾಧ್ಯತೆಯಾಗಿ ಪಂಚ'ಮ' ಕಾರಗಳಲ್ಲಿ ಮಾನಿನಿಯನ್ನು ಸೇರಿಸಿಕೊಂಡಿತು.

ಹೆಣ್ಣಿನ ಕುರಿತು ವೈರಾಗ್ಯ, ಕಾಮದ ಕುರಿತು ತಿರಸ್ಕಾರ ಇವುಗಳನ್ನು ನಂಬಿಕೊಂಡಿದ್ದ ನಮ್ಮ ಪರಂಪರೆಯಲ್ಲಿ ಹೊಸ ಆವಿಷ್ಕಾರದಂತೆ ತಂತ್ರಮಾರ್ಗ ಇದೆ. ಈ ಪಥದ ಆರಂಭವು 9ನೇ ಶತಮಾನದ ಕಾಲಘಟ್ಟದಲ್ಲಿ ವಸುಗುಪ್ತನಿಂದ ಆಗಿರಬೇಕು ಎಂಬ ಪ್ರತೀತಿ ಇದೆ. ಬುದ್ಧ ಪರಂಪರೆಯ ವಿಜೃಂಭಣೆಯ ಕಾಲದಲ್ಲಿ ವಜ್ರಯಾನ ಮತ್ತು ಹೀನಯಾನ ಎಂಬ ಎರಡು ಶಾಖೆಗಳಾಗಿ ಅದು ಒಡೆದು ಹೀನಯಾನ ಪೂರ್ತಿ ಹೀನವಾಗಿ, ಮಾಯವಾಗಿ, ವಜ್ರಯಾನವು ಅದರ ವಜ್ರಗುಣಗಳನ್ನು ಸಂಪೂರ್ಣ ಮೈಗೂಡಿಸಿಕೊಂಡು ತಂತ್ರಶಾಖೆಯಾಗಿ ಬೆಳೆಯಿತು ಎಂಬ ಅರ್ಥದ ಮಾತುಗಳನ್ನು ಸತ್ಯಕಾಮರು ಹೇಳುತ್ತಾರೆ. ಅವರ ಪ್ರಕಾರ ಬುದ್ಧ ಧರ್ಮದಿಂದ ತಾನಾಗಿಯೇ ಹೊಸ ವಿಚಾರಧಾರೆಗಳನ್ನು ಹೇಳಿದ ಅನುಯಾಯಿಯೊಬ್ಬ ಸಂಘದಿಂದಲೇ ತಿರಸ್ಕೃತನಾಗಿ ಹೊರದೂಡಲ್ಪಟ್ಟಾಗ ಅವನು ತನ್ನ ಹೊಸ ವಿಚಾರ ಲಹರಿಗಳನ್ನು ಮಹಿ ಎಂಬ ಶಿಷ್ಯೆಯೊಬ್ಬಳಿಗೆ ಪೂರ್ತಿಯಾಗಿ ಧಾರೆಯೆರೆದು ಅದನ್ನು ಬೆಳೆಸುವಂತೆ ಅವಳನ್ನು ಕೇಳಿಕೊಳ್ಳುತ್ತಾನೆ. ಮುಂದೆ ಆ ಗುರುವನ್ನು ಬುದ್ಧನ ಅನುಯಾಯಿಗಳು ಸಹಿಸಿಕೊಳ್ಳದೆ ಕೊಲೆ

ಮಾಡಿದಾಗ ಮಹಿ ದೇಶಾಂತರ ಬಂದು ಕಾಶ್ಮೀರದಲ್ಲಿ ವಸುಗುಪ್ತನನ್ನು ಭೇಟಿಯಾಗುತ್ತಾಳೆ. ತಂತ್ರಮಾರ್ಗದ ಹೊಸ ವಿಚಾರಧಾರೆಗಳನ್ನು ಅವಳೇ ಬೀಜರೂಪದಲ್ಲಿ ವಸುಗುಪ್ತನಿಗೆ ಧಾರೆಯೆರೆದಳು ಹಾಗಾಗಿ ಅವಳೇ ತಂತ್ರಮಾರ್ಗದ ಆದ್ಯ ಪ್ರವರ್ತಕಿ. ಹೀಗೆ ಸತ್ಯಕಾಮರ ಪ್ರಕಾರ ವಸುಗುಪ್ತನಿಗೆ ಮಹಿ ಎಂಬ ಸ್ತ್ರೀಯೇ ಗುರು ಮತ್ತು ವಸುಗುಪ್ತ ಅವಳ ಶಿಷ್ಯ. ಈ ಹಿನ್ನೆಲೆಯಲ್ಲಿ ತಂತ್ರಮಾರ್ಗದ ಆರಂಭ ಸತ್ಯಕಾಮರ ಪ್ರಕಾರ ಹೆಣ್ಣಿನಿಂದಲೆ.

ಇದು ವಿಜ್ಞಾನ ಭೈರವ ಕಾದಂಬರಿಯಲ್ಲಿ ಸತ್ಯಕಾಮರ ನಿರೂಪಣೆ. ಮಹಿ ಎಂಬ ಗುರು ಇರಲಿಕ್ಕಿಲ್ಲ ತಂತ್ರಮಾರ್ಗ ಹೆಣ್ಣಿನಿಂದ ಆರಂಭವೂ ಆಗಿಲ್ಲ. ಇದೊಂದು ಕಾದಂಬರಿ ಮಾತ್ರ ಎಂದು ಕೆಲವರು ವಾದಿಸಬಹುದು. ನನ್ನ ಮಾತು ವಾದದ ಉದ್ದೇಶವುಳ್ಳದ್ದಲ್ಲವಾದರೂ ಕಾಲ್ಪನಿಕ ಅಂಶದ ಹಿನ್ನೆಲೆಯಲ್ಲಿಯೂ ತಂತ್ರವು ಶಕ್ತಿಯಿಂದ ಆರಂಭ ಎಂಬ ಮಟ್ಟಿಗಾದರೂ ಇದನ್ನು ಒಪ್ಪಿಕೊಳ್ಳಲೇ ಬೇಕು. ಸತ್ಯಕಾಮರು ಶಕ್ತಿಯನ್ನು ಪೂಜಿಸಲೆಂದೇ ಮಹಿ ಎಂಬ ಪಾತ್ರವನ್ನು ತಂದಿರಲಿಕ್ಕೂ ಸಾಕು. ಹಾಗೆ ನೋಡಿದರೆ ತಂತ್ರಕ್ಕೆ ಶಕ್ತಿ ಮಾರ್ಗ ಎಂದೇ ಹೆಸರು.

ಸ್ತ್ರೀಯನ್ನು ತಿರಸ್ಕರಿಸಿದ್ದು, ಕಾಮವನ್ನು ಪೂರ್ತಿಯಾಗಿ ನಿರಾಕರಿಸಿದ್ದು ಆಧ್ಯಾತ್ಮದ ಅದುವರೆಗಿನ ಅಭ್ಯಾಸ. ಸ್ತ್ರೀಯನ್ನು ಸ್ವೀಕರಿಸಿ ಕಾಮವನ್ನು ಪೂಜಿಸಿದ ಗರಿಮೆ ತಂತ್ರಮಾರ್ಗದ್ದೇ. ತಂತ್ರ ಒಂದು ಪೂಜೆ, ಸ್ತ್ರೀ ಒಂದು ವಿಗ್ರಹ, ಸಂಭೋಗ ಒಂದು ಯಜ್ಞ, ಆಗ ಉಂಟಾಗುವ ವಿಸರ್ಜನೆ ಅದು ಅವರಿಬ್ಬರ ಜೀವಸತ್ವ, ಅದಕ್ಕೆ ಒಂದು ಹೊಸಜೀವಿಯನ್ನು ಹುಟ್ಟಿಸುವ ಶಕ್ತಿ ಇರುವುದರಿಂದ ಅದು ಅಮೃತ. ಹೀಗೆ ತುಂಬ ಹೊಸ ವಿಚಾರಧಾರೆಗಳನ್ನು ತಂತ್ರ ಹೇಳಿತು. ಹಾಗಾಗಿ ಯೋನಿದ್ರವ ಮತ್ತು ವೀರ್ಯವನ್ನು ಸಂಭೋಗಾನಂತರ ಇಬ್ಬರು ತೀರ್ಥದ ಹಾಗೆ ಕುಡಿಯಬೇಕು, ಹಾಗೆ ಕುಡಿದವರಿಗೆ ಅಮೃತತ್ವ ಲಭಿಸುತ್ತದೆ ಎಂಬ ಅಪೂರ್ವ ವಿಶ್ಲೇಷಣೆಗಳನ್ನು ವಸುಗುಪ್ತನ ಸೆಳೆವಿನಿಂದಲೇ ನಡೆದ ಅಭಿನವಗುಪ್ತ ಹೇಳಿದ್ದಾನೆ. ಅದೇ ಮುಂದೆ ಕೌಲಮಾರ್ಗವಾಗಿ ಪ್ರಸಿದ್ಧಿಯನ್ನು ಪಡೆಯಿತು.

ಆ ಕಾಲದಿಂದ ಸುಮಾರು ನೂರು ವರ್ಷಗಳ ಅವಧಿಯಲ್ಲಿ ಸಂಪೂರ್ಣ ಅವಸಾನ ಕಂಡ ತಂತ್ರಮಾರ್ಗ ಮತ್ತೊಮ್ಮೆ ಅಷ್ಟೇ ವ್ಯಾಪಕವಾಗಿ ಸುದ್ದಿಮಾಡಿದ್ದು, ಜನರ ಹುಬ್ಬೇರಿಸಿದ್ದು ರಜನೀಶನ ಕಾಲ ಘಟ್ಟದಲ್ಲಿ. ಅದಕ್ಕೂ ನಡುವೆ ಒಮ್ಮೆ ವೀರಶೈವರ ಧಾರ್ಮಿಕ ಚಳುವಳಿಯಲ್ಲಿ ಅದು ಹಾಯ್ದು ಹೋಗಿದ್ದರೂ ಆಗ ಕೌಲಮಾರ್ಗದ ಪ್ರಸಿದ್ಧಿ ಪ್ರಚಾರ ಅಷ್ಟಾಗಿ ಇದ್ದಂತಿಲ್ಲ.

ತನ್ನ ಆಧ್ಯಾತ್ಮ ಪಥವನ್ನು ಮುಕ್ತ ಕಾಮಕ್ಕಾಗಿಯೇ ತೆರೆದಿಟ್ಟಂತೆ ಕಾಣುವ ರಜನೀಶನ ಧೀರತೆಯು ಒಂದೆ ಸಂಪೂರ್ಣ ಕೌಲಮಾರ್ಗದ ಪ್ರಭಾವ ಇದ್ದಂತೆ ಕಾಣಿಸುತ್ತದೆ. ಅವನು

1920ರಿಂದ 30ರ ದಶಕಗಳಲ್ಲೇ ಕಾಮ ಒಂದು ಆಧ್ಯಾತ್ಮ ಸಾಧನವಾಗಿ ಬಳಸಬಹುದಾದ ಶಕ್ತಿ, ಅದು ಕೇವಲ ಅಧೋಗಮನ ಮಾತ್ರವಲ್ಲ ಊರ್ಧ್ವಗಮನವಾಗಿ ಚಲಿಸಿದರೆ ನಾವು ಸಾವಿಲ್ಲದಂತಹ ಅಮರತ್ವವನ್ನು ಪಡೆಯಲು ಸಾಧ್ಯವಿದೆ ಎಂಬ ಸಂಗತಿಯನ್ನು ಹೇಳಿದ. ಯಾಕೆ ಹೆಣ್ಣು ಜಗದ ಪ್ರೇಮಕ್ಕೂ, ಕಾಮಕ್ಕೂ ಅನಿವಾರ್ಯ ಜೀವಿ, ಅವಳಿಂದಲೇ ಅದು ಹುಟ್ಟಿ ಬೆಳೆದು ಸಮರ್ಪಿತವಾಗಬೇಕಿದೆ ಎಂಬುದನ್ನು ರಜನೀಶ್ ತುಂಬ ಅದ್ಭುತವಾಗಿ ವಿಜ್ಞಾನ ಭೈರವ ತಂತ್ರ ಕೃತಿಯ ವ್ಯಾಖ್ಯಾನದಲ್ಲಿ ವಿವರಿಸುತ್ತಾನೆ.

ಮನುಷ್ಯ ಮೂಲಭೂತವಾಗಿ ಒಂದು ಬೆಚ್ಚಗಿನ ದೈಹಿಕ ಅನುಭವ ಮತ್ತು ಅತ್ಯಂತ ಭರವಸೆಯ ಪ್ರೀತಿಯನ್ನು ಅನುಭವಿಸುವುದು ತಾಯಿಯ ಜೊತೆಗೆ. ಅವನ ಅನುಭವಿಸುವ ಮೊತ್ತಮೊದಲ ದೈಹಿಕ ಅನುಭವ ಮೊಲೆ ಉಣ್ಣುವುದು ಮತ್ತು ತಾಯಿಯ ಮೊಲೆಯ ಸ್ಪರ್ಶ. ಹಾಗಾಗಿ ರಜನೀಶನ ಪ್ರಕಾರ ನಿರಂತರ ಮೊಲೆಯ ಕಡೆ ಆಕರ್ಷಿತರಾಗುವ ಗಂಡಿನ ಕಣ್ಣಿನ ಹಿಂದೆ ತಾಯ್ತನದ ನೆನಪಿದೆ, ಹಸಿವಿದೆ. ಇದಕ್ಕಿಂತಲೂ ಕುತೂಹಲದ ಇನ್ನೊಂದು ಸಂಗತಿಯನ್ನು ರಜನೀಶ್ ಹೇಳುತ್ತಾನೆ. ಅತ್ಯಂತ ದೊಡ್ಡ ವಿದ್ವಾಂಸನು ಒಮ್ಮೆ ಪ್ರೇಮಪಾಶಕ್ಕೆ ಒಲಿದುಬಿಟ್ಟನೆಂದರೆ ಅವನು ಸಂಗಾತಿಯ ಜೊತೆಗೆ ವಿದ್ವತ್ತಿನ ಪರಿಭಾಷೆಯಲ್ಲಿ ಮಾತಾಡುವುದಿಲ್ಲ. ಆಗ ಅವರಿಬ್ಬರ ಪ್ರೇಮಮಯಿ ಸಂಭಾಷಣೆ ಮಗುವಿನ ಭಾಷೆಯಲ್ಲಿರುತ್ತದೆ. ಅದಕ್ಕೂ ಕಾರಣ ಪ್ರೇಮದ ಮೊತ್ತಮೊದಲ ಅನುಭವವನ್ನು ಕೊಟ್ಟ ತಾಯಿ ಪ್ರೀತಿಯೇ.

ಇಂತಹ ಪ್ರೇಮಕ್ಕೆ ತಲೆಯ ಅವಶ್ಯಕತೆ ಇಲ್ಲ. ಅದು ಹೃದಯದಿಂದ ಸಂಭವಿಸುವ ಅಪೂರ್ವ ಕ್ರಿಯೆ. ಆದರೂ ಪ್ರೇಮಕ್ಕೆ ಆಗಾಗ ಅಡ್ಡಿ ಮಾಡುವ ಮತ್ತು ಸಮರ್ಪಣೆಯನ್ನು ತಡೆಯುವ ಅಹಂಕಾರವು ಬಹಳ ಪ್ರಮುಖ ಕೆಲಸ ಮಾಡುತ್ತದೆ. ಇದು ತಲೆ ಮತ್ತು ಹೃದಯದ ನಡುವಿನ ಸಂಘರ್ಷದ ಸಮಸ್ಯೆ. ಆ ಹೊತ್ತಿಗೆ ತಲೆ ಹೃದಯಗಳೆರಡರ ಗೊಂದಲಗಳನ್ನು ಮೀರಿ ನಾನು ಎಲ್ಲಿದ್ದೇನೆ ಎಂಬ ಹುಡುಕಾಟ ಆರಂಭಿಸಿದರೆ ಅದು ನಾನು ಎಂಬ ಮೂಲವನ್ನು ಹೊಕ್ಕುಳಲ್ಲಿ ಕಾಣಿಸುತ್ತದೆ. ಹಾಗಾಗಿ ಹೊಕ್ಕುಳು ನಾನು ಎಂಬ ಅಸ್ತಿತ್ವದ ಮೂಲ ಸ್ಥಾನ. ಆ ಹೊಕ್ಕುಳು ಕೂಡ ನಾನು ಎನ್ನುವ ಸ್ವತಂತ್ರ ಅಸ್ತಿತ್ವ ಕಾಣುವ ಪೂರ್ವದಲ್ಲಿ ತಾಯಿಗೇ ಅಂಟಿಕೊಂಡಿರುತ್ತದೆ. ಆದ್ದರಿಂದ ಅಲ್ಲಿಯೂ ಮಾತೃಮೂಲವೇ.

ಹೀಗೆ ದೇಹಕ್ಕೆ ಪ್ರೀತಿಗೆ ನಾನು ಎಂಬ ಅಸ್ತಿತ್ವಕ್ಕೆ ಎಲ್ಲಕ್ಕೂ ಸ್ತ್ರೀಯನ್ನು ಮೂಲ ಎಂದು ಗುರುತಿಸಿದ ರಜನೀಶ್ ಈ ದೇಹದ ಕಾಮ, ಹೃದಯದ ಪ್ರೇಮ, ಜೀವದ ಅಸ್ತಿತ್ವ

ಇವೆಲ್ಲವುಗಳನ್ನು ಸ್ತ್ರೀ ಮುಖಾಂತರವೇ ದಾಟಬೇಕಾಗುತ್ತದೆ. ಎಂಬುದನ್ನು ಬಹಳ ಸುಂದರವಾಗಿ ನಿರೂಪಿಸಿದ್ದಾನೆ.

ರಜನೀಶನ ಪ್ರಕಾರ ಆರಂಭದಲ್ಲಿ ಕಾಮ, ಬಳಿಕ ಪ್ರೇಮ ಕೊನೆಗೆ ಅದು ಭಕ್ತಿ. I become the mystery and you-then the other is the beloved-become the real. If you moves to the very extreme then it becomes devotion, if your love comes to such an extreme point that you forget completely that you are. You have no notion of yourself and only the other remains, that is devotion... Whether you make a real person or you love object or within it is your imagination, it makes no difference, the whole transformation comes trough devotion not through the beloved (276 Vijnana Bhairava Tantra Vol-I google search osho)

ಇದು ಪ್ರೇಮ ಮೀರಿ ಭಕ್ತಿಯ ಹಂತಕ್ಕೆ ಬಂದ ಸಂಗತಿಯಾದರೆ ನಾವಿನ್ನೂ ದೇಹದಲ್ಲೇ ಇರುವುದರಿಂದ ತಂತ್ರ ದೇಹಕ್ಕೆ ಯಾಕೆ ಪ್ರಾಮುಖ್ಯತೆಯನ್ನು ಕೊಡುತ್ತದೆ ಎನ್ನುವುದನ್ನು ಕುರಿತು ರಜನೀಶ್ ಮೊದಲಿಗೆ ಗಮನ ಹರಿಸುತ್ತಾನೆ. Sex is the lowest chakra and Sahasrara is the highest, and between these two the sex energy moves, it can be released from the sex centre. When it is released from the sex centre you become a cause to reproduce some one else. When the same energy is released from the sahasrara, from the head into the cosmos, you give a new birth to yourself. It is also reproduction but not biologically, then it is spiritually a reproduction, then you are reborn. In India we used to call such a person twice-born-DWIJ (P. 287-88 Vijnana Bhairava Tantra Vol-I google search osho)

ಹೀಗೆ ನಮ್ಮ ಒಳಗಿನಿಂದ ನಮ್ಮನ್ನೇ ಹುಟ್ಟಿಸಿಕೊಳ್ಳುವ ಮತ್ತು ನಮ್ಮ ಹೊರಗಿನಿಂದ ನಮ್ಮನ್ನು ಹುಟ್ಟಿಸುವ ಎರಡು ಸಾಧ್ಯತೆಯು ನಮಗಿದೆ. ಆದರೆ ನಮ್ಮ ದೇಹದಿಂದ ನಮ್ಮ ಮಗುವನ್ನು ಸೃಷ್ಟಿಸುವ ಕಾಮಕಾರ್ಯವು ಒಂದು ವಿಚಿತ್ರ ಅವಜ್ಞೆಗೆ ಒಳಗಾದ್ದರಿಂದ ಅದರ ಬಗ್ಗೆ ನಮಗೆ ಮಡಿವಂತಿಕೆ, ಅದು ಕೆಟ್ಟದ್ದು ಎಂಬ ಭಾವ, ಅದರ ಬಗ್ಗೆ ಪಾಪಪ್ರಜ್ಞೆ, ಅದು ವ್ಯಾವಹಾರಿಕ ಮತ್ತು ಲೌಕಿಕ ಲೋಕಕ್ಕೆ ಸಂಬಂಧಪಟ್ಟದ್ದು ಎಂಬ ಗೆರೆ. ಆಧ್ಯಾತ್ಮ ಬೇರೆಯೇ ಲೋಕ ಅಲ್ಲಿ ಇದನ್ನು ಮೈಲಿಗೆಯಾಗಿ ಕಂಡು ದೂರವಿರುವ. ಅದಲ್ಲದೆ ಇರುವ ಕ್ರಿಯೆಗಳನ್ನು ಮಾತ್ರ ದೇವಕ್ರಿಯೆ ಎಂದು ಭಾವಿಸುವ ಎರಡು ಮನೋವಿಭಾಗಗಳನ್ನು ಮಾಡಿಕೊಂಡೆವು. ಇದರಿಂದಾಗಿ ನಮ್ಮ ಒಳಗೆ ಕಾಮದ ಕುರಿತು ಒಂದು ಭಯ, ಲಜ್ಜೆ, ಅಸಹ್ಯಭಾವ ಮತ್ತು

ರಹಸ್ಯಭಾಗ ನಿರ್ಮಾಣವಾಯಿತು. ದೇವರ ದಾರಿ ತುಂಬ ಮುಕ್ತಪಥವಾದ್ದರಿಂದ ಒಳಗೊಂದು ಹೊರಗೊಂದು ಬೇದವು ನಮ್ಮ ಪ್ರಜ್ಞೆಯ ಸ್ಥಾನಕ್ಕೆ ಅಡ್ಡಿ ಎಂಬುದನ್ನು ತಂತ್ರ ಮನಗಂಡು ಕಾಮವನ್ನು ಪೂಜಾಭಾಗವಾಗಿ ಮಾರ್ಪಡಿಸಿಕೊಂಡಿತು. ರಜನೀಶನ ಪ್ರಕಾರ Those who are against sex will always be afraid of death and those who are not against sex and can flow in it easily, spontaneously never be afraid of death (353 Vijnana Bhairava Tantra Vol-I google search osho)

ತಂತ್ರಮಾರ್ಗದಲ್ಲಿ ಸಮರ್ಪಣೆಗೆ ದೊಡ್ಡಸ್ಥಾನ. ಇದು ಪ್ರಜ್ಞೆ ತನ್ನ ವಿಸ್ತಾರಕ್ಕೆ ಸಾಧ್ಯವಾದದ್ದನ್ನೆಲ್ಲ ಸ್ವೀಕರಿಸುವ ಪಥ. ಆದ್ದರಿಂದಲೇ ಸ್ವೀಕರಿಸುವ ವ್ಯಕ್ತಿಗೆ ತನ್ನಲ್ಲಿರುವುದನ್ನೆಲ್ಲ ಸಮರ್ಪಿಸಿಕೊಂಡು ಖಾಲಿಯಾಗಲು ಗೊತ್ತಿರಬೇಕು. ಅಂತಹ ಸಮರ್ಪಣೆಗೂ, ಕಾಮಕ್ಕೂ ನೇರ ಸಂಬಂಧವಿದೆ ಎನ್ನುತ್ತಾನೆ ರಜನೀಶ್. If you have known deep sex you will be more capable of more surrendering, because you have known a deep pleasure that follows surrender then you can trust. (431 Vijnana Bhairava Tantra Vol-I google search osho)

ಮೂಲತಃ ಕಾಮಶಕ್ತಿಯನ್ನು ಮಾತ್ರ ಬಲ್ಲೆವು. ಆ ಶಕ್ತಿಯನ್ನು ನಾವು ಅರ್ಥವೂ ಮಾಡಿಕೊಂಡಿದ್ದೇವೆ. ಅರ್ಥವಾಗದ ಶಕ್ತಿಯನ್ನು ನಾವು ಆಮದು ಮಾಡಿಕೊಳ್ಳುವುದಕ್ಕಿಂತಲೂ ಅರ್ಥವಾಗುವ ಈ ಶಕ್ತಿಯನ್ನು ವಿಸ್ತರಿಸಿಕೊಳ್ಳುವುದು ಒಳ್ಳೆಯದು. ಆ ಅರ್ಥದಲ್ಲೇ ತಂತ್ರವು ಕಾಮ, ಪ್ರೇಮ ಮತ್ತು ಸಹಜ ಜೀವನಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿತು. ಹಾಗಾದರೆ ದೇಹದ ಉದ್ರಿಕ್ತ ಅವಸ್ಥೆಗೆ ಕಾಮದಲ್ಲಿ ತೊಡಗುವುದು, ಸಂಭೋಗ ವಿಸರ್ಜನೆ ಇವು ನಮಗೆ ಗೊತ್ತಿರುವ ಕಾಮಶಕ್ತಿ. ಇದನ್ನೇ ನಾವು ಅಲ್ಲಿಯೂ ನಡೆಯುವುದಾದರೆ ಆಧ್ಯಾತ್ಮಕ್ಕೆ ಏನು ಫಲ ? ಕಾಮದ ನಿರಾಕರಣೆ ಹೇಗೆ ಅಸಹಜವೋ ಅದರಲ್ಲಿಯೇ ಮುಳುಗಿ ಮತ್ತೆ ಮತ್ತೆ ಬೇಕು ಎಂಬ ಹಂಬಲಕ್ಕೆ ತೊಡಗುವ ಪುನರಾವರ್ತನೆ ಕೂಡ ಅಷ್ಟೇ ಅಸಹಜ ಅಥವಾ ಅನಗತ್ಯ. ಆದ್ದರಿಂದಲೇ ತಂತ್ರ ಕಾಮವನ್ನು ನಿರಾಕರಿಸಲಿಲ್ಲ ಬದಲಿಗೆ ಅದರ ಮೂರು ಸಾಧ್ಯತೆಯನ್ನು ಹೇಳಿದೆ.

1) ಚೌಕ □

2) ತ್ರಿಕೋಣ △

3) ವೃತ್ತ ○

ಸಂಬಂಧ ಚೌಕದಂತೆಯೂ ಇರಬಹುದು. ನಮ್ಮ ಮನಸ್ಸು ಮತ್ತು ದೇಹ ಜೊತೆಗೆ ನಮ್ಮ ಸಂಗಾತಿಯ ಮನಸ್ಸು ಮತ್ತು ದೇಹ ಎರಡು ಕೂಡಿದಾಗ ಚೌಕ. ಅಲ್ಲಿ ಎರಡು ದೇಹ ಮನಸ್ಸಿನ ಮಿಲನವಿದೆ.

ನಮ್ಮ ಮನಸ್ಸು ಮತ್ತು ದೇಹ ಜೊತೆಗೆ ಸಂಗಾತಿಯ ಮನಸ್ಸು ಮತ್ತು ದೇಹ ಎರಡೂ ಒಂದಾಗಿ ಒಂದು ಬಿಂದುವಿನಲ್ಲಿ ಕೂಡಿ ಲಯವಾಗುತ್ತದಲ್ಲ ಅದು ತ್ರಿಕೋಣ.

ಈ ಮೂರನೆಯ ಸ್ಥಿತಿಯಲ್ಲಿ ಎರಡೂ ಜೀವಗಳು ಪರಸ್ಪರ ಪ್ರೇಮದಲ್ಲಿ ಇರುತ್ತದೆ. ಅದಕ್ಕೆ ವಿಸರ್ಜನಾವಸ್ಥೆಯಿಲ್ಲ. ಅದು ಒಂದು ಧ್ಯಾನದ ಹಾಗೆ, ಪೂಜೆಯ ಹಾಗೆ ನಿರಂತರ, ಅವಿಶ್ರಾಂತ. ಹಾಗಾಗಿ ಅದು ವೃತ್ತ.

ತ್ಕೆ ತಂತ್ರದ ಕಾಮವೇ ಬೇರೆ, ಭೌತಿಕ ಜೀವನದ ಕಾಮವೇ ಬೇರೆ. ರೂಢಿಯ ಕಾಮವು ದು ಸೀನು ಬಂದಾಗ ಸೀನಿಕೊಳ್ಳುವ ದೈಹಿಕ ಒತ್ತಡದ ಹಾಗೆ. ಒಮ್ಮೆ ಆ ಒತ್ತಡವನ್ನು ರಗೆ ಹಾಕಿದರೆ ಸಾಕು ಭಾರ ಕಳಚಿಕೊಂಡಂತೆ. ತಂತ್ರದ ಕಾಮ ಹಾಗಲ್ಲ ಅದು ಒಂದು ಂಕ ಒತ್ತಡವನ್ನು ಹೊರಗೆ ಹಾಕಿಕೊಳ್ಳುವ ಒತ್ತಾಯವುಳ್ಳದಲ್ಲ. ಅದು ನಿರಂತರ ಪ್ರೇಮವನ್ನು ಮರೆಸುವಂತೆ ತೊಡಗಿರುವಂತಹದ್ದು. ರಜನೀಶ್ 'If we call the first kind a peak of asm you can call the tantric orgasm a valley orgasm. In it you are not ming to the peak of excitement but to the very deepest valley of relaxation'. 1 Vijnana Bhairava Tantra Vol-I google search osho) ಎಂದು ಹೇಳುತ್ತಾನೆ.

ಯಾಕೆ ತಂತ್ರವು ಕಾಮವನ್ನು ಒಂದು ಪೂಜಾ ಅಂಗವಾಗಿ ಸ್ವೀಕರಿಸಿತು ಎಂದರೆ ನಮ್ಮ ಮನ ಎರಡನ್ನೂ ಮರೆಸುವ ಸಮಾಧಿಯಂತಹ ಒಂದು ಸಣ್ಣ ಸಾಧ್ಯತೆ ಈ ಮಿಲನದಲ್ಲಿ . ಅದನ್ನೇ ತಂತ್ರ ಅಂತಿಮ ಎನ್ನುವುದಿಲ್ಲ. ಆದರೆ ಕಾಮ ಮಿಲನದ ಈ ಕನಿಷ್ಠ ಸಮಾಧಿಯ ಭವವನ್ನು ಗರಿಷ್ಠ ಅವಧಿಗೆ ಹಿಗ್ಗಿಸುವ ಮೂಲಕ ಮಹಾಸಮಾಧಿಯ ಆಧ್ಯಾತ್ಮ ನೆಯನ್ನು ಕೂಡ ಕಾಮ ಪೂಜೆಯಲ್ಲಿ ಸಾಧ್ಯವಾಗಿಸಬಹುದು. ಈ ಮಿಲನಾವಸ್ಥೆ ಮುಪಿಲ್ಲದೆ ಸಂಭವಿಸುವುದೇ ಇಲ್ಲ. ಆಶ್ಚರ್ಯವೆಂದರೆ ಕಾಮಕ್ಕೆ ಪ್ರೇಮ ಬೇಕೇ ಬೇಕು. ಆದರೆ ಮಕ್ಕೆ ಕಾಮ ಬೇಕೇ ಬೇಕೆಂದೇನಿಲ್ಲ.

ಕಾಮದಲ್ಲಿ ಇಬ್ಬರು ಇರುತ್ತೇವೆ. ಪ್ರೇಮದಲ್ಲಿ ಒಬ್ಬರೆ. ತಂತ್ರ ಹೀಗೆ ಪ್ರೇಮಭಾವದಲ್ಲಿ ದಾಗುವ ಕಾಮಭಾವವನ್ನು ಹೇಳುತ್ತದೆ. 'Tantra is known as the yoga of sex ! ntra is known as the path of love' (P. 89 Tantra the supreme understanding gle search osho) ಎನ್ನುವಾಗ ರಜನೀಶ್ ತಂತ್ರವು ಕಾಮ ಮುಖೇನ ಕೆಲವು ದೈಹಿಕ

ುವು ಆಂಗಿಕ ಪೂಜಾ ವಿಧಿವಿಧಾನಗಳನ್ನು ಹೇಳುವುದರಿಂದ ಅದು ಯೋಗ ಆದರೆ ಅಂತಹ ಹಿಕ ಕ್ರಿಯೆಯು ಮುಖ್ಯವಲ್ಲದೆ ಒಂದು ಪ್ರೇಮವೆಂಬ ದೇವ ಭಾವವು ಮುಖ್ಯವಾಗುವುದರಿಂದ ಂತ್ರವು path of love.

ಯಾಕೆಂದರೆ ಮನುಷ್ಯ ತನ್ನಷ್ಟಕ್ಕೆ ಅಪೂರ್ಣ. ಸ್ತ್ರೀಯು ಅಪೂರ್ಣ ಪುರುಷ. ಪುರುಷನು ಪೂರ್ಣ ಸ್ತ್ರೀ. ಇಬ್ಬರ ಮಿಲನದಲ್ಲಿ ಪರಿಪೂರ್ಣತೆ ಸಾಧ್ಯ. ಈ ಅರ್ಥದಲ್ಲಿ ಪರಸ್ಪರ ಡುವುದರಿಂದ ಒಂದು ಪರಿಪೂರ್ಣ ಜೀವ ಹುಟ್ಟುತ್ತದೆ. ಇಂತಹ ಕೂಡುವಿಕೆ ವಾಸ್ತವಿಕ ರಸ್ಪರ ವಿವರಿಸಲಾಗದ ಒಂದು ಆನಂದಾನುಭವವನ್ನು ಕೊಡುತ್ತದೆ. ಒಮ್ಮೆ ಈ ಆನಂದದ ೂಲ ಕೈಗೆಟುಕಿದರೆ ಸಾಕು ಮುಂದೆ ಇನ್ನೊಬ್ಬನ ಅವಶ್ಯಕತೆ ಇರುವುದಿಲ್ಲ. ಅದು ಆತ್ಮಾನಂದದ ಥವಾ ಸ್ವಾನಂದದ ಸ್ಥಿತಿ. ಇದನ್ನು ತಂತ್ರ ಕಾಮವನ್ನು ಪ್ರೇಮವನ್ನಾಗಿ ಪರಿವರ್ತಿಸುವ ಮತ್ತು ಸರ್ಜನೆಯೇ ಇಲ್ಲದೆ ಕೂಡುವ ರೀತಿಯನ್ನು ಹೇಳುತ್ತದೆ. ರಜನೀಶ್... Many surprising ethods have developed in Tantra which cannot be immediately understood r instance when there is intercourse between a complete man and a mplete woman there will be no loss of energy, there cannot be, each forms couple circuit within his or her own self. There will be no discharge of nergy from the partners for the first time they will experience pleasure thout loss of energy (222 Kundalini Yoga Vol-II 2001).

ಮಹಾವೀರ ಬುದ್ಧ ಸ್ತ್ರೀಯನ್ನು ಹೊರಗಿಟ್ಟೆ ಪಥ ನಡೆಸಿದರು. ಮಹಾವೀರನಿಗಂತೂ ಣ್ಣು ಮುಟ್ಟಾಗುವುದರಿಂದ ಅವಳು ಆಧ್ಯಾತ್ಮ ಪಥಕ್ಕೆ ಬರುವುದು ಸಾಧ್ಯವೇ ಇಲ್ಲ. ಏಕೆಂದರೆ ವಳ ಬ್ರಹ್ಮಚರ್ಯ ತಿಂಗಳಿಗೊಮ್ಮೆ ತಾನಾಗಿಯೇ ನಷ್ಟವಾಗುತ್ತದೆ. ಅವಳು ಅದನ್ನು ಪಾಡಿಕೊಳ್ಳುವ ಉಪಾಯಗಳೇ ಇಲ್ಲ. ಬುದ್ಧನು ಇಂತಹದೇ ಕಾರಣಕ್ಕೆ ಹೆಣ್ಣನ್ನು ದೂರವಿಟ್ಟಂತೆ ಣುತ್ತದೆ. ಆದರೆ ನಮ್ಮ ಹಿಂದೂ ಪರಂಪರೆಯು ಹೆಣ್ಣನ್ನು ಮೊದಲುಗೊಂಡೆ ನಡೆದ ಪರಂಪರೆ ಂದು ರಜನೀಶ್‌ನ ಅಭಿಮತ. ಸೀತಾರಾಮ, ರಾಧಾಕೃಷ್ಣ, ಪಾರ್ವತೀಪರಮೇಶ್ವರ, ಕ್ಷ್ಮೀನಾರಾಯಣ ಎಂಬುದು ಈ ಮಾತಿಗೆ ರಜನೀಶ್ ಕೊಡುವ ಆಧಾರ. ಶಿವಶಕ್ತಿಯ ಲ್ಲಾಸವನ್ನು ಅದರ ಪರಿಪೂರ್ಣ ಸಮಾಗಮದಲ್ಲಿ ತಂತ್ರ ಸ್ವೀಕರಿಸಿದೆ ಎನ್ನುತ್ತ ರಜನೀಶ್ ತಂತ್ರ ರ್ಗವು ಸ್ತ್ರೀ ತಿಂಗಳಿಗೊಮ್ಮೆ ಮುಟ್ಟಾಗುವುದರಿಂದಲೇ ಅವಳು ಈ ಪಥಕ್ಕೆ ಹೆಚ್ಚು ಅರ್ಹಳು ಂದು ಪರಿಗಣಿಸಿತು ಎನ್ನುತ್ತಾನೆ. ಇದು ಅವಳ ಜೈವಿಕ ವಿಶೇಷತೆ. ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಯಮದಿಂದ ಪಾಲಿಸಿ ಉಳಿಸಿಕೊಳ್ಳುವುದು ಎಷ್ಟು ಅಸಹಜವೋ ಹಾಗೆಯೇ ಅದನ್ನು ದುಕೊಳ್ಳುವುದಕ್ಕಾಗಿ ಕಾಮದಲ್ಲಿ ತೊಡಗುವುದು ಅಸಹಜವೇ. ಎರಡರಲ್ಲೂ ಒಂದು ಒತ್ತಾಯ.

ನು ಪಾಲ್ಗೊಳ್ಳುವಿಕೆ ಇದೆ. ಸಹಜವಾಗಿ ಒಂದು ಜೈವಿಕ ಪ್ರಕ್ರಿಯೆಯ ಹಾಗೆ ಬ್ರಹ್ಮಚರ್ಯ ನವಿಸಬೇಕು. ಹೆಣ್ಣಿಗೆ ಇಂತಹ ಎರಡರ ಭಾದೆಯೂ ಇಲ್ಲದೆ ತಾನಾಗಿ ತಿಂಗಳಿಗೊಮ್ಮೆ ಟ್ಟಾಗುವ ಒಂದು ದೇಹ ಚಕ್ರಾವಸ್ಥೆ ಇದೆ. 'Tantra says because of this woman can ach her self from her body very easily and if this becomes possible-this achment, ….there is no problem … so Tantra is the only path which gives man equal status otherwise every religion whatsoever it may be istianity, Islam…, Jainism… Buddhism…. But deep down it feels thin, and eason is the diagnosed through the third eye the aura at every month at the e of menses. (P. 310 Vijnana Bhairava Tantra Vol-I google search osho)

ಹೀಗೆ ಯಾವ ಮುಟ್ಟನ್ನು ಆಧ್ಯಾತ್ಮ ಪಥ ಮೈಲಿಗೆ ಎಂದು ಪರಿಭಾವಿಸಿತೋ ಆ ಟ್ಟನ್ನು ಒಂದು ವಿಶೇಷ ಗುಣವಾಗಿ ಕಂಡು ಸ್ತ್ರೀಯನ್ನು ತಂತ್ರ ಮುಕ್ತಪ್ರವೇಶಕ್ಕೆ ಮಾಡಿಕೊಟ್ಟಿತು.

ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿರುವಂತೆ ಈ ಸ್ತ್ರೀ ದೀಕ್ಷೆಯೂ ಇದೆ, ಪಾತವೂ ಇದೆ, ಗುರುವಾಗಿ ನಡೆಸುವ ಹೊಣೆಯೂ ಇದೆ. ಹೆಣ್ಣು ಗಂಡಿನ ರ್ಣತೆಯನ್ನು ದಾಟಿಸುವುದಕ್ಕೆ ಮಾಧ್ಯಮವಾಗಿ ಅವನಲ್ಲಿರುವ ಮಗುವನ್ನು ಎಚ್ಚರಿಸಿ ಲ್ಲಿರುವ ತಾಯಿಯನ್ನು ಪ್ರಕಟಿಸುವವರೆಗೆ ಈ ಬೆಳವಣಿಗೆ ಇದೆ.

ಸತ್ಯಕಾಮರು 'ಹೆಣ್ಣಿಗೆ ಹೆದರಿದ ಯಾರೂ ಮಹಾವಿದ್ಯೆಗಳನ್ನು ಪಡೆದಿಲ್ಲ' (56 ದೇವನ ನ್ನೊಂದು ಬಾಗಿಲು 2010) ಎಂಬ ನಿಷ್ಠುರ ಸತ್ಯದೊಂದಿಗೆ ಮಡಿವಂತಿಕೆ ತೋರುವವರನ್ನು ಕುತ್ತಾರೆ. ಅವರ ಜೀವನವಿಡೀ ಅವರು ಹಲವು ತಾಯಂದಿರನ್ನು ಕಂಡವರು. ಆ ಎಲ್ಲ ರಗಳನ್ನು ನಾವು ಅವರ ಅನಂತ ಜೀವನ ಕೃತಿಯಲ್ಲಿ ಗಮನಿಸಬಹುದಾಗಿದೆ.

ತನ್ನ ಯೌವ್ವನದ ಪರಾಕಷ್ಠೆಯಲ್ಲಿಯೂ ಕೂಡ ಅವರು ಮೊತ್ತ ಮೊದಲು ಕಂಡ ಹೆಣ್ಣು ಾಂಬಿಕೆ, ಅವರಿಗೆ ಮಾತೃತ್ವದ ಅನುಭವವನ್ನು ಕೊಡುವ ಮೊದಲ ಹೆಣ್ಣಾಗಿದ್ದಾಳೆ. ಕ'ಮ'ಗಳ ನಡುವೆ, ಕಪಿಲವಸ್ತು ಕೃತಿಯಲ್ಲಿ ಅವಳ ಕುರಿತು ಬರೆದ ವಿವರಗಳೆಲ್ಲಾ ಅದನ್ನೇ ಪಡಿಸುತ್ತವೆ.

ತಂತ್ರ ಹೇಳುವ ಅಭಿನವನ ಮಂಡಲ ಪೂಜೆ, ಯೋನಿ ಪೂಜೆಯ ಮಾದರಿಗಳು ಕಾಮರ ಬಹುತೇಕ ಎಲ್ಲ ಕಾದಂಬರಿಗಳಲ್ಲಿ ನಮಗೆ ದೊರಕುತ್ತವೆ. ಅವರು ಅನೇಕ ಬಾರಿ ಸ್ತ್ರೀ ಷ ಮಿಲನಗಳನ್ನು ವಿವರಿಸಿದಾಗಲೆಲ್ಲಾ ರೂಢಿಯ ದೈಹಿಕ ಸುಖವಲ್ಲದ, ವಿಸರ್ಜನೆ ಇಲ್ಲದ,

ರೆ ಮಹಾಪರಿವರ್ತನೆಯನ್ನು ಅನುಭವಿಸಿದ ಮತ್ತು ಮಹತ್ತರ ಆನಂದಕ್ಕೆ ಕಾರಣವಾದ ರವನ್ನು ನೀಡುತ್ತಾರೆ. ಉದಾ: ವೈಶಾಲಿ–ಅಭೇದಾನಂದರ ಮಿಲನ, ಅಶ್ವಘೋಷ–ಅವನ ಯ ಮಿಲನ, ಅಭಿನವ–ಅವನ ಸಂಗಾತಿಯೊಂದಿಗಿನ ಮಿಲನ, ಮಹಿ ಮತ್ತು ವಸುಗುಪ್ತನ ನಾಟ ಅವುಗಳಲ್ಲಿ ಕೆಲವು. ಇಲ್ಲಿ ಕೂಡುವಿಕೆಯಿಂದ ಎರಡು ಒಂದಾಗಿ ಮೂರನೆಯದನ್ನು ಸದ ವ್ಯಕ್ತಿತ್ವವೇ ಪರಿವರ್ತನೆಗೆ ಒಳಗಾಗಿ ಪುರ್ನಜನ್ಮ ಪಡೆಯುವ ಅಥವಾ ಹೊಸ ತ್ವವನ್ನು ಹೊಂದುವ ದ್ವಿಜತ್ವವನ್ನು ಕಾಣುತ್ತೇವೆ. ಅವರೇ ಹೇಳಿಕೊಳ್ಳುವ ಹಾಗೆ 'ನೀವು ್ಯಾಗಾರದಲ್ಲಿ ಮಡದಿಯೊಡನೆ ಮಲಗಿ ಹನಿದ ಬಳಿಕ ಮಗ್ಗಲು ತಿರುಗಿಸಿ ಎದ್ದು ೀಗುತ್ತೀರಿ. ಸಂಭೋಗ ಒಂದು ಯಜ್ಞವಾಗಿದ್ದರೆ ಫಲ ಅರಳುವುದನ್ನು ನೋಡುತ್ತೀರಿ. ನೀವು ್ಮ ಅಲ್ಲ, ರೂಢಿಯಲ್ಲಿ ಇದ್ದೀರಿ. ಚಟದಲ್ಲಿ ಇದ್ದೀರಿ. ಪ್ರಾಣಿಗೆ ಎಷ್ಟು ತಿಳಿವೋ ನಿಮಗೂ ೀ, ಕಣ್ಣು ಇಲ್ಲದ ಜೀವ ಜಂತು ಇವೆ, ಇದ್ದ ಕಣ್ಣು ಮುಚ್ಚುವ ಮನುಷ್ಯರೂ ಇದ್ದಾರೆ. (247 ಂತ್ರ 2004).

ಹೀಗೆ ಸತ್ಯಕಾಮರಿಗೆ ಸಂಭೋಗವು ಒಂದು ಯಜ್ಞವಾಗುವ ಅಲ್ಲಿ ತನ್ನನ್ನು ಸಮರ್ಪಿಸಿ ಸದೊಂದನ್ನು ಅರಳಿಸುವ ಸಾಧನವಾಗಿ ಕಾಮ ಇದೆ. ಆದರೆ ಅವರ ಕಾಮದ ವಳಿಕೆಯೂ ಕೂಡ ಒಂದರೆಗಳಿಗೆ ಪ್ರೇಮವನ್ನು ಬಿಟ್ಟಿಲ್ಲ. ಪ್ರೇಮದ ಕುರಿತ ಅವರ ತುಗಳು ಈ ರೀತಿ ಇವೆ.

- ಪ್ರೇಮ ಯಾವುದನ್ನೂ, ಯಾರ ಮೇಲೂ ಬಲಾತ್ಕರಿಸುವುದಿಲ್ಲ.
- ತಾನು ಏನನ್ನೂ ಬೇಡದೆ ಎಲ್ಲ ಕೊಡುವುದು ಪಡೆಯುವುದು ಪ್ರೇಮವಿಲ್ಲದೆ ಸಾಧ್ಯವಿಲ್ಲ.
- ಪ್ರೇಮದಲ್ಲಿ ಅತಿ ದುರ್ಬಲವಾದ ವಸ್ತುವೆಂದರೆ ನೆನಪು ಮಾತ್ರ.
- ಬುದ್ಧಿಗೇಡಿಯನ್ನು ಪ್ರೀತಿಸುವುದಕ್ಕಿಂತ ಧೀರ ಶತ್ರುಗಳ ಜೊತೆಗೆ ಹೋರು. (104 ತಂದೆ–ಮಗಳು 2004)

ಸತ್ಯಕಾಮರು ಒಂದು ಪತ್ರದಲ್ಲಿ 'ಮಗಳೇ ಬಹಳ ದಿನಗಳ ಹಿಂದೆಯೇ ನಿನ್ನ ಪ್ರೀತಿಯ ುಕ ವಾತ್ಸ್ಯಾಯನ ಪ್ರಾಣಿಗಳಿಗೆ ಕಾಮಿಸಲು ಬರುತ್ತದೆ, ಪ್ರೀತಿಸಲು ಬರುವುದಿಲ್ಲ ಎಂದು ದ್ದು ನಿಜ ಅಲ್ಲವೇ' (95 ತಂದೆ–ಮಗಳು 2004) ಎಂದು ನಾವು ಪ್ರಾಣಿಗಳಿಗಿಂತ ಭಿನ್ನ ್ಪವುದನ್ನು ಎಚ್ಚರಿಸಿದ್ದರು. ಕಾಮಕ್ಕೆ ಕಾಲುದಾರಿ ಬಳಸುವುದೇಕೆ ಧೀರತೆಯಿಂದ ರಾಜಮಾರ್ಗ

ರ್ತಿ ಸಾಧ್ಯ, ಬಸಿದು ಕೊಳ್ಳುವುದು ಪಶುವಿನ ಹಾದಿ, ಕಾಡು ಪಶು ಅದನ್ನು ಮಾಡುವುದಿಲ್ಲ, ಸುವುದು ಎತ್ತರದ ದಾರಿ. (72 ತಂದೆ–ಮಗಳು 2004) ಹೀಗೆ ಹೇಳುವ ಸತ್ಯಕಾಮರು ತ್ರದ ಕೊನೆಯ 'ಮ'ಕಾರ ಅದನ್ನೇ ತಿಂದುಂಡ ನನ್ನನ್ನೇ ಕಾಡಲಿಲ್ಲ ಅಲ್ಲದೇ ಕಾಡಿದರೂ ು ಈ ಕಿಚ್ಚನ್ನು ಸೆರಗಿನಲ್ಲಿ ಕಟ್ಟಿಕೊಂಡು ನಿರಾತಂಕನಾಗಿ ಇದ್ದೇನೆಂದು ನಿಮ್ಮ ಮುಂದೆ ುಡೆ ಉರುಳಿಸಲೂ ಇಲ್ಲ... ಬದುಕಿನಲ್ಲಿ ನಿರ್ಲಿಂಗ ಅನುಭವ ಸುಖ, ಹಿಗ್ಗು ಸಾಧ್ಯವಿದೆ. ನೆಯ 'ಮ' ಬಗ್ಗೆ ಯಾಕೆ ತಲೆನೋವು? ಒಂದು ಕ್ಷಣ ಲಿಂಗದೊಳಗಿಂದ ದೂರಹೋಗಿ ದೇ ಅದನ್ನು ಬದಿಗಿರಿಸಿ ಮುಂದೆ ಹೋಗಿ ಗೊತ್ತಾಗುತ್ತದೆ. ಹಾಗೆ ಹೋಗಲು ಸಾಧ್ಯವಿಲ್ಲ ುವವರು ಬದುಕನ್ನು ಒಂದು ಮಹತ್ವದ ಭಾಗವನ್ನೇ ಮರೆಯುತ್ತಾರೆ.. ಬದುಕು ತುಂಬ ಡ್ಡದಿದೆ ನಿರ್ಲಿಂಗ ಬದುಕಿನ ನೆಲಕ್ಕೆ ಬನ್ನಿ ಅದು ನಿರ್ಭೀತರೆಲ್ಲರಿಗೂ ಸ್ವಾಗತ ಬೀರುವ ... ಲಿಂಗದ ಕಣಕಣಗಳೂ ಪುಡಿಯಾದರೆ ಅದು ಒಂದು ಜಗತ್ತು ಅದರ ರೀತಿಯನ್ನು ನ್ನು ಮಾಡಿಯೇ ಅರಿಯಬೇಕು'. (75 ತಂದೆ–ಮಗಳು 2004).

ಹೀಗೆ ನಿರ್ಲಿಂಗ ಅನುಭವವನ್ನು ಕಾಮಮುಖೇನ ಸಾಧಿಸಬಹುದು ಎನ್ನುವ ಾಮರು ಇಂಥ ಹೆಣ್ಣಿನಲ್ಲಿ ಕಂಡದ್ದು ತಾಯ್ತನವನ್ನು ಮಾತ್ರ. 'ನನ್ನ ಕೆನ್ನೆಯ ಮೇಲೆ ನಿನ್ನ ಇಡುವಾಗ ನೀನು ತಾಯಿ ಮಾತ್ರ. ನಿಜವಾದ ತಾಯಿ ಹೆಣ್ಣು ಅಲ್ಲ. ಹೆಣ್ಣನ್ನು ಸುವವನಿಗೆ ತಾಯ್ತನದ ಅನುಭವ ಬರಲು ಸಾಧ್ಯವೂ ಇಲ್ಲ'. (90 ತಂದೆ–ಮಗಳು 2004)

ಇಂತಹ ಒಂದು ಸ್ಥಿತಿ ಸಾಧ್ಯವಾಗುವುದು ಪ್ರೇಮದಿಂದ ಮಾತ್ರ. 'ಪ್ರೀತಿ ನಿರ್ಭಯತೆಯ ಸ್ವಾತಂತ್ರ್ಯದ ಆಲಂಬನ. ನೀವು ನಿರ್ಭಯರಾಗಿದ್ದರೆ ನಿಮ್ಮಲ್ಲಿ ಪ್ರೀತಿ ಇರುತ್ತದೆ, ತ್ರರಾಗಿದ್ದರೆ ಅದು ಬೆಳೆಯುತ್ತದೆ. ಭಯ ಪಡುವವನು, ಪಡಿಸುವವನೂ ಪ್ರೀತಿಯನ್ನು ಭವಿಸಲಾರ. ಒಬ್ಬನನ್ನು, ಎಲ್ಲರನ್ನು ಪ್ರೀತಿಸಲು ನಿಮಗೆ ಬಾರದಿದ್ದರೆ ನಿಮ್ಮನ್ನಾದರು ಿರಿ. ಅದೂ ಬರದಿದ್ದರೆ ನಿಮಗೆ ಬದುಕುವ ಅರ್ಹತೆಯೇ ಇಲ್ಲ... ಅಂಜಿಕೆ ಇದ್ದವನಿಗೆ ಎಲ್ಲಿರಬೇಕು ? ಯಾವ ದಾರಿಯಿಂದಲೂ, ಯಾರನ್ನಾದರೂ ಸಾಧ್ಯವಿದ್ದರೆ ಎಲ್ಲವನ್ನು ಿರಿ. ನೀವು ದೇವರನ್ನು ನಂಬಿರಿ, ಬಿಡಿರಿ, ನಿಮ್ಮನ್ನಾದರು ನಂಬಿ ನಡೆಯಿರಿ. –೨೯ ತಂತ್ರಯೋನಿ ೨೦೦೮)

ಶಿವ ಹಾಗು ಪ್ರೀತಿಯನ್ನು ಎರಡೆಂದು ತಿಳಿಯುವವರು ತಿಳಿವಿಗೆ, ಸುಖಕ್ಕೆ ಎರಡು ಯುವವರು. (೪೦ ತಂತ್ರಯೋನಿ ೨೦೦೮) ಹೀಗೆ ಸತ್ಯಕಾಮರು ಕಾಮ, ಪ್ರೇಮ ಮತ್ತು ಯನ್ನು ಕುರಿತಾದ ಕೆಲವು ನಿಖರ ಅಭಿಪ್ರಾಯಗಳನ್ನು ಉಳ್ಳವರಾಗಿದ್ದು ಹಾಗೆಯೇ

ುಕಿದ್ದಾರೆ. ಪ್ರೀತಿ ದೇವರು ಎಂದವ ಏಸು. ಈ ಮಾತು ತಂತ್ರದ ಪ್ರಭಾವದಿಂದಲೇ ುವಿನಲ್ಲೂ ಹುಟ್ಟಿತು. ಬುದ್ಧನ ಕಾಲಕ್ಕೆ ಏಸು ಭಾರತಕ್ಕೂ ಬಂದಿದ್ದ ಎಂಬ ಮಾತನ್ನು ನೀಶ್ ಹೇಳುತ್ತಾನೆ. 'ಪ್ರೀತಿಯಿಂದ ಸಾವನ್ನು ಗೆಲ್ಲಬಹುದು, ಪ್ರೀತಿ ದೇವರು ಎಂದ ಮೇಲೆ ವು ಹೇಗೆ ಸಾಧ್ಯ' ಎನ್ನುವ ಮಾತನ್ನು ಹೇಳುವ ಸತ್ಯಕಾಮರು ಸತೀ ಸಾವಿತ್ರಿಯ ದಾಹರಣೆಯನ್ನು ಇದಕ್ಕೆ ಸಾಕ್ಷಿಯಾಗಿ ಕೊಡುತ್ತಾರೆ. ಹಾಗೆಯೇ 'ಪ್ರೀತಿಯಲ್ಲಿ ಲೈಂಗಿಕತೆ ಲೇಬೇಕೆಂದು ಇಲ್ಲ, ಅತೀ ಲಾವಣ್ಯದ ರಹಸ್ಯಗಳಲ್ಲಿ ನಾವು ಕಾಮಾತ್ಮಕತೆಯನ್ನು ದಾಟಬೇಕು, ಹ್ಮಚರ್ಯೆಯೇ ಪ್ರೀತಿಗೆ ಇರಬೇಕಾದ ಅರ್ಹತೆ ಇಲ್ಲ, ಮೈಥುನವೂ ಪ್ರೇಮ ಸಾಧನೆಯೇ. ಆದರೆ ರ್ಪಣೆ ಅದರ ಮುಖ್ಯ ಅನಿವಾರ್ಯತೆ. ಕೃಷ್ಣನಂತಹ ಕಾಮವನ್ನೇ ಸ್ವರ್ಗದ್ವಾರ ಮಾಡಿ ುಕನ್ನು ವಿಜೃಂಭಿಸಿದ ಇನ್ನಾರಿದ್ದಾರೆ' ಎಂಬ ಮಾತುಗಳನ್ನು ಸತ್ಯಕಾಮರು ತಂತ್ರಯೋನಿಯಲ್ಲಿ ರೆ ಬೇರೆ ಕಡೆ ಉಲ್ಲೇಖಿಸಿದ್ದಾರೆ.

ದೇವರಿಲ್ಲದಿದ್ದರೂ ನಡೆಯಬಹುದು, ಪ್ರೇಮವಿಲ್ಲದೆ ನಡೆ ಸಾಧ್ಯವೇ ಇಲ್ಲ. ಈ ಮಾತಿಗೆ ವರನ್ನೂ ಪ್ರೀತಿ ಬಿಟ್ಟಿಲ್ಲ ಎಂಬ ಪೂರಕ ಮಾತನ್ನು ಹೇಳುತ್ತಾ ಬ್ರಹ್ಮನಿಂದ ತೊಡಗಿ ಹಲವು ಾಣ ಪುರುಷರ ಹೆಸರನ್ನು ಪಟ್ಟಿಮಾಡಿ ದೇವರನ್ನೂ ಪ್ರೇಮ ಬಿಟ್ಟಿಲ್ಲ ಎಂದು ಸಾಬೀತು ಡುತ್ತಾರೆ. ಕಾಮ ಮನಸಿಜ ಎಂದ ಮೇಲೆ ಅದಕ್ಕೆ ಕೇವಲ ದೇಹದ ಜೊತೆಗೆ ಕೆಲಸವಲ್ಲ ಬಂತಹ ಅದ್ಭುತ ಹೊಳಹುಗಳನ್ನು ತಂತ್ರಯೋನಿಯಲ್ಲಿ ನೀಡಿದ್ದಾರೆ. ಈ ಲೋಕದಲ್ಲಿ ುದರ್ಯ ಇರುವುದು ಕಾಮದಿಂದಾಗಿ, ಪ್ರೀತಿ-ಪ್ರೇಮ ಇರುವುದು ಕಾಮದಿಂದಾಗಿಯೇ ಎಂಬ ರ್ಶನಗಳನ್ನು ಹೇಳಿದ್ದಾರೆ. ಪ್ರೇಮ ತುಂಬ ಒಳ್ಳೆಯ ವಸ್ತು. ಆದರೆ ಅದು ಹೂವಾಗಿರುವಂತೆ ವು ಆಗಿದೆ. ಬದುಕಿನಲ್ಲಿ ಪ್ರೇಮವಿಲ್ಲದೆ ಹೋದರೆ ಅದು ವಿಷಮಯ, ಪ್ರೇಮವಿಹೀನ ಬಾಳು ರಣಾಧೀನ. ಪ್ರೇಮಿಸಿ ಬದುಕಿರಿ ಮೈತುಂಬ ಕಣ್ಣಿರಲಿ ಎಂಬ ಎಚ್ಚರಿಕೆಯನ್ನೂ ಹೇಳಿದ್ದಾರೆ. ಲ್ಲದೆ 'ಪ್ರೇಮ' ಎಂಬ ಎರಡು ಅಕ್ಷರಗಳು ಎರಡು ತುಟಿಗಳನ್ನು ಕೂಡಿಸಿಯೇ ಚ್ಚರಿಸುವುದರಿಂದ ಅದು ಪರಸ್ಪರ ಕೂಡುವುದನ್ನೇ ಹೇಳುತ್ತದೆ ಎಂಬ ಶೃಂಗಾರ ವಾಕ್ಯಗಳನ್ನು ುಸುತ್ತಾರೆ. ಹೀಗೆ ಬದುಕಿನ ಅತ್ಯಂತ ಸಾರಯುತವಾಗಿ ಕಾಮ ಪ್ರೇಮಗಳನ್ನು ಅದ್ಭುತ ುಂದ ನೋಡುವ ಸತ್ಯಕಾಮರು ಅತ್ಯಂತ ಆಧುನಿಕ ಮನೋಧರ್ಮದವರು ಎಂಬಷ್ಟು ಹೊಸ ಂರಧಾರೆ ಉಳ್ಳವರಾಗಿದ್ದಾರೆ. ಅವರಿಗೆ ಹೆಣ್ಣು ತಾಯಿಯೆಂಬುದನ್ನು ಹೇಳುವಷ್ಟಕ್ಕೆ ಅವರ ಪ್ರಾಯ ಮುಗಿಯುವುದಿಲ್ಲ. ಶಾಸ್ತ್ರೀಯ ಮಡಿವಂತಿಕೆಗಳನ್ನು ಅವರು ಸಾರಾಸಗಟಾಗಿ ಕರಿಸುತ್ತಾರೆ. 'ಹೆಂಗಸರ ವಿಷಯದಲ್ಲಿ ನಮ್ಮ ಶಾಸ್ತ್ರಗಳು ಕಾಷ್ಠ ಮೌನ ವಹಿಸಿವೆ. ಬ್ರಹ್ಮಚರ್ಯ ುಷ್ಯಾಶಿಗೆ ಮಾತ್ರ ವಿಧಿಸಿದ ಶಾಸನದಂತೆ ಕಾಣುತ್ತದೆ. (೧೮೨ ತಂತ್ರಯೋನಿ ೨೦೦೮)

ಎಂಬವರೆಗೆ ತರಾಟೆಗೂ ತೆಗೆದುಕೊಳ್ಳುತ್ತಾರೆ. ಹೆಣ್ಣು ಬ್ರಹ್ಮಚಾರಿ ತಾಯಿಯಾಗುವ ಅರ್ಹತೆಗಳು ಅವಳಿಗೆ ಇವೆ ಎಂಬ ಸೂಚನೆ ಈ ಮಾತಿನಲ್ಲಿ ಇದೆ.

ಹೀಗೆ ರಜನೀಶ್ ಮತ್ತು ಸತ್ಯಕಾಮರ ಅಭಿಪ್ರಾಯಗಳನ್ನು ಗಮನಿಸಿದರೆ ಕಾಮ, ಸ್ತ್ರೀ, ಪ್ರೇಮ ಒಂದಕ್ಕೊಂದು ಪೂರಕವಾಗಿ ತಂತ್ರಪಥದ ಅನಿವಾರ್ಯ ಅಗತ್ಯಗಳೆಂದೇ ಇಬ್ಬರೂ ಭಾವಿಸಿದ್ದು ಸ್ಪಷ್ಟವಿದೆ. ಸ್ವತಃ ತಮ್ಮ ಬದುಕಿನಲ್ಲಿಯೂ ಹಾಗೆಯೇ ನಡೆದಿದ್ದಾರೆ. ವೈಶಾಲಿಯ ಜೊತೆಗೆ ಕಾಡು–ಮೇಡುಗಳಲ್ಲಿ ಬೆತ್ತಲೆ ಅಲೆದ ಸತ್ಯಕಾಮರು ಆ ಅನುಭವಗಳನ್ನು ಯಥಾವತ್ತಾಗಿ ಪಂಚ'ಮ'ಗಳ ನಡುವೆ ಕೃತಿಯಲ್ಲಿ ನಿರೂಪಿಸಿದ್ದಾರೆ. ತಾಯ್ತನವನ್ನು ಅನುಭವಿಸಿದ ಎಲ್ಲ ಸ್ತ್ರೀ ವಿವರಗಳು ಮತ್ತು ಅವರ ಪ್ರೇಮ ನಡೆಯ ವಿವರಗಳು ನಮಗೆ ಲಭ್ಯವಿದೆ. ರಜನೀಶ್ ಕೂಡ ಪ್ರೇಮ್ ಅನ್ನುವವಳನ್ನು ಮಾ ಎಂದೇ ಭಾವಿಸಿದ್ದು ಕೊನೆಯವರೆಗೂ ಅವಳು ತಾಯಿಯ ಹಾಗೆ ಅವನನ್ನು ನೋಡಿಕೊಂಡ ವಿವರಗಳು ಡೈಮೆಂಡ್ ಡೇಸ್ ವಿತ್ ಓಶೊ ಕೃತಿಯಲ್ಲಿ ವಿಸ್ತೃತವಾಗಿದೆ. ಅಲ್ಲದೆ ತನ್ನ ಪಥದ ಪೂರ್ಣ ಅವಧಿ ರಜನೀಶ್ ಅನೇಕ ಸ್ತ್ರೀಯರ ಬೆಳವಣಿಗೆಗಾಗಿ ಅವರನ್ನು ಮಾರ್ಗದರ್ಶನ ನೀಡಿ ಬೆಳೆಸಿದ್ದಾನೆ.

ರಜನೀಶ್ ಮತ್ತು ಸತ್ಯಕಾಮರಿಬ್ಬರೂ ತಂತ್ರದ ಭುಕ್ತಿ ಮತ್ತು ಮುಕ್ತಿ ಒಂದೇ ಎಂಬ ಮಾತಿಗೆ ಉದಾಹರಣೆಯ ಹಾಗೆ ಬದುಕಿದವರು. ಯಾವ ಭಯ ಮತ್ತು ಅಧೀರತೆ ಅವರ ನಡೆ–ನುಡಿಯಲ್ಲಿ ನಮಗೆ ಕಾಣಿಸುವುದಿಲ್ಲ. ಹಲವು ಬಾರಿ ಹೇಳುವುದು ಸುಲಭ ಮಾಡುವುದು ಕಷ್ಟ ಎಂಬ ಪ್ರಶ್ನೆಯಂತೂ ಇದ್ದೇ ಇರುತ್ತದೆ. ಇಂತಹ ಪ್ರಶ್ನೆಯನ್ನು ನಾವು ಈ ಇಬ್ಬರ ಬಗ್ಗೆಯೂ ಹೇಳಿಕೊಳ್ಳಬೇಕಾಗಿದೆ. ಇಂತಹದೊಂದು ಕಾಮವನ್ನು, ಪ್ರೇಮಾನುಭವವನ್ನು ಅಥವಾ ತಾಯ್ತನವನ್ನು ಇವರಿಂದ ಬೇರೆ ಯಾರಾದರು ಅನುಭವಿಸಿದ್ದಾರೆಯೇ ಎಂಬುದು ಪ್ರಶ್ನೆ. ಅದನ್ನು ಆಯಾಕಾಲದ ಅವರ ಜೊತೆಗೆ ನಡೆದ ಅನುಯಾಯಿಗಳಿಂದಲೇ ತಿಳಿದುಕೊಳ್ಳಬೇಕು. ವೈಯಕ್ತಿವಾಗಿ ಆ ರೀತಿಯ ಬದುಕನ್ನು ಅವರ ಜೊತೆ ಬದುಕಿದಾಗ ಅಂತಹದೊಂದು ಸಂವೇದನೆ ಸಾಧ್ಯ ಎಂಬವರೆಗೆ ನಾನು ನುಡಿಯಬಹುದೇ ಹೊರತು ಪ್ರಾತ್ಯಕ್ಷಿಕೆ ಪ್ರಯೋಗಕ್ಕೆ ಕಾಲ ಬೇಕು ಎಂಬ ಅಥವಾ ಅದು ಅಂತಹದೇ ಹಂಬಲದ ಜೊತೆಗೆ ಮಾತ್ರ ಸಾಧ್ಯ ಎನ್ನಬೇಕಾಗುತ್ತದೆ. ಅದನ್ನು ಹಾರಿಕೆಯ ಅಥವಾ ಪಲಾಯನದ ಉತ್ತರ ಎಂದು ಭಾವಿಸಿದರೂ ಅಚ್ಚರಿಯಿಲ್ಲ. ಒಂದು ದೃಷ್ಟಿಯಿಂದ ಸತ್ಯಕಾಮರ ಮತ್ತು ರಜನೀಶರ ಈ ಅಭಿಪ್ರಾಯಗಳು ತುಂಬ ವೈಯಕ್ತಿಕ ಅನುಭವಕ್ಕೇ ದಕ್ಕುವವುಗಳು. ಅದಕ್ಕೆ ರಜನೀಶ್‌ನ ಮುಕ್ತಕಾಮ ಎಲ್ಲರಿಗೂ ಅರ್ಥವಾಗಲಿಲ್ಲ ಎಂಬ ಅಪವಾದಕ್ಕೆ ಅವನು ಒಳಗಾದ. ತನಗಿಂತ ಕಿರಿಯರನ್ನು,

ಅಪರಿಚಿತರನ್ನು, ಸಂಬಂಧವಿಲ್ಲದವರಲ್ಲಿ ತಾಯ್ತನ ಕಂಡಾಗ ಅವರ ಪಾದಕ್ಕೆ ನಮಿಸಿ ಸತ್ಯಕಾಮರೂ ಅವೇಕ ಬಾರಿ ಅಪಾರ್ಥಕ್ಕೆ, ಅಪವಾದಕ್ಕೆ ಒಳಗಾಗಿದ್ದಾರೆ. ಇದನ್ನು ತುಂಬ ಸೂಕ್ಷ್ಮ ವಿಚಾರ ಎಂಬ ಹಿನ್ನೆಲೆಯಲ್ಲಿ ಪರಿಭಾವಿಸಬೇಕೇ ಹೊರತು ಸಾರ್ವಜನಿಕ ಅಭಿಪ್ರಾಯವಾಗಿ ಪರಿಗಣಿಸಬಾರದು.

ಹಾಗೆ ನೋಡಿದರೆ ರಜನೀಶ ಹೇಳುವ ಮುಕ್ತ ಕಾಮ ಮತ್ತು ಅವನು ಹೇಳುವ ಸಂಭೋಗ, ಪ್ರೇಮ ಕೂಡ ಸಲೀಸಾಗಿ ಒಂದು ಆಕರ್ಷಣೆಯಾಗಿ ಬಿಡಬಹುದು. ಆದರೆ ಅದು ರಜನೀಶನ ಉದ್ದೇಶವಲ್ಲ ಎಂದು ಹೇಳಿಬಿಟ್ಟರೆ ಆಧಾರ ಸಹಿತ ಸಾಧಿಸಿ ತೋರಿಸಿ ಎನ್ನಬಹುದು.

ಒಂದು ಮಾತಂತೂ ಸತ್ಯ ಆ ಕರೆಯ ಹಿಂದೆ ರಜನೀಶ್‌ನಿಗೆ ಮುಕ್ತ ಕಾಮ ನಡೆಸುವ ಉದ್ದೇಶವೇ ಇದ್ದರೆ ಅದನ್ನು ಅವನು ಗುಟ್ಟಾಗಿ ಮಾಡುತ್ತಿದ್ದ. ಮುಕ್ತ ಕಾಮ ಬೇಕೆಂದು ಹಂಬಲಿಸುವ ಎಷ್ಟು ಜನರಿಗೆ ಅದಕ್ಕಾಗಿ ಒಂದು ವೇದಿಕೆಯ ಮೇಲೆ ನಿಂತು ಕರೆ ಕೊಡುವ ಎದೆಗಾರಿಕೆ ಇದೆ? ಅದು ಕಾಮವಲ್ಲ ಆ ಮೂಲಕ ತಾನು ಬೇರೇನನ್ನೋ ನಡೆಸುವವನಿದ್ದೇನೆ ಎಂಬ ಭರವಸೆವುಳ್ಳವವನು ಮಾತ್ರ ಹಾಗೆ ಮಾಡಬಲ್ಲ. ಆದ್ದರಿಂದಲೇ ರಜನೀಶನ ಪಥದಲ್ಲಿ ಅಂತಹ ಒಳಸಂಚು, ಮೋಸಗಳನ್ನು ಬಗೆಯುವುದು ಸರಿಯಲ್ಲ. ಇಷ್ಟಾಗಿಯೂ ಅವನು ಅಪಾರ್ಥಕ್ಕೆ ಒಳಗಾಗಿದ್ದರೆ ಅದೇನು ಆಶ್ಚರ್ಯವಲ್ಲ. ಅಂತಹ ಏಸುಕ್ರಿಸ್ತನನ್ನೇ ಅಪವಾದಕ್ಕೆ ಒಳಗಾಗಿಸಿ ಶಿಲುಬೆಗೆ ಏರಿಸಿದರೆಂದ ಮೇಲೆ ಇವನನ್ನು ತಪ್ಪಾಗಿ ಭಾವಿಸುವುದು ಸಹಜವೇ ಇದೆ. ಹಾಗೆ ನೋಡಿದರೆ ಏಸುವು ರಜನೀಶನಂತಹ 'ಅಸಾಮಾಜಿಕ' ಮತ್ತು 'ಅನೈತಿಕ' ಮಾತುಗಳನ್ನೇನು ಹೇಳಿರಲಿಲ್ಲ. ತಾನು ದೇವರ ದೂತನೆಂದದ್ದಕ್ಕೇ ಆ ಶಿಕ್ಷೆ ಆಗಬಹುದಾದರೆ ರಜನೀಶ ರಹಸ್ಯವಾಗಿ ಮಾಡಬೇಕಾದ ಕಾಮ ಮುಖೇನ ದೇವರನ್ನು ತೋರಿಸುತ್ತೇನೆ ಎಂದದ್ದು ಸಮಾಜಕ್ಕೆ ಅಜೀರ್ಣವಾದದ್ದು ಸಹಜವೇ ಇದೆ.

ಸತ್ಯಕಾಮರು ಈ ಪಥವನ್ನು ತನ್ನಷ್ಟಕ್ಕೆ ಅಂತರಂಗದಲ್ಲಿ ನಡೆದವರು. ಅವರು ಇದನ್ನು ಬಹಿರಂಗವಾಗಿ ಪ್ರತಿಪಾದಿಸಲಿಲ್ಲ ಎಂಬುದನ್ನು ಬಿಟ್ಟರೆ ಇಬ್ಬರದೂ ಒಂದೇ ಚಿಂತನಾಲಹರಿ. ಸತ್ಯಕಾಮರ ಅಂತರಂಗದ ವಲಯದಲ್ಲೂ ಅವರ ಬಗ್ಗೆ ಇಂತಹದೇ ಗುಮಾನಿ, ನಿಷೇಧ, ಅಸಹನೀಯ ಭಾವಗಳಿದ್ದವು. ಅವರನ್ನು ಹಲವು ಅಪವಾದಗಳು, ಲೇವಡಿಗಳು ಬೆನ್ನುಹತ್ತಿವೆ. ಹೆಣ್ಣಿನ ಮೋಹದಿಂದ ವಶೀಕರಣ ವಿದ್ಯೆಯನ್ನು ಕಲಿತ ತಂತ್ರಗಾರ ಎಂದೇ ಹಲವರು ಟೀಕಿಸಿದ್ದುಂಟು. ಅವರ ಪ್ರಭಾವಲಯ ತುಂಬ ಸಣ್ಣ ಮಟ್ಟದಲ್ಲಿ ಇದ್ದುದರಿಂದ ಅದು ಕೇವಲ ಚಿಕ್ಕ ಚರ್ಚೆಯಲ್ಲಿಯೇ ಮುಗಿದಿದೆ. ಈ ಹಿನ್ನೆಲೆಯಲ್ಲಿ ಇಬ್ಬರು ಸರಿಸಮಾನ ತಂತ್ರ ಗುರುಗಳು.

ರಜನೀಶ್ ಒಬ್ಬ ಬಹಿರಂಗ ಸತ್ಯಕಾಮರಾದರೆ, ಸತ್ಯಕಾಮರು ಒಬ್ಬ ಅಂತರಂಗ ರಜನೀಶ್ ಎನ್ನಲು ಅಡ್ಡಿಯಿಲ್ಲ.

ತಂತ್ರಪಥದ ಈ ಕಾಮ, ಪ್ರೇಮ ಮತ್ತು ಅದರ ಸಂಭೋಗದ ಸರ್ಕಸ್ ಬೇಕೇ? ಹಾಗೆ ನೋಡಿದರೆ ಏನೂ ಮಾಡದೆ ಎಲ್ಲವೂ ಸಂಭವಿಸುವ ಮಾರ್ಗವಂತೂ ಇದ್ದೇ ಇದೆ. ಇವಿಲ್ಲದೆಯೂ ನಡೆ ಸಾಧ್ಯ. ಅನೇಕರಿಗೆ ಇಷ್ಟೆಲ್ಲಾ ಗೊಂದಲಗಳ ಜೊತೆ ಹುಚ್ಚು ಹಿಡಿಯಲಿಕ್ಕಿಲ್ಲವೇ ಎಂಬ ಪ್ರಶ್ನೆ ಕೂಡ ಕಾಡಬಹುದು. ಹೌದು, ತುಂಬ ತನ್ನನ್ನು ಒಪ್ಪಿಸಿ, ಈಡಾಡಿ, ಅರ್ಪಿಸಿಕೊಳ್ಳುವ ಮನೋಭಾವದವರಿಗೆ ಮಾತ್ರ ಈ ಎಲ್ಲ ರೀತಿಯ ಗುದ್ದಾಟ, ಕೆಸರಾಟಗಳು ಬೇಕು. ಇದಲ್ಲದೆ ಒಂದು ಪ್ರಾರ್ಥನೆಯಿಂದ ಎಲ್ಲವೂ ಸಾಧ್ಯ ಎಂಬ ಮಾತನ್ನು ರಜನೀಶನೇ ಹೇಳಿದ್ದಾನೆ. ಒಂದು ಪ್ರಾರ್ಥನೆ ಎಷ್ಟು ಕಠಿಣ ಎನ್ನುವುದು ಬೇರೆಯೇ ಮಾತು. ಹಾಗೆ ನೋಡಿದರೆ ಯಾವುದೂ ಸುಲಭವಲ್ಲ, ಸರಳವಲ್ಲ ಎನ್ನುವುದು ನಡೆಮುಗಿಸಿದವರೆಲ್ಲರ ಅನುಭವ.

ಹೆಣ್ಣನ್ನು ತಂತ್ರಪಥ ಸ್ವೀಕರಿಸಿತು ನಿಜ. ಆದರೆ ಅವಳನ್ನು ತಾಯಿಯಾಗಿ ಕಾಣುವುದು ಹೇಗೆ ಎನ್ನುವ ಪ್ರಶ್ನೆಗಿಂತಲೂ ಅದು ಅಸಮಂಜಸ ಎಂದು ಅನೇಕರಿಗೆ ಅನಿಸಬಹುದು. ನಮ್ಮ ಸ್ತ್ರೀವಾದಿ ನೆಲೆಗಳೆಲ್ಲ ಇಂತಹ ಮೂಲದಿಂದಲೇ ವಾದಕ್ಕೆ ತೊಡಗುವುದರಿಂದ ಇದು ಮತ್ತೆ ಹಳೆ ಪರಂಪರೆಯ ಪುನರಾವರ್ತನೆ ಎಂದು ಮೂಗು ಮುರಿಯಬಹುದು.

ಹೆಣ್ಣು ಹೆರುವುದೇ ತಾಯ್ತನ ಎಂಬುದಕ್ಕೆ ಸಾಕಷ್ಟು ವಿರೋಧವಿದೆ. ಹೆರುವುದನ್ನು ಕಡ್ಡಾಯ ಮಾಡದೇ, ಮದುವೆ ಇಲ್ಲದೆ ಅವಳ ಆಯ್ಕೆಯ ಮೂಲಕ ಹೆತ್ತು ತಾಯಿಯಾಗುವ ಒಂದು ಕ್ರಮವೂ ಕ್ರಾಂತಿಕಾರಕ ಸ್ತ್ರೀಯರಲ್ಲಿ ಇದೆ. ಇದಲ್ಲದೆ ದತ್ತುಮಕ್ಕಳನ್ನು ಪಡೆದು ತಾಯಿಯೆನಿಸಿಕೊಂಡವರೂ ಇದ್ದಾರೆ. ತಂತ್ರಮಾರ್ಗವು ಹೇಳುವ ತಾಯ್ತನ ಈ ಮೂರೂ ಅಲ್ಲ. ಇಲ್ಲಿ ಪ್ರೇಮದಿಂದ. ತಾಯಿಯ ಸೃಷ್ಟಿ. ಮಗು ಅವಳ ಹೃದಯ ಗರ್ಭದಲ್ಲಿ ಹುಟ್ಟುತ್ತದೆ. ಹಾಗಾಗಿ ಆ ಮಗುವಿಗೆ ಔರಸ ಎಂದು ಹೆಸರು. (ಉರಸ್ ಅಂದರೆ ಎದೆ ಅಥವಾ ಹೃದಯ, ಆ ಹೃದಯಕ್ಕೆ ಹುಟ್ಟಿದ ಮಗು–ಔರಸ)

ಒಂದು ಗಂಡು ತನ್ನ ಪರಿಪೂರ್ಣತೆಯನ್ನು ಕಾಣುವುದು ತಾನು ಮತ್ತೆ ಮಗುವಾಗುವುದರಲ್ಲಿ. ಹೆಣ್ಣು ಪರಿಪೂರ್ಣತೆಯನ್ನು ಕಾಣುವುದು ಅವಳು ತಾಯಿಯಾಗುವುದರಲ್ಲಿ. (ಇದನ್ನು ಜೈವಿಕ ಅರ್ಥದಲ್ಲಿ ಪರಿಭಾವಿಸಬಾರದು) ಅಂದರೆ ಹೆಣ್ಣಿಗೆ ತಾನು ಲಿಂಗ ಕಳೆದುಹೋಗುವ ಸ್ಥಿತಿ ಅವಳ ತಾಯ್ತನದಲ್ಲಿ ಮಾತ್ರ ಸಂಭವಿಸುತ್ತದೆ. ಮಗುವಿಗೆ

ಮೊಲೆಯೂಡುವ ಹೊತ್ತಿಗೂ ಫ್ರಾಯ್ಡ್ ಲಿಂಗಲೇಪದ ಹೊಲೆ ಹಚ್ಚಿದ್ದಾನೆ. ಆದರೆ ಹೆಣ್ಣಿಗೆ ಗಂಡ ಮೊಲೆತಿನ್ನುವ ಮತ್ತು ಮಗು ಹಾಲು ಉಣ್ಣುವ ಸಂಗತಿಗಳು ಒಂದೇ ಅಲ್ಲ. ಅವಳು ಗಂಡ ಮೊಲೆಯುಣ್ಣುವ ಹೊತ್ತಿಗೆ ಹೆಣ್ಣು ಮಗು ಹಾಲು ಕುಡಿಯುವ ಹೊತ್ತಿಗೆ ತಾಯಿ. ಮೊದಲನೆಯದರಲ್ಲಿ ಅವಳಿಗೆ ದೇಹಾನಂದವಿದೆ ಎರಡನೆಯದರಲ್ಲಿ ಜೀವಾನಂದವಿದೆ. ಈ ಆನಂದ ಭೇದದ ಅರ್ಥವಾದರೆ ಮಾತ್ರ ಹೆಣ್ಣು ಮತ್ತು ತಾಯಿಯ ಭೇದ ಅರ್ಥವಾದೀತು. ಗಂಡು ಕೂಡ ಹಾಗೆ ಹೆಣ್ಣನ್ನು ದೈಹಿಕವಾಗಿ ಅನುಭವಿಸುವಾಗ ಪಡುವ ದೇಹಾನಂದವೇ ಬೇರೆ ಅವನು ತಾಯಿಯ ಜೊತೆಗೆ ಮಗುವಾಗಿ ಪಡೆವ ಜೀವಾನಂದವೇ ಬೇರೆ.

ಜೀವವೊಂದು ಅದರ ಮುಕ್ತಸ್ಥಿತಿಯನ್ನು ತಲುಪಬೇಕಾದರೆ ಅತ್ಯಂತ ಪ್ರಾಥಮಿಕ ಹಂತ ಅದರ ದೇಹದ ಲಿಂಗಭಾವವನ್ನು ಕಳಚುವುದು. ಹಾಗೆ ಕಳಚಿದರೆ ಮಾತ್ರ ಜೀವ ಬೆಳವಣಿಗೆಯ ಕಡೆ ನಡೆಯಲು ಸಾಧ್ಯ. ಅಂತಹ ನಿರ್ಲಿಂಗ ಅವಸ್ಥೆಯೇ ತಂತ್ರಪಥದ ಅಥವಾ ಆಧ್ಯಾತ್ಮ ಮಾರ್ಗದ ಮುಖ್ಯ ಉದ್ದೇಶ. ಈ ಹಿನ್ನೆಲೆಯಲ್ಲಿ ಹೆಣ್ಣು ತಾಯಿಯಾಗಿ, ಗಂಡು ಮಗುವಾಗುವ ಬೆಳವಣಿಗೆ ಸಾಮಾನ್ಯ ಪ್ರಕ್ರಿಯೆಯಲ್ಲ. ಇಬ್ಬರೂ ನಿರ್ಲಿಂಗರಾಗಿ ಮತ್ತೆ ಹುಟ್ಟಿನ ಮೂಲಚಕ್ರಕ್ಕೆ ಮರಳುವುದು ಅತ್ಯಂತ ಶ್ರೇಷ್ಠ ನಡೆ. ಹಾಗಾಗಿ ತಂತ್ರ ಹೇಳುವ ಈ ತಾಯ್ತನ ಪ್ರತೀ ಜೀವಕ್ಕೆ ಸಂಭವಿಸಬೇಕಾದ ಗೌರವ. ಅದು ಮನು ಹೇಳುವ ಕಟ್ಟುಪಾಡಿನ ತಾಯ್ತನವಲ್ಲ ಮತ್ತು ಒತ್ತಾಯಕ್ಕೆ ಕಟ್ಟುಬಿದ್ದು ಮಗುವಾಗುವುದು ಅಲ್ಲ.

5. ಸ್ವಪ್ನಮಂಜರಿ, ಸ್ವಪ್ನಶಾಸ್ತ್ರದ ಕುರಿತು ಕೆಲವು ಹೊಳಹುಗಳು ಮತ್ತು ರಜನೀಶನ ಹಾಸ್ಯ ಪ್ರಸಂಗ ಹಾಗೂ ಕಥೆಗಳು

ತಂತ್ರ ಮನಸ್ಸಿನ ಮೇಲೆ ತುಂಬ ಪ್ರಯೋಗ ಮಾಡಿದ ಶಾಸ್ತ್ರ. ಅನೇಕ ಸಿದ್ಧಿಗಳಲ್ಲಿ ಮನೋವೇಗವನ್ನು ಸಾಧಿಸಿಕೊಳ್ಳುವುದು ಕೂಡ ಇದರ ಒಂದು ಸಾಧ್ಯತೆ. ಇಂತಹ ಮನಸ್ಸನ್ನು ಇಲ್ಲಿಂದ ಅಲ್ಲಿಗೆ ಕಳುಹಿಸುವ ಅಲ್ಲಿಂದ ಇಲ್ಲಿಗೆ ಕಳುಹಿಸುವ, ಇನ್ನೊಬ್ಬರನ್ನು ಓದುವ, ಅವರ ಮನದಲ್ಲಿರುವುದನ್ನು ತಿಳಿಯುವ ಹೀಗೆ ಬೇರೆ ಬೇರೆ ಸಾಧ್ಯತೆಗಳಿಗೆ ಸಲಕರಣೆಯಾಗಿ ಬಳಸುವ ಸಂಗತಿ ತಂತ್ರಪಥದಲ್ಲಿದೆ. ಒಂದು ದೃಷ್ಟಿಯಿಂದ ತಂತ್ರ ಮನಸ್ಸಿನ ಸಾಧ್ಯತೆಗೆ ವಿಶೇಷ ಗೌರವ ಕೊಡುತ್ತದೆ. ಆದ್ದರಿಂದಲೇ ಅದರ ಮೇಲಿನ ಪ್ರಯೋಗದ ಮೂಲಕ ಪ್ರಜ್ಞೆಯ ವಿಸ್ತಾರ ಪ್ರಯತ್ನವಿದೆ. ಈ ಮೇಲೆ ಹೇಳಿದ ಪ್ರಯೋಗಗಳು ಬಹುತೇಕ ನಾವು ಎಚ್ಚರವಿರುವಾಗ ಮಾತ್ರ ಮಾಡಬಹುದಾದ ಸಾಧ್ಯತೆ.

ಇದರ ಇನ್ನೊಂದು ವಿಶೇಷ ಸಂಗತಿ ಇದೆ. ಮನಸ್ಸು ಮತ್ತು ನಮ್ಮ ನಿದ್ರೆಯ ಸ್ಥಿತಿಯದು. ನಾವು ವಾಸ್ತವಿಕ ಎಚ್ಚರ ಇದ್ದಾಗ ನಮಗೆ ಮನಸ್ಸು ಕನಿಷ್ಠ ಅರಿವಿಗೆ ಬರುವ ಸಾಧ್ಯತೆ ಇದೆ. ಆದರೆ ನಿದ್ರೆಯಲ್ಲಿ ನಮಗೆ ನಾವೇ ಇದ್ದೇವೋ ಇಲ್ಲವೋ ಎಂಬ ಪರಿವೇ ಇರುವುದಿಲ್ಲ. ಇನ್ನು ಮನಸ್ಸನ್ನು ಯಾರು ನೋಡುವುದು?

ಆದರೆ ನಮಗೆ ಇದರೊಳಗಿನ ಇನ್ನೊಂದು ಸೂಕ್ಷ್ಮವೂ ಗೊತ್ತು-ಅದು ಕನಸು. ನಮಗೆ ಮನಸ್ಸು ಆಗ ಇದೆಯೋ ಇಲ್ಲವೋ ಗೊತ್ತಿಲ್ಲ ಕನಸ್ಸಂತೂ ಸರ್ವರ ಅನುಭವದಲ್ಲಿಯೂ ಇದೆ. ಹುಟ್ಟಿದ ಮರುದಿನದ ಮಗುವೇ ಬೆಚ್ಚಿಬಿದ್ದು ಎಚ್ಚರಾದರೆ ಏನೋ ಕನಸು ಬಿದ್ದಿರಬೇಕು ಎನ್ನುವುದು ರೂಢಿ. ಆಸಕ್ತಿಯ ವಿಷಯ ಎಂದರೆ ಈ ಕನಸು ಬೀಳುವುದಕ್ಕೆ ಒಂದು ಎಚ್ಚರವಿರುವ ಯಾವುದೋ ನಮ್ಮ ಪ್ರಜ್ಞಾವಲಯದ ಸಾಧನವೇ ಕಾರಣವಿರಬೇಕಲ್ಲವೆ? ಕನಸು ಹಾಗೆ ಅಜ್ಞಾತವಾಗಿ ಒಂದು ಮೂಲವಿಲ್ಲದೆ ಬಿದ್ದೀತು ಹೇಗೆ? ಅದನ್ನು ಅಷ್ಟು ಸುಂದರವಾಗಿ ಬಿಡಿಸಿ ದೃಶ್ಯಮಾಡಿ ಹೇಳುವ ಕಥೆಗಾರ ಇರಲೇಬೇಕು. ಅದನ್ನೇ ನಮ್ಮ ಪೂರ್ವಜರು ಮತ್ತು ಈಗಿನ ವಿಜ್ಞಾನ ಎರಡೂ ಮನಸ್ಸು ಎಂದು ಹೇಳಿದೆ. ಹಾಗಾಗಿ ಮನಸ್ಸು ಎಚ್ಚರದಲ್ಲಿ ಮಾತ್ರವಲ್ಲ ನಿದ್ದೆಯಲ್ಲೂ ತನ್ನ ಕೈಚಳಕವನ್ನು ತೋರಿಸುತ್ತಲೇ ಇರುತ್ತದೆ. ಹಾಗಾದರೆ ಹಗಲಿಗೂ-ರಾತ್ರಿಗೂ,

ಎಚ್ಚರ–ಕನಸಿಗೂ ವ್ಯತ್ಯಾಸ ಇಲ್ಲ ಎಂದಾಯಿತಲ್ಲ. ಹಾಗೆ ಹೇಳಲು ನಮ್ಮ ಅನುಭವ ಒಪ್ಪುವುದಿಲ್ಲ. ನಮ್ಮ ಪೂರ್ವಿಕರು ಅದರಲ್ಲಿರುವ ಭೇದವನ್ನು ತಿಳಿಸಿ ಹೇಳಿದರು.

ಹಗಲು ನಮ್ಮ ಮನಸ್ಸು ಕೆಲಸ ಮಾಡುತ್ತಿದೆ ನಿಜ. ಆದರೆ ಅದಕ್ಕೆ ಆಗ ಬುದ್ಧಿಯ ಸಂಸರ್ಗ ಇರುತ್ತದೆ. ಮನಸ್ಸು ಇಲ್ಲಿ ಬುದ್ಧಿಗೆ ಅನುಗುಣವಾಗಿ ಕೆಲಸ ಮಾಡುತ್ತದೆ. ಕೆಲವೊಮ್ಮೆ ಅಥವಾ ಬಹಳಬಾರಿ ಬುದ್ಧಿ ಮನಸ್ಸಿನ ಅಧೀನ ಆಗುವುದೂ ಉಂಟು ಆ ಮಾತು ಬೇರೆ. ಆದರೆ ರಾತ್ರಿ ಬುದ್ಧಿಗೆ ನಿದ್ರೆ. ನಾವು ನಿದ್ರಿಸಿದಾಗ ಬುದ್ಧಿಯೂ ಮಲಗುತ್ತದೆ. ಮನಸ್ಸು ಮಾತ್ರ ಎಚ್ಚರಿರುತ್ತದೆ. ಇಲ್ಲಿ ಅದಕ್ಕೆ ಬುದ್ಧಿಯ ಲವಲೇಶ ಸ್ಪರ್ಶ ಇರುವುದಿಲ್ಲ. ಆದ್ದರಿಂದಲೇ ಬಹುಶಃ ಕನಸುಗಳು ಅಷ್ಟು ಸುಂದರವೋ ಏನೊ. ಒಟ್ಟಿನಲ್ಲಿ ಮನಸ್ಸು ಆಗ ತುಂಬ ಸುಂದರ ಲೋಕವನ್ನು ಹಾಗೆಯೇ ಕೆಲವೊಮ್ಮೆ ಭಯಾನಕವನ್ನು, ದಿನಕ್ಕೊಂದು ರೀತಿಯ ಹೊಸ ಹೊಸ ಸಿನೆಮಾ ನೋಡಿದ ಅನುಭವವನ್ನು ಕಟ್ಟಿಕೊಡುವುದಂತೂ ಸತ್ಯ. ಇಂತಹ ಕನಸು ಕೂಡ ನಮ್ಮ ಪ್ರಜ್ಞಾವಲಯದ ಒಂದು ಲೋಕ. ಏಕೆಂದರೆ ಅದು ಅಮೂರ್ತದಿಂದ ಹುಟ್ಟಿದ್ದಲ್ಲ ಆದ್ದರಿಂದ ಅದು ಪ್ರಜ್ಞಾವಲಯದ ಮನಸ್ಸಿನ ಸುಪ್ತ ಅಭಿವ್ಯಕ್ತಿ ಅಥವಾ ಯಾವುದೋ ಅನುಭವದ ಪ್ರತಿಕ್ರಿಯೆ. ಹಾಗಾಗಿಯೇ ನಮ್ಮ ಆಧುನಿಕ ಮನೋವಿಜ್ಞಾನವು ಕನಸಿನ ಕುರಿತು ಅಧ್ಯಯನ ಮಾಡಿದೆ. ಮೂಲತಃ ಅಂಥಹ ಅಧ್ಯಯನ ಆರಂಭವಾದದ್ದು ಆಧುನಿಕ ಫ್ರಾಯ್ಡ್, ಯೂಂಗ್, ಅಡ್ಲರ್ ಇವರ ನಂತರ ಎಂಬ ತಿಳುವಳಿಕೆ ಸರ್ವೇಸಾಮಾನ್ಯವಾಗಿ ಇದೆ. ಇದನ್ನು ರಜನೀಶ್ ಕೂಡ ಹೇಳುತ್ತಾನೆ.

ಆದರೆ ಸತ್ಯಕಾಮರು ಇಲ್ಲಿ ಒಂದು ಹೊಸ ಹೊಳಹನ್ನು ನೀಡಿದ್ದಾರೆ. ಬಹುಶಃ ಅದು ಇದುವರೆಗೂ ಎಲ್ಲಿಯೂ ಚರ್ಚೆ ಆದಂತಿಲ್ಲ. ಅವರ ಪ್ರಕಾರ ಕಾಶ್ಮೀರದ ಅಭಿನವ ಗುಪ್ತ ತನ್ನ ಜೀವತಾವಧಿಯಲ್ಲಿ ಬರೆದ ಅನೇಕ ಪುಸ್ತಕಗಳಲ್ಲಿ ಒಂದು ಪುಸ್ತಕ ಸ್ವಪ್ನಮಂಜರಿ.

ಅದು ಈಗ ಲಭ್ಯ ಇದ್ದಂತಿಲ್ಲ. ಆದರೆ ಅವರು ಅದರ ಕೆಲವು ಭಾಗಗಳನ್ನು ಹೇಗೋ ಸಂಪಾದಿಸಿ ಓದಿದ್ದಾರೆ. ಅದರ ಕೆಲ ವಿವರಗಳಲ್ಲಿ ಅಭಿನವ ಕನಸಿನ ಕುರಿತು ಕೆಲವು ಅಪೂರ್ವ ಹೊಳಹುಗಳನ್ನು ನೀಡುತ್ತಾನೆ. ತಂತ್ರದಲ್ಲಿ ಸ್ವಪ್ನವಿಜ್ಞಾನವು ಸಾಧನೆಗೆ ಸಹಾಯಕ ಎಂಬ ಸಾಮಾನ್ಯ ತಿಳುವಳಿಕೆ ಇರುವುದರಿಂದ ಅವನು ಅಷ್ಟು ಆಳವಾಗಿ ಆ ಬಗ್ಗೆ ಅಧ್ಯಯನ ಮಾಡಿರಲು ಸಾಕು.

ಅಭಿನವನ ಈ ಸ್ವಪ್ನಮಂಜರಿಯ ಸ್ವಪ್ನ ರಹಸ್ಯ ಸತ್ಯಕಾಮರ ಮುಂದೆ ಬಯಲಾಗಲು ಒಂದು ಹಿನ್ನೆಲೆಯನ್ನು ಸತ್ಯಕಾಮರು ಹೇಳುತ್ತಾರೆ. 'ಒಮ್ಮೆ ನಾನು ಮಹಾನದಿಯ ದಂಡೆಯ

ಮೇಲೆ ಒಬ್ಬ ವಂಗ ಸ್ನೇಹಿತನ ಜೊತೆ ಅಲೆಯುತ್ತಿದ್ದೆ. ಆತ ನನ್ನನ್ನು ತನ್ನ ಗುರುಗಳ ಮುಂದೆ ಒಯ್ದು ನಿಲ್ಲಿಸಿದ... ನನ್ನ ಸ್ನೇಹಿತರು ನನ್ನನ್ನು ಕೇಳಿದ ಮೊದಲ ಪ್ರಶ್ನೆ ಎಂದರೆ, 'ನಿನಗೆ ಕನಸುಗಳು ಬೀಳುತ್ತಿವೆಯೇ?... ಹೌದು ಬೀಳುತ್ತಿವೆ.. ನಿನ್ನ ಕನಸಿನಲ್ಲಿ ಮರಳಿ ಮರಳಿ ಮರುಕಳಿಸಿ ಕಾಣಿಸುವ ಸಂಗತಿ ಯಾವುದು... ನನಗೆ ರೆಕ್ಕೆ ಇರುತ್ತದೆ. ನಾನು ಮನೆಯ ಮಾಡದಿಂದ, ಬೆಟ್ಟದ ತುದಿಯಿಂದ, ಮರದ ಮೇಲಿಂದ ಹಾರುತ್ತೇನೆ. ಇದು ನನಗೆ ಮರುಕಳಿಸುವ ಕನಸು. ಅವರು ಕೇಳಿದರು–ಈ ದಿನ ಅಂತಹ ಕನಸು ಬೀಳುತ್ತದೆಯೇ ನೋಡಿ ನಾಳೆ ನನಗೆ ತಿಳಿಸು. ಮಾರನೆಯ ದಿನ ನನಗೆ ಅಂತಹ ಕನಸು ಬೀಳಲಿಲ್ಲ. ಆಗ ಅವರು ಕನಸು ಬೀಳುವಂತೆ ಮನಸ್ಸಿಗೆ ಆಜ್ಞೆ ಮಾಡು ಎಂದರು. (109 ಕಾಲಿನಲ್ಲಿ ಕಣ್ಣಿರಲಿ–2009) ಇದರಿಂದ ಸತ್ಯಕಾಮರು ಒಂದು ಪಾಠ ಕಲಿತರು. ಆಗ ಅವರು ಸ್ವಪ್ನಶಾಸ್ತ್ರದ ಅಭಿನವನ ವಿವರಗಳ ಕಡೆಗೆ ಆಸಕ್ತರಾಗುತ್ತಾರೆ. ಸ್ವಪ್ನಮಂಜರಿ ಗ್ರಂಥ ಅವರಿಗೆ ಲಭ್ಯವಾಗದೇ ಇದ್ದರೂ ಜಯರಥ ತನ್ನ ಸ್ವಚ್ಛಂದ ತಂತ್ರದಲ್ಲಿ ಅದರ ಕೆಲವು ಶ್ಲೋಕಗಳನ್ನು ಉದಾಹರಿಸುತ್ತಾನೆ. ಅದರಲ್ಲಿ ಮೊದಲಿಗೆ ಅಭಿನವ ಒಳ್ಳೆಯ ಎಚ್ಚರ ತರುವುದಕ್ಕಾಗಿಯೇ ನನ್ನನ್ನು ಹುಡುಕಿಕೊಂಡು ಬಂದ ನನ್ನ ತಾಯಿ ನಿದ್ದೆ. ನಾನು ಬೆಳೆಯುವ ಬಗ್ಗೆ ಅಪಾರ ಕರುಣೆ ತೋರುವ ವಾತ್ಸಲ್ಯಮಯಿ ನಿದ್ರಾಮಾತೆಗೆ ನೂರು ನಮಸ್ಕಾರ ಎಂದು ನಿದ್ದೆಯನ್ನು ಗೌರವಿಸಿ ಮುಂದುವರೆಯುತ್ತಾನೆ. ಸಾವಿರಾರು ವರ್ಷಗಳ ಹಿಂದೆ ಒಬ್ಬ ನಿದ್ರೆ, ಸ್ವಪ್ನದ ಮೇಲೆ ತಲೆ ಓಡಿಸುತ್ತಾನೆ ಎನ್ನುವುದೇ ಒಂದು ವಿಶೇಷ. ಅವನು ಅಷ್ಟಕ್ಕೆ ಮುಗಿಸುವುದಿಲ್ಲ. ನಿದ್ದೆಯೊಳಗಿನ ಇನ್ನೂ ಹಲವು ಸಂಗತಿಗಳ ಬಗ್ಗೆ ವಿವರಿಸುತ್ತಾನೆ. ಅದರಲ್ಲಿ ಅವನು ಕೊಡುವ ಸಂದೇಶ ಹೀಗಿದೆ. 'ಕನಸಿನಿಂದ ಬದುಕಿನ ಬೆಳವಣಿಗೆಯಾಗುತ್ತದೆ. ಆದರೆ ಕನಸುಗಳು ಇಲ್ಲದಿದ್ದರೆ ಬದುಕು ಬೆಳೆದಂತೆ ಅಲ್ಲ. ಅವನು ಭಾವಪ್ರಪಂಚದ ಬಗ್ಗೆ ಆಗಲೇ ಒಂದು ವ್ಯಾಖ್ಯಾನ ಬರೆದಿದ್ದ'.

ಏಕೋ ಭಾವಃ ಸರ್ವಭಾವ ಸ್ವಭಾವಃ

ಸರ್ವೇಭಾವಾ ಏಕಭಾವ ಸ್ವಭಾವಃ

ಎಲ್ಲಕ್ಕೂ ಮೂಲಕಾರಣವಾದ ಏಕಭಾವವೊಂದು ಮನುಷ್ಯನ ಭಾವ ಪ್ರಪಂಚದಲ್ಲಿ ಇದೆ. ಆ ಏಕಭಾವದಲ್ಲಿ ಅನಂತ ವೈವಿಧ್ಯಗಳು ಮುಳುಗಿದೆ.

ಕನಸಿನಲ್ಲಿ ಇಬ್ಬರಿಗೆ ಪರಿಣಾಮ ಭಾಗಗಳಿಲ್ಲ ಎನ್ನುತ್ತಾನೆ ಅಭಿನವ. ಒಂದು ಮಗು ಇನ್ನೊಂದು ಉನ್ಮತ್ತ. ಮಗುವಿಗೆ ನೋಡುವ ಕ್ರಿಯೆ ಮಾತ್ರ ಅದನ್ನು ಅನುಭವಿಸುವ ಮನಸ್ಸಿನ ಸಮರ್ಥ ಸಂಯೋಗ ಇಲ್ಲ. ಉನ್ಮತ್ತನಿಗೂ ಹಾಗೆಯೇ.

ಕನಸು ಬೀಳದವ ಮನುಷ್ಯನಾಗುವುದಿಲ್ಲ ಎನ್ನುವ ಅಭಿನವ ಗುಪ್ತ ಅಷ್ಟೇ ಏಕೆ ಪ್ರಾಣಿಗಳಿಗೂ ಕನಸು ಬೀಳುವುದುಂಟು ಎಂಬುದನ್ನು ಹೇಳುತ್ತಾನೆ. ಮನುಷ್ಯನ ಬೆಳವಣಿಗೆಯ ದೃಷ್ಟಿಯಿಂದ ಅಭಿನವ ಕನಸು ಬೀಳುವುದರಿಂದ ಪಾರಾಗಬೇಕು ಎಂದು ಎಚ್ಚರಿಸುತ್ತಾನೆ.

ಕನಸನ್ನು ಮುಂದುವರೆಸುವ ಮತ್ತು ನಿನ್ನೆ ಕಂಡ ಕನಸನ್ನು ಮರಳಿ ಕಾಣುವಂತೆ ಮಾಡುವ ಕುರಿತು ಕೂಡ ಅವನು ಬರೆದಿದ್ದಾನೆ.

ಕಾಮಸ್ಥಂ ಕಾಮ ಮಧ್ಯಸ್ಥಂ

ಕಾಮಾಂಕುಶ ಪುಡೀಕೃತಂ

ಕಾಮೇನ ಸಾಧಯೇತ್ಕಾಮಾನ್

ಕಾಮಂ ಕಾಮೇಷು ಯೋಜಯೇತ್

ಎಂದರೆ ನಮ್ಮ ಕಸುವನ್ನು ಅಳೆಯಬೇಕು ಇದ್ದ. ಶಕ್ತಿಯಿಂದ ಹೊಸ ಇಚ್ಛೆಯನ್ನು ಬೆಳೆಸಿದರೆ ಇಚ್ಛೆ ಬಲಿಷ್ಠವಾಗುತ್ತದೆ. ಇಚ್ಛೆಯಿಂದ ಇಚ್ಛೆಗೆ ಗುಣಿಸಿದರೆ ಪೂರ್ವದ ಇಚ್ಛೆ ಫಲದ ಕಡೆಗೆ ಬೇಗ ಹೋಗುತ್ತದೆ. ಆಗ ಮನಸ್ಸು ಮಂಗನಂತೆ ಅನಿಸಿದರೆ ಅದರೊಳಗೆ ಒಂದು ನಿರ್ವಾತವನ್ನು ಸೃಷ್ಟಿಸಿಕೋ ಎನ್ನುತ್ತಾನೆ. ನಂಬಿಕೆ, ಶಂಕೆ ಎರಡೂ ಮನಸ್ಸಿನ ಮೂಲಭಾವನೆಗಳು. ಒಂದರ ತಳದಲ್ಲಿ ಇನ್ನೊಂದು ಇದೆ. ಇವು ಒಂದಕ್ಕೊಂದು ಬೆಳವಣಿಗೆಯಲ್ಲಿ ಪೂರಕವೂ ಆಗಿವೆ. ಶಂಕೆಯಿಂದ ನಂಬಿಕೆ, ನಂಬಿಕೆಯ ಬುಡದಲ್ಲಿ ಶಂಕೆ ಕಡೆಗೆ ನಂಬಿಕೆ ದೃಢವಾಗಿ ಶಂಕೆಯಿಲ್ಲವಾದರೆ ಆಗ ಜ್ಞಾನ ಸೂರ್ಯ. ಈ ಎರಡೂ ಹೆಚ್ಚು ಕಡಿಮೆ ತಾಕಲಾಟದಲ್ಲಿರುವಾಗ ಎಲ್ಲರಿಗೂ ಕನಸು ಬೀಳುತ್ತದೆ. ಆದ್ದರಿಂದ ಕನಸು ಬೀಳುವ ಮನುಷ್ಯ ಬೆಳೆಯುತ್ತಾನೆ ಎಂದು ಅಭಿನವ ಗುಪ್ತನ ಅಭಿಪ್ರಾಯ.

ಕನಸುಗಳಿಂದ ಒಂದು ದಿನ ಮುಕ್ತವಾಗುವ ಪ್ರಯತ್ನವನ್ನು ಆಧುನಿಕ ಜಿಜ್ಞಾಸೆಗಳು ಒಪ್ಪುವುದಿಲ್ಲ. ಆದರೆ ಅಭಿನವ ಅವರನ್ನು ಸಮ್ಮತಿಸುವುದಿಲ್ಲ. ಅವನ ಪ್ರಕಾರ ಕನಸನ್ನು ಉತ್ತು ಬೆಳೆಯುವುದರಿಂದ ಒಂದು ಜ್ಞಾನದ ಸುಗ್ಗಿ ನಮ್ಮದಾಗುತ್ತದೆ ಎಂದು ಒಪ್ಪಿದರೂ ಒಂದು ಹಂತದಲ್ಲಿ ಅದನ್ನು ಉಪಸಂಹರಿಸಲೂ ಸಾಧ್ಯವಾಗಬೇಕು ಎನ್ನುತ್ತಾನೆ.

ಎಚ್ಚರದಲ್ಲಿ ನಮ್ಮ ಮೇಲೆ ಪ್ರಭಾವ ಬೀರಿದ ಯಾವುದೋ ಘಟನೆ ಅಥವಾ ಯಾವುದೋ ಅತೃಪ್ತವಾದ ಅಪೇಕ್ಷೆ ಇವೆಲ್ಲವೂ ದಟ್ಟ ಕಾರಣವಾಗಿ ಕನಸಿನಲ್ಲಿ ಕಾಣಬಹುದು.

ಅಂತಹ ಕನಸು ಎಷ್ಟೋ ಬಾರಿ ನಮಗೆ ಇನ್ನಷ್ಟು ಮುಂದುವರೆಯಲಿ ಎಂಬ ಅಪೇಕ್ಷೆ ಇರುವಾಗಲೇ ಮುಗಿಯಬಹುದು.

ಕನಸನ್ನು ಆಗ ಮುಂದುವರೆಸುವುದೂ ಸಾಧ್ಯವಿದೆ ಎನ್ನುವುದು ಅಭಿನವನ ಅಭಿಮತ. ಪೂರ್ತಿ ಸಮರ್ಪಣೆ ಒಳ್ಳೆಯ ನಿದ್ರೆಗೆ ಕಾರಣವಾಗುತ್ತದೆ, ಒಳ್ಳೆಯ ನಿದ್ರೆಗೆ ಪ್ರಶಸ್ತ ಕನಸು ಎಂಬುದನ್ನು ಹೇಳುತ್ತಾನೆ. ಅವನ ಪ್ರಕಾರ ಕನಸು ಬೀಳದವ ಮನುಷ್ಯನಾಗಿ ಬೆಳೆಯುವುದಿಲ್ಲ. ಬರೀ ಕನಸೇ ಬೀಳುವವನು ಮನುಷ್ಯನಾಗಿ ಮುಂದುವರೆಯುವುದೇ ಇಲ್ಲ.

ಕೃಷ್ಣ ಕೂಡ 'ನಚೌತಿ ಸ್ವಪ್ನಶೀಲಸ್ಯ, ಜಾಗ್ರತೋನೈವಚಾರ್ಜುನ' ಎಂದು ಭಗವದ್ಗೀತೆಯಲ್ಲಿ ಅರ್ಜುನನನ್ನು ಎಚ್ಚರಿಸಿದ್ದಾನೆ. ಬರೀ ಕನಸನ್ನೇ ಹಾಸಿದರೆ ಬದುಕಲ್ಲ, ನಿದ್ದೆ ಬಾರದೆ ಕನಸನ್ನು ಕಾಣದ ಕಣ್ಣುರಿಯೂ ಸುಂದರ ಬದುಕಲ್ಲ.

ಅಭಿನವ ಗುಪ್ತನಂತು ಕನಸು ಬಣ್ಣಗಳಿಂದ ಕೂಡಿರುತ್ತದೆ ಎಂದು ಹೇಳುತ್ತಾನೆ. ಕನಸುಗಳು ನಾಳೆಯನ್ನು ಸೂಚಿಸುತ್ತವೆ ಎಂಬುದನ್ನು ಅಭಿನವ ಒಪ್ಪುವುದಿಲ್ಲವಾದರೂ, ಭವಿಷ್ಯ ಸೂಚಿಸುವವು ಎಚ್ಚರದ ಅನುಭವಗಳೆಂದು ಪ್ರತ್ಯೇಕಿಸುತ್ತಾನೆ.

ಅನೇಕ ಅನುಭವಗಳ ತೇಪೆ ಹಾಕಿದ ಬಟ್ಟೆಯೇ ಕನಸು. ಕನಸಿನಲ್ಲಿ ಅವು ತುಂಬ ವಿಕೃತರೂಪ ತಾಳುತ್ತವೆ ಎನ್ನುವ ಅವನು ಆಧುನಿಕರೂ ಯೋಚಿಸದ ಸೂಕ್ಷ್ಮ ಸಮಸ್ಯೆಗಳಿಗೆ ಪರಿಹಾರವನ್ನು ಹೇಳುತ್ತಾನೆ. ಅದನ್ನು ಸತ್ಯಕಾಮರು ವಿವರಿಸಲಿಲ್ಲ ಎಂಬುದು ದುರದೃಷ್ಟ. ಪ್ರಾಜ್ಞರು ಈ ದಿಶೆಯಲ್ಲಿ ಸಂಶೋಧನೆ ನಡೆಸಬೇಕು.

ಇದಲ್ಲದೆ ಇನ್ನು ಕೆಲವು ಸಂಗತಿಗಳನ್ನು ಅಭಿನವ ಗುಪ್ತ ಹೇಳುತ್ತಾನೆ. ಅವುಗಳಲ್ಲಿ ಮುಖ್ಯವಾದವು ಸನ್ಯಾಸಿಗಳಿಗೆ, ಯೋಗಿಗಳಿಗೆ, ವೇಶ್ಯೆಯರಿಗೆ ಕನಸು ಬೀಳುವುದಿಲ್ಲ ಎನ್ನುವುದು. ಇದನ್ನು ಸತ್ಯಕಾಮರು ಒಪ್ಪುವುದಿಲ್ಲ. ತಾನು ಯೋಗಿ ಸನ್ಯಾಸಿ ಮತ್ತು ವೇಶ್ಯೆಯರನ್ನೇ ಕೇಳಿ ತಿಳಿದು ಅದನ್ನು ಅಲ್ಲಗಳೆಯುತ್ತಿರುವುದಾಗಿ ಹೇಳುತ್ತಾರೆ. ಆದರೂ ಅವರಿಗೆ ತಾನು ಕೇಳಿದವರು ನಿಜಸನ್ಯಾಸಿ, ನಿಜಯೋಗಿ, ನಿಜವೇಶ್ಯೆಯರಿಲ್ಲದಿದ್ದರೆ ಅಭಿನವನೇ ಸತ್ಯವಿರಬಹುದು ಎಂಬ ಅನುಮಾನದ ಒಪ್ಪಿಗೆಯೂ ಇದೆ.

ಈ ಕೃತಿಯನ್ನು ಅಭಿನವಗುಪ್ತ ಬರೆದಿದ್ದಾನೋ ಇಲ್ಲವೋ ಎಂಬ ಕುರಿತು ಅನುಮಾನವಿದ್ದಿರಬಹುದು. ಅದಕ್ಕೆ ಸತ್ಯಕಾಮರು ಯಾರು ಬರೆದಿದ್ದರೂ ಅದನ್ನು ದೃಢವಾದ ಮನೋವೈಜ್ಞಾನಿಕ ಹಿನ್ನಲೆಯಲ್ಲಿ ಆದೇಶಿಸಬೇಕೆಂದು ವಿನಂತಿಸುತ್ತಾರೆ[1].

---

1 ಇದರ ಪೂರ್ಣ ವಿವರ ಪು. 108–117. ಕಾಳಿಪಲ್ಲಿ ಕಣ್ಣೆರಲಿ. 2009 ಈ ಕೃತಿಯಲ್ಲಿ ಲಭ್ಯವಿದ್ದು ಬಹುತೇಕ ಅಲ್ಲಿಯ ವಿವರಗಳನ್ನೇ ಯಥಾವತ್ತಾಗಿ ನೀಡಲಾಗಿದೆ.

ಸತ್ಯಕಾಮರು ನನ್ನೊಂದಿಗೆ ಚರ್ಚಿಸುವ ಸಂದರ್ಭದಲ್ಲೂ ಅನೇಕ ಬಾರಿ ಬಣ್ಣದ ಕನಸುಗಳು ಬೀಳಲು ಆರಂಭಿಸಿದರೆ ಕನಸುಗಳು ಮುಕ್ತಾಯಗೊಳ್ಳುವ ಸೂಚನೆ ಎನ್ನುತ್ತಿದ್ದರು. ಹಾಗೆಯೇ ಕನಸುಗಳು ಬಿದ್ದಹಾಗೆಯೇ ಬರೆದಿಡು ಅವು ಮುಂದೊಂದು ದಿನ ನಿನ್ನನ್ನು ಓದಿಕೊಳ್ಳಲು ನೆರವಿಗೆ ಬರುತ್ತಿದೆ ಎನ್ನುತ್ತಿದ್ದರು. ಅವರ ಸಾಂಗತ್ಯದ ನಾಲ್ಕು ವರ್ಷಗಳಲ್ಲಿ ನನಗೆ ದಿನದಿಂದ ದಿನಕ್ಕೆ ಅಪೂರ್ವ ಕನಸುಗಳು ಬೀಳುತ್ತಿದ್ದವು. ಎದ್ದು ಅವರ ಜೊತೆಗೆ ಹಂಚಿಕೊಳ್ಳುತ್ತಿದ್ದೆ ಕೂಡ. ಆದರೆ ಅವರು ಬರೆದಿಡು ಎಂದಾಗ ಅವು ನೆನಪಿರುತ್ತದೆ ಎಂಬ ನನ್ನ ನೆನಪಿನ ಕುರಿತ ಮಹಾಗರ್ವದಿಂದ ಬರೆದಿಡಲಿಲ್ಲ. ಈಗ ನನಗೆ ಗೊತ್ತಾದ ಮತ್ತೊಂದು ಸಂಗತಿಯೆಂದರೆ ಕನಸುಗಳು ತಾತ್ಕಾಲಿಕ ಸ್ಮರಣೆಯಲ್ಲಿರುತ್ತವೆ ಅವುಗಳಿಗೆ ಶಾಶ್ವತ ಸ್ಮರಣೆಯ ಜೊತೆ ಸಂಬಂಧವಿಲ್ಲ. ಬದುಕಿನ ಯಾವುದೋ ಘಟನೆ, ಎಲ್ಲಿಯದೋ ಓದು, ಕೆಲವೊಮ್ಮೆ ಸಾಂದರ್ಭಿಕವಾಗಿಯಾದರೂ ನೆನಪಿನ ಸಂಗ್ರಹದಿಂದ ಹೊರಗೆ ಬರಬಹುದು. ಕನಸಿನಲ್ಲಿ ಆ ಸೌಕರ್ಯ ಇಲ್ಲವೇ ಇಲ್ಲ. ಬುದ್ಧಿ ಬೆಳೆವ ಪೂರ್ವದಲ್ಲಿ ನಡೆದ ಘಟನೆಗಳು ಹೇಗೆ ಸ್ಮರಣೆಯಲ್ಲಿ ಇರುವುದಿಲ್ಲವೋ ಹಾಗೆಯೇ. ಕನಸಿನಲ್ಲಿಯೂ ಬುದ್ಧಿ ಮಲಗಿ ಮನಸ್ಸು ಮಾತ್ರ ಎಚ್ಚರವಿರುವುದರಿಂದ ಅವುಗಳು ಕೂಡ ಸ್ಮರಣೆಯಲ್ಲಿ ಉಳಿಯುವುದಿಲ್ಲ ಎಂದು ಕಾಣುತ್ತದೆ.

ಇಂತಹ ಸತ್ಯಕಾಮರು ವಿವರಿಸುವ ಈ ಸ್ವಪ್ನಶಾಸ್ತ್ರದ ವಿವರವನ್ನು ಇನ್ನಷ್ಟು ಅಭ್ಯಸಿಸುವ ಕೆಲಸ ಆಗಬೇಕು. ಮನಸ್ಸನ್ನು ಅರಿತುಕೊಳ್ಳಲು ಅದು ತುಂಬ ಸಹಕಾರಿ. ಆಧುನಿಕ ಮನಃಶಾಸ್ತ್ರಜ್ಞರೇ ಕನಸಿನ ಬಗ್ಗೆ ಬರೆದವರು ಎಂಬ ನಮ್ಮ ತಿಳುವಳಿಕೆಯು ಇದರಿಂದ ಹೊಸದಿಕ್ಕು ಹಿಡಿಯಬಹುದು. ಸತ್ಯಕಾಮರು ತಾನು ಬರೆದ ಲೇಖನದಲ್ಲಿ ಈ ಕುರಿತು ಇಲ್ಲಿಗೆ ವಿಷಯವನ್ನು ಮೊಟಕುಗೊಳಿಸುತ್ತೇನೆ ಎಂದು ಮುಗಿಸುವುದರಿಂದ ಅದರ ಪೂರ್ಣ ವಿವರವನ್ನು ಅವರು ಬರೆದಿಲ್ಲ ಎಂದು ಅರ್ಥ. ಆ ಪುಸ್ತಕದ ಪೂರ್ಣ ವಿವರ ಕನ್ನಡದ ಓದುಗರಿಗೆ ಲಭ್ಯವಾಗಬೇಕು.

ಇದಲ್ಲದೆ ನಮ್ಮ ಭಾರತೀಯ ಪರಂಪರೆಯಲ್ಲಿ ಪಂಚಾಂಗಗಳಲ್ಲಿ ಸ್ವಪ್ನಫಲ ಬರೆಯುವ ಒಂದು ಕ್ರಮವಿದೆ. ಹಾವು ಕಂಡರೆ ಕಾಮ, ಹಾವು ಕಚ್ಚಿದರೆ ಸಂಪತ್ತು, ಭಿಕ್ಷುಕ, ಹುಚ್ಚ ಮುಂತಾದವರನ್ನು ಕಂಡರೆ ಅದೃಷ್ಟ, ಹಾಲು-ತುಪ್ಪ ಬೆಣ್ಣೆ ಕಂಡರೆ ಸುಖ, ಬಾವಿ-ನೀರು ನದಿ ಕಂಡರೆ ಸಂಸಾರ, ಜೇನು ಕಂಡರೆ ಧನಲಾಭ, ಮುಂತಾದ ನಿರ್ದಿಷ್ಟ ವಿಷಯಕ್ಕೆ ನಿರ್ದಿಷ್ಟ ಫಲ ಹೇಳುವ ಒಂದು ವಿಶ್ಲೇಷಣೆಯ ಪಟ್ಟಿಯನ್ನು ಕಾಣಬಹುದು. ಇದರ ಹಿಂದೆ ಇರುವ ವಿಜ್ಞಾನ ಏನು ಯಾವ ಹಿನ್ನೆಲೆಯಲ್ಲಿ ಆ ರೀತಿಯ ಅರ್ಥ ವಿಶ್ಲೇಷಣೆ, ಅದಕ್ಕೆ ನಿಜವಾಗಿಯೂ ಒಂದು ವೈಜ್ಞಾನಿಕ ಆಧಾರ ಇದೆಯೇ ಈ ದಿಶೆಯಲ್ಲಿಯೂ ಒಂದು ಅಧ್ಯಯನ ಮಾಡುವುದು

ಒಳ್ಳೆಯದು. ಇಂತಹದೊಂದು ಅಧ್ಯಯನ ಕನಿಷ್ಠ ಭಾರತೀಯ ಮನಸ್ಸಿನ ವಿವರಣೆಯನ್ನಾದರೂ ಒದಗಿಸಬಹುದು.

ರಜನೀಶನ ವಿನೋದ ಪ್ರಸಂಗ ಮತ್ತು ಕಥೆಗಳು :

ಈ ಅಧ್ಯಯನದಲ್ಲಿ ಇನ್ನೊಂದು ವಿಶೇಷ ಸಂಗತಿಯೆಂದರೆ ರಜನೀಶನ ಮಾತೆಂಬ ಬರಹ. ಅವನು ಅನೇಕರ ಮುಂದೆ ನಡೆಸಿದ ಭಾಷಣ, ಉಪನ್ಯಾಸಗಳೇ ಕೃತಿ ಆಗಿವೆ ಎಂಬುದನ್ನು ಗಮನಿಸಿದ್ದೇವೆ. ಇಂತಹ ಮಾತುಗಾರಿಕೆಯಲ್ಲಿ ಅವನು ಹೇಗೂ ನಿಸ್ಸೀಮ, ಬುದ್ಧಿವಂತನೆಂಬುದು ಯಾರಿಗಾದರೂ ಮನವರಿಕೆಯಾಗುತ್ತದೆ, ಆದರೆ ಆ ಮಾತು ಎಲ್ಲಿಯೂ ಅದರ ಸ್ವಾದವನ್ನು ಕಡಿಮೆ ಮಾಡಿಕೊಳ್ಳದಂತೆ ರಜನೀಶ್ ತುಂಬ ಅಪೂರ್ವವಾದ ವಿನೋದ (ಜೋಕ್ಸ್) ಗಳನ್ನು ಬಳಸುತ್ತಾನೆ. ಹಾಗೆಯೇ ಅಲ್ಲಲ್ಲಿ ಚಿಕ್ಕ-ಚಿಕ್ಕ ಕಥೆಗಳನ್ನೂ ಹೇಳುತ್ತಾನೆ. ಅವೆಲ್ಲ ಆ ಸಂದರ್ಭಕ್ಕೆ ತುಂಬ ಸಂದರ್ಭೋಚಿತವೂ ಅತ್ಯಂತ ಮಾರ್ಮಿಕವೂ ಇರುತ್ತವೆ.

ಬಹುತೇಕ ರಜನೀಶನ ಜೋಕುಗಳು ಅವನೇ ಸೃಷ್ಟಿಸಿದಂತಹ ಹೊಚ್ಚ ಹೊಸ ವಿನೋದಗಳು. ಅವುಗಳನ್ನು ಅವನು ಪುನರಾವರ್ತಿಸುವುದಿಲ್ಲ ಎನ್ನುವುದು ವಿಶೇಷ. ಅವನ ಕಥೆಗಳೂ ಕೂಡ ಹಾಗೆ ಪೂರ್ತಿಯಾಗಿ ಅವನದೇ ಸೃಷ್ಟಿ. ಅದಕ್ಕೊಂದು ಮುಲ್ಲಾನಸ್ರುದ್ದೀನ್ ಎಂಬ ಪಾತ್ರ. ಆ ಮುಲ್ಲಾ ನಾವು ಸೃಷ್ಟಿಸುವ ಸರ್ದಾರ್‌ಜಿ ಅಂತೆ ಮುಗ್ಧ, ಪೆದ್ದ, ಅಜ್ಞಾನಿ, ಮೋಸ ಹೋಗುವವ, ಇಂತಹದೇ ಗುಣಗಳುಳ್ಳವ. ಅವನು ಬೇಸ್ತು ಬೀಳುತ್ತಾನೆ, ಬೀಳಿಸುತ್ತಾನೆ ಹೀಗೆ ಒಂದು ವಿಶೇಷ ಪಾತ್ರ. ಈ ಕಥೆಗಳನ್ನು ಯಾವುದೇ ಮೂಲದಿಂದ ಹೆಕ್ಕಿ ತೆಗೆದಂತಿಲ್ಲ.

ಅವನ ಹಾಸ್ಯ ತುಣುಕುಗಳಲ್ಲಿ ಕೇವಲ ಸಮಯೋಚಿತ ಪ್ರಜ್ಞೆ ಮಾತ್ರವಲ್ಲ ಅದ್ಭುತ ಹಾಸ್ಯ ಪ್ರಜ್ಞೆಯೂ ಇದೆ. ಅದಕ್ಕೆ ಒಂದೆರಡು ಉದಾಹರಣೆ ಹೀಗಿವೆ :

1) ಗಂಡ-ಹೆಂಡತಿ ಇಬ್ಬರು ಮನೆಯಲ್ಲಿ ಬೇರೆ ಬೇರೆ ಮಲಗುವುದನ್ನು ನೋಡಿದ ಗಂಡನ ಗೆಳೆಯ ಗಂಡನನ್ನು ಕೇಳುತ್ತಾನೆ 'ನಿನಗೆ ಅವಳು ಬೇಕೆನಿಸಿದಾಗ ಏನು ಮಾಡುತ್ತಿ? ಗಂಡ ಹೇಳಿದ ವಿಜಿಲ್ ಹೊಡೆಯುತ್ತೇನೆ ಅವಳು ಬರುತ್ತಾಳೆ. ಗೆಳೆಯ ಮರು ಪ್ರಶ್ನಿಸಿದ 'ಅವಳಿಗೆ ಬೇಕೆನಿಸಿದರೆ?' ಗಂಡ ಹೇಳಿದ, 'ಅವಳು ಮೆಲ್ಲನೆ ಬಾಗಿಲು ಬಡಿದು ವಿಜಿಲ್ ಮಾಡಿದ್ರಾ ಕೇಳ್ತಾಳೆ'.

2) ಒಮ್ಮೆ ಹುಲಿಗಳ ಮದುವೆಯ ಮೆರವಣಿಗೆ ಹೊರಟಿತ್ತು. ಎಲ್ಲಾ ಹುಲಿಗಳು ಕುಣಿಯುತ್ತಾ ಮೆರವಣಿಗೆಯಲ್ಲಿ ನಡೆಯುತ್ತಿದ್ದರೆ ಅವುಗಳ ಮುಂದೆ ಇಲಿಯೊಂದು ಕುಣಿಯುತ್ತಾ ಹೋಗುತ್ತಿತ್ತು. ಹುಲಿಗಳಿಗೆ ಅಚ್ಚರಿ. ನಮ್ಮ ಮದುವೆಯಲ್ಲಿ ಈ ಇಲಿಗೇನು ಕೆಲಸ? ನೋಡಿಯೇ

ನೋಡಿದವು ಕಡೆಗೆ ಹುಲಿ ಇಲಿಯನ್ನು ಕೇಳಿಯೇ ಬಿಟ್ಟಿತು. ಏನು, ಎಲ್ಲಿಗೆ? ಇಲಿ ಹೇಳಿತು ಮದುವೆ. ಹುಲಿ ಹೇಳಿತು ಇದು ಹುಲಿಗಳ ಮದುವೆ ಅಲ್ಲಿ ನಿನಗೇನು ಕೆಲಸ ? ಇಲಿ ಹೇಳಿತು ಮದುವೆ ಆಗುವಾಗ ನಾನೂ ನಿಮ್ಮ ಹಾಗೇ ಇದ್ದೆ ಈಗ ಹೀಗಾಗಿದ್ದೇನೆ ಅಷ್ಟೇ.

ರಜನೀಶನ ಅಸಾಧಾರಣ ಬುದ್ಧಿಮತ್ತೆಗೆ ಅಪರಿಮಿತ ಹಾಸ್ಯಪ್ರಜ್ಞೆಗೆ ಇವು ಕೇವಲ ಸ್ಯಾಂಪಲ್ ಮಾತ್ರ. ಬಹುಶಃ ರಜನೀಶನ ವಿನೋದ ಮತ್ತು ಕಥೆಗಳು ಮತ್ತು ಅವುಗಳನ್ನು ಬಳಸಿದ ಸಂದರ್ಭದ ವಿವರಗಳನ್ನೇ ಅಭ್ಯಸಿಸಿದರೆ ಅದೊಂದು ದೊಡ್ಡ ಸಂಶೋಧನಾ ಕೃತಿಯಾಗಬಹುದು. 600 ಕೃತಿಗಳಲ್ಲಿ ಇಂತಹ ಸಹಸ್ರ ಕಥೆ ಮತ್ತು ವಿನೋದದ ತುಣುಕುಗಳಿವೆ. ಪುನರಾವರ್ತನೆ ಇಲ್ಲದೆ ಅತ್ಯಂತ ಆ ಸಂದರ್ಭಕ್ಕೆ ಉಚಿತವಾದ ಕಥೆಗಳು ರಜನೀಶನ ವ್ಯಕ್ತಿತ್ವದ ಹೊಸ ಆಯಾಮವೊಂದನ್ನೇ ತೆರೆಯಬಹುದು.

ಸತ್ಯಕಾಮರು ಕೂಡ ಅನೇಕ ಕಥೆಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಬಳಸುತ್ತಾರಾದರೂ ಅವು ಪುರಾಣ, ಉಪನಿಷತ್ಕಾಲದ ಋಷಿಗಳ ಹೀಗೆ ಯಾವುದಾದರೂ ಪೂರ್ವದ ಕಥೆಗಳೇ ಆಗಿವೆ. ಆದರೆ ರಜನೀಶನ ಸೃಜನಶೀಲತೆ, ಅವನ ಜಾಣ್ಮೆ ಅದು ಅವನ ವಿದ್ವತ್ತಿನಷ್ಟೇ ಅದ್ಭುತವಾಗಿದೆ. ಮತ್ತು ಅಂತಹದೊಂದು ಅಧ್ಯಯನ ಒಂದು ಹೊಸ ವಿಚಾರಧಾರೆಯನ್ನು ಹುಟ್ಟಿಸಬಹುದು ಎಂಬ ಆಶೆಯದೊಂದಿಗೆ ಈ ಸೂಚನೆ ಇದೆ. ಸಾಮಾನ್ಯವಾಗಿ ಆಧ್ಯಾತ್ಮ ಪಥದಲ್ಲಿ ನಡೆದವರಿಗೆಲ್ಲ ಇಂತಹದೊಂದು ಅದ್ಭುತ ಹಾಸ್ಯಪ್ರಜ್ಞೆ ಇರುವುದು ಅವರ ಒಳಗಿನ ಆನಂದದ ಫಲವಿದ್ದರೂ ಇರಬಹುದು. ರಜನೀಶನಂತೂ ಅವನ ಹಾಸ್ಯದಲ್ಲಿ ಇನ್ನೊಬ್ಬರನ್ನು ಗೇಲಿ ಮಾಡುವ, ಕುಹಕದ, ವ್ಯಂಗ್ಯದ ಯಾವ ಲೇಪವು ಕಾಣಿಸುವುದಿಲ್ಲ. laugh at yourself ಇದು ಅವನ ಮೆಸೇಜ್ ಕೂಡ.

ನಿತ್ಯದ ಒಡನಾಟದಲ್ಲಿ ಸತ್ಯಕಾಮರದೂ ಅಸಾಧರಣ ಹಾಸ್ಯ ಪ್ರತಿಭೆ. ಅವರು ಹೊಟ್ಟೆತುಂಬ ನಗಿಸುವುದಕ್ಕೆ ಮತ್ತು ಆ ಸಂದರ್ಭದಲ್ಲಿ ಯಾರನ್ನೂ ಅವಮಾನಿಸದೆ, ನಂಜಿಲ್ಲದೆ ಅಲ್ಲಿರುವ ಒಬ್ಬ ವ್ಯಕ್ತಿಯನ್ನೇ ಕೇಂದ್ರಮಾಡಿ ಹಾಸ್ಯದ ವಾತಾವರಣ ಸೃಷ್ಟಿಸುವಲ್ಲಿ ನಿಸ್ಸೀಮರು. ಆದರೆ ಅವರ ಬರೆಹದಲ್ಲಿ ಅವರು ತುಂಬ ಗಂಭೀರ. ಕೆಲವೊಮ್ಮೆ ಅತಿಯೆನಿಸುವಷ್ಟು ಬಿಗುಮಾನಗಳೇ ಇವೆ. ಅವರೆಂದೂ ನಾವು ಹೇಳುವ ಲೂಸ್ ರೈಟಿಂಗ್ ಮಾಡುವುದೇ ಇಲ್ಲ. ಆದರೆ ರಜನೀಶ್ ಇಂತಹ ಸರಳ ಹಾಸ್ಯ, ವಿನೋದಗಳಿಂದಲೂ ತನ್ನ ಇಡಿಯ ಮಾತಿನಲ್ಲಿ ವಸ್ತುವಿನ ಗಾಂಭೀರ್ಯಕ್ಕೆ ಒಂದಿಷ್ಟು ಚ್ಯುತಿ ಬಾರದಂತಹ ಬಿಗುವನ್ನು ಕಾಯ್ದುಕೊಳ್ಳುತ್ತಾನೆ ಎಂಬುದೇ ಅವನ ವಿಶೇಷ. ಘನವನ್ನು ದ್ರವವಾಗಿ ಹೇಳುವುದು ತುಂಬ ಕಷ್ಟ. ಘನವನ್ನು ಘನವಾಗಿ ಸ್ಫೋಟಿಸುವುದು ಅದರ ಗಾಂಭೀರ್ಯ.

ಉಪಸಂಹಾರ

ಪ್ರತೀ ಜೀವವೂ ಕೂಡ ಒಂದು ಬೀಜರೂಪದಲ್ಲಿದೆ. ಅದು ನಿರಂತರವಾಗಿ ಬೆಳೆಯುವ ಹಸಿವನ್ನು ತನ್ನ ಒಳಗೆ ಇಟ್ಟುಕೊಂಡಿದೆ. ಜೀವಕ್ಕೆ ದೇಹಗಳು ಕೇವಲ ರೂಪಾಂತರ. ಅದು ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಚಲಿಸುತ್ತದೆ ಮಾತ್ರ. ಆದರೆ ನಿರಂತರವಾಗಿ ಅದರ ಒಳಗೆ ಒಂದು ನೆನಪಿನ ವಾಸನೆಯನ್ನು ತನ್ನ ನೆನಪಿನ ಪೆಟ್ಟಿಗೆಯಲ್ಲಿ ಸಂಗ್ರಹಿಸಿಕೊಂಡೇ ನಡೆಯುತ್ತದೆ. ಆದರೆ ಈ ಅಣುರೂಪದ ಜೀವ ತನ್ನ ವಿಸ್ತಾರದ ಪರಮಾಣುತ್ವವನ್ನು ಪಡೆಯಲು ನಿರಂತರ ಹಸಿದಿರುತ್ತದೆ.

ಅಂಥದೊಂದು ಹಸಿವನ್ನು ಸಾಕಾರಗೊಳಿಸುವ ಹಂತಕ್ಕೆ ಆಧ್ಯಾತ್ಮ ಎಂದು ಹೆಸರು. ಈ ಸಾಕಾರಗೊಳ್ಳುವ ಕ್ರಿಯೆ ಒಂದು ಸ್ಫೋಟದ ಹಾಗೆ. ಅದು ಒಂದೇ ಕ್ಷಣದಲ್ಲಿ ಸಂಭವಿಸುತ್ತದೆ. ನಿರಂತರವಾಗಿ ಅದು ಸಂಭವಿಸುವ ಹಂತಹಂತವಾಗಿ ಅನುಭವಿಸುವ ಉಪಕ್ರಮದಲ್ಲಿ ರಜನೀಶ್ ಮತ್ತು ಸತ್ಯಕಾಮರಿಗೆ ನಂಬಿಕೆ ಇಲ್ಲ. ಅದು ತನ್ನನ್ನು ತಾನು ಕ್ಷಣಮಾತ್ರದಲ್ಲಿ ಪರಿವರ್ತಿಸಿಕೊಳ್ಳುವ ಒಂದು ಪರಿವರ್ತನೆ (mutation).

ಹಾಗೆ ಪರಿವರ್ತಿಸಿಕೊಳ್ಳುವ ಅನೇಕ ಪಥದಲ್ಲಿ ತಂತ್ರಪಥವೂ ಒಂದು. ಅದು ಗಂಡು–ಹೆಣ್ಣು, ಮೇಲು–ಕೀಳು, ಭೇದ–ಭಾವವಿಲ್ಲದೆ ಸಕಲ ಜೀವಿಗಳಿಗೂ ಆಧ್ಯಾತ್ಮವನ್ನು ಹೇಳಿದ ಪಥ. ನಿರಂತರ ಬೆಳವಣಿಗೆಯನ್ನೇ ಮೂಲ ಉದ್ದೇಶವಾಗಿಸಿಕೊಂಡ ತಂತ್ರಪಥ ಆಧ್ಯಾತ್ಮದಲ್ಲಿ ಪೂರ್ತಿ ನಿರಾಕರಣೆಗೆ ಒಳಗಾಗಿದ್ದ ಕಾಮ, ಪ್ರೇಮ ಮತ್ತು ಸ್ತ್ರೀ ಈ ಮೂರನ್ನು ಪ್ರಮುಖ ಅಂಗವಾಗಿ ಪರಿಗಣಿಸಿದ ಪಥ. ಮಾತ್ರವಲ್ಲ ಸ್ತ್ರೀ ತನ್ನಷ್ಟಕ್ಕೇ ತಾನೇ ಪರಿಪೂರ್ಣಳು. ಅವಳಿಗೆ ಸಂಭವಿಸಬೇಕಾದದ್ದು ಏನೂ ಇಲ್ಲ. ಆ ಪರಮಪುರುಷನ ಬಳಿ ಈ ಗಂಡಸನ್ನು ದಾಟಿಸಲು ಬಂದಿರುವ ಪ್ರಕೃತಿ ಅವಳು ಎಂಬುದನ್ನು ಮೊದಲ ಬಾರಿಗೆ ಹೇಳಿದ ಪಥ. ಇದನ್ನು ಬದುಕಿನಲ್ಲಿ ನಿರಂತರ ಅನುಸರಿಸಿದ ಮತ್ತು ಬದುಕಿದ ರೀತಿ ಸತ್ಯಕಾಮರು. ರಜನೀಶ್ ಕೂಡ ಇಂಥದೇ ಕ್ರಮವನ್ನು ಹೇಳುವ ಮತ್ತು ನಡೆಸಿದ ಸಂಗತಿಗಳು ಅವನ ಕೃತಿಗಳಲ್ಲೂ ವ್ಯಕ್ತವಾಗುತ್ತವೆ.

ಈ ಎಲ್ಲಾ ಅನುಸಂಧಾನ, ಅಧ್ಯಯನಗಳು ಅಂತಿಮವಾಗಿ ತಲುಪುವ ತೀರ್ಮಾನ ಅಥವಾ ನಿರ್ಣಯ ನಾವೆಲ್ಲರೂ 'ಅದೇ' ಆಗಿದ್ದೇವೆ. ಆ 'ಅದು' ನಮ್ಮ ಒಳಗೆಯೇ ಇದೆ. ಮತ್ತು ಆ 'ಅದರ' ನಿರಂತರ ಶೋಧವೇ ಈ 'ಇದರ' ವಿಸ್ತಾರಕ್ಕೆ ಕಾರಣ. ಇಂಥದೊಂದು ನಿರಂತರ ಶೋಧದಿಂದ ಪ್ರಜ್ಞೆ ವಿಸ್ತಾರ ಒಂದೇ ಫಲಿತಾಂಶವಲ್ಲ. ಅದು ನಮ್ಮ ದಿನನಿತ್ಯದ ಸಕಲ

ಭೇದಗಳನ್ನು ಅಳಿದ ಒಂದು ಉಭ್ಭಾಯ ಮನಃಸ್ಥಿತಿ. ಅದು ಆನಂದವನ್ನು ಸಿದ್ಧವಸ್ತುವಿನ ಮಾದರಿಯಲ್ಲಿ ಕೊಡಬೇಕೆಂಬ ಹಠವಿಲ್ಲದಿದ್ದರೂ, ಮನುಷ್ಯನ ದುಃಖವನ್ನು ಕಡಿಮೆ ಮಾಡಿ ಎಲ್ಲವನ್ನೂ ಸಾಕ್ಷೀಭಾವದಿಂದ ನೋಡುವ ಒಂದು ತ್ರಯಸ್ಥ ಮನಃಸ್ಥಿತಿಯನ್ನಂತೂ ನೀಡಬಲ್ಲದು. ಕಾಲಾಂತರದಲ್ಲಿ ಇಷ್ಟೆಲ್ಲ ದುಃಖಕ್ಕೆ ಕಾರಣವಾದ ಅಹಂ (I) ಅನ್ನು ಕಡಿಮೆಮಾಡಿ ತಾನು (am ness) ಎಂಬ ಭಾವ ಉಳಿಸಿ ಕಡೆಗೆ ಕೇವಲ ಪ್ರಜ್ಞೆ (consciousness-ಆತ್ಮ) ಎಂಬ ನೆಲೆಯಲ್ಲಿ ಅಸ್ತಿತ್ವವನ್ನು ಅನುಭವಿಸುವ ಒಂದು ಸಾಧ್ಯತೆಯಾಗುತ್ತದೆ ಎಂಬುದು ಇದರ ಮೂಲಭೂತ ತಿಳುವಳಿಕೆ.

ಆ ಅರ್ಥದಲ್ಲಿಯೇ ಇದು ಅಹಂಕಾರವಿಲ್ಲದೇ, ಪರಸ್ಪರ ಆ ದೊಡ್ಡದರ ಅಣುರೂಪ ನಾನು ಎಂಬ ಒಂದು ಪರಮ ವಿನಯವನ್ನೂ ಆ ಕಾರಣಕ್ಕಾಗಿ ಇನ್ನೊಬ್ಬರ ಕುರಿತು ದಯಾಭಾವವನ್ನೂ ಹೆಚ್ಚಿಸುವ ಒಂದು ಪ್ರೇಮಮಯಿ ಮನಸ್ಸಾಗಿ ಪರಿಣಮಿಸುತ್ತದೆ. ನಾನೆಂಬ ದುರಹಂಕಾರ, ನನ್ನದು ಎಂಬ ಮೋಹ, ನಾನಿಲ್ಲದೇ ಇತರರ ಕುರಿತ ಅಸಡ್ಡೆ, ಅಸಹ್ಯ, ಇನ್ನೊಬ್ಬರಿಗಿಂತ ತಾನು ಹೆಚ್ಚು ಎಂಬ ಸ್ಪರ್ಧೆಗಳಲ್ಲೇ ಮುಳುಗಿರುವ ಈ ಜಗತ್ತಿಗೆ ಇಂಥದೊಂದು ಆಪ್ತಸ್ಪರ್ಶದ ಅಗತ್ಯವಿದೆ ಎಂಬ ಸೂಕ್ಷ್ಮ ಕಾರಣವೊಂದೇ ಈ ಆಧ್ಯಾತ್ಮ ಚಿಂತನಯ ಪ್ರತಿಫಲ ಎಂದು ತಿಳಿದರೂ ಸಾಕು.

ಅಧ್ಯಯನದ ಫಲಿತಗಳು :

1) ತಂತ್ರಮಾರ್ಗವು ಯಾರೂ ನಡೆಯಬಹುದಾದ ಒಂದು ಸಾಧ್ಯತೆ. ಅದಕ್ಕೆ ಮೇಲು-ಕೀಳು, ಗಂಡು-ಹೆಣ್ಣು ಮುಂತಾದ ಭೇದವಿಲ್ಲ. ಆದರೆ ತಂತ್ರಕ್ಕೆ ಇರಬೇಕಾದ ಬಹಳ ಮುಖ್ಯ ಅರ್ಹತೆ-ಧೀರತೆ. ದುರ್ಬಲರಿಗೂ ಭೀತರಿಗೂ ತಂತ್ರಪಥವನ್ನು ನಡೆಯಲು ಸಾಧ್ಯವಿಲ್ಲ.

2) ಪ್ರತೀ ಜೀವವು ಒಂದು ವಿಸ್ತಾರದ ಕಡೆಗೆ ನಡೆದಿದೆ. ಅದು ಒಂದಲ್ಲ ಒಂದು ದಿನ ಆ ಪರಮ ವಿಸ್ತಾರವನ್ನು ಸೇರುತ್ತದೆ, ಸೇರಲೇಬೇಕು. ಇದು ಜೀವ ಬೆಳವಣಿಗೆಯಲ್ಲಿ ಒಂದು ಅನಿವಾರ್ಯ ಸ್ಥಿತಿ. ಕೆಲವರು ಮೊದಲು ಕೆಲವರು ಅನಂತರ. ಇದು ಓದಿದವರಿಗೆ ಮತ್ತು ಓದದವರಿಗೆ ಎಂಬ ಭೇದವನ್ನಾಗಲೀ, ಜಾತಿ ಭೇದವನ್ನಾಗಲೀ, ಲಿಂಗ ವ್ಯತ್ಯಾಸವನ್ನಾಗಲೀ ಉಳ್ಳದ್ದಲ್ಲ. ಯಾರಿಗೂ ಯಾವಾಗಲೂ ಸಂಭವಿಸುವ ಮತ್ತು ಸಂಭವಿಸಲೇಬೇಕಾದ ಸಂಗತಿ.

3) ಗುರು ಎನ್ನುವುದು ಅಪೇಕ್ಷಣೀಯ. ಆದರೆ ಅವನೇ ಪರಮ ಸತ್ಯವಲ್ಲ. ಗುರು ಕೇವಲ ಒಂದು ಕಿಡಿ ಹೊತ್ತಿಸುವ ನೆಪ ಅವನೇ ಗುರಿ ಮುಟ್ಟಿಸುವ ನಾವಿಕನಲ್ಲ. ಹಾಗೆಯೇ ಗುರುವಿಲ್ಲದೆಯೂ ಈ ಪಥ ನಡೆಯಬಹುದಾಗಿದೆ. ಗುರುವಿನ ಮೂಲಕ ಅಥವಾ ಗುರುವಿಲ್ಲದೇ ನಡೆವ ಎರಡೂ ಕ್ರಿಯೆಗಳಲ್ಲೂ ಶಿಷ್ಯನ ಅಥವಾ ಜೀವಿಯ ವೈಯಕ್ತಿಕ ಸಾಮರ್ಥ್ಯವೇ ಪ್ರಮುಖವಾದವು.

4) ಪ್ರತೀ ವ್ಯಕ್ತಿಯ ಒಳಗೆ ಒಂದು ಅದ್ಭುತ ಶಕ್ತಿ ಇದೆ. ಅದು ಅವನನ್ನು ಬೆಳೆಸಲಿಕ್ಕೆಂದು ಬೀಜ ರೂಪದಲ್ಲಿ ಅಡಗಿದೆ. ಯಾವ ಬೀಜಕ್ಕೂ ದೊಡ್ಡ ವೃಕ್ಷ, ಹೂವು ವಿಶೇಷವೇ ಅನಿಸಬಹುದು. ಆದರೆ ಒಂದು ದಿನ ಆ ಬೀಜವೂ ತನ್ನನ್ನು ತಾನು ಮಣ್ಣಿಗೆ ಸಮರ್ಪಿಸಿಕೊಂಡರೆ ಚಿಪ್ಪೊಡೆದು, ಮೊಳಕೆಯಾಗಿ, ಗಿಡ, ಮರ, ಹೂವಾಗುವವರೆಗೆ ಬೆಳೆಯುತ್ತದೆ ಎಂಬುದೇ ಜೀವವಿಜ್ಞಾನ. ಅದೇ ಕುಂಡಲಿನೀ ಶಕ್ತಿ. ಅದು ಕೇವಲ ಕೆಲವರ ಸ್ವತ್ತಲ್ಲ ಎಲ್ಲರೂ ಅದನ್ನು ಉಳ್ಳವರು ಮತ್ತು ಬೆಳೆಸಬಲ್ಲವರು. ರಜನೀಶನಿಗೆ ಇದರ ಅನುಭವವಾದ ವೈಯಕ್ತಿಕ ವಿವರಗಳಿಲ್ಲ ಆದರೆ ಅವನ ವಿವರಣೆ ಅನುಭವವನ್ನು ಮೀರಿ ಇವೆ. ಸತ್ಯಕಾಮರ ಈ ಅನುಭವ ಅವರ ಮಾತೃಲಹರಿ ಕಾವ್ಯದಲ್ಲಿ ವೈಯಕ್ತಿಕವಾಗಿ ಪ್ರಕಟಿತವಾಗಿವೆ.

5) ತಂತ್ರಪಥದಲ್ಲಿ ಸ್ತ್ರೀ ಇಲ್ಲದೆ ನಡೆ ಇಲ್ಲ. ಸ್ತ್ರೀ ತನ್ನಷ್ಟಕ್ಕೆ ತಾನೇ ಪರಿಪೂರ್ಣ. ಅವಳು ಶಕ್ತಿ. ಆ ಶಿವನನ್ನು ಇಲ್ಲಿರುವ ಗಂಡಸರಿಗೆ ತೋರಿಸಲು ಬಂದವಳು. ಅವಳಿಗೆ ಏನೂ ಸಂಭವಿಸಲಿಕ್ಕಿಲ್ಲ. ಅವಳು ತನ್ನನ್ನು ಪ್ರಕೃತಿಯನ್ನಾಗಿಸಿ ಆ ಶಿವನನ್ನು ಸೇರಲು ಈ ಗಂಡಸಿಗೆ ಅನುಕೂಲ ಮಾಡಿಕೊಡುವ ಸೇತುವೆ ಮಾತ್ರ. ಅವಳು ತಾಯಿಯಾಗುವುದೆಂದರೆ ನಿರ್ಲಿಂಗತ್ವದ ಹಂತ ತಲುಪುವುದು. ಗಂಡಸು ಮಗುವಾದರೆ ಅದು ಅವನ ನಿರ್ಲಿಂಗತ್ವ, ಜೀವದ ಬೆಳವಣಿಗೆಯಲ್ಲಿ ಈ ನಿರ್ಲಿಂಗತ್ವ ಪ್ರಾಥಮಿಕ ಅವಶ್ಯಕತೆ.

6) ಶಕ್ತಿ ಎಂಬುದು ಆಧ್ಯಾತ್ಮ ಪಥದ ವಿಸ್ತಾರದಲ್ಲಿ ಪ್ರಜ್ಞೆಗೆ ಕರಗತವಾಗುವ ಕೆಲವು ಸಾಧ್ಯತೆ ಮಾತ್ರ. ಆ ಶಕ್ತಿಯೇ ವ್ಯಕ್ತಿಯು ತಲುಪುವ ಪರಿಪೂರ್ಣತೆ ಅಲ್ಲ. ವ್ಯಕ್ತಿ ಅದರಾಚೆಗೂ ತನ್ನನ್ನು ವಿಸ್ತರಿಸಿಕೊಂಡರೆ ಶಕ್ತಿ ಮತ್ತು ಸಿದ್ಧಿಗಳು ಅವನ ಕೈವಶವಾಗುತ್ತವೆ. ಇಲ್ಲದೇ ಇದ್ದರೆ ಅವನೇ ಶಕ್ತಿಗಳ ಕೈವಶವಾಗಿ ಕಳೆದುಹೋಗುವ ಸಾಧ್ಯತೆ ಇದೆ.

7) ಕನ್ನಡ ಸಾಹಿತ್ಯದಲ್ಲಿ ತಂತ್ರಮಾರ್ಗದ ಶೋಧ ನಮಗೆ ಕಾಣಿಸುವುದು ಶರಣಪಥದಲ್ಲಿ ಮಾತ್ರ. ಅದನ್ನು ಬಿಟ್ಟರೆ ಆಧುನಿಕರಾದ ಇಂದಿರಾತನಯ, ಕೌಂಡಿಣ್ಯ, ರವಿಬೆಳಗೆರೆ ಮುಂತಾದವರ ಜನಪ್ರಿಯ ಕಾದಂಬರಿ ರಚನೆಗಳಲ್ಲಿ ತಂತ್ರದ ಐಂದ್ರಜಾಲಿಕ ಅಂಶ ಪ್ರಕಟವಾಗಿದೆ. ಆದರೆ ತಂತ್ರಪಥವನ್ನು ನುಡಿದು, ನಡೆದು ಬರೆದವರು ಕನ್ನಡ ಸಾಹಿತ್ಯ ಲೋಕದಲ್ಲಿ ಸತ್ಯಕಾಮರು ಮಾತ್ರ.

8) ಅಭಿನವ ಹೇಳುವ ಮಂತ್ರಪಠಣ ಕ್ರಮ ಹಾಗೆಯೇ ಅದಕ್ಕೆ ಮಾಡಬೇಕಾದ ಸಾಧನೆ, ಅನುಸಂಧಾನ, ಆ ಬಳಿಕ ಒಂದು ದಿನ ಸಂಭವಿಸುವ ಕುಂಡಲಿನಿ, ತನ್ಮೂಲಕ ತಲುಪುವ ದರ್ಶನಕ್ಕೂ-ಸಾಹಿತ್ಯದಲ್ಲಿ ಚರ್ಚಿತವಾಗುವ ಶಬ್ದ ಅದರ ಧ್ವನಿ, ಅದನ್ನು ನಿರಂತರ ಅಭ್ಯಾಸದಿಂದ ಅರ್ಥಕೊಡುವ ನಟನ ನಟನಾಭ್ಯಾಸ, ಅದನ್ನು ಒಂದು ದಿನ ಅಭಿನಯಿಸುವ ಹೊತ್ತಿಗೆ ಅಭಿನಯದ ರಾಮ, ಆಕ್ಷಣದ ಪ್ರತಿಭೆ ಮತ್ತು ಪ್ರದರ್ಶನ ಇವುಗಳಿಗೆ ನೇರ ಸಂಬಂಧವಿದೆ. ಆ ದಿಶೆಯಲ್ಲಿ ಪ್ರದರ್ಶನಕ್ಕೂ ದರ್ಶನಕ್ಕೂ ಒಂದೇ ಮೂಲತತ್ತ್ವ, ಮಂತ್ರದ ನಾದಕ್ಕೂ-ನಟನ ಮಾತಿನ ಧ್ವನಿಗೂ, ಸಾಧಕನ ತಪಸ್ಸಿಗೂ-ನಟನ ರಿಹರ್ಸಲ್ಸ್‌ಗೂ, ಕುಂಡಲಿನೀ ಜಾಗೃತಿ-ಪ್ರತಿಭೆಗೂ, ತಪಸ್ವಿಯ ದರ್ಶನ-ನಟನ ಪ್ರದರ್ಶನಕ್ಕೂ, ನೇರ ಸಂಬಂಧವಿದೆ. ಆದ್ದರಿಂದ ಪ್ರದರ್ಶನವೇ ದರ್ಶನ. ಆದ್ದರಿಂದಲೇ ನಾಟ್ಯಶಾಸ್ತ್ರ ಬರೆದ ಭರತ, ಧ್ವನಿಶಾಸ್ತ್ರ ಹೇಳಿದ ಅಭಿನವ ಮೂಲತಃ ಋಷಿಗಳು, ದಾರ್ಶನಿಕರು. ಅದಕ್ಕೆಂದೇ ಕಲಾವಿದರಿಗೂ ಶಪಿತ ಗಂಧರ್ವರೆಂಬ ಹೆಸರು ಬಂದಿರಲಿಕ್ಕೆ ಸಾಕು. ಈ ದಿಶೆಯಲ್ಲಿ ಕಾವ್ಯ ಮಿಮಾಂಸೆಯ ಹೊಸ ಅಧ್ಯಯನ ಸಾಧ್ಯವಿದೆ, ಆಗಬೇಕು.

9) ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಯು ತನ್ನ ಸ್ಪರ್ಶ, ಸಾಮೀಪ್ಯ, ಸಾನ್ನಿಧ್ಯಗಳಿಂದ ಪರಿವರ್ತಿಸಲು ಸಾಧ್ಯವಿದೆ. ಅದು ಜೀವ ಪರಿವರ್ತನೆ. ಇದನ್ನೇ ತಂತ್ರಮಾರ್ಗ ಶಕ್ತಿಪಾತ ಎಂದು ಕರೆಯಿತು.

10) ತಂತ್ರಮಾರ್ಗವನ್ನು ನಡೆದ ರಜನೀಶ್ ಮತ್ತು ಸತ್ಯಕಾಮರಲ್ಲಿ ಒಂದು ಮೂಲಭೂತ ವ್ಯತ್ಯಾಸವಿದೆ. ರಜನೀಶ್ ತಂತ್ರವನ್ನು ಉಪದೇಶಿಸುವ ಮತ್ತು ಆ ಮಾರ್ಗದಲ್ಲಿ ಅನೇಕರನ್ನು ಸಾರ್ವಜನಿಕ ವೇದಿಕೆಯಲ್ಲಿ ನಡೆಸುವ ಒಂದು ಪ್ರಯತ್ನವನ್ನು ಮಾಡಿದರು. ಆದರೆ ಸತ್ಯಕಾಮರು ಉಪದೇಶಿಸಲಿಲ್ಲ ಅದನ್ನು ಎಲ್ಲಿಯೂ ಸಾರ್ವಜನಿಕವಾಗಿ ನಡೆಸಲೇ ಇಲ್ಲ. ಈ ಕಾರಣಗಳಿಂದ ರಜನೀಶ್

ಬಹಿರ್ಮುಖಿಯಾಗಿ ಬಹಳಷ್ಟು ಅಪಾರ್ಥಕ್ಕೆ ಒಳಗಾದರೆ ಸತ್ಯಕಾಮರು ನಿಗೂಢರು ಎಂಬ ಅಪವಾದಕ್ಕೆ ಒಳಗಾದರು. ಒಂದರ್ಥದಲ್ಲಿ ರಜನೀಶರು ಬಹಿರಂಗವಾಗಿ ಮಾಡಿದ್ದನ್ನು ಸತ್ಯಕಾಮರು ಅಂತರಂಗದಲ್ಲಿ ನಡೆದರು. ಆ ಕಾರಣಕ್ಕಾಗಿ ಅನೇಕ ವಿಷಯಗಳಲ್ಲಿ ಬಹಳ ಸಾಮ್ಯಗಳನ್ನು ಉಳ್ಳ ಇಬ್ಬರನ್ನು ಹೀಗೆ ಹೇಳಬಹುದು- ರಜನೀಶ ಒಬ್ಬ ಬಹುರ್ಮುಖೀ ಸತ್ಯಕಾಮ, ಸತ್ಯಕಾಮರು ಒಬ್ಬ ಅಂತರ್ಮುಖೀ ರಜನೀಶ್. ರಜನೀಶ್ ಒಬ್ಬ ಭೋದಕ, ಸತ್ಯಕಾಮ ಪ್ರಾಯೋಗಿಕ.

11) ಇಬ್ಬರೂ ಕಾಮ ಮತ್ತು ಪ್ರೇಮದ ವಿಷಯದಲ್ಲಿ ತಳೆಯುವ ನಿರ್ಣಯಗಳು ತುಂಬ ಸಾಮ್ಯವುಳ್ಳವು. ಇಬ್ಬರೂ ಹೆಣ್ಣಿನ ಕುರಿತ ನಿಲುವುಗಳಲ್ಲಿ ಸಮಾನ ಅಭಿಪ್ರಾಯ ಉಳ್ಳವರೂ, ಅನೇಕ ಸ್ತ್ರೀಯರನ್ನು ನಡೆಸಿದವರೂ ಆಗಿದ್ದಾರೆ.

12) ರಜನೀಶ್ ಎಲ್ಲಿಯೂ ಅಭಿನವನ ಕುರಿತು ಉಲ್ಲೇಖಿಸುವುದಿಲ್ಲ. ಆದರೆ ಸತ್ಯಕಾಮರು ಅಭಿನವನಿಂದಲೇ ಪೂರ್ತಿಯಾಗಿ ಪ್ರೇರಿತವಾದದ್ದು ಸ್ಪಷ್ಟ ಕಂಡುಬರುತ್ತದೆ.

13) ರಜನೀಶ್ ಮತ್ತು ಸತ್ಯಕಾಮರಿಬ್ಬರೂ ಸತ್ಯದ ಕುರಿತು ತಳೆಯುವ ನಿಲುವು ಒಂದೇ. ಅದು ಜೀವ ಪರಿವರ್ತನೆ ಮತ್ತು ಅದು ಒಮ್ಮೆಲೇ ಸ್ಫೋಟದಂತೆ ಸಂಭವಿಸುತ್ತದೆ ಎಂಬುದೇ ಇಬ್ಬರೂ ತಳೆಯುವ ನಿಲುವು ಆಗಿದೆ. ದೇವಪಥದಲ್ಲಿ ದೇವರಿಂದ ತಿರಸ್ಕಾರಕ್ಕೆ ಒಳಗಾದಂತೆ ಸತ್ಯಕಾಮರ ವೇದನೆ ಕಾಣಿಸುತ್ತದೆ. ರಜನೀಶನಿಗೆ ದೇವ ಮಿಲನದ ಪ್ರೇಮಾನುಭವ ಇದ್ದಂತೆ ಇದೆ.

14) ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿರುವ ಕೆಲವು ಮೂಲಭೂತ ವ್ಯತ್ಯಾಸಗಳಲ್ಲಿ ಪ್ರಮುಖವಾದದ್ದು-ರಜನೀಶ್ ಆ ಕಾಲದ ಇತರ ಅನೇಕ ಸಾಧಕರನ್ನು (ಉದಾ: ಜೆ.ಕೆ., ಯು.ಜಿ., ಸತ್ಯಸಾಯಿಬಾಬಾ) ಅನೇಕ ಬಾರಿ ಪ್ರಸ್ತಾಪಿಸುತ್ತಾನೆ. ಅವರ ಕುರಿತು ಹೇಳಿಕೆಗಳನ್ನು ನೀಡುತ್ತಾನೆ, ಟೀಕಿಸುತ್ತಾನೆ. ವ್ಯಕ್ತಿತ್ವದ ಕುರಿತು ಕೆಲವು ತೀರ್ಮಾನಗಳನ್ನು ಹೇಳುತ್ತಾನೆ. ಆದರೆ ಸತ್ಯಕಾಮರು ತಮ್ಮ ಬರೆಹದಲ್ಲಿ ಯಾರ ಕುರಿತು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ.

15) ರಜನೀಶ್ ಗಾಂಧಿಯನ್ನು ನಿರಂತರವಾಗಿ ಟೀಕಿಸುವ ಮತ್ತು ನೇತಾಜಿ ಸುಭಾಸ್‌ಚಂದ್ರ ಭೋಸ್‌ರನ್ನು ನಿರಂತರ ಹೊಗಳುವ ಬರೆಹಗಳೂ ಇವೆ. ಅದರ ಮೂಲ ಶೋಧಕ್ಕೆ ಹೊರಟರೆ ರಜನೀಶ್ ತನ್ನ ಈ ಪಥದ ಆರಂಭ ಮಾಡಿದ್ದು ಒಬ್ಬ ಆರ್.ಎಸ್.ಎಸ್. ಸ್ವಯಂ ಸೇವಕನಾಗಿ ಎಂಬ ಸಂಗತಿ ಹೊಳೆಯುತ್ತದೆ.

ಆರ್.ಎಸ್.ಎಸ್. ಮನೋಭಾವಕ್ಕೆ ಇಂಥದೊಂದು ಅಸಾಧ್ಯ ಗಾಂಧಿವಿರೋಧಿ ಮನೋಭಾವ ಇತ್ತು ಎಂದಾದರೆ ಅದಕ್ಕೆ ನಾವು ವಿಷಾದ ಪಡಬೇಕು. ಅಲ್ಲವೆಂದಾದರೆ ಒಬ್ಬ ಆಧ್ಯಾತ್ಮ ಪಥದ ಸಾಧಕನಾಗಿಯೂ ಈ ವಿಷಯದಲ್ಲಿ ರಜನೀಶನಿಗೆ ತ್ರಯಸ್ಥ ಮನೋಭಾವ ಸಾಧ್ಯವಾಗಲಿಲ್ಲ ಎಂಬುದರ ಕುರಿತು ಕನಿಕರ ಪಡಬೇಕು.

16) ರಜನೀಶನ ಕುರಿತು ಸತ್ಯಕಾಮರು 1970ರ ದಶಕದಲ್ಲಿ ಒಂದಿಷ್ಟು ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆದಿದ್ದರು. ಅವೆಲ್ಲವೂ ರಜನೀಶನ ನಡೆ–ನುಡಿಗಳನ್ನು ತೀವ್ರ ಟೀಕಿಸುವ ರೀತಿಯಲ್ಲಿದ್ದವು. ಅವನನ್ನು ವಂಚಕನೆಂದು, ಮೋಸಗಾರನೆಂದು ಅವರು ಕರೆದಿದ್ದಾರೆ. ಆದರೆ ಕಾಲಾಂತರದಲ್ಲಿ ಅವನನ್ನು ಋಷಿ ಎಂದೂ, ಸತ್ತ ಬಳಿಕವೂ ಅನೇಕರನ್ನು ನಡೆಸುವ ಸಾಧ್ಯತೆ ಇದ್ದರೆ ಅವನು ಋಷಿಯಲ್ಲದೆ ಬೇರಾರೂ ಅಲ್ಲ, ಅಂತಹ ಶಕ್ತಿ ರಜನೀಶ್‌ನಲ್ಲಿ ಇದೆ ಎಂದು ತಮ್ಮ ಅಭಿಪ್ರಾಯ ಬದಲಿಸಿದ್ದರು. ಹೀಗೆ ಸತ್ಯಕಾಮರಿಗೆ ಒಬ್ಬ ಸಾಧಕನಲ್ಲಿರಬೇಕಾದ ಚಲನಶೀಲ ಮತ್ತು ತ್ರಯಸ್ಥ ಭಾವದ ಗುಣಗಳಿದ್ದವು.


17) ರಜನೀಶ್ ಮತ್ತು ಸತ್ಯಕಾಮ ಇಬ್ಬರನ್ನೂ ನಾವು ಕೇವಲ ಸಾಹಿತಿ ಅಥವಾ ಬುದ್ಧಿಜೀವಿಗಳೆಂದು ಪರಿಗಣಿಸಲಾಗುವುದಿಲ್ಲ. ಅವರು ಅದಕ್ಕೂ ಮೀರಿದ ದಾರ್ಶನಿಕರಾಗಿಯೇ ಬದುಕಿದ್ದಾರೆ ಮತ್ತು ಬರಹಗಳಲ್ಲೂ ಅದನ್ನು ತೋರಿದ್ದಾರೆ. ರಜನೀಶನ ಕೃತಿಗಳನ್ನು ಓದಿ ಯಾರಾದರೂ ಆ ಪಥಕ್ಕೆ ಆಕರ್ಷಿತರಾಗಬಹುದು, ಆದರೆ ಸತ್ಯಕಾಮರ ಕೃತಿಗಳನ್ನು ಆ ಪಥ ಪ್ರವೇಶಿಸಿದ ಅನುಭವವುಳ್ಳ ಕೆಲವರಷ್ಟೇ ಓದಬಹುದು.


18) ಅಭಿನವನ ಸ್ವಪ್ನ ಮಂಜರಿ ಮತ್ತು ಈಗಿನ ಸ್ವಪ್ನ ಶಾಸ್ತ್ರಗಳ ಕುರಿತು ನಾವು ಕೆಲವು ವಿಶೇಷ ಸಂಗತಿಗಳನ್ನು ತಿಳಿಯಬಹುದಾಗಿದೆ. ಪಾಶ್ಚಾತ್ಯರೇ ನಮಗೆ ಮನಃಶಾಸ್ತ್ರದ ಮುಖಾಂತರ ಕನಸಿನ ವಿವರವನ್ನು ನೀಡಿದರು ಎಂಬ ತಪ್ಪು ತಿಳುವಳಿಕೆ ನಮಗಿದೆ. 10ನೇ ಶತಮಾನದ ಆರಂಭ ಕಾಲದ ಅಭಿನವ ಆ ವಿಷಯವಾಗಿ ಆಗಲೇ ಬರೆದಿದ್ದ. ಈ ಕಾಲಕ್ಕೂ ಪಂಚಾಂಗಗಳಲ್ಲಿ ಮತ್ತು ಅನೇಕ ಶಾಸ್ತ್ರ ಹೇಳುವವರ ಬರೆಹಗಳಲ್ಲಿ ಸ್ವಪ್ನ ಸಂಗತಿಗಳಿಗೆ ವಿಶೇಷ ಅರ್ಥವಿವರಣೆಗಳಿವೆ. ಈ ಕುರಿತು ಹೊಸ ಸಂಶೋಧನೆ ಆಗಬೇಕು.

19) ರಜನೀಶನ ವಿನೋದ (ಜೋಕ್ಸ್) ಮತ್ತು ಮುಲ್ಲಾನಸ್ರುದ್ದೀನನ ಕಥೆಗಳ ಅಧ್ಯಯನವು ರಜನೀಶನ ಬುದ್ಧಿ ಮತ್ತು ಹಾಸ್ಯ ಪ್ರಜ್ಞೆಯ ಬಗ್ಗೆ ಹೊಸ ಆಯಾಮವನ್ನೇ ತೆರೆಯಬಹುದು. ಆ ದಿಶೆಯಲ್ಲೂ ಅಧ್ಯಯನ ಆಗಬೇಕು.


ಹೀಗೆ ತಂತ್ರಮಾರ್ಗದ ಎಲ್ಲ ಶಾಸ್ತ್ರೀಯ ಮತ್ತು ಅದರ ವೈಧಾನಿಕ ಅಂಶಗಳನ್ನು ಬದಿಗಿಟ್ಟು ತಂತ್ರ ಒಂದು ನಡೆಯಾಗಿ ನಡೆಯುವ ಸಾಧ್ಯತೆಯನ್ನು ಇಲ್ಲಿ ಗಮನಿಸಲಾಗಿದೆ. ತಂತ್ರದ ಯಾವುದೇ ಪಾರಿಭಾಷಿಕ ಮತ್ತು ಅದರ ಆಚರಣಾತ್ಮಕ ವಿಧಿ-ವಿಧಾನಗಳನ್ನು ಹೆಚ್ಚು ಗಮನಿಸದೆ ಸಾಧನೆಯ ದಾರಿಯಲ್ಲಿ ಅದರ ಸತ್ವವೊಂದು ನಮ್ಮನ್ನು ನಡೆಸುವ ಕುರಿತು ಹೆಚ್ಚು ಕಾಳಜಿ ವಹಿಸಲಾಗಿದೆ.

ಚಿತ್ರಸಂಗ್ರಹ



The Perfect Master
Volume II
Bhagwan Shree Rajneesh
Talks on Sufi Stories




















ಗ್ರಂಥಋಣ

ಪ್ರಾಥಮಿಕ ಕೃತಿಗಳು :

1. Vijnana Bhairava Tantra Vol – I — Rajaneesh google search osho.
2. Vijnana Bhairava Tantra Vol - II — Rajaneesh google search osho.
3. Tantra the supreme understanding — Rajaneesh google search osho.
4. Tantra vision Vol – I — Rajaneesh google search osho.
5. Tantra vision Vol – II — Rajaneesh google search osho.
6. Kundalini yoga in search of the Miraculous Vol – I — OSHO 1998 Sterling Publishers Pvt. Ltd. New Delhi
7. Kundalini yoga in search of the Miraculous Vol – II — OSHO 2001 Sterling publishers Pvt. Ltd. New Delhi
8. The perfect Master Vol – I — Rajaneesh 1980 Rajaneesh Foundation Poona
9. The perfect Master Vol – II — Rajaneesh 1980 Vol – II
10. Living Tao — Osho 2003 Tao Publishing Pvt. Ltd. Pune
11. Zen the path of paradox Vol – I — Rajaneesh 1978 Rajaneesh Foundation Poona
12. The Heart Sutra — Osho 1995 Osho International Foundation, U.S.A & Australia

13.	Yoga the science of the soul Vol – II	Rajaneesh 1984 Rajaneesh International Foundation U.S.A.
14.	Yoga the Science of the soul Vol – III	Rajaneesh 1984 Rajaneesh International Foundation U.S.A.
15.	Yoga the Alpha and the omega Vol – IV	Rajaneesh 1977 Rajaneesh International Foundation Poona
16.	Yoga the Alpha and the omega Vol – VI	Rajaneesh 1977 Rajaneesh International Foundation Poona
17.	Yoga the Alpha and the omega Vol – VII	Rajaneesh 1977 Rajaneesh International Foundation Poona
18.	Yoga the Alpha and the omega Vol – VIII	Rajaneesh 1977 Rajaneesh International Foundation Poona
19.	Diamond days with OSHO	MA Prem Shunyo 1993, Motilala Banarasi Dos, Delhi
20.	Chakra and Kundalini work book	Dr. John Mumford (Swami Ananda Kapila Saraswathi) 1999 Pustak Mahal, in arrangement with Llewell Yn Publications, U.S.A.
21.	The Yoga of Kashmir Shaivism	Swami Shankarananda 2006 Motilala Banarasidas, Delhi
22.	Abhinava Gupta the Kula ritual as elaborated in chapter 29 of the Tantraloka	John R. Dupuche 2003 Motilal, Banarasidas Delhi.
23.	Introduction to Tantra Sastra	Sir John woodroff 2008 Ganesh and Company Chennai.

24.	ರಜನೀಶ್ ನಿಜರೂಪ	ಬಿ.ಆರ್. ಲಕ್ಷ್ಮಣರಾವ್ (ಅನು) ಹ್ಯೂಮಿಲೇನ್ (ಇಂಗ್ಲಿಷ್) 2006 ಸಾಧನ ಪ್ರಕಾಶನ, ಬೆಂಗಳೂರು
25.	ಸ್ವತಂತ್ರ	ಸತ್ಯಕಾಮ 2004 ಅಂಕಿತ ಪ್ರಕಾಶನ, ಬೆಂಗಳೂರು
26.	ಪಂಚ'ಮ'ಗಳ ನಡುವೆ	ಸತ್ಯಕಾಮ 2010 ಐ.ಬಿ.ಎಚ್ ಪ್ರಕಾಶನ, ಬೆಂಗಳೂರು
27.	ಕಪಿಲವಸ್ತು	ಸತ್ಯಕಾಮ 2004 ಆರ್.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು
28.	ಅರ್ಧದಾರಿ	ಸತ್ಯಕಾಮ 2004 ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂ.
29.	ತಂತ್ರಯೋನಿ	ಸತ್ಯಕಾಮ 2008 ಮನೋಹರ ಗ್ರಂಥಮಾಲಾ, ಧಾರವಾಡ
30.	ದೇವನ ಇನ್ನೊಂದು ಬಾಗಿಲು	ಸತ್ಯಕಾಮ 2010 ಐ.ವಿ.ಎಚ್ ಪ್ರಕಾಶನ, ಬೆಂಗಳೂರು
31.	ಅನಂತ ಜೀವನ	ಸತ್ಯಕಾಮ 2009 ಐ.ಬಿ.ಎಚ್ ಪ್ರಕಾಶನ, ಬೆಂಗಳೂರು
32.	ಮಾತೃಲಹರಿ ಮತ್ತು ಇತರ ಕವಿತೆಗಳು	ಸತ್ಯಕಾಮ 2006 ಐ.ಬಿ.ಎಚ್ ಪ್ರಕಾಶನ, ಬೆಂಗಳೂರು
33.	ತಂದೆ-ಮಗಳು	ಸತ್ಯಕಾಮ – ವೀಣಾ 2004 ಸ್ವಯಂ ಪ್ರಕಾಶ(ನ) ಜಮಖಂಡಿ – 587 119

34.	ಋಷಿ ಪಂಚಮಿ	ಸತ್ಯಕಾಮ 2011 ಅಂಕಿತ ಪುಸ್ತಕ, ಬೆಂಗಳೂರು
35.	ಅಶ್ವಘೋಷ (ಕಾದಂಬರಿ)	ಸತ್ಯಕಾಮ 2003 ಅಂಕಿತ ಪುಸ್ತಕ, ಬೆಂಗಳೂರು
36.	ಅಭಿನವ (ಕಾದಂಬರಿ)	ಸತ್ಯಕಾಮ 2003 ಅಂಕಿತ ಪುಸ್ತಕ, ಬೆಂಗಳೂರು
37.	ವಿಜ್ಞಾನ ಭೈರವ (ಕಾದಂಬರಿ)	ಸತ್ಯಕಾಮ 2003 ಅಂಕಿತ ಪುಸ್ತಕ, ಬೆಂಗಳೂರು
38.	ಕಾಲಿನಲ್ಲಿ ಕಣ್ಣಿರಲಿ (ಲೇಖನಗಳ ಸಂಗ್ರಹ)	ಸತ್ಯಕಾಮ 2009 ಐ.ವಿ.ಎಚ್ ಪ್ರಕಾಶನ, ಬೆಂಗಳೂರು
39.	ಸತ್ಯಕಾಮರ ಕೃತಿಗಳು : ಒಂದು ಅಧ್ಯಯನ (ಸಂಶೋಧನಾ ಮಹಾಪ್ರಬಂಧ)	ಶ್ರೀಮತಿ ಶಾಂತಾಮಠಪತಿ ಎಂ.ಎ. (ಅಪ್ರಕಟಿತ), ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 1997
40.	ಸತ್ಯಕಾಮ	ಎಚ್.ಜಿ. ಜೋಶಿ 1996 ಎಚ್.ಜಿ. ಜೋಶಿ ಶ್ರೀಧರ ಕೃಪಾ ತೇಜಸ್ವಿನಗರ, ಧಾರವಾಡ

ಅನುಶಂಗಿಕ ಗ್ರಂಥಗಳು

1. ಆಹುತಿ — ಸತ್ಯಕಾಮ 2006
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

2. ಪುರುಷಸೂಕ್ತ — ಸತ್ಯಕಾಮ 2005
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

3. ಲಾವಣ್ಯ — ಸತ್ಯಕಾಮ 2005
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

4. ಕೃಷ್ಣಾರ್ಪಣ — ಸತ್ಯಕಾಮ 2004
ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು

5. ಮಾತೃಮಂದಿರ — ಸತ್ಯಕಾಮ 1949
ಕಲ್ಕಿ ಮುದ್ರಣಾಲಯ, ಗದಗ

6. ಬೆಂಕಿಯ ಮಗಳು — ಸತ್ಯಕಾಮ 2009
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

7. ತಣ್ಣಗಿನ ಬೆಂಕಿ — ಸತ್ಯಕಾಮ 1999
ಸ್ವಯಂ ಪ್ರಕಾಶ (ನ), ಕಲ್ಲಹಳ್ಳಿ,
ಜಮಖಂಡಿ – 587 119

8. ನಾಯಿಮೂಗು — ಸತ್ಯಕಾಮ 2009
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

9. ವಿಚಿತ್ರವೀರ್ಯ — ಸತ್ಯಕಾಮ 2009
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

10.	ಚಂಡ ಪ್ರಚಂಡ	ಸತ್ಯಕಾಮ 2009 ಐ.ಬಿ.ಎಚ್ ಪ್ರಕಾಶನ, ಬೆಂಗಳೂರು
11.	ಮನೆ ಮಾರು	ಸತ್ಯಕಾಮ 2009 ಐ.ಬಿ.ಎಚ್ ಪ್ರಕಾಶನ, ಬೆಂಗಳೂರು
12.	ರಾಜಕ್ರೀಡೆ	ಸತ್ಯಕಾಮ 2004 ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು
13.	ಶೃಂಗಾರ ತೀರ್ಥ	ಸತ್ಯಕಾಮ 2005 ಐ.ಬಿ.ಎಚ್ ಪ್ರಕಾಶನ, ಬೆಂಗಳೂರು
14.	ರಾಜಬಲಿ	ಸತ್ಯಕಾಮ 2004 ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು
15.	ಅಜ್ಜರ ಕಾಡು	ಸತ್ಯಕಾಮ 2000 ಸ್ವಾಗತ ಸಮಿತಿ ಅಖಿಲ ಭಾರತ 68ನೇ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ – 887 101
16.	ಸತ್ಯಕಾಮರ ಕತೆಗಳು	ಸತ್ಯಕಾಮ 2010 ಕಸಾಪ, ಬೆಂಗಳೂರು
17.	ದರ್ಶನ ಪ್ರಬಂಧ	ಸಾ.ಕೃ. ರಾಮಚಂದ್ರರಾವ್ 2005 ಅಂಕಿತ ಪುಸ್ತಕ, ಬೆಂಗಳೂರು
18.	ತಂತ್ರಸಾರ ಸಂಗ್ರಹ	ಬನ್ನಂಜೆ ಗೋವಿಂದಾಚಾರ್ಯ 1996 ಹೃಷಿಕೇಶ ಪ್ರಕಾಶನ, ಶ್ರೀ ಪಲಿಮಾರು ಮಠ, ಉಡುಪಿ

19. ಅಭಿನವ ಗುಪ್ತ — ಎನ್. ಬಾಲಸುಬ್ರಹ್ಮಣ್ಯ (ಅನು) 2000
ಜಿ.ಟಿ. ದೇಶಪಾಂಡೆ (ಮೂಲ) ಸಾಹಿತ್ಯ ಅಕಾಡೆಮಿ, ನವದೆಹಲಿ

20. ಅಭಿನವಗುಪ್ತ — ಸಾ.ಕೃ. ರಾಮಚಂದ್ರರಾವ್ 2003
ಅಭಿಜ್ಞಾನ, ಬೆಂಗಳೂರು

21. Finger pointing to the moon — OSHO 1994
OSHO International foundation

22. The Mysteries of life and Death — Rajaneesh (Origin) 1978
Malini Bisben (Trans)
Motilala Banarasidas, Delhi

23. The Inner Journey — OSHO, ಇಸವಿ ಇಲ್ಲ
Rebel Publishing House Pvt. Ltd., Pune

24. The mystique of enlightenment — U.G. Krishnamurthy 1982
Rodney Arms (ed)
Sahasramana Prakashana, Bengaluru

25. ಗಾಂಧಿ ಮತ್ತು ಆಧ್ಯಾತ್ಮಿಕ ಜೀವನ — ಡಾ. ಗೊ. ಶ್ರೀನಿವಾಸಯ್ಯ 2008
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

26. ಅಪೂರ್ವ ಆಧ್ಯಾತ್ಮಿಕ ಅನುಭವ — ಶ್ರೀ ಅರಬಿಂದೋ (ಮೂಲ) 2004
ಎಂ.ಎಸ್. ರಜನೀಕಾಂತ್ (ಅನು)
ಶ್ರೀರಂಗ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಬೆಂಗಳೂರು

27. ಶ್ರೀ ಅರವಿಂದರ ದಿವ್ಯ ಜೀವನ ಕೋ ಚನ್ನಬಸಪ್ಪ (ಅನು) 2007
ಶ್ರೀ ಅರವಿಂದ ಪ್ರಕಾಶನ, ಬೆಂಗಳೂರು

28. ಶ್ರೀ ರಾಮಕೃಷ್ಣ ಉಪದೇಶಾಮೃತ 2003
ಶ್ರೀರಾಮಕೃಷ್ಣಾಶ್ರಮ, ಮೈಸೂರು

29. ಸ್ವಾಮಿ ವಿವೇಕಾನಂದ ಜೀವನ ಚರಿತ್ರೆ ಸೋಮನಾಥಾನಂದ 2008
ರಾಮಕೃಷ್ಣ ಆಶ್ರಮ, ಮೈಸೂರು